ಪ್ರಬುದ್ಧ ಕರ್ನಾಟಕ

ಸಂಪುಟ - ೨೬
ಸಂಚಿಕೆ - ೪ ೧೯೪೫
(೧೦೨)

102 ಚಿಕ್ಕಮಗಳೂರು ಸಂಚಿಕೆ.



ಮೈಸೂರು ವಿಶ್ವವಿದ್ಯಾನಿಲಯದ ಛಾನ್ಸೆಲರವರಾದ ಶ್ರೀಮನ್ಮಹಾರಾಜ

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್,

ಜಿ.ಸಿ.ಎಸ್.ಐ. ಅವರು

(ಪಡಿಯಚ್ಚು ವೆಸ್ಲಿ ಪ್ರೆಸ್ಸಿನ ದಯೆಯಿಂದ)

ಪ್ರಬುದ್ಧ
ಕರ್ಣಾಟಕ

ತಾರಣ ಸಂವತ್ಸರ — ೧೦೨ — ಬೆಳ್ಳಿಯ ಸಂಚಿಕೆ

ಪ್ರಬುದ್ಧ ಕರ್ಣಾಟಕದ ಹುಟ್ಟು ಮತ್ತು ಬೆಳೆವಣಿಗೆ

"ಅಹಂ ಕರೋಮೀತಿ ವೃಥಾಭಿಮಾನಃ"—ಅಧ್ಯಾತ್ಮ ರಾಮಾಯಣ

"ಪ್ರಬುದ್ಧ ಕರ್ಣಾಟಕ"ವು ಹುಟ್ಟಿದ್ದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ಮತ್ತು ಅದರ ಅಂಗವಾಗಿ; ಆದ್ದರಿಂದ ಆ ಕರ್ಣಾಟಕ ಸಂಘ ಹುಟ್ಟಿದ ಸಂದರ್ಭವನ್ನು ಇಲ್ಲಿ ಸಂಗ್ರಹವಾಗಿ ತಿಳಿಸುವುದು ಆವಶ್ಯಕ. ನಾನು ವಿದ್ಯಾರ್ಥಿಯಾಗಿದ್ದಾಗ ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಇದ್ದದ್ದು ಎರಡು ಸಂಘಗಳು—(೧) ೧೮೯೪ರಲ್ಲಿ ಹುಟ್ಟಿ ಥಾಮಸ್ ಡೆನ್ಹಂ ಅವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಚರಿತ್ರಸಂಘ. (೨) ಸುಮಾರು ೧೯೧೩ರಲ್ಲಿ ಶ್ರೀ ಬಿ. ಎಂ. ಶ್ರೀಕಂಠಯ್ಯನವರಿಂದ ಸ್ಥಾಪಿತವಾದ ಇಂಗ್ಲಿಷ್ ಸಾಹಿತ್ಯಸಂಘ. ಕನ್ನಡಕ್ಕೆ ಯಾವ ಸಂಘವೂ ಇರಲಿಲ್ಲ. ೧೯೧೫ರಲ್ಲಿ ನಾನು ಬೆಂಗಳೂರಿಗೆ ವೇ|| ಗರಣಿ ಕೃಷ್ಣಾಚಾರ್ಯರಿಗೆ ಬದಲಾಗಿ ಕನ್ನಡದ ಉಪಾಧ್ಯಾಯನಾಗಿ ಹೋದಾಗ ಅಲ್ಲಿಯೂ ಕನ್ನಡಕ್ಕೆ ಯಾವ ಸಂಘವೂ ಇರಲಿಲ್ಲ. ಒಂದು ಸಂಘವನ್ನು ಸ್ಥಾಪಿಸ

ಬೇಕೆಂಬ ಯೋಚನೆಯೂ ಹೋದ ಕೂಡಲೆ ಬರಲಿಲ್ಲ. ಕನ್ನಡ "ಮುನುಷಿ" ಎಂದು ವಿದ್ಯಾರ್ಥಿಗಳ ಅನಾದರಣೆ ತಿರಸ್ಕಾರ ಹಾಸ್ಯಗಳಿಗೆ ಗುರಿಯಾಗದಂತೆ, ಅವರಿಗೆ ಉಪಯೋಗವಾಗುವ ರೀತಿಯಲ್ಲಿ ಪಾಠಹೇಳಿ ಕನ್ನಡಕ್ಕೂ ಅದರ ಉಪಾಧ್ಯಾಯನಿಗೂ ಒಂದು ಗೌರವವನ್ನು ಸಂಪಾದಿಸಿಕೊಳ್ಳುವುದಕ್ಕೇ ಕೆಲವುಕಾಲ ಹಿಡಿಯಿತು. ಕನ್ನಡ ದಲ್ಲಿಯೂ ಕಲಿಯುವುದು ಇದೆ, ಇಂಗ್ಲಿಷಿನಂತೆಯೇ ಕಲಿಯುವುದು ಇದೆ, ಎಂದು ತೋರಿಸಿ, ಕನ್ನಡದ ಸ್ಥಿತಿಯನ್ನು ಬಂಗಾಳಿ ಮರಾಠಿಗಳ ಸ್ಥಿತಿಯೊಡನೆ ಹೋಲಿಸಿ ಕನ್ನಡದಲ್ಲಿ ಒಂದು ಅಭಿಮಾನ ಹುಟ್ಟಿಸಿ ವಿದ್ಯಾರ್ಥಿಗಳ ಸಹಾನುಭೂತಿ ಸ್ನೇಹ ಗೌರವಗಳನ್ನು ಗಳಿಸಲು ಒಂದೆರಡು ವರ್ಷ ಬೇಕಾಯಿತು. ಅಂದಿನ ಸ್ಥಿತಿಯನ್ನು ಪ್ರಬುದ್ಧ ಕರ್ಣಾಟಕದ ಮೊಟ್ಟಮೊದಲ ಸಂಚಿಕೆಯ ಮೊದಲನೆಯ ಲೇಖನದ ಈ ವಾಕ್ಯಗಳಲ್ಲಿ ಸೂಚಿಸಿದೆ.—

"ಬೆಳಗಾಯಿತು. ಕೂಡಲೆ ಮಲಗಿದ್ದವರೆಲ್ಲರೂ ಎದ್ದು ಅವರವರ ಕೆಲಸಗಳಿಗೆ ಹೊರಟರು. ಮನೆಯಲ್ಲಿ ಎಲ್ಲಿಲ್ಲಿ ನೋಡಿದರೂ ಗದ್ದಲ; ಆದರೂ ಇನ್ನೂ ಕೆಲವು ಹುಡುಗರು ಮಲಗಿ ನಿದ್ದೆ ಹೋಗುತ್ತಿದ್ದರು. ಅದನ್ನು ನೋಡಿ ಅವರ ತಾಯಿಯು "ಇನ್ನೂ ಏಳುವುದಿಲ್ಲವೇನ್ರೋ! ಓದುವ ಹುಡುಗರು ಇಷ್ಟು ಹೊತ್ತು ಮಲಗಿದರೆ ಹ್ಯಾಗೆ?" ಎಂದು ಗದರಿಸಿದಳು.

ಕೂಡಲೆ ಹುಡುಗರು ಎದ್ದು ಸರಸರನೆ ಕೈಯಲ್ಲಿ ಒಂದೊಂದು ಕನ್ನಡ ಪುಸ್ತಕವನ್ನು ಹಿಡಿದು ಕುಳಿತುಕೊಂಡರು. ಸ್ವಲ್ಪ ಹೊತ್ತಿನ ಮೇಲೆ ಅವರ ಉಪಾಧ್ಯಾಯರು ಬಂದು ನೋಡುತ್ತಾರೆ! ಕೆಲವು ಹುಡುಗರು ಇನ್ನೂ ತೂಕಡಿಸುತ್ತಿದ್ದಾರೆ! ಕೆಲವರು ಪುಸ್ತಕವನ್ನು ತಲೆಕೆಳಗಾಗಿ ಹಿಡಿದು ಕೊಂಡಿದ್ದಾರೆ! ಒಬ್ಬನಾದರೂ ಮುಖ ತೊಳೆದಿಲ್ಲ! ಉಪಾಧ್ಯಾಯರು ಅವರೆಲ್ಲರನ್ನೂ ಮೊದಲು ಚೊಕ್ಕಟವಾಗಿ ಕೈಕಾಲು ಮುಖಗಳನ್ನು ತೊಳೆದುಕೊಂಡು ಬರುವಂತೆ ಹೇಳಿದರು. ಬಳಿಕ ಎಲ್ಲ ರಲ್ಲಿಯೂ ಲವಲವಿಕೆ ಹುಟ್ಟಿತು.

ಹುಡುಗರು ಬುದ್ಧಿವಂತರು. ಆದರೂ ಮೈಬಗ್ಗಿ ಕೆಲಸಮಾಡುತ್ತಿರಲಿಲ್ಲ. ಆದ್ದರಿಂದ ಇವರ ಕೈಯಲ್ಲಿ ಕೆಲಸಮಾಡಿಸುವುದಕ್ಕೆ ಪಾಪ ಆ ಉಪಾಧ್ಯಾಯನು ಸ್ವಲ್ಪ ಕಷ್ಟಪಡಬೇಕಾಯಿತು. ಕೊನೆಗೆ ಹುಡುಗರು ಅವನ ದಾರಿಗೆ ಬಂದು ಚೆನ್ನಾಗಿ ವ್ಯಾಸಂಗಮಾಡುತ್ತ ಯೋಗ್ಯರೆನಿಸಿಕೊಂಡರು. ಉಪಾಧ್ಯಾಯನಿಗೂ ಸಂತೋಷವಾಗಿ ಕಾಳಿದಾಸನ ಕುಮಾರಸಂಭವದ "ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ" (ತಕ್ಕ ಫಲವುಂಟಾದರೆ ಪಟ್ಟ ಕಷ್ಟಗಳೆಲ್ಲ ಮರೆತುಹೋಗಿ ಹೊಸ ಉತ್ಸಾಹವುಂಟಾಗುತ್ತದೆ ಎಂಬ ತಾತ್ಪರ್ಯವುಳ್ಳ) ಶ್ಲೋಕವು ಜ್ಞಾಪಕಕ್ಕೆ ಬಂತು."

ಆಗ ಮೈಸೂರು ವಿಶ್ವವಿದ್ಯಾನಿಲಯವು ಹುಟ್ಟಿದ ಹೊಸದು. ಹುಡುಗರು ಅದರ ಪರೀಕ್ಷೆಗಳಿಗೆ ಇನ್ನೂ ಕೂರುವ ಕಾಲ ಬಂದಿರಲಿಲ್ಲ. ಮದರಾಸ್ ವಿಶ್ವವಿದ್ಯಾ ನಿಲಯದ ಇಂಟರ್ ಮೀಡಿಯೆಟ್ ಪರೀಕ್ಷೆಗೆ ಕನ್ನಡದ ಪ್ರಬಂಧ ಪತ್ರಿಕೆಯಲ್ಲಿ ಇಂಗ್ಲಿಷ್ ಪಠ್ಯಪುಸ್ತಕದ ಮೇಲೆ ಒಂದು ಪ್ರಶ್ನೆ ಬರುತ್ತಿತ್ತು. ಅದನ್ನು ಅದುವರೆಗೆ ಇಂಗ್ಲಿಷಿನ ಉಪಾಧ್ಯಾಯರು ತೆಗೆದುಕೊಳ್ಳುತ್ತಿರಲಿಲ್ಲ. ಕನ್ನಡದ ಉಪಾಧ್ಯಾಯರಿಗೆ

ಸಾಧ್ಯವಿರಲಿಲ್ಲ. ಎರಡನ್ನೂ ಬಲ್ಲ ನಾನು ಅದನ್ನು ಇಂಗ್ಲಿಷ್ ಉಪಾಧ್ಯಾಯನಂತೆ ವಿದ್ಯಾರ್ಥಿಯಂತೆ ವ್ಯಾಸಂಗಮಾಡಿ, ಅದರ ಸಾರಾಂಶವನ್ನು ಬರೆದುಕೊಟ್ಟು ಕನ್ನಡದಲ್ಲಿ ಪ್ರಬಂಧವನ್ನು ಬರೆದು ಓದಿ ಹೇಳಿದೆ. ಪರೀಕ್ಷೆಗೆ ಉಪಯುಕ್ತವಾಗಿದ್ದದ್ದರಿಂದ ಅದನ್ನು ಹುಡುಗರು ಎಲ್ಲರೂ ಅಪೇಕ್ಷಿಸಿದರು. ಈ ಮಧ್ಯೆ ಕೆಲವು ವಿದ್ಯಾರ್ಥಿಗಳು ಅತ್ಯುತ್ತಮವಾದ ಪ್ರಬಂಧಗಳನ್ನು ಬರೆದಿದ್ದರು. ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರು ನಳಚರಿತ್ರೆಯ ಮೇಲಣ ಒಂದು ಪ್ರಶ್ನೆಗೆ ಒಂದು ಅಭ್ಯಾಸಪುಸ್ತಕದ ತುಂಬ ಬರೆದಿದ್ದರು. ಹುಡುಗರು ಅಭ್ಯಾಸ ಪ್ರಬಂಧವನ್ನು ಬರೆಯುವುದಕ್ಕೇ ಕಳ್ಳ ತಪ್ಪಿಸಿಕೊಳ್ಳುವಾಗ, ಬರೆದರೂ ಒಂದೆರಡು ಪುಟಗಳನ್ನು ಕಾಟಕ್ಕೆ ತಪ್ಪೋನೆಪ್ಪೋ ಬರೆದುಹಾಕುವಾಗ, ಈ ವಿದ್ಯಾರ್ಥಿ ನಿರರ್ಗಳವಾಗಿ ಒಂದು ತಪ್ಪಿಲ್ಲದೆ ಮುತ್ತಿನಂಥ ಬಿಡಿಬಿಡಿಯಾದ ಅಕ್ಷರದಲ್ಲಿ ಅನಾಯಾಸವಾಗಿ ಒಂದು ಪುಸ್ತಕ ಬರೆದುಬಿಟ್ಟಿದ್ದನು. ಇದರಂತೆ ಶ್ರೀ ಎಸ್. ವಿ. ರಂಗಣ್ಣನವರು, ಎನ್. ನೀಲಕಂಠಪ್ಪನವರು ಮುಂತಾದ ಮೇಧಾವಿಗಳಾದ ವಿದ್ಯಾರ್ಥಿಗಳು ತಮ್ಮ ಬರೆವಣಿಗೆಯಲ್ಲಿ ಒಂದೊಂದು ವಿಧವಾದ ಅಪೂರ್ವಸಾಮರ್ಥ್ಯವನ್ನು ವ್ಯಕ್ತಪಡಿಸಿದ್ದರು. ಇವರ ಬರವಣಿಗೆಯೆಲ್ಲಾ ವ್ಯರ್ಥವಾಗಿ ಹೋಗಿಬಿಡುವುದಲ್ಲಾ ಎಂದು ನನಗೆ ಒಂದು ಬಗೆಯ ಕೊರಗಾಗಿತ್ತು. ಆಗ ನಾನು ಇವೆಲ್ಲವನ್ನೂ ಒಂದು ಪ್ರಕಟನೆಯಾಗಿ ಅಚ್ಚುಮಾಡಿಸಬಹುದೆಂದೂ, ವಿದ್ಯಾರ್ಥಿಗಳು ವೆಚ್ಚವಹಿಸುವುದಾದರೆ ನಾನು ಆ ಕೆಲಸವನ್ನು ಕೈಕೊಳ್ಳುವೆನೆಂದೂ ಹೇಳಿದೆ. ಅದಕ್ಕೆ ಬಹುಮಂದಿ ಉತ್ಸಾಹಶಾಲಿಗಳಾಗಿ ಮುಂದೆಬಂದರು. ಅದರ ಜೊತೆಯಲ್ಲಿಯೇ ಸಂಘದ ಯೋಚನೆಯೂ ಹುಟ್ಟಿತು. ವಿದ್ಯಾರ್ಥಿಗಳು ಕೊಡುವ ಹಣವನ್ನು ಸಂಘದ ಚಂದಾ ಎಂದು ಭಾವಿಸಿ ಪತ್ರಿಕೆಯನ್ನು ಉಚಿತವಾಗಿ ಕೊಡಬಹುದು ಎಂದೆ. ಅದಕ್ಕೂ ವಿದ್ಯಾರ್ಥಿಗಳು ಒಪ್ಪಿದರು. ಇಷ್ಟು ಹೊತ್ತಿಗೆ ಶ್ರೀಮಾನ್ ಎಚ್. ಸುಬ್ಬಜೋಯಿಸ್, ಎಲ್. ನಾರಾಯಣರಾವ್, ಸಿ. ಎನ್. ಶ್ರೀನಿವಾಸಯ್ಯಂಗಾರ್, ಬಿ. ಎಸ್. ಮಾಧವರಾವ್, ಪಿ. ಕೃಷ್ಣರಾವ್, ಎಂ. ಸಿದ್ದಲಿಂಗಯ್ಯ ಮುಂತಾದ ಹಲವು ಅಭಿಮಾನಶಾಲಿಗಳಾದ ವಿದ್ಯಾರ್ಥಿಗಳು ನನ್ನ ಸುತ್ತ ಮುತ್ತಿಕೊಂಡು ನಾನು ಹೇಳಿದ್ದನ್ನು ನಡಸುವುದಕ್ಕೆ ಸಿದ್ಧರಾದರು.[1] ಮೊದಲು ಸಂಘದ ಏರ್ಪಾಡು. ಈಗ 'ಕರ್ಣಾಟಕ ಸಂಘ'ವೆಂಬುದು ಸುಪರಿಚಿತವಾದ ಹೆಸರು. ಆಗ ಈ ಸಂಸ್ಥೆಗೆ ಏನು ಹೆಸರು ಇಡಬೇಕೆಂದೇ ನಾನು ಬಹುದಿನ ಯೋಚಿಸಿದೆ—ಸಾಹಿತ್ಯಸಮಾಜವೇ, ಕನ್ನಡ ಸಮಾಜವೇ, ಕರ್ಣಾಟಕ ಸಮಾಜವೇ, ಇತ್ಯಾದಿ.

---

[1] ಇವರಲ್ಲಿ ಅನೇಕರು ಈಗ ದೊಡ್ಡ ದೊಡ್ಡ 'ಡಾಕ್ಟರು'ಗಳೂ ಪ್ರೊಫೆಸರುಗಳೂ ಇಂಜಿನಿಯರುಗಳೂ ಲಾಯರುಗಳೂ ಆಗಿದ್ದಾರೆ. ಅವರಿಗೆ ಈಗಲೂ ಕನ್ನಡದಲ್ಲಿ ಅದೇ ಅಭಿಮಾನವಿದೆ.

ಆಗ್ಗೆ ಇಂಗ್ಲಿಷಿನಲ್ಲಿ ರೂಢಿಯಾಗಿದ್ದ "ಸೊಸೈಟಿ" ಎಂಬ ಪದಕ್ಕೆ ಸಮಾನ ಪದವಾಗಿ "ಸಮಾಜ"ವೇ ಮುಂದೆ ಬರುತ್ತಿತ್ತು. ಆದರೆ ಏಕೋ ಅದರಲ್ಲಿ ಸತ್ವ ವಿಲ್ಲವೆಂದು ಭಾಸವಾಗಿ ಕೊನೆಗೆ ಬಾಯಿತುಂಬ ಬರುವ, ಗಂಭೀರವಾಗಿ ಕೇಳುವ, "ಕರ್ಣಾಟಕ ಸಂಘ" ಎಂಬುದನ್ನು ನಿಷ್ಕರ್ಷೆಮಾಡಿಯಾಯಿತು. ಈಗ ನಾನು ಬಿಟ್ಟರೂ ನನ್ನ ಕಂಬಳಿ ಬಿಡುವಂತಿರಲಿಲ್ಲ. ಸಂಘವು ಆರಂಭವಾಗಲೇಬೇಕಾಯಿತು. (ಆಗಸ್ಟ್, ೧೯೧೮.) ಆಗ ಶ್ರೀಮಾನ್ ಬಿ. ವೆಂಕಟನಾರಣಪ್ಪನವರು ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿದ್ದರು. ೧೯೧೫ ರಲ್ಲಿ ಆರಂಭವಾಗಿದ್ದ ಕನ್ನಡಸಾಹಿತ್ಯ ಪರಿಷತ್ತಿನಲ್ಲಿ ಕೆಲಸಮಾಡಿ ಗೌರವವನ್ನು ಗಳಿಸಿದ್ದ ವ್ಯಕ್ತಿಗಳಾಗಿದ್ದರು ಈ "ಜ್ಞಾನವೃದ್ಧರೂ ವಯೋವೃದ್ಧರೂ" ಆದ ಮಹನೀಯರು ನಮ್ಮ ಸಂಘದ ಮೊದಲನೆಯ ಅಧ್ಯಕ್ಷರಾಗಬೇಕೆಂದು ನಾನು ಸೂಚಿಸಿದೆ. ನಾನೇ ಅಧ್ಯಕ್ಷನಾಗ ಬೇಕೆಂದು ಸೂಚನೆ ಬಂತು; ಆದರೆ ನಾನು ದೊಡ್ಡವರನ್ನು ಮುಂದಿಟ್ಟುಕೊಂಡು ಕೆಲಸಮಾಡಬೇಕೆಂದೂ, "ಕೆಲಸ ಮಾಡುವುದಕ್ಕೆ ಹಿಂದೇನು ಮುಂದೇನು?" ಎಂದೂ, ನಾನು ಉಪಾಧ್ಯಕ್ಷನಾಗಿರುತ್ತೇನೆಂದೂ ಹೇಳಿ ಎಲ್ಲರನ್ನೂ ಒಪ್ಪಿಸಿದೆ; ಜೊತೆಗೆ ಕಾರ್ಯದರ್ಶಿ ಮಾತ್ರ ವಿದ್ಯಾರ್ಥಿಯೇ ಆಗಿರಬೇಕೆಂದೂ ಸಂಘವು ವಿದ್ಯಾರ್ಥಿ ಗಳಿಗೆ ಒಂದು ಶಿಕ್ಷಣ ಕ್ಷೇತ್ರವಾಗಬೇಕೆಂದೂ ಖಂಡಿತವಾಗಿ ಹೇಳಿದೆ. ಅದಕ್ಕೂ ಒಪ್ಪಿಗೆ ದೊರೆಯಿತು. ಹೀಗೆ ಮೊದಲನೆಯ ಕಾರ್ಯದರ್ಶಿಗಳಾಗಿ ನಿಯಮಿತರಾದ—ಚುನಾಯಿತರಲ್ಲ—ಶ್ರೀಮಾನ್ ಡಿ. ಗುರುರಾಯರು ಈಗಲೂ ನನ್ನಂತೆ ಉಪಾಧ್ಯಾಯ ರಾಗಿರುತ್ತ ಮೇಲೆ ನಾನು ಬರೆದಿರುವುದರ ಸತ್ಯತೆಯನ್ನು ಸಮರ್ಥಿಸಲು ಸಿದ್ಧರಾಗಿರು ತ್ತಾರೆ. ರಾವ್ ಬಹದ್ದೂರ್ ರಾ. ನರಸಿಂಹಾಚಾರ್ಯರು ಮೊದಲನೆಯ ವರ್ಷದ ಆರಂಭಭಾಷಣಮಾಡಿದರು. ಇಂಥ ಹಿರಿಯರಾದ ವಿದ್ವಾಂಸರೂ, ಮೇಧಾವಿಗಳಾದ ಉತ್ಸಾಹಿ ತರುಣರೂ ಸೇರಿದರೆ ಆಗದ ಕೆಲಸವೂ ಒಂದು ಉಂಟೆ? ಅದು ಆಗದೆ ಇರುತ್ತದೆಯೋ?—"ಅಹಂ ಕರೋಮೀತಿ ವೃಥಾಭಿಮಾನಃ!"

ಹೆಸರು

ನಾನು ಹೈ ಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ ನನ್ನ ಸ್ನೇಹಿತರೊಬ್ಬರು ಕೊಟ್ಟ ಸ್ವಾಮಿ ವಿವೇಕಾನಂದರ "ಕೊಲಂಬೋದಿಂದ ಆಲ್ಮೊರಾವರೆಗೆ" ಎಂಬ ಇಂಗ್ಲಿಷ್ ಉಪನ್ಯಾಸ ಗ್ರಂಥವನ್ನು ಓದಿ, ವಿವೇಕಾನಂದರಲ್ಲಿ ನನಗೆ ಒಂದು ಗೌರವ ಬಂದಿತ್ತು. ಒಂದೆರಡು ವರ್ಷಗಳಲ್ಲಿ ಸ್ವಾಮಿ ಅಭೇದಾನಂದರು ಮೈಸೂರು ಟವನ್ ಹಾಲಿನಲ್ಲಿ ಕಿಕ್ಕಿರಿದ ಜನಸಂದಣಿಯ ಮಧ್ಯದಲ್ಲಿ ಹರಿಸಿದ ವಾಗ್ಝರಿಯನ್ನು ಕೇಳಿ ಆ ಗೌರವವು

ಭಕ್ತಿಯಾಗಿ ಪರಿಣಮಿಸಿತ್ತು. ೧೯೧೫ರಲ್ಲಿ ಬೆಂಗಳೂರಿಗೆ ಬರುವ ಹೊತ್ತಿಗೆ ರಾಮ ಕೃಷ್ಣ ಮಠವನ್ನು ಕಂಡೇನೇ ಎಂಬ ತವಕ ಹುಟ್ಟಿತ್ತು. ಅಷ್ಟುಹೊತ್ತಿಗೆ ಶ್ರೀಮಾನ್ ವೆಂಕಣ್ಣಯ್ಯನವರೂ ಬೆಂಗಳೂರಿಗೆ ಬಂದು ನಾವಿಬ್ಬರೂ ಶ್ರೀ ರಾಮಕೃಷ್ಣ ಮಠಕ್ಕೆ ಹೋಗಿಬರಲು ಮೊದಲುಮಾಡಿದೆವು. ಆಗ ಆ ಮಠದ ಅಧ್ಯಕ್ಷರಾಗಿದ್ದ ಶ್ರೀ ನಿರ್ಮಲಾನಂದಸ್ವಾಮಿಗಳು ಶ್ರೀ ರಾಮಕೃಷ್ಣ ಪರಮಹಂಸರ ಮೇಲೆ ನಾವು ಕನ್ನಡದಲ್ಲಿ ಒಂದು ಚಿಕ್ಕ ಪುಸ್ತಕವನ್ನು ಬರೆಯಬೇಕೆಂದು ಸೂಚಿಸಿ ಅದಕ್ಕೆ ಬೇಕಾದ ಸಾಹಿತ್ಯವನ್ನೂ ಅದೇ ಮಠದಲ್ಲಿದ್ದ ಸ್ವಾಮಿ ವಿದೇಹಾನಂದರ ಸಹಾಯವನ್ನೂ ಒದಗಿಸಿ ಕೊಟ್ಟರು. ನಾವು ಆ ಕೆಲಸದಲ್ಲಿ ತೊಡಗಿದ್ದಾಗ ನಮಗೆ ಪರಸ್ಪರ ಗೌರವ ವಿಶ್ವಾಸಗಳು ಬೆಳೆದು, ಸ್ವಾಮಿಗಳು ಒಂದುದಿನ "ನೀವು ಧಾರ್ಮಿಕ ವಿಚಾರಗಳನ್ನು ನಿಮ್ಮ ಜನಕ್ಕೆ ತಿಳಿಸಲು ಪ್ರಬುದ್ಧ ಕರ್ಣಾಟಕವೆಂಬ ಒಂದು ಪತ್ರಿಕೆಯನ್ನು ಏಕೆ ಹೊರಡಿಸ ಬಾರದು? ಪ್ರಬುದ್ಧ ಭಾರತವು ಇಂಗ್ಲಿಷಿನಲ್ಲಿದೆ. ಆದರೆ ಆಯಾ ಪ್ರಾಂತದವರು ಆಯಾ ದೇಶಭಾಷೆಯಲ್ಲಿ ಬರೆಯದೆ ಹೋದರೆ ಅದು ಹೆಚ್ಚು ಜನಕ್ಕೆ ತಿಳಿಯುವುದಿಲ್ಲ. ಈಗಾಗಲೇ 'ಪ್ರಬುದ್ಧ ಕೇರಳಂ' ಎಂಬ ಪತ್ರಿಕೆ ಹೊರಟು ನಡೆಯುತ್ತಿದೆ. ಮೈಸೂರು ಕೇರಳಕ್ಕಿಂತ ದೊಡ್ಡದು" ಎಂದಿದ್ದರು. ಅಂಥ ಪತ್ರಿಕೆ ಹೊರಡಿಸುವುದು ನಮ್ಮಿಂದ ಆಗದ್ದರಿಂದ ಆ ಮಾತು ಅಲ್ಲಿಗೆ ನಿಂತುಹೋಗಿತ್ತು. ಆದರೆ "ಪ್ರಬುದ್ಧ ಕರ್ಣಾಟಕ" ಎಂಬ ಹೆಸರು ಮಾತ್ರ ಮರೆತುಹೋಗಲಿಲ್ಲ; ಮನಸ್ಸಿನಲ್ಲಿ ತಾಡಿತ ವಾಗುತ್ತಲೇ ಇತ್ತು. ೧೯೧೮ರಲ್ಲಿ ಕರ್ಣಾಟಕ ಸಂಘದ ಅಂಗವಾಗಿ ಒಂದು ಪತ್ರಿಕೆಯನ್ನು ಹೊರಡಿಸಬೇಕೆಂದು ನಿರ್ಧರವಾದಾಗ, ಅದು ವಿದ್ಯಾರ್ಥಿಗಳು ನಡಸುವ ಪತ್ರಿಕೆಯಾದ್ದರಿಂದ "ವಿದ್ಯಾರ್ಥಿ" ಎಂದು ಹೆಸರಿರಲೆಂದು ನಾನು ಸೂಚಿಸಿದೆ; ಅದಕ್ಕೆ ಎಲ್ಲರೂ ಒಪ್ಪಿದ್ದರು. ಆದರೆ ಅಷ್ಟುಹೊತ್ತಿಗೆ ಮಂಗಳೂರು ಪ್ರಾಂತದಲ್ಲಿ "ವಿದ್ಯಾರ್ಥಿ" ಎಂಬ ಹೆಸರಿನ ಪತ್ರಿಕೆಯೊಂದು ಆಗಲೇ ನಡೆಯುತ್ತಿತ್ತೆಂದು ತಿಳಿದುಬಂದದ್ದರಿಂದ ಬೇರೆ ಹೆಸರನ್ನು ಯೋಚಿಸಲು ತೊಡಗಿದೆ; ಆಗ ಮೊಟ್ಟ ಮೊದಲು ತೋರಿದ್ದು "ಪ್ರಬುದ್ಧ ಕರ್ಣಾಟಕ". ಅದನ್ನು ರಾಮಕೃಷ್ಣ ಮಠದಿಂದ ಹೊರಡಬಹುದಾದ ಧಾರ್ಮಿಕ ಪತ್ರಿಕೆಗೆ ಉಪಯೋಗಿಸದೆ, ಸೆಂಟ್ರಲ್ ಕಾಲೇಜಿನಿಂದ ಹೊರಡುವ ಸಾಹಿತ್ಯ ಪತ್ರಿಕೆಗೆ ಉಪಯೋಗಿಸಿಕೊಳ್ಳಬಹುದೇ ಎಂದು ಮೊದಲು ಸ್ವಲ್ಪ ಶಂಕೆಯುಂಟಾದರೂ, ಅದು ಹೆಚ್ಚು ಹೊತ್ತು ಇರಲಿಲ್ಲ; ಬೇರೆ ಹೆಸರೂ ಸೂಚಿತವಾಗಲಿಲ್ಲ; ಹೊಳೆಯಲಿಲ್ಲ; ಆದ್ದರಿಂದ ಅದೇ ನಿಂತಿತು. ಕನ್ನಡ ನಾಡು ಎಚ್ಚುತ್ತಿದೆ, ಯುವಕ ವಿದ್ಯಾರ್ಥಿಗಳ ಮನಸ್ಸು ವಿಕಸಿತವಾಗುತ್ತಿದೆ ಎಂಬ ಭಾವನೆ ಯಿದ್ದದ್ದರಿಂದ, ಆಮೇಲೆ ಅದೇ ಸರಿ ಎನ್ನಿಸಿತು. ನಮ್ಮ ಪತ್ರಿಕೆಯ ಮುಖಪತ್ರದ

ಮೇಲೆ ಇಂದಿಗೂ ಇರುವ ಚಿತ್ರವೂ ಶ್ರೀ ರಾಮಕೃಷ್ಣ ಮಠದಿಂದಲೇ ಪ್ರೇರಿತ ವಾದದ್ದು ; ಅವರ ಸಾಹಿತ್ಯದ ಪ್ರತೀಕವಾಗಿ, ರಾಜಯೋಗ ಜ್ಞಾನಯೋಗ ಕರ್ಮ ಯೋಗ ಭಕ್ತಿಯೋಗಗಳನ್ನು ಸೂಚಿಸುವ ಮುದ್ರೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕನ್ನಡನಾಡಿನ ಸೂರ್ಯದೇವನ ಸನ್ನಿಧಿಯಲ್ಲಿ ಆಗಲೆ ಅರಳಿರುವ ಮತ್ತು ಇಂದು ಮೊಗ್ಗಾಗಿ ಮುಂದೆ ಅರಳಬೇಕಾಗಿರುವ ಹೃತ್ಕಮಲಗಳನ್ನು ಸೂಚಿಸಿ, ಒಂದು ಚಿತ್ರವನ್ನು ಬರೆದು ವಿದ್ಯಾರ್ಥಿಗಳಿಗೆ ತೋರಿಸಿದೆ. ಅದು ಸರ್ವಾನುಮತದಿಂದ ಒಪ್ಪಿಗೆಯನ್ನು ಪಡೆಯಿತು ; ಸಂಘದ ಅಧ್ಯಕ್ಷರಾದ ಶ್ರೀ ವರ್ಮಾ ವೆಂಕಟನಾರಣಪ್ಪ ನವರೂ ಒಪ್ಪಿ, ಅದನ್ನು ಒಬ್ಬ ನಕ್ಷೆಗಾರನ ಕೈಯಿಂದ ಬರೆಸಿ ತಂದುಕೊಟ್ಟರು. ಅದು ಪಡಿಯಚ್ಚಾಗಿ ಇಂದಿಗೂ ಉಪಯೋಗದಲ್ಲಿದೆ. ಸೂರ್ಯನು ಉದಯಿಸು ತ್ತಿದ್ದಾನೆ, ಕಮಲಗಳು ಅರಳುತ್ತಿವೆ. ಮುಂದಿನ ಪುಟದಲ್ಲಿ ಮೊದಲನೆಯ ಸಂಚಿಕೆಯ ಮುಖಪತ್ರವನ್ನು ಕೊಟ್ಟಿದೆ.

ಲೇಖನಗಳು

ಪ್ರಬುದ್ಧ ಕರ್ಣಾಟಕವು ಹುಟ್ಟಿದಾಗ ಅದು ಸಾಹಿತ್ಯಪತ್ರಿಕೆಯಾಗಿರಬೇ ಕೆಂದೂ ಮುಖ್ಯವಾಗಿ ವಿಮರ್ಶಾತ್ಮಕವಾಗಿರಬೇಕೆಂದೂ ನಿರ್ಧರವಾಗಿತ್ತು. ಇದನ್ನು ಮೊದಲನೆಯ ಸಂಚಿಕೆಯ ಆರಂಭ ಲೇಖನದಿಂದ ತೆಗೆದ ಮುಂದಿನ ವಾಕ್ಯಗಳು ತೋರಿಸುತ್ತವೆ :—

"ಸಾಹಿತ್ಯವು ಜನಗಳಿಗೆ ಬೇಕಿಲ್ಲವೆಂದು ನಾವು ನಂಬಲಾರೆವು ; ಇದರಲ್ಲಿ ಅವರಿಗೆ ಇರುವ ಆಸಕ್ತಿಯಿಂದಲೇ ಉತ್ತಮವಾದ ಸಾಹಿತ್ಯಕ್ಕೆ ಶಾಶ್ವತವಾಗಿ ನಿಲ್ಲುವ ಸಾಮರ್ಥ್ಯ ಬಂದಿದೆ . . . ನಮ್ಮ ಮುಖ್ಯ ಕೆಲಸವೆಂದರೆ ಕಾವ್ಯಸೃಷ್ಟಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವುದು . . . ಸಾಹಿತ್ಯವನ್ನೆಲ್ಲ ತುಲನ ಪೂರ್ವಕವಾಗಿ ವಿಮರ್ಶೆಮಾಡಿ, ನಮ್ಮ ಕವಿಗಳಲ್ಲಿರುವ ಗುಣ ದೋಷಗಳೇನು ಸತ್ಕಾವ್ಯದ ಲಕ್ಷಣಗಳೇನು ಎಂಬುದನ್ನು ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರ ಮಾಡಿ . . . ಒಟ್ಟಿನಲ್ಲಿ ಯಾವುದರಿಂದ ನಮ್ಮ ದೇಶವು ಉತ್ಸಾಹಗೊಂಡು ಜೀವಕಳೆಯಿಂದ ತುಂಬಬಹುದೋ, ಯಾವುದರಿಂದ ಗ್ರಂಥಗಳ ರಸಾಸ್ವಾದನೆ ಮಾಡಿ ಆನಂದವನ್ನು ಪಡೆಯಬಹುದೋ, ಯಾವುದರಿಂದ ಕನ್ನಡ ಕಾವ್ಯಮಾಲೆಯು ಶ್ರೇಷ್ಠವಾದ ರೀತಿಯಲ್ಲಿ ಬೆಳೆಯಬಹುದೆಂದು ನಮಗೆ ದೃಢವಾದ ನಂಬಿಕೆಯಿದೆಯೋ ಅಂಥ ವಿಷಯಗಳನ್ನೇ ಕನ್ನಡಿಗರಿಗೆ ಕಾಣಿಕೆಯಾಗಿ ತಂದು ಒಪ್ಪಿ ಸುವ ಕೆಲಸವನ್ನು "ಪ್ರಬುದ್ಧ ಕರ್ಣಾಟಕ"ಕ್ಕೆ ಒಪ್ಪಿಸಿದ್ದೇವೆ."

ಈ ಲೇಖನಗಳು ಮುಖ್ಯವಾಗಿ ಮೂರು ಬಗೆಯವಾಗಿರಬೇಕೆಂದೂ, ಹಾಗಾದರೆ ಕಾಲಕಾಲಕ್ಕೆ ಸರಿಯಾದ ಸಾಮಗ್ರಿ ಒದಗುವುದೆಂದೂ ನಾನು ನಿರ್ಧರಿಸಿದೆ: (೧) ನಾನು ಗ್ರಂಥಗಳನ್ನು ಪಾಠ ಹೇಳಿ ಮುಗಿಸಿದ ಮೇಲೆ ಮಾಡುವ ವಿಮರ್ಶಾತ್ಮಕವಾದ

ಪ್ರಬುದ್ಧ ಕರ್ಣಾಟಕ

ಸಿದ್ಧಾರ್ಥಿ ಸಂವತ್ಸರ ಯುಗಾದಿಯ ಸಂಚಿಕೆ

ವಿಷಯಸೂಚಿಕೆ

ಬೆಂಗಳೂರು:
ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ
ಪ್ರಕಟಿಸಲ್ಪಟ್ಟಿದೆ
೧೯೧೯

ಉಪನ್ಯಾಸಗಳು. (೨) ನನ್ನ ವಿದ್ಯಾರ್ಥಿಗಳು ಬರೆಯುವ ಉತ್ತಮವಾದ ಪ್ರಬಂಧಗಳು—ಆವಶ್ಯಕವಿದ್ದರೆ ಬದಲಾವಣೆ ವಿಸ್ತರಣೆಗಳೊಡನೆ. (೩) ವಿದ್ವಾಂಸರನ್ನು ಕರೆಸಿ ಸಂಘದಲ್ಲಿ ಮಾಡಿಸುವ ಆರಂಭೋಪಸಂಹಾರಾದಿ ಭಾಷಣಗಳು. ನಾನು ಇಂಟರ್‌ಮೀಡಿಯೆಟ್ ಮತ್ತು ಬಿ.ಎ. ತರಗತಿಗಳಲ್ಲಿದ್ದಾಗ ಕನ್ನಡಪ್ರಬಂಧ, ಕನ್ನಡಸಾಹಿತ್ಯ ಇಂಗ್ಲಿಷ್ ಸಾಹಿತ್ಯಗಳಲ್ಲಿ ನನಗೆ ಆಚಾರ್ಯರಾಗಿದ್ದ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು ನಾನು ವಿದ್ಯಾರ್ಥಿಯಾಗಿ ಬರೆಯುತ್ತಿದ್ದ ಲೇಖನಗಳನ್ನೂ ಅವುಗಳ ಭಾವಗಳನ್ನೂ ಒಪ್ಪಿ, ಹೊಗಳಿ, ಕೈತುಂಬ ಅಂಕಗಳನ್ನು ಕೊಟ್ಟು ನನ್ನನ್ನು ಪ್ರೋತ್ಸಾಹಿಸಿದ್ದದ್ದರಿಂದ ನನಗೆ ಒಂದು ಧೈರ್ಯ ಬಂದುಬಿಟ್ಟಿತ್ತು. ನಾನೂ ಏನಾದರೂ ಬರೆಯಬಲ್ಲೆನೆಂದೂ ಅದು ಅವಿವೇಕವಾಗಿರುವುದಿಲ್ಲವೆಂದೂ, ಹತ್ತುಜನ ಒಪ್ಪುವಂತಿರಬಹುದೆಂದೂ ನಂಬಿಕೆ ಬಂದಿತ್ತು. ನನಗೆ ಜ್ಞಾಪಕವಿರುವ ಮಟ್ಟಿಗೆ, ಪ್ರಬುದ್ಧ ಕರ್ಣಾಟಕದಲ್ಲಿ ನಾನು ಬರೆದ ಲೇಖನದ ವಿಚಾರವಾಗಿ ಮೊಟ್ಟಮೊದಲನೆಯ ಮೆಚ್ಚುಗೆಯ ಮಾತು ಬಂದದ್ದು—ಬರೆದು ಬಂದದ್ದು—ಶ್ರೀಮಾನ್ ಶ್ರೀಕಂಠಯ್ಯನವರಿಂದಲೇ. ತರುಣ ಸಂಪಾದಕನಾಗಿದ್ದಾಗ ಸಾವಿರ ರೂಪಾಯಿ ಸಂಬಳ ಕೊಟ್ಟಿದ್ದರೂ ಇಷ್ಟು ಧೈರ್ಯ ಪ್ರೋತ್ಸಾಹಗಳು ನನಗೆ ಬರುತ್ತಿರಲಿಲ್ಲ. ಹೀಗೆ ಮೊದಲನೆಯ ಸಂಚಿಕೆಯಲ್ಲಿ ಕಂಡುಬರುವವು ನನ್ನ ಅಗ್ರಲೇಖನ, ನನ್ನ ವಿದ್ಯಾರ್ಥಿಗಳಾಗಿದ್ದ ಶ್ರೀಮಾನ್ ಎಸ್. ವಿ. ರಂಗಣ್ಣ, ಎನ್. ನೀಲಕಂಠಪ್ಪ ಮತ್ತು ಸಿ. ಕೆ. ವೆಂಕಟರಾಮಯ್ಯನವರ "ಕನ್ನಡ ಸಾಹಿತ್ಯದ ಗುಣದೋಷಗಳು" "ರವಿ ಕಾಣದುದನ್ನು ಕವಿ ಕಂಡ" ಎಂಬ ಪ್ರಬಂಧಗಳು, "ಸಂಯುಕ್ತಾಪಹರಣ"ದ ಒಂದು ಭಾಗ, ನಾನು "ಪೂರ್ಣಕಲಾ" ಕಾದಂಬರಿಯ ಮೇಲೆ ಬರೆದ ವಿಮರ್ಶೆ, ಮತ್ತು "ವಸ್ತುಕೋಶ" (ಸಂಪಾದಕೀಯ). "ಕಾದಂಬರಿ" ಭಾಗವನ್ನು ಆರಂಭಿಸಿ, ಅದರಲ್ಲಿ ಸಂಯುಕ್ತಾಪಹರಣವನ್ನು ಪ್ರಕಟಿಸಲು ಮೊದಲುಮಾಡುವುದರ ಉದ್ದೇಶ ಇದು—ಅದುವರೆಗೆ ಪ್ರಕಟವಾದ ಕನ್ನಡ ಕಾದಂಬರಿಗಳು "ಕರ್ಣಾಟಕ ಗ್ರಂಥಮಾಲೆ" ಯಲ್ಲಿ ಬಂದು ಆ ಪತ್ರಿಕೆ ನಿಂತುಹೋದ ಪ್ರಾಯವಾಗಿತ್ತು. ಕಥೆ ಎಲ್ಲಾ ಕಾಲದಲ್ಲೂ ಎಲ್ಲರಿಗೂ ಪ್ರಿಯವಾದದ್ದು. (ಅದು ಇದ್ದರೆ ಪುಟ ತುಂಬುವುದಕ್ಕೂ ಅನುಕೂಲ!) ಎಲ್ಲಕ್ಕೂ ಮೇಲಾಗಿ ಒಬ್ಬ ಕಾಲೇಜು ವಿದ್ಯಾರ್ಥಿ ಒಂದು ಸ್ವತಂತ್ರ ಕಾದಂಬರಿಯನ್ನು ಚೆನ್ನಾಗಿ ಬರೆದಿರುವಾಗ ಅದನ್ನು ಪ್ರಕಾಶಕ್ಕೆ ತರುವುದು ನಮ್ಮ ಕರ್ತವ್ಯ.[2]

---

[2] "ಸಂಯುಕ್ತಾಪಹರಣ"ವು ಬಹು ದೊಡ್ಡ ಕಾದಂಬರಿಯಾಗುವಂತೆ ತೋರಿದ್ದರಿಂದ ಅದನ್ನು ೯ನೆಯ ಪ್ರಕರಣಕ್ಕೇ ನಿಲ್ಲಿಸಿ, ಮೂರನೆಯ ಸಂಪುಟದ ೨ನೆಯ ಸಂಚಿಕೆಯಿಂದ ಪ್ರತಿ ಸಂಚಿಕೆಯಲ್ಲಿಯೂ ಒಂದೊಂದು ಸಣ್ಣಕಥೆಯನ್ನು ಪ್ರಕಟಿಸುತ್ತ ಬಂದೆವು. ಇದು ಸ್ವತಂತ್ರ

ಪತ್ರಿಕೆಗಳಿಗೆ ಲೇಖನವನ್ನು ಒದಗಿಸಿಕೊಳ್ಳುವುದು ಬಹು ಕಷ್ಟ ; ಆ ಕಷ್ಟವನ್ನು ಬಲ್ಲವರೇ ಬಲ್ಲರು. ಮದುವೆ ಮಾಡಿನೋಡು, ಮನೆ ಕಟ್ಟಿನೋಡು ಎಂಬ ಗಾದೆಗೆ ಪತ್ರಿಕೆ ನಡಸಿ ನೋಡು ಎಂದು ಮೂರನೆಯ ವಾಕ್ಯವೊಂದನ್ನು ಸೇರಿಸಬೇಕೆಂದು ತೋರುತ್ತದೆ; ಆದ್ದರಿಂದ ನಾನು ಇಂಥ ಒಂದು ಪತ್ರಿಕೆಯನ್ನು ಆರಂಭಿಸಬೇಕೆಂದಿದ್ದೇನೆ ಎಂದು ಶ್ರೀಮಾನ್ ಮಾಸ್ತಿವೆಂಕಟೇಶಯ್ಯಂಗಾರ್ಯರೊಡನೆ ಪ್ರಸ್ತಾಪಿಸಿದಾಗ, ಅದರ ಕಷ್ಟ ನಿಷ್ಠುರಗಳನ್ನು ಬಲ್ಲ ಅವರು, "ಸ್ವಲ್ಪ ನಿಧಾನವಾಗಿ ಯೋಚಿಸಿ ಮಾಡುವುದು ಒಳ್ಳೆಯದು" ಎಂದರು. ಆದರೆ ಅಷ್ಟುಹೊತ್ತಿಗಾಗಲೇ ನಾನು ಹಿಮ್ಮೆಟ್ಟಲಾರದಷ್ಟು ಮುಂದುವರಿದಿದ್ದೆ. ಅವರಿಗೂ ಸೆಂಟ್ರಲ್ ಕಾಲೇಜಿನಲ್ಲಿ ಅದುವರೆಗೆ ಸಿದ್ಧವಾಗಿದ್ದ ಪಾಕದ ಪರಿಚಯವಿರಲಿಲ್ಲ. ಅಂತು ಪತ್ರಿಕೆಯೇನೋ ಹೊರಟುಬಿಟ್ಟಿತು. ಮೈಸೂರಿಗೆ ಅದರ ಮೊದಲನೆಯ ಸಂಚಿಕೆಯನ್ನು ತಂದು ನನ್ನ ಗುರುಗಳೂ ಆಗ ಕಾಲೇಜಿನ ಮುಖ್ಯೋಪಾಧ್ಯಾಯರೂ ಆಗಿದ್ದ ಶ್ರೀಮಾನ್ ಎನ್. ಎಸ್. ಸುಬ್ಬರಾಯರಿಗೆ ಅದರ ಒಂದು ಪ್ರತಿಯನ್ನು ಕೊಟ್ಟು ಅವರ ಆಶೀರ್ವಾದ ಬೇಡಿದೆ. ಅವರು ತಟ್ಟನೆ "ಏನು ಕೃಷ್ಣಶಾಸ್ತ್ರಿ ! ಸಾಹಿತ್ಯಪರಿಷತ್ತಿನ ಕೈಯಲ್ಲಿ ಒಂದು ಒಳ್ಳೆಯ ಪತ್ರಿಕೆಯನ್ನು ನಡಸುವುದಕ್ಕಾಗಿಲ್ಲ, ನಿನ್ನ ಕೈಯಲ್ಲಾಗುತ್ತದೆಯೆ ?" ಎಂದರು. ನನಗೆ ನಿರುತ್ಸಾಹವೇನೋ ಆಯಿತು. ಆದರೆ ಅದನ್ನು ತೋರ್ಪಡಿಸಿಕೊಳ್ಳದೆ "ಏನೋ ಸ್ವಾಮಿ ಆರಂಭಮಾಡಿಬಿಟ್ಟಿದ್ದೇನೆ, ನನ್ನ ಕೈಲಾದ ಮಟ್ಟಿಗೆ ಚೆನ್ನಾಗಿ ನಡಸಿಕೊಂಡು ಹೋಗಬೇಕೆಂದಿದ್ದೇನೆ" ಎಂದು ವಿನಯದಿಂದ ಉತ್ತರಕೊಟ್ಟೆ. ಇದಕ್ಕೆಲ್ಲಾ ಹಿಂದೆ ಇದ್ದದ್ದು ಒಂದು ಒರಟುಧೈರ್ಯ—ನನ್ನ ವಿದ್ಯಾರ್ಥಿಗಳು ನನಗೆ ನೆರವಾಗುವರು, ಮೊದಲಿಂದ ಕೊನೆಯವರೆಗೆ ನಲವತ್ತು ಪುಟದಷ್ಟನ್ನು ಬರೆದು ಮುದ್ರಿಸಿ, ಚಂದಾದಾರರನ್ನು ಸಂಪಾದಿಸಿ ಅದರ ಖರ್ಚನ್ನು ಎಬ್ಬಿಸುವುದು ಸಾಧ್ಯ ಎಂಬ ಧೈರ್ಯ ; ನಿರ್ವಂಚನೆಯಿಂದ ಮಾಡಿದ ಒಳ್ಳೆಯ ಕೆಲಸಕ್ಕೆ ಬೆಂಬಲ ದೊರೆತೇ ದೊರಕುವುದೆಂಬ ಧೈರ್ಯ. ಅದನ್ನು ಮೊದಲನೆಯ ಲೇಖನದ ಕೊನೆಯಲ್ಲಿ ಕಂಡುಬರುವ ಈ ವಾಕ್ಯಗಳಲ್ಲಿ ನೋಡಬಹುದು :—

> "ನಮ್ಮಲ್ಲಿ ಬೆಳ್ಳಿಯಿಲ್ಲ, ಬಂಗಾರವಿಲ್ಲ; ಆದರೆ ಯಾವುದು ಇದೆಯೋ ಅದನ್ನು ನಿರ್ವಂಚನೆಯಾಗಿ ಕೊಡುತ್ತೇವೆ. ನಾವು ಮಾಡತಕ್ಕ ಕೆಲಸವನ್ನು ನಾವು ದೃಢದಿಂದಲೂ ನಿರ್ವಂಚನೆಯಿಂದಲೂ ಮಾಡಿದರೆ ಸರಸ್ವತಿಯೂ ಲಕ್ಷ್ಮಿಯೂ ತಾವಾಗಿ ಸಹಾಯಕ್ಕೆ ಬಂದು ನಿಲ್ಲುವರೆಂದು ನಮಗೆ ಧೈರ್ಯವಿದೆ."

ವಾಗಿರಬೇಕೆಂದೂ, ಕೈಲಾದ ಮಟ್ಟಿಗೆ ಅನುವಾದವಾಗಲಿ ಭಾಷಾಂತರವಾಗಲಿ ಆಗಿರಬಾರದೆಂದೂ, ಇರುವುದರಲ್ಲಿ ಉತ್ತಮವಾದದ್ದನ್ನೇ ಆರಿಸಿಕೊಂಡು ಹಾಕಬೇಕೆಂದೂ ಸಂಘವು ನಿರ್ಧರಿಸಿತ್ತು. ಇದೇ ನೀತಿಯನ್ನೇ ಇಂದಿಗೂ ಅನುಸರಿಸುತ್ತ ಬಂದಿದೆ.

ಇಂದಿಗೂ "ಪ್ರಬುದ್ಧ ಕರ್ಣಾಟಕ"ಕ್ಕೆ ಬೆಳ್ಳಿ ಇಲ್ಲ ಬಂಗಾರವಿಲ್ಲ. ಅದರ ಲೇಖಕರಿಗೆ ಅದು ಇಷ್ಟುದಿನವಾದರೂ ಒಂದು ಬಿಡಿಗಾಸನ್ನೂ ಸಂಭಾವನೆಯಾಗಿ ಕೊಟ್ಟಿಲ್ಲ. ಸಂಭಾವನೆಯನ್ನು ಕೊಟ್ಟು ನೋಡೋಣವೆಂಬ ಸಲಹೆ ಒಂದೆರಡು ಸಲ ಬಂದಿತ್ತು; ಇದರಿಂದ ಪರಿಸ್ಥಿತಿ ಉತ್ತಮವಾಗದೆ ಬೇಡವಾದ ಲೇಖನಗಳು ಬಂದು ತುಂಬಿಕೊಂಡು ಅನಾವಶ್ಯಕವಾದ ವೈಮನಸ್ಯಗಳು ಉಂಟಾಗುವುದೇ ಸಂಭವವಾಗಿದ್ದದ್ದರಿಂದ ಆ ಯೋಜನೆಯನ್ನು ಬಿಟ್ಟದ್ದಾಯಿತು. ನಾವು ಕೊಟ್ಟರೆ ತಾನೇ ಅವರಿಗೆ ಎಷ್ಟು ಕೊಟ್ಟೇವು? ಅಭಿಮಾನದಿಂದ ಬರೆಯುವವರು ದುಡ್ಡಿಗೆ ಬರೆದಾರೆ? ಅದರಿಂದ ಅವರ ಹೊಟ್ಟೆ ತುಂಬೀತೆ? ನಮ್ಮ ದೇಶದಲ್ಲಿ ಆ ಕಾಲ ಎಂದಿಗೆ ಬಂದೀತೋ! ಪ್ರಬುದ್ಧ ಕರ್ಣಾಟಕಕ್ಕೆ ಲೇಖನಗಳನ್ನು ಬರೆದುಕೊಟ್ಟ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು, ಮಾಸ್ತಿ ವೆಂಕಟೇಶಯ್ಯಂಗಾರ್ಯರು, ಡಿ. ವಿ. ಗುಂಡಪ್ಪನವರು ಇಂಥವರು ಅಭಿಮಾನದಿಂದ ಬರೆದಿರುವ ಲೇಖನಗಳನ್ನೂ ಕೊಟ್ಟಿರುವ ಗ್ರಂಥಗಳನ್ನೂ ಎಷ್ಟು ದುಡ್ಡುಕೊಟ್ಟರೆ ತಾನೇ ಬರೆದುಕೊಡುತ್ತಿದ್ದರು? ದುಡ್ಡಿಗೆ ದೊರಕುವುದು "ಬಜಾರಿ ಮಾಲು!". ಈ ಅಭಿಮಾನಕ್ಕೆ ಸರಿತೂಗುತ್ತಿದ್ದ ಮತ್ತೊಂದು ಶಕ್ತಿ ಎಂದರೆ ಶ್ರೀಮಾನ್ ವೆಂಕಣ್ಣಯ್ಯನವರ ಸ್ನೇಹ ಮತ್ತು ಕಾರ್ಯಸಾಧನಶಕ್ತಿ. ಅವರು ಒಂದೊಂದು ಲೇಖನಕ್ಕೆ, ಆವಶ್ಯಕತೆ ಬಿದ್ದರೆ, ತಿಂಗಳುಗಟ್ಟಲೆ ಒಬ್ಬೊಬ್ಬರನ್ನು ವ್ಯವಸಾಯಮಾಡಿ, ಅವರಲ್ಲಿ ಕಾಫಿ ಕುಡಿದು, ತಿಂಡಿ ತಿಂದು, ಊಟ ಮಾಡಿ, ನಕ್ಷತ್ರಿಕನಂತೆ ಬೆನ್ನುಹತ್ತಿ ಆದರೆ ಅವನಂತೆ ಕಾಡಿಸದೆ, ಭಗೀರಥನಂತೆ ಹಟತೊಟ್ಟು ಮೆಚ್ಚಿಸಿ ಗಂಗೆಯನ್ನು ಸಾಧಿಸುತ್ತಿದ್ದರು. ಈ ಸಂದರ್ಭದಲ್ಲಿ ವಿನೋದಕರವಾದ ಒಂದು ಸಣ್ಣ ಅಂಶ ಜ್ಞಾಪಕಕ್ಕೆ ಬರುತ್ತದೆ. ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರು ತಮ್ಮ "ರಂಗಪ್ಪನ ಮದುವೆ"ಯನ್ನು "ಮಧುರವಾಣಿ" ಪತ್ರಿಕೆಯಲ್ಲಿ ಅಚ್ಚು ಹಾಕಿಸಿದ್ದರು. ಅದರ ಸಂಪಾದಕರಾದ ಶ್ರೀಮಾನ್ ಹನುಮಾನದಾಸರು ನನಗೂ ತುಂಬ ಬೇಕಾದವರು. ಆದ್ದರಿಂದ ಅವರ ಮಧುರವಾಣಿ ನನಗೆ ಬರುತ್ತಿತ್ತು; ನಾನು ಮೈಸೂರಿಗೆ ವರ್ಗವಾಗಿ ಬಂದ ಕೂಡಲೆ "ರಂಗಪ್ಪನ ಮದುವೆ"ಯನ್ನು ಓದಿ, ಅದರಲ್ಲಿದ್ದ ಅಪೂರ್ವವಾದ ನವೀನತೆಯನ್ನು ನೋಡಿ, ಕುತೂಹಲವನ್ನು ತಡೆಯಲಾರದೆ ಅದರ ಲೇಖಕರು ಯಾರೆಂದು ಹೋಗಿ ಕೇಳಿದೆ. ಅವರು "ಇದು ಗುಟ್ಟು; ಯಾರಿಗೂ ಹೇಳುವುದಿಲ್ಲವೆಂದು ಮಾತುಕೊಟ್ಟಿದ್ದೇನೆ; ಆದರೆ ನಿಮಗೆ ಹೇಳಿಬಿಡುತ್ತೇನೆ; ಅದರಲ್ಲಿ ಬಾಧಕವಿಲ್ಲ; ನೀವು ಯಾರಿಗೂ ಹೇಳಬೇಡಿ!" ಎಂದು ಗುಟ್ಟನ್ನು ಬಿಟ್ಟುಕೊಟ್ಟರು. ನಾನು ಯಾವ ಗುಟ್ಟನ್ನೂ ವೆಂಕಣ್ಣಯ್ಯನವರಿಂದ ಮುಚ್ಚಿಟ್ಟುಕೊಳ್ಳುತ್ತಿರಲಿಲ್ಲ;

ಅಲ್ಲದೆ ಪತ್ರಿಕೆಯ ಯೋಗಕ್ಷೇಮ ಇಬ್ಬರದೂ ಆಗಿತ್ತು; ಆದ್ದರಿಂದ ಅವರಿಗೆ ಈ ವಿಷಯ ತಿಳಿಸಿ, ಹೇಗಾದರೂಮಾಡಿ ವೆಂಕಟೇಶಯ್ಯಂಗಾರ್ಯರಿಂದ ಒಂದು ಕಥೆ ಸಂಪಾದಿಸಬೇಕೆಂದು ಹೇಳಿದೆ. ವೆಂಕಣ್ಣಯ್ಯನವರಿಗೂ ವೆಂಕಟೇಶಯ್ಯಂಗಾರ್ಯರಿಗೂ ಆಗತಾನೇ ಪರಿಚಯವಾಗಿತ್ತೋ ಇನ್ನೂ ಇಲ್ಲವೋ! ನನಗೆ ಹಳೆಯ ಪರಿಚಯವಾಗಿದ್ದರೂ ಗುಟ್ಟು ರಟ್ಟುಮಾಡಿದ ಅಪರಾಧಕ್ಕೆ ಹನುಮಾನದಾಸರವರನ್ನು ಗುರಿಮಾಡುತ್ತಿದ್ದದ್ದರಿಂದ ನಾನು ಪ್ರವೇಶಿಸದೆ ವೆಂಕಣ್ಣಯ್ಯನವರನ್ನು ಮುಂದೆ ಬಿಟ್ಟೆ; ಅವರು, ಆಗ ಪ್ರಾಯಶಃ ಚಿಕ್ಕಮಗಳೂರಿನಲ್ಲಿ ಸಬ್ ಡಿವಿಷನ್ ಆಫಿಸರಾಗಿದ್ದ ವೆಂಕಟೇಶಯ್ಯಂಗಾರ್ಯರಿಗೆ ಒಂದು ಕಥೆ ಕೊಡಬೇಕೆಂದು ಬರೆದರು; ಅದು ತಮಗೆ ಆಗದ ಕೆಲಸವೆಂದು ಉತ್ತರ ಬಂದುಬಿಟ್ಟಿತು. ಆದರೂ ಅದು ವೆಂಕಟೇಶಯ್ಯಂಗಾರ್ಯರಿಗೆ ತಪ್ಪಲಿಲ್ಲ; ವೆಂಕಣ್ಣಯ್ಯನವರು ಅವರನ್ನು ಬಿಡಲಿಲ್ಲ. ಅವರಿಂದ, ಮುಂದೆ "ಬಾದಷಹನ ದಂಡನೆ" ಬಂತು (III–೪), ಸಾಹಿತ್ಯೋಪನ್ಯಾಸಗಳು ನಡೆದುವು. ಅವರು ಸಂಘದಲ್ಲಿ ಸೇರಿಹೋದರು. ಪ್ರಾಯಶಃ "ತಾವರೆ" ಒಂದು ಹೊರತು ಶ್ರೀಮಾನ್ ವೆಂಕಟೇಶಯ್ಯಂಗಾರ್ಯರು ಪ್ರಬುದ್ಧ ಕರ್ಣಾಟಕಕ್ಕೆ ಬರೆದಿರುವ ಲೇಖನಗಳೆಲ್ಲಾ ವೆಂಕಣ್ಣಯ್ಯನವರ ಪ್ರಯತ್ನದಿಂದಲೇ ಸಂಪಾದಿಸಿ ಬಂದುವು! ಇಂಥ ಜನ, ಇಂಥ ಲೇಖನ, ದುಡ್ಡಿಗೆ ದೊರೆತೀತೇ?

"ಬೆಲೆಯಿಂದಕ್ಕುಮೆ ಕೃತಿ ಗಾ
ವಿಲ ಭುವನದ ಭಾಗ್ಯದಿಂದಮಕ್ಕುಂ ನೋಟ್ಪಿಂ।
ಬೆಲೆಗೊಟ್ಟು ತಾರ ಮಧುವಂ
ಮಲಯಾನಿಲನಂ ಮನೋಜನಂ ಕೌಮುದಿಯಂ॥"

—ನೇಮಿಚಂದ್ರ

(ಇಂಗ್ಲಿಷ್ ಗೀತೆಗಳು,) ಗದಾಯುದ್ಧ ನಾಟಕ, ಅಶ್ವತ್ಥಾಮನ್, ಪಾರಸಿಕರು, (ವಸಂತ ಕುಸುಮಾಂಜಲಿ, ನಿವೇದನ,) ಉಮರನ ಒಸಗೆ, (ತಾವರೆ,) ಸುಬ್ಬಣ್ಣ, ಮೈಸೂರು ದೇಶದ ವಾಸ್ತುಶಿಲ್ಪ, ಕೆಲವು ಕನ್ನಡ ಕವಿಗಳ ಜೀವನ ಕಾಲವಿಚಾರ, ನಾಗರಿಕ ಮುಂತಾದ ಗ್ರಂಥಗಳೆಲ್ಲಾ ಹೀಗೆಯೇ ಬಂದು ಪ್ರಬುದ್ಧ ಕರ್ಣಾಟಕವನ್ನು ಪುಷ್ಟಿಗೊಳಿಸಿ, ಕರ್ಣಾಟಕ ಸಂಘದ ಭಂಡಾರವನ್ನು ಬೆಳೆಸಿದುವು. ಬರವಣಿಗೆ ಬರೆಯಬಲ್ಲ ಕೀರ್ತಿಕಾಮಿಗಳಾದ ಕೆಲವರು, ಕನ್ನಡದಲ್ಲಿ ಏಕೆ ಬರೆಯಬೇಕು, ಬರೆದರೆ ಯಾರು ನೋಡುತ್ತಾರೆ, ನಮಗೆ ಏನು ಬರುತ್ತದೆ ಎಂದು ಇಂದಿಗೂ ಮೂಗು ಮುರಿಯುತ್ತಾರೆ. ಇದು "ನಮ್ಮ ಬಡ ತಾಯಿತಂದೆಗಳ, ಮಕ್ಕಳುಮರಿಗಳ ಹೊಟ್ಟೆ ತುಂಬಿಸುವುದರಲ್ಲೇ ನಮ್ಮ ಐಶ್ವರ್ಯವನ್ನು ಕಳೆದರೆ ನಮಗೆ ಬಿರುದುಬಾವಲಿಗಳು

ಬರುವುದು ಹೇಗೆ?" ಎಂದು ಕೇಳಿದಂತಾಗುತ್ತದೆ. ಅಂಥವರ ಮಾತು ಬೇಡ.[3] ಬಂಗಾಳಿ, ಮರಾಠಿ ಮುಂತಾದ ಭಾಷೆಗಳು ಇಂಥವರಿಂದಲ್ಲ ಮುಂದೆ ಬಂದಿರುವುದು.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವು ಕೇವಲ ಆ ಕಾಲೇಜಿನ ವಿದ್ಯಾರ್ಥಿಗಳದೇ ಎಂಬ ಭಾವನೆ ಮೊದಲಿನಿಂದಲೂ ಬರಲಿಲ್ಲ. ಇದಕ್ಕೆ ಬಹಳಮಟ್ಟಿಗೆ ವೆಂಕಣ್ಣಯ್ಯನವರ ಸ್ನೇಹಪೂರ್ಣವಾದ, ಉದಾರವಾದ ನೀತಿಯೇ ಕಾರಣ; ಮುಂದಕ್ಕೂ ಈ ಸಂಪ್ರದಾಯವೇ ನಡೆದುಕೊಂಡು ಬಂತು; ಸಂಘದ ಉಪನ್ಯಾಸ ಉತ್ಸವಗಳೆಂದರೆ ಬೆಂಗಳೂರಿನ ಮಹಾಜನ ಪ್ರಮುಖರನೇಕರಿಗೆ ಆಹ್ವಾನ ಹೋಗುತ್ತಿತ್ತು; ಅವರೂ ಅವುಗಳಲ್ಲಿ ಭಾಗಿಗಳಾಗುತ್ತಿದ್ದರು. ಹೀಗೆ ಪ್ರಬುದ್ಧ ಕರ್ಣಾಟಕವೂ ಬಹುಬೇಗ ಮೈಸೂರಿನ ಮಹಾಜನಗಳದ್ದಾಯಿತು; ಅನಂತರ ಕರ್ಣಾಟಕದ ಮಹಾಜನಗಳದ್ದಾಯಿತು. ಈಗ ಅದಕ್ಕೆ ಎಲ್ಲಾ ಕಡೆಯಿಂದಲೂ ಲೇಖನಗಳು ಬರುತ್ತಿವೆ; ವಿದ್ಯಾರ್ಥಿಗಳ ಲೇಖನಗಳಿಗಿಂತ ವಿದ್ವಾಂಸರ ಲೇಖನಗಳೇ ಹೆಚ್ಚಾಗಿ ಪ್ರಕಟವಾಗುತ್ತಿವೆ.

ಮೊದಲಿನ ಎರಡು ವರ್ಷ "ನಾನು ಮತ್ತು ನನ್ನ ಕಣ್ಣಿನ ಬೊಂಬೆ" ಎಂಬಂತೆ ಪತ್ರಿಕೆಯಲ್ಲಿ ನನ್ನ ಮತ್ತು ನನ್ನ ಶಿಷ್ಯರ ಲೇಖನಗಳೇ ಬಂದುವು; ಬರಿಯ ಗದ್ಯ ಲೇಖನಗಳೇ ಬಂದುವು. ಆಮೇಲೆ ಪದ್ಯ ಬಂತು, ನಾಟಕ ಬಂತು, ಸಣ್ಣ ಕಥೆ ಬಂತು; ಪ್ರಚಲಿತ ರಾಜಕೀಯ ವಿಚಾರ ಒಂದು ಹೊರತು ಮಿಕ್ಕ ವಿಷಯಗಳ ಮೇಲಣ ಲೇಖನಗಳೆಲ್ಲವೂ ಬಂದುವು.[4] ಅವುಗಳ ವಿವರವನ್ನು ಈ ಸಂಚಿಕೆಯ ಕೊನೆಯಲ್ಲಿರುವ ಅಕಾರಾದಿಗಳಲ್ಲಿ ನೋಡಬಹುದು.

---

[3] ಈ ಸಂದರ್ಭದಲ್ಲಿ ಪ್ರಸಿದ್ಧ ಬಂಗಾಳಿ ಲೇಖಕರಾದ ಬಂಕಿಂಚಂದ್ರರು ಬರೆದ ಎರಡು ವಾಕ್ಯಗಳು ಜ್ಞಾಪಕಕ್ಕೆ ಬರುತ್ತವೆ—

೧. "ಯಶಸ್ಸಿಗೋಸ್ಕರ ಬರೆಯಬೇಡಿ. ಹಾಗಾದರೆ ಯಶಸ್ಸೂ ಬರುವುದಿಲ್ಲ, ಲೇಖನವೂ ಚೆನ್ನಾಗುವುದಿಲ್ಲ. ಲೇಖನ ಚೆನ್ನಾಗಿದ್ದರೆ ಯಶಸ್ಸು ತಾನಾಗಿ ಬರುತ್ತದೆ."—ಬಂಗಾಳದ ಹೊಸ ಲೇಖಕರಲ್ಲಿ ಬಿನ್ನಹ (೧೮೮೫).

೨. "ಎಷ್ಟುದಿನದ ವರೆಗೆ ವಿದ್ಯಾವಂತರೂ ಜ್ಞಾನವಂತರೂ ಆದ ಬಂಗಾಳಿಗಳು ತಾವು ಹೇಳಬೇಕಾದದ್ದನ್ನು ಬಂಗಾಳಾ ಭಾಷೆಯಲ್ಲಿ ಹೇಳುವುದಿಲ್ಲವೋ ಅಷ್ಟು ದಿನದ ವರೆಗೆ ಬಂಗಾಳಿಗಳ ಉನ್ನತಿಯು ಎಷ್ಟುಮಾತ್ರವೂ ಸಂಭವವಲ್ಲ."—ವಂಗದರ್ಶನ ಪತ್ರಿಕೆಯ 'ಸೂಚನೆ' (೧೮೭೨).

[4] "ಸರ್ ಎಂ. ವಿಶ್ವೇಶ್ವರಯ್ಯನವರ ಅರವತ್ತನೆಯ ವರ್ಷ ವರ್ಧಂತ್ಯುತ್ಸವದಲ್ಲಿ ಓದಿದ ಪದ್ಯಗಳು" .... ಮೊದಲನೆಯ ಕವಿತೆ (III, ೩)
"ಪ್ರತಿಮಾ ನಾಟಕವು" .... ಮೊದಲನೆಯ ನಾಟಕ (IV)
"ಶಾರದೆ" .... ಮೊದಲನೆಯ ಸಣ್ಣಕಥೆ (III, ೨)
"ಸರ್ ಎಂ. ವಿಶ್ವೇಶ್ವರಯ್ಯನವರು" .... ಮೊದಲನೆಯ ಚಿತ್ರ (III, ೩)

ಪ್ರಬುದ್ಧ ಕರ್ಣಾಟಕದ ಲೇಖನಗಳು ಪುಡಿಪುಡಿಯಾಗಿರಬಾರದೆಂದೂ, ಸಾರವತ್ತಾಗಿ ನಾಲ್ಕುಕಾಲ ನಿಲ್ಲುವಂತಿರಬೇಕೆಂದೂ, ಸಾಧ್ಯವಾದರೆ ಕೆಲವು ಸಂಚಿಕೆಗಳಲ್ಲಿ ಬಂದ ಲೇಖನಗಳನ್ನು ಸೇರಿಸಿ ಅಚ್ಚುಕಟ್ಟಾದ ಒಂದು ಪುಸ್ತಕ ಮಾಡುವಂತಿರಬೇಕೆಂದೂ ನಿರ್ಧರಿಸಿದ್ದೆವು. ಕರ್ಣಾಟಕ ಸಂಘವು ಪ್ರಕಟಿಸಿದ ಅನೇಕ ಗ್ರಂಥಗಳು ಇಂಥವು. ಇವಲ್ಲದೆ, ಆಗಾಗ್ಗೆ ಸಂಘವು ಉಳಿತಾಯದ ಹಣದಿಂದ ಸ್ವತಂತ್ರ ಗ್ರಂಥಗಳನ್ನು ಪ್ರಕಟಿಸಿ ಅವನ್ನು ಪ್ರಬುದ್ಧ ಕರ್ಣಾಟಕದ ಚಂದಾದಾರರಿಗೆ ಉಚಿತವಾಗಿ ಹಂಚಿತು. ಇವುಗಳನ್ನು ಈ ಲೇಖನದ ಕೊನೆಯಲ್ಲಿ ಅನುಬಂಧವಾಗಿ ತೋರಿಸಿದೆ.

ಪತ್ರಿಕೆ ಆರಂಭವಾದಾಗ ಅದರಲ್ಲಿ ಚಿತ್ರಗಳನ್ನು ಹಾಕುವ ಯೋಚನೆಯಿರಲಿಲ್ಲ. ಆ ಭಾಗ ಹುಟ್ಟಿದ್ದು ಮೈಸೂರು ಶಾಸನದ ಇಲಾಖೆಯಲ್ಲಿ ಶಿಲ್ಪವಿದ್ಯಾಸಹಾಯಕರಾಗಿ ಈಗ ವಿಶ್ರಾಂತರಾಗಿರುವ ನನ್ನ ಮಿತ್ರರು ಶ್ರೀಮಾನ್ ಬಿ. ವೆಂಕೋಬರಾವ್, ಬಿ.ಎ. ಅವರ "ವಾಸ್ತುಶಿಲ್ಪ"ದಿಂದ. ಅನಂತರ ಅದು ಶಾಖೋಪಶಾಖೆಗಳಾಗಿ ಬೆಳೆಯಿತು.

ಈ ವಿಭಾಗವನ್ನು ಮುಗಿಸುವುದಕ್ಕಿಂತ ಮುಂಚೆ, ಸಂಪಾದಕನಾಗಿ ನಾನು ಲೇಖನಗಳನ್ನು ಆರಿಸಿಕೊಳ್ಳುವುದರಲ್ಲಿಯೂ ಅವುಗಳಿಗೆ ರೂಪುಗೊಡುವುದರಲ್ಲಿಯೂ ನಿಷ್ಠುರವಾಗಿ ವ್ಯವಹರಿಸಿದ ಬಗ್ಗೆ ಒಂದು ಮಾತು ಬರೆಯುವುದು ಆವಶ್ಯಕ. ಈ ನಿಷ್ಠುರತೆಗಾಗಿ ನಾನು ಎಷ್ಟೋ ದುರ್ಜನನಾಗಿದ್ದೇನೆ; ದೂರಿಗೆ ಒಳಗಾಗಿದ್ದೇನೆ; ಆದರೆ ಎಂದೂ, ಇಂದಿಗೂ ಕೂಡ, ಪಶ್ಚಾತ್ತಾಪಪಟ್ಟಿಲ್ಲ. ಹುರುಳಿಲ್ಲದ ಲೇಖನಗಳನ್ನು ತಿರಸ್ಕರಿಸಿ ಹಿಂದಕ್ಕೆ ಕಳುಹಿಸುವ ಅಪ್ರಿಯವಾದ ಕೆಲಸವನ್ನು ನಾನು ನಿರ್ದಾಕ್ಷಿಣ್ಯವಾಗಿ ಮಾಡಿದ್ದೇನೆ. "ಕಾವ್ಯಗಳನ್ನು ನಮ್ಮದು ತಮ್ಮದೆಂಬ ಒಂದು ಸುಳ್ಳು ಅಭಿಮಾನವನ್ನಾಗಲಿ, 'ಕನ್ನಡ, ಕಾಡು ಭಾಷೆ' ಎಂಬ ಒಂದು ಕೀಳುಬುದ್ಧಿಯನ್ನಾಗಲಿ ಇಟ್ಟುಕೊಳ್ಳದೆ, ನಿರ್ದಾಕ್ಷಿಣ್ಯವಾಗಿಯೂ ನಿಷ್ಪಕ್ಷಪಾತವಾಗಿಯೂ ವಿಚಾರಮಾಡಿ, ದೋಷಗಳನ್ನು ಕಿತ್ತು ಒಗೆದು, ಗುಣಗಳನ್ನು ಗ್ರಹಿಸಿ, ಒಂದು ಕಡೆ ವಿಮರ್ಶೆಯನ್ನೂ ಮತ್ತೊಂದು ಕಡೆ ರಚನೆಯನ್ನೂ ಮಾಡಬೇಕೆಂಬುದು ನಮ್ಮ ಉದ್ದೇಶ" (ಸಂಚಿಕೆ ೨, ಪುಟ ೪). ಹಳೆಯದಕ್ಕೂ ಅದೇ ಸೂತ್ರ, ಹೊಸದಕ್ಕೂ ಅದೇ ಸೂತ್ರ. ಸಾಹಿತ್ಯದ ಮಟ್ಟ ಏರಬೇಕು, ಅಭಿರುಚಿಯ ಗುಣ ಉತ್ತಮಗೊಳ್ಳಬೇಕು, ಪತ್ರಿಕೆಗೆ ಗೌರವ ಬರಬೇಕು—ಇದು ನನ್ನ ಉದ್ದೇಶ. ಆದ್ದರಿಂದ, ಹುಡುಗರ ಮಾತು ಹಾಗಿರಲಿ, ದೊಡ್ಡವರಿಂದ ಬಂದ ಲೇಖನಗಳನ್ನೂ ಎಷ್ಟೋಸಾರಿ ಹಿಂತಿರುಗಿಸಿ, ತಿದ್ದಿ, ತಿದ್ದಹೋಗಿ, ಬೈಗಳನ್ನು ತಿಂದಿದ್ದೇನೆ. ಇದರ ವಿವೇಕವನ್ನು ಒಪ್ಪಿದ ಒಬ್ಬ ಹಿರಿಯ ಮಿತ್ರರು (ನಾನು ಅವರಿಗೆ ಮಾಡಿದ ಈ ವಿಧವಾದ ತೇಜೋವಧೆಗಾಗಿ) ಇಂದಿಗೂ ನನ್ನನ್ನು ಪ್ರಶಂಸಿಸುತ್ತಿದ್ದಾರೆ. ಒಂದುಸಾರಿ, ಮೊದಲನೆಯ ಪುಟದಲ್ಲಿ ಹಾಕುತ್ತಿದ್ದ "ಪ್ರಾರ್ಥನೆ"ಯ

ಪದ್ಯ ಬೇಕಾಯಿತು. ಅವರನ್ನು ಕೇಳಿಕೊಂಡೆ. ನನಗೆ ಇಲ್ಲವೆನ್ನಲಾರದೆ, ಇದ್ದಷ್ಟು ಕಾವಿನಲ್ಲೇ—ಪ್ರಾಯಶಃ ಇಲ್ಲದ ಸ್ಫೂರ್ತಿಯನ್ನು ಒದಗಿಸಿಕೊಂಡು—ಒಂದು ಪದ್ಯ ಬರೆದುಕೊಟ್ಟರು. ಅದು ಎಂದಿನಂತೆ ಸರಳವಾಗಿ ಬರಲಿಲ್ಲ. ಅದನ್ನು ಅವರೇ ಅರಿತು ಕೆಲವು ಮಾತುಗಳಿಗೆ ಅಡಿಟಿಪ್ಪಣಿಯಲ್ಲಿ ಅರ್ಥಬರೆದಿದ್ದರು. ನನಗೆ ಅದು ಒಪ್ಪಿಗೆ ಯಾಗದೆ, ಪದ್ಯವನ್ನು ತೆಗೆದುಕೊಂಡು ಹೋಗಿ ಹಿಂತಿರುಗಿ ಕೊಟ್ಟು, "ಏನು ಸ್ವಾಮಿ, ನಿಮ್ಮಂಥವರೂ ಟೀಕೆ ಟಿಪ್ಪಣಿಗಳಿಂದ ಅರ್ಥಮಾಡಿಕೊಳ್ಳಬೇಕಾದ ಪದ್ಯವನ್ನು ಬರೆದು ಬಿಟ್ಟರೆ ಗತಿ!" ಎಂದೆ. ಆ ಕ್ಷಣದಲ್ಲಿ ಅವರಿಗೆ ಸ್ವಲ್ಪ—ಪ್ರಾಯಶಃ ತುಂಬ—ಅಸಮಾಧಾನವಾಯಿತು. ಆದರೆ ಒಂದೆರಡು ದಿನ ಬಿಟ್ಟುಕೊಂಡು ಬಂದು, ಅವರು, ನಾನು ಮಾಡಿದ್ದೇ ಸರಿ ಎಂದರು— ಈಚೆಗೂ ಎಷ್ಟೋ ಸಲ ಅದೇ ಮಾತನ್ನೇ ಹೇಳಿದ್ದಾರೆ. ಹೆತ್ತವರಿಗೆ ಅವರ ಮಕ್ಕಳು ಹೇಗಿದ್ದರೂ ಮುದ್ದು. ಆದರೆ ಸೃಷ್ಟಿಯಲ್ಲಿ ಕಳಪೆಗಳೂ ಜಳ್ಳುಗಳೂ ತೂರಿಹೋಗುತ್ತವೆ. ರಂಗಕ್ಕೆ ಬರಬೇಕಾದರೆ—ಯುದ್ಧರಂಗವಾಗಲಿ, ನಾಟಕ ರಂಗವಾಗಲಿ—ನಿಷ್ಠುರವಾದ ಆಯ್ಕೆ ನಡೆಯುತ್ತದೆ. ಆದ್ದರಿಂದ ನಾನು ಲೇಖನಗಳನ್ನು ಆಯ್ದು ಆಯ್ದು ಹಾಕುತ್ತಿದ್ದೆ. 'ಪ್ರಥಮ ಪ್ರಯತ್ನ' 'ವಿದ್ಯಾರ್ಥಿಯ ಅಭ್ಯಾಸ' ಎಂಬ ಮಾತುಗಳಿಗೆ ಕಿವಿಗೊಡುತ್ತಿರಲಿಲ್ಲ. ಇಂಥವರಲ್ಲಿ ಯಾರಲ್ಲಾದರೂ ಯೋಗ್ಯತೆ ಇದೆ ಎಂದು ತೋರಿದರೆ, ಅವರನ್ನು ಒಂದಕ್ಕೆ ಬದಲಾಗಿ ನಾಲ್ಕು ಲೇಖನಗಳನ್ನು— ಇರುವವುಗಳಲ್ಲಿ ಉತ್ತಮವಾದವುಗಳನ್ನು—ಕಳುಹಿಸಿಕೊಡಿ ಎಂದು ಪ್ರಾರ್ಥಿಸುತ್ತಿದ್ದೆ. ಬಂದವುಗಳಲ್ಲಿ ಉತ್ತಮವಾದದ್ದನ್ನು ಆರಿಸಿಕೊಂಡು ಪ್ರಕಟಿಸುತ್ತಿದ್ದೆ. ನನ್ನ ವಿಮರ್ಶಬುದ್ಧಿ ಅಷ್ಟು ಉತ್ತಮವಲ್ಲದ್ದಿರಬಹುದು, ಅಭಿರುಚಿ ಉದಾರವಲ್ಲದ್ದಿರಬಹುದು. ಆದರೆ ಜವಾಬುದಾರಿ ನನ್ನದಾಗಿತ್ತು; ಮತ್ತು ಅನೇಕವೇಳೆ ಇತರರ ವಿಮರ್ಶೆ ವಿವೇಚನೆಗಳು ನನ್ನವಕ್ಕಿಂತ ಉತ್ತಮವಾಗಿದ್ದುವೆನ್ನಿಸುತ್ತಿರಲಿಲ್ಲ. ಒಟ್ಟಿನ ಮೇಲೆ ಲೇಖಕರು ಯಾರೂ, ನನ್ನ ಉಳಿಯ ಏಟುಗಳಿಂದ, ಕತ್ತರಿಯ ಪ್ರಯೋಗಗಳಿಂದ, ತಮ್ಮ ಲೇಖನಗಳು ವಿರೂಪಗೊಂಡುವು ಎಂದು ಇಂದಿಗೂ ಆಕ್ಷೇಪಿಸಿಲ್ಲ. ಯಾವ ಯಾವ ಲೇಖನಗಳು ಎಷ್ಟೆಷ್ಟು ಪೆಟ್ಟು ತಿಂದುವು, ಎಷ್ಟೆಷ್ಟು ನೊಂದುವು, ಎಂಬುದು ನನಗೆ ಮಾತ್ರ ಗೊತ್ತು. (ಅಂಥ ಕೆಲವು ಹಸ್ತಪ್ರತಿಗಳನ್ನು ಕರ್ಣಾಟಕ ಸಂಘದಲ್ಲಿ ಮಾದರಿಗಾಗಿ ಇಟ್ಟಿದ್ದೆ. ಪತ್ರಿಕಾಪ್ರಪಂಚಕ್ಕೆ ಸಂಬಂಧಪಟ್ಟಂತೆ ಒಂದು ವಿಚಿತ್ರ ವಸ್ತುಸಂಗ್ರಹ ಶಾಲೆಯನ್ನು ಏರ್ಪಡಿಸುವುದಾದರೆ ಅವನ್ನು ಅಲ್ಲಿ ಇಡಬಹುದು!) ಕಾಲಕ್ರಮದಲ್ಲಿ ತರುಣ ಲೇಖಕರು ಪ್ರಬುದ್ಧ ಕರ್ಣಾಟಕದಲ್ಲಿ ತಮ್ಮ ಲೇಖನವನ್ನು ಪ್ರಕಾಶಪಡಿಸಬೇಕೆಂದು ಅಪೇಕ್ಷಿಸುವುದೂ, ಅದರ ಸಂಪಾದಕರು ಹಾಕುತ್ತಾರೋ ಇಲ್ಲವೋ ಎಂದು ಶಂಕಿಸುವುದೂ, ಹಾಕಿದರೆ ಹೆಮ್ಮೆ ಪಡು

ವುದೂ ಸಾಮಾನ್ಯವಾಯಿತು; ಮತ್ತು ಉಚ್ಚ ತರಗತಿಯ ಲೇಖನಗಳೇ ಅಭ್ಯಾಸವಾಗಿ, ಪ್ರಬುದ್ಧ ಕರ್ಣಾಟಕದ "ದೊಡ್ಡಸ್ತಿಕೆ"ಯನ್ನು ದೂರುತ್ತಿದ್ದ ಜನರೇ, ಅದು ಸ್ವಲ್ಪ ಕೀಳುಮಟ್ಟಕ್ಕೆ ಇಳಿದರೆ ಸಪ್ಪೆಯಾಯಿತೆಂದು ಆಕ್ಷೇಪಿಸುವಂತಾದರು. ಈಗ ಇಪ್ಪತ್ತೈದು ವರ್ಷಗಳಿಂದ ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟೋ ಉತ್ತಮವಾದ ವ್ಯವಸಾಯ ನಡೆದಿದೆ. ಪ್ರಬುದ್ಧ ಕರ್ಣಾಟಕವು, ಅದು ನಡೆಯುವಂತೆ ಸ್ವಲ್ಪವಾದರೂ ಸಾಧನವಾಗಿ, ಕಾಡುಕಡಿದು, ಭೂಮಿಯನ್ನು ಉತ್ತು, ನೆಲ ಹದಮಾಡಿ, ಬೇಲಿ ಹಾಕಿ, ಅಷ್ಟೋ ಇಷ್ಟೋ ನೀರು ಬೀಜ ಗೊಬ್ಬರಗಳನ್ನು ಒದಗಿಸಿಕೊಟ್ಟಿದೆ, ಎಂದು ನಾನು ನಂಬಿದ್ದೇನೆ. ಆದರೆ ಬರಿಯ ನೆಲ ನೇಗಿಲುಗಳಿಂದ ಆಗುವುದು ಏನು? ಫಲ ತೆಗೆಯಲು "ನೇಗಿಲ ಯೋಗಿ"ಗಳು ಬೇಕು. ಅವರನ್ನು ಆರಿಸಿ ಕಳುಹಿಸಿಕೊಡುವುದು ಭಗವಂತನ ದಯೆ, ನಾಡಿನ ಪುಣ್ಯ!

ಸಂಚಿಕೆಗಳ ಸಂಖ್ಯೆ—ಗಾತ್ರ

"ಪ್ರಬುದ್ಧ ಕರ್ಣಾಟಕ"ವು ಹೆಸರಿಗೆ ತಕ್ಕಂತೆ ಎಚ್ಚತ್ತ ರೀತಿಯಲ್ಲಿ, ಒಂದು ಹೊಸ ಬೆಳಕಿನಲ್ಲಿ, ಕೆಲಸಮಾಡಬೇಕೆಂದು ನಿರ್ಧರಿಸಿತ್ತು. ವಿದ್ಯಾರ್ಥಿಗಳ ಪತ್ರಿಕೆ, ಅದರ ದೃಷ್ಟಿ ಹೊಸದು ಎನ್ನುವುದಿರಲಿ, ಅದು ಬರುವ ಕಾಲ ನಿಯಮ ಕೂಡ ಹೊಸ ರೀತಿಯದಾಗಿತ್ತು. ಯುಗಾದಿಯ ಹಬ್ಬ, ವಿನಾಯಕನ ಹಬ್ಬ, ದೀಪಾವಳಿಯ ಹಬ್ಬ, ವರ್ಷದ ಈ ಮೂರು ದೊಡ್ಡ ಹಬ್ಬಗಳಲ್ಲಿ ಅದು ಬರಬೇಕೆಂದು ಮೊದಲು ನಿಶ್ಚಿತವಾಗಿತ್ತು. ಮೂರನೆಯ ವರ್ಷದಿಂದ ಸಂಪುಟಕ್ಕೆ ನಾಲ್ಕು ಸಂಚಿಕೆಗಳಾಗಿ, ವರ್ಷವು ವಿನಾಯಕನ ಸಂಚಿಕೆಯಿಂದ ಆರಂಭವಾಗಿ, ಈಗಿನಂತೆ ದೀಪಾವಳಿ ಸಂಕ್ರಾಂತಿ ಕಾಮನ ಹಬ್ಬಗಳಲ್ಲಿ ಬಂದರೂ ಹಬ್ಬಗಳ ಹೆಸರು ತಪ್ಪಲಿಲ್ಲ. ಮಧ್ಯೆ ಒಂದೆರಡುಸಲ ಈ ಪತ್ರಿಕೆಯನ್ನು ಮಾಸ ಪತ್ರಿಕೆಯಾಗಿ ಮಾಡಬೇಕೆಂದೂ ನಾಲ್ಕು ಸಂಚಿಕೆಗಳೇ ಬಂದರೂ ಅವು ಇಂಗ್ಲಿಷ್ ತಿಂಗಳುಗಳನ್ನು ಅನುಸರಿಸಿ ಮೂರು ತಿಂಗಳಿಗೊಂದು ಸಾರಿ ಬರಬೇಕೆಂದೂ ಮುಂತಾಗಿ ಸಲಹೆಗಳು ಬರುತ್ತಿದ್ದುವು. ಹಬ್ಬಗಳ ಹೆಸರುಳ್ಳ ಈ ನವೀನತೆ ಹೋಗಬಾರದೆಂದೂ, ಮೂರು ಮೂರು ತಿಂಗಳಿಗೊಂದು ಸಾರಿಯಂತೆಯೇ ಬರಬೇಕೆಂದರೆ ಬೇಸಗೆಯ ರಜದಲ್ಲಿ ವಿದ್ಯಾರ್ಥಿಗಳ ಸಹಕಾರ ದೊರೆಯದೆ ಹೋಗುವುದೆಂದೂ, ಹೀಗೆಯೇ ಇದ್ದರೆ ಸಂಪಾದಕನಿಗೆ ಸ್ವಲ್ಪ ಉಸಿರಾಡುವುದಕ್ಕೆ ಅವಕಾಶವಾಗುವುದೆಂದೂ, ಆದ್ದರಿಂದ ಸುಮಾರು ಎಂಟು ತಿಂಗಳಲ್ಲಿ ನಾಲ್ಕು ಸಂಚಿಕೆಗಳು ಬರುವುದೇ ಉತ್ತಮವೆಂದೂ ನಿರ್ಧರವಾಯಿತು. ಈಗಲೂ ಹಾಗೆಯೇ ಇದೆ. ಮಾಸ ಪತ್ರಿಕೆಯಾಗಿ ಮಾಡಲು ಇದ್ದ ಮುಖ್ಯ ಅಡಚಣೆ—ಸಾಮಗ್ರಿಗಳನ್ನು ಕಾಲಕಾಲಕ್ಕೆ ಒದಗಿಸಿಕೊಂಡು, ಪತ್ರಿಕೆಗಳನ್ನು ಸಕಾಲಕ್ಕೆ ಹೊರಡಿಸುವುದು. ಅದಕ್ಕೆ ತಕ್ಕ

ಸಿಬ್ಬಂದಿ ಎಂದೂ ಇರಲಿಲ್ಲ. ಎಷ್ಟು ಸ್ವಲ್ಪ ಪುಟಗಳನ್ನು ಕೊಟ್ಟರೂ ಉಪಯುಕ್ತವಾದ ಲೇಖನಗಳೂ ವಿಭಾಗಗಳೂ ಪೂರ್ಣವಾಗಿದ್ದು ಹನ್ನೆರಡು ಸಂಚಿಕೆಗಳನ್ನು ಕೊಡಬೇಕೆಂದರೆ ಸುಮಾರು ೧,೦೦೦ ಪುಟಗಳಾಗಬೇಕು. ಅದಕ್ಕೆ ಬೇಕಾಗುವ ದುಡ್ಡನ್ನು ನಾವು ತೆರುವ ಹಾಗಿರಲಿಲ್ಲ, ಜನ ಕೊಡುವ ಹಾಗಿರಲಿಲ್ಲ. ಆದ್ದರಿಂದ ಸಾಲಕ್ಕೆ ಸಿಕ್ಕದೆ ಬಹು ಎಚ್ಚರಿಕೆಯಿಂದ ಪತ್ರಿಕೆಯನ್ನು ಬೆಳಸಿಕೊಂಡು ಬಂದದ್ದಾಯಿತು; ಕ್ರಾಂತಿಗಿಂತ ವಿಕಾಸದಲ್ಲಿ ನನಗೆ ಹೆಚ್ಚು ನಂಬಿಕೆ; ಈ ಮಾತನ್ನೇ ನಾನು ವೆಂಕಣ್ಣಯ್ಯನವರಿಗೆ ಹೇಳಿ, ಹನ್ನೆರಡು ಸಂಚಿಕೆಗಳನ್ನು ಮಾಡಿದರೆ ಮಿಕ್ಕ ಕೆಲಸಗಳುಳ್ಳ ಸಂಪಾದಕನಿಗೆ ತುಂಬ ಕಷ್ಟವಾಗುವುದೆಂದು ವಿವರಿಸಿದೆ; ಆಮೇಲೆ ಅವರು ಅದನ್ನು ಒತ್ತಲಿಲ್ಲ. ಹೀಗೆ ಗಾಳಿ ಬಂದಾಗ ತೂರ್‍ಇಕೊಂಡು, ಸಾಮಗ್ರಿ ಒದಗಿದಾಗ ಹೆಚ್ಚು ಪುಟಗಳನ್ನು ಕೊಟ್ಟು, ಅನುಬಂಧಗಳನ್ನು ಸೇರಿಸಿ, ಗ್ರಂಥಗಳನ್ನು ಉಚಿತವಾಗಿ ಹಂಚಿ ಪ್ರಬುದ್ಧ ಕರ್ಣಾಟಕವನ್ನು ಒಂದು ಮರಕ್ಕಿಂತ ಮೆಳೆಯ ಹಾಗೆ ಬೆಳೆಸಿಕೊಂಡು ಬಂದದ್ದಾಯಿತು.

ಮುಂದೆ, ೧ನೆಯ ಸಂಪುಟದಿಂದ ೨೫ನೆಯ ಸಂಪುಟದ ಪೂರ್ತಿ, ಒಂದೊಂದು ಸಂಪುಟದಲ್ಲಿಯೂ ಇರುವ ಪುಟ ಸಂಖ್ಯೆಗಳನ್ನು ಕೊಟ್ಟಿದೆ:—

ಸಂ.	ಪುಟ	ಸಂ.	ಪುಟ	ಸಂ.	ಪುಟ	ಸಂ.	ಪುಟ	ಸಂ.	ಪುಟ
೧	೧೨೦	೬	೩೬೨	೧೧	೫೭೪	೧೬	೫೪೬	೨೧	೫೮೪
೨	೧೨೦	೭	೪೨೫	೧೨	೫೨೨	೧೭	೪೫೮	೨೨	೬೪೦
೩	೨೭೧	೮	೩೯೬	೧೩	೫೭೪	೧೮	೫೬೮	೨೩	೭೯೨
೪	೩೪೬	೯	೪೫೧	೧೪	೬೧೬	೧೯	೪೮೨	೨೪	೬೬೮
೫	೩೪೦	೧೦	೫೦೮	೧೫	೫೫೨	೨೦	೫೪೮	೨೫	೬೪೭


ಚಂದಾದಾರರು

ಹೀಗೆ ಪ್ರಬುದ್ಧ ಕರ್ಣಾಟಕವು ಅಂದಚಂದ ಗಾತ್ರಗಳಲ್ಲಿ ಸಂತತವಾಗಿ ಬೆಳೆದು ಬಂದರೂ ಚಂದಾದಾರರ ಸಂಖ್ಯೆ ಅದಕ್ಕೆ ತಕ್ಕಷ್ಟು ಬೆಳೆದಿಲ್ಲ—ಒಂದು ಸಾವಿರದ ತನಕ ಕೂಡ ಬಂದಿಲ್ಲ. ಇದು ಕಳೆದ ಹನ್ನೆರಡು ವರ್ಷಗಳ ಸಂಖ್ಯೆ:—

ವರ್ಷ		ಸಂಖ್ಯೆ	ವರ್ಷ		ಸಂಖ್ಯೆ
೧೯೩೨-೩೩	....	೭೭೬	೧೯೩೮-೩೯	....	೬೭೩
೧೯೩೩-೩೪	....	೭೮೯	೧೯೩೯-೪೦	....	೬೭೧
೧೯೩೪-೩೫	....	೮೩೬	೧೯೪೦-೪೧	....	೬೨೭
೧೯೩೫-೩೬	....	೭೫೯	೧೯೪೧-೪೨	....	೬೬೮
೧೯೩೬-೩೭	....	೭೬೦	೧೯೪೨-೪೩	....	೭೦೬
೧೯೩೭-೩೮	....	೭೧೯	೧೯೪೩-೪೪	....	೭೮೯

ಪ್ರಬುದ್ಧ ಕರ್ಣಾಟಕದ ಬೆಳೆವಣಿಗೆ

(ರೇಖಾರೂಪದಲ್ಲಿ)



[ಪುಟ ೧೬

ಆದಾಯ—ವೆಚ್ಚ

ಪ್ರಬುದ್ಧ ಕರ್ಣಾಟಕವು ಕರ್ಣಾಟಕಸಂಘದ ಆಶ್ರಯದಲ್ಲಿ ನಡೆದಷ್ಟು ದಿವಸವೂ ಹಾಸಿಗೆ ಇದ್ದಷ್ಟು ಕಾಲುಚಾಚಿಕೊಂಡೇ ಬೆಳೆದುಬಂತು. ಆದರೆ ಅದು, ಹೀಗೆಯೇ ಮುಂದೂ, ಅದರ ಖರ್ಚನ್ನು ಅದು ಹುಟ್ಟಿಸಿಕೊಂಡೇ ಜೀವಿಸಬೇಕೆಂಬ ನೀತಿಯನ್ನು ವಿಶ್ವವಿದ್ಯಾನಿಲಯವು ಅನುಸರಿಸಿದ್ದರೆ ಪ್ರಬುದ್ಧ ಕರ್ಣಾಟಕವು ಇಂದು ಈ ಬೆಳೆವಣಿಗೆಯ ರೂಪದಲ್ಲಿರುತ್ತಿರಲಿಲ್ಲ. ಇವೊತ್ತಿಗೂ, ಒಬ್ಬ ಗುಮಾಸ್ತರಿಗೆ ತುಟ್ಟಿಭತ್ಯ ಸೇರಿ ೨೫ ರೂಪಾಯಿ ಸಂಬಳ, ಒಬ್ಬ ಆಳಿಗೆ ೧೧ ರೂಪಾಯಿ ಸಂಬಳ ಇಷ್ಟು ಹೊರತು ಪ್ರಬುದ್ಧ ಕರ್ಣಾಟಕದ ಕೆಲಸಕ್ಕೆ ಯಾರೂ ಒಂದು ಕಾಸನ್ನು ಸಂಬಳವಾಗಿಯಾಗಲಿ ಸಂಭಾವನೆಯಾಗಿಯಾಗಲಿ ಪಡೆಯುತ್ತಿಲ್ಲ. ಆದರೂ ಪ್ರಬುದ್ಧ ಕರ್ಣಾಟಕವು ಒಟ್ಟಿನ ಮೇಲೆ ವಿಶ್ವವಿದ್ಯಾನಿಲಯಕ್ಕೆ ಈಚಿನ ವರ್ಷಗಳಲ್ಲಿ ಒಂದು ಖರ್ಚಿನ ಬಾಬೇ ಆಗಿದೆ. ಇಂಥ ಯಾವುದೊಂದು ಪತ್ರಿಕೆಯೂ ಯಾವ ದೇಶದಲ್ಲಿಯೂ ಯಾವ ಕಾಲದಲ್ಲಿಯೂ ತನ್ನ ಸಂಪಾದನೆಯ ಮೇಲೆಯೇ ತಾನು ನಡೆದಿಲ್ಲವೆಂಬುದು ನಿಜವಾದರೂ, ಕನ್ನಡಿಗರು ಈ ಅಂಕಿ ಅಂಶಗಳನ್ನು ನೋಡಿ ತಲೆತಗ್ಗಿಸಬೇಕೆಂದು ತೋರುತ್ತದೆ. ಇದು ಕಳೆದ ಹನ್ನೆರಡು ವರ್ಷಗಳ ಪ್ರಬುದ್ಧ ಕರ್ಣಾಟಕದ ಆದಾಯ ವೆಚ್ಚಗಳ ಪಟ್ಟಿ. (ಆಣೆ ಕಾಸುಗಳನ್ನು ಬಿಟ್ಟಿದೆ.)—

ವರ್ಷ	ಆದಾಯ	ವೆಚ್ಚ	ವರ್ಷ	ಆದಾಯ	ವೆಚ್ಚ
೧೯೩೨-೩೩	ರೂ. ೧೯೫೨	೧೭೩೨	೧೯೩೮-೩೯	ರೂ. ೧೭೦೮	೨೧೨೨
೧೯೩೩-೩೪	,, ೧೯೨೮	೧೯೫೪	೧೯೩೯-೪೦	,, ೨೧೦೭	೨೬೫೨
೧೯೩೪-೩೫	,, ೨೦೧೧	೧೯೧೦	೧೯೪೦-೪೧	,, ೧೭೧೧	೨೭೭೫
೧೯೩೫-೩೬	,, ೧೮೨೮	೧೭೨೨	೧೯೪೧-೪೨	,, ೧೭೩೨	೩೫೬೦
೧೯೩೬-೩೭	,, ೧೯೪೮	೧೯೬೨	೧೯೪೨-೪೩	,, ೧೯೩೭	೩೦೭೪
೧೯೩೭-೩೮	,, ೧೬೯೯	೧೭೫೪	೧೯೪೩-೪೪	,, ೨೫೯೭	೩೬೩೨[5]

ಇದನ್ನು ನೋಡಿ, ಕನ್ನಡ ಬೇಡದವರು ವಿಶ್ವವಿದ್ಯಾನಿಲಯಕ್ಕೆ ಈ ಅಲ್ಪ ಖರ್ಚುತಾನೇ ಏಕೆ ಎಂದು ಕೇಳಿರುವುದೂ, ಬೇಕಾದವರು 'ಇಂಗ್ಲಿಷ್ ಪತ್ರಿಕೆಯ ಪಾಡೇನು?' ಅದರ ಸಂಪಾದನೆ ಏನು? ವೆಚ್ಚವೇನು? ಉಪಯುಕ್ತತೆ ಏನು? ಚಂದಾದಾರರ ಸಂಖ್ಯೆಯೆಷ್ಟು?' ಎಂದು ಪ್ರತಿಪ್ರಶ್ನೆ ಹಾಕಿರುವುದೂ ಸ್ವಾಭಾವಿಕ. ಆದರೆ ಕನ್ನಡಿಗರು, ಅದರಲ್ಲಿಯೂ ವಿಶ್ವವಿದ್ಯಾನಿಲಯದ ಸುಮಾರು ೪,೦೦೦ ಕನ್ನಡ

[5] ಎಂದರೆ, ಸರಾಸರಿ ಒಂದು ಸಂಚಿಕೆಗೆ ೯೦೮ ರೂಪಾಯಿ ಆಯಿತು. ಮೊಟ್ಟಮೊದಲನೆಯ ಸಂಚಿಕೆಗೆ ಖರ್ಚು ೯೧ ರೂಪಾಯಿ.

ವಿದ್ಯಾರ್ಥಿಗಳು ಇದನ್ನು ಕುರಿತು ಯೋಚಿಸಬೇಕು. ವಿದ್ಯಾರ್ಥಿಗಳ ಸಾಹಸದಿಂದ ಆರಂಭವಾಗಿ ತಕ್ಕಮಟ್ಟಿನ ಒಳ್ಳೆಯ ಕೆಲಸಮಾಡಿ, ತಮಗೆ ಶಿಕ್ಷಣಕ್ಷೇತ್ರವಾಗಿ, ಜನಕ್ಕೆ ಉಪಯುಕ್ತ ವಸ್ತುವಾಗಿ ೨೫ ವರ್ಷ ಉಳಿದು ಬೆಳೆದಿರುವ ಈ ಪತ್ರಿಕೆ ಇನ್ನೂ ಉಳಿದು ಬೆಳೆಯಬೇಕೇ ಬೇಡವೇ? ವಿದ್ಯಾರ್ಥಿಗಳಿಗೆ ಕಡಮೆ ದರದಲ್ಲಿ ಕೊಟ್ಟರೂ ಇದಕ್ಕೆ ಒಂದುನೂರು ವಿದ್ಯಾರ್ಥಿಗಳೂ ಚಂದಾದಾರರಿಲ್ಲವೆಂದು ಬಹು ವ್ಯಥೆಯಿಂದ ಇಲ್ಲಿ ಹೇಳಬೇಕಾಗಿದೆ.

ವ್ಯಾಪಾರದ ಪ್ರಕಟನೆಗಳು

ಸಾಧಾರಣವಾಗಿ ಪತ್ರಿಕೆಗಳಿಗೆ ಹಣಕಾಸಿನ ಬೆಂಬಲ ಚಂದಾ ಹಣಕ್ಕಿಂತಲೂ ವ್ಯಾಪಾರದ ಪ್ರಕಟನೆಗಳಿಂದಲೇ ಹೆಚ್ಚು. ಆದರೆ ಪ್ರಕಟನೆಗಳು ಬರುವುದು ಪತ್ರಿಕೆಯ ಸಂಚಿಕೆಗಳು ಹೊರಬೀಳುವ ಅಂತರ, ಅದರ ಸಂಖ್ಯೆ, ದರದ ಮಟ್ಟ, ಇವುಗಳ ಮೇಲೆ ಹೋಗುತ್ತದೆ. ಆದ್ದರಿಂದ, ವರ್ಷಕ್ಕೆ ನಾಲ್ಕು ಸಂಚಿಕೆಗಳು ಮಾತ್ರ ಹೊರಡುತ್ತ ಒಂದು ಸಾವಿರ ಚಂದಾದಾರರೂ ಇಲ್ಲದ ಪ್ರಬುದ್ಧ ಕರ್ಣಾಟಕಕ್ಕೆ ಪ್ರಕಟನೆಗಳು ತಾವಾಗಿ ಬರುತ್ತಿರಲಿಲ್ಲ; ಬಂದವುಗಳು ಸಂಕೋಚ ತರುವಂತೆ ಇರುತ್ತಿದ್ದದ್ದರಿಂದಲೋ, ಬಹು ಕಡಮೆ ದರಗಳನ್ನು ಕೊಡುವುದಕ್ಕೆ ಇಚ್ಛೆಸುತ್ತಿದ್ದದ್ದರಿಂದಲೋ ನಾವೂ ಒಪ್ಪುತ್ತಿರಲಿಲ್ಲ. ಇಲ್ಲ, ವ್ರತ ನಡೆಯಬೇಕು, ಇಲ್ಲ ಸುಖ ದೊರೆಯಬೇಕು ಎಂಬುದು ನಮ್ಮ ಆಶಯ. ಒಂದುಸಾರಿ ಮಾತ್ರ ಕನ್ನಡದ ಅಭಿಮಾನಿಗಳೆಂದು ಇಂದಿಗೂ ಪ್ರಖ್ಯಾತರಾಗಿರುವ ಶ್ರೀವರ್ಮ್ ಎಸ್. ಜಿ. ಶಾಸ್ತ್ರಿಗಳನ್ನು ನಾನು ಹೋಗಿ ಕೇಳಿದೆ. ಮೂರು ಅಂಕಿಗಳಿಗೆ ಕಡಮೆಯಾದ ಹಣವನ್ನು ಕೊಟ್ಟರೆ ಅವರ ಪ್ರಕಟನೆ ಬೇಡವೆಂದೂ ಹೇಳಿದೆ. ಅವರೂ ಅದಕ್ಕೆ ಒಪ್ಪಿ ನಾಲ್ಕು ಸಂಚಿಕೆಗಳಿಗೆ ಒಟ್ಟು ೧೦೦ ರೂಪಾಯಿಗಳನ್ನು ಕೊಡುವುದಾಗಿ ಹೇಳಿದರು. ಮೈಸೂರು ಶ್ರೀಗಂಧದ ಸಾಬೂನಿನ ಪ್ರಕಟನೆ ರಕ್ಷಾಪತ್ರದ ನಾಲ್ಕನೆಯ ಪುಟದಲ್ಲಿ ಮೂರು ಸಾರಿ ಬಂದು, ೭೫ ರೂಪಾಯಿ ಸಂಪಾದನೆ ಮಾಡಿಕೊಟ್ಟಿತು. ನಾಲ್ಕನೆಯ ಸಂಚಿಕೆ ಬರುವ ಹೊತ್ತಿಗೆ ಪ್ರಬುದ್ಧ ಕರ್ಣಾಟಕವು ವಿಶ್ವವಿದ್ಯಾನಿಲಯದ ಪತ್ರಿಕೆಯಾದ್ದರಿಂದ, ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ ಸರ್ಕಾರದ ದುಡ್ಡನ್ನು ಸರ್ಕಾರಕ್ಕೇ ಕೊಡುವುದರಲ್ಲಿ ಅರ್ಥವಿಲ್ಲವೆಂದು ಅವರು ಅದನ್ನು ನಿಲ್ಲಿಸಿದರು; ನಾವೂ ಒತ್ತಾಯಪಡಿಸಲಿಲ್ಲ. ಕೆಲವು ವರ್ಷಗಳು ವಿನಿಮಯವಾಗಿ ಪತ್ರಿಕೆಗಳ ಪ್ರಕಟನೆಗಳು ಬಂದುವು. ಇವು ದಿನ ದಿನಕ್ಕೆ ಹೆಚ್ಚಾದ್ದರಿಂದಲೂ, ಶ್ರಮಕ್ಕೆ ತಕ್ಕ ಪ್ರಯೋಜನವೇನೂ ಕಂಡುಬಾರದ್ದರಿಂದಲೂ ಸ್ವಲ್ಪಕಾಲದ ಮೇಲೆ ಅವನ್ನು ನಿಲ್ಲಿಸಲಾಯಿತು.

ಸಂಪಾದಕತ್ವ

ಪತ್ರಿಕೆಯು ಆರಂಭವಾದಂದಿನಿಂದ ಹದಿಮೂರು ವರ್ಷ ನಾನೇ ಸಂಪಾದಕನಾಗಿದ್ದೆ. ಆದರೆ ಮೊದಲ ಒಂದೆರಡು ಸಂಪುಟಗಳಲ್ಲಿ ಹೊರತು ನನ್ನ ಹೆಸರು ಸಂಪಾದಕನೆಂದು ಎಲ್ಲಿಯೂ ಕಂಡುಬರುವುದಿಲ್ಲ. ನಾನು ಸಂಪಾದಕನೆಂದು ಮ್ಯಾಜಿಸ್ಟ್ರೇಟರ ಮುಂದೆ ಹೇಳಿಕೆ ಕೊಟ್ಟಿದ್ದರೂ, ಸಂಪಾದಕರ ಮತ್ತು ಪ್ರಕಾಶಕರ ಹೆಸರನ್ನು ಹಾಕಿಯೇ ಹಾಕಬೇಕೆಂಬ ನಿರ್ಬಂಧವಿಲ್ಲದ್ದರಿಂದಲೂ ನನ್ನ ಹೆಸರಿಗಿಂತಲೂ ಸಂಘದ ಹೆಸರು ಮುಂದಕ್ಕೆ ಬರಬೇಕೆಂಬುದು ನನ್ನ ಉದ್ದೇಶವಾಗಿದ್ದದ್ದರಿಂದಲೂ, ಲೇಖನದಲ್ಲಿ ತಿರುಳಿದ್ದರೆ ಅದರಿಂದ ಪತ್ರಿಕೆಗೆ ಹೆಸರು ಬರುತ್ತದೆಯೇ ಹೊರತು ಸಂಪಾದಕನ ಹೆಸರು ಅಧಿಕಾರ ಶ್ರೀಮಂತಿಕೆಗಳಿಂದಲ್ಲವೆಂಬ ಒಂದು ದೃಢವಿಶ್ವಾಸವಿದ್ದದ್ದರಿಂದಲೂ ನನ್ನ ಹೆಸರನ್ನು ನಾನು ಪ್ರಕಟಿಸುತ್ತಿರಲಿಲ್ಲ. ಹೆಸರಿಲ್ಲದೆ, ಅಥವಾ ಬೇರೆಬೇರೆ ಹೆಸರಿನಿಂದ, ನಾನು ಪ್ರಬುದ್ಧ ಕರ್ಣಾಟಕಕ್ಕೆ ಎಷ್ಟೋ ಸಣ್ಣ ದೊಡ್ಡ ಲೇಖನಗಳನ್ನು ಬರೆದಿದ್ದೇನೆ; ಆದರೆ ಜವಾಬುದಾರಿ ಹೊರಬೇಕಾದಾಗ ನನ್ನ ಹೆಸರನ್ನು ಹಾಕುವುದಕ್ಕೆ ಎಂದೂ ಹಿಂತೆಗೆದಿಲ್ಲ.

ಪ್ರಬುದ್ಧ ಕರ್ಣಾಟಕವು ಹೊರಟಾಗ ಸುಮಾರು ಒಂದುನೂರು ವಿದ್ಯಾರ್ಥಿಗಳಿಂದ ತಲಾ ಒಂದೊಂದು ರೂಪಾಯಿನಂತೆ ಚಂದಾ ಮುಂಗಡವಾಗಿ ತೆಗೆದುಕೊಂಡು ಪತ್ರಿಕೆಯನ್ನು ಅಚ್ಚಿಗೆ ಕೊಟ್ಟಾಯಿತು; ಆಗ ನನಗೆ ಮೈಸೂರು ಓರಿಯಂಟಲ್ ಲೈಬ್ರರಿಗೆ ವರ್ಗವಾಯಿತು; ಶ್ರೀಮಾನ್ ವೆಂಕಣ್ಣಯ್ಯನವರು ಬೆಂಗಳೂರು ಗೌ|| ಹೈಸ್ಕೂಲಿನಿಂದ ಸೆಂಟ್ರಲ್ ಕಾಲೇಜಿಗೆ ನನ್ನ ಸ್ಥಾನಕ್ಕೆ ವರ್ಗವಾಗಿ ಬಂದರು; ಆಗ ಅವರು, ನಾನೇ ಸಂಪಾದಕನಾಗಿದ್ದುಕೊಂಡು ಮೈಸೂರಿನಿಂದಲೇ ಪತ್ರಿಕೆಯನ್ನು ಅಚ್ಚುಮಾಡಿಸಿ ಕಳುಹಿಸಬೇಕೆಂದೂ ತಾವು ಅದರ ಆಡಳಿತವನ್ನೂ ಸಂಘದ ಕಾರ್ಯಗಳನ್ನೂ ನೋಡಿಕೊಳ್ಳುವರೆಂದೂ ನನಗೆ ಖಂಡಿತವಾಗಿ ಹೇಳಿಬಿಟ್ಟರು. ನನ್ನ ವಿದ್ಯಾರ್ಥಿಗಳಿಂದ ಮುಂಗಡವಾಗಿ ಚಂದಾ ಹಣ ತೆಗೆದುಕೊಂಡು ಒಂದು ಸಂಚಿಕೆಯನ್ನು ಮಾತ್ರ ಕೊಟ್ಟಿದ್ದರಿಂದ ಮಿಕ್ಕ ಎರಡು ಸಂಚಿಕೆಗಳನ್ನು ನಾನು ಎಲ್ಲಿದ್ದರೂ ಪ್ರಕಟಿಸಿ ಕಳುಹಿಸುವೆನೆಂದೂ ಮುಂದಿನ ವರ್ಷದ ವಿಚಾರವನ್ನು ನಿಧಾನವಾಗಿ ಯೋಚಿಸಬಹುದೆಂದೂ ಹೇಳಿ ಮೂರು ತಿಂಗಳಿನ ಪ್ರಬುದ್ಧ ಕರ್ಣಾಟಕವನ್ನು ಮೈಸೂರಿಗೆ ಎತ್ತಿಕೊಂಡು ಬಂದೆ. ಮೊದಲನೆಯ ಸಂಚಿಕೆ, ಆಗತಾನೇ ಸ್ಥಾಪಿತವಾಗಿದ್ದ ಬೆಂಗಳೂರು ಪ್ರೆಸ್ಸಿನಲ್ಲಿ ಅಚ್ಚಾಯಿತು (೧೯೧೯); ಎರಡನೆಯ ಸಂಚಿಕೆಯಿಂದ ೩೫ನೆಯ ಸಂಚಿಕೆಯವರೆಗೆ ಮೈಸೂರಿನಲ್ಲಿ ಕೌರ್ಟ್ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿತ್ತು.

ಮೊದಲು ಕೆಲವು ವರ್ಷ ಪತ್ರಿಕೆ ನಡೆಯಲು ಮೈಸೂರಿನಲ್ಲಿ ನಾನೂ ಬೆಂಗಳೂರಿನಲ್ಲಿ ವೆಂಕಣ್ಣಯ್ಯನವರೂ ತುಂಬ ಶ್ರಮಪಡಬೇಕಾಯಿತು. ಸಂಚಿಕೆಗಳನ್ನು ಮನೆಮನೆಗೆ ತೆಗೆದುಕೊಂಡು ಹೋಗಿ ಕೊಟ್ಟು ವರ್ಷವೆಲ್ಲಾ ಕಾದು ಕೊನೆಗೆ ಚಂದಾ ಕೇಳಿ, ಆಗ ಬಾ ಈಗ ಬಾ ಎನ್ನಿಸಿಕೊಂಡು, ಮಾರವಾರಿ, ನಕ್ಷತ್ರಿಕ ಎನ್ನಿಸಿಕೊಂಡು ದುಡ್ಡು ಸಂಪಾದನೆಮಾಡಿಯಾಯಿತು. ಉತ್ಸಾಹಕ್ಕೆ ತಕ್ಕಷ್ಟು ಅನುಭವವಿರಲಿಲ್ಲ; ಅಭಿಮಾನವೇನೋ ಬೇಕಾದಷ್ಟಿತ್ತು. ಈ ಅಭಿಮಾನದಿಂದಲೇ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ನಮ್ಮ ಜೊತೆಗೂ ದುಡಿದು, ದುಡ್ಡು ತಂದು, ಕೊಟ್ಟು, ಪತ್ರಿಕೆಯನ್ನು ಬದುಕಿಸಿದರು. ಆಗ್ಗೆ ಕನ್ನಡದ ಅಭಿಮಾನ ಇನ್ನೂ ಹೊಸದು; ಬೇರೆ ಪ್ರಬಲ ಭಾಷೆಗಳೊಡನೆ ಅದಕ್ಕೆ ಪೈಪೋಟಿ ಇರಲಿಲ್ಲ. ರಾಜಕೀಯ ಚಳುವಳಿ ಇರಲಿಲ್ಲ. ಜನರೂ ಇದೊಂದು ವಿದ್ಯಾರ್ಥಿಗಳ ಸಾಹಸ ಎಂದು ಮೆಚ್ಚಿಗೆಯಿಂದಲೂ ಸಂತೋಷದಿಂದಲೂ ಪ್ರೋತ್ಸಾಹಿಸುತ್ತಿದ್ದರು. ಹೀಗೆ ಸಂಘವೂ ಪತ್ರಿಕೆಯೂ ದಿನದಿನಕ್ಕೆ ಪ್ರವರ್ಧಮಾನವಾಗುತ್ತ ಬಂದುವು.

ಎಂಟು ವರ್ಷಗಳನಂತರ ವೆಂಕಣ್ಣಯ್ಯನವರು ಕನ್ನಡದ ಪ್ರೊಫೆಸರಾಗಿ ಮೈಸೂರಿಗೆ ವರ್ಗವಾದರು. ೧೯೨೭ರಲ್ಲಿ ಮತ್ತೆ ನಾನು ಸೆಂಟ್ರಲ್ ಕಾಲೇಜಿಗೆ ಹೋದೆ. ಪ್ರಬುದ್ಧ ಕರ್ಣಾಟಕವೂ ಬೆನ್ನು ಹತ್ತಿತು; ಆದರೆ ಈಗ ಅದು ತನ್ನ ಮನೆಗೆ ತಾನು ಬಂದಂತಾಯಿತು. ಸಂಘದ ಆಡಳಿತ, ಪತ್ರಿಕೆಯ ಸಂಪಾದಕತ್ವ, ಎರಡೂ ನನ್ನ ಹೆಗಲಿಗೇ ಬಂದುವು; ಅವನ್ನು ಯಥಾಶಕ್ತಿಯಾಗಿ ನಿರ್ವಹಿಸಿ ಬೆಳೆಸಿದ್ದಾಯಿತು. ಪತ್ರಿಕೆ ಸಕಾಲಕ್ಕೆ ಹೊರಡಬೇಕೆಂದು, ಸ್ವಂತವಾಗಿ ಅಚ್ಚುಕೂಟಗಳಿಗೆ ಅಲೆದು ಅಲೆದು, ಆವಶ್ಯಕವಿದ್ದರೆ ಒಂದೊಂದು ಸಂಚಿಕೆಯನ್ನು ಎರಡು ಅಥವಾ ಮೂರು ಅಚ್ಚುಕೂಟಗಳಲ್ಲಿ ಅಚ್ಚುಮಾಡಿಸಿ, ಮಿಕ್ಕ ಕೆಲಸವನ್ನು ಬದಿಗಿಟ್ಟು, ದೇಹವನ್ನು ತೆಯ್ದಾಯಿತು. ಆದರೆ ಇಷ್ಟು ವರ್ಷವಾದರೂ, ಪತ್ರಿಕೆಯನ್ನು ಎಷ್ಟೆಷ್ಟು ಪುಷ್ಟಿಗೊಳಿಸಿ, ಸುಂದರಗೊಳಿಸಿದರೂ ಅದರ ಚಂದಾದಾರರು ಸುಮಾರು ೭೦೦ ಅಥವಾ ೮೦೦ ಕ್ಕೆ ಹೆಚ್ಚಲಿಲ್ಲ. ಪತ್ರಿಕೆಯನ್ನು ಆದಷ್ಟು ಅಗ್ಗವಾದ ಅಚ್ಚುಕೂಟದಲ್ಲಿ ಅಚ್ಚು ಮಾಡಿಸುತ್ತಿತ್ತು. (ಆದ್ದರಿಂದ ತುಂಬ ದೇಹಶ್ರಮ ಬುದ್ಧಿಶ್ರಮಗಳನ್ನು ವಹಿಸಬೇಕಾಗುತ್ತಿತ್ತು); ಇದರಿಂದಲೂ, ತಿಂಗಳಿಗೆ ನಾಲ್ಕು ರೂಪಾಯಿ ಸಂಬಳದ ಮೇಲೆ ಒಪ್ಪತ್ತು ಕೆಲಸಮಾಡುವ—ಆದರೆ ಅಷ್ಟೇನೂ ಪ್ರಾಮಾಣಿಕನಾಗಲಿ ಉಪಯುಕ್ತನಾಗಲಿ ಅಲ್ಲದ—ಒಬ್ಬ ಆಳು ಹೊರತು ಮತ್ತಾವ ಸಿಬ್ಬಂದಿಯೂ ಇಲ್ಲದೆ ಕೆಲಸಮಾಡುತ್ತಿದ್ದದ್ದರಿಂದಲೂ, ಕೆಲಕೆಲವು ವರ್ಷ ವಿಶ್ವವಿದ್ಯಾನಿಲಯದ ಮತ್ತು ವಿದ್ಯಾ ಇಲಾಖೆಯ ಸಹಾಯ ಒದಗುತ್ತಿದ್ದದ್ದರಿಂದಲೂ, ಚಂದಾದಾರರಲ್ಲಿ 'ಪೋಷಕ'ರೆಂಬ

ಒಂದು ವರ್ಗವಿದ್ದು ಅವರು ಮೂರು ರೂಪಾಯಿ—ಎಂದರೆ ಒಂದುವರೆಯಷ್ಟು—ಚಂದಾವನ್ನು ಕೊಡುತ್ತಿದ್ದದ್ದರಿಂದಲೂ, ವೇತನ ಪಡೆಯುತ್ತಿದ್ದ ವಿದ್ಯಾರ್ಥಿಗಳು ಅಲ್ಪ ಸ್ವಲ್ಪ ಸಹಾಯಮಾಡುತ್ತಿದ್ದದ್ದರಿಂದಲೂ, ಬೆಂಗಳೂರಿನ ವಿಶ್ವವಿದ್ಯಾನಿಲಯ ಸಂಘವು ನಮ್ಮ ವಿನಿಮಯ ಪತ್ರಿಕೆಗಳನ್ನೆಲ್ಲಾ ತೆಗೆದುಕೊಂಡು ಅವಕ್ಕೆ ಒಟ್ಟು ವರ್ಷಕ್ಕೆ ೫೦ ರೂಪಾಯಿ ಕೊಡುತ್ತಿದ್ದದ್ದರಿಂದಲೂ, ಹಾಗೂ ಹೀಗೂ ಪತ್ರಿಕೆಯು ಸಾಲಮಾಡದೆ ಜೀವಿಸಿಕೊಂಡಿತ್ತು. ಪುಟಗಳನ್ನು ಹೆಚ್ಚು ಮಾಡಿದ್ದರಿಂದ ಅಂಚೆ ವೆಚ್ಚ ಹೆಚ್ಚಾಯಿತು. (೧೯೩೦-೩೧ ನೆಯ ವರ್ಷದಲ್ಲಿ ಸಂಘದ ಅಂಚೆಯ ವೆಚ್ಚ ರೂ. ೫೨೩) ಚಂದಾ ಹೆಚ್ಚುಮಾಡಿದರೆ, ಚಂದಾದಾರರು ಇನ್ನೂ ಕಡಮೆಯಾಗುತ್ತಿದ್ದರೇ ಹೊರತು ಉತ್ಪತ್ತಿ ಹೆಚ್ಚಾಗುತ್ತಿರಲಿಲ್ಲ. ಆದಷ್ಟು ಸುಲಭ ಬೆಲೆಯಲ್ಲಿ ಉತ್ತಮವಾದ ವಸ್ತುವನ್ನು ಕೊಟ್ಟು ಜನಕ್ಕೆ ಓದಿನಲ್ಲಿ ಅಭಿರುಚಿಯುಂಟುಮಾಡಬೇಕೆಂಬ ನಮ್ಮ ಉದ್ದೇಶಕ್ಕೂ ಭಂಗಬರುತ್ತಿತ್ತು. ಆದ್ದರಿಂದ, ನಮ್ಮ ಜನದಲ್ಲಿ ಇಂಥ ವಸ್ತುವನ್ನು ಉಪಯೋಗಿಸಿಕೊಳ್ಳುವವರ ಪ್ರಮಾಣವೇ ಇಷ್ಟು; ಅಗ್ಗವಾಗಿ ಕೊಟ್ಟರೂ ಇಷ್ಟೇ, ಬಿಟ್ಟಿಕೊಟ್ಟರೂ ಇಷ್ಟೇ ಎಂದು ಒಂದು ವಿಧವಾದ ಸಮಾಧಾನವನ್ನು ತಂದುಕೊಂಡೆ. ಆದರೂ ಮನಸ್ಸಿಗೆ ನಿರುತ್ಸಾಹವೇನೋ ತುಂಬ ಇತ್ತು. ಇನ್ನೊಂದು ವರ್ಷ ಆದಷ್ಟು ಚೆನ್ನಾಗಿ ನಡಸಿ, ಸಾಕಾದಷ್ಟು ಪ್ರೋತ್ಸಾಹ ದೊರೆಯದ್ದರಿಂದ ಇದನ್ನು ನಿಲ್ಲಿಸಿದ್ದೇನೆಂದು ಪ್ರಕಟಿಸಿ, ಪತ್ರಿಕೆಯನ್ನು ಕೈಬಿಡೋಣವೆಂದುಕೊಂಡಿದ್ದೆ. ಆದರೂ ಅಭಿಮಾನ ಹೋಗಿರಲಿಲ್ಲ; ಪತ್ರಿಕೆಯ ಆಯುಸ್ಸು ಇನ್ನೂ ತುಂಬ ಇತ್ತು! ಆದ್ದರಿಂದ ಒಂದುದಿನ, ಆಗತಾನೆ ಸಂಘದ ಅಧ್ಯಕ್ಷರಾಗಿದ್ದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಲ್ಲಿ ಪತ್ರಿಕೆಯ ಪ್ರಸ್ತಾಪವನ್ನೆತ್ತಿ, ಇದನ್ನು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿ ಸರ್ಕಾರದ ಪತ್ರಿಕೆಯಾಗಿ ಮಾಡಿದರೆ ಅಂಚೆ ವೆಚ್ಚ ಉಳಿಯುವುದು; ಅದನ್ನು ಪತ್ರಿಕೆಯ ಖರ್ಚಿಗೆ ಹಾಕಿಕೊಳ್ಳಬಹುದು ಎಂದು ಸೂಚಿಸಿದೆ. ಅವರು ಇನ್ನು ಮೇಲೆ ಮೈಸೂರು ಬೆಂಗಳೂರುಗಳ ಸಂಘಗಳೆರಡೂ ಇದರ ಜವಾಬ್ದಾರಿ ವಹಿಸಿಕೊಂಡು, ಸಹಕರಿಸಿ, ನಡಸಬೇಕೆಂದು ಸಲಹೆಕೊಟ್ಟು, ನನ್ನನ್ನೂ ಮೈಸೂರಿನ ಸಂಘದ ಮುಖ್ಯಾಧಿಕಾರಿಗಳಾಗಿದ್ದ ವೆಂಕಣ್ಣಯ್ಯನವರನ್ನೂ ಕೂರಿಸಿಕೊಂಡು ಒಂದು ಕಾಗದ ಬರೆಸಿ ಆಗ ಸ್ಥಾನಪತಿಗಳಾಗಿದ್ದ ಡಾ|| ಮೆಟ್ಕಾಫರ ಮುಂದಿಟ್ಟರು. ಸರ್ಕಾರದವರು ಹೊಸ ಕೆಲಸಗಳಲ್ಲಿ ತಟ್ಟನೆ ಕೈಹಾಕುವುದಿಲ್ಲ. ಅವು ಅಷ್ಟೇನೂ ಇಷ್ಟವಲ್ಲದ, ಮತ್ತು ಹೊರೆ ಎಂಬ ಭಾವವುಳ್ಳ, ಜನರಾರಾದರೂ ಹತ್ತಿರವಿದ್ದರಂತೂ ಹೇಳಬೇಕಾಗಿಲ್ಲ. ಹೀಗಾಗಿ ಅವರು ಸಂಘದ ವಿಚಾರವಾಗಿಯೂ ಪತ್ರಿಕೆಯ ವಿಚಾರವಾಗಿಯೂ ನಾನಾ ಪ್ರಶ್ನೆಗಳನ್ನು ಕೇಳಿ, ಅಂಕಿ ಅಂಶಗಳನ್ನು ತರಿಸಿ

ಕೊಂಡು ಕೊನೆಗೆ ಅದನ್ನು ವಿಶ್ವವಿದ್ಯಾನಿಲಯವು ನಡಸುವುದೆಂದು ತೀರ್ಮಾನಿಸಿದರು. (೧೯೩೨). ಹೀಗೆ ಪ್ರಬುದ್ಧ ಕರ್ಣಾಟಕವು ೧೪ ನೆಯ ಸಂಪುಟದಿಂದ ವಿಶ್ವವಿದ್ಯಾನಿಲಯದ ಪೋಷಣೆಯಲ್ಲಿ ಬೆಳೆಯುವಂತಾಯಿತು. ಆದರೆ ಸಂಘಕ್ಕೆ ಅದುವರೆಗೆ ಕೊಡುತ್ತಿದ್ದ ವರ್ಷಾಶನವಾದ ೨೦೦ ರೂಪಾಯಿಯು ನಿಂತುಹೋಯಿತು. "ಅದನ್ನು ಕೊಡುತ್ತಿದ್ದದ್ದು ಪ್ರಬುದ್ಧ ಕರ್ಣಾಟಕವನ್ನು ನಡಸುತ್ತಿದ್ದದ್ದಕ್ಕೆ; ಪ್ರಬುದ್ಧ ಕರ್ಣಾಟಕವನ್ನು ವಿಶ್ವವಿದ್ಯಾಲಯವು ಕೈಗೆ ತೆಗೆದುಕೊಂಡದ್ದರಿಂದ ಅದು ಬೇಕಿಲ್ಲ" ಎಂದು ಅಧಿಕಾರಿಗಳು ತೀರ್ಮಾನಿಸಿದರು! (ದುಡಿಯುತ್ತಿದ್ದ ಮಗನನ್ನು ದತ್ತು ಕೊಟ್ಟಂತಾಯಿತು!) ಇತ್ತಲಾಗಿ ಪ್ರಬುದ್ಧ ಕರ್ಣಾಟಕವೂ ತನ್ನ ಕಾಲುಮೇಲೆ ತಾನು ನಿಂತು ತನ್ನ ಅನ್ನವನ್ನು ತಾನು ಗಳಿಸಿಕೊಂಡು ಜೀವಿಸಬೇಕೆಂದು ಅಪ್ಪಣೆಮಾಡಿದರು. ಸರ್ಕಾರದ ಇಲಾಖೆಗೆ ಸೇರಿದ್ದರಿಂದ ನಾನಾ ನಿಯಮಗಳಿಗೆ ಬದ್ಧರಾಗಿ, ಹತ್ತಾರು ಜನಗಳಿಗೆ ಉತ್ತರವಿತ್ತು, ಸ್ವತಂತ್ರವಾಗಿ ಯಾವ ಪ್ರಯೋಗಗಳನ್ನೂ ಮಾಡಲಾರದೆ, ಕೊಲ್ಲಲಾರದೆ ಕಾಪಾಡಲಾರದೆ, ಕೆಲವು ಕಾಲ ಪತ್ರಿಕೆಯನ್ನು ಒಂದು ನಿರ್ಬಂಧದಲ್ಲಿ ನಡಸಿಕೊಂಡು ಬರಬೇಕಾಯಿತು; ಇದರ ಪೂರ್ಣ ಅನುಭವ ಬಂದದ್ದು ಕೆಲವು ವರ್ಷಗಳ ಮೇಲೆ.

ವಿಶ್ವವಿದ್ಯಾನಿಲಯವು ೧೯೩೨ರಲ್ಲಿ ಪತ್ರಿಕೆಯನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡಾಗ ಅದು ಕನ್ನಡ ಗ್ರಂಥಪ್ರಕಾಶನ ಸಮಿತಿಯ ಮೇಲ್ವಿಚಾರಣೆಯಲ್ಲಿ ನಡೆಯಬೇಕೆಂದೂ, ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಮುಖ್ಯ ಸಂಪಾದಕರು, ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯ ಮತ್ತು ಎ. ಆರ್. ಕೃಷ್ಣಶಾಸ್ತ್ರೀ ಇವರು ಸಂಪಾದಕರು, ಶ್ರೀಮಾನ್ ತೀ. ನಂ. ಶ್ರೀಕಂಠಯ್ಯ, ಕೆ. ವಿ. ಪುಟ್ಟಪ್ಪ, ಪಿ. ಸೀತಾರಾಮಯ್ಯ ಇವರು ಸಂಪಾದಕ ಸಮಿತಿಯ ಇತರ ಸದಸ್ಯರು ಎಂದೂ ನಿಯಮಿಸಿತ್ತು. ಸಂಪಾದಕ ಸಮಿತಿಯಲ್ಲಿ ಎಷ್ಟು ಜನವೇ ಇರಲಿ, ಅದರ ಅಧ್ಯಕ್ಷರು ಯಾರೇ ಆಗಿರಲಿ, ಪತ್ರಿಕೆಯ ಜವಾಬ್ದಾರಿ ಸಂಪಾದಕನದು. ಅದಕ್ಕೆ ಸಂಪಾದಕನು ತನ್ನ ದೇಹವನ್ನು, ಜೀವವನ್ನು, ತೆಯ್ಯಬೇಕು. ಇಲ್ಲದಿದ್ದರೆ ಅದು ಸೊರಗಿ ಹೋಗುವುದು. ಇದು ನನ್ನ ಕಟುವಾದ ಅನುಭವ. ಆದರೆ ಶ್ರೀಮಾನ್ ವೆಂಕಣ್ಣಯ್ಯನವರ ಮಾತು ಬೇರೆ; ವೆಂಕಣ್ಣಯ್ಯನವರೆಂದರೆ ಬೆಲ್ಲದ ಉಂಡೆ! ಅವರಿಗೆ ಗೊದ್ದಗಳೂ ಇರುವೆಗಳೂ ಸದಾ ಮುತ್ತಿಕೊಂಡಿರುತ್ತಿದ್ದುವು; ಅವರೂ ಆ ಪಿಪೀಲಿಕಾ ಪಂಕ್ತಿಗಳಿಂದ ಬೇಕಾದಷ್ಟು ಕೆಲಸ ಮಾಡಿಸುತ್ತಿದ್ದರು; ಅವೂ ಸಂತೋಷವಾಗಿಯೇ ಮಾಡುತ್ತಿದ್ದುವು; ಇದು ಅವರ ಜಾತಕದ ಸ್ವರೂಪ. ಇದನ್ನು ನಾನು ಒಂದು ಸಾರಿ ಅವರು ಶಂಕರಪುರದಲ್ಲಿ ವಾಸಮಾಡುತ್ತಿದ್ದಾಗ ಅವರ ಮನೆಗೆ ಹೋಗಿ

ನೋಡಿದೆ. ಅದು ಪ್ರಬುದ್ಧ ಕರ್ಣಾಟಕದ ಕಚೇರಿಯಾಗಿಬಿಟ್ಟಿತ್ತು; ಅದಕ್ಕೆ ಸ್ವಲ್ಪ ದಿನಗಳ ಹಿಂದೆ ನಾನು ಮೈಸೂರಿಂದ ಒಂದು ಸಂಚಿಕೆಯನ್ನು ಅಚ್ಚುಮಾಡಿಸಿ ಕಳುಹಿಸಿದ್ದೆ; ಅದನ್ನು ಕಾಗದದಲ್ಲಿ ಸುತ್ತುವವರು ಎಷ್ಟುಜನ, ಸ್ಟ್ಯಾಂಪು ಅಂಟಿಸು ವವರು ಎಷ್ಟುಜನ, ಬರೆದುಕೊಳ್ಳುವವರು ಎಷ್ಟುಜನ, ಜೋಡಿಸುವವರು ಎಷ್ಟುಜನ! ಅಷ್ಟುಜನ ಆವಶ್ಯಕವೋ ಅಲ್ಲವೋ, ಅಂತೂ ಆ ಮನೆ ಒಂದು ಇರುವೆಯ ಗೂಡಿ ನಂತಿತ್ತು. ಇಂಥವರ ಕೈಗೆ ಸಂಪಾದಕತ್ವದ ಮುಖ್ಯ ಜವಾಬ್ದಾರಿ ಬಂದಾಗ ಕೆಲಸವು ಸುಸೂತ್ರವಾಗಿ, ಸರಿಯಾಗಿ, ನಡೆಯಬೇಕಾಗಿತ್ತು. ಆದರೆ ಬರವಣಿಗೆಯ ಕೆಲಸ, ಓಡಾಟದ ಕೆಲಸ, ಕೂಡಲೆ ತಡವಿಲ್ಲದೆ ಮಾಡಬೇಕಾದ ಕೆಲಸ ಒದಗಿದರೆ, ಅದರಲ್ಲಿಯೂ ಅಷ್ಟೇನೂ ದೇಹದಾರ್ಢ್ಯವಿಲ್ಲದೆ, ವಾಹನ ಸೌಕರ್ಯಗಳಿಲ್ಲದೆ, ಹಟವಾದಿಯಲ್ಲದೆ, ಪ್ರತಿಯೊಂದಕ್ಕೂ ಪರಾವಲಂಬನವೇ ಅಭ್ಯಾಸವಾಗಿ ಹೋಗಿರತಕ್ಕವರಿಗೆ ಒದಗಿದರೆ, ಕೆಲಸ ಸುಕರವಲ್ಲ. ಆದ್ದರಿಂದ ವೆಂಕಣ್ಣಯ್ಯನವರು ಸ್ವಲ್ಪ ಕಿರುಕುಳ ಪಡುತ್ತಿದ್ದ ದ್ದನ್ನು ನಾನು ನೋಡುತ್ತಿದ್ದೆ, ಕೇಳುತ್ತಿದ್ದೆ. ಆದರೆ, ಅವರ ಸುತ್ತ ಉತ್ಸಾಹಿಗಳೂ ಸಮರ್ಥರೂ ಆದ ತರುಣರು ಸಹಾಯಕ್ಕೆ ಇದ್ದರೆಂಬ ಧೈರ್ಯದಿಂದಲೂ, 'ಸಂಸ್ಕೃತ ನಾಟಕ'ವನ್ನು ಬರೆಯುವ ಕೆಲಸ ವಹಿಸಿಕೊಂಡಿದ್ದದ್ದರಿಂದಲೂ, ಪತ್ರಿಕೆಯ ಕೆಲಸವನ್ನು ಒಂದೇ ಸಮನಾಗಿ ಹದಿಮೂರು ವರ್ಷ ನಡಸಿ ತಲೆ ಚಿಟ್ಟು ಹಿಡಿದು ಹೋಗಿದ್ದದ್ದರಿಂದಲೂ, ಮಾನವ ಸಹಜವಾದ ಸೋಮಾರಿತನದಿಂದಲೂ ಈ ಕಾಲದಲ್ಲಿ ನಾನು ಸಹಸಂಪಾದಕನಾಗಿ ಅವರಿಗೆ ಎಷ್ಟು ಸಹಕಾರ ಕೊಡಬೇಕಾ ಗಿತ್ತೋ ಅಷ್ಟನ್ನು ಕೊಡಲಿಲ್ಲ. ಸಂಚಿಕೆಗಳು ಆಗ ಸಕಾಲಕ್ಕೆ ಬರುತ್ತಿರಲಿಲ್ಲವೆಂಬ ಗೊಣಗಾಟ ಕೇಳಿಬರುತ್ತಿತ್ತು; ಆದರೆ ೧೯ನೆಯ ಸಂಪುಟದಲ್ಲಿ ೨ ಸಂಚಿಕೆಗಳು ವಿನಾ ಮಿಕ್ಕ ಯಾವುವೂ ಜೋಡಿ ಸಂಚಿಕೆಯಾಗಿ, ತಿಂಗಳುಗಟ್ಟಲೆ ತಡವಾಗಿ, ಬರಲಿಲ್ಲ.

ದೇವರು ಆ ಕಾಲದಲ್ಲಿ ನನಗೆ ಸ್ವಲ್ಪ ಬಿಡುವುಕೊಟ್ಟು ಬೇರೆ ಕೆಲಸ ಮಾಡಿಸಿದ; ಆದರೆ ಆ ಬಿಡುವು ಇದ್ದದ್ದು ಕೆಲವು ವರ್ಷ ಮಾತ್ರ: "ಸಂಸ್ಕೃತ ನಾಟಕ" ಬರೆದು ಮುಗಿಯುವವರೆಗೆ; ಈ ಮಧ್ಯೆ ಪರಿಷತ್ಪತ್ರಿಕೆಯ ಸಂಪಾದಕತ್ವ ಒದಗಿತು; ಅದನ್ನು ಉತ್ತಮಗೊಳಿಸಬೇಕೆಂಬ ಆದರ್ಶವಾದಿಗಳ ಮಧ್ಯದಲ್ಲಿ ದುಡಿಯ ಬೇಕಾಯಿತು; ಇಷ್ಟು ಹೊತ್ತಿಗೆ ಶ್ರೀಮಾನ್ ವೆಂಕಣ್ಣಯ್ಯನವರು ಅನಿರೀಕ್ಷಿತರಾಗಿ ೨೪-೨-೧೯೩೯ ರಲ್ಲಿ ಸ್ವರ್ಗಸ್ಥರಾಗಲು ನನ್ನ ಮಗುವನ್ನು ನಾನು ನೋಡಿಕೊಳ್ಳ ಬೇಕಾಯಿತು. ಬಳ್ಳಿಗೆ ಕಾಯಿ ಹೊರೆಯೇ? ಆಗಲಿ—ಎಂದು ಅದನ್ನು ಕೈಕೊಂಡೆ. ಶ್ರೀಮಾನ್ ವೆಂಕಣ್ಣಯ್ಯನವರು ದಿವಂಗತರಾದಾಗ ಅವರಿಗೆ ೫೨ ವರ್ಷ ವಯಸ್ಸು; ಅವರು ತಮ್ಮ ಅಧಿಕಾರಾವಧಿ ಮುಗಿಯುವ ವರೆಗಾದರೂ ಆಯುಸ್ಸು ಹಾಕಿ

ಕೊಂಡು ಬದುಕಿದ್ದಿದ್ದರೆ ನನಗೆ ಇನ್ನಷ್ಟು ದಿನ ಧಾರಾಳವಾಗಿ ಉಸಿರಾಡುತ್ತ ಓಡಾಡಿಕೊಂಡಿರುವುದಕ್ಕೆ ಅವಕಾಶ ಸಿಕ್ಕುತ್ತಿತ್ತು! ಆದರೆ ಭಗವಂತನಿಗೆ ಅದು ಇಷ್ಟವಿರಲಿಲ್ಲ!

ನಾನು ಮೈಸೂರಿಗೆ ಪ್ರೊಫೆಸರಾಗಿ ಮತ್ತು ಪತ್ರಿಕೆಯ ಸಂಪಾದಕನಾಗಿ ವರ್ಗಪಟ್ಟು ಬಂದಕೂಡಲೆ ಆಗ ಸ್ಥಾನಪತಿಗಳಾಗಿದ್ದ ಶ್ರೀಮಾನ್ ಎನ್. ಎಸ್. ಸುಬ್ಬರಾಯರು ನನ್ನನ್ನು ಕರೆದು "ಕೃಷ್ಣಶಾಸ್ತ್ರೀ, ಪ್ರಬುದ್ಧ ಕರ್ಣಾಟಕದ ಸಂಪಾದಕನಾಗಿ ಈಗ ನೀನು ಮೂರು ಕೆಲಸಮಾಡಬೇಕು—೧. ಪತ್ರಿಕೆಯನ್ನು ಕಾಲ ಕಾಲಕ್ಕೆ ತಡವಿಲ್ಲದೆ ಹೊರಡಿಸುವುದು. ೨. ಅದರಲ್ಲಿ ಸಾಹಿತ್ಯ ಮಾತ್ರವಲ್ಲದೆ ಶಾಸ್ತ್ರವಿಚಾರಗಳನ್ನೂ ಪ್ರಕಟಿಸುವುದು. ೩. ಮೈಸೂರಿನಿಂದ ಹೊರಗೆ ಇರುವ ಕರ್ಣಾಟಕರ ಸಹಾಯ ಸಹಾನುಭೂತಿಗಳನ್ನೂ ಹೆಚ್ಚು ಹೆಚ್ಚಾಗಿ ಪಡೆಯುವುದು. ಇವಿಷ್ಟನ್ನೂ ಮನಸ್ಸಿನಲ್ಲಿಟ್ಟುಕೊಂಡು ಪತ್ರಿಕೆಯನ್ನು ಉತ್ತಮಗೊಳಿಸು, ಉತ್ತಮೋತ್ತಮವಾದದ್ದನ್ನಾಗಿ ಮಾಡು; ಅದಕ್ಕೆ ಬೇಕಾದ ದ್ರವ್ಯವನ್ನು ಒದಗಿಸುವುದು ನನ್ನ ಭಾರ!" ಎಂದರು. ಕೈಬಿಡಬೇಕೆಂದಿದ್ದ ಪತ್ರಿಕೆಯನ್ನು ವಿಶ್ವವಿದ್ಯಾನಿಲಯದ ಕೊರಳಿಗೆ ಕಟ್ಟಿ, ಅದು ನರಳುತ್ತಿದ್ದರೂ ನೋಡುತ್ತ ನಿರ್ಮಮತೆಯನ್ನು ಅಭ್ಯಾಸ ಮಾಡುತ್ತಿದ್ದ ನನಗೆ ಈ ಪ್ರಲೋಭನ ಒದಗಿತು. "ಈ ನವೆಯುತ್ತಿರುವ ನಂದಾದೀಪಕ್ಕೆ ಎಣ್ಣೆ ಕೊಡುತ್ತಾರಂತೆ ನೋಡೋಣ; ಬತ್ತಿ ಸರಿಮಾಡಿ ದೀಪ ದೊಡ್ಡದು ಮಾಡೋಣ! ಹೆಚ್ಚು ಬೆಳಕು ಬಂದರೆ ಬರಲಿ; ಮೈ ಮಸಿಯಾದರೆ, ಕೈ ಜಿಡ್ಡಾದರೆ, ಚಿಂತೆಯಿಲ್ಲ" ಎಂದು ಮತ್ತೆ ದೀಪದ ಮುಂದೆ ಕುಳಿತೆ. ಆ ಪೂಜಾಫಲವೇ ೨೧ ರಿಂದ ೨೪ ವರ್ಷ ಪೂರ್ತಿಯ ನಾಲ್ಕು ಸಂಪುಟಗಳು. ಇವುಗಳಲ್ಲಿ ಶ್ರೀಮಾನ್ ಸುಬ್ಬರಾಯರ ಆಜ್ಞೆಯನ್ನು, ಶ್ರಮವಾದರೂ, ಶಕ್ತಿಮೀರಿ ಪರಿಪಾಲಿಸಿದ್ದೇನೆ. ಆ ಶ್ರಮ ಸಾರ್ಥಕವೆಂದು ತಿಳಿದಿದ್ದೇನೆ.

ನಾನು ೧೯೩೯ ರಲ್ಲಿ ಮೈಸೂರಿಗೆ ಬಂದು ಸಂಪಾದಕತ್ವವನ್ನು ವಹಿಸಿಕೊಂಡ ಮೇಲೆ ೧೭ ಸಂಚಿಕೆಗಳನ್ನು ಪ್ರಕಟಿಸಿದೆ. ಇವೆಲ್ಲವೂ ಸಕಾಲಕ್ಕೆ ಬಂದುವೆಂದು ನನಗೆ ಒಂದು ಸಂತೋಷವೂ ಸಮಾಧಾನವೂ ಇವೆ. ಇದಕ್ಕೆ ನಾನು ಪಟ್ಟ ಶ್ರಮವೆಷ್ಟು ಕಾರಣವೋ ಅಷ್ಟೇ ವೆಸ್ಲಿ ಪ್ರೆಸ್‌ನ ಸಹಕಾರ ದಕ್ಷತೆಗಳೂ ಕಾರಣ. ಈ ಸಂದರ್ಭದಲ್ಲಿ ನಾನು ವೆಸ್ಲಿ ಪ್ರೆಸ್ಸಿನ ಅಧಿಕಾರಿಗಳಿಗೂ ಅದರಲ್ಲಿಯೂ ಮಿ|| ಟಾಂಕಿನ್ಸನ್ ಅವರಿಗೂ ನನ್ನ ವಿಶೇಷ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅವರ ಕೆಲಸದಲ್ಲಿ ಏನೂ ಕೊರತೆ ಇಲ್ಲ. ಅವರೊಡನೆ ಕೆಲಸ ಮಾಡುವುದೇ ಒಂದು ಸಂತೋಷ.

೧೯೪೨ರಲ್ಲಿ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಅಧಿಕಾರದಿಂದ ವಿಶ್ರಾಂತರಾದರು. ಆದ್ದರಿಂದ ಕನ್ನಡ ಗ್ರಂಥಪ್ರಕಾಶನ ಸಮಿತಿಯ ಅಧ್ಯಕ್ಷತೆಯು ನನ್ನ ಪಾಲಿಗೆ ಬಂತು. ಇದು ಒಂದೇ ಪೂರ್ತಿಹೊತ್ತು ಕೆಲಸಮಾಡುವ ಒಬ್ಬ ದಕ್ಷನಿಗೆ ತಕ್ಕ ಕೆಲಸ; ಆದರೂ ಶ್ರೀಮಾನ್ ಶ್ರೀಕಂಠಯ್ಯನವರು ಇದನ್ನು ತಮ್ಮ ಹಲವು ಕೆಲಸಗಳ ಜೊತೆಗೆ ನಿರ್ವಹಿಸಿದರು; ಅವರು ಹಾಗೆ ದುಡಿಯದಿದ್ದಿದ್ದರೆ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಗ್ರಂಥಪ್ರಕಾಶನ ಸಮಿತಿಯ ಯೋಜನೆ ಏರ್ಪಟ್ಟು ಇಷ್ಟು ಉತ್ತಮವಾದ ಗ್ರಂಥಗಳು ಪ್ರಕಾಶಕ್ಕೆ ಬರುತ್ತಿರಲಿಲ್ಲ. ಅದು ಹೇಗಾದರೂ ಇರಲಿ; ಶ್ರೀಮಾನ್ ವೆಂಕಣ್ಣಯ್ಯನವರು ಜೀವಂತರಾಗಿದ್ದು, ಶ್ರೀಮಾನ್ ಶ್ರೀಕಂಠಯ್ಯನವರು ಅಧಿಕಾರದಲ್ಲಿದ್ದಾಗ, ವಿಶ್ವವಿದ್ಯಾನಿಲಯ ಮತ್ತು ವಿದ್ಯಾ ಇಲಾಖೆ ಇವುಗಳಿಗೆ ಸಂಬಂಧಪಟ್ಟ ಹಲವು ಕನ್ನಡ ಕೆಲಸಗಳನ್ನು ನಾವು ಮೂರು ಜನವೂ ಹಂಚಿಕೊಂಡು ಮಾಡುತ್ತಿದ್ದೆವು; ಆದರೆ ಈಗ ಅದೆಲ್ಲವೂ ನನ್ನ ಮೇಲೆ ಬಿತ್ತು; ಅದಷ್ಟು ದೊಡ್ಡ ಹೊರೆಯಾದ್ದರಿಂದ ವಿಶ್ವವಿದ್ಯಾನಿಲಯದ ಕೆಲಸವನ್ನು ಮುಖ್ಯವಾಗಿ ಇಟ್ಟುಕೊಂಡು ಮಿಕ್ಕದ್ದನ್ನು ಬಿಡಬೇಕಾಗಿ ಬಂತು; ಅದರಲ್ಲಿಯೂ ಗ್ರಂಥಪ್ರಕಾಶನ ಸಮಿತಿಯ ಅಧ್ಯಕ್ಷತೆ ಬಂದ ಮೇಲೆ, ಅದರ ಜೊತೆಗೆ ಪ್ರಬುದ್ಧ ಕರ್ಣಾಟಕವನ್ನು ನೋಡಿಕೊಳ್ಳುವುದು ಸಾಧ್ಯವಿಲ್ಲವೆಂದೂ ಈ ಕೆಲಸವನ್ನು ಮತ್ತಾರಿಗಾದರೂ ವಹಿಸಿಕೊಡಬೇಕೆಂದೂ ೬-೧೦-೧೯೪೨ರಿಂದ ವಿಶ್ವವಿದ್ಯಾನಿಲಯದ ಅಧಿಕಾರಿಗಳೊಡನೆ ಪತ್ರವ್ಯವಹಾರ ನಡೆಸುತ್ತಿದ್ದೆ; ಅದು ಒಂದು ರೂಪಕ್ಕೆ ಬಂದು ತೀರ್ಮಾನವಾಗುವ ತನಕ ಎರಡು ಕೆಲಸಗಳನ್ನೂ ಮಿಕ್ಕ ಕಾರ್ಯಗಳ ಜೊತೆಗೆ ನಾನೇ ನಡಸುತ್ತಿದ್ದೆ; ಕೊನೆಗೆ (೨೩-೭-೧೯೪೩) ವಿಶ್ವವಿದ್ಯಾನಿಲಯವು ಮಹಾರಾಜರವರ ಕಾಲೇಜಿನಲ್ಲಿ ಕನ್ನಡದ ಅಸಿಸ್ಟೆಂಟ್ ಪ್ರೊಫೆಸರಾಗಿರುವವರು ಪ್ರಬುದ್ಧ ಕರ್ಣಾಟಕದ ಸಂಪಾದಕರಾಗಿರಬೇಕೆಂದು ಅಪ್ಪಣೆಮಾಡಿತು. ಕನ್ನಡ ಅಸಿಸ್ಟೆಂಟ್ ಪ್ರೊಫೆಸರಾಗಿ ಬಡ್ತಿಯಾಗಿ ಆಗತಾನೇ ಬೆಂಗಳೂರಿನಿಂದ ವರ್ಗಪಟ್ಟು ಬಂದಿದ್ದ ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ., ಅವರು ಅದನ್ನು ವಹಿಸಿಕೊಳ್ಳಬೇಕಾಯಿತು; ಅವರ ಸಂಪಾದಕತ್ವದಲ್ಲಿ ೨೫ನೆಯ ಸಂಪುಟವು ಹಿಂದಿನಂತೆಯೇ ನಡೆದು ಬಂತು.

ಇಪ್ಪತ್ತೈದನೆಯ ವರ್ಷದಲ್ಲಿ ಸಂಪಾದಕ ಮಂಡಲಿ ಈ ರೀತಿ ಇತ್ತು— ಶ್ರೀಮಾನರಾದ ೧. ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. (ಅಧ್ಯಕ್ಷರು), ೨. ವಿ. ಸೀತಾರಾಮಯ್ಯ, ಎಂ.ಎ. (ಸಂಪಾದಕರು), ೩. ಡಿ. ಎಲ್. ನರಸಿಂಹಾಚಾರ್, ಎಂ.ಎ., ೪. ಟಿ. ಎನ್. ಶ್ರೀಕಂಠಯ್ಯ, ಎಂ.ಎ., ೫. ಕೆ. ವಿ. ಪುಟ್ಟಪ್ಪ, ಎಂ.ಎ.,

೬. ಎ. ಎನ್. ನರಸಿಂಹಯ್ಯ, ಎಂ.ಎ., ಎಲ್.ಟಿ., ಪಿಎಚ್.ಡಿ., ೭. ಜಿ. ಹನುಮಂತರಾವ್, ಎಂ.ಎ. (ಕಾರ್ಯದರ್ಶಿಗಳು). ನನ್ನ ಸಂಪಾದಕತ್ವದ ಮತ್ತು ಅಧ್ಯಕ್ಷತೆಯ ಅವಧಿಯಲ್ಲಿ ನನಗೆ ನೆರವಾದ ನನ್ನ ಮಿತ್ರರೆಲ್ಲರಿಗೂ ಈ ಮೂಲಕ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಈಗ ಪ್ರಬುದ್ಧ ಕರ್ಣಾಟಕವು ೨೬ನೆಯ ವರ್ಷವನ್ನೂ ದಾಟಿದೆ. ಆದರೆ ಈ ಸಂಪುಟದ ಪ್ರಸ್ತಾಪವನ್ನು ಪ್ರಬುದ್ಧ ಕರ್ಣಾಟಕದ ಚಿನ್ನದ ಸಂಚಿಕೆಗೆ ಬರೆಯುವ ಪುಣ್ಯವಂತರ ಪಾಲಿಗೆ ಬಿಟ್ಟು ನನ್ನ ಈ ಲೇಖನವನ್ನು ಇಲ್ಲಿಗೆ ಮುಗಿಸುತ್ತೇನೆ.

ಎ. ಆರ್. ಕೃಷ್ಣಶಾಸ್ತ್ರೀ.

ಅನುಬಂಧ

ಪ್ರಬುದ್ಧ ಕರ್ಣಾಟಕದಲ್ಲಿ ಬಂದ ಲೇಖನಗಳಿಂದ ಆದ ಪುಸ್ತಕಗಳು

(ಕಾಲಾನುಕ್ರಮದಲ್ಲಿ)

೧. ಸಂಯುಕ್ತಾಪಹರಣ (ಅಸಮಗ್ರ)—ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ.

೨. ಕನ್ನಡ ಸಾಹಿತ್ಯ ಮತ್ತು ಜನಜೀವನ—ಡಿ. ವಿ. ಗುಂಡಪ್ಪ

೩. ಕರ್ಣಾಟಕ ಶಬ್ದಾನುಶಾಸನ ತತ್ತ್ವಾಲೋಕತರಂಗ (ಅಸಮಗ್ರ)— ಕೆ. ವರದಾಚಾರ್

೪. ಪ್ರತಿಮಾನಾಟಕಂ—ಮೈಸೂರು ಸೀತಾರಾಮಶಾಸ್ತ್ರೀ

೫. ಪ್ರಾಚೀನ ಸಾಹಿತ್ಯ—ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೬. ಭಾಷೆಯ ಸ್ವರೂಪ ಮತ್ತು ಸ್ವಭಾವ—ಡಿ. ವಿ. ಗುಂಡಪ್ಪ

೭. ಮೈಸೂರು ದೇಶದ ವಾಸ್ತುಶಿಲ್ಪ—ಬಿ. ವೆಂಕೋಬರಾವ್, ಬಿ.ಎ.

೮. ಅಲಂಕಾರಶಾಸ್ತ್ರದ ಚರಿತ್ರೆ (ಅಸಮಗ್ರ)—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೯. ಕರ್ಣಾಟಕ ಸ್ವಪ್ನವಾಸವದತ್ತ ನಾಟಕಂ—ಎಂ. ಡಿ. ಅಳಸಿಂಗರಾಚಾರ್

೧೦. ಕೆಲವು ಕನ್ನಡ ಕವಿಗಳ ಜೀವನ ಕಾಲವಿಚಾರ—ಎ. ವೆಂಕಟಸುಬ್ಬಯ್ಯ, ಎಂ.ಎ., ಪಿಎಚ್.ಡಿ., ಎಲ್‌ಎಲ್.ಬಿ.

೧೧. ಮುದ್ದಣ—ಹಲವು ಲೇಖಕರಿಂದ

೧೨. ತಲಕಾಡು—ಬಿ. ವೆಂಕೋಬರಾವ್, ಬಿ.ಎ.

೧೩. ವಿಗಡ ವಿಕ್ರಮರಾಯ—ಸಂಸ

೧೪. ವಿದ್ಯಾರಣ್ಯರ ಸಮಕಾಲೀನರು—ಡಿ. ವಿ. ಗುಂಡಪ್ಪ

೧೫. ಗದಾಯುದ್ಧ ನಾಟಕಂ—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.
೧೬. ಉಷಾ—ಮಾಸ್ತಿ ವೆಂಕಟೇಶಯ್ಯಂಗಾರ್, ಎಂ.ಎ.
೧೭. ಭಕ್ತಿಭಾಂಡಾರಿ ಬಸವೇಶ್ವರರು—ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.
೧೮. ಪಂಪಾಯಾತ್ರೆ—ವಿ. ಸೀತಾರಾಮಯ್ಯ, ಎಂ.ಎ.
೧೯. ಸುಬ್ಬಣ್ಣ—ಮಾಸ್ತಿ ವೆಂಕಟೇಶಯ್ಯಂಗಾರ್, ಎಂ.ಎ.
೨೦. ಯಮನ ಸೋಲು—ಕೆ. ವಿ. ಪುಟ್ಟಪ್ಪ, ಎಂ.ಎ.
೨೧. ಉಮರನ ಒಸಗೆ—ಡಿ. ವಿ. ಗುಂಡಪ್ಪ
೨೨. ಅಶ್ವತ್ಥಾಮನ್—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.
೨೩. ನಾಗರಿಕ—ಎಂ. ಆರ್. ಶ್ರೀನಿವಾಸಮೂರ್ತಿ. ಬಿ.ಎ.
೨೪. ಭಾಸಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೨೫. ತಪಸ್ವಿನೀ—"ಭಾರತಿ"
೨೬. ಸೋಕ್ರಟೀಸನ ಮರಣ—ಎಸ್. ಜಿ. ಶಾಸ್ತ್ರಿ, ಎಂ.ಎಸ್‌ಸಿ.
೨೭. ಬೆಂಗಳೂರಿನ ತಮಾಷೆ ಬಂಗಲೆ (ಅಸಮಗ್ರ)—ಕೆ. ಅನಂತಸ್ವಾಮಿರಾವ್
೨೮. ಕರ್ಣಾಟಕ ಜನತೆಯ ಸಂಸ್ಕೃತಿ—ಮಾಸ್ತಿ ವೆಂಕಟೇಶಯ್ಯಂಗಾರ್, ಎಂ.ಎ.
೨೯. ಷೇಕ್ಸ್‌ಪಿಯರ್ ನಾಟಕಕಥೆಗಳು (ನಾಲ್ಕು)—ಲಕ್ಷ್ಮೀನರಸಿಂಹ ಶಾಸ್ತ್ರಿಗಳು
೩೦. ಚೀನಾದೇಶದ ಬೌದ್ಧ ಯಾತ್ರಿಕರು—ಜಿ. ಪಿ. ರಾಜರತ್ನಂ, ಎಂ.ಎ.
೩೧. ಮಲೆನಾಡಿನ ಚಿತ್ರಗಳು—ಕೆ. ವಿ. ಪುಟ್ಟಪ್ಪ, ಎಂ.ಎ.
೩೨. ಹಗಲುಗನಸುಗಳು—ಎ. ಎನ್. ಮೂರ್ತಿರಾವ್, ಎಂ.ಎ.
೩೩. ಸೊಹ್ರಾಬ್ ಮತ್ತು ರುಸ್ತುಂ—ಎಲ್. ಗುಂಡಪ್ಪ, ಎಂ.ಎ.
೩೪. ವಿಜ್ಞಾನ—ಜಿ. ಹನುಮಂತರಾವ್, ಎಂ.ಎ.
೩೫. ಪಾರಸಿಕರು—ಬಿ. ಎಂ. ಶ್ರೀಕಂಠಯ್ಯ, ಎಂ.ಎ , ಬಿ.ಎಲ್.
೩೬. ಸಾಹಿತ್ಯ—ಎ. ಎನ್. ನರಸಿಂಹಯ್ಯ, ಎಂ.ಎ., ಎಲ್.ಟಿ., ಪಿಎಚ್.ಡಿ.
೩೭. ಪ್ರತಿಜ್ಞಾ ಯೌಗಂಧರಾಯಣ—ಎಲ್. ಗುಂಡಪ್ಪ, ಎಂ.ಎ.
೩೮. ಅಂತಿಗೊನೆ—ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.
೩೯. ಪುರುಷ ಸರಸ್ವತಿ—ಜಿ. ಪಿ. ರಾಜರತ್ನಂ, ಎಂ.ಎ.
೪೦. ಚಾರುದತ್ತ—ಎಲ್. ಗುಂಡಪ್ಪ, ಎಂ.ಎ.
೪೧. ಅಹಲ್ಯೆ—ಪಿ. ಟಿ. ನರಸಿಂಹಾಚಾರ್, ಬಿ.ಎ.
೪೨. ಉದಯನ ಚರಿತ್ರಸಂಗ್ರಹ—ಎಲ್. ಗುಂಡಪ್ಪ, ಎಂ.ಎ.
೪೩. ಗಗ್ಗಯ್ಯನ ಗಡಿಬಿಡಿ ಮತ್ತು ಇತರ ಪ್ರಹಸನಗಳು—ನಾ. ಕಸ್ತೂರಿ, ಎಂ.ಎ., ಬಿ.ಎಲ್.

೪೪. ಭರ್ತೃಹರಿಯ ವೈರಾಗ್ಯಶತಕದ ಪದ್ಯಾನುವಾದ—ಎ. ಕೆ. ಪುಟ್ಟರಾಮು, ಬಿ.ಎ.

೪೫. ಮೈಸೂರು ಮಲ್ಲಿಗೆ—ಕೆ. ಎಸ್. ನರಸಿಂಹಸ್ವಾಮಿ

೪೬. ನಂಬಿಯಣ್ಣನ ರಗಳೆ—ತೀ. ನಂ. ಶ್ರೀಕಂಠಯ್ಯ, ಎಂ.ಎ.

೪೭. ನಾಗಚಂದ್ರನ ಕಾಮನ ಕಾಳಗ—ಕೆ. ಭುಜಬಲಿಶಾಸ್ತ್ರೀ

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವು ಸ್ವತಂತ್ರವಾಗಿ ಪ್ರಕಟಿಸಿ ಪ್ರಬುದ್ಧಕರ್ಣಾಟಕದ ಚಂದಾದಾರರಿಗೆ ಉಚಿತವಾಗಿ ಹಂಚಿದ ಪುಸ್ತಕಗಳು

೧. ವಸಂತಕುಸುಮಾಂಜಲಿ—ಶ್ರೀಮಾನ್ ಡಿ. ವಿ. ಗುಂಡಪ್ಪ

೨. ನಿವೇದನ—ಶ್ರೀಮಾನ್ ಡಿ. ವಿ. ಗುಂಡಪ್ಪ

೩. ಇಂಗ್ಲಿಷ್ ಗೀತೆಗಳು—ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೪. ತಾವರೆ—ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್, ಎಂ.ಎ.



ಪ್ರೊ. ಟಿ. ಎಸ್. ವೆಂಕಣ್ಣಯ್ಯನವರು

೨. ನಮ್ಮ ಹೊಸ ಸಾಹಿತ್ಯದ ಅಶ್ವಿನೀದೇವತೆಗಳು

೧

ಕನ್ನಡದ ಹೊಸ ಸಾಹಿತ್ಯ ಕುಡಿ ಒಡೆಯಲು ಮೊದಲಾದದ್ದು ಈ ಶತಮಾನದ ಮೊದಲ ಹತ್ತು ವರ್ಷದಲ್ಲಿ ಎಂದು ಹೇಳಬಹುದು. ಕನ್ನಡದಲ್ಲಿ ಅದುವರೆಗೆ ಬಂದ ಬರವಣಿಗೆ ಪ್ರಾಯಶಃ ನೂರಕ್ಕೆ ನೂರು ಪಾಲು ಪರಭಾಷೆಗಳಿಂದ ಭಾಷಾಂತರಿಸಿದ್ದು. ಬರಿಯ ಭಾಷಾಂತರವೇ ಏಕೆ, ಸ್ವತಂತ್ರ ಕೃತಿ ಏಕಾಗಬಾರದು, ಎಂದು ಕನ್ನಡದ ಲೇಖಕರು ಈಗ ಸುಮಾರು ನಲವತ್ತು ವರ್ಷದ ಹಿಂದೆ ಧೈರ್ಯಮಾಡಿದರು. ಶಾಲೆಯಲ್ಲಿ ಕಾಲೇಜಿನಲ್ಲಿ ಓದುತ್ತಿದ್ದ ತರುಣರ ಮನಸ್ಸಿನಲ್ಲಿ ಈ ಧೈರ್ಯ ಹಿಂಡುಗಟ್ಟಿ ಶತಮಾನದ ಎರಡನೆಯ ದಶಕದ ವೇಳೆಗೆ ಇಲ್ಲೊಂದು ಅಲ್ಲೊಂದು ಸ್ವತಂತ್ರ ಕೃತಿ ತಲೆದೋರಿತು. ಹೊಸಕಾಲದ ಪ್ರಭಾವಕ್ಕೆ ಕೊನರುವ ಮನೋಧರ್ಮ ಇದ್ದ ಕೆಲವರು ಹಿರಿಯರೂ ಇಂತಹ ಕೆಲಸವನ್ನು ಮಾಡಿದ್ದುಂಟು. ಬರೆಯುವವರು ಕೊಂಚ ಜನವೇ ಆದರೂ ಇಂತಹ ಬರವಣಿಗೆ ಬೇಕು ಎನ್ನುವವರ ಸಂಖ್ಯೆ ಸಾಕಾದಷ್ಟು ದೊಡ್ಡದಾಗಿತ್ತು. **ಕೃಷ್ಣಸೂಕ್ತಿ, ಮಧುರವಾಣಿ, ಸಚಿತ್ರಭಾರತ**ದಂತಹ ಪತ್ರಿಕೆಗಳು ಸ್ವತಂತ್ರವಾದ ಹೊಸ ಬರವಣಿಗೆಯನ್ನೇ ಸ್ವಾಗತಿಸಿ ನಿಂತವು. ಕನ್ನಡ ಲೋಕ ಹೊಸ ಸಾಹಿತ್ಯದ ಬರವನ್ನು ಇದಿರುಗೊಂಡು, ಸಿದ್ಧವಾಯಿತು.

ಹೊಸ ಒಂದು ಧರ್ಮದಲ್ಲಿ ಹೇಗೋ ಹಾಗೆ ಹೊಸ ಒಂದು ಸಾಹಿತ್ಯದಲ್ಲಿ ಪ್ರವರ್ತಕರು ಕೆಲವರು, ಪ್ರಚೋದಕರು ಕೆಲವರು, ವಿರೋಧಿಗಳು ಕೆಲವರು, ಪ್ರಚಾರಕರು ಕೆಲವರು. ಆಂಗ್ಲಸಾಹಿತ್ಯದ ಒಂದು ಹೊಸ ಯುಗದಲ್ಲಿ ವರ್ಡ್ಸ್‌ವರ್ತ್ ಕವಿ ತನ್ನ ಜೊತೆಯ ಕೋಲರಿಡ್ಜ್ ಕವಿಯೊಂದಿಗೆ ಹೊಸ ಒಂದು ಸಾಹಿತ್ಯವನ್ನು ನಿರ್ಮಿಸಿದಂತೆ ಹೊಸ ಒಂದು ರುಚಿಯನ್ನೂ ನಿರ್ಮಿಸಬೇಕಾಯಿತು. ಬಾಳು ಸುಖವಾಗಿರಲು ಯೋಗ ಕ್ಷೇಮ ಎರಡೂ ಬೇಕು. ಹೊಸತಾಗಿ ಬರುವುದು ಯೋಗ; ಇರುವ ಒಳ್ಳಿತು ಕಳೆಯದೆ ಇರುವುದು ಕ್ಷೇಮ. ಹೊಸ ಸಾಹಿತ್ಯವನ್ನು ಮಾಡುವವರ ದೃಷ್ಟಿ ಯೋಗದ ಕಡೆಗಿರುತ್ತದೆ. ಹಳೆಯದರ ರುಚಿಗೆ ಒಗ್ಗಿರುವ ನಾಲಿಗೆ ಹೊಸದನ್ನು ಕುರಿತು ಸ್ವಲ್ಪ ಶಂಕೆ ತೋರುವುದು ಸಹಜ. ಆ ನಾಲಗೆಯನ್ನು ಒಲಿಸಿ ರಮಿಸಿ ಈ ಯೋಗದಿಂದ ನಿನ್ನ ಕ್ಷೇಮಕ್ಕೆ ಭಯವಿಲ್ಲ ಎಂದು ನಂಬಿಕೆ ಹುಟ್ಟಿಸಿ ಹೊಸದೂ ಉಪಾದೇಯ ಎಂದು ಸಿದ್ಧಾಂತ ಮಾಡುವುದು ಆಗ್ಯೆ ತುಂಬ ಆವಶ್ಯಕ;

ಎಷ್ಟು ಆವಶ್ಯಕವೋ ಅಷ್ಟೇ ಕಷ್ಟ. ಬೇರೆ ಸಾಹಿತ್ಯದ ಉತ್ತಮ ಕೃತಿಗಳನ್ನು ನೋಡಿದವರಿಗೆ ಕೂಡ ಅಂತಹ ಸಾಹಿತ್ಯವನ್ನು ನಿರ್ಮಿಸುವವರು ನಮ್ಮಲ್ಲಿ ಹುಟ್ಟ ಲಾರರು ಎಂದೇ ಸಂಶಿಕೆ. ಒಂದು ಕೃತಿಯನ್ನು ಒಬ್ಬನು ಬರೆದರೆ ಅದು ಭಾಷಾಂತರ ವಲ್ಲದಿದ್ದರೂ ಯಾವುದೋ ಕೃತಿಯ ಅನುಕರಣ ಆಗಿರಬೇಕು ಎಂದು ರೂಢಮೂಲ ವಾದ ಒಂದು ಭಾವನೆ. ಇಷ್ಟೇ ಅಲ್ಲ. ಯಾವುದರ ಭಾಷಾಂತರವೂ ಅಲ್ಲ, ಯಾವು ದನ್ನು ಅನುಕರಿಸಿದ್ದೂ ಅಲ್ಲ, ಎಂದಾದರೆ ಇನ್ನು ಇದು ಒಳ್ಳೆಯದು ಎಂದು ಹೇಳು ವುದು ಹೇಗೆ ಎಂದು ಗಾಢವಾದ ಸಂದೇಹ. ಇಂತಹ ಸಂದರ್ಭದಲ್ಲಿ ಹೊಸ ಸಾಹಿ ತ್ಯದ ನೆಲೆಯೇನು, ಗುರಿಯೇನು ಅದರ ಸೂತ್ರವೇನು, ಗಮನವೇನು ಎಂಬ ವಿಷಯ ವನ್ನೇ ಹೇಳುತ್ತಿರಬೇಕಾಗುತ್ತದೆ. ಸಾವಿರದ ಒಂಬೈನೂರ ಇಪ್ಪತ್ತರ ವೇಳೆಗೆ ಕನ್ನಡದಲ್ಲಿ ಈ ಕೆಲಸ ತೀರಾ ಆವಶ್ಯಕವಾಗಿ ಬಿಟ್ಟಿತ್ತು.

ಆ ಸಮಯದಲ್ಲಿ ಮೈಸೂರು ಪ್ರಾಂತದಲ್ಲಿ ಈ ಕೆಲಸವನ್ನು ಇಬ್ಬರು ಮಹ ನೀಯರು ಕೈಗೊಂಡರು. ಇದಕ್ಕಾಗಿ ಒಂದು ತ್ರೈಮಾಸಿಕವನ್ನು ಆರಂಭಿಸಿದರು. ಆ ಮಹನೀಯರು ಶ್ರೀ ತಳಕಿನ ವೆಂಕಣ್ಣಯ್ಯನವರು, ಶ್ರೀ ಅಂಬಳೆ ಕೃಷ್ಣಶಾಸ್ತ್ರಿ ಗಳು, ಆ ತ್ರೈಮಾಸಿಕ **'ಪ್ರಬುದ್ಧ ಕರ್ಣಾಟಕ'.**

೨

ಹೊಸ ಸಾಹಿತ್ಯದ ಮುಂಬರಿವಿಗೆ 'ಪ್ರಬುದ್ಧ ಕರ್ಣಾಟಕ' ಯಾವ ಯಾವ ವಿವರದಲ್ಲಿ ಯಾವ ಯಾವ ರೀತಿಯಲ್ಲಿ ನೆರವಾಯಿತು ಎನ್ನುವುದನ್ನು ಸೂಕ್ಷ್ಮವಾಗಿ ಸೂಚಿಸಬಹುದು. ಮೊದಲಾಗಿ ಪತ್ರಿಕೆ ಹೊಸಗನ್ನಡದ ಗದ್ಯ ಹೊಸಕಾಲದ ವಿಷಯ ಗಳನ್ನು ನಿರೂಪಿಸುವುದರಲ್ಲಿ ಯಾವ ಆಕಾರದಲ್ಲಿರಬೇಕು ಎನ್ನುವುದು ನಿರ್ಧರವಾಗು ವುದಕ್ಕೆ ನೆರವಾಯಿತು. ಪ್ರಾಂತಗಳ ಕನ್ನಡಗಳನ್ನು ಹತ್ತಹತ್ತಿರ ತಂದು ಒಂದು ಕನ್ನಡ ಮಾಡಬೇಕೆಂಬ ಬಯಕೆ ಅತ್ತ ಪಂಜೆ ಮಂಗೇಶರಾವ್, ಬೆನಗಲ್ ರಾಮ ರಾವ್, ಶ್ರೀ ಕಡೆಕಾರ್ ರಾಜಗೋಪಾಲಕೃಷ್ಣರಾಯರಲ್ಲಿ; ಇತ್ತ ರೊದ್ದ ಶ್ರೀನಿ ವಾಸರಾವ್, ಆಲೂರ್ ವೆಂಕಟರಾವ್, ಮುದವೀಡು ಕೃಷ್ಣರಾವ್ ಇವರಲ್ಲಿ ಆ ಮೊದಲು ಮೂಡಿತ್ತು. ಅದರ ಫಲವಾಗಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿ ಷತ್ತು ಸ್ಥಾಪಿತವಾಗಿತ್ತು. ಕನ್ನಡದ ಪ್ರಾಂತೀಯ ಪತ್ರಿಕೆಗಳಲ್ಲಿ ತಕ್ಕಷ್ಟು ಒಳ್ಳೆಯ ಕನ್ನಡ ರೂಪುಗೊಳ್ಳುತ್ತಿತ್ತು. ಆ ಎಲ್ಲ ಪ್ರಯತ್ನ ಸ್ಫುಟವಾಗಿ ಆಕಾರ ಪಡೆಯಿ ತೆಂಬಂತೆ ಪ್ರಬುದ್ಧ ಕರ್ಣಾಟಕ ಕನ್ನಡ ಶೈಲಿಯ ಒಂದು ಮಟ್ಟವನ್ನು ವಾಡಿಕೆಗೆ ತಂದಿತು. ಹಾಗೆಯೇ ಈ ಪತ್ರಿಕೆ ಕನ್ನಡದ ಹೊಸ ಲೇಖಕನು ಯಾವ ಯಾವ

ತೆರದ ಕೆಲಸವನ್ನು ಮಾಡಬಹುದು ಎಂಬುದನ್ನು ಉದಾಹರಿಸುವಂತೆ ಹಲವು ತರದ ವಿಷಯಗಳನ್ನು ಒಳಗೊಂಡಿತು. ಪ್ರೌಢ ವಿದ್ಯೆಯನ್ನು ಪಡೆದ ಕನ್ನಡ ತರುಣರು ಕನ್ನಡದ ಜನಕ್ಕಾಗಿ ಸ್ವತಂತ್ರ ಲೇಖನಗಳನ್ನು ಬರೆಯಬೇಕು ಎಂಬ ಒಂದು ಸಂಪ್ರದಾಯವನ್ನು ನಿರ್ಮಿಸಿತು. ಬೆಂಗಳೂರಿನ ಕಾಲೇಜಿನ ತರುಣರು ತಾಯ್ನುಡಿಯ ಸೇವೆಯಲ್ಲಿ ಸಹಕರಿಸುವಂತೆ ಅಭ್ಯಾಸಕೊಟ್ಟು ಅವರು ಹೋದ ಕಡೆಗೆ ಕನ್ನಡ ಸೇವಾದೀಕ್ಷೆ ಅವರನ್ನು ಹಿಂಬಾಲಿಸುವಂತೆ ಮಾಡಿತು. ಮುಖ್ಯವಾಗಿ ವಿದ್ಯಾರ್ಥಿಗಳ ಲೇಖನಕ್ಕೆ ಆಶ್ರಯಕೊಡಬೇಕೆಂದು ಹೊರಟ ಪತ್ರಿಕೆ ಬಹು ಶೀಘ್ರದಲ್ಲಿ ಈ ಗುರಿಯನ್ನು ದಾಟಿ ಕನ್ನಡದಲ್ಲಿ ಬರೆಯುವ ಮನಸ್ಸುಳ್ಳ ಹಿರಿಯರನ್ನೂ ತನ್ನ ಸಹಾಯಕ್ಕೆ ಕರೆದುಕೊಂಡಿತು. ತನಗೆ ಒಳಿತೆಂದು ಕಂಡ ಸಾಹಿತ್ಯವನ್ನು ಪ್ರಕಟಿಸಿ ಅದೂ ಅದರಂಥ ಸಾಹಿತ್ಯವೂ ಒಳಿತೆಂದು ದನಿಯೆತ್ತಿ ಸಾರಿತು. ಬರೆದವರಿಗೆ ತೃಪ್ತಿಯನ್ನು, ಧೈರ್ಯವನ್ನು ನೀಡಿತು. ಮಿಗಿಲಾಗಿ ಕನ್ನಡದ ಹೊಸ ವಿಮರ್ಶನದ ಪದ್ಧತಿಯನ್ನು ಸ್ಥಾಪನೆಮಾಡಿತು.

ಈ ಕಡೆಯ ಮಾತು ಬಹು ಮುಖ್ಯ. ಅದುದರಿಂದ ಇದನ್ನು ಸ್ವಲ್ಪ ವಿವರಿಸುವುದು ಆವಶ್ಯಕ. ವಿಮರ್ಶೆಯೆಂದರೆ ಗ್ರಂಥದಲ್ಲಿರುವ ತಪ್ಪುಗಳನ್ನು ತೋರಿಸುವುದು ಎಂದು ಒಂದು ಕಾಲದ ಕಲ್ಪನೆ. ಗ್ರಂಥದಲ್ಲಿ ತಪ್ಪಿಲ್ಲದಿದ್ದರೆ ಅದನ್ನು ವಿಮರ್ಶಿಸುವುದು ಸಾಧ್ಯವೇ ಇಲ್ಲ ಎನ್ನುವಷ್ಟು ದೂರ ಈ ಕಲ್ಪನೆ ಬೆಳೆದಿತ್ತೆನ್ನಬಹುದು. ಒಂದು ಕೃತಿಯ ಗುಣವನ್ನು ಪ್ರಕಟಿಸುವುದೂ ಅದರ ಭಾವಗಳನ್ನು ವಿಶದಪಡಿಸುವುದೂ ಅವನ್ನು ಕುರಿತು ವಿಮರ್ಶಕನ ಅಭಿಪ್ರಾಯವನ್ನು ತಿಳಿಸುವುದೂ ಈ ಎಲ್ಲ ಕೆಲಸದಿಂದ ಜನರ ಮನಸ್ಸನ್ನು ರುಚಿಯನ್ನು ತಿದ್ದುವುದೂ ವಿಮರ್ಶೆಯ ಕಾರ್ಯಗಳೇ. ಇದು ಹೊಸ ಮಾತಲ್ಲ. ಮಲ್ಲಿನಾಥನ ವ್ಯಾಖ್ಯಾನವನ್ನು ನೋಡಿದರೆ ಹಿಂದಿನ ಜನಕ್ಕೆ ಇದು ತಿಳಿದಿತ್ತೆನ್ನುವುದು ಸ್ಪಷ್ಟವಾಗುತ್ತದೆ. ಆದರೆ ಉದ್ಗ್ರಂಥದ ಗುಣವನ್ನು ಟೀಕೆ ಟಿಪ್ಪಣಿಯಲ್ಲಿ ಮುಗಿಸುತ್ತಿದ್ದ ಆ ಪದ್ಧತಿ ಉತ್ತಮವಲ್ಲದ ಕೃತಿಗಳಲ್ಲಿ ತಪ್ಪಷ್ಟನ್ನು ತೋರಿಸುವುದರಲ್ಲಿ ಪರ್ಯವಸಾನವಾಯಿತು. ಒಪ್ಪಿದ ಗ್ರಂಥವನ್ನು ಕುರಿತು ಒಂದು ಪ್ರಶಂಸೆ ಒಪ್ಪದ ಗ್ರಂಥದ ಕುಂದನ್ನು ವಿವರಿಸುವುದರಲ್ಲಿ ಸಕಾರಣವಾದ ತಕ್ಕಷ್ಟು ವಿಸ್ತಾರವಾದ ಪರಿಶೀಲನ ಇದು ನಮ್ಮಲ್ಲಿ ವಾಡಿಕೆಯಿರಲಿಲ್ಲ. ಹೊಸ ಸಾಹಿತ್ಯವನ್ನು ಕಲಿತಂತೆ ಹೊಸ ವಿಮರ್ಶೆಯನ್ನೂ ನಾವು ಇಂಗ್ಲಿಷಿನಿಂದ ಕಲಿಯಬೇಕಾದದ್ದಿತ್ತು. ಅದು ಪ್ರಬುದ್ಧ ಕರ್ನಾಟಕದ ಮೂಲಕ ನಡೆಯಿತು.

ಹೊಸ ವಿಮರ್ಶೆ ಎಷ್ಟು ಮುಖವಾಗಿ ಕೆಲಸಮಾಡಬೇಕಾಗಿದೆ ಎನ್ನುವುದನ್ನು ತೋರಿಸಿಕೊಟ್ಟ ಈ ನಮ್ಮ ಮಿತ್ರರ ಒಂದು ಕೆಲಸ ಮುದ್ದಣನನ್ನು ಕುರಿತ ಪ್ರಶಸ್ತಿ ಗ್ರಂಥ. ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ ಕವಿಯ ಜಯಂತಿಯನ್ನು ನಡೆಸಿ

ಸಾಹಿತ್ಯಲೋಕದಲ್ಲಿ ಅವನಿಗೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನವನ್ನು ಗಳಿಸಿ ಕೊಟ್ಟಿತು. ಪ್ರಶಸ್ತಿ ಗ್ರಂಥದ ಲೇಖನಗಳು ಕವಿಯ ವಿಷಯವನ್ನು ತಿಳಿಸಿದಲ್ಲದೆ ಇಂತಹ ಒಂದು ಲೇಖನ ಮಾಲೆಗೆ ಸಾಕಾದಷ್ಟು ಲೇಖನಗಳನ್ನು ಕೊಡಬಲ್ಲ ಲೇಖಕ ಮಂದಿ ಕನ್ನಡದಲ್ಲಿ ಇದಾರೆ ಎನ್ನುವುದನ್ನೂ ತೋರಿಸಿತು. ಅವರ ಹೆಸರುಗಳನ್ನು ಒಂದು ಕಡೆ ಕೂಡಿಸಿ ಕನ್ನಡದ ಹಾರ್ದಿಕ ಏಕೀಕರಣಕ್ಕೆ ದಾರಿ ತೋರಿಸಿತು.

ಪ್ರಬುದ್ಧ ಕರ್ನಾಟಕ ಇದನ್ನು ಮಾಡಿತು, ಅದನ್ನು ಮಾಡಿತು ಎಂದು ಇದು ವರೆಗೆ ಹೇಳಿದೇನೆ. ಪತ್ರಿಕೆ ಒಂದು ಮಾಡಿತು ಎಂದರೆ ಅದರ ಕರ್ತರು ಮಾಡಿದರು ಎನ್ನುವುದು ಸ್ಪಷ್ಟವಾಗಿಯೇ ಇದೆ. ಪ್ರಬುದ್ಧ ಕರ್ನಾಟಕದ ವಿಷಯದಲ್ಲಿ ಈ ಉಕ್ತಿ ಯನ್ನು ಉಪಯೋಗಿಸುವುದಕ್ಕೆ ಒಂದು ವಿಶೇಷ ಕಾರಣವುಂಟು. ಇದರ ಕರ್ತರು ಒಬ್ಬರಲ್ಲ. ಇಬ್ಬರು ಅಥವಾ ಹತ್ತು ಜನ ಕಲೆತು ಒಂದೊಂದು ವಿಷಯವನ್ನು ಚರ್ಚಿಸಿ ನಿರ್ಧಾರಕ್ಕೆ ಬಂದು ಕೆಲಸ ನಡೆಸಿದರು ಎನ್ನುವುದೂ ಇಲ್ಲಿ ಅನ್ವಯಿಸು ವುದಿಲ್ಲ. ವ್ಯಕ್ತವಾಗಿ ಕೆಲಸ ಮಾಡಿದವರು ಆರಂಭದಲ್ಲಂತೂ ಒಬ್ಬರು : ಶ್ರೀ ಅಂಬಳೆ ಕೃಷ್ಣಶಾಸ್ತ್ರಿಗಳು : ಆಮೇಲೂ ಒಬ್ಬರು : ಶ್ರೀ ತಳಕಿನ ವೆಂಕಣಯ್ಯನವರು. ಇವರಲ್ಲಿ ಯಾವ ಒಬ್ಬರು ಕೆಲಸ ನಡೆಸಿದಾಗಲೂ ಮತ್ತೊಬ್ಬರ ಮನಸ್ಸು ಸದಾ ಜೊತೆ ಬೆರೆತು ಕಾರ್ಯದ ರೂಪವನ್ನು ನಿರ್ಧರಿಸುತ್ತಿತ್ತು. ಸ್ಪಷ್ಟವಾಗಿ ಕರ್ತೃತ್ವದಲ್ಲಿ ಇವರು ನಿಂತಿರು ವಲ್ಲಿ ಹೊರಗಿಂದ ಸಲಹೆ ಕೊಡುತ್ತ ಸೂಚನೆ ಮಾಡುತ್ತ ನಾಲ್ಕೈದು ಜನ ಮಿತ್ರರು ಜೊತೆಗಿದ್ದರು. ಈ ಕಾರಣದಿಂದ ಯಾವುದೇ ಒಂದು ಸೂಚನೆ ಯಾರಿಂದ ಆಯಿತು ಎಂದರೆ ಇಂತಹವರಿಂದ ಎಂದು ಪೃಥಃಕರಿಸಿ ಹೇಳುವಂತಿರಲಿಲ್ಲ. ಅವಿಭಕ್ತಕುಟುಂಬದ ವ್ಯವಹಾರದ ರೀತಿ ಈ ಪತ್ರಿಕೆಯ ಕೆಲಸ ಪಲವು ಮನಗಳ ಮಿಲನದಿಂದ ರೂಪುಗೊಂಡು ವೆಂಕಣಯ್ಯನವರ ವ್ಯಕ್ತಿತ್ವದಲ್ಲಿ ಶಾಸ್ತ್ರಿಗಳವರ ಕರ್ತೃತ್ವದಲ್ಲಿ ಸ್ಪಷ್ಟವಾದ ಆಕಾರಕ್ಕೆ ಬಂದಿತು. ಈ ಕಾರಣದಿಂದ ಇವರು ಅವರು ಮಾಡಿದರು, ಎನ್ನುವುದಕ್ಕಿಂತ ಪತ್ರಿಕೆ ಮಾಡಿತು ಎನ್ನುವುದು ಎಲ್ಲ ಪತ್ರಿಕೆಗಳ ವಿಷಯದಲ್ಲಿ ಎಷ್ಟುಮಾತ್ರವೋ ಅದಕ್ಕಿಂತ ಹೆಚ್ಚಾಗಿ ಈ ಪತ್ರಿಕೆಯ ವಿಷಯದಲ್ಲಿ ಉಚಿತ.

ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿಗಳ ಈ ಸಹಯೋಗವ್ಯವಸಾಯವನ್ನು ಎಷ್ಟು ಹೊಗಳಿದರೂ ಸಾಲದೆಂದು ನನ್ನ ತಿಳುವಳಿಕೆ. ಸ್ವಭಾವದಿಂದ ಈ ಇಬ್ಬರು ಒಂದು ತೆರನಲ್ಲ. ಒಬ್ಬರು ಮೌನದಿಂದ ಒಬ್ಬರು ಮಾತಿನಿಂದ ಮನಸ್ಸನ್ನು ವ್ಯಕ್ತಪಡಿಸುವರು. ಒಬ್ಬರು ಸೌಮ್ಯದ ಮೂರ್ತಿ, ಮತ್ತೊಬ್ಬರು ಸಹಜವಾದ ರಸಭಾವಗಳಿಗೆ ಜೀವನ ದಲ್ಲಿ ಎಡೆಕೊಡುವವರು. ಒಬ್ಬರು ಸುಲಭವಾಗಿ ಹಗುರವಾಗಿ ಕೆಲಸ ನಡೆಸುವವರು. ಒಬ್ಬರು ಹಗಲಿರುಳೆನ್ನದೆ ಹೊತ್ತುಗೊತ್ತಿಲ್ಲದೆ ಮೈಮುರಿದು ದುಡಿಯುವವರು.

ಸಾಮಾನ್ಯವಾಗಿ ಇಂತಹ ಇಬ್ಬರು ಇವರಂತೆ ಗೆಳೆಯರಾಗುವುದು ಅಪೂರ್ವವೆನ್ನಬೇಕು. ಆದರೆ ಕನ್ನಡದ ಪುಣ್ಯದಿಂದ ಇವರಿಬ್ಬರಿಗೂ ಚಿಕ್ಕಂದು ಜೊತೆಯಾಗಿ ಕನ್ನಡ ದೀಕ್ಷೆ ಬಂದಿತು. ಇಬ್ಬರೂ ಶುದ್ಧಚೇತನರು. ಇಬ್ಬರೂ ಋಜುಸ್ವಭಾವದವರು. ಇಬ್ಬರೂ ಕಾರ್ಯತತ್ಪರರು. ಇಬ್ಬರೂ ಸೇವಾನಿಷ್ಠರು. ರೀತಿ ಬೇರೆಯಾದರೂ ಇಬ್ಬರ ಗುರಿ ಒಂದೇ ಆಗಿ ಇಬ್ಬರೂ ಒಂದು ದಾರಿಯಲ್ಲಿ ನಡೆಯಬೇಕಾಯಿತು. ಒಂದು ಗುರಿಯ ಸಾಧನೆಯಲ್ಲಿ ಈ ಎರಡು ಬಾಳು ಒಂದಾಗಿ ಬೆರೆಯಿತು. ಈ ಯಮಳಜೀವನ ಹೊಸಗನ್ನಡದ ಅಶ್ವಿನೀದೇವತೆ ಆಯಿತು.

ಹೊಸ ಸಾಹಿತ್ಯ ಇಪ್ಪತ್ತೈದು ವರ್ಷಕ್ಕೆ ಮೇಲ್ಪಟ್ಟು ಬೆಳೆದು ಈಗಿನ ತರುಣರು ಯಾರಿಂದ ಎಂದು ಏನು ಕೆಲಸವಾಯಿತೆನ್ನುವುದನ್ನು ಅಷ್ಟಾಗಿ ಗಣಿಸಬೇಕಾಗಿಲ್ಲದ ಕಾಲ ಬಂದಿದೆ. ಓದುವರು ನೂರು ಜನ ಇದ್ದ ಕಡೆ ಈಗ ಬರೆಯುವರ ಸಂಖ್ಯೆ ನೂರಾಗಿದೆ. ಓದುವರ ಸಂಖ್ಯೆ ಈ ಪ್ರಮಾಣದಲ್ಲಿ ಹೆಚ್ಚಿಲ್ಲ ಎನ್ನುವುದು ನಿಜ. ಅದರೂ ಕನ್ನಡದ ಸಾಹಿತ್ಯ ಈಗ ಅಗೆಯನ್ನು ಬಿಟ್ಟು ನಾಟಿಯಾಗಿ ಗದ್ದೆಗೆ ಬಂದಿದೆ. ಅದು ಅಗೆಯ ಸ್ಥಿತಿಯಲ್ಲಿದ್ದಾಗ ಅದಕ್ಕಾಗಿ ದುಡಿದವರು ಯಾರು ಎಂಬುದನ್ನು ಜ್ಞಾಪಕದಲ್ಲಿಡುವುದು ಲೇಖಕ ಲೋಕಕ್ಕೆ ಶ್ರೇಯಸ್ಕರ.

೩

ಲೇಖಕ ಲೋಕದ ಮಾತನ್ನು ಒಟ್ಟಿಗೆ ಹೇಳುವುದು ಕಷ್ಟ. ಲೇಖಕನೊಬ್ಬನ ಅನುಭವ ಒಂದು ಉದಾಹರಣೆಯಾಗುತ್ತದೆ. ಆದಕಾರಣ ಈ ನಮ್ಮ ಮಿತ್ರರಿಂದ ನನಗಾದ ಸಹಾಯವೇನೆಂಬುದನ್ನು ಇಲ್ಲಿ ನಾಲ್ಕು ಮಾತಿನಲ್ಲಿ ಹೇಳುವುದು ಪ್ರಕೃತವೆನಿಸುತ್ತದೆ. ನಾನೂ ಕೃಷ್ಣಶಾಸ್ತ್ರಿಗಳೂ ಮೈಸೂರಿನ ವೆಸ್ಲಿಯನ್ ಹೈಸ್ಕೂಲಿನಲ್ಲಿ ಒಂದು ಕಾಲದಲ್ಲಿ ಓದಿದವರು. ಅವರು ನನಗಿಂತ ಒಂದು ತರಗತಿ ಹಿಂದೆ ಇದ್ದರು. ನಮಗೆ ಆಗಲೇ ಪರಿಚಯವುಂಟು; ಆಗಲೇ ಸ್ನೇಹ ಮೊದಲಾಯಿತು. ಮೆಟ್ರಿಕ್ಯುಲೇಷನ್ ಪರೀಕ್ಷೆ ಮುಗಿದು ನಾನು ಕಾಲೇಜಿಗೆ ಸೇರಿದಾಗ ನನಗೆ ವೆಂಕಣ್ಣಯ್ಯನವರ ಪರಿಚಯವಾಯಿತು. ಆ ವಯಸ್ಸಿನಲ್ಲಿಯೇ ಅವರ ಆಕಾರ ಒಂದು ಗುಂಪಿನಲ್ಲಿ ಪ್ರಮುಖವಾಗಿ ನಿಲ್ಲುವ ಯೋಗ್ಯತೆಯನ್ನು ಪಡೆದಿತ್ತು. ಕಾಲೇಜಿಗೆ ಸಂಬಂಧಪಟ್ಟ ನಾಲ್ಕಾರು ಕೆಲಸದಲ್ಲಿ ನಾವು ಕಂಡೆವು. ಈ ಕಾಣುವಿಕೆ ಆಗ್ಯೆ ಪರಿಚಯವಾಗಿಯೇ ಉಳಿಯಿತು. ಎಂ.ಎ. ಪರೀಕ್ಷೆ ನಡೆದ ಕಾಲದಲ್ಲಿ ನಾವು ಮದರಾಸಿನಲ್ಲಿ ಒಬ್ಬರನ್ನೊಬ್ಬರು ಮತ್ತೆ ಕಂಡೆವು. ಕನ್ನಡದ ಕೆಲಸಕ್ಕಾಗಿ ಅಲ್ಲದಿದ್ದರೆ ನನ್ನ ಇವರ ಪರಿಚಯ ಸ್ನೇಹವಾಗಬೇಕಾದ ಕಾರಣ ಇರಲಿಲ್ಲ. ಪ್ರಬುದ್ಧ ಕರ್ನಾಟಕ ಪತ್ರಿಕೆ

ಗಾಗಿ ಅಲ್ಲದಿದ್ದರೆ, ಕರ್ನಾಟಕ ಸಂಘ, ಕನ್ನಡದ ಕೆಲಸ ಎನ್ನುವದಕ್ಕಾಗಿ ಅಲ್ಲದಿದ್ದರೆ ನನ್ನ ಮತ್ತು ಕೃಷ್ಣಶಾಸ್ತ್ರಿಗಳ ಸ್ನೇಹವಾದರೂ ಬೆಳೆಯಬೇಕಾದ ಕಾರಣವಿರಲಿಲ್ಲ. ಇವರು ಇಬ್ಬರಿಗೂ ಕನ್ನಡದೀಕ್ಷೆ ಬಂದ ಕಾಲದಲ್ಲಿ ನನ್ನ ಮನಸ್ಸಿನಲ್ಲೂ ಕನ್ನಡದ ಸೇವೆಯ ಪ್ರೇರಣೆ ಮೂಡಿತು. ನನ್ನ ಸಣ್ಣ ಕಥೆ ಒಂದೆರಡು ಮಧುರವಾಣಿಯಲ್ಲಿ ಅಚ್ಚಾದಾಗ ನನ್ನ ಇವರ ಸಂಬಂಧ ಬೆಸೆಯುವುದು ಸಹಜವಾಯಿತು. ೧೯೨೦ರ ಕೊನೆಯಲ್ಲಿ "ಕೆಲವು ಸಣ್ಣ ಕತೆಗಳು" ಪುಸ್ತಕ ಪ್ರಕಟವಾದಾಗ ಈ ಸ್ನೇಹಿತರಿಬ್ಬರೂ ಆ ಪುಸ್ತಕವನ್ನು ತಮ್ಮ ಕೈಯಲ್ಲಿ ಎತ್ತಿಕೊಂಡರು. ಅದನ್ನು ಬರೆದೆನೆಂಬ ಕಾರಣದಿಂದ ನನ್ನ ಮೇಲೆ ತಮ್ಮ ಪ್ರೇಮ ಆದರಗಳ ವರ್ಷವನ್ನು ಕರೆದರು. ಶ್ರೀ ಕೃಷ್ಣಶಾಸ್ತ್ರಿಗಳು ಆ ಪುಸ್ತಕವನ್ನು ಕುರಿತು ಪ್ರಬುದ್ಧ ಕರ್ನಾಟಕದಲ್ಲಿ ಬರೆದ ವಿಮರ್ಶೆ ಕನ್ನಡದ ಹೊಸ ವಿಮರ್ಶೆಗೆ ಒಂದು ಮಾದರಿ. ಇದು ಸಾಹಿತ್ಯವೇ ಎಂದೇ ಆಗ ಅನೇಕರಿಗೆ ಸಂದೇಹ. ಇದು ಸಾಹಿತ್ಯವಿರಬಹುದು. ಮಕ್ಕಳು ಮರಿ ಓದುವುದಕ್ಕೆ ಚೆನ್ನಾಗಿದೆ ಎಂದು ಮತ್ತೆ ಕೆಲವರ ಅಭಿಪ್ರಾಯ. ಇಂತಹ ಪುಸ್ತಕವನ್ನು ತೆಗೆದುಕೊಂಡು ಶಾಸ್ತ್ರಿಗಳು ಅದು ಸಾಹಿತ್ಯವೆಂದರು. ತಕ್ಕಷ್ಟು ಯೋಗ್ಯತೆಯ ಸಾಹಿತ್ಯವೆಂದೂ ಸ್ಪಷ್ಟವಾಗಿ ಹೇಳಿದರು. ಎಂತಹ ಲೇಖಕನಿಗೂ ಸಹೃದಯನಾದ ಪಾಠಕನು ಬೇಕು. ಹಳೆಯ ರೀತಿಯ ಪಂಡಿತರು ಈ ಕತೆಗಳನ್ನು ಒಪ್ಪದಿದ್ದರೆ ತಪ್ಪಲ್ಲ. ಅವರು ಈ ರೀತಿಯ ಸಾಹಿತ್ಯವನ್ನು ಕಾಣರು. ಆಂಗ್ಲಸಾಹಿತ್ಯವನ್ನು ಬಲ್ಲವರು ಇದನ್ನು ಒಪ್ಪಬೇಕು; ಆದರೆ ಆಂಗ್ಲಸಾಹಿತ್ಯವನ್ನು ಬಲ್ಲವರು ಕನ್ನಡದ ಒಂದು ಪುಸ್ತಕವನ್ನು ಓದಿಯಾರೆಂಬ ಚಪಲವೇಕೆ? ಇನ್ನಿದನ್ನು ಒಪ್ಪಬೇಕಾದರೆ ಅಥವಾ ತಪ್ಪೆನ್ನಬೇಕಾದರೆ ಆಂಗ್ಲಸಾಹಿತ್ಯವನ್ನು ಬಲ್ಲ ಕನ್ನಡ ಪ್ರೇಮಿಗಳಾಗಿರಬೇಕು. ಅಂತಹವರ ಅಭಿಪ್ರಾಯ ಏನು ಎಂಬುದನ್ನು ಅಥವಾ ಅಂತಹವರಲ್ಲಿ ಬಹುಜನರ ಅಭಿಪ್ರಾಯ ಏನಿರಬಹುದು ಎಂಬುದನ್ನು ಶಾಸ್ತ್ರಿಗಳವರು ತಮ್ಮ ವಿಮರ್ಶೆಯಲ್ಲಿ ಸ್ಪಷ್ಟಪಡಿಸಿದರು. ಮಹಾ ಕವಿ ಹೇಳಿದ ಮಾತನ್ನು ಸಿಕ್ಕಿದವರೆಲ್ಲ ಪ್ರತಿ ಮಾಡಬಾರದು. ಆದರೆ ಮಹಾ ಕವಿಯ ಆತ್ಮವಿಚಾರಕ ಅಪ್ರತ್ಯಯ ಯಾರಲ್ಲಾದರೂ ತಲೆದೋರಬಹುದು. ಹೆತ್ತವರಿಗೆ ಹೆಗ್ಗಣ ಮುದ್ದು, ಬರೆದವರಿಗೆ ತನ್ನ ಕತೆ ಮುದ್ದು. ಈ ಮಗು, ಈ ಕತೆ, ಬೇರೆ ಯಾರಿಗಾದರೂ ಮುದ್ದಾಗಿ ಕಾಣುತ್ತದೆಯೋ? ಅದು ಹಾಗೆ ಕಾಣುವ ವರೆಗೆ ಹೆತ್ತವರು ಬರೆದವರು ಅವುಗಳ ಯೋಗ್ಯತೆಯನ್ನು ಕುರಿತು ಧೈರ್ಯಪಡುವಂತಿಲ್ಲ. ಪ್ರಬುದ್ಧ ಕರ್ನಾಟಕ ಕೃಷ್ಣಶಾಸ್ತ್ರಿಗಳ ವಿಮರ್ಶೆಯ ಮೂಲಕ ನನಗೆ ಆಗ ಆವಶ್ಯಕವಾಗಿದ್ದ ಧೈರ್ಯವನ್ನು ಕೊಟ್ಟಿತು.

ಇದಾದ ಕೆಲವು ತಿಂಗಳಿಗೆ ನಾನು ಬೆಂಗಳೂರಿಗೆ ವರ್ಗವಾಗಿ ಬಂದೆನು. ವೆಂಕ

ಣಯ್ಯನವರು ಆಗ ಬೆಂಗಳೂರಲ್ಲಿದ್ದರು. ನನ್ನ ಅವರ ಬಾಂಧವ್ಯ ಗಾಢವಾಗಿ ಬೆಳೆಯಿತು. ಆ ದಿನಗಳಲ್ಲಿ ನಾನು ಬಿನ್ನಹದ ಗೀತೆಗಳನ್ನು ಬರೆದೆನು. ವೆಂಕಣ್ಣಯ್ಯನವರು ದಿನ ಬಿಡದೆ ಅಥವಾ ದಿನ ಬಿಟ್ಟು ದಿನ ಬಂದು ಆ ಒಂದು ದಿನ ಎರಡು ದಿನ ಬರೆದ ಒಂದು ಗೀತ ಎರಡು ಗೀತವನ್ನು ಕೇಳಿ ಹೋಗುತ್ತಿದ್ದರು. ನನ್ನ ಹೊಸ ಬರಹದ ಉತ್ಸಾಹ, ಅವರ ಹೊಸ ಕೇಳ್ವಿಯ ಮೆಚ್ಚಿಗೆ, ಇದರ ಕಥೆಯನ್ನು ಇಲ್ಲಿ ವಿಸ್ತಾರವಾಗಿ ವರ್ಣಿಸುವುದು ಅನಾವಶ್ಯಕ. ಇಷ್ಟನ್ನು ಮಾತ್ರ ಹೇಳಬೇಕು. ಈ ಸಾಹಿತ್ಯ ನಿರ್ಮಾಣದ ಕಾರ್ಯದಲ್ಲಿ ವೆಂಕಣ್ಣಯ್ಯನವರ ಆದರದ ಕಾವು ತುಂಬ ಸಹಾಯ ಮಾಡಿತು. ಇವರ ಮತ್ತು ಶ್ರೀಗಳಾದ ಕೃಷ್ಣಶಾಸ್ತ್ರಿ, ಗುಂಡಪ್ಪ, ಬೆಳ್ಳಾವೆ ವೆಂಕಟನಾರಾಯಣಪ್ಪ, ಸೋಸಲೆ ಗರಳಪುರಿ ಶಾಸ್ತ್ರಿಗಳ ಮೆಚ್ಚಿಗೆಯಿಂದ ನನಗೆ ತುಂಬಾ ಹುರುಪು ಒದಗಿತು.

ಈ ಮಾತುಗಳಿಂದ ನಾನು ಬರೆದ ಎಲ್ಲ ಬರವಣಿಗೆಯನ್ನು ಈ ಮಿತ್ರರು ಎಲ್ಲ ಹೊತ್ತಿನಲ್ಲೂ ಒಪ್ಪಿಯೇಕೊಂಡರು ಎಂದು ಗ್ರಹಿಸಬಾರದು. 'ಸುಬ್ಬಣ್ಣ' ಕತೆಯ ಹಸ್ತ ಪ್ರತಿ ಮೊದಲು ಮಿತ್ರರಿಗೆ ಹೋದಾಗ **ಸುಬ್ಬಣ್ಣ, ನೀಲಾ** ಇವರ ಸಂಬಂಧವನ್ನು ಕುರಿತ ಭಾಗ, **ಸುಬ್ಬಣ್ಣ, ಲಲಿತಮ್ಮ**ನ ಮನಸ್ಸು ಒಂದುಗೂಡಿದುದನ್ನು ವರ್ಣಿಸುವ ಶಯ್ಯಾಗಾರದ ವರ್ಣನೆಯ ಭಾಗ, ಇವು ಪ್ರಬುದ್ಧ ಕರ್ನಾಟಕ ನಡೆಸಿಕೊಂಡು ಬಂದಿದ್ದ ಒಂದು ವಿನಯದ ಎಲ್ಲೆಯಿಂದ ಆಚೆಗೆ ಬೀಳುತ್ತದೆ ಎಂದು ಅವರು ಅಂಜಿದರು. ಈ ಮಾತಿಗೆ ನಾನು ಒಪ್ಪಿದೆ; ಆದರೆ ಕಥೆಯ ಆ ಭಾಗಗಳನ್ನು ಈ ಕಾರಣದಿಂದ ಬಿಡುವುದಕ್ಕೆ ಅಥವಾ ತಿದ್ದುವುದಕ್ಕೆ ಒಪ್ಪುವುದು ಸಾಧ್ಯವಾಗಲಿಲ್ಲ. ಸದ್ಯಕ್ಕೆ ಅದನ್ನು ಪ್ರಕಟಿಸುವುದು ಬೇಡ, ಮುಂದೆ ನೋಡೋಣ, ಎಂದು ಪ್ರಕಟಣೆಯನ್ನು ನಿಲ್ಲಿಸಿದ್ದಾಯಿತು. ಮೂರುವರ್ಷದ ನಂತರ ಮತ್ತೆ ಅದನ್ನು ನೋಡೋಣವೆಂದು ಮನಸ್ಸಾಯಿತು. ನಾನು ಶಯ್ಯಾಗಾರದ ಕಥನದಲ್ಲಿ ಒಂದು ಪದವನ್ನು ತೆಗೆದು ಬೇರೆಯ ಪದವನ್ನು ಹಾಕಿ ಕಥೆಯನ್ನು ಮತ್ತೆ ಕಳುಹಿದೆನು. ಮೂರುವರುಷದಲ್ಲಿ ನಮ್ಮ ಮಿತ್ರರ ಮನಸ್ಸು ಒಂದು ಹೆಜ್ಜೆ ಇತ್ತ ಬಂದಿತು. ಜನರು ಅದನ್ನು ಆಗ ಒಪ್ಪಿಕೊಂಡಾರೆಂದು ಅವರಿಗೆ ತೋರಿತು. ಕಥೆ ಪತ್ರಿಕೆಯಲ್ಲಿ ಪ್ರಕಟವಾಯಿತು.

೪

ಪ್ರಬುದ್ಧ ಕರ್ನಾಟಕ ಪತ್ರಿಕೆಯ ಮೂಲಕ ಅದರ ಯಮಳ ಸಂಪಾದಕರು ಕನ್ನಡಕ್ಕೆ ಎಂತಹ ಉನ್ನತ ಸೇವೆಯನ್ನು ಸಲ್ಲಿಸಿದರೆಂದು ಹೇಳುವುದಕ್ಕಾಗಿ ಈ ನಾಲ್ಕು ಮಾತನ್ನು ಬರೆದದ್ದಾಗಿದೆ. ಕನ್ನಡದ ಹೊಸ ಸಾಹಿತ್ಯದ ಚರಿತ್ರೆಯಲ್ಲಿ ಈ ಎರಡು

ಹೆಸರು ಎಂದಿಗೂ ಒಂದಾಗಿ ಎಂದಿಗೂ ನೆನಪಾಗಿ ನಿಲ್ಲತಕ್ಕವು. ನಮ್ಮ ದುರದೃಷ್ಟದಿಂದ ಶ್ರೀ ವೆಂಕಣ್ಣಯ್ಯನವರು ಮುಪ್ಪಿಗೆ ಮುನ್ನ ತೀರಿಹೋದರು. ನಮ್ಮ ಅದೃಷ್ಟದಿಂದ, ದೇವರ ಕೃಪೆಯಿಂದ ಶ್ರೀ ಅಂಬಳೆ ಕೃಷ್ಣಶಾಸ್ತ್ರಿಗಳು ಮತ್ತಷ್ಟು ಸೇವೆ ನಡೆಸುತ್ತ ಬಂದಿದಾರೆ. ಅವರ ನೆನವು ನಿತ್ಯವಾಗಲಿ. ಇವರ ಸೇವೆ ಬಹುಕಾಲ ನಡೆಯಲಿ.

ಇದು ಎಲ್ಲ ಕನ್ನಡ ಲೇಖಕರೂ ಎಲ್ಲ ಕನ್ನಡ ಜನರೂ ಬಯಸುವ ಬಯಕೆ. ಎಲ್ಲ ಲೇಖಕರ, ಎಲ್ಲ ಕನ್ನಡಿಗರ ಈ ಬಯಕೆಯನ್ನು ಒಬ್ಬ ಲೇಖಕನಾಗಿ ಒಬ್ಬ ಕನ್ನಡಿಗನಾಗಿ ವ್ಯಕ್ತಪಡಿಸಿ ನಾನು, ಅವರ ನೆನವಿಗೆ, ಇವರ ಸಮಕ್ಷಮಕ್ಕೆ ನನ್ನ ಪ್ರೀತಿ ಕೃತಜ್ಞತೆಗಳ ಕಾಣಿಕೆಯನ್ನು ಸಲ್ಲಿಸುತ್ತೇನೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ್.

೧. ಇಂದಿನ ಕನ್ನಡದಲ್ಲಿ ಏಕಾಂಕಗಳು

೧

ಏಕಾಂಕಗಳು ಇಂದಿನ ಕನ್ನಡ ಸಾಹಿತ್ಯದಲ್ಲಿ ತಲೆದೋರಿದ ಒಂದು ಹೊಸ ಮಾದರಿ. ಒಂದು ದೃಷ್ಟಿಯಿಂದ ಹೇಳುವುದಾದರೆ, ಇಡಿಯ ಸಾಹಿತ್ಯಪ್ರಪಂಚ ದಲ್ಲಿಯೆ ಏಕಾಂಕವು ತೀರ ಇತ್ತೀಚಿನ ಮಾದರಿ ಎನ್ನಬಹುದಾಗಿದೆ. ಸಂಸ್ಕೃತ ನಾಟ್ಯಶಾಸ್ತ್ರದಲ್ಲಿ ಪ್ರಾಚೀನ ಕಾಲದಿಂದಲೂ ಏಕಾಂಕದಲ್ಲಿ ರಚಿತವಾದ ರೂಪಕ ಗಳಿದ್ದುವು; ಯುರೋಪ ಖಂಡದ ಸಾಹಿತ್ಯದಲ್ಲೂ ಏಕಾಂಕದಂತಹ ಚಿಕ್ಕ ದೃಶ್ಯ ಗಳು ಅನೇಕ ಶತಮಾನಗಳಿಂದ ಕಂಡುಬರುವುವು; ನಿಜ. ಆದರೆ ಇಂದು ಯಾವು ದನ್ನು ನಾಟ್ಯಕಲೆಯ ದೃಷ್ಟಿಯಿಂದ ನಾವು 'ಏಕಾಂಕ'ವೆನ್ನುವೆವೊ ಅಂತಹ ಮತ್ತು ಆ ದೃಷ್ಟಿಯ ಏಕಾಂಕಗಳು ಕಳೆದ ಶತಮಾನದ ಕೊನೆಯ ಭಾಗದ ವರೆಗೂ ಇದ್ದಿರ ಲಿಲ್ಲ ಎಂಬುದು ಈ ಪ್ರಬಂಧದಲ್ಲಿ ಮುಂದೆ ಬರಬಹುದಾದ ಚರ್ಚೆಯಿಂದ ವಾಚಕರಿಗೆ ಸ್ಪಷ್ಟವಾಗುವುದು. ಸಂಸ್ಕೃತದಲ್ಲಿ ಏಕಾಂಕದ ನಾಲ್ಕು ತರದ ರೂಪಕಗಳು ನಾಟ್ಯ ಶಾಸ್ತ್ರಪರಂಪರೆಯಲ್ಲಿ ಕಂಡುಬರುವುವು. ಅವು :—

ವ್ಯಾಯೋಗ, ಭಾಣ, ಅಂಕ, ಮತ್ತು **ವೀಥೀ** ಅವುಗಳ ಲಕ್ಷಣಗಳನ್ನು ನೋಡೋಣ.

ವ್ಯಾಯೋಗ

ಖ್ಯಾತೇತಿವೃತ್ತೋ ವ್ಯಾಯೋಗಃ ಖ್ಯಾತೋದ್ಧತನರಾಶ್ರಯಃ
ಅಸ್ತ್ರೀನಿಮಿತ್ತಸಂಗ್ರಾಮೋ ಜಾಮದಗ್ನ್ಯಜಯೇ ಯಥಾ
ಏಕಾಹಾಚರಿತೈಕಾಂಕಃ . . . .

ಭಾಣ

ಭಾಣಸ್ತು ಧೂರ್ತಚರಿತಂ ಸ್ವಾನುಭೂತಂ ಪರೇಣ ವಾ
ಯತ್ರೋಪವರ್ಣಯೇದೇಕೋ ನಿಪುಣಃ ಪಂಡಿತೋ ವಿಟಃ
ಸಂಬೋಧನೋಕ್ತಿಪ್ರತ್ಯುಕ್ತೀ ಕುರ್ಯಾದಾಕಾಶಭಾಷಿತೈಃ
ಸೂಚಯೇದ್ವೀರಶೃಂಗಾರೌ
ಏಕಾಂಕಂ ವಸ್ತು ಕಲ್ಪಿತಂ

ಅಂಕ

ಉತ್ಸೃಷ್ಟಿಕಾಂಕೇ ಪ್ರಖ್ಯಾತಂ ವೃತ್ತಂ ಬುದ್ಧ್ಯಾ ಪ್ರಪಂಚಯೇತ್
ರಸಸ್ತು ಕರುಣಃ ಸ್ಥಾಯೀ ನೇತಾರಃ ಪ್ರಾಕೃತಾ ನರಾಃ
ಭಾಣವತ್ ಸಂಧಿವೃತ್ತ್ಯಂಗೈರ್ಯುಕ್ತಃ ಸ್ತ್ರೀಪರಿದೇವಿತೈಃ

ವೀಥೀ

ವೀಥೀತು ಕೈಶಿಕೀವೃತ್ತೇ ಸಂಧ್ಯಂಗಾಂಕೈಸ್ತು ಭಾಣವತ್
ಏವಂ ವೀಥೀ ವಿಧಾತವ್ಯಾ ದ್ವ್ಯೇಕಪಾತ್ರಪ್ರಯೋಜಿತಾ

ಮೇಲಿನ ಲಕ್ಷಣಗಳನ್ನು ನೋಡಿದಲ್ಲಿ ಪಾತ್ರ, ವಿಷಯ, ರಸ ಇವುಗಳ ದೃಷ್ಟಿಯಿಂದ ವಿಶಿಷ್ಟವಾದ ರೀತಿಯಲ್ಲಿ ಒಂದೊಂದೂ ಬಂಧಿತವಾಗಿದೆ. **ಭಾಣ** ಮತ್ತು **ವೀಥೀ** ಗಳಲ್ಲಿ ಎರಡಕ್ಕಿಂತ ಹೆಚ್ಚು ಪಾತ್ರಗಳಿಗೆ ಅವಕಾಶವಿಲ್ಲ; **ಭಾಣದಲ್ಲಿ** ಆಕಾಶೋಕ್ತಿಯೆ ಮಾತಿನ ರೀತಿ; ಅಂಕದಲ್ಲಿ ಸ್ತ್ರೀಯರ ಶೋಕ, **ವ್ಯಾಯೋಗದಲ್ಲಿ** ಸ್ತ್ರೀ ನಿಮಿತ್ತವಲ್ಲದ ಯುದ್ಧ, **ಭಾಣದಲ್ಲಿ** ಕೇವಲ ವರ್ಣನಾಪರ ಭಾಷಣ, **ವೀಥಿಯಲ್ಲಿ** ಸಾಹಿತ್ಯದರ್ಪಣಗ್ರಂಥವು ಹೇಳುವಂತೆ—ಸೂಚಯೇದ್ಭೂರಿ ಶೃಂಗಾರಂ. ಇವುಗಳಲ್ಲಿ ಒಂದು ಮಾತೂ ಇಂದು ನಾವು ಒಪ್ಪುವ ಏಕಾಂಕದಲ್ಲಿ ಮಹತ್ತ್ವದ ವಿಷಯವಾಗಿಲ್ಲ.

ಏಕಾಂಕವು ಹಿಂದಿನ ಕಾಲದಲ್ಲಿ ಇದ್ದಿರಲಿಲ್ಲವೆಂದು ಸಾಧಿಸುವ ಹಟದಿಂದ ಮಾತ್ರವೇ ನಾವು ಮೇಲಿನ ಮಾತುಗಳನ್ನು ಹೇಳುವುದಿಲ್ಲ. ಏಕಾಂಕದ ಬಗ್ಗೆ ಇಂದಿಗೂ ಕೆಲವರಲ್ಲಿರಬಹುದಾದ ತಪ್ಪು ಕಲ್ಪನೆಗಳನ್ನು ತೆಗೆದೊಗೆಯುವುದೂ ಅದರ ಉದ್ದಿಶ್ಯವಾಗಿದೆ. ಏಕಾಂಕವೆಂದರೆ ಬರಿಯ ಚಿಕ್ಕದಾದ ನಾಟಕವಲ್ಲ. ಮುಂದೆ ಕತೆ ಸಾಗದಂತಾಗಿ ಮೊದಲ ಅಂಕಿಗೆಯೆ ನಾಟಕಕಾರನು ತನ್ನ ನಾಟಕವನ್ನು ಮುಗಿಸಿದರೆ—ಅವನೆಂತಹ ಹೆಸರಾದ ನಾಟಕಕಾರನೆನ್ನಿಸಿದರೂ—ಅವನ ಆ ಕೃತಿ ಏಕಾಂಕವೆನ್ನಿಸದು. ಇಲ್ಲವೆ ಮೂರಂಕಗಳ ಒಂದು ನಾಟಕದ ಅಂಕ ವಿಧಾನವನ್ನು ಬದಲಾಯಿಸಿ ಇಡಿಯ ನಾಟಕಕ್ಕೆ ಒಂದೇ ಅಂಕವೆಂದರೂ ನಾಟಕ ಏಕಾಂಕವಲ್ಲ. ಏಕಾಂಕ ನಾಟಕವೆಂದರೆ ತುಂಡು ನಾಟಕವೂ ಅಲ್ಲ, ಅಖಂಡನಾಟಕವೂ ಅಲ್ಲ. ಯಾಕೆಂದರೆ ಅನೇಕ ದೃಶ್ಯಗಳಿದ್ದಾಗೂ ಆ ನಾಟಕ ಏಕಾಂಕವೆನ್ನಿಸಬಹುದು. ಇಂದು ಏಕಾಂಕ ಎಂಬ ಹೆಸರು ಒಂದು ವಿಶಿಷ್ಟ ತಂತ್ರ (technique)ಕ್ಕಾಗಿ ಬಂದಿದೆ. ಆ ತಂತ್ರ ಇದ್ದರೆ ಸಾಕು ಪಾತ್ರಗಳು, ದೃಶ್ಯಗಳು, ಸಂಭಾಷಣೆಗಳು ಎಷ್ಟೆ ಇರಲಿ ಯಾವ ತರಹದ್ದೆ ಇರಲಿ ಅದು ಏಕಾಂಕ ನಾಟಕವೆನ್ನಿಸುವುದು.

ಏಕಾಂಕದ ತಂತ್ರವನ್ನು ಅರಿತುಕೊಳ್ಳುವ ಮುಂಚೆ ಒಂದು ಮಾತನ್ನು ಲಕ್ಷ್ಯದಲ್ಲಿಡಬೇಕು. ಅದೆಂದರೆ, ಗಾತ್ರ. ಏಕಾಂಕದ ಗಾತ್ರವು ನಾಟಕಕ್ಕಿಂತ ಚಿಕ್ಕದಾಗಿರಬೇಕೆಂಬುದು ನಿರ್ವಿವಾದದ ವಿಷಯ. ಮೂರು ಗಂಟೆ ಕಾಲ ರಂಗಭೂಮಿಯಲ್ಲಿ ನಡೆಯಬಹುದಾದ ನಾಟಕಕ್ಕೆ ಏಕಾಂಕವೆನ್ನಲಾಗದು; ಹಾಗಿದ್ದರೆ ಏಕಾಂಕವು ನಾಟಕಕ್ಕಿಂತ ಬೇರೆಯಾಗುತ್ತಿರಲಿಲ್ಲ, ಅದರ ತಂತ್ರವೂ ವಿಶಿಷ್ಟವೆನ್ನಿಸುತ್ತಿರಲಿಲ್ಲ. ಹದಿನೈದು

ನಿಮಿಷಗಳಿಂದ ಒಂದು (ಹೆಚ್ಚೆಂದರೆ ಒಂದೂಕಾಲು) ಗಂಟೆಯ ಅವಧಿಯೊಳಗಾಗಿ ಏಕಾಂಕದ ಪ್ರಯೋಗವು ಮುಗಿಯಲೇ ಬೇಕು.* ಈ ಸ್ವಲ್ಪಾವಧಿಯಲ್ಲಿ ಪ್ರಯೋಗವು ಯಶಸ್ವಿಯಾಗಿ—ಎಂದರೆ ನಾಟಕಕಾರನು ಬಯಸಿದ ಪರಿಣಾಮವನ್ನು ಹುಟ್ಟಿಸಿ—ಮುಗಿಯಬೇಕಾದರೆ ಒಂದು ವಿಶಿಷ್ಟ ತಂತ್ರವಿದ್ದರೆಯೆ ಶಕ್ಯವಿದೆ. ದೊಡ್ಡ ನಾಟಕದಲ್ಲಿಯಂತೆ ಇಲ್ಲಿ ನಾಟಕಕಾರನಿಗೆ ಯಾವುದನ್ನೂ ವಿವರವಾಗಿ ಹೇಳಲು ಅವಕಾಶವಿಲ್ಲ; ಯಶಸ್ವಿಯಾಗಬೇಕಾದರೆ ಮುಖ್ಯ ವಿವರಗಳನ್ನು ಬಿಡುವಂತಿಲ್ಲ. ಪಾತ್ರದ ಸೃಷ್ಟಿ ಮತ್ತು ಬೆಳವಣಿಗೆ ದೊಡ್ಡ ನಾಟಕದಲ್ಲಿಯಂತೆ ನಿಧಾನವಾಗಿ ಸಾಗುವಂತಿಲ್ಲ; ಆದರೂ ಬೆಳವಣಿಗೆ ಇಲ್ಲದ ನಿರ್ಜೀವ ಪಾತ್ರಗಳನ್ನೂ ಸೃಷ್ಟಿಸುವಂತಿಲ್ಲ. ಕತೆಯ ವಿಸ್ತರಣೆಗೆ ದೊಡ್ಡ ನಾಟಕದಲ್ಲಿಯಂತೆ ಸಾಕಷ್ಟು ಅವಧಿ ಇಲ್ಲ; ಆದರೂ ಉದ್ದಿಷ್ಟ ಪರಿಣಾಮವಾಗಬೇಕಾದರೆ ಕತೆಯನ್ನು ಪೂರ್ತಿಗೊಳಿಸಲೇ ಬೇಕು. ಹೀಗೆ ದೊಡ್ಡ ನಾಟಕಕ್ಕಿಂತ ಗಾತ್ರ ಬಹಳೇ ಚಿಕ್ಕದಾದರೂ ದೊಡ್ಡ ನಾಟಕದಲ್ಲಿದ್ದ ಪಾತ್ರಸೃಷ್ಟಿ, ಕಥಾನಿರೂಪಣೆ ಮತ್ತು ಉಳಿದ ಅಂಗಗಳು ಇರಲೇಬೇಕಾಗುವುದು. ಈ ಮಾತನ್ನು ಲಕ್ಷ್ಯವಿಟ್ಟರೆ 'ಬರೆಯುವವರಿಗೂ ಒಂದೇ ಅಂಕೆಂದರೆ ಅದೆಷ್ಟು ಸಮಾಧನ' ಎಂದು ಶ್ರೀ ಗೋಕಾಕರು 'ಕೋಲ್ಮಿಂಚು' ಸಂಗ್ರಹದ ಮುನ್ನುಡಿಯಲ್ಲಿ ಹೇಳಿದ್ದನ್ನು ಏಕಾಂಕ ಲೇಖಕನು ಒಪ್ಪಲಾರನು. ಸ್ಥೂಲದೃಷ್ಟಿಯಿಂದ ಹೇಳುವುದಾದರೆ ೩-೪ ಗಂಟೆಗಳ ಅವಧಿಯಲ್ಲಿ ದೊಡ್ಡ ನಾಟಕದ ಕರ್ತಾರನು ಪ್ರೇಕ್ಷಕರ ಮೇಲೆ ಮೂಡಿಸುವ ಪರಿಣಾಮವನ್ನು ಒಂದು ಗಂಟೆಯ ಒಳಗಾಗಿ ಏಕಾಂಕ ಕರ್ತನು ಮೂಡಿಸಬೇಕಾಗುವುದು. ನಾಟಕದ ಗಾತ್ರ ಚಿಕ್ಕದೆಂದು ಪ್ರೇಕ್ಷಕರ ರಸಾಸ್ವಾದನೆಯಲ್ಲಿ ಕಡಮೆ ಪ್ರಮಾಣ ನಡೆಯದು. ಈ ದೃಷ್ಟಿಯಿಂದ ಏಕಾಂಕವನ್ನು ಬರೆಯುವುದು ಹೆಚ್ಚು ಕಠಿಣವಾದ ಕೆಲಸ ಎಂದು ಹೇಳಲು ಯಾವ ಅಭ್ಯಂತರವೂ ಇಲ್ಲ.

ದೊಡ್ಡ ನಾಟಕದ ಎಲ್ಲ ಅಂಗಗಳು ಏಕಾಂಕದಲ್ಲಿ ಇರಬೇಕಾದುದು ಎಂದು ಮೇಲೆ ಹೇಳಿದೆಯಷ್ಟೆ? ಎಂದರೆ ಮುಖ್ಯವಾಗಿ ಕಥಾವಸ್ತು, ಪಾತ್ರರಚನೆ, ರಂಗಯೋಜನೆ ಮತ್ತು ಸಂಭಾಷಣೆ—ಇವು ಏಕಾಂಕದಲ್ಲಿ ನೋಡತಕ್ಕ ವಿಷಯ. ಇವು

---

* ಈ ಮಾತನ್ನು ಕೆಲವರು ತಪ್ಪು ತಿಳಿದುಕೊಂಡಿದ್ದಾರೆ. ಚಿತ್ರಪಟಕ್ಕೆ ಪ್ರತಿಸ್ಪರ್ಧಿಯಾಗ ಬಯಸಿದ ನಾಟಕದ ರೂಪಾಂತರವೆ ಏಕಾಂಕ ಎಂದು ತಿಳಿಯುತ್ತಾರೆ. ಆದರೆ ಚಿತ್ರಪಟ ಜನಪ್ರಿಯವಾಗುವುದಕ್ಕೆ ಮುಂಚಿತವೆ ಏಕಾಂಕದ ತಂತ್ರವು ಬೆಳೆದಿತ್ತು. ಅದರಂತೆಯೆ ಅವಸರದ ಇಂದಿನ ಜೀವನಕ್ಕೆ ಸ್ವಲ್ಪಾವಧಿಯ ರಂಜನೆ ಅಗತ್ಯವೆಂದು ಏಕಾಂಕ ಹುಟ್ಟಿತು ಎನ್ನುವುದೂ ಸರಿಯಲ್ಲ. ಇಂತಹ ಸಂಗತಿಗಳು ಅದರ ಹುಟ್ಟಿಗೆ ಕಾರಣವಲ್ಲ, ಬೆಳವಣಿಗೆಗೆ ಪೋಷಕವಾಗಿವೆ.

ಅಲ್ಲದೆ ಚಿತ್ರಪಟದಲ್ಲಿ ಕಣ್ಣಿನ ಒಂದುಸಲದ ನೋಟಕ್ಕೆ ನಾಲ್ಕಾರು ಪುಟಗಳಲ್ಲಿ ಅಡಗಿಸಲಾಗದಷ್ಟು ವಿಷಯ, ಸನ್ನಿವೇಶ, ಕಥಾಕಾರ್ಯ ಕೂಡಿ ನುಡಿಯುತ್ತಿರುತ್ತದೆ.

ಗಳ ಜೊತೆಗೆ ಇವುಗಳಷ್ಟೆ ಮುಖ್ಯವಾದ ಹಿನ್ನೆಲೆ. ಏಕಾಂಕವು ಸ್ವಲ್ಪಾವಧಿಯ ಪ್ರಯೋಗವಿದ್ದುದಕ್ಕಾಗಿ ಅದರ ಪ್ರತಿಯೊಂದು ಅಂಗವೂ ವಿಶಿಷ್ಟ ಸ್ವರೂಪವನ್ನು ತಾಳುವುದು. ಅದೇ ಕಾರಣಕ್ಕಾಗಿ ಇವೆಲ್ಲ ಅಂಗಗಳೂ ಯಾವ ಏಕಾಂಕದಲ್ಲೂ ಅಷ್ಟೆ ಮುಖ್ಯವಾಗಿರಲಾರವು. ಕಥೆಯ ಚಮತ್ಕೃತಿಯೆ ಮುಖ್ಯವಾದಲ್ಲಿ ಸಂಭಾಷಣೆಯ ಚಮತ್ಕೃತಿ ಕಡಮೆಯಾಗಬೇಕಾಗುವುದು. ಇಲ್ಲವಾದರೆ ಆ ಅಲ್ಪಾವಧಿಯಲ್ಲಿ ಯಾವುದೊಂದೂ ನಿರ್ದಿಷ್ಟ ಚಮತ್ಕೃತಿಯ ಪರಿಣಾಮ ಪ್ರೇಕ್ಷಕರ ಮೇಲಾಗಲಿಕ್ಕಿಲ್ಲ. ಅದರಂತೆಯೆ ಪಾತ್ರರಚನೆಯೆ ಮಹತ್ತ್ವದ್ದಾದಾಗ ರಂಗಯೋಜನೆ (stage-setting) ಹೆಚ್ಚು ಕಣ್ಣೊತ್ತುವಂತಿದ್ದರೆ ನಾಟಕಕಾರನ ಉದ್ದೇಶವೆ ನಿಷ್ಫಲವಾಗುವುದು. ಹೀಗಿದ್ದುದರಿಂದ ಸರ್ವಸಾಮಾನ್ಯವಾಗಿ ಏಕಾಂಕದಲ್ಲಿ ಯಾವುದೊಂದು ಅಂಗವು ತೀರ ಪ್ರಮುಖವಾಗಿರಬೇಕಾಗುವುದು, ಯಾವ ಅಂಗ ಪ್ರಮುಖವಿರಬೇಕೆಂಬುದು ನಾಟಕಕಾರನು ತನ್ನ ವಿಷಯವನ್ನು ನೋಡುವ ದೃಷ್ಟಿಯ ಮೇಲೆಯೇ ಅವಲಂಬಿಸಿದೆ. ಆದರೆ ಯಾವ ಅಂಗಪ್ರಮುಖವಿದ್ದರೂ ಪ್ರೇಕ್ಷಕರ ಮೇಲೆ ನಿರ್ದಿಷ್ಟಪರಿಣಾಮವಾಗುವುದು ಮೇಲ್ತರಗತಿಯ ಏಕಾಂಕದ ಲಕ್ಷಣ. ಏಕಾಂಕವನ್ನು ನೋಡುವುದು ಪ್ರೇಕ್ಷಕರ ದೃಷ್ಟಿಯಿಂದ; ಏಕಾಂಕವನ್ನು ನೋಡುವುದು ನಾಟಕ ಎಂಬ ದೃಷ್ಟಿಯಿಂದ. ಆದ್ದರಿಂದ ಅದರ 'ನಿರ್ದಿಷ್ಟ ಪರಿಣಾಮ' ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಯಾವುದೊಂದು ಏಕಾಂಕವನ್ನು ನೋಡಿದ ಪ್ರೇಕ್ಷಕರ ಮೇಲೆ ಅದೊಂದು ಚೆನ್ನಾದ ಕತೆ, ಅದೊಂದು ಸ್ಫೂರ್ತಿಭರಿತ ಕಾವ್ಯ, ಅದೊಂದು ಚಮತ್ಕೃತಿಯ ಸಂಭಾಷಣೆ, ಅದೊಂದು ಶೈಲಿಯ ಮಾದರಿ—ಹೀಗೆ ಪರಿಣಾಮವಾದರೆ, ನಾಟಕವನ್ನು ಬರೆದವನ ಇಚ್ಛೆ ಹಾಗೆಯೆ ಇದ್ದಲ್ಲಿ ಕೂಡ, ಅದು ಮೇಲ್ತರಗತಿಯ ಏಕಾಂಕ ಎಂದು ಎಂದಿಗೂ ಎನ್ನಿಸದು. ಆದರೆ ಕತೆ ಬಿತ್ತರಿಸಿದ ರೀತಿ, ಕಾವ್ಯದಿಂದ ಪ್ರಯೋಗಕ್ಕೆ ಬಂದ ಗಾಂಭೀರ್ಯ, ಸಂಭಾಷಣೆಯಿಂದ ಪಾತ್ರಗಳ ಇಲ್ಲವೆ ಕತೆಯ ಬೆಳವಣಿಗೆ, ಶೈಲಿಯಿಂದ ತಾತ್ಪೂರ್ತಿಕ ವಾಸ್ತವಿಕತೆಯ ಭಾಸ—ಹೀಗೆ ಪರಿಣಾಮವಾದರೆ ಅದು ಆ ಏಕಾಂಕದ ಗುಣವೆನ್ನಿಸುವುದು. ಮುಖ್ಯವಾಗಿ ಏಕಾಂಕವು ನಾಟಕ; ಅದರಲ್ಲಿರಬೇಕಾದುದು ನಾಟಕೀಯತೆ, ಕಾವ್ಯವಲ್ಲ, ಚಮತ್ಕೃತಿಯ ಶೈಲಿಸಂಭಾಷಣೆಗಳಲ್ಲ. ನಾಟಕೀಯತೆಗೆ ಭಂಗವನ್ನು ತರುವ ಒಳ್ಳೆಯ ಸಂಗತಿ ದೋಷವೆನ್ನಿಸುವುದು, ನಾಟಕೀಯತೆಗೆ ಪೋಷಕವಾಗುವ ಕ್ಷುಲ್ಲಕ ಸಂಗತಿ ಕೂಡ ಗುಣವೆನ್ನಿಸುವುದು.

೨

ಏಕಾಂಕದ ಇತಿಹಾಸಾತ್ಮಕ ವಿಮರ್ಶೆಯು ಈ ಪ್ರಬಂಧದ ವಿಷಯವಲ್ಲ. ಇಂದಿನ ಕನ್ನಡದಲ್ಲಿನ ಏಕಾಂಕಗಳನ್ನೆ ಮುಖ್ಯವಾಗಿ ಇಲ್ಲಿ ವಿಚಾರಿಸಬೇಕಾದುದು.

ಆದರೂ ನಮ್ಮ ಏಕಾಂಕಗಳ ಸ್ಥಾನಮಾನಗಳನ್ನು ತಿಳಿದುಕೊಳ್ಳಲು ಒಂದು ಅಳೆಗೋಲು ಬೇಕಲ್ಲವೆ? ಇದುವರೆಗಿನ ಚರ್ಚೆಯಿಂದ ಅಂತಹದೊಂದು ಅಳೆಗೋಲು ನಮಗೆ ದೊರೆತಿದೆ. ಆದ್ದರಿಂದ ಇನ್ನು ಮುಖ್ಯವಾದ ವಿಷಯವನ್ನು ಎತ್ತಿಕೊಳ್ಳೋಣ. ಸಾಹಿತ್ಯಪ್ರಪಂಚದಲ್ಲಿಯೇ ಏಕಾಂಕವು ತೀರ ಇತ್ತೀಚಿನ ಮಾದರಿ ಎಂದರೆ ಕನ್ನಡದಲ್ಲಂತೂ ಅದು ಕೇವಲ ಶೈಶವಾವಸ್ಥೆಯಲ್ಲಿ ಇದೆ ಎಂದು ಹೇಳಬಹುದು. ಕಳೆದ ಸುಮಾರು ೨೫ ವರುಷಗಳಿಂದ ಏಕಾಂಕವು ಕನ್ನಡದಲ್ಲಿ ತಲೆದೋರಿದ್ದರೂ ಅದಕ್ಕೆ ತನ್ನದೆ ಆದ ಒಂದು ತಂತ್ರವಿದೆ ಎಂಬ ಕಲ್ಪನೆ ತೀರ ಮೊನ್ನೆನಿಂದ ನಮಗೆ ತಿಳಿದುಬಂದಿದೆ ಎಂದು ಹೇಳಬಹುದು. ಪ್ರಾರಂಭದಲ್ಲಿ ಇದೊಂದು ಹೊಸ ಕಲಾತ್ಮಕ ಮಾದರಿ ಎಂದು ಅರಿಯದೆಯೆ ಉತ್ತಮ ಏಕಾಂಕಗಳನ್ನು ಬರೆದ ನಾಟಕಕರ್ತರಿದ್ದರೆ ಇಂದು ಆ ಜ್ಞಾನವಿದ್ದೂ ನಿಸ್ಸತ್ವ ಏಕಾಂಕಗಳನ್ನು ಬರೆಯುವ ನಾಟಕಕರ್ತರಿದ್ದಾರೆ. ಈ ಸಂಗತಿಯೆ ನಮ್ಮ ಏಕಾಂಕದ ಶೈಶವಾವಸ್ಥೆಯ ದ್ಯೋತಕ. ಶ್ರೀ ಕೈಲಾಸಂರವರ **ಟೊಳ್ಳುಗಟ್ಟಿ**ಯಿಂದ ಪ್ರಾರಂಭವಾದ ನಮ್ಮ ಏಕಾಂಕದ ಇತಿಹಾಸದಲ್ಲಿ ಇನ್ನೂ ಗಟ್ಟಿಗಿಂತ ಟೊಳ್ಳುಮಾದರಿಗಳೆ ಹೆಚ್ಚಾಗಿವೆ—ಸಂಖ್ಯೆಯಿಂದ; ಅಂಬಿಕಾತನಯದತ್ತರ **ಗೋಲ್** ಎಂಬ ದೃಶ್ಯದಿಂದ ಉತ್ತರಕರ್ನಾಟಕದಲ್ಲಿ ತಲೆ ಎತ್ತಿದ್ದರೂ ನಾವಿನ್ನೂ ಏಕಾಂಕಕಲೆಯ ಗೋಲ್‌ಇನಿಂದ ದೂರದಲ್ಲಿಯೇ ಇದ್ದೇವೆ. ಆದರೆ ಇದೊಂದು ಮಾತಿಗೆ ಅಸಮಾಧಾನಪಡಬೇಕಾಗಿಲ್ಲ. ಸಂಖ್ಯೆಯಿಂದ ಟೊಳ್ಳು ಹೆಚ್ಚಿದ್ದರೂ ಗುಣದಿಂದ ಗಟ್ಟಿ ಬೆಳೆಯುತ್ತಲಿದೆ. ಕೈಲಾಸಂರವರ ಸಾಹಸದಲ್ಲಿ ಇಂದು ಶ್ರೀರಂಗರೂ, ಕಾರಂತರೂ, ಅ. ನ. ಕೃಷ್ಣರಾಯರೂ ಪಾಲುಗಾರರಾಗಿ ಏಕಾಂಕಕಲೆಯ ಮಟ್ಟನ್ನು ಮೇಲೇರಿಸಿದ್ದಾರೆ. ಹೊಸಬರಲ್ಲೂ ಎನ್. ಕೆ. ಕುಲಕರ್ಣಿ ಮೊದಲಾದವರು ಮುಂದೆ ಬರುತ್ತಿರುವುದು ಕನ್ನಡ ಏಕಾಂಕದ ಭವಿತವ್ಯತೆಯ ಸುಚಿಹ್ನವಾಗಿದೆ. ಮುಖ್ಯವಾಗಿ, ಉಳಿದೆಲ್ಲ ಸಾಹಿತ್ಯಮಾದರಿಗಳಿಗಿಂತ ಕನ್ನಡ ಏಕಾಂಕದ ವ್ಯಾಪಕತೆಯು ಇಡಿಯ ಜೀವನವನ್ನೆ ತುಂಬಿ ಹರಡಿಕೊಂಡಿದೆ. ಟೊಳ್ಳುಗಟ್ಟಿ, ಹನ್ನೊಂದುವರೆ, ಸರ್ಕಸಿನ ಸರಸ್ವತಿ, ಅದ್ಭುತಶಿಕ್ಷಣ, ಬಿ. ಟಿ. ಬುದ್ಧಿವಂತ—ಇವು ಶಿಕ್ಷಣಪದ್ಧತಿಗೆ ಸಂಬಂಧಿಸಿವೆ; ತ್ಯಾಂಪಣ್ಣನ ಹಣೆಬರೆಹ, ಕಟ್ಟೆಯ ಪುರಾಣ, ಪೂರ್ವರಂಗ, ಆದದ್ದೇನು, ಯಾರೋ ಅಂದರು—ಮುಂತಾದುವುಗಳು ಹಳ್ಳಿಯ ಸಾಂಪ್ರದಾಯಿಕ ಅಜ್ಞಾನಜೀವನವನ್ನು ಕುರಿತಿವೆ. ಅಮ್ಮಾವ್ರ ಗಂಡ, ಹೆಣ್ಣಿನ ತೊಡಕು, ಹೆರಿಗೆಯ ಹಿಟ್ಲರ್, ಅಶ್ವಮೇಧ—ಇವುಗಳಲ್ಲಿ ಸಮಾಜದಲ್ಲಿ ಹೆಣ್ಣಿನ ಸಮಸ್ಯೆಗಳನ್ನು ಕಾಣಬಹುದು; ಗಂಡಸ್ಕತ್ರಿ, ಬಹಿಷ್ಕಾರ, ತುಳಸಿ, ಅಹಲ್ಯೋದ್ಧಾರ, ನಾಲ್ಕನೆಯ ಪಿಶಾಚಿ, ಕಲ್ಕಿ—ಇವು ಇಂದಿನ ಜೀವನದಿಂದ ಉದ್ಭೂತವಾದ ಕೆಲವೊಂದು ಸಾಮಾಜಿಕ ಸಮಸ್ಯೆಗಳನ್ನು ಎತ್ತಿ

ಹಿಡಿಯುತ್ತವೆ; ಬಾರ್‌ರೂಮು, ತ್ರಿಶೂಲ, ನನ್ನದಲ್ಲ, ಶರಪಂಜರ, ಕಟ್ಟೆಯಪುರಾಣ—ಇವುಗಳಲ್ಲಿ ಸುಶಿಕ್ಷಿತರ ನಿರುದ್ಯೋಗ ಸಮಸ್ಯೆ ಇದೆ; ನಾರದಗರ್ವಭಂಗ, ಬಣ್ಣದ ಬೀಸಣಿಗೆ, ಸಂಪುಷ್ಟ ರಾಮಾಯಣ, ಉತ್ತರರಂಗ, ನಿರುತ್ತರಕುಮಾರ—ಮೊದಲಾದುವು ಕಲಾಜೀವನವನ್ನು ವಿಮರ್ಶಿಸುತ್ತಿವೆ. ಹೋಂರೂಲು, ಪ್ರಪಂಚಪ್ರವಾಹ—ಇಂತಹವುಗಳಲ್ಲಿ ಸಂಸಾರದ ಕೆಲ ಚಿರಂತನ ಸಮಸ್ಯೆಗಳಿವೆ; ಶ್ರೀರಂಗರ ದೀಪೋತ್ಸವ, ನಿರಾಹಾರ (ಸಂಗ್ರಹ) ಇವುಗಳಲ್ಲಿ ಬಡತನ ಬರಗಾಲಗಳ ಚಿತ್ರವಿದೆ. ಮೇಲೆ ಹೇಳಿದಂತೆ ಜೀವನದ ವಿವಿಧ ವಿಮರ್ಶೆಯಲ್ಲಿ ಕನ್ನಡ ಏಕಾಂಕವು ಕತೆಕಾದಂಬರಿಗಳನ್ನು ಕೂಡ ಮೀರಿಸಿದೆ. ಒಂದು ದೃಷ್ಟಿಯಿಂದ, ಜೀವನದ ವಿಮರ್ಶೆಗಾಗಿ ಲೇಖಕರು ಇತ್ತಿತ್ತಲಾಗಿ ಏಕಾಂಕ ಮಾದರಿಯನ್ನೆ ಹೆಚ್ಚಾಗಿ ಅವಲಂಬಿಸುತ್ತಿದ್ದಾರೆಂದು—ಪ್ರತಿ ತಿಂಗಳು ಪತ್ರಿಕೆಗಳಲ್ಲಿ ಪ್ರಕಟವಾಗುವ ಏಕಾಂಕಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು—ಧೈರ್ಯವಾಗಿ ಹೇಳಬಹುದು. ಏಕಾಂಕಮಾದರಿಯ ಈ ಲೋಕಪ್ರಿಯತೆಯೆ ಅದರ ಪ್ರಗತಿಗೆ ಮುಳುವಾಗಿದೆ. ಯಾಕೆಂದರೆ, ಇಂದು ಏಕಾಂಕಗಳನ್ನು ಬರೆಯುವವರ ಸಂಖ್ಯೆ ಹೆಚ್ಚುತ್ತಲಿದ್ದರೂ ಅದರ ಕಲಾತ್ಮಕ ತಂತ್ರತೆ ಆ ಪ್ರಮಾಣದಲ್ಲಿ ಕಳೆಗೊಂಡಿಲ್ಲ, ಆ ತಂತ್ರವನ್ನು ಅರಿತವರ ಸಂಖ್ಯೆಯೂ ಬೆಳೆಯುತ್ತಿಲ್ಲ. ಮತ್ತೆ ಮತ್ತೆ ಕೈಲಾಸಂ, ಶ್ರೀರಂಗ, ಕಾರಂತ, ಅ.ನ.ಕೃ—ಇವೇ ನಾಲ್ಕಾರು ಹೆಸರುಗಳನ್ನು ಹೇಳಬೇಕು; ಇವರೆಲ್ಲರೂ ೧೦-೧೫ ವರ್ಷದ ಹಿಂದಿನ ಲೇಖಕರು! ಪ್ರತಿಯೊಂದು ಪೀಳಿಗೆಯಲ್ಲೂ ಕಲಾವಿದ ನಾಟಕಕಾರನಿರಬೇಕೆಂಬ ಹಟವೂ ಇಲ್ಲ, ನಿಯಮವೂ ಇಲ್ಲ, ನಿಜ. ಆದರೆ ಪ್ರಗತಿಯ ಮಾತನ್ನೆತ್ತಿದಾಗ ಮಾತ್ರ ಪೀಳಿಗೆಯಿಂದ ಪೀಳಿಗೆಗೆ ಬೆಳವಣಿಗೆಯನ್ನಪೇಕ್ಷಿಸುವುದು ಸಹಜ. ಒಂದು ಮಾತನ್ನು ಮಾತ್ರ ಸಮಾಧಾನ ತಂದುಕೊಳ್ಳಲಿಕ್ಕೆಂದಾದರೂ ಹೇಳಬಹುದು. ಹೇಳಬಹುದಾದ ಹೆಸರುಗಳು ನಾಲ್ಕಾರೆನಿಸಿದರೂ ಅವರ ಕಲೆಯ ಮಟ್ಟು ಮೇಲ್ತರಗತಿಯದಿದೆ, ಮಿಕ್ಕ ಸಾಹಿತ್ಯಗಳ ಏಕಾಂಕಕಲೆಯೆದುರು ತಲೆ ಎತ್ತಿ ನಿಲ್ಲುವಂತಹದಿದೆ.

ಏಕಾಂಕಕ್ಕೊಂದು ವಿಶಿಷ್ಟವಾದ ತಂತ್ರವಿದೆ ಎಂದು ಪ್ರಾರಂಭದಲ್ಲಿಯೇ ಹೇಳಿದೆ. ಆ ತಂತ್ರವು ಕನ್ನಡ ಏಕಾಂಕಗಳಲ್ಲಿ ಹೇಗೆ ರೂಪುಗೊಂಡಿದೆ ಎಂಬುದಿಷ್ಟೆ ಇನ್ನುಳಿದ ಪ್ರಬಂಧದ ವಿಷಯ.

೩

ಕನ್ನಡದಲ್ಲಿ ಈ ಹೊಸತಂತ್ರದ ಸೂತ್ರಧಾರನೆಂದರೆ ಟೊಳ್ಳುಗಟ್ಟಿಯ ಗುಂಡೂರಾಯ. 'ಸುತ್ಮುತ್ತು ನಡಿಯೋ ಜನಗ್ಳೂ . . . ಅವ್ರ ಭಾವನೆಸಂಭಾಷ್ಣೆಗಳ್ಳೂ . . . ಅವ್ರ ಕಷ್ಟಸುಖಗ್ಳೂ . . . ಇವುಗಳ್ನೆಲ್ಲಾ ಪಟ್ಟಾಗ್ಹಿಡ್ಕೊಂಡು . . .

ಯಳ್ಕೊಂಡ್ಬಂದು . . . ರಂಗಸ್ಥಳಕ್ಕೆ—ಬಹಿರಂಗಸ್ತ್ಳಾ! ಸುಬ್ಬೂ!—ನಾನು ಲೆಕ್ಚ್ರಲ್ಲಿ ಏನೇನು ಬಗುಳ್ಬೇಕೂ ಅಂತಿದ್ನೋ ಅದ್ನೆಲ್ಲಾ ಇವ್ರ ಬಾಯಿಂದ ಬಗುಳಿಸಿ ಬಿಟ್ಟಿದ್ದೇನೆ . . .' ಈ ಮಾತಿನಲ್ಲಿ ಗುಂಡೂರಾಯನು ಚಿಕ್ಕನಾಟಕದ ಪಕ್ಷ ಪ್ರತಿ ಪಕ್ಷಗಳನ್ನು ಮಂಡಿಸಿದ್ದಾನೆ. ತಂತ್ರವನ್ನು ತಿಳಿಯದವರು ಇಂತಹ ನಾಟಕಕ್ಕೂ ಉಪನ್ಯಾಸಕ್ಕೂ ಇದ್ದ ವ್ಯತ್ಯಾಸವನ್ನು ಅರಿಯದೆ ಹೋಗಬಹುದು. ಆದರೆ ವ್ಯತ್ಯಾಸ ವಿದೆ ಎಂಬುದನ್ನರಿತ ಗುಂಡೂರಾಯ (=ಕೈಲಾಸಂ) ನಿಗೆ 'ಈ ಲೆಕ್ಚ್ರ ಮಾತು ಕಿವಿಗೆ ಹಾಕ್ಕೊಳ್ಳೋ ಕ್ರಿಮಿಗಳೇ ಇಲ್ಲ'ವಾದರೂ 'ಇದು ಲೆಕ್ಚ್ರೆಂಬೋ ಗುಟ್ಟು ತಿಳಿದ್ರೂ ಕೂಡಾ . . . ಕೊನೇವರ್ಗೂ ಕುಕ್ಕರ್ಸ್ಕೊಕ್ಕಾರೆ' ಎಂಬ ಆತ್ಮವಿಶ್ವಾಸವಿದೆ. ಉಪನ್ಯಾಸಕ್ಕೆ ಸಾಲುವ ಅವಧಿಯಷ್ಟರಲ್ಲಿಯೇ ಅದೇ ವಿಷಯವನ್ನು ಏಕಾಂಕರೂಪದಲ್ಲಿ ನೋಡಲು ಜನರಿಗೆ ತಾಳ್ಮೆ ಇದೆ ಎಂದ ಮೇಲೆ ಜನರ ಮನಸ್ಸನ್ನು ಹಿಡಿಯುವ ಯಾವುದೊ ಒಂದು ಮಂತ್ರಶಕ್ತಿ ಏಕಾಂಕಕ್ಕಿದೆ ಎಂದಂತಾಗಲಿಲ್ಲವೆ?

ಕೈಲಾಸಂ ಅವರ ಒಂದು ಚಿಕ್ಕ ದೃಶ್ಯವನ್ನೆ ನೋಡೋಣ. ಈ ದೃಶ್ಯದಲ್ಲಿ ಮೂರು ಪಾತ್ರಗಳು (ಎರಡೇ ವಾಕ್ಯಗಳನ್ನು ಹೇಳುವ ಬೋರನನ್ನು ಬಿಟ್ಟು); **ಈತ** (ಅಶ್ವತ್ಥನಾರಾಯಣ), **ಈತನ ಸಹಪಾಠಿ** (ರಂಗಣ್ಣ) ಮತ್ತು **ಈಕೆ** (ಇವರಿಬ್ಬ ರಾಕೆ). 'ವ್ಯಕ್ತಿ ಸಮಾಜದ ಸುಖಕ್ಕೇ ಹೊರತು, ಸಮಾಜ ವ್ಯಕ್ತಿ ಸುಖಕ್ಕಲ್ಲ' ಎಂಬುದೆ ಈ ದೃಶ್ಯದಲ್ಲಿಯ 'ಲೆಕ್ಚ್ರ'ನ ವಿಷಯ. ಇಂತಹ ದೊಡ್ಡ ವಿಷಯವನ್ನು ಕೇವಲ ಇಪ್ಪತ್ತುನಿಮಿಷಗಳ ಪ್ರಯೋಗದ ದೃಶ್ಯದಲ್ಲಿ ಪ್ರೇಕ್ಷಕರ ಮನದಟ್ಟಾಗುವಂತೆ ತೋರಿಸಿದ್ದು ಹೇಗೆ? ದೃಶ್ಯದ ಪ್ರಾರಂಭವನ್ನು ನೋಡೋಣ. ಮೊದಲ ರಂಗ ಸೂಚಿಯಲ್ಲಿಯೆ 'ಔಷಧಿಯ ಸೀಸೆಯನ್ನು ಕೈಯಲ್ಲಿ ಹಿಡಿದು ಬೋರನು ಆಗ ತಾನೇ ಒಳಗೆ ಬರುವನು; ಎಂದರೆ 'ಔಷಧಿಯ ಸೀಸೆ ಎಲ್ಲ ಪ್ರೇಕ್ಷಕರ ಕಣ್ಣೆದುರು ಸುಳಿಯುವುದು. ಆದರೂ **ಈಕೆ** ತನ್ನ ಮೊದಲ ಭಾಷಣದಲ್ಲಿಯೆ 'ಔಷಧಿ ತಂದೆಯಾ?' ಎನ್ನುವಳು. ಇದರಿಂದ ಔಷಧಿಗೆ ಇಲ್ಲಿ ಏನೊ ವಿಶಿಷ್ಟ ಮಹತ್ತ್ವವಿದೆ ಎಂದು ಪ್ರೇಕ್ಷಕರಿಗೆ ತಿಳಿಯುವುದು. ಮುಂದೆ **ಈಕೆ** 'ಚಿಕ್ಕರಾಯರಿಗೆ ಕೆಮ್ಮು ಜಾಸ್ತಿ ಆಗಿದೆ. . . ನಾರಾಣಪ್ಪನಿಗೆ ಹೇಳು, ರಾಯರು ಬರೋ ಹೊತ್ತಾಯ್ತು' ಎನ್ನುವಳು. ಮೊದಲ ದೃಶ್ಯ ಇಲ್ಲಿಗೆ ಮುಗಿಯಿತು. ಮೂರು ಮಾತುಗಳ ಈ ದೃಶ್ಯವು ತಟ್ಟನೆ ಪ್ರೇಕ್ಷಕರ ಅಂತರಂಗದಲ್ಲಿ ಒಂದು ವಾತಾವರಣವನ್ನು ಮೂಡಿಸು ವುದು. ಏನೊ ಒಂದು ಅನಿಷ್ಟ ಇಲ್ಲಿ ಘಟಿಸಬಹುದೆ? ಮುಂದೆ ಜರುಗುವ ಘಟನೆ ಯನ್ನು ಪ್ರೇಕ್ಷಕರು ನಂಬುವುದಾದರೆ ಈ ಮೊದಲ ವಾತಾವರಣ ಅತ್ಯವಶ್ಯ. ಯಾಕೆಂದರೆ ಅಶ್ವತ್ಥನ ಹುಡುಗ ಸಾಯಲಾಗಿದ್ದಿಲ್ಲವೆಂದರೆ ರಂಗಣ್ಣನ ನಾಟಕಕ್ಕೆ—

ಈಕೆಯ ದೃಷ್ಟಿಯಿಂದಲೂ—ಮಹತ್ತ್ವವೆ ಇರುತ್ತಿರಲಿಲ್ಲ. ದೃಶ್ಯವು ಎಷ್ಟು ಚಿಕ್ಕದಾಗಿರುವುದೊ ಅಷ್ಟು ಪ್ರಾರಂಭವು ಕಲಾಕಲ್ಪಕವಾಗಿರಬೇಕು. ದೊಡ್ಡ ನಾಟಕದಂತೆ ವಾತಾವರಣವನ್ನು ಕಲ್ಪಿಸಲು ಇಲ್ಲಿ ಅವಕಾಶವಿಲ್ಲ. ವಾತಾವರಣವನ್ನು ಕಲ್ಪಿಸದಿದ್ದರೆ ದೃಶ್ಯದೊಳಗಿನ ಘಟನೆ (action) ಪರಿಣಾಮಕಾರಕವಾಗದು.

ಏಕಾಂಕದ ತಂತ್ರದಲ್ಲಿ ಪ್ರಾರಂಭಕ್ಕೆ ಎಷ್ಟು ಮಹತ್ತ್ವವಿದೆ ಎಂಬುದು ಮೇಲಿನ ದೃಷ್ಟಾಂತದಿಂದ ಸ್ಪಷ್ಟವಾಗುವುದು. ವಾತಾವರಣವನ್ನು ಪ್ರಾರಂಭದಲ್ಲಿಯೆ ಕಲ್ಪಿಸುವ ದೃಷ್ಟಿಯಿಂದ ಶ್ರೀರಂಗರ ಎರಡು ಏಕಾಂಕಗಳ ಪಾರಂಭವನ್ನು ನೋಡಬಹುದು. 'ಒಂದು ಬಯಲು. ತಗ್ಗು—ದಿನ್ನೆಗಳು ಒಂದಕ್ಕೊಂದು ಹೆಣೆದುಕೊಂಡಂತೆ ಸಾಲು-ಸಾಲಾಗಿ ನಿಂತಿವೆ . . .' ತೆರೆ ಎದ್ದ ಮೇಲೆ ಈ ನೋಟವು ಪ್ರೇಕ್ಷಕರ ಕಣ್ಣೊತ್ತುವುದು. ಬಯಲು— ತುದಿ ಮೊದಲ್ಗಳಿಲ್ಲ; ಸಾಲುಸಾಲಾದ ತಗ್ಗು-ದಿನ್ನೆ—ಕೊನೆಯಿಲ್ಲದ ಏರಿಳಿತ. ಈ ನೋಟವನ್ನು ಹೆಚ್ಚೆಚ್ಚು ನೋಡಿದಂತೆ ಮಾನವನ ಸಂಸಾರಯಾತ್ರೆಯ ನೆನಪಿನಿಂದ ಕನಿಕರ ಮೂಡುವುದು, ಪ್ರೇಕ್ಷಕರ ಹೃದಯದಲ್ಲಿ. ಮದುವೆಗೆ ಬಂದ ಮಗಳಿಗಾಗಿ ವರನನ್ನು ಹುಡುಕಿ ಹಣ್ಣಾದ ತಂದೆಯ 'ಅಶ್ವಮೇಧ'ದ ಪ್ರಾರಂಭವಿದು. ಅದರಂತೆಯೆ ಇನ್ನೊಂದು ದೃಶ್ಯದ ಪ್ರಾರಂಭದಲ್ಲಿ ಹೀಗಿದೆ:—'. . . ಮೇಜಿನ ಮೇಲೆ ಕಾಣುವ ಗಡಿಯಾರದ ಟಿಕ್‌ಟಿಕ್ ಸದ್ದು ಒಂದೇ ಸವನೆ ಕೇಳಬರುತ್ತಿದೆ, ಅಷ್ಟೊಂದು ಶಾಂತತೆ ಹರಡಿದೆ ಕೋಣೆಯಲ್ಲಿ. ಕಿಟಿಕಿಗಳಿಲ್ಲ—ಬಾಗಿಲು ಇರಲೇಬೇಕು . . . ಅಷ್ಟೊಂದು ಕತ್ತಲೆ . . . ಮಾಳಿಗೆಯಿಂದ ಮಂದವಾಗಿ ಸೂಸುವ ಪ್ರಕಾಶವು . . .' ಈ ನಿಶ್ಶಬ್ದತೆ, ಈ ಕತ್ತಲೆ—ನಡುವೆ ಒಂದೇ ಒಂದು ಮಂದವಾದ ಪ್ರಕಾಶದ ಸೂಸುಧಾರೆ. ಅನುಭವದ ಪಿಶಾಚವನ್ನು ಕಾಣುವ ಮುದುಕನ 'ಶರಪಂಜರ'ದ ಸಿದ್ಧತೆ ಇದು. ಕೇವಲ ರಂಗಯೋಜನೆಯಿಂದಲೇ ವಾತಾವರಣವನ್ನು ಕಲ್ಪಿಸಬೇಕೆಂದಲ್ಲ. . . ಉದಾಹರಣೆಗಾಗಿ, 'ಅಯ್ಯೊ ಹೆಣೆಯುಬರಹವೆ!' ಎಂದು ತಲೆ ಹಿಡಿದುಕೊಂಡೆ ಮಾತನಾಡುತ್ತ ಪ್ರವೇಶಿಸುವ ಕಾರಂತರ ತ್ಯಾಂಪಣ್ಣ. ರಂಗಯೋಜನೆಯಿಂದೇ ಆಗಲಿ, ಮಾತಿನಿಂದೇ ಆಗಲಿ—ಯಾವರೀತಿಯಿಂದಾದರೂ ಪ್ರಾರಂಭಕ್ಕಯೆ ಪ್ರೇಕ್ಷಕರನ್ನು ನೇರವಾಗಿ ದೃಶ್ಯದ ವಾತಾವರಣದಲ್ಲಿ ತಂದಿಡುವುದು ಏಕಾಂಕಕ್ಕೆ ಅಗತ್ಯ. ಈ ತರಹವಲ್ಲದ ಪ್ರಾರಂಭವು ಅನಾವಶ್ಯಕವಾಗುವುದು, ಇಲ್ಲವೆ ಇಡಿಯ ದೃಶ್ಯದ ಪರಿಣಾಮಕ್ಕೆ ಕುಂದನ್ನು ತರುವುದು. "ಸೇತು 'ಪೇಟಿ' ಪ್ರಾಕ್ಟಿಸ್ ಮಾಡುತ್ತಿದ್ದಾಳೆ, ತಮ್ಮ ಮನೆಯ ನಡುಮನೆಯಲ್ಲಿ" ಬಾರಿಸುವ ಭರದಲ್ಲಿ ಒಳಗಿನಿಂದ ಅಜ್ಜಿ ಕೂಗುವುದು ಕಿವಿಗೆ ಬೀಳುವುದಿಲ್ಲ. 'ಯಾಕ ಕತ್ತೆ! ಕಿವಿ ಅಂಬೋವು ಸೇದಿಹೋದವೇನು?' ಎಂದು ಜೋರಿನಿಂದ ಕಿರಿಚಿಕೊಳ್ಳುವ

ಶಬ್ದವು ಒಮ್ಮೆಲೆ ಕಿವಿಗೆ ಬಂದು ಅಪ್ಪಳಿಸಲು . . . ಆದರೆ ಸೇತು 'ಪೇಟಿ' ಭರದಿಂದ ಬಾರಿಸುತ್ತಿದ್ದರೆ ಅಜ್ಜಿಯ ಕೂಗು ಪ್ರೇಕ್ಷಕರಿಗೂ ಕೇಳಬರುವುದಿಲ್ಲವಲ್ಲ ! ಇದರಿಂದ ಅಜ್ಜಿಯ ಸ್ವಭಾವಚಿತ್ರವು ಪ್ರೇಕ್ಷಕರ ಮೇಲೆ ಸರಿಯಾಗಿ ಮೂಡೀತೆ? ಒಮ್ಮೊಮ್ಮೆ ಅಶಕ್ಯವಾದ ಇಲ್ಲವೆ ಕಣ್ಣೊತ್ತದ ರೀತಿಯಲ್ಲಿ ದೃಶ್ಯವನ್ನು ಪ್ರಾರಂಭಿಸಿದ್ದು ಕಂಡುಬರುವುದು. 'ಕಾಲೇಜಿನ ವರಾಂಡಾದ ಒಂದು ಕಂಬಕ್ಕೆ ಆತು ನಿಂತು ಮಿ|| ಶೀಗೀಹಳ್ಳಿ ಯಾವುದೊ ಒಂದು ಪತ್ರವನ್ನು ಓದುತ್ತ, ಹರ್ಷ ಆಶ್ಚರ್ಯ ಗಾಂಭೀರ್ಯಗಳನ್ನೂ ಹಾಗೂ ಕೊನೆಗೊಂದು ಹುಚ್ಚುನಗೆಯನ್ನೂ ಪ್ರಕಟಿಸುತ್ತಿರುವನು. ಆಚೆಗೆ ಕಾಲೇಜಿನ ನೋಟೀಸು ಬೋರ್ಡ ನೋಡುತ್ತ ನಿಂತ ಸಂಗನ ಗೌಡರು . . .' **ಮಿಸ್ ಚಾರುಗಾತ್ರಿ** ಯಲ್ಲಿಯ ಈ ವಾಕ್ಯಗಳನ್ನೋದಿ **ಕೃಷ್ಣಕುಮಾರರು** ಭಾವನೆಗಳನ್ನು ಬಣ್ಣಿಸಬಲ್ಲರೆಂದು ಹೇಳಬಹುದು. ಆದರೆ ಶೀಗೀಹಳ್ಳಿಯಾದ ನಟನ ಗತಿ ಏನು ಈ ರೀತಿ ತನ್ನ ನಾಟ್ಯವನ್ನು ಪ್ರಾರಂಭಿಸುವುದಾದರೆ ! ಒಂದುವೇಳೆ ಅವನು ಹರ್ಷ-ಆಶ್ಚರ್ಯ-ಗಾಂಭೀರ್ಯ-ಹುಚ್ಚುನಗೆಗಳನ್ನು ಪ್ರೇಕ್ಷಕರಿಗೆ ವಿಂಗಡವಾಗುವಂತೆ ನಟಿಸಬಲ್ಲನೆನ್ನೋಣ; ಆದರೆ ಪ್ರಾರಂಭಕ್ಕೆಯೆ ರಂಗಸ್ಥಲದ ಮೇಲೆ ಇನ್ನೂ ಒಂದು ಪಾತ್ರವಿದ್ದುದರಿಂದ ಎಲ್ಲ ಪ್ರೇಕ್ಷಕರು ಶೀಗೀಹಳ್ಳಿಯ ಭಾವನಾಪ್ರದರ್ಶನ ಶಕ್ತಿಯನ್ನು ನೋಡಲಿಕ್ಕಿಲ್ಲ. ಮಿಕ್ಕ ಎಲ್ಲ ದೃಷ್ಟಿಗಳಿಂದಲೂ ಏಕಾಂಕವು ಮೇಲ್ತರಗತಿಯದೆಂದೆನ್ನಿಸುವಂತಹದಿದ್ದರೂ ಆದರ ಪ್ರಾರಂಭವು ಸಮರ್ಪಕವಿರದಿದ್ದರೆ ಪರಿಣಾಮಕ್ಕೆ ಕುಂದುಬರಬಹುದಾಗಿದೆ.

೪

ಪ್ರಾರಂಭವಾದೊಡನೆ ಪಾತ್ರಗಳ ಇಲ್ಲವೆ ಕತೆಯ ಪರಿಚಯ ಪ್ರೇಕ್ಷಕರಿಗೆ ವಿಲಂಬವಿಲ್ಲದೆ ಆಗಬೇಕಾಗುವುದು. ಇದಕಾಗಿ ಪಾತ್ರಸೃಷ್ಟಿಯ ಇಲ್ಲವೆ ನೇರವಾಗಿ—ಆದರೂ ಸಹಜವೆನ್ನಿಸುವಂತೆ—ಕತೆಯ ವಿಷಯವನ್ನು ಮಂಡಿಸುವ ಶಕ್ತಿ ಅವಶ್ಯವಾಗಿ ಬೇಕು. ಗಂಡಸ್ಕತ್ರಿಯಲ್ಲಿ ಅಶ್ವತ್ಥನಾರಾಯಣನು ಲಾಯರಿ (ವಕೀಲ), ರಂಗಣ್ಣನು ನಟ. ಪ್ರಯೋಗ ಪ್ರಾರಂಭವಾದ ಐದು ನಿಮಿಷಗಳ ಒಳಗಾಗಿ 'ಹುಟ್ಟಿದಾರಭ್ಯ ನನ್ನ ರಕ್ತದಲ್ಲಿ ತುಂಬ್ಕಾತ್ತ ತುಳುಕ್ತಾತ್ತ ನನ್ನ ಮಿದುಳ್ಗೆ ಹತ್ತಿದ ನಾಟಕದ ಹುಚ್ಚಿಗೆ ಬಲಿಯಾಗಿ;' 'ನಿನ್ನ ಕಾಲೇಜ ಲೈಫ್ ಎಲ್ಲಾ ಲೈಬ್ರೇರೀಲಿ, ನಂದು ಫುಟಬಾಲ್ ಫೀಲ್ಡಿನಲ್ಲಿ' ಎಂದು ರಂಗಣ್ಣನು ಸಂದರ್ಭಾನುಸಾರವಾಗಿ ಹೇಳಿಬಿಡುತ್ತಾನೆ. ಇದನ್ನರಿತ ಪ್ರೇಕ್ಷಕರಿಗೆ ಮುಂದೆ ರಂಗಣ್ಣನು ನಾಟಕದ plot ದಿಂದ ತುಳುಕುತ್ತ rehearsal ಮಾಡುವುದಾಗಲಿ, ಲೈಬ್ರೇರೀಲಿ ಲೈಫ್ ಕಳೆದ ಅಶ್ವತ್ಥನಾರಾಯಣ 'ಹೌದು, ನಿಮ್ಮ ನಾಟಕದಲ್ಲಿದೇ correct solutionoo ! . . . ಸಮಾಜ ಜೀವನದಲ್ಲಿ

. . . incorrectoo' ಎಂದು ಪ್ರಾರಂಭಿಸಿ ತುಸು ದೀರ್ಘವಾದ ಭಾಷಣದಲ್ಲಿ 'ವ್ಯಕ್ತಿ ಸಮಾಜದ ಸುಖಕ್ಕೇ ಹೊರತು ಸಮಾಜ ವ್ಯಕ್ತಿ ಸುಖಕ್ಕಲ್ಲ' ಎಂದು ಹೇಳುವುದು ಉಪನ್ಯಾಸವೆನ್ನಿಸದೆ ನಾಟಕೀಯ ಭಾಷಣವೆನಿಸುವುದು. ಅದರಂತೆಯೆ **ಈಕೆಯಚಿತ್ರ.** ತೆರೆ ಎದ್ದಾಗ ಮೇಜಿನ ಮೇಲಿನ ಪುಸ್ತಕ ಪತ್ರಿಕೆಗಳ ಮೇಲೆ ಕೈಯಾಡಿಸುತ್ತಿರುವಳು. 'ದೇವೇರಿಗೆ ಹೇಳು . . . ಧೂಳಿಲ್ದೆ ತಿರುಗಿ ಇಡ್ದಿದ್ರೆ ಮೊದಲ ತಾರೀಕು ಸಂಬಳಕ್ಕೆ ಬರಬೇಡ ಅಂತ . . . ಔಷಧಿ ತಂದೆಯ? ಚಿಕ್ಕ ರಾಯ್ರಿಗೆ ಕೆಮ್ಮು ಜಾಸ್ತಿ . . . ಅರ್ಧ ರಾತ್ರೀಲಿ ಪೊಲ್ಟೀಸಿಗೆ ಸ್ಟೌವ್ ಹಚ್ಚಬೇಕಾಗತ್ಯೋ—ನಿದ್ದೆ ಹೋಗ್ಬೇಡ—ನಾರಾಣಪ್ನಗ ಹೇಳು . . .' ಅಬ್ಬ! ಎಂತಹ ಹೆಂಗಸು! ಕರುಳಿಲ್ಲ, ಯಂತ್ರದಂತಿದ್ದಾಳೆ! ಅಧಿಕಾರ ಪ್ರಿಯಳು, ಸಂಸಾರಿಣಿಯಲ್ಲ! . . . ಸಾಕು. ಆ ಮೇಲೆ ರಂಗಣ್ಣನೊಬ್ಬನೇ ಇದ್ದಾಗ ಬಂದು, ಯಾವುದೂ ಪ್ರಸ್ತಾಪವಿಲ್ಲದೆ 'ಈಗೇನ್ಮಾಡ್ತೀರಿ, ಹೇಳಿಯೆ ಬಿಡ್ತೀರಾ' ಎಂದು ಈಕೆ ಮಾತನಾಡುವುದು ನಮಗೆ ಅಸಹಜವೆನ್ನಿಸುವುದಿಲ್ಲ. ಕೈಲಾಸಂ ಅವರ **ಅಮ್ಮಾವ್ರ ಗಂಡ**ದ ಪ್ರಾರಂಭವೂ ವಾತಾವರಣವನ್ನು ಹುಟ್ಟಿಸುವುದು, ಸ್ವಭಾವಚಿತ್ರವನ್ನು ಕೊಡುವುದು, ಎಲ್ಲವೂ ನಾಲ್ಕೇ ಸಾಲುಗಳಲ್ಲಿ. 'ಗಂಡ (rocking the cradle and meekly) . . . ಅಮ್ಮಾವ್ರು (rocking the chair and smugly).' ಇಲ್ಲಿದೆ ಏಕಾಂಕಕಲೆಯ ಜೀವಾಳ. ತುಸು ಹೊತ್ತಿನಲ್ಲಿ ಹೆಚ್ಚು ಪರಿಣಾಮವನ್ನು ಮಾಡುವ ಏಕಾಂಕವು ದೊಡ್ಡ ನಾಟಕಕ್ಕಿಂತ ಕಠಿಣವಿದ್ದಂತೆ ಶ್ರೇಷ್ಠವೂ ಎನ್ನಿಸುವುದು. ಶ್ರೀರಂಗರ 'ನನ್ನದಲ್ಲ' ಎಂಬ ದೃಶ್ಯದ ಮೊದಲ ಮಾತನ್ನು ನೋಡಿರಿ! "ತರುಣ— shave ಅಂತೂ ಆಯ್ತು . . . ಹಜಾಮತಿ ಅನ್ನೋ ಹಾಂಗಿಲ್ಲ . . . ಹಿಂದುಸ್ತಾನದ lingua franca ಹಿಂದೀ ಆಗ್ಬೇಕು ಅನ್ನೋ ನಾವು 'ಹಜಾಮತಿ' ಅನ್ನೋ ಬದ್ಲು shave ಅನ್ನೋದು ಯಾಕ?" ಇಡಿಯ ದೃಶ್ಯದ ವಾತಾವರಣವಿಲ್ಲದೆ, ತರುಣನ ಸ್ವಭಾವಚಿತ್ರವಿಲ್ಲಿದೆ. 'ಅಯ್ಯಯ್ಯೊ ಏನಾಯ್ತು ಇವರಿಗೆ' ಎಂದು ಕಾರಂತರ ಕಟ್ಟಿಯ ಪುರಾಣದ ಮೊದಲ ಮಾತಿನಲ್ಲಿಯೆ—ಅಲ್ಲ ವಾಕ್ಯದಲ್ಲಿಯೆ—**ರಂಗಣ್ಣ**ನು ಕಲೆ-ಪಾತ್ರ-ವಾತಾವರಣ ಮೂವರ ಬಗ್ಗೆಯೂ ಪ್ರೇಕ್ಷಕರ ಅಂತರಂಗದಲ್ಲಿ ಪ್ರಕಾಶವನ್ನು ಮೂಡಿಸುತ್ತಾನೆ. ಈ ಸಂಗತಿಗಳು ಎಷ್ಟು ನಿಧಾನವಾಗುವವೊ ಅಷ್ಟು ಪರಿಣಾಮ ಸಪ್ಪೆಯಾಗುವುದೆಂಬುದನ್ನು ಉತ್ತಮ ನಾಟಕಕಾರನು ಬಲ್ಲನು.

೫

ಪಾತ್ರನಿರೂಪಣೆಯಂತೆ ಸಂಭಾಷಣೆಯಲ್ಲೂ ಏಕಾಂಕವು ನಾಟಕಕ್ಕಿಂತ ಬೇರೆಯಾಗಿ ತನ್ನದೆ ಒಂದು ವೈಶಿಷ್ಟ್ಯವನ್ನಿಟ್ಟುಕೊಂಡಿದೆ. ಕೇವಲ ಕತೆಯನ್ನು

ಹೇಳುವುದು, ವಿನೋದವನ್ನು ತುಂಬುವುದು; ಪಂಡಿತಚರ್ಚೆಯನ್ನು ಮಾಡುವುದು—ಈ ಕೆಲಸ ಸಂಭಾಷಣೆಯದಲ್ಲ. ಇದಲ್ಲದೆ ಕತೆಯಲ್ಲಿ ಘಟನೆ ಹೆಚ್ಚಿದ್ದರೆ ಸಂಭಾಷಣೆ ಗೌಣ, ಸ್ವಭಾವಚಿತ್ರ ಮುಖ್ಯವಾಗಿದ್ದರೆ ಸಂಭಾಷಣೆ ಪ್ರಧಾನ—ಎಂಬ ನಿಯಮವನ್ನು ಏಕಾಂಕವು ತಪ್ಪದೆ ಪಾಲಿಸಬೇಕಾಗುವುದು. ಕೈಲಾಸಂ ಅವರ **ಅಮ್ಮಾವ್ರ ಗಂಡ**ದ ಉತ್ತರಾರ್ಧದಲ್ಲಿ ಈ ತೂಕ ತಪ್ಪಿದ್ದರಿಂದ ವಿನೋದಗಳೂ ಬೇಜಾರಾಗಬಹುದೇನೊ ಎಂಬ ಹೆದರಿಕೆ ಇದೆ. ಅದೇ ಎನ್ಕೆಯವರ **ಬಿ. ಟಿ. ಬುದ್ಧಿವಂತೆ**ದಲ್ಲಿ 'ಆದರೆ ಹುಡುಗರಲ್ಲಿ play-way ಅಂಬೋ ಪ್ರವೃತ್ತಿ ಇರತದ, ಅಂದರ ಒಂದು ಚೇತನಶಕ್ತಿ ಇರತದ—ಈ ಚೇತನಶಕ್ತಿ ಸ್ವಲ್ಪ ಅಡ್ಡ ಹೊಳ್ಳಿದಾಗ ನಾವದನ್ನ sublimate ಮಾಡ್ಬೇಕಾಗ್ತದ' ಎಂದು ಸಾಮಾನ್ಯರಿಗೆ ತಿಳಿಯದಂತಹ ವಾಕ್ಯಗಳಿದ್ದರೂ ಈ ಇಡಿಯ ಏಕಾಂಕದ ಸಂಭಾಷಣೆ ಉತ್ತಮ ತರಗತಿಯದಾಗಿದೆ; ಇಷ್ಟ ಪರಿಣಾಮವನ್ನು ಹುಟ್ಟಿಸುವುದರಲ್ಲಿ ಅತ್ಯಂತ ಸಹಕಾರಿಯಾಗಿದೆ. 'ಇದು ತ್ರೇತಾಯುಗದಲ್ಲಿ ಶ್ರೀರಾಮಚಂದ್ರನ ಪಾದಾರವಿಂದಗಳಲ್ಲಿ ಲೀನವಾಗಿ, ಪಶ್ಚಾತ್ ಆ ದಯಾರ್ದ್ರ ಹೃದಯನ ಸಹೋದರನಾದ ಭರತನ ಶಿರೋರವಿಂದ ಕುಂದಾಯಮಾನವಾಗಿ . . .' ಮೊದಲಾದ ವಾಕ್ಯವು ಕೃತ್ರಿಮವೆನ್ನಿಸಿದರೂ ಶ್ರೀರಂಗರ **ದೀಪೋತ್ಸವ**ದ ಸಂನಿವೇಶದಲ್ಲಿ ಸಮರ್ಪಕವಾದ ಪರಿಣಾಮವನ್ನೇ ಹುಟ್ಟಿಸುವುದು. ಆದ್ದರಿಂದ ಏಕಾಂಕದಲ್ಲಿ ಸಂಭಾಷಣೆಯು ಭಾಷೆಯ ಶೈಲಿಯನ್ನು ಸುತರಾಂ ಅವಲಂಬಿಸಿಲ್ಲ ಎಂದು ಹೇಳಬಹುದು. ಈ ಮಾದರಿಯನ್ನು ನೋಡಿರಿ.

ತರುಣಿ:—ನಿಮ್ಮ ಗೆಳೆಯರು—

ತರುಣ:—ಅಹುದು, ಬಂದರು—

ತರುಣಿ:—ಬಂದರ?—

ತರುಣ:—ಮತ್ತು ಹೋದರು—

ತರುಣಿ:—ಹೋದರ?—

ತರುಣ:—ಯಾಕ? ('ನನ್ನದಲ್ಲ' ಎಂಬ ಏಕಾಂಕದಲ್ಲಿ).

ಏಕಾಂಕದ ಸಂಭಾಷಣೆಯು ಕಲೆಯ ಇಲ್ಲವೆ ಪಾತ್ರದ ಇಲ್ಲವೆ—ಒಟ್ಟಾರೆ—ಇಷ್ಟ ಪರಿಣಾಮಕ್ಕೆ ನೇರವಾಗಿ ಪೋಷಕವಾಗಿದ್ದರೇನೆ ಪ್ರೇಕ್ಷಕರ ಮನಸ್ಸನ್ನು ಹಿಡಿಯುವುದು. ಹೀಗಿಲ್ಲದ್ದಕ್ಕಾಗಿ **ಬಿ. ಟಿ. ಬುದ್ಧಿವಂತೆ**ದ ಗ್ರಂಥಕರ್ತರೆ ಬರೆದ **ಹೆರಿಗೆಯ ಹಿಟ್ಲರ್** ಮತ್ತು **ಮುಸುಕು** ಇವುಗಳಲ್ಲಿ ಸಂಭಾಷಣೆಯು ನಮ್ಮನ್ನು ಹಿಡಿಯುವುದೆ ಇಲ್ಲ. ಕೇವಲ ಚತುರ ಇಲ್ಲವೆ ವಿನೋದಮಯವಾದ ಸಂಭಾಷಣೆಯಿಂದಲೆ ಏಕಾಂಕಕ್ಕೆ ಕಳೆಬಾರದು ಎಂಬುದಕ್ಕೆ ಶ್ರೀರಂಗರ **ತ್ರಿಶೂಲ**ವು ಒಂದು ಉದಾಹರಣೆ

ಯಾಗಿದೆ. ಪ್ರಚಾರ, ಒಣಚರ್ಚೆ, ಬುದ್ಧಿಮತ್ತೆ ಇವು ಯಾವ ಮಟ್ಟಿನಲ್ಲೂ ಕಲೆಯ ಅರ್ಹತೆಯನ್ನು ಪಡೆಯಲಾರವು. ಕೈಲಾಸಂ ಅವರ ಬಹಿಷ್ಕಾರದಲ್ಲಿ ರಂಗಣ್ಣನು ಉದ್ದುದ್ದ ಭಾಷಣಗಳನ್ನು ಮಾಡುವನು; ಎಷ್ಟೋ ಸಲ ಹೇಳಿದ್ದನ್ನೆ ಹೇಳುವನು. ಆದರೆ ಅದರಿಂದ ನಮಗೆ ಬೇಜಾರಾಗದೆ ಹಲುಬಿದ ಗೋಳನ್ನೆ ಹಲುಬುವ ರಂಗಣ್ಣನ ನಿಸ್ಸಹಾಯ ಸ್ಥಿತಿಗಾಗಿ ಕನಿಕರ ಹುಟ್ಟುವುದು. ದೃಶ್ಯದ ಕೊನೆಗೆ 'ಹಯ್ಯೊ! . . . ಈ ತಪ್ಯಾರದೂ' ಎಂದು ರಂಗಣ್ಣನು ಕೇಳಿದಾಗ ಪ್ರತಿಯೊಬ್ಬ ಪ್ರೇಕ್ಷಕನಿಗೆ ರಂಗಣ್ಣನನ್ನು ತಪ್ಪಿಸಿ ನಾಟ್ಯಗೃಹದಿಂದ ಜಾರೋಣ ಎನ್ನಿಸುವುದು . . . ಇದಕ್ಕೆ ನಮ್ಮಲ್ಲಿ ಹುಟ್ಟಿದ ಕನಿಕರವೆ ಕಾರಣ.

೬

ಏಕಾಂಕತಂತ್ರವನ್ನು ಕನ್ನಡ ಏಕಾಂಕಗಳ ವಿಮರ್ಶೆಯನ್ನು ಕೂಲಂಕಷವಾಗಿ ಮಾಡಲು ನನ್ನ ಅಧಿಕಾರವೂ ಸಾಲದು; ನನಗೆ ಒಪ್ಪಿಸಿದ ಈ ಪ್ರಬಂಧವೂ ಸಾಲದು. ಅದಕಾಗಿ ಕೊನೆಯದಾಗಿ ಒಂದು ವಿಷಯವನ್ನು—ಅದೂ ಮಹತ್ತ್ವದ್ದಾಗಿದೆ; 'ನಾಟಕೀಯತೆಗೆ ಭಂಗತರುವ ಒಳ್ಳೆಯ ಸಂಗತಿ ದೋಷವೆನ್ನಿಸುವುದು, ನಾಟಕೀಯತೆಗೆ ಪೋಷಕವಾಗುವ ಕ್ಷುಲ್ಲಕ ಸಂಗತಿ ಕೂಡ ಗುಣವೆನ್ನಿಸುವುದು' ಎಂದು ಹಿಂದೆ ಹೇಳಿದೆಯಷ್ಟೆ? ಇದನ್ನೆ ನಾಟಕಕಾರನ ದೃಷ್ಟಿಯಿಂದ ಹೇಳುವುದಾದರೆ ನಾಟಕಕಾರನಿಗೆ ತನ್ನ ವಿಷಯದ ತಿಳಿಯಾದ, ಪೂರ್ತಿಯಾದ ಅರಿವು ಬೇಕು. ಯಾವ ಪರಿಣಾಮವನ್ನು ಹುಟ್ಟಿಸಬೇಕೆಂಬುದು ತನಗೆಯೆ ತಿಳಿಯದ ನಾಟಕಕಾರನು ಪ್ರೇಕ್ಷಕರನ್ನು ಗೊಂದಲದಲ್ಲಿ, ಎಂದರೆ ರಸಾಸ್ವಾದನೆಯ ದೃಷ್ಟಿಯಿಂದ, ಅಸಮಾಧಾನದಲ್ಲಿ ನೂಕುವುದುಖಂಡಿತ. ಇಷ್ಟಪರಿಣಾಮಕ್ಕೆ ವಿಘಾತಕವಾದ ಸಂಗತಿಯನ್ನು ತನ್ನ ಏಕಾಂಕದಲ್ಲಿ ಸೇರಿಸಿಕೊಳ್ಳುವ ನಾಟಕಕಾರನಿಗೆ ಆ ಪರಿಣಾಮದ ಕಲ್ಪನೆಯೆ ಸಾಕಷ್ಟು ಸರಿಯಾಗಿಲ್ಲ ಎನ್ನಬೇಕಾಗುವುದು. ಈ ಸಂದರ್ಭದಲ್ಲಿ 'ಮಿಂಚಿನ ಹುಡಿ' ಎಂಬ ಕೃಷ್ಣಕುಮಾರರ ಏಕಾಂಕ ಸಂಗ್ರಹದೊಳಗಿನ 'ರಾಯರ ಮದುವೆ' ಎಂಬ ದೃಶ್ಯದಿಂದ ಒಂದು ದೃಷ್ಟಾಂತವನ್ನು ಎತ್ತಿ ತೋರಿಸಬಹುದು. ಈ ದೃಶ್ಯದ ತೆರೆಯ ನೋಟ ಹೀಗೆ ಪ್ರಾರಂಭವಾಗುವುದು: (ಪು. ೮೭).

(ಮರುದಿನ ಬೆಳಗು ಮುಂಜಾನೆ. ಒಂದು ಬೀದಿ. ರಾಮಾಚಾರಿ, ಎಡಗೈಯಲ್ಲಿ ತಂಬಿಗೆ ಹಿಡಿದುಕೊಂಡು, ಕಿವಿಗೆ ಜನಿವಾರ ಹಾಕಿಕೊಂಡು ಬರುವನು . . . ಜನಿವಾರಕ್ಕೊಂದು ಉಂಗುರ ಜೋತಾಡುತ್ತಿದೆ . . . ಅತ್ತಲಿಂದ ಸುಬ್ಬಣಭಟ್ಟರು ಬರುತ್ತಾರೆ. . .)

ರಾಮಾಚಾರಿ:—ಮತ್ತೇನು ಸುಬ್ಬಣ್ಣಭಟ್ಟರೇ ಎದ್ದಿರಾ?

ಸುಬ್ಬಣ್ಣ:—ಓಹೋ ರಾಮಾಚಾರೀ—ಎದ್ದಿವಿ; ಎದ್ದಿರಾ? ಮತ್ತೇನು, ಎತ್ಲಾಗ ಹಳ್ಳದ ಕಡೆ ಹೋಗಿದ್ದಿರೇನು?

ರಾಮಾಚಾರಿ:—ಹೂಸಪಾ. ಪ್ರಾತಃಕೃತ್ಯಾ ಒಂದು ಬಿಟ್ಟದ್ದಲ್ಲಲ್ಲಾ; . . ಬೈಲುಕಡೆ ಹೋಗೋದು ಹಿಡಕೊಂಡು, ಹೆಂಡರು ಮಕ್ಕಳು ಮನೀಮಾರು ಎಲ್ಲಾ . . .

ಒಂದು, ಕಿವಿಗೆ ಜನಿವಾರ ಎಂದ ಮೇಲೆ ಮುಂದಿನ ಮಾತುಗಳನ್ನು ಬಿಡಬಹುದಾಗಿತ್ತು; ಇಲ್ಲವೆ, ಮತ್ತೊಂದು ಸಮಯವನ್ನು ಸಂನಿವೇಶಕ್ಕಾಗಿ ಹುಡುಕಬೇಕಾಗಿತ್ತು. ಸದ್ಯದಲ್ಲಿದ್ದಂತೆ ಈ ಸಂನಿವೇಶವು ಅಸಂಸ್ಕೃತರನ್ನು ನಗಿಸುವಷ್ಟೆ ಸುಸಂಸ್ಕೃತರನ್ನು ವಿಮುಖಮಾಡುವುದು ಖಂಡಿತ. ಕೇವಲ ನಗೆಯು ಇಲ್ಲವೆ ವಾಸ್ತವಿಕ ಪ್ರಸಂಗವೆಂದ ಮಾತ್ರಕ್ಕೆ ಇಂತಹ ಸಂನಿವೇಶ ಪರಿಣಾಮಕ್ಕೆ ಪೋಷಕವಾಗದು.

ಅದರಂತೆಯೆ ಯಾವ ಸಣ್ಣ ಸಂಗತಿಯನ್ನೂ ಅತಿಗೆ ಒಯ್ಯುವುದರಿಂದಲೂ ಪರಿಣಾಮಕ್ಕೆ ಧಕ್ಕೆ ಬರಬಹುದಾಗಿದೆ. ಏಕಾಂಕದ ವಸ್ತು ಚಿಕ್ಕದು. ಅದನ್ನು ಬಹಳೇ ದೂರ ಎಳೆದರೆ ಹರಿಯುವುದು ಖಂಡಿತ. ಅಂಬಿಕಾತನಯದತ್ತರ 'ದೆವ್ವನ ಮನೆ'ಯಲ್ಲಿ ಈ ಅನುಭವ ಬರಬಹುದಾಗಿದೆ. ಅ.ನ.ಕೃ. ರವರ 'ಆದದ್ದೇನು?' ಎಂಬುದರಲ್ಲೂ ಕೊನೆಗೆ—ರಾಜನು ಸಾಯುವಾಗ—ಹೀಗೆಯೆ ಅಸಮಾಧಾನವಾಗುವುದು. ಇಲ್ಲಿಯ ಉದ್ದೇಶವೇನು? ಹಳ್ಳಿಯ ಚಾಡಿ-ಪಿಸುಣತನದ ಜೀವನವನ್ನು ತೋರಿಸುವುದೆ? ಮಾದರಿಯ ಅವಿಭಕ್ತ ಕುಟುಂಬವನ್ನು ತೋರಿಸುವುದೆ? ರಾಜನ ಆದರ್ಶಸ್ವಭಾವವನ್ನೆ? ಇಲ್ಲಿಯ ಇಂತಹ ಹಳ್ಳಿಯಲ್ಲಿ ರಾಜನಂತಹರಿಗೆ ಜಾಗೆ ಇಲ್ಲವೆಂದೆ? ಕೊನೆಯವರೆಗೂ ಯಾವ ನಿರ್ಧಾರವಿಲ್ಲದಂತಾಗಿ, ಮುಗಿಸುವಾಗ ಕೊನೆಯ ಮಾತನ್ನು ತೋರಿಸಬೇಕೆಂದು ರಾಜನನ್ನು ಕೊಂದೇಬಿಡಬೇಕಾಯಿತು! 'ಎಸ್ಕೆ'ಯವರ ವಸುಂಧರಾಖ್ಯಾನವು ಇನ್ನೊಂದು. ಇಲ್ಲಿಯ ಪಾತ್ರಗಳು ಒಮ್ಮೆ ಪೌರಾಣಕ—ಒಮ್ಮೆ ಆಧುನಿಕ ಹೀಗೆ ವ್ಯವಹರಿಸುತ್ತಿದ್ದುದರಿಂದ ಕೊನೆಗೂ ಒಂದು ನಿಶ್ಚಿತ ಪರಿಣಾಮ ಪ್ರೇಕ್ಷಕರ ಮೇಲಾಗುವುದಿಲ್ಲ.

ಇಂದಿನ ಕನ್ನಡದ ಏಕಾಂಕಗಳ ಬಗ್ಗೆ ಇನ್ನೂ ಅನೇಕ ಮಾತುಗಳನ್ನು ಹೇಳಬಹುದಾಗಿತ್ತು, ಇನ್ನೂ ಅನೇಕ ಲೇಖಕರ ಹೆಸರು-ಕೃತಿಗಳನ್ನೂ ಕೊಡಬಹುದಾಗಿತ್ತು. ನುರಿತ ಏಕಾಂಕಕರ್ತರೆಂದು ಜನರೆದುರು ಬಂದವರನ್ನೇ ನಾನು ಚರ್ಚಿಸಿದ್ದೇನೆ. ಆದರೆ ಇಷ್ಟಕ್ಕೆಯೆ ಈ ಪ್ರಬಂಧ ನಿರ್ದಿಷ್ಟ ಅವಧಿಯನ್ನು ಮೀರಿದೆ. ಅದಕಾಗಿ ಮುಗಿಸುವೆ.

ಆರ್. ವ್ಹಿ. ಜಾಗಿರದಾರ

ಈ ಪ್ರಬಂಧಕ್ಕಾಗಿ ನೋಡಿಕೊಂಡ ಕೆಲ ಏಕಾಂಕಗಳು

ಶ್ರೀ ಕೈಲಾಸಂ ಅವರ—ಹೋಂ ರೂಲು, ಬಹಿಷ್ಕಾರ, ಗಂಡಸ್ಕತ್ರಿ, ಅಮ್ಮಾವ್ರ ಗಂಡ, ತಾಳೀ ಕಟ್ಟೋಕ್ಕೂಲೀನೇ, ಬಂಡ್ವಾಳ್ವಿಲ್ಲದ ಬಡಾಯಿ, ಟೊಳ್ಳುಗಟ್ಟಿ

ಶ್ರೀ ಕಾರಂತರ—ಏಕಾಂಕನಾಟಕಗಳು (ಸಂಗ್ರಹ). ನಾಲ್ಕನೆಯ ಪಿಶಾಚಿ (ಪ್ರೇಮನಾಟಕಾವಲಿ)

ಶ್ರೀರಂಗರ—ಪೂರ್ವರಂಗ (೯ ರ ಸಂಗ್ರಹ), ನಿರಾಹಾರ (ಸಂಗ್ರಹ), ಜೀವನರಂಗ (ಸಂಗ್ರಹ) ಅಶ್ವಮೇಧ, ಸರ್ಕಸಿನ ಸರಸ್ವತೀ (ಪ್ರೇಮನಾಟಕಾವಲಿ), ದೀಪೋತ್ಸವ—ಮುಂತಾಗಿ

ಶ್ರೀ ಅ. ನ. ಕೃಷ್ಣರಾಯರ—ಬಣ್ಣದ ಬೀಸಣಿಗೆ (೨ ಭಾಗ), ಆದದ್ದೇನು ?

ಶ್ರೀ ಎನ್. ಕೆ. ಕುಲಕರ್ಣಿಯವರ—ನಡುಮನೆಯಲ್ಲಿ (ಸಂಗ್ರಹ), ಬೆಳ್ಳಿಯ ಹಬ್ಬ (ಸಂಗ್ರಹ)

ಶ್ರೀ ಬೇಂದ್ರೆಯವರ—ಹುಚ್ಚಾಟಗಳು (ಸಂಗ್ರಹ)

ಶ್ರೀ ಕೃಷ್ಣಕುಮಾರರ—ಮಿಂಚಿನ ಹುಡಿ (ಸಂಗ್ರಹ)

ಶ್ರೀ ಟೆಂಗ್ಸೆ ಗೋವಿಂದರಾಯರ—ಹೆಣ್ಣಿನ ತೊಡಕು

ಶ್ರೀ ರಮಾಕಾಂತರ—ಕಲ್ಕಿ

ಕೋಲ್ಮಿಂಚು (ಬೇರೆ ಬೇರೆ ನಾಟಕಕಾರರ ಏಕಾಂಕ ಸಂಗ್ರಹ)

೨. ಹೊಸಗನ್ನಡ ಗದ್ಯ

ಹೊಸಗನ್ನಡ ಎಂದರೇನು ? ಅದರ ಆರಂಭ ಯಾವಾಗ ?—ಎಂದು ಮತ್ತೆ ಪ್ರಶ್ನೆ ಏಳಬಹುದು. ವಚನ ಸಾಹಿತ್ಯದಿಂದಲೆ ಹೊಸಗನ್ನಡ ಗದ್ಯದ ಆರಂಭಕಾಲವೆಂದು ವಿಮರ್ಶಕರು ವಿಧಾನಿಸಿದ್ದಾರೆ. ಭಾಷೆಯ ದೃಷ್ಟಿಯಿಂದ ಇದು ಸಮರ್ಪಕವೇ. ಮುಂದೆ ೧೯ನೆಯ ಶತಕದಲ್ಲಿ ಮಿಶನರಿಗಳು ಬಾಯಬಲ್ಲಿನ ಅನುವಾದದಿಂದಲೂ ಕನ್ನಡ-ಇಂಗ್ಲಿಷ್ ಶಬ್ದಕೋಶಗಳಿಂದಲೂ ಹೊಸಗನ್ನಡ ಯುಗವನ್ನು ಆರಂಭಿಸಿದರೆಂಬ ಮಾತೂ ಸರಿಯೆ. ಆದರೆ ಇಲ್ಲಿ ನಮಗೆ ಹೊಸಗನ್ನಡ ಗದ್ಯವೆಂದರೆ ವಿಜ್ಞಾನ, ವಾಙ್ಮಯ, ಶಾಸ್ತ್ರ, ವಿಮರ್ಶೆ ಮೊದಲಾದ ವಿವಿಧ ಪ್ರಕಾರಗಳಲ್ಲಿ ಹರಿದು ಬಂದ ಹೊಸಗನ್ನಡ ಗದ್ಯ, ಎಂದರೆ ಇಪ್ಪತ್ತನೆಯ ಶತಮಾನದಿಂದ ಪಾಶ್ಚಾತ್ಯ ಹಾಗೂ ಅನ್ಯ ಪ್ರಾಂತೀಯ ಸಾಹಿತ್ಯದ ಸಂಪರ್ಕದಿಂದ ನಾನಾಮುಖವಾಗಿ ಬಲಗೊಂಡು ಬೆಳೆದು ಬಂದ ಕನ್ನಡ ಗದ್ಯ ಸಾಹಿತ್ಯವೆಂದು ಇಟ್ಟುಕೊಂಡರೆ ಸರಿಹೋಗುವುದು.

ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದಲೆ ಪುಟಗೊಂಡು ಬೆಳೆಯುತ್ತಿರುವ ಆಧುನಿಕ ಕನ್ನಡ ಗದ್ಯ ಸಾಹಿತ್ಯವು ಪಾಶ್ಚಾತ್ಯ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಒಮ್ಮೆಲೆ ಎತ್ತಿಕೊಳ್ಳಲಿಲ್ಲ. ಆರಂಭದಲ್ಲಿ ಲಲಿತ ಸಾಹಿತ್ಯದ ಮಟ್ಟಿಗಷ್ಟೆ ಪಾಶ್ಚಾತ್ಯ ಪ್ರಭಾವವು ಕಂಡುಬರುತಿದ್ದು ಇತ್ತೀಚೆಗೆ ಮಾತ್ರ ಭಾಷಾಶಾಸ್ತ್ರ, ಸಮಾಜಶಾಸ್ತ್ರ, ಮಾನಸಶಾಸ್ತ್ರ ಮೊದಲಾದ ಶಾಸ್ತ್ರೀಯ ಹಾಗೂ ವೈಜ್ಞಾನಿಕ ವಿಷಯಗಳಿಗೆ ಸಂಬಂಧಪಟ್ಟಸಾಹಿತ್ಯ ಪ್ರಕಾರಗಳು ಉದ್ಭವಿಸುತ್ತಲಿವೆ.

ಆಧುನಿಕ ಗದ್ಯ ಸಾಹಿತ್ಯದ ಬೆಳೆವಣಿಗೆಯನ್ನು ಕಾಣಬೇಕಾದರೆ ಬರಿ ಲಲಿತ ಸಾಹಿತ್ಯದ ಮಟ್ಟಿಗಷ್ಟೆ ನಮ್ಮ ಕಣ್ಣು ಹೊರಳಿಸಿದರೆ ಆಗದು. ವಿಮರ್ಶಾಸಾಹಿತ್ಯ, ಜ್ಞಾನಸಾಹಿತ್ಯಗಳ ಬೆಳೆವಣಿಗೆಯನ್ನು ಗಮನಿಸಬೇಕು. ಕಳೆದ ೨೫ ವರುಷಗಳಿಂದ ನಮ್ಮಲ್ಲಿ ಕಲ್ಪನಾಸಾಹಿತ್ಯೇತರವಾಙ್ಮಯವೂ ಕ್ರಮೇಣ ಹಬ್ಬುತ್ತ ಬಂದಿದೆ. ಪದಾರ್ಥ ವಿಜ್ಞಾನ, ರಸಾಯನ ಶಾಸ್ತ್ರ, ಅರ್ಥಶಾಸ್ತ್ರ, ರಾಜಕಾರಣಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕನ್ನಡದಲ್ಲಿಯೆ ಆಡಿ ತೋರಿಸುವಷ್ಟು ಕನ್ನಡ ಭಾಷೆ ಈಗ ಪ್ರೌಢಿಮೆಯಿಂದ ಬೆಳೆಯುತ್ತಲಿದೆ. ಶಾಸ್ತ್ರೀಯ ವಿಷಯಗಳನ್ನು ಪರಭಾಷೆಗಳಿಂದ ಕನ್ನಡದಲ್ಲಿ ಅನುವಾದಿಸಿ ಹೇಳಲು ಅತ್ಯಂತ ಆವಶ್ಯಕ ಸಾಹಿತ್ಯವಾದ ಒಂದು ಬೃಹತ್ ಶಬ್ದಕೋಶದ ಎತ್ತುಗಡೆಯು ಮೈಸೂರು ಸರ್ಕಾರದಿಂದ ನಡೆದಿದೆ. ಈ ನಾಲ್ಕೈದು

ವರುಷಗಳಲ್ಲಿಯಂತೂ ಶಾಸ್ತ್ರೀಯ, ವೈಜ್ಞಾನಿಕ ಸಾಹಿತ್ಯವು ಕನ್ನಡದಲ್ಲಿ ಧಾರಾಳ ವಾದ ನಿರ್ಮಿತಿಯನ್ನು ಪಡೆಯುತ್ತಲಿದ್ದು ಶಿಕ್ಷಣ ಪ್ರಪಂಚದಲ್ಲಿ ಕನ್ನಡತನದ ಹೊಸ ಬೆಳಕನ್ನು ಚೆಲ್ಲಿವೆ. ಈ ವಿಷಯದಲ್ಲಿ ಕನ್ನಡ ಗದ್ಯಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಯು ಸಾಹಿತ್ಯದಿಂದಾದ ಅಮೋಘ ಕಾರ್ಯವನ್ನು ಕನ್ನಡಿಗರು ಅಲಕ್ಷಿಸುವಂತಿಲ್ಲ. ಶಿಕ್ಷಣ ಶಾಸ್ತ್ರ, ಮಾನಸ ಶಾಸ್ತ್ರ, ಸಮಾಜ ಶಾಸ್ತ್ರಗಳನ್ನು ಕುರಿತು ಮೊನ್ನೆ ಮೊನ್ನಿನವರೆಗೂ ಗ್ರಂಥಗಳಿರಲಿಲ್ಲ. ಈ ೨-೩ ವರುಷಗಳಲ್ಲಿ ಇವೂ ಪೂರೈಸಲ್ಪಟ್ಟಿವೆ. ಹೀಗೆ ಹೊಸಗನ್ನಡ ಗದ್ಯದ ವಿವಿಧ ವೈಲಕ್ಷಣ್ಯಗಳನ್ನು ಕೆಳಗಿನ ಸಾಹಿತ್ಯ ಪ್ರಕಾರಗಳಲ್ಲಿ ನಾವು ನೋಡಬಹುದು:

೧. ಲಲಿತಸಾಹಿತ್ಯ (ಕಾದಂಬರಿ, ಗದ್ಯನಾಟಕ, ಪ್ರಬಂಧ, ಹರಟೆ, ದಿನಚರಿ, ಪ್ರವಾಸ ಸಾಹಿತ್ಯ).

೨. ವಿಮರ್ಶಾತ್ಮಕ ಸಾಹಿತ್ಯ (ಕನ್ನಡ ಸಾಹಿತ್ಯದ ಚರಿತ್ರೆ ಮತ್ತು ವಿಮರ್ಶೆ; ಸಾಹಿತ್ಯ ಪ್ರಕಾರಗಳು ಮತ್ತು ಲಕ್ಷಣಗಳು, ರಸ ಅಲಂಕಾರ ವಿಷಯ, ಮುನ್ನುಡಿ, ಉಪನ್ಯಾಸಗಳು).

೩. ಚರಿತ್ರ ಸಾಹಿತ್ಯ, ೪. ಪತ್ರಿಕಾ ಸಾಹಿತ್ಯ, ೫. ರಾಜಕೀಯ ಸಾಹಿತ್ಯ, ೬. ಧಾರ್ಮಿಕ ಸಾಹಿತ್ಯ, ೭. ವೈಜ್ಞಾನಿಕ ಸಾಹಿತ್ಯ (ಸ್ಥೂಲ ಅರ್ಥದಲ್ಲಿ—ಒಟ್ಟು ಜ್ಞಾನದಾಯಕ ಸಾಹಿತ್ಯ) ೮. ಶಾಸ್ತ್ರೀಯ ಸಾಹಿತ್ಯ (ಇದರಲ್ಲಿ ಶಿಕ್ಷಣ, ಭಾಷಾ, ಸಮಾಜ, ಜನಾಂಗ, ಮಾನಸ, ಮೊದಲಾದ ವಿಷಯಗಳ ಶಾಸ್ತ್ರಗಳನ್ನು ಗಮನಿಸಬಹುದು).

ಲಲಿತಸಾಹಿತ್ಯದಲ್ಲಿ ಕಾದಂಬರಿಯ ಪ್ರಪಂಚವನ್ನು ನಾವು ನೋಡಿದರೆ ಕನ್ನಡ ಕಾದಂಬರಿಯು 'ಮುದ್ರಾಮಂಜೂಷ' 'ಕನ್ನಡವಚನ ಕಾದಂಬರಿ'ಗಳಿಂದ ಉಗಮ ಹೊಂದಿ ಬಿ. ವೆಂಕಟಾಚಾರ್ಯ, ಪುಟ್ಟಣ್ಣ, ಗಳಗನಾಥ, ಕೆರೂರ ವಾಸುದೇವಾಚಾರ್ಯರುಗಳಲ್ಲಿ ಒಂದು ವಿಶೇಷ ಗದ್ಯಸ್ವರೂಪವನ್ನು ತಾಳಿತು. ಬಿ. ವೆಂಕಟಾಚಾರ್ಯರೂ ಪುಟ್ಟಣ್ಣನವರೂ ಮೈಸೂರಿನವರು; ಗಳಗನಾಥರೂ ಕೆ. ವಾಸುದೇವಾಚಾರ್ಯರೂ ಧಾರವಾಡದವರು. ಬಿ. ವೆಂಕಟಾಚಾರ್ಯರು ವಂಗಸಾಹಿತ್ಯ ಅನುವಾದಕರು, ಪುಟ್ಟಣ್ಣನವರು ಸ್ವತಂತ್ರ ಕಾದಂಬರಿಕಾರರು. ಹಾಗೆಯೇ ಗಳಗನಾಥರು ಮರಾಠೀಸಾಹಿತ್ಯದ ಅನುವಾದಕರು. ಕೆರೂರ ವಾಸುದೇವಾಚಾರ್ಯರು ಸ್ವತಂತ್ರ ಕಾದಂಬರಿಕಾರರು. ಬಿ. ವೆಂಕಟಾಚಾರ್ಯರ ಶೈಲಿ ಗಂಭೀರ, ಸಂಸ್ಕೃತ ಭೂಯಿಷ್ಠ. ಉದ್ದುದ್ದ ಸಮಾಸಗಳೂ ಉದ್ದುದ್ದ ವಾಕ್ಯಗಳೂ ಶೈಲಿಯನ್ನು ಕೃತಕಗೊಳಿಸಿವೆ. ಶ್ರೀಮತಿ ತಿರುಮಲಾಂಬಾಅವರು ಇವರ ತರುವಾಯ ಬಂದರೂ ಇದೇ ಪುರಾಣ

ಹಾದಿಯನ್ನೇ ಹಿಡಿದರು. ಪುಟ್ಟಣ್ಣನವರ ಶೈಲಿ ವಿಶೇಷ ಪರಿಷ್ಕಾರ ಹೊಂದಿರದಿದ್ದರೂ ಬಳಕೆಯ ರೀತಿಯನ್ನಳವಡಿಸಿ ಕೊಂಡಿದೆ. ಗಳಗನಾಥರು ಉತ್ತರ ಕರ್ಣಾಟದ ಬಳಕೆಯ ಭಾಷೆಯನ್ನು ಹಿಂದು ಮುಂದೆ ನೋಡದೆ ಬಳಸಿಕೊಂಡಿದ್ದಾರೆ. ಇವರ ಶೈಲಿಯಲ್ಲಿ ವ್ಯಾಕರಣದ ಬಿಗಿಕಟ್ಟು ಜಿಟ್ಟಿಹೋಗಿದೆ. ಅನ್ಯದೇಶೀಯ ಶಬ್ದಗಳು ಅನುಮಾನವಿಲ್ಲದೆ ಬರುತ್ತವೆ. ಗಳಗನಾಥರ ಬಳಕೆಯ ನುಡಿ ವಾಸುದೇವಾಚಾರ್ಯರಲ್ಲಿ ಹೆಚ್ಚು ನಯಗೊಂಡು, ಹಟಗೊಂಡು ಕನ್ನಡದ ಪಡೆನುಡಿಯ (idiom) ಬೆಡಗನ್ನು ಕೂಡಿಕೊಂಡು ಉತ್ತರ ಕರ್ನಾಟಕಕ್ಕೊಂದು ಉತ್ತಮ ಮಾದರಿಯಾಗಿದೆ. ಇವರ ತರುವಾಯ ಕಾದಂಬರೀ ಗದ್ಯ ಸರಣಿ ಭೀ. ಪ. ಕಾಳೆ, ನಾಗೇಶ, ಕರ್ಪೂರ ಮೊದಲಾದವರ ಕೈಯಲ್ಲಿ ಸ್ವಲ್ಪ ಅಂದಗೆಟ್ಟಿತೆಂದೇ ಹೇಳಬಹುದು.

ಈ ಸಮಕಾಲದಲ್ಲಿ ಬೆಂಗಳೂರಿನ ಚ. ವಾಸುದೇವಯ್ಯನವರು ಮತ್ತು ಮಂಗಳೂರಿನ ಪಂಜೆಯವರು, ಕಾಮತರು ಮುಂತಾದವರ ಬರವಣಿಗೆ ಬಗೆಬಗೆಯ ಸಾಹಿತ್ಯ ಕಾರ್ಯಕ್ಕೆ ಒದಗಿ ಕಳೆಗೊಂಡ ಗದ್ಯ ಆ ಕಡೆ ನಿರ್ಮಾಣವಾಯಿತು.

ಈ ಒಂದು ಕಾಲ ಮುಗಿದ ಮೇಲೆ ಇಂದಿನ ಕಾದಂಬರಿಕಾರರಲ್ಲಿ ಶ್ರೀ ಪುಟ್ಟಪ್ಪ ಹಾಗೂ ಶ್ರೀ ಕಾರಂತರು ಪ್ರಥಮತಃ ನಮ್ಮ ಗಮನವನ್ನು ಸೆಳೆಯುತ್ತಾರೆ. ಒಬ್ಬರ ಶೈಲಿಯಲ್ಲಿ ಮಲೆನಾಡಿನ ಕಾವ್ಯ ಗದ್ಯವಾಗಿ ಹರಿದಿದೆ; ಇನ್ನೊಬ್ಬರ ಶೈಲಿಯಲ್ಲಿ ತುಳುನಾಡಿನ ಕನ್ನಡ ತಿಳಿಯಾಗಿ ರೂಪಕ, ಶ್ಲೇಷೆಗಳ ಗೊಂದಲವಿಲ್ಲದೆ, ಅತಿಶಯೋಕ್ತಿ-ಉತ್ಪ್ರೇಕ್ಷೆಗಳ ಆಡಂಬರವಿಲ್ಲದೆ, ಶಕ್ತಿಯುಳ್ಳ ಸ್ಪಷ್ಟೋಕ್ತಿಯಲ್ಲಿ ಮುನ್ನಡೆದಿದೆ.

ಮಾನಸಶಾಸ್ತ್ರದ ಹಿನ್ನಲೆಯಲ್ಲಿ ಹೊರಟ ಶ್ರೀ ದೇವುಡು ಅವರ 'ಅಂತರಂಗ' ಶ್ರೀರಂಗರ 'ವಿಶ್ವಾಮಿತ್ರನ ಸೃಷ್ಟಿ'ಯಂತೆ 'ತಲೆ ಬೇಸರ'ವಾಗದೆ ಅಂತರಂಗ ಸ್ಪರ್ಶಿಯಾಗುತ್ತದೆ.

ಶ್ರೀ ಅ. ನ. ಕೃಷ್ಣರಾಯರ 'ಸಾಹಿತ್ಯರತ್ನ'ದ ಶೈಲಿಯ ಸೆಳವು, ಮುಗಳಿಯವರ 'ಬಾಳುರಿ'ಯ ಬಳಕೆ, ಕನ್ನಡ ಗದ್ಯಶೈಲಿಯ ಇನ್ನೆರಡು ಮಾದರಿಗಳು. ಶ್ರೀ ಗೋಕಾಕರ 'ಇಜ್ಜೋಡು' ವಾಸುದೇವಾಚಾರ್ಯರ ಪರಂಪರೆಯನ್ನೇ ಎತ್ತಿ ಹಿಡಿದಿದೆ. ಎನ್ಕೆ. ಕುಲಕರ್ಣಿಯವರ 'ಸಾವಿನ ಉಡಿಯಲ್ಲಿ' ಅದೇ ಪರಂಪರೆ ಮುಂದಡಿ ಇಟ್ಟಿದೆ. ಇದೇ ಬಗೆಯಲ್ಲಿ ಶ್ರೀ ಕೋಟಿಯಣ್ಣಶೆಟ್ಟಿ, ಕೆ. ಕೆ. ಶೆಟ್ಟಿಯವರು 'ತುಳುಗನ್ನಡ'ದ ಪರಂಪರೆಯನ್ನು ಮುಂದೆ ಸಾಗಿಸಲು ಹವಣಿಸಿದ್ದಾರೆ.

ಐತಿಹಾಸಿಕ ಕಾದಂಬರಿಯಲ್ಲಿ ಶ್ರೀ ಆನಂದಕಂದರು ಹುಡುಕಿದ ಹಾದಿ ಹೊಸದು. ಈ ಮೊದಲು ಐತಿಹಾಸಿಕ ಕಾದಂಬರಿಗಳಲ್ಲಿ ಶಿಥಿಲಗೆಟ್ಟು ಹೋಗಿದ್ದ ಗದ್ಯಕ್ಕೆ ಇವರಿಂದ ಒಂದು ಬಿಗುವು ಬಂದಿತು. ಆದರೆ ಇದೇ ಹಾದಿಯಲ್ಲಿ ಆನಂದ

ಕಂದರೇ ಆಗಲಿ ಇತರರೇ ಆಗಲಿ ಮುನ್ನಡೆಯಲಿಲ್ಲ. ಶ್ರೀ ದೇಸಾಯಿ ಪಾಂಡುರಂಗ ರಾಯರ 'ಕುಂತಲೇಶ್ವರ' ಈ ಕೊರತೆಯನ್ನು ಹೋಗಲಾಡಿಸುವುದರಲ್ಲಿ ಮೊದಲ ಯತ್ನವಾಗಿದೆ.

ಇಂಗ್ಲಿಷ್ ಕಾದಂಬರಿಗಳ ಅನುವಾದಕರಲ್ಲಿ ಹ. ಪಿ. ಜೋಶಿಯವರ 'ಮನೆಯ ಸುಖಶಾಂತಿ' ಚಾಲುಕ್ಯರ 'ಮುಳ್ಳುಬೇಲಿ' ಗು. ಭಿ. ಜೋಶಿಯವರ 'ಪ್ರೇಮಾಹುತಿ' ಈಶ್ವರ ಸಣಕಲ್ಲರ 'ಸಂಸಾರಸಮರ'ಗಳು ಕನ್ನಡ ಗದ್ಯಕ್ಕೆ ಹೊಸ ಹೊಸ ಬಗೆಯಲ್ಲಿ ನಯವನ್ನು ತಂದಿವೆ. ವಂಗಸಾಹಿತ್ಯದ ಅನುವಾದಗಳಲ್ಲಿ ಶ್ರೀ ನಾರಾಯಣಸಂಗಮರ 'ಅಕ್ಕತಂಗಿ'ಯ ಶೈಲಿ ಮಾರ್ಮಿಕವಾಗಿದೆ. ಮರಾಠಿಯ ಅನುವಾದಗಳಲ್ಲಿ ಪದ್ಮರಾಜರ 'ಬಂಧನದ ಆಚೆ' ಇನಾಮದಾರರ 'ಎರಡು ಧ್ರುವ' ಚಿತ್ತಾಕರ್ಷಕವಾಗಿವೆ. ಹಿಂದೀ ಸಾಹಿತ್ಯಾನುವಾದದಲ್ಲಿ ಶ್ರೀ ಗುರುನಾಥ ಜೋಶಿಯವರು—ಅವರ ಶೈಲಿಯ ಮಾತು ಏನೇ ಇರಲಿ—ಕನ್ನಡ ಗದ್ಯಕ್ಕೆ ವಿಪುಲ ಸಹಾಯ ಮಾಡಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಸಣ್ಣ ಕತೆಗಳ ಸಂಸಾರ ದೊಡ್ಡದು. ಅವುಗಳ ಸಂಖ್ಯೆ ಕನ್ನಡಕ್ಕೆ ಇನ್ನು ಸಾಕು—ಎಂಬಷ್ಟರ ಮಟ್ಟಿಗೆ ಬೆಳೆಯುತ್ತಲಿದೆ. ಇವುಗಳಲ್ಲಿ ಶ್ರೀನಿವಾಸರ ಸ್ಪಷ್ಟತೆ, ಗಹನವಿಚಾರಗಳನ್ನೂ ಉದಾತ್ತ ತತ್ತ್ವಗಳನ್ನೂ ಸ್ವಲ್ಪ ಮಾತಿನಲ್ಲಿ ಸುಲಭವಾಗಿ ಹೇಳುವ ಹದ ಬಹುಜನರಿಗೆ ಸಾಧಿಸಿಲ್ಲ. ಪಂಜೆ ಮಂಗೇಶರಾಯರ ವಿನೋದಪರವಾದ ಸುಕುಮಾರ ವಿಡಂಬನೆ, ಎಂ. ಎನ್. ಕಾಮತರ ಸರಳರೀತಿಯ ಕಥನಕ್ರಮ ಒಂದೊಂದು ರೀತಿ. ಹಳ್ಳಿಯ ಜೀವನದ ಹತ್ತು ಮುಖಗಳನ್ನು ಹೃದ್ಯವಾಗಿ, ಅಲ್ಲಲ್ಲಿ ನಗೆ, ವಿಡಂಬನೆ, ವ್ಯಂಗ್ಯಗಳಿಂದ ಕೂಡಿ ನಿರೂಪಿಸುವ ಶ್ರೀ ಗೊರೂರ ರಾಮಸ್ವಾಮಿಯವರ ಹಾದಿಯಲ್ಲಿ ಉಳಿದ ಹೆಜ್ಜೆಗಳಿನ್ನೂ ವಿಶೇಷವಾಗಿ ಸುಳಿದಿಲ್ಲ. ಆನಂದಕಂದರು ಹಳ್ಳಿಯಬಾಳಿನ ಅಂದ ಚೆಂದವನ್ನೂ, ಬಡತನದ ಬಾಳಿನ ರುದ್ರ ಚಿತ್ರವನ್ನು ಚಿತ್ರಿಸಲು ಯತ್ನಿಸಿದ್ದಾರೆ. ಆದರೆ ಅವರದು ಅಕ್ಕರಿಗರ ಲೆಕ್ಕಣಿಕೆಯಾಗಿದೆಯಲ್ಲದೆ ಒಕ್ಕಲಿಗರ ಲೆಕ್ಕಣಿಕೆಯಾಗಿಲ್ಲ.

ಹ. ಪೀ. ಯವರದು ಕಿರಿದರಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಬಲ್ಲ ಶೈಲಿ. ಶ್ರೀ ಆನಂದರ ಶೃಂಗಾರಶೈಲಿ, ಶ್ರೀ ಸ್ವಾಮಿಯವರ ಸರಸಶೈಲಿ, ಕೆ. ಗೋಪಾಲಕೃಷ್ಣರಾಯರ ಲಲಿತಶೈಲಿ, ಪ. ರಮಾನಂದರಾಯರ ವಿಲಾಸಮಯ ವಿನೋದಪರ ಶೈಲಿಗಳು ಕನ್ನಡ ಸಾಹಿತ್ಯದ ಗದ್ಯವನೋದ್ಯಾನದ ಒಂದೇ ಗುಲಾಬಿಯ ವಿವಿಧ ಬಣ್ಣದ ಅರಳುಗಳು. ಮನೋವಿಜ್ಞಾನವನ್ನರಿತು ಸೂಕ್ಷ್ಮವಾಗಿಯೂ ರಸವತ್ತಾಗಿಯೂ, ವರ್ಣಿಸಿದ ಶ್ರೀ ಪು. ತಿ. ನರಸಿಂಹಾಚಾರ್ಯರ 'ಮಧುವನ', 'ಕಾಮನ ಬಿಲ್ಲು'

'ಕಂಡೂ ಕಾಣದ ರಾಮಾಚಾರಿಯ ನೆನಪು' ಮರೆಯುವಂತಹವಲ್ಲ. 'ಸೋಟಗಳು', 'ರಂಗವಲ್ಲಿ'—ಈ ಕಥಾಸಂಗ್ರಹಗಳಲ್ಲಿ ಕನ್ನಡ ವಿವಿಧ ಕತೆಗಾರರ, ಕತೆಗಾರ್ತಿಯರ ಗದ್ಯಶೈಲಿಯ ಸ್ವರೂಪವನ್ನು ನಾವು ನೋಡಬಹುದು. ಇತ್ತೀಚೆಗೆ 'ಪ್ರಗತಿಶೀಲ ಸಾಹಿತ್ಯ'ದ ಕಹಳೆ ಮೊಳಗುತ್ತಲಿದೆ. ಈ ಶೀರ್ಷಿಕೆಯಲ್ಲಿ ಹೊರಟ, ದಲಿತಜನೋದ್ಧಾರಕವೆಂಬ ಹಲವು ಕತೆಗಳು ನಿಜವಾಗಿಯೂ ಮಾರ್ಮಿಕ ಗದ್ಯಶೈಲಿಯಲ್ಲಿವೆ.

ವ್ಯಕ್ತಿ ಚಿತ್ರಗಳೂ ಹರಟೆಯ ಒಂದು ಅಂಗವೆ ಎಂದು ಹೇಳಬಹುದು. ಇಂತಹ ವ್ಯಕ್ತಿ ಚಿತ್ರಗಳನ್ನು ಚಿತ್ರಿಸುವಲ್ಲಿ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರು, ಶ್ರೀ ಕಾರಂತರು ಎರಡು ಕೈಗಳಾಗಿದ್ದಾರೆ. 'ದೀಪಮಾಲೆ,' 'ಕುಲದೀಪಕರು'—ಇವುಗಳಲ್ಲಿ ಶರ್ಮರು ಅನೇಕ ಮಹಾವ್ಯಕ್ತಿಗಳ ಜೀವಂತ ಚಿತ್ರವನ್ನು ಮೂಡಿಸಿದ್ದಾರೆ. ಕೇವಲ ಕಾಲ್ಪನಿಕ ವ್ಯಕ್ತಿಗಳನ್ನು ಚಿತ್ರಿಸುವ ಕಾರಂತರದು ಇನ್ನೊಂದು ಹಾದಿ. 'ಚಿಕ್ಕ ದೊಡ್ಡವರು' 'ಹಳ್ಳಿಯ ಹತ್ತು ಸಮಸ್ತರು' ಕನ್ನಡಗದ್ಯ ಸಾಹಿತ್ಯಕ್ಕೆ ಹೊಸ ಮಾದರಿಗಳು. ನಾ. ಕಸ್ತೂರಿಯವರೂ ಇದೇ ಹಾದಿಯಲ್ಲಿ ಉತ್ತಮಸಾಹಿತ್ಯ ಒದಗಿಸಿದ್ದಾರೆ. ಅವರ 'ಚಕ್ರದೃಷ್ಟಿ'ಯೊಳಗಿನ ಅದ್ವಿತೀಯ ದೃಷ್ಟಿ ಅವರದೇ.

ದೊಡ್ಡ ಚರಿತ್ರೆಗಳು ಹರಟೆಗಳಷ್ಟು ಹಗುರಾದುವಲ್ಲ. ಶ್ರೀ ಡಿ. ವ್ಹಿ. ಗುಂಡಪ್ಪನವರ 'ಗೋಪಾಲಕೃಷ್ಣ ಗೋಖಲೆ'ಯವರ ಚರಿತ್ರದಲ್ಲಿ ಕಾಣುವ ಉನ್ನತದೃಷ್ಟಿ, ಗಂಭೀರ ಗದ್ಯಸರಣಿ ಓದುಗರಿಗೆ ಸ್ಫೂರ್ತಿಯನ್ನೂ ಬೆಳಕನ್ನೂ ಕೊಡುವಂತಹವು. ಶ್ರೀ ಮಾಸ್ತಿಯವರ ಶ್ರೀ ರಾಮಕೃಷ್ಣ ಉದಾತ್ತ ವಿಚಾರಗಳನ್ನು ತಿಳಿಯಾಗಿ ಹೇಳುವ ಗದ್ಯದಿಂದ ಕೂಡಿದೆ. ಶ್ರೀ ಪುಟ್ಟಪ್ಪನವರ ವಿವೇಕಾನಂದರ ಚರಿತ್ರೆ ಸ್ಫೂರ್ತಿದಾಯಕ ಕಾದಂಬರಿಯ ಶೈಲಿಯುಳ್ಳುದು. ಆಲಂಕಾರಿಕ ಗದ್ಯಶೈಲಿಯುಳ್ಳ ಪ್ರೊ. ಕುಂದಣಗಾರರ 'ಅಕ್ಕಮಹಾದೇವಿ' ಚರಿತ್ರೆಯೊಡನೆ ಸಾಹಿತ್ಯವಿಮರ್ಶೆಯೂ ಆಗಿದೆ. ಶ್ರೀ ಸಿ. ಕೆ. ವೆಂಕಟರಾಮಯ್ಯನವರ 'ಲಿಂಕನ್' ಚರಿತ್ರೆಯ ಗದ್ಯಸರಣಿ ಹೃದ್ಯವಾಗಿರಬಹುದಾಗಿತ್ತು. 'ನೆರಂಗ'ರ 'ಶ್ರೀರಂಗ'ವು ಕನ್ನಡ ಗದ್ಯಸಾಹಿತ್ಯದಲ್ಲೊಂದು ಹೊಸ ಜಾತಿ. ಶ್ರೀಗಳಾದ ಆಲೂರವರ 'ಜೀವನಸ್ಮೃತಿ'ಗಳೂ ಜಿ. ಪಿ. ರಾಜರತ್ನಂರ 'ಹತ್ತು ವರುಷ'ವೂ ಆತ್ಮವೃತ್ತಾಂತದೊಡನೆ ಕರ್ನಾಟಕ, ಕನ್ನಡಸಾಹಿತ್ಯ ವಿವೇಚನೆಗಳನ್ನು ಒಳಗೊಂಡಿವೆ.

ಹರಟೆ—ಪ್ರಬಂಧಗಳಲ್ಲಿ ನಮ್ಮ ಇಂದಿನ ಸಾಹಿತ್ಯ ಇನ್ನೂ ಸಾಕಷ್ಟು ಮುಂಬರಿದಿಲ್ಲ. ಒಬ್ಬ ಗದ್ಯಕಾರನ ನಿಜವಾದ ಗದ್ಯಪ್ರೌಢಿಮೆಯನ್ನು ಕಾಣಬೇಕಾದರೆ ಅವನ ವಿಚಾರಾತ್ಮಕ ಪ್ರಬಂಧಗಳನ್ನೋದಬೇಕು. ಇಂತಹ ಪ್ರಬಂಧಕಾರರು ನಮ್ಮಲ್ಲಿ ತೀರ ಕಡಿಮೆ. ಶ್ರೀ ಸಿದ್ದವನಹಳ್ಳಿಯವರ ಶೈಲಿ ಈ ಮಾರ್ಗದಲ್ಲಿಯೂ

ಆದರ್ಶಪ್ರಾಯವಾಗಿದೆ. 'ಹೊಸ ಯುಗಧರ್ಮ' ಎಂಬ ಅವರ ಪ್ರಬಂಧ ಮಿಂಚಿನ ಗಟ್ಟಿಯಾಗಿದೆ. ಅದನ್ನು ಇಡಿಯಾಗಿ ಉದ್ಧರಿಸಲು ಸಾಧ್ಯವಿಲ್ಲ. ಕೆಲವು ಸಾಲುಗಳನ್ನು ಮಾತ್ರ ಇಲ್ಲಿ ನೋಡಬಹುದು: "ವಿಜ್ಞಾನದ ವೃದ್ಧಿಯಿಂದ ಸಪ್ತಲೋಕ, ಚತುರ್ದಶಲೋಕಗಳಾಗಿದ್ದ ಮಾನವಪ್ರಪಂಚ ಒಂದೇ ಲೋಕವಾಗಿದೆ . . . ವಿಜ್ಞಾನದ ಯಕ್ಷಿಣೀದೀಪ ಮಾನವನ ಕಣ್ಣೆದುರಿಗೆ ವಸುಂಧರೆಯ ರತ್ನಗರ್ಭವನ್ನೆ ತೆರೆದಿಟ್ಟಿತು. ಸ್ವರ್ಗಕ್ಕೆ ಮೆಟ್ಟಿಲುಕೊಟ್ಟಿತು . . . ಮನುಷ್ಯನ ವ್ಯವಹಾರಜಗತ್ತು ಬೆಳೆದಷ್ಟು ಹೊರಗಿನ ಲೋಕ ನಮ್ಮ ಕೈಗೆ, ಹಿಡಿತಕ್ಕೆ ಸಿಕ್ಕಷ್ಟೂ ಅಂತರ್ಲೋಕ ಕುಗ್ಗಿತು; ಮೊದಲು ಅಣುವಾಗಿದ್ದ ನಮ್ಮ ಲೋಕ ಇಂದು ಮಹತೋಮಹೀಯವಾಗಿದೆ. ಆದರೆ 'ವಸುಧೈವ ಕುಟುಂಬಕ'ನಾಗಿದ್ದ, 'ಉದಾರಚರಿತ'ನಾಗಿದ್ದ ಮನುಷ್ಯ ಇಂದು ಕ್ಲೈಬ್ಯಕ್ಕೊಳಗಾಗಿ ಅಲ್ಪಾತ್ಮ, ಕ್ಷುದ್ರನಾಗಿ ಆಸೆಗಳ ಮೂರ್ತಿಯಾಗಿದ್ದಾನೆ. 'ಶಿವಮಸ್ತು ಸರ್ವಜಗತಾಂ' 'ಸಮಸ್ತ ಸನ್ಮಂಗಳಾನಿ ಭವಂತು' ಎಂಬ ಮಂತ್ರ ಅವನ ಬಾಯಲ್ಲಿ ಹೊರಡುತ್ತಿಲ್ಲ. 'ಸಹನಾವವತು' ಎಂಬ ಸೂಕ್ತ ಅವನ ಮನಸ್ಸಿನಲ್ಲಿಲ್ಲ. ಅವನ ಪಾಲಿಗಿಂದು ಜಗತ್ತು ಈಶಾವಾಸ್ಯವಾಗಿಲ್ಲ, ಹಿರಣ್ಮಯವಾಗಿದೆ. ದೇಶದೇಶಗಳೆ ಗುಂಪುಗಟ್ಟಿ ಹಿರಣ್ಯಾಕ್ಷವೃತ್ತಿಗೆ ಮೊದಲು ಮಾಡಿವೆ; ಭೂಮಿಯನ್ನೇ ಸುರುಳಿಸುತ್ತಿ ತಮ್ಮ ಕಂಕುಳದಲ್ಲಿಟ್ಟುಕೊಳ್ಳಬೇಕೆಂಬ ಯತ್ನ ನಡೆದಿದೆ" ('ಹರಿಜನ'—ಅಗಸ್ಟ ೧೬, ೧೯೪೨; ಕನ್ನಡವೃತ್ತಿ).

'ಸುಳಿವು ಹೊಳವಿ'ನಲ್ಲಿ ಒಂದೆರಡು ಒಳ್ಳೆಯ ಮಾದರಿಯ ವಿಚಾರ ಪ್ರಬಂಧಗಳು ನಮಗೆ ದೊರೆಯುವುವು. ಈ ಪ್ರಕಾರದಲ್ಲಿ ಶ್ರೀ ಬೇಂದ್ರೆಯವರದು ಇನ್ನೊಂದು ಹಾದಿ. ಅವರ ಪ್ರಬಂಧಗಳಲ್ಲಿ ಓಜಸ್ಸು, ಪಾಂಡಿತ್ಯ, ರೂಪಕತೆಗಳು ಎದ್ದು ಕಾಣುತ್ತವೆ. ರೂಪಕವಿಲ್ಲದೆ ಅವರು ಒಂದು ವಾಕ್ಯವನ್ನೂ ಬರೆಯರು. ಕಾವ್ಯದ ನಾಲ್ಕು ಲಕ್ಷಣಗಳನ್ನು ಹೇಳಬೇಕಾದರೆ, "ಆನಂದ, ರಸ, ಪ್ರೇಮ, ರಮಣೀಯತೆಗಳು ಕಾವ್ಯಬ್ರಹ್ಮನ ಚತುರ್ಮುಖಗಳು" ಎಂದೇ ಹೇಳುತ್ತಾರೆ. ವಿಚಾರವು ಗಹನವಾದಂತೆ ಅವರ ಗದ್ಯವು ಅನುಭಾವಿಯ ಶೈಲಿಯಾಗಿ, ಗದ್ಯಶೈಲಿಯ ಮೂಲ ಉದ್ದೇಶವಾದ, ವಿಚಾರಸ್ಪಷ್ಟತೆಯು ಗುರಿಮುಟ್ಟದೆ ಹೋಗುತ್ತದೆ. ಅವರ 'ಸಾಹಿತ್ಯ ವಿಮರ್ಶೆ'ಯೊಳಗಿನ 'ಕಾವ್ಯಯೋಗ'ವು ಇದಕ್ಕೊಂದು ಉದಾಹರಣೆ. ಶ್ರೀ ಮಾಸ್ತಿಯವರ ಶೈಲಿಯಲ್ಲಿ ವಿಚಾರಸ್ಪಷ್ಟತೆಯು ಮುಖ್ಯ. ಶ್ರೀರಂಗರ ಶೈಲಿಯಲ್ಲಿ ವಿಚಾರಗಳ ಓಟ—ತಾಕಲಾಟಗಳಿದ್ದರೂ ಅಲ್ಲಲ್ಲಿ ವ್ಯಾಕರಣದ ಕಟ್ಟು ಸಡಿಲಾದರೂ ಒಟ್ಟಿನ ಮೇಲೆ ಶೈಲಿ ಪರಿಣಾಮಕಾರಿಯಾಗಿರುತ್ತದೆ. ಶ್ರೀ ಅ. ನ. ಕೃಷ್ಣರಾಯರ ಪ್ರಬಂಧಗಳಲ್ಲೆಲ್ಲಾ ಇಂಗ್ಲಿಷ್ ಓದಿನ ಮೆರೆವಣಿಗೆ, ಸಂಪ್ರದಾಯಗಳ ಅವಹೇಳನೆ

ಗಳು ಎದ್ದು ಕಾಣುತ್ತವೆ. ಅವರ ಶೈಲಿಯ ಓಘ ವಿಷಯಪ್ರತಿಪಾದನೆಗೆ ಒಳ್ಳೇ ಸಹಾಯಕಾರಿಯಾಗುತ್ತದೆ.

ಇದೇ ಸಂದರ್ಭದಲ್ಲಿ ಕೆಲವರ ವಿಮರ್ಶಾತ್ಮಕ ಪ್ರಬಂಧಗಳನ್ನು ನೋಡ ಬಹುದು. ಶ್ರೀ ಮುಗಳಿಯವರ ಶೈಲಿಯಲ್ಲಿ ಪದಲಾಲಿತ್ಯ, ಅಚ್ಚಗನ್ನಡದ ಚಲಗಳು ವಿಶಿಷ್ಟವಾಗಿ ತೋರಿಬರುತ್ತವೆ. ಶ್ರೀ ಡಿ. ವ್ಹಿ. ಗುಂಡಪ್ಪನವರು ಎಂತಹ ಗಹನ ವಿಷಯುಗಳನ್ನೆ ಹೇಳಲಿ, ಶೈಲಿ ಎಷ್ಟೇ ಗಂಭೀರವಾಗಿರಲಿ ಓದುಗರಿಗೆ ಹೃದ್ಯವೆನಿಸು ತ್ತದೆ, ವೇದ್ಯವಾಗುತ್ತದೆ. ಅವರ ಪಾಂಡಿತ್ಯದ ತೂಕಕ್ಕೆ ಶೈಲಿಯ ಓಘಕ್ಕೆ ನಿಲ್ಲುವ ಗದ್ಯಕಾರರು ವಿರಳ. ವಿಮರ್ಶಾತ್ಮಕ ಪ್ರಬಂಧಗಳೊಂದೊಡನೆಯೆ ಹಲವು ಉಪನ್ಯಾಸ ಗಳನ್ನು ನಾವು ಪರಿಶೀಲಿಸಬಹುದು. ಶ್ರೀಗಳಾದ ಡಿ. ವ್ಹಿ. ಗುಂಡಪ್ಪ, ಪುಟ್ಟಪ್ಪ, ಅ. ನ. ಕೃಷ್ಣರಾಯರು, ವಿ. ಕೃ. ಗೋಕಾಕರು ಅವರ ಉಪನ್ಯಾಸಗಳು ಗ್ರಂಥ ರೂಪದಲ್ಲಿ ದೊರೆಯುತ್ತವೆ. ಇವುಗಳಲ್ಲಿ ಉಪನ್ಯಾಸಕರ ವ್ಯಕ್ತಿತ್ವ ಸ್ಫುಟವಾಗಿ ನಿಲ್ಲುತ್ತದೆ. ಒಬ್ಬೊಬ್ಬರ ವಿಚಾರಸರಣಿ ಯಾವರೀತಿ ಹರಿದಿದೆ, ಯಾವರೀತಿ ಕನ್ನಡ ಗದ್ಯಕ್ಕೆ ಪುಷ್ಟಿಯನ್ನು ಕೊಟ್ಟಿದೆಯೆಂಬುದನ್ನು ನೋಡಿಕೊಳ್ಳಬಹುದು. ಈ ಸಂಗ್ರಹ ಗಳ ಹೊರತಾಗಿ ಶ್ರೀ ಮುದವೀಡು ಕೃಷ್ಣರಾಯರ ೨೪ ನೆಯ ಸಾಹಿತ್ಯ ಸಮ್ಮೇಲನದ ಆಧ್ಯಕ್ಷೀಯ ಭಾಷಣದಲ್ಲಿ ಪಡಿನುಡಿಯುುವ ಕನ್ನಡ ಸ್ಫೂರ್ತಿ, ಶ್ರೀ ಬೇಂದ್ರೆಯವರ ೨೬ ನೆಯ ಸಮ್ಮೇಲನ ಭಾಷಣದ ಕಲಾವಂತಿಕೆ, 'ಶ್ರೀ' ಯವರ ಭಾಷಣದ ಕನ್ನಡದ ಗಾಯತ್ರಿ ಜಪ, ಶ್ರೀ ಕಡೆಂಗೊಡ್ಲು ಶಂಕರಭಟ್ಟರು ಧಾರವಾಡ ಜಿಲ್ಹೆಯ ಪ್ರಥಮ ಸಮ್ಮೇಲನದಲ್ಲಿ ಮಾಡಿದ ಭಾಷಣದ ವೈಜ್ಞಾನಿಕ ವಿವೇಚನೆಗಳು ಕನ್ನಡ ಗದ್ಯ ಸಾಹಿತ್ಯದಲ್ಲಿ ನವನವೀನ ತರಂಗಗಳನ್ನೆಬ್ಬಿಸಿವೆ.

ಹರಟೆಯ ಹೊಲವನ್ನು ಹೊಕ್ಕು ನೋಡಿದರೆ ನಾಲ್ಕಾರು ಪ್ರಕಾರದ ಹರಟೆ ಗಾರರು ನಮ್ಮ ಕಣ್ಣಿಗೆ ಬೀಳುತ್ತಾರೆ—'ಹರಟೆಮಲ್ಲರು' (ಕೃಷ್ಣಶರ್ಮ), ಬೇಂದ್ರೆ ಯವರು, 'ಗ್ನಾನ'ದ ಕಾರಂತರು 'ಸ್ವಲ್ಪದ್ರಲ್ಲಿ ಸ್ವಾರಸ್ಯವನ್ನು ಕೊಟ್ಟ ಶ್ರೀರಂಗರು, 'ಯದ್ವಾತದ್ವಾ' ಬರೆದ 'ಡೊಂಕು ಬಾಲ'ದ ನಾ. ಕಸ್ತೂರಿಯವರು, 'ಹಗಲು ಗನಸಿ'ನ ಎ. ಎನ್. ಮೂರ್ತಿರಾಯರು 'ಮುಂಗಾಲ್‌ಪುಟಿಗೆ' ಇಟ್ಟ 'ಎಸ್ಕೆ' ಅವರು. ವಿಡಂಬನಾತ್ಮಕ ಹರಟೆಗಳಲ್ಲಿ ನಾ. ಕಸ್ತೂರಿಯವರು, ಕಾರಂತರು, ಶ್ರೀರಂಗರು ವಿಶಿಷ್ಟಸ್ಥಾನ ಪಡೆದವರು. ನಾ. ಕಸ್ತೂರಿಯವರ ವ್ಯಂಗ್ಯ—ಎಷ್ಟೇ ಅತಿ ಶಯೋಕ್ತಿಯುಳ್ಳುದಾದರೂ—ನಾ. ಕಸ್ತೂರಿಯವರದೇ ಆಗಿ ಉಳಿದಿದೆ. ಶ್ರೀ ವಿ. ಸೀ. ಯವರ ಶೈಲಿಯಲ್ಲಿ ಕಂಡುಬರುವ ಹಾಸ್ಯದ ನಯ, ಇನ್ನೂ ಬೇಕು ಎಂದೆನಿಸಿದರೆ ಕಾರಂತರ, ಶ್ರೀರಂಗರ ವಿಕಟವಿನೋದ ಬೇಗನೆ ಬೇಸರವಾಗಬಹುದು. ಶ್ರೀ ಬೇಂದ್ರೆ

ಯವರ ಹರಟೆಯ ರೀತಿ ಸ್ವಚ್ಛಂದವಾದುದು. ಹುಚ್ಚುನಗೆಯ ಲಹರಿಗಳನ್ನು ಎಬ್ಬಿಸುವ ಅವರ ಹಾಸ್ಯ ಯಾರಿಗೂ ಅಪಥ್ಯವೆನಿಸದು. 'ಹರಟೆಯಮಲ್ಲ'ರು ವ್ಯಕ್ತಿಗಳನ್ನು ವರ್ಣಿಸುವುದರಲ್ಲಿ ಅದ್ವಿತೀಯರೆಂದು ಮೇಲೆ ಹೇಳಿದೆ. ನಮ್ಮಲ್ಲಿಯ ಹರಟೆಯ ಮಟ್ಟ ಇನ್ನೂ ಏರಬೇಕು; ಗಾತ್ರ ಇನ್ನೂ ಬಲಗೊಳ್ಳಬೇಕು. 'ಹರಟೆ' ಎಂಬುದರಿಂದ Personal Essay ಎಂಬ ಪ್ರಕಾರದ ಘನತೆ—ಗಾಂಭೀರ್ಯ ನಮ್ಮ ಕಲ್ಪನೆಗೆ ಬರಲಿಕ್ಕಿಲ್ಲ. ಆದುದರಿಂದ ಇವಕ್ಕೆ 'ವ್ಯಕ್ತಿ ಪ್ರಬಂಧ' ಎಂದು ಕರೆದರೆ ಉಚಿತವಾದೀತು. 'ಸ್ವಚ್ಛಂದಲಹರಿ'ಯಾದರೂ ಹರಟೆಗೊಂದು ಮರ್ಯಾದೆ ಬಂದೀತು. ಎ. ಜಿ. ಗಾರ್ಡಿನರ, ಜಿ. ಕೆ. ಚೆಸ್ಟರಟನ್, ಎ. ಎ. ಮಿಲ್ನ ರಾಬರ್ಟ್ ಲಿಂಡ್ ಮೊದಲಾದ ಇಂಗ್ಲಿಷ್ ಹರಟೆಗಾರರ ಮಟ್ಟಕ್ಕೆ ಬಂದು ನಿಲ್ಲಬೇಕಾದರೆ—ಬೇಂದ್ರೆಯವರ ಹಾಸ್ಯಪೂರ್ಣ ಕಥನ, ಕಸ್ತೂರಿಯವರ ವ್ಯಂಗ್ಯ, ಕಾರಂತ-ಶ್ರೀರಂಗರ ವಿಚಾರಸರಣಿ, ಎ. ಎನ್. ಮೂರ್ತಿರಾಯರ ರಮ್ಯವರ್ಣನೆ, 'ಹರಟೆಮಲ್ಲ'ರ ಪಾತ್ರನಿರೂಪಣೆಗಳನ್ನಳವಡಿಸಿ ಕೊಂಡ ಹರಟೆಗಾರರು ಮುಂದೆ ಬರಬೇಕು.

'ಪಂಪಾಯಾತ್ರೆ'ಯಂತಹ ರಸಭರಿತವಾದ ಹರಟೆ—ಕತೆ—ಇತಿಹಾಸಗಳ ಕಲಾ ಕುಶಲತೆಯನ್ನು ಬಳಸಿಕೊಂಡು ಹೊರಟ ಪ್ರವಾಸ ಸಾಹಿತ್ಯವನ್ನು ಸರಿಗಟ್ಟುವ ಮತ್ತೊಂದು ಸಮಾನಗ್ರಂಥ ನಮಗೆ ದೊರೆತಿಲ್ಲ. 'ಭಾರತ ಸಂಚಾರಿ'ಯ ಪ್ರವಾಸದ ವರ್ಣನೆಗಳು ಇರಬಹುದು, ಬೆಂಗೇರಿ ಪ್ರಹ್ಲಾದರಾಯರ ಇತಿಹಾಸ ಸ್ಥಳಗಳ ವರ್ಣನೆಗಳೂ ಇರಬಹುದು; ಎರಡೂ ಗುಣಗಳು ಸಾಹಿತ್ಯದಲ್ಲಿ ಸಮಾವೇಶವಾಗಿ ಬಂದಿಲ್ಲ. ಇದೇ ರೀತಿ ಪರದೇಶದ ಜನಜೀವನ ಕ್ರಮ, ನಡೆನುಡಿಗಳು, ವೇಷಭೂಷಣಗಳು, ಅಭಿರುಚಿ, ರಸಿಕತೆ, ಸಂಸ್ಕೃತಿ, ರಾಜಕಾರಣ, ಸ್ವಭಾವಗುಣ-ದೋಷಗಳನ್ನೆಲ್ಲ ಯಥಾವತ್ತಾಗಿ ಚಿತ್ರಿಸುವ 'ಸಮುದ್ರದಾಚೆಯಿಂದ' ಅಂತಹ ದಿನಚರಿ—ಪತ್ರ ಸಾಹಿತ್ಯದ ಮಾದರಿಯೂ ನಮ್ಮಲ್ಲಿ ಅಪರೂಪ. ಗದ್ಯಪದ್ಯ ವಿಡಂಬನೆ ಸರಸತೆಗಳಲ್ಲಿ ತಮ್ಮದೇ ಆದ ವಿಶೇಷ ಲಕ್ಷಣಗಳನ್ನು ಮೆರೆದಿರುವ ಜಿ. ಪಿ. ರಾಜರತ್ನಂರ ಚೈನಾ ದೇಶದ ಬೌದ್ಧ ಯಾತ್ರಿಕರದು ಒಂದು ದೊಡ್ಡಬಗೆ.

ಏಕಾಂಕ ನಾಟಕಗಳೇನೊ ಇತ್ತೀಚೆಗೆ ನಮ್ಮಲ್ಲಿ ವೆಗ್ಗಳವಾಗಿ ಬರುತ್ತಿವೆ. ಆಯಾ ಪ್ರಾಂತದ ದಿನಬಳಕೆಯ 'ದೇಸಿ' ನಾಟಕಗಳಲ್ಲಿ ಕಂಡುಬರುವಷ್ಟು ಇನ್ನಾವ ಸಾಹಿತ್ಯದಲ್ಲಿಯೂ ಕಂಡುಬರುವದಿಲ್ಲ. ಶ್ರೀ ಕೈಲಾಸಂ, ಕಾರಂತ, ಶ್ರೀರಂಗರ ನಾಟಕಗಳು ಮೈಸೂರು, ಮಂಗಳೂರು, ಧಾರವಾಡ ಸೀಮೆಗಳ ಪ್ರತಿನಿಧಿಗಳಾಗಿವೆ. (ಆದರೆ ಕಾರಂತರ ನಾಟಕಗಳಿಗಿಂತ ಕಾದಂಬರಿಗಳಲ್ಲಿಯ ದಿನಬಳಕೆಯ ಮಾತುಗಳು ಹೇರಳವಾಗಿ ಬರುತ್ತವೆ).

ಒಂದಾನೊಂದು ಕಾಲಕ್ಕೆ ಪ್ರಾಕೃತಿಕ ಭೂರಚನೆಯ ಮೂಲಕ ನದಿಯ ಆಚೆಯವರಿಗೂ ಈಚೆಯವರಿಗೂ ಘಟ್ಟದ ಮೇಲಿನವರಿಗೂ ಕೆಳಗಣವರಿಗೂ ಸಂಬಂಧ ತಪ್ಪಿ ಮೈಸೂರು, ಮದ್ರಾಸು, ಮುಂಬಯಿ ಮೊದಲಾದ ಭಿನ್ನ ಭಿನ್ನ ಸರಕಾರಗಳ ಆಧಿಪತ್ಯಕ್ಕೆ ಒಳಪಟ್ಟು ಮೂಲಕನ್ನಡ ರೂಪವಳಿದು ಮೈಸೂರು ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ ಎಂಬ ಪ್ರಾಂತಭೇದ ತಲೆದೋರಿದವು. ಈ 'ದೇಸಿ'ಗಳ ಹುಟ್ಟಿನಿಂದಲೆ ಕನ್ನಡ ಬೆಳೆದುಬಂತು. ಇತ್ತೀಚೆಗೆ ಮಾತ್ರ ಪ್ರವಾಸ ಸೌಕರ್ಯದಿಂದ, ಸಾಂಸ್ಕೃತಿಕ ಪ್ರಗತಿಯಿಂದ, ಜಿಜ್ಞಾಸೆಯ ಪ್ರಭಾವದಿಂದ ಪರಸ್ಪರರ ಸಂಪರ್ಕ ನಿಕಟವಾಗಿ ವಿಶೇಷ ಸಂಬಂಧ ಬೆಳೆದು ಭಾಷೆಯ ಪ್ರಾಂತಭೇದ ಸ್ವರೂಪಗಳು ಸರ್ವರಿಗೂ ತಿಳಿಯಲವಕಾಶವಾಗಿದೆ. ಹತ್ತು ವರುಷಗಳ ಹಿಂದೆ—"ಉತ್ತರ ಕರ್ನಾಟಕದ ಭಾಷೆ, ತಿಳಿಯುವುದಿಲ್ಲ"—ಎಂಬ ಗ್ರಂಥ ವಿಮರ್ಶೆ ಕ್ರಮೇಣ ಮಾಯವಾಗುತ್ತ ಬಂದಿದೆ. ಸರ್ವರಿಗೂ ಸುಲಭವಾಗಿ ತಿಳಿಯಬೇಕೆಂದು ನಾಟಕದ ಸಂಭಾಷಣೆಗಳನ್ನು ಗ್ರಾಂಥಿಕವಾಗಿ ಬರೆಯ ಹತ್ತಿದರೆ, ನಾಟಕದಲ್ಲಿ ಸ್ವಾಭಾವಿಕತೆಗೆ ಕುಂದು ಬಂದೀತೆಂಬ ಭಯ. ಅಲ್ಲದೆ ದೇಸಿಗನ್ನಡಕ್ಕೆ ಗ್ರಂಥದಲ್ಲಿ ನಾಟಕದ ಮಟ್ಟಿಗಾದರೂ—ಸ್ಥಾನವನ್ನು ನಿರಾಕರಿಸಿದರೆ ಭಾಷೆಯ ಬೆಳವಣಿಗೆಗೂ ಪುಷ್ಟಿಬರಲಿಕ್ಕಿಲ್ಲ. ಸಹೃದಯತೆಯೊಂದಿದ್ದರೆ ಪ್ರಾಂತ ಭಾಷೆಯಲ್ಲಿಯೆ ಬರೆಯಲ್ಪಟ್ಟ ನಾಟಕಗಳು ಸಾಹಿತ್ಯಕ್ಕೊಂದು ಹೊಸ ಕಳೆಯನ್ನು ತರುವದಲ್ಲದೆ ದಿನಬಳಕೆಯ ವ್ಯವಹಾರದಲ್ಲಿ ಸಂಬಂಧ ಹೆಚ್ಚಾಗುತ್ತಿರುವ ಈ ಕಾಲದಲ್ಲಿ ಪರಸ್ಪರರಿಗೆ ಆಯಾ ದೇಸಿಯ ಅರಿವು ವಿಶೇಷ ಅನುಕೂಲಕಾರಿಯೂ ಆಗುವುದು. ಮೊದಮೊದಲು 'ಗೋಡೆ'ಯಾಗಿದ್ದ ಕೈಲಾಸಂರ ನಾಟಕಗಳು ಈಗ ಪ್ರಾಂತಭೇದದ ಗೋಡೆಯನ್ನೆ ಸಡಲಿಸಲು ಸಹಾಯವಾಗಿವೆ.

ನಮ್ಮಲ್ಲಿ ಅಭಿನಯಯೋಗ್ಯವಾದ ದೊಡ್ಡ ಗದ್ಯನಾಟಕಗಳು ಬೆಳೆಯದಿರುವುದಕ್ಕೆ ಕಾರಣವೇನೊ! ಕೇವಲ ವಾಕ್ಪಟಗಳಿಂದಲೆ ಕನ್ನಡ ನಾಟಕಗಳು ಅಸ್ತಂಗತವಾಗಲು ಕಾರಣವಿಲ್ಲ. ನಾಗರಿಕರಲ್ಲಿ ಸುಶಿಕ್ಷಿತತೆ ಬೆಳೆದಂತೆ ಕಂಪನಿಗಳ ಹಳೆಯ ಕಗ್ಗನಾಟಕಗಳ ಗದ್ಯ ರುಚಿಸಲಾರದು. ಶ್ರೀ ಬೆಳ್ಳಾವೆ ನರಹರಿಶಾಸ್ತ್ರಿ, ಸೀತಾರಾಮಶಾಸ್ತ್ರಿ, ಗರುಡಸದಾಶಿವರಾಯರು, ಕಂದಗಲ್, ಹುಯಿಲಗೋಳ ಅಚ್ಯುತರಾಯರು ಮೊದಲಾದ ಕಂಪನಿ ನಾಟಕಕಾರರ 'ಟಾಠಡಾಢಣ' ಶೈಲಿ ರಸಿಕ ಕಿವಿಗೆ ಸುಭಗವೆನಿಸದು. ಅಷ್ಟರಲ್ಲಿಯೆ ಗದುಗಿನ ಗದ್ಯನಾಟಕಕಾರರಾದ ಶ್ರೀ ಹುಯಿಲಗೋಳ ನಾರಾಯಣರಾಯರ ಲಲಿತಶೈಲಿ ಆಧುನಿಕ ಯುಗಕ್ಕೆ ಮುನ್ನುಡಿಯಾಗಿದೆ. ರಂಗಭೂಮಿಯ ಗಳಗನಾಥರಾದ ವಾಮನರಾಯರ ಶೈಲಿಯಲ್ಲಿಯೂ ಸವಿಯಿದೆ.

ಹೊಸಗನ್ನಡ ಸಾಹಿತ್ಯದಲ್ಲಿ ಸತ್ಯನಿಷ್ಠವಾದ, ನಿಷ್ಪಕ್ಷಪಾತ, ವಿಮರ್ಶಾತ್ಮಕ ಗದ್ಯ ಇನ್ನೂ ಗ್ರಂಥ-ಗ್ರಂಥಗಳರೂಪವಾಗಿ ಹೊರಹೊಮ್ಮಬೇಕು. ಹೊಸಗನ್ನಡ ಸಾಹಿತ್ಯದ ಒಲವುಗಳನ್ನು ಕುರಿತು ಸಂಪೂರ್ಣಕಲ್ಪನೆಯನ್ನು ಕೊಡುವಂತಹ ಒಂದು ಉತ್ತಮ ವಿಮರ್ಶಾಗ್ರಂಥದ ಆವಶ್ಯಕತೆ ಇನ್ನೂ ದೂರವಾಗಿಲ್ಲ. ಕಾಲಿಕಪತ್ರಗಳಲ್ಲಿ ಬರುವ ವ್ಯಾಪಾರದ ವಿಮರ್ಶೆಯೆ ಇಂದಿನ ವಿಮರ್ಶಾಸಾಹಿತ್ಯವಾಗಿದೆ. ಪರಿಷತ್ಪತ್ರಿಕೆ, ಪ್ರಬುದ್ಧ ಕರ್ನಾಟಕಗಳಲ್ಲಿ ಮಾತ್ರ ಹೊಸಸಾಹಿತ್ಯಕ್ಕೆ ಹಾದಿ ತೋರುವಂತಹ ವಿಮರ್ಶೆಗಳು ಈ ಹತ್ತು ವರುಷಗಳಲ್ಲಿ ಬರುತ್ತಿವೆ. ಹೊಸಗನ್ನಡ ಗ್ರಂಥಗಳನ್ನು ವಿಮರ್ಶಿಸುವಲ್ಲಿ ಶ್ರೀ ವಿ. ಸೀ. ಅವರು, ತೀ. ನಂ. ಶ್ರೀಯವರು, ಕಾರಂತರು, ಬೇಂದ್ರೆಯವರು, ದಿ. ಎ. ಟಿ. ಸಾಸನೂರ ಅವರು, ಬೆ. ಕೃಷ್ಣಶರ್ಮರು ಒಂದೊಂದು ಹಾದಿಯನ್ನು ಅನುಸರಿಸಿದ್ದಾರೆ.

ಹಳಗನ್ನಡ ಗ್ರಂಥಗಳನ್ನು ಸಂಗ್ರಹಿಸಿ, ವಿಸ್ತೃತ ವಿಮರ್ಶಾತ್ಮಕ ಮುನ್ನುಡಿಗಳೊಡನೆ ಸಾಹಿತ್ಯವನ್ನು ಒದಗಿಸಿದ ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯ ಸ್ತುತ್ಯವಾಗಿದೆ. ಉಳಿದ ಸಂಘಸಂಸ್ಥೆಗಳೂ ಈ ಕಾರ್ಯವನ್ನು ಮುಂದುವರಿಸಿವೆ. ಇಂತಹ ಗ್ರಂಥಗಳಲ್ಲಿ ಕಂಡುಬರುವ ಅನೇಕ ಪಂಡಿತರ ಮುನ್ನುಡಿಗಳು ಉತ್ತಮ ಗದ್ಯರೀತಿಗೆ ದೃಷ್ಟಾಂತಗಳಾಗಿವೆ. ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಸ್ಫೂರ್ತಿಯುಕ್ತಶೈಲಿ, ಟಿ. ಎಸ್. ವೆಂಕಣ್ಣಯ್ಯನವರ ಪಾಂಡಿತ್ಯ ಪ್ರಚಾರವಾಗಿದ್ದರೂ ಶರತ್ ಪ್ರವಾಹದಂತೆ ತಿಳಿಯಾದ ಸರಣಿ, ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳ ವಾಕ್‌ಪ್ರೌಢಿಮೆಗಳು ಗಮನಾರ್ಹವಾಗಿವೆ. ಶ್ರೀ ಬಸವನಾಳರ 'ಮುನ್ನುಡಿ'ಗಳಲ್ಲಿ ಒಡೆದು ಕಾಣುವ ಅಚ್ಚಗನ್ನಡತನ, ವಿವರಣೆಯು ಹದ ಕನ್ನಡ ಅಭ್ಯಾಸಿಗಳಲ್ಲಿ ವಿಷಯಜಿಜ್ಞಾಸೆಯನ್ನು ಹುಟ್ಟಿಸುತ್ತದೆ. ಶ್ರೀ ಫ. ಗು. ಹಳಕಟ್ಟಿಯವರ ವಿಷಯ ವೈಶಾಲ್ಯದಿಂದೊಡಗೂಡಿದ ಅನಲಂಕೃತ ಭಾಷಾಸರಣಿ ಮತ್ತೊಂದು ಬಗೆಯದು. ಶ್ರೀ ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ'ದಂತಹ ಹೆಬ್ಬೊತ್ತಿಗೆ ವಿಮರ್ಶಾಸಾಹಿತ್ಯಕ್ಕೆ ಒಂದು ಹೆಮ್ಮೆಯ ಗುರುತು. ಅವರ ಆಳವಾದ ಅಭ್ಯಾಸ, ಸ್ಪಷ್ಟ ಧೋರಣೆಗಳು ಅದರಲ್ಲಿ ಅಚ್ಚಳಿಯದೆ ಮೂಡಿವೆ. ಹೊಸಗನ್ನಡ ಗದ್ಯದಲ್ಲಿ ಬರೆದರೂ ಶ್ರೀ ತಿಮ್ಮಪ್ಪಯ್ಯನವರು ಹಳಗನ್ನಡ ಪದಬಂಧವನ್ನು ಎಂದೂ ಸಡಲಿಸಲಾರರು. ವ್ಯಾಕರಣದ ಗೆರೆಗೆ ಒಳಗಿನಿಂತ ಅವರ ವಾಕ್ಯಗಳು ಓಜಸ್ಸಿನಿಂದ ಮೆರೆಯುತ್ತವೆ. ಶ್ರೀ ಮ. ಪ್ರ. ಪೂಜಾರರೂ ಸಾಲಿರಾಮಚಂದ್ರರಾಯರೂ ಇದೇ ರೀತಿಯ ಗದ್ಯವನ್ನೆ ಮೆಚ್ಚಿದವರು. ಅನ್ಯದೇಶ್ಯನುಡಿಗಳ ಕಲಕುಮಲಕಿಲ್ಲದೆ ವ್ಯಾಕರಣದ ದಿಗ್ಬಂಧನ ಮೀರದೆ ಸಂಪ್ರದಾಯಬದ್ಧವಾಗಿದ್ದರೂ 'ಸೊಗಸಿನ ಓದು' ಎನಿಸುವಂತಹ ಗದ್ಯರೀತಿ

ಇವರದು. ಒಂದು ತಪದ ಮೇಲೆ ಸರ್ವಜ್ಞನನ್ನು ಕುರಿತು ಅಭ್ಯಾಸಮಾಡಿದ ಶ್ರೀ ಉತ್ತಂಗಿ ಚೆನ್ನಪ್ಪನವರ ವಿಮರ್ಶಾರೀತಿ ಸರ್ವಜ್ಞನ ಗಂಡುಧಾಟಿಯನ್ನೆ ಅನುಸರಿಸಿದೆ. ಪ್ರೊ. ಮಾಳವಾಡರ ಪ್ರೊ. ಕುಂದಣಗಾರರ ಹಳಗನ್ನಡ ಸಾಹಿತ್ಯವನ್ನು ಕುರಿತ ವಿಮರ್ಶೆಗಳಲ್ಲಿ ಅಭ್ಯಾಸದ ಪರಿಶ್ರಮವನ್ನೂ, ಗದ್ಯವನ್ನೂ ಅಂದಗೊಳಿಸಿ ಹೇಳುವ ಪ್ರಯತ್ನವನ್ನು ಕಾಣಬಹುದು.

ಈಗಾಗಲೆ ರನ್ನ, ಕುಮಾರವ್ಯಾಸ, ಲಕ್ಷ್ಮೀಶ, ಹರಿಹರ ಮೊದಲಾದ ಕವಿಗಳ ಬಗ್ಗೆ ಹೊರಟ ಪ್ರಶಸ್ತಿಗ್ರಂಥಗಳಲ್ಲಿ ವಿವಿಧ ವಿಮರ್ಶಕರ ವಿವಿಧ ನೋಟಗಳನ್ನು ಕಾಣಬಹುದು. ಕತೆಯನ್ನು ಹೇಳುವಂತೆ ಹೃದಯಂಗಮವಾಗಿ ನಿರೂಪಿಸುತ್ತ ಸಾಗುವ ಶ್ರೀ ಪುಟ್ಟಪ್ಪ, ಸಿ. ಕೆ. ವೆಂಕಟರಾಮಯ್ಯ, ತೀ. ನಂ. ಶ್ರೀಕಂಠಯ್ಯನವರ ಶೈಲಿಗಳು ಒಂದು ಹಾದಿಯಾದರೆ, ವಾಕ್ಯವಾಕ್ಯಕ್ಕೆ ಕವಿಯ ಉಕ್ತಿಗಳನ್ನು ಉದ್ಧರಿಸುತ್ತ, ಅಲಂಕಾರಬದ್ಧವಾದ ಸುಂದರ ಶೈಲಿಯಲ್ಲಿ ವಿವೇಚನೆಮಾಡುತ್ತ ಸಾಗುವ ಶ್ರೀ ಎಸ್. ವಿ. ರಂಗಣ್ಣನವರ ತೂಕದಶೈಲಿ ಇನ್ನೊಂದು ಹಾದಿ; ಶ್ರೀ ಗೋವಿಂದ ಪೈಗಳವರ ವಿಮರ್ಶಾತ್ಮಕ ಪ್ರಬಂಧಗಳು ಹಳಗನ್ನಡ ಶಾಸನಗಳ ಮುನ್ನೀರಿನಲ್ಲಿ ಮುಳುಗಿಬಂದು ಹುರುಪುಗೊಂಡು ಕಾಣುತ್ತದೆ. ಅವರ ಸಂಶೋಧನಾತ್ಮಕ ವಿವೇಚನೆ ತಲೆತುರಿಸೆ ಹಚ್ಚಿದರೂ ಸಾಹಿತ್ಯ ವಿಮರ್ಶೆಯ ಶೈಲಿ ಅದರ ಸೌಹಾರ್ದ ವಿಶಾಲತೆ ಗಳಿಂದ ತಲೆದೂಗಿಸುತ್ತದೆ. ಶ್ರೀ ಡಿ. ಎಲ್. ನರಸಿಂಹಾಚಾರ್ಯರು, ಟಿ. ಟಿ. ಶರ್ಮರು, ಎಂ. ಎ. ದೊರೆಸ್ವಾಮಿ ಐಯಂಗಾರರು, ವಿಮರ್ಶಾಕ್ಷೇತ್ರದಲ್ಲಿ ತಮ್ಮ ತಮ್ಮದೇ ಆದ ಗದ್ಯಶೈಲಿಯನ್ನು ನಿರ್ಮಿಸಿದ್ದಾರೆ. ಪಾನ್ಯಂ ಸುಂದರಶಾಸ್ತ್ರಿ, ಸೆಡಿಯಾಪು ಕೃಷ್ಣಭಟ್ಟರು, ಕರ್ಪೂರ ಶ್ರೀನಿವಾಸರಾಯರು, ಶಿಥಿಲಶೈಲಿಯ ಸಂಪ್ರದಾಯ ಗದ್ಯವಂತರಾದರೂ ಅವರ ಲೇಖನಗಳ ಉಪಯುಕ್ತತೆಯನ್ನು ಯಾರೂ ಅಲ್ಲಗಳೆಯ ಲಾರರು. ಸಂಸ್ಕೃತ ಸಾಹಿತ್ಯವಿಮರ್ಶೆಯಲ್ಲಿ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳೂ ಸಿ. ಕೆ. ವೆಂಕಟರಾಮಯ್ಯನವರೂ ತೋರಿರುವ ಹಾದಿ ಕನ್ನಡಗದ್ಯದ ವಿಶಾಲತೆಯನ್ನು ನಿದರ್ಶಿಸುತ್ತದೆ. ವಿಷಯಭಕ್ತಿಯನ್ನೂ ವಿಮರ್ಶೆಯ ವಿವೇಕವನ್ನೂ ತೂಕವರಿತು ಬರೆಯುವ ಎ. ಆರ್. ಕೃಷ್ಣಶಾಸ್ತ್ರಿಗಳ ಬರವಣಿಗೆ ಒಂದು ಬಗೆಗೂ ಕವಿಭಕ್ತಿ, ಸರಸತೆ, ಉಕ್ತಿಉತ್ಸಾಹಗಳು ಇನ್ನೊಂದು ಬಗೆಗೂ ಉದಾಹರಣೆಗಳು.

ಕಲೆ, ಕಾವ್ಯ, ಇತರ ಸಾಹಿತ್ಯದ ಲಕ್ಷಣಗಳನ್ನು ಕುರಿತು ವಿಮರ್ಶಾಗ್ರಂಥಗಳು ಬರಬೇಕಾಗಿದೆಯೆನ್ನುವಾಗ ಶ್ರೀ ಒಡ್ಲಮನೆಯವರು ಸಂಸ್ಕೃತ ಅಲಂಕಾರ ಗ್ರಂಥಗಳ ನೆರಳಿನಲ್ಲಿ ಬಂಧದ ಬಿಗುವಿಲ್ಲದೆ ಬರೆದ 'ನಾಟಕಕಲೆ'ಯು ಪಾಶ್ಚಾತ್ಯದೃಷ್ಟಿಯ ಒಪ್ಪವಿಲ್ಲದಿದ್ದರೂ ಉಪಯುಕ್ತವಾಗಿದೆ.

ಶ್ರೀ ದಿವಾಕರರ ಅದ್ವಿತೀಯ ಪ್ರಯತ್ನವಾದ, ‘ವಚನಶಾಸ್ತ್ರರಹಸ್ಯ’ವು ವಿಮರ್ಶನ ಸಾಹಿತ್ಯದಲ್ಲಿಯೂ ಅಗ್ರಸ್ಥಾನ ಪಡೆಯುತ್ತದೆ, ಧಾರ್ಮಿಕ ಸಾಹಿತ್ಯದಲ್ಲಿಯೂ ಉನ್ನತಿಕೆಯನ್ನು ಹೊಂದುತ್ತದೆ. ಅವರ ಸ್ವಂತಪರಿಶ್ರಮದ ಸಾಫಲ್ಯ ಈ ಕೃತಿಯಲ್ಲಿ ಅಮೋಘವಾಗಿದೆ. ಅವರದೇ ಒಂದು ದೃಷ್ಟಿ, ಅವರದೇ ಒಂದು ಗದ್ಯಧಾಟಿ. ಇಲ್ಲಿ ವಿಷಯ ವಿವೇಚನೆಯೆ ಪ್ರಧಾನ, ಶೈಲಿ ಗೌಣ.

ಇತಿಹಾಸ, ಸಾಹಿತ್ಯ ಎರಡನ್ನು ಸಮನ್ವಯಿಸಿಕೊಂಡು ಕನ್ನಡಿಗರು ‘ಪುಲಕಿತಕೇಶ’ರಾಗುವಂತೆ ಪುಲಿಕೇಶಿಯ ವೀರಚರಿತ್ರೆಯನ್ನು ಚಿತ್ರಿಸಿದ ‘ಕನ್ನಡ ಕುಲಪುರೋಹಿತರಾದ ಶ್ರೀ ಆಲೂರ ವೆಂಕಟರಾಯರು ಇತಿಹಾಸ-ಸಾಹಿತಿಗಳಿಗೆ ಹೊಸ ಹಾದಿಯನ್ನು ತೋರಿದರು. ಅವರ ‘ಗತವೈಭವವು’ ರಕ್ತಗತವಾಗಿ ಅರಗಿದ ಅವರ ಕನ್ನಡತನದ ಗಾಯತ್ರಿ ಜಪವಾಗಿದೆ. ‘ಕರ್ನಾಟಕ ವೀರರತ್ನಗಳು’ ಮತ್ತು ‘ಗತವೈಭವ’ದಲ್ಲಿ ಕನ್ನಡ ಚೈತನ್ಯವು, ನಾಡಿ ನಾಡಿಯೊಳಗಿನ ರಕ್ತದಂತೆ ಸಾಲುಸಾಲುಗಳ ಪ್ರಣಾಲಿಯಲ್ಲಿ ಹರಿದಾಡಿದೆ; ಕನ್ನಡ ಶಾಸನ ಸಾಹಿತ್ಯ ವೈಖರಿ ಮಿಂಚಾಡಿದೆ. ಇಲ್ಲಿ ಐತಿಹಾಸಿಕ ಸೂಕ್ಷ್ಮತನಕ್ಕಿಂತ ಅಭಿಮಾನದ ಸ್ಫೂರ್ತಿಯೆ ಹೆಚ್ಚು. ಆ ಸ್ಫೂರ್ತಿಯ ಕೆಚ್ಚು ಅನೇಕ ಬಳಕೆಯ ಶಬ್ದಗಳಿಗೆ ಹೊಳಪು ಕೊಟ್ಟು ಗ್ರಂಥಸರಣಿಯಲ್ಲಿ ಕುಂದಣಿಸಿದೆ. ಚ. ವಾಸುದೇವಯ್ಯನವರ ಆರ್ಯಕೀರ್ತಿಯು ಉಜ್ವಲವಾಣಿ ಗದ್ಯದ ಒಂದು ಕೆಚ್ಚನ್ನು ತೋರಿಸುತ್ತದೆ. ಶ್ರೀ ದೇಸಾಯಿ ಪಾಂಡುರಂಗರಾಯರ ‘ಮಿಂಚಿದ ಮಹಿಳೆಯರು’ ಐತಿಹಾಸಿಕ—ಲಲಿತ ಕತೆಗಳ ಸಂಗ್ರಹದಂತೆ ಪರಿಣಮಿಸಿದರೂ, ಐತಿಹಾಸಿಕ ಸತ್ಯಕ್ಕೆ ಎಲ್ಲಿಯೂ ಅತಿಶಯೋಕ್ತಿಯ ಬಣ್ಣ ಬಂದಿಲ್ಲ. ಶೈಲಿಯ ಸೌಂದರ್ಯಕ್ಕಾಗಿ ಪಟ್ಟ ಪರಿಶ್ರಮ ಅಲ್ಲಲ್ಲಿ ಕಂಡುಬರುತ್ತದೆ.

ಪತ್ರಿಕಾಕರ್ತರಾಗಿ ಶ್ರೀ ಆಲೂರವರು ‘ಜಯಕರ್ನಾಟಕ’ದಲ್ಲಿ ಬರೆದ ‘ಸಂಪಾದಕೀಯ ಬಿಡಿನುಡಿಗಳು’ ಎಂದಿಗೂ ನೆನಪಿನಲ್ಲಿರತಕ್ಕವು. ಅವರ ಅಧಿಕಾರವಾಣಿಯಲ್ಲಿ ಸತ್ಯ ನಿಷ್ಠುರತೆಯು ಕಂಡುಬರಬಹುದು. ಶ್ರೀ ಮುದವೀಡು ಕೃಷ್ಣರಾಯರೂ ಪತ್ರಿಕಾ ಸಂಪಾದಕರಾಗಿ ಗುಂಡುಹೊಡೆದಂತೆ, ತಮ್ಮ ಗಂಡು ಮಾತಿನಿಂದ ಅನ್ಯ ಪ್ರಾಂತೀಯರ ಅತ್ಯಾಚಾರವನ್ನು ಖಂಡಿಸಿದ್ದಾರೆ; ಕನ್ನಡಿಗರನ್ನೆಚ್ಚರಿಸಿದ್ದಾರೆ. ಇದೇ ರೀತಿಯಲ್ಲಿ ಆಗಾಗ ‘ಜಯಂತಿ’ಯಲ್ಲಿ ವಿವಿಧ ಶೀರ್ಷಿಕೆಗಳಲ್ಲಿ ಬರುವ ಸಂಪಾದಕ ವಾಣಿ, ‘ಪ್ರಬುದ್ಧ ಕರ್ನಾಟಕ’ದ ‘ವಸ್ತುಕೋಶ’ ‘ಸಂಪಾದಕೀಯ’ ನುಡಿಗಳು, ‘ವಿಶ್ವಕರ್ನಾಟಕ’ದ ಹಿಂದಿನ ಸಾಹಿತ್ಯ ಸಂಚಿಕೆಗಳ ಸಂಪಾದಕೀಯ ಟಿಪ್ಪಣಿಗಳು—ಇವೆಲ್ಲಾ ‘ಪತ್ರಿಕಾ ಸಾಹಿತ್ಯ’ದ ಗದ್ಯಕ್ಕೆ ಅನೇಕ ಉದಾಹರಣೆಗಳಾಗಿವೆ. ಕನ್ನಡದ ದಿನ ವಾರ ಪತ್ರಿಕೆಗಳ ಮಟ್ಟ ಇನ್ನೂ ಮೇಲಾಗಬೇಕು.

ಇನ್ನಷ್ಟು ಒಳ್ಪು-ಬಿಣ್ಪು ಬರಬೇಕಾದರೆ ಅವೂ ಇದೇ ಹಾದಿಯಲ್ಲಿ ಹೆಜ್ಜೆ ಇಡಬೇಕು. ಆದರೆ ನಾಡಿನ ಬೇರೆ ಬೇರೆ ಪ್ರಾದೇಶಿಕ ಭಾಗಗಳನ್ನು ಒಂದುಮಾಡುವ ನುಡಿಧಾಟಿಗಳನ್ನು ಬೆಸೆಯುವದರಲ್ಲಿಯೂ ದಿನಚರಿಯ ಎಲ್ಲ ಕೆಲಸಕ್ಕೆ ಒದಗುವ ಗದ್ಯವನ್ನು ನಿರ್ಮಾಣಮಾಡಿ ಸುದ್ದಿ ಹರಡುವುದಕ್ಕೂ ವೃತ್ತಪತ್ರಿಕೆಗಳು ಮಾಡುತ್ತಿರುವ ಸೇವೆ ಅಮೋಘವಾದುದು.

'ರಾಜಕೀಯ ಸಾಹಿತ್ಯ'ದಲ್ಲಿ ಶ್ರೀ ಸಿ. ಕೃಷ್ಣಶರ್ಮರು ಹೊರಡಿಸಿರುವ 'ನಿರ್ಭಾಗ್ಯ ಬೋರೇಗೌಡ,' ದೊರೆಸ್ವಾಮಿ ಐಯಂಗಾರರ 'ಏಶಿಯ ಖಂಡದ ಜಾಗ್ರತೆ'ಗಳು ಆರಂಭದಲ್ಲಿಯೆ ಆದರ್ಶ ಮಾರ್ಗವನ್ನು ಗುರಿಯಿಟ್ಟುಕೊಂಡು ಹೊರಟಂಥವು. 'ಸತ್ವಶಾಲಿ ರಸಿಯಾ' 'ಮುಂದುವರಿದ ಜಪಾನ' 'ಉಕ್ಕಿನ ಮನುಷ್ಯ' 'ಗಾಂಧೀ ಸಾಹಿತ್ಯ' 'ರಾಷ್ಟ್ರೀಯ ಪಂಚಾಯಿತಿ' 'ಗಾಂಧೀಜಿ' (ಕನ್ನಡ ಅನುವಾದ)—ಶ್ರೀ ಅರವಿಂದರ ವಿಚಾರಗಳನ್ನು ಕನ್ನಡಿಸಿ ಹೇಳುವ 'ಭಾರತೀಯ ನವಜನ್ಮ' ಇವೆಲ್ಲವೂ ಕನ್ನಡ ಗದ್ಯವು ರಾಜಕೀಯ ಸಾಹಿತ್ಯದಲ್ಲಿ—ಅನುವಾದಗಳಿಂದೊಡಗೂಡಿದ್ದರೂ—ಹೇಗೆ ವಿವಿಧ ರೂಪವಾಗಿ ಹಬ್ಬಿಕೊಂಡಿದೆ ಎಂಬುದನ್ನು ತಿಳಿಯಪಡಿಸುತ್ತವೆ.

ಶ್ರೀ ವಿ. ಸೀ. ಯವರ 'ಹಣ ಪ್ರಪಂಚ'ವು ಅರ್ಥಶಾಸ್ತ್ರದಲ್ಲಿ ಕನ್ನಡಕ್ಕೊಂದು ಪೂರ್ಣ ಕಾಣಿಕೆ. ಮೈಸೂರು ಪ್ರಚಾರ ಮಾಲೆಯಲ್ಲಿ ಉಳಿದ ಜ್ಞಾನ ಸಾಹಿತ್ಯದೊಂದಿಗೆ 'ಅರ್ಥಶಾಸ್ತ್ರ'ಕ್ಕೆ ಸಂಬಂಧಿಸಿದ ಚಿಕ್ಕ ಹೊತ್ತಿಗೆಗಳೂ ಕನ್ನಡ ಗದ್ಯದ ವಿವಿಧತೆಗೆ ಸಾಕ್ಷಿಯಾಗಿವೆ.

ಧಾರ್ಮಿಕ ಸಾಹಿತ್ಯದಲ್ಲಿ ಮಧುರ ಚೆನ್ನರ 'ಕಾಳರಾತ್ರಿ'ಯ ಅನುಭಾವ ಗದ್ಯ ಸರಣಿ, ಧಾರ್ಮಿಕ ವಿವೇಚನೆಯನ್ನು ಸಾಹಿತ್ಯ ವಿಮರ್ಶೆಯನ್ನು ಕೂಡಲ ಸಂಗಮದಂತೆ ಸಂಗಡಿಸಿ ಹೇಳುವ ಶ್ರೀ ಎಂ. ಆರ್. ಶ್ರೀ ಯವರ 'ಭಕ್ತಿ ಭಂಡಾರಿ ಬಸವಣ್ಣನವರೊಳಗಿನ ವಿಶೇಷ ಶೈಲಿಗಳು ಕನ್ನಡ ಗದ್ಯದಲ್ಲಿ ಈ ಹಾದಿಯ ಎರಡು ಲಕ್ಷಣಗಳು. ಬೌದ್ಧ ಧರ್ಮವನ್ನು ಕುರಿತು ಶ್ರೀ ಜಿ. ಪಿ. ರಾಜರತ್ನಂರ ಕೃತಿಗಳು ಕೃತಿರತ್ನಗಳಾಗಿ ಕನ್ನಡ ಗದ್ಯವನ್ನಲಂಕರಿಸಿವೆ. 'ಗ್ರೀಕ ತತ್ವಜ್ಞಾನ'ವು ಪಾಶ್ಚಾತ್ಯ ತತ್ವಜ್ಞಾನವನ್ನು ನಿರೂಪಿಸುವುದರಿಂದ ಇಂದಿನ ಗದ್ಯ ವಾಙ್ಮಯಕ್ಕೆ ಇನ್ನೊಂದು ವೈಶಿಷ್ಟ್ಯವನ್ನು ತಂದಿದೆ. ಶ್ರೀ ಗೊರೂರರ 'ಕರ್ಮಯೋಗ,' ಮಧುರ ಚೆನ್ನರ 'ಪೂರ್ಣಯೋಗ'ಗಳಲ್ಲಿ ಒಂದೊಂದು ವಿಧದ ಪ್ರೌಢ ಗದ್ಯವಿದೆ. ಅಖಿಲ ಭಾರತೀಯ ದರ್ಶನಗಳನ್ನು ಅಖಂಡವಾಗಿ ವಿವೇಚಿಸುವ, 'ಹಿಂದೂ ದರ್ಶನಸಾರ'ವು ಓಜಸ್ವಿ ಗ್ರಂಥವಾಗಿದೆ.

'ಭಾಷಾ ಶಾಸ್ತ್ರ'ದಲ್ಲಿ ಶ್ರೀ ಶಂ. ಬಾ. ಜೋಶಿಯವರು ನಿರ್ಮಿಸಿದ ಸಾಹಿತ್ಯವು ಕನ್ನಡ ಸರಸ್ವತಿಗೊಂದು ಅಪೂರ್ವ ಉಡುಗೊರೆ. ಅವರ ಮಾಂತ್ರಿಕ ಹಸ್ತದಿಂದ ಕನ್ನಡ ಭಾಷೆ ವಿವಿಧಮುಖವಾಗಿ ಕುದುರುತ್ತಲಿದೆ. 'ಕನ್ನಡದ ಸೆಲೆ,' 'ಕನ್ನಡದ ಜೀವಾಳ' 'ಕಣ್ಮರೆಯಾದ ಕನ್ನಡ'ಗಳು ಅವರ ಸಂಶೋಧನದ ಬೆಳಕಿನಿಂದ ನಮ್ಮ ಕಣ್ಣೆದುರಿಗೆ ಬರುತ್ತಲಿವೆ. ವೈಜ್ಞಾನಿಕ ಪ್ರಪಂಚದಲ್ಲಿ 'ಗತಕಾಲದ ಗುರುತುಗಳು' 'ಆಕಾಶವಾಣಿ,' 'ಆಕಾಶಗಮನ ಸಾಹಸ,' 'ವಿಜ್ಞಾನಿಗಳ ಕತೆಗಳು,' 'ವಿಜ್ಞಾನ' ಎಂಬ ಗ್ರಂಥಗಳು ಅತ್ಯಂತ ಉಪಯುಕ್ತವಾಗಿದೆ. ಶ್ರೀ ಕಾರಂತರ 'ಬಾಲಪ್ರಪಂಚವೂ,' ಜಿ. ಪಿ. ಯವರ ಮತ್ತು ಹೊಯಿಸಳರ ಶಿಶು ಸಾಹಿತ್ಯವೂ ಮಕ್ಕಳ ವಿಜ್ಞಾನದಲ್ಲಿ ಹೊಸ ಸೃಷ್ಟಿಯನ್ನು ನಿರ್ಮಿಸಿ ಕನ್ನಡ ಗದ್ಯ ಭಂಡಾರವನ್ನು ಹೆಚ್ಚಿಸಿವೆ. ನಮ್ಮ ಹೊಸಗನ್ನಡ ಗದ್ಯವಲ್ಲರಿ ಇತ್ತೀಚೆಗೆ—ವಿಜ್ಞಾನಶಾಸ್ತ್ರ (ಪದಾರ್ಥ ವಿಜ್ಞಾನ, ರಸಾಯನ ಶಾಸ್ತ್ರ ಇ.) ಮಾನಸ ಶಾಸ್ತ್ರ, ಶಿಕ್ಷಣ ಶಾಸ್ತ್ರ, ಸಮಾಜ ಶಾಸ್ತ್ರಗಳ ವಿವಿಧ ಶಾಖೆಗಳಲ್ಲಿಯೂ ಚಿಲ್ಪರಿದು ಬೆಳೆಯುತ್ತಲಿದೆ. ಇನ್ನೂ ಎಷ್ಟೋ ಕ್ಷಿತಿಜಗಳನ್ನು ಅದು ತೆಗೆದು ಬೆಳಕನ್ನು ಬಿಡಬೇಕಾಗಿದೆ. ಹೊಸ ಹೊಸ ಚಿನ್ನದ ಗಣಿಗಳನ್ನು ಅಗಿದು ಬಗಿದು ನೋಡಬೇಕಾಗಿದೆ. ಹೀಗೆ ಹೊಸ ಹೊಸ ಕ್ಷಿತಿಜಗಳ ಮುಂಬೆಳಗು ಹೊಸ ಹೊಸ ಗಣಿಗಳ ಹೊಂಬೆಳಗು ಕೂಡಿದಾಗ ಕನ್ನಡ ಸಾಹಿತ್ಯ ದೇವಿಗೆ ಒಪ್ಪುವ ಶಿರೋಭೂಷಣವಾಗಲಿಕ್ಕಿಲ್ಲವೆ ಅದು?

ಎನ್ಕೆ. ಕುಲಕರ್ಣಿ.

೩. ಕನ್ನಡ ಕಾದಂಬರಿಗಳು
(೧೯೨೦-೪೫)

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕನ್ನಡ ಕಾದಂಬರಿ ಬೆಳೆದ ಬಗೆ ಮತ್ತು ತಳೆದ ರೂಪ ಇವನ್ನು ಕುರಿತು ವಿವೇಚಿಸುವುದು ಈ ಲೇಖನದ ಮುಖ್ಯ ಉದ್ದೇಶ. ಇಂಥ ವಿವೇಚನೆಯಲ್ಲಿ ಬರತಕ್ಕ ಎಲ್ಲ ವಿಷಯಗಳೂ ಇದರಲ್ಲಿ ಬರಲಾರವು. ಎಲ್ಲ ಕಾದಂಬರಿಗಳ ಕಾದಂಬರಿಕಾರರ ಉಲ್ಲೇಖವೂ ಸಾಧ್ಯವಿಲ್ಲ. ನನಗೆ ತೋರಿದಂತೆ ಹಲವು ಮುಖ್ಯ ವಿಷಯಗಳನ್ನು ನಿರೂಪಿಸಬೇಕೆಂದು ಮಾಡಿದ್ದೇನೆ. ಯಾವುದನ್ನಾದರೂ ಬಿಟ್ಟಹಾಗೆ ತೋರಿದರೆ, ಕಾಗದನಿಯಂತ್ರಣದ ಜೊತೆಗೆ ನನ್ನ ಲೆಕ್ಕಣಿಕೆಗೆ ನಾನು ಹಾಕಿದ ನಿಯಂತ್ರಣವೂ ಕಾರಣವೆಂದು ತಿಳಿಯಬೇಕು.

ಇಲ್ಲಿ ಆರಿಸಿಕೊಂಡ 'ಬೆಳ್ಳಿ'ಯ ಕಾಲಾವಧಿ ವಿವೇಚನೆಯ ಸೌಕರ್ಯಕ್ಕಾಗಿ ಎಂಬುದು ನಿಜವಾದರೂ ಅದಕ್ಕೆ ಔಚಿತ್ಯದ ಬೆಂಬಲವೂ ಇದೆ. ೧೯೨೦-೨೧ರಿಂದ ಮುಂದಿನ ಕಾಲವು ಕರ್ನಾಟಕದಲ್ಲೆಲ್ಲ ಹೊಸ ಚೈತನ್ಯ ಸ್ಫುರಿಸಿದ ಕಾಲ. ರಾಷ್ಟ್ರೀಯ ಜೀವನದಲ್ಲಿಯ ಅಲ್ಲೋಲಕಲ್ಲೋಲವೂ ಪ್ರಾಂತೀಯ ಜೀವನದಲ್ಲಿಯ ಆತ್ಮ ಸಮರ್ಥನೆಯೂ ಕೂಡಿ ಹಿರಿಯರಲ್ಲಿ, ತರುಣರಲ್ಲಿ ಹೊಸ ಆಸೆ ಆಕಾಂಕ್ಷೆಗಳನ್ನೂ ಸಂಕಲ್ಪಗಳನ್ನೂ ಚಿಮ್ಮಿಸಿತು. ಹೊಸ ಬಾಳನ್ನು ಕಟ್ಟಬೇಕು, ಹೊಸ ಸಾಹಿತ್ಯದಿಂದ ಕನ್ನಡ ನುಡಿಯನ್ನು ಸಿಂಗರಿಸಬೇಕು ಎಂಬ ಸ್ಥಿರವಾದ ದರ್ಶನ ಮತ್ತು ಉಕ್ಕುವ ಉತ್ಸಾಹ ಕನ್ನಡನಾಡಿನ ಎಲ್ಲ ಭಾಗಗಳಲ್ಲಿ ತಲೆದೋರಿದುವು. ೧೯೨೦ರ ಹಿಂದಿನ ಕಾಲದಲ್ಲಿ ಈ ಬೆಳಗನ್ನು ಸೂಚಿಸುವ ನಸುಕೂ ತಂಗಾಳಿಯೂ ತೋರದಿಲ್ಲ. ಆದರೆ ಅದು ನಿಚ್ಚಳವಾದ ಬೆಳಗಾದೀತೇ ಎಂಬ ಭಯವಿತ್ತು. ಹೊಸ ಸಾಹಿತ್ಯ ಉದಯವಾಗಿತ್ತು, ಆದರೆ ಅದಕ್ಕೆ ತನ್ನದೆಂಬುವ ಕಳೆ ಹೆಚ್ಚಾಗಿರಲಿಲ್ಲ. ಕಾಲ ಪರಿಸ್ಥಿತಿಯಲ್ಲಿ ಸಿಕ್ಕುಹೋದ ಸ್ವತಂತ್ರ ಪ್ರತಿಭೆಯ ಕಲಾವಿದರು ಸಹ ಪರಾನುಕರಣದಲ್ಲಿ ತೊಡಗಿದ್ದರು. ಚಿರಸ್ಮರಣೀಯವಾದ ಬಿ. ವೆಂಕಟಾಚಾರ್ಯರೂ ಗಳಗನಾಥರೂ ಬಂಗಾಲಿ ಮರಾಠಿ ಸಾಹಿತ್ಯಭಂಡಾರದಿಂದ ಬೆಲೆಯುಳ್ಳ ಕೃತಿಗಳನ್ನು ತಂದು, ತೆರವಾಗಿದ್ದ ಕನ್ನಡದ ಕಣಜವನ್ನು ರಾಸಿಯಾಗಿ ತುಂಬಿದರು. ಭಾಷಾಂತರಿತ ಕಾದಂಬರಿಗಳೇ ಹೊಸಗನ್ನಡದ ಮೊದಲಗಿತ್ತಿಯರಂತೆ ಮೆರೆದುವು. ಹೊಸ ಅಭಿರುಚಿಗೆ ಅವೇ ಕಾರಣವಾದುವು. ಅವುಗಳಲ್ಲಿ ಮೆಚ್ಚತಕ್ಕ ಕೌಶಲ್ಯವೂ ಶೈಲಿಯ ಮೋಹಕತೆಯೂ ತೋರಿವೆ. ಆದರೂ ಅವುಗಳ ತಂತ್ರವೆಲ್ಲ ಹಳೆಯದು, ರೀತಿ ಏಕರೀತಿ.

ವಿಷಯನಿರೂಪಣೆಯ ವೈವಿಧ್ಯಕ್ಕಂತೂ ಎಡೆಯೆ ಇಲ್ಲ. ವರ್ಣನೆಗಳ ಅತಿವಿಸ್ತರ—ಅನೌಚಿತ್ಯ, ಸ್ವಭಾವ-ಸನ್ನಿವೇಶಗಳ ಕೃತಕತೆ, ವಾಚಕರನ್ನು ಕುರಿತು ಮಾಡಿದ ಉಪದೇಶ-ಅನುನಯ ಎಲ್ಲಾ ಗಂಭೀರಕ್ಕೆ ಹಾಸ್ಯದ ಸ್ವರೂಪಕೊಡುವಂತಾದುವು. ಆದರೂ ಬಂಕಿಂಚಂದ್ರರ ರಾಷ್ಟ್ರದರ್ಶನ, ಅದ್ಭುತರಮ್ಯ ಕಥನಕಲೆ ಇವುಗಳಿಂದ ವೆಂಕಟಾಚಾರ್ಯರ ಕೃತಿಗಳೂ ಮರಾಠಿ ಕಾದಂಬರಿಕಾರರ ದೇಶಧರ್ಮನಿಷ್ಠೆ, ರೋಮಾಂಚಕಾರಕ ಚರಿತ್ರೆ ಇವುಗಳಿಂದ ಗಳಗನಾಥರ ಕೃತಿಗಳೂ ಅವರಿಬ್ಬರ ವಿಶಿಷ್ಟವಾದ ಶೈಲಿಗಳಲ್ಲಿ ಬೆಳಗಿದುವು. ದೇವೀ ಚೌಧುರಾಣಿಯಂಥ ಅನುವಾದಿತ ಕಾದಂಬರಿಗಳಲ್ಲಿ ಅದ್ಭುತರಮ್ಯ ಅಂಶಗಳೊಡನೆ ಸಾಮಾಜಿಕ ಜೀವನದ ಚಿತ್ರವೂ ಚೆನ್ನಾಗಿ ಮೂಡಿಬಂತು. ಆದರೆ ಎಂ. ಎಸ್. ಪುಟ್ಟಣ್ಣನವರ ಕಾದಂಬರಿಗಳಲ್ಲಿ ಮೈಸೂರಿನ ಜನಜೀವನದ ವಾಸ್ತವಚಿತ್ರವೂ ಕೆರೂರ ವಾಸುದೇವಾಚಾರ್ಯರ 'ಇಂದಿರೆ'ಯಲ್ಲಿ ಸುಶಿಕ್ಷಿತ ಸಮಾಜದ ಕಾಲ್ಪನಿಕಚಿತ್ರವೂ ಸ್ವತಂತ್ರವಾಗಿ ತಲೆದೋರಿದುವು. ಶ್ರೀಮತಿ ತಿರುಮಲಾಂಬಾಯವರ ಕೃತಿಗಳಲ್ಲಿ ಸಾಮಾಜಿಕ ಚರ್ಚೆಗಳು ಕತೆಯ ಹಿನ್ನೆಲೆಯಲ್ಲಿ ಪ್ರಮುಖವಾದುವು. ಹೀಗೆ ಅನುವಾದ ಯುಗದಲ್ಲಿ ಸಹ ಕೆಲವಾದರೂ ಸ್ವತಂತ್ರ ಕಾದಂಬರಿಗಳು—ಅದರಲ್ಲಿಯೂ ಸಾಮಾಜಿಕ ಕಥೆಗಳು—ಹುಟ್ಟಿದುವೆಂಬುದನ್ನು ಮರೆಯಲಾಗದು.

೧೯೨೦ರಿಂದ ಮುಂದಿನ ಕಾಲವೇ ಮುಖ್ಯವಾಗಿ ನಿರ್ಮಾಣಶೀಲ ಯುಗದ ಪ್ರಾರಂಭಕಾಲವಾಯಿತು. ಅನುಕರಣದ ಸ್ಥಳದಲ್ಲಿ ಸ್ವತಂತ್ರ ಪ್ರತಿಭೆಯ ಆವಿಷ್ಕರಣ ಹೆಚ್ಚಾಯಿತು. ಮೊದಲು ಅನುವಾದಕರಾಗಿದ್ದ ಗಳಗನಾಥರೂ ಸ್ವತಂತ್ರ ಕೃತಿಗೆ ಕೈಯಿಕ್ಕಿದರು. ಹೊಸವಿದ್ಯೆ, ಹೊಸ ಸಂಸ್ಕಾರ, ಹೊಸ ಧ್ಯೇಯಾದರ್ಶನಗಳಿಂದ ನಾಡಿನ ನಾಡಿಯ ಮಿಡಿತವೇ ಬೇರೆಯಾಯಿತು. ಕವಿತೆ, ಕಥೆ, ನಾಟಕ ಮುಂತಾದ ವಿವಿಧ ರೂಪಗಳಲ್ಲಿ ಹೊಸ ಸಾಹಿತ್ಯ ಸ್ವತಂತ್ರಲಾಸ್ಯದ ಹೆಜ್ಜೆಗಳನ್ನು ಧೈರ್ಯವಾಗಿ ಇಡತೊಡಗಿತು. ಕಾದಂಬರಿ ಇದಕ್ಕೆ ಅಪವಾದವಾಗಿಲ್ಲ. ಆದರೆ ಗತಿ ಮಂದವಾಗಿದೆ. ಈ ಇಪ್ಪತ್ತೈದು ವರ್ಷಗಳ ಗಣ್ಯವಾದ ಕಾದಂಬರಿಗಳಲ್ಲಿ ಸ್ವತಂತ್ರ ಗ್ರಂಥಗಳು ಎಷ್ಟೆಂದರೆ ಸುಮಾರು ಐವತ್ತು ಮಾತ್ರ. ಅಂದರೆ ಸರಾಸರಿ ವರ್ಷಕ್ಕೆರಡು! ಉಳಿದ ಸುಮಾರು ಮೂವತ್ತು ಪರಿವರ್ತನ ಗ್ರಂಥಗಳು. ೧೯೨೦ರ ಹಿಂದಿನ ಕಾಲದ ಮತ್ತು ಈ ಕಾಲಖಂಡದ ಎಲ್ಲ ಕಾದಂಬರಿಗಳನ್ನು ಎಣಿಸಿದರೆ ೨೦೦ನ್ನು ಮೀರಬಹುದು. ಅಂದರೆ ೧೯೨೦ಕ್ಕಿಂತ ಹಿಂದೆ ಕಾದಂಬರಿಯ ಬೆಳೆ ಹೆಚ್ಚು ಹುಲುಸಾಗಿತ್ತೆಂದು ಅಂಕಿಗಳು ಸಾರಿದಂತಾಗುತ್ತದೆ. ಆದರೆ ಅಂಥಿಂಥ ಎಲ್ಲಾ ಬರೆಹಗಳನ್ನೂ ಈ ಎಣಿಕೆಯಲ್ಲಿ ಹಿಡಿದಿದೆ ಎಂಬುದನ್ನು ನೆನೆಯಬೇಕು.

ಕಲೆಯು ಒಂದು ನೆಲೆಗೇರಿದ, ಅದರಲ್ಲಿಯೂ ಸ್ವತಂತ್ರವಾದ ಗ್ರಂಥಗಳು ೧೯೨೦ರ ಹಿಂದಿನ ಕಾಲದಲ್ಲಿ ಕಡಿಮೆ ಎಂಬುದು ಸ್ವತಸ್ಸಿದ್ಧ ಸಂಗತಿಯಾಗಿದೆ.

ಈ ಬೆಳ್ಳಿಯ ಕಾಲದಲ್ಲಿ ಸಾಮಾಜಿಕ ಕಾದಂಬರಿಗಳ ಸಂಖ್ಯೆ ಹೆಚ್ಚಿದೆ. ಇದು ಹೊಸ ಯುಗದ ಸಾಮಾಜಿಕ ದರ್ಶನದ ಪರಿಣಾಮ. ಪೌರಾಣಿಕ ಕಥೆಗಳ ಬರೆವಣಿಗೆ ಇನ್ನೂ ಸಾಗಿದ್ದರೂ ಅಂಥ ಕಾದಂಬರಿಗಳು ಇಲ್ಲವೆಂದರೂ ತಪ್ಪಿಲ್ಲ. ಐತಿಹಾಸಿಕ ಕಾದಂಬರಿಗಳು ಸುಮಾರು ಹದಿನೈದು ಮಾತ್ರ, ಅದೇ ಸಾಮಾಜಿಕ ಕಾದಂಬರಿಗಳು ಸುಮಾರು ೩೫ ಸ್ವತಂತ್ರ, ಸುಮಾರು ೩೦ ಅನುವಾದಿತ, ಹೀಗೆ ಒಟ್ಟು ೮೦ ಎಂದಾಯಿತು. ಈ ಕಾದಂಬರಿಗಳ ಪ್ರಕಟನ ಕಾರ್ಯವನ್ನು ಹಲವಾರು ಪತ್ರಿಕೆಗಳು ಹಾಗೂ ಗ್ರಂಥಮಾಲೆಗಳು ಕೈಕೊಂಡು ಯಶಸ್ವಿಯಾಗಿ ನೆರವೇರಿಸಿವೆ. ಹಿಂದಿನ ಕಾಲದಿಂದ ಶೇಷಾಚಲ ಗ್ರಂಥಮಾಲೆ, ಗಳಗನಾಥರ ಸುರಸ ಗ್ರಂಥಮಾಲೆ, ಸತೀಹಿತೈಷಿಣೀ ಗ್ರಂಥಮಾಲೆ ಮುಂತಾದ ಮಾಲೆಗಳು ನೆನೆಯತಕ್ಕ ಸೇವೆ ಸಲ್ಲಿಸಿದಂತೆ ಇಂದಿನ ಕಾಲದಲ್ಲಿ ಜಯಕರ್ನಾಟಕ ಗ್ರಂಥಮಾಲೆ, ಮನೋಹರ ಗ್ರಂಥಮಾಲೆ, ಬಾಲಸಾಹಿತ್ಯ ಮಂಡಳ, ಲಲಿತಸಾಹಿತ್ಯಮಾಲೆ, ವಸಂತ ಗ್ರಂಥಮಾಲೆ ಮುಂತಾದ ಹಲವಾರು ಹಳೆಯ ಹೊಸ ಮಾಲೆಗಳು ಕಾದಂಬರೀ ಪ್ರಕಾಶನದ ಪ್ರಶಂಸನೀಯ ಕಾರ್ಯವನ್ನು ಮಾಡುತ್ತಿರುವವು. ಎಲ್ಲವನ್ನೂ ಇಲ್ಲಿ ಹೆಸರಿಸುವುದು ಸಾಧ್ಯವಿಲ್ಲ. ಮನೋಹರ ಗ್ರಂಥಮಾಲೆಯೊಂದರ ವಿಶೇಷ ಉಲ್ಲೇಖವನ್ನು ಮಾಡುವುದು ಉಚಿತವೆಂದು ತೋರುತ್ತದೆ. ಈ ಗ್ರಂಥಮಾಲೆ ಹೊರಡುವುದಕ್ಕಿಂತ ಮೊದಲು ೧೯೨೦ರಿಂದ ೧೯೩೩ರ ಅವಧಿಯಲ್ಲಿ ಅಲ್ಲೊಂದು ಇಲ್ಲೊಂದು ಕಾದಂಬರಿ ಪ್ರಕಟವಾಗುತ್ತಿದ್ದುದಲ್ಲದೆ ಸ್ವತಂತ್ರ ಹಾಗೂ ಮೇಲ್ತರಗತಿಯ ಕಾದಂಬರಿಗಳ ಪ್ರಕಾಶನಕ್ಕೆಂದು ಸುಸಂಘಟಿತವಾದ ಪ್ರಯತ್ನಗಳಾಗಿರಲಿಲ್ಲ. ಈ ಕೊರತೆಯನ್ನು ಹೋಗಲಾಡಿಸಲು ೧೯೩೩ರಲ್ಲಿ ಮನೋಹರ ಗ್ರಂಥಮಾಲೆಯು ಸ್ಥಾಪನೆಯಾಗಿ, ಹನ್ನೆರಡು ವರ್ಷಗಳಿಂದ ವರ್ಷಕ್ಕೆ ಆರರಂತೆ ಅದು ಪುಷ್ಪಗಳನ್ನು ಒದಗಿಸುತ್ತ ಬಂದಿದೆ. ಅವುಗಳಲ್ಲಿ ಇತರ ಪ್ರಕಾರದ ಗ್ರಂಥಗಳಿದ್ದರೂ ಕಾದಂಬರಿಗಳೇ ಬಹುಸಂಖ್ಯವಾಗಿವೆ. ಈ ವರೆಗೆ ಕಾದಂಬರಿಗಳೆಲ್ಲ ಕೂಡಿ ೨೫-೨೬ ಆಗಿದ್ದು ಅವುಗಳಲ್ಲಿ ೨೧ ಸ್ವತಂತ್ರ ಮತ್ತು ೫ ಅನುವಾದಿತವಾಗಿವೆ. ಸ್ವತಂತ್ರ ಕಾದಂಬರಿಗಳಲ್ಲಿ ೨೦ ಸಾಮಾಜಿಕವಿದ್ದು ೧ ಮಾತ್ರ ಐತಿಹಾಸಿಕವಾಗಿದೆ. ಇಪ್ಪತ್ತೈದು ವರ್ಷಗಳ ಕಾದಂಬರಿಯ ಚರಿತ್ರೆಯಲ್ಲಿ ಸುಮಾರು ೩೫ ಸ್ವತಂತ್ರ ಸಾಮಾಜಿಕ ಕಾದಂಬರಿಗಳಿವೆಯೆಂದು ಆಗಳೆ ಹೇಳಿದೆ. ಅವುಗಳಲ್ಲಿ ೨೦ ಕೃತಿಗಳು ಇದೊಂದೇ ಮಾಲೆಯಲ್ಲಿ ಪವಣಿಸಲಾದುವು ಎಂಬುದು ಹೆಮ್ಮೆಯ ಸಂಗತಿ. ಗುಣದೃಷ್ಟಿಯಿಂದ

ಅವ್ರಗಳ ತೂಕ ಹೆಚ್ಚು ಕಡಿಮೆ ಇರಬಹುದು. ಆದರೆ ಒಟ್ಟಿನಲ್ಲಿ ಸ್ವತಂತ್ರ ಸಾಮಾಜಿಕ ಕಾದಂಬರಿಯ ಅಭಿರುಚಿಯನ್ನು ಹುಟ್ಟಿಸಿ ಮೇಲ್ಮಟ್ಟದ ಕೃತಿಗಳನ್ನು ಹೊಸಗನ್ನಡ ಪ್ರಪಂಚಕ್ಕೆ ನೀಡಿದ ಶ್ರೇಯಸ್ಸು ಈ ಮಾಲೆಗೆ ಸಲ್ಲುತ್ತದೆ. ಅವುಗಳಲ್ಲಿ ಕೆಲವು ಸುಂದರ ಕಲಾಕೃತಿಗಳಾಗಿದ್ದು ಹೊಸ ಸಾಹಿತ್ಯದ ಚರಿತ್ರೆಯಲ್ಲಿ ಅಮರವಾಗಿ ಉಳಿಯತಕ್ಕುವಾಗಿವೆ. ಈ ಬಗೆಯ ಸೇವೆಯನ್ನು ಸಲ್ಲಿಸಿದ್ದಕ್ಕೆ ಮನೋಹರಗ್ರಂಥ ಮಾಲೆ ರಸಿಕಕುಲದ ಹಾರ್ದಿಕ ಅಭಿನಂದನೆಗೆ ಅರ್ಹವಾಗಿದೆ. ಮಾತ್ರವಲ್ಲದೆ ಅದರ ಭವಿಷ್ಯ ಇನ್ನೂ ಲೇಸಾಗಲಿ ಎಂಬ ಶುಭಾಶಯಕ್ಕೂ ಪಾತ್ರವಾಗಿದೆ. ಇತರ ಮಾಲೆಗಳಲ್ಲಿ ಕೆಲವು ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಕೆಲಸಕ್ಕೆ ಕೈಹಾಕಿ ಹಿಂದೆಗೆಯದೆ ಸಾಗಿವೆ, ಒಳ್ಳೆಯ ಕೃತಿಗಳನ್ನು ಪ್ರಕಟಿಸುತ್ತಿವೆ. ಕಾದಂಬರಿಗಳ ಒಟ್ಟು ಸಂಖ್ಯೆ ಈ ಕಾಲಾವಧಿಯಲ್ಲಿ ಸು. ೮೦. ಆದರೆ ಕಾದಂಬರಿಕಾರರ ಸಂಖ್ಯೆ ಸು. ೪೦ ಆಗುತ್ತದೆ. ಅಂದರೆ ಸರಾಸರಿ ಗಣಿತದಿಂದ ತಲೆಗೆರಡು ಕಾದಂಬರಿ. ವಸ್ತುಸ್ಥಿತಿಯೂ ಸ್ವಲ್ಪಮಟ್ಟಿಗೆ ಹೀಗೇ ಇರುತ್ತದೆ. ಒಂದೆರಡು ಕಾದಂಬರಿಗಳನ್ನು ಬರೆದ ಕಾದಂಬರಿಕಾರರು ನಮ್ಮಲ್ಲಿ ಈ ಮಿತಿಯವರೆಗೆ ಬಹು ಸಂಖ್ಯರಾಗಿದ್ದಾರೆ. ಎರಡರಿಂದ ಮೂರು ನಾಲ್ಕು ಬರೆದವರು ತೀರ ಸ್ವಲ್ಪ. ಸ್ವತಂತ್ರಲೇಖಕರು ಇನ್ನೂ ಸ್ವಲ್ಪ. ಐದಾರು ಸ್ವತಂತ್ರ ಮತ್ತು ವಿಪುಲಗಾತ್ರದ ಸಾಮಾಜಿಕ ಕಾದಂಬರಿಗಳನ್ನು ಈ ವರೆಗೆ ರಚಿಸಿದವರೆಂದರೆ ಕಾರಂತರು ಮತ್ತು ಅ. ನ. ಕೃಷ್ಣರಾಯರು. ಒಂದೇ ಒಂದಾದರೂ ಮಹಾಕಾದಂಬರಿಯನ್ನು ಬರೆದವರು ಕೆ. ವಿ. ಪುಟ್ಟಪ್ಪನವರು.

ಇಂದಿನ ಕಾದಂಬರಿಗಳ ಕೆಲವು ಸಾಮಾನ್ಯ ಲಕ್ಷಣಗಳನ್ನು ಗುರುತಿಸಬಹುದು. ಸಾಮಾಜಿಕ ಕಾದಂಬರಿಯೇ ಇಂದಿನ ಪಟ್ಟರಾಣಿ. ಎಲ್ಲ ಬಗೆಯ ಹೊಸಸಾಹಿತ್ಯದಲ್ಲಿ ಸುತ್ತುಮುತ್ತಿನ ವಾಸ್ತವಜೀವನವನ್ನು ಕಂಡಂತೆ ಕಾಣಿಸಬೇಕೆಂಬ ಹಂಬಲು ಹಿರಿದಾಗಿದೆ. ಅದಕ್ಕನುಗುಣವಾಗಿ ಇಂದಿನ ಕಾದಂಬರಿಯಲ್ಲಿ ಸ್ವಾನುಭವ ಮತ್ತು ಸ್ವಂತದರ್ಶನ ಇವುಗಳಿಗೆ ಪ್ರಾಧಾನ್ಯವುಂಟಾಯಿತು. ಅವುಗಳ ಫಲವೇ ಸಾಮಾಜಿಕ ಕಾದಂಬರಿ. ಅದರಲ್ಲಿಯೂ ಹೊಸ ಕಾದಂಬರಿಕಾರರು ಸ್ವ-ಅನುಭವವನ್ನು ಹೆಚ್ಚಾಗಿ ಪಡೆದದ್ದು ತಮ್ಮ ಸುತ್ತುಮುತ್ತಿನ ಮಧ್ಯಮವರ್ಗದ ಜೀವನದಲ್ಲಿ. ಅಂತೇ ಮಧ್ಯಮ ವರ್ಗದ ಕುಟುಂಬಜೀವನವೇ ಅನೇಕ ಕಾದಂಬರಿಗಳಿಗೆ ವಿಷಯವನ್ನು ಒದಗಿಸಿದೆ. ಅನೇಕಸಲ ಸ್ವಾಭಾವಿಕವಾಗಿ ಒಂದು ವಿಶಿಷ್ಟ ಸಮಾಜದ ಮಧ್ಯಮವರ್ಗವನ್ನೆ ಚಿತ್ರಿಸಲಾಗಿದೆ. ಶ್ರೀಮಂತವರ್ಗ ಮತ್ತು ದರಿದ್ರವರ್ಗದ ಜೀವನ ಬಂದಿಲ್ಲವೆಂತಲ್ಲ, ಮಧ್ಯಮದ ಸ್ಥಾಯಿಗೆ ಸಂಚಾರಿಯಾಗಿ ಬಂದಿದೆ; ಸ್ವಾನುಭವಕ್ಕಿಂತ ಕಲ್ಪಕತೆಯ, ಸ್ವಾನುಭವದ ಬಲದಿಂದ ಬಂದಿದೆ. ಈ ಬಗೆಯ ಸಮಾಜ ಚಿತ್ರಣವು ವ್ಯಕ್ತಿವ್ಯಕ್ತಿಗೆ

ಬೇರೆಯಾದ ದೃಷ್ಟಿ-ದರ್ಶನಗಳಿಂದ, ಕಲಾತಂತ್ರಗಳಿಂದ ವಿಧವಿಧವಾಗಿ ಅರಳಿದೆ. ಇದು ಹೊಸಕಾದಂಬರಿಯ ವೈಶಿಷ್ಟ್ಯ. ಇದ್ದ ಸಮಾಜವನ್ನು ಕಂಡರೀತಿ, ಹೊಸ ಸಮಾಜ ಹೇಗಿರಬೇಕೆಂಬ ನೀತಿ ಇವು ಒಂದು ಆಳವಾದ ವ್ಯಕ್ತಿತ್ವದ ತೇಜದಿಂದ, ಕಲೆಯ ಕಾಂತಿಯಿಂದ ಬಣ್ಣಗೊಂಡು ತೋರಿವೆ. ಕಾದಂಬರಿಯ ವಸ್ತು ಪೂರ್ವ ನಿಶ್ಚಿತ ಇಲ್ಲವೆ ಯಾಂತ್ರಿಕಸ್ವರೂಪವನ್ನು ತೊರೆದು ವಿಷಯಕ್ಕೆ ಸಂವಾದಿಯಾಗಿ ಸ್ವತಂತ್ರವಾಗಿ ಹುಟ್ಟಿಕೊಂಡು ಬಂದಿದೆ. ಅದು ಯಾವಾಗಲೂ ನವೀನವಾಗಿಲ್ಲ; ವಿದೇಶೀಯ ಪ್ರಭಾವದಿಂದಲೂ ಅಲಿಪ್ತವಾಗಿಲ್ಲ. ಆದರೆ ಅದರ ಹುಟ್ಟು ಬಹುಶಃ ಸ್ವತಂತ್ರ. ಹಳೆಯ ಹೊಸ ಬಾಳುಗಳ ತಿಕ್ಕಾಟ, ಅದರಿಂದ ನೆಗೆದೆದ್ದ ಘೋರ ಸಮಸ್ಯೆಗಳು, ತಲೆದೋರಿದ ಆಸೆನಿರಾಶೆಗಳು ಇವುಗಳ ಸುತ್ತು ಹೊಸಕಾದಂಬರಿ ತನ್ನ ವಸ್ತುವನ್ನು ಬೇರೆಬೇರೆಯಾಗಿ ಹೆಣೆದಿದೆ. ಸಮಾಜದಲ್ಲಿ ತುಂಬಿದ್ದ ಶಿಷ್ಟಾಚಾರದ ಹೆಸರಿನ ಅನಾಚಾರ, ಕಣ್ಣುಮುಚ್ಚಿ ನೋಡದಿದ್ದ ಕೊಳೆ, ಸಾಮಾನ್ಯವೆಂದು ಕ್ಷುದ್ರ ವೆಂದು ತಿಪ್ಪಿಗೆಸೆದ ಕಸದಲ್ಲಿಯ ರಸ—ಇವನ್ನೆಲ್ಲ ಇಂದಿನ ಕಾದಂಬರಿ ನಿರೂಪಿಸು ತ್ತದೆ. ನಿರ್ಭಯವಾಸ್ತವತೆ ಅದರ ಮುಖದಲ್ಲಿಯ ಕ್ಷತ್ರತೇಜಸ್ಸು; ಭೂತದಯೆ, ಮಾನವಧರ್ಮ ಅದರ ಕಣ್ನೋಟದಲ್ಲಿಯ ಬ್ರಹ್ಮಕಳೆ; ಇಂಥ ವಸ್ತುವಿನಲ್ಲಿಯ ಪಾತ್ರಗಳೂ ಸಮಾಜದ ಸಾಮಾನ್ಯ ವ್ಯಕ್ತಿಗಳು, ಆದರೆ ಅವರ ಸುಖದುಃಖ ಅರಿತಷ್ಟು ಅಸಾಮಾನ್ಯ. ಯಾರನ್ನೂ ಸಾಮಾನ್ಯರೆಂದು ಅಲ್ಲಗಳೆಯಕೂಡದು, ಒಬ್ಬರ ಅಸುಖವೂ ಎಲ್ಲರ ಅಸುಖಕ್ಕೆ ಕಾರಣವಾದೀತು ಎಂಬ ಸಾಮಾಜಿಕ ದರ್ಶನವು ನಮ್ಮ ಕಾದಂಬರಿ ಕಾರರನ್ನು ಪ್ರೇರಿಸಿದೆ. ಸಾಮಾನ್ಯ ಪಾತ್ರಗಳೊಡನೆ ಆಗಾಗ—ಸುಮಾರು ಪ್ರತಿ ಯೊಂದು ಕಾದಂಬರಿಯಲ್ಲಿ—ಆದರ್ಶಪಾತ್ರಗಳು ಲೇಖಕರ ಕನಸಿನ ಲೋಕವನ್ನು ಕಟ್ಟುವುದಕ್ಕೆಂದು ಅವತರಿಸಿವೆ. ಇಂಥಲ್ಲಿ ಹೊಸ ಕಾದಂಬರಿಯ ಅದ್ಭುತರಮ್ಯ, ಆದರ್ಶ ಅಂಶಗಳನ್ನು ಗುರುತಿಸುತ್ತೇವೆ. ಅನೇಕ ಕಾದಂಬರಿಗಳಲ್ಲಿ ಕಾದಂಬರಿಕಾರನು ತಿಳಿದೊ ತಿಳಿಯದೆಯೊ ತನ್ನನ್ನೆ ಭಿನ್ನಹೆಸರಿನಲ್ಲಿ, ವೇಷದಲ್ಲಿ ಕಂಡರಿಸಿ, ಆತ್ಮಕಥೆಯ ಹಾಗೂ ಸ್ವಂತದರ್ಶನದ ಕೆಲಭಾಗವನ್ನು ನಿರೂಪಿಸಿದ್ದಾನೆ. ಸಾಧಾರಣವಾಗಿ ಈ ಕಾದಂಬರಿಗಳ ಶೈಲಿ ಅತ್ಯಂತ ಪರಿಚಿತರೂಢಭಾಷೆ. ಪಾತ್ರಗಳಾಡುವಾಗ ಅವರವರ ರೂಢಶೈಲಿ ಸಾಹಿತ್ಯದ ತುಸುಸಂಸ್ಕಾರಹೊಂದಿಬಂದಿದೆ. ಅದಕ್ಕೆ ಕೃತಕತೆಯ ಸೋಂಕಿಲ್ಲ. ಆದರೆ ಅಖಿಲಕರ್ನಾಟಕಕ್ಕೇ ತಿಳಿಯವೆಂದು ಕೆಲವು ಸಲ ದೇಸಿಗೆ ಗ್ರಂಥಸ್ಥಶೈಲಿಯ ಮೆರುಗನ್ನು ಹೆಚ್ಚುಕಡಿಮೆ ಕೊಟ್ಟಿರುವುದುಂಟು. ಇಲ್ಲಿ ಕೃತ್ರಿಮತೆ ಹಣಿಕಿರುತ್ತದೆ. ಕಾದಂಬರಿಕಾರನ ಸ್ವಂತಭಾಷೆ ಗ್ರಂಥಸ್ಥವಾದರೂ ಅದು ಒಟ್ಟಿನಲ್ಲಿ ಸುಲಭ, ಪರಿಚಿತ ಮತ್ತು ನಿರಾಡಂಬರವಾದುದು. ಅದಕ್ಕೆ ಕತೆಗಾರನ ನೇರವಾದ

ಸರಣಿಯು ರುಚಿಕಟ್ಟಿದೆ, ಪಾಂಡಿತ್ಯದ ಅನಾವಶ್ಯಕ ಆವೇಶವಿಲ್ಲ. ಅಲ್ಲದೆ ವ್ಯಕ್ತಿ ವೈಶಿಷ್ಟ್ಯದಿಂದ ಉಂಟಾದ ವೈವಿಧ್ಯವಿದೆ, ಪ್ರಯೋಗಶೀಲತೆಯಿದೆ.

ಇಂದಿನ ಕಾದಂಬರಿಗಳು ತಂತ್ರದೃಷ್ಟಿಯಿಂದ ನವೀನವಾಗಿವೆ, ವಿವಿಧವಾಗಿವೆ. ಹಿಂದಿನ ಕಾದಂಬರಿಗಳು ಹೆಚ್ಚು ಕಡಿಮೆ ಏಕತಂತ್ರವಾಗಿದ್ದುವು. ವಸ್ತುಚಮತ್ಕೃತಿಗೆ ಅವುಗಳಲ್ಲಿ ಪ್ರಾಮುಖ್ಯ, ವರ್ಣನೆಗೆ ಕತೆಯ ಉಸಿರುಕಟ್ಟುವಷ್ಟು ಪ್ರಾಶಸ್ತ್ಯ. ಪಾತ್ರಗಳು ಅದ್ಭುತರಮ್ಯ, ಉದ್ದಿಷ್ಟನೀತಿ, ತತ್ವ ಹಾಗೂ ಕಲ್ಪಿತಸಂವಿಧಾನ ಇವುಗಳ ಕೈಗೊಂಬೆಗಳು. ಮೂಲಗ್ರಂಥದ ಗುಣದೋಷಗಳೆಲ್ಲ ಭಾಷಾಂತರಗಳಲ್ಲಿ ಹಣಿಕಿದು ವಲ್ಲದೆ ಹೊಸವೂ ಸೇರಿರಬೇಕು. ಹೃದಯಸ್ಪರ್ಶಿಯಾದ ಸಂನಿವೇಶಗಳಿಂದ, ತೇಜಸ್ವಿಗಳಾದ ವ್ಯಕ್ತಿಗಳಿಂದ ಅವೆಷ್ಟು ಮನಸ್ಸನ್ನು ಸೆರೆಹಿಡಿದುವೋ ಅಷ್ಟು ಶಿಥಿಲಬಂಧ, ಮನೋವಿಶ್ಲೇಷಣದ ಅಭಾವ ಇವುಗಳಿಂದ ಹೊಸ ಮನಸ್ಸಿಗೆ ಅರುಚಿಯಾದುವು. ಅದೇ ಹೊಸ ಕಾದಂಬರಿಗಳಲ್ಲಿ ತಂತ್ರದೃಷ್ಟಿ ಹೆಚ್ಚು ಶುದ್ಧವಾಗಿದೆ, ಸಫಲವಾಗಿದೆ. ಸಾಮಾನ್ಯವಾಗಿ ಹೇಳುವುದಾದರೆ, ಮುಖ್ಯವಸ್ತು, ಪ್ರಮುಖವ್ಯಕ್ತಿಗಳು ಇವುಗಳ ಮೇಲೆ ಬೆಳಕನ್ನು ಕೇಂದ್ರೀಕರಿಸಿ, ಉಳಿದೆಲ್ಲವನ್ನೂ ಅವುಗಳಿಗೆ ಅಧೀನಗೊಳಿಸುವ ಪ್ರಮಾಣಜ್ಞಾನ, ಕಲಾವಂತಿಕೆ ಇಂದಿನ ತಂತ್ರದಲ್ಲಿ ಪ್ರಮುಖಗುಣವಾಗಿದೆ. ಅನಾವಶ್ಯಕ ಸಂಗತಿ ಪಾತ್ರಗಳು, ಅಧಿಕಪ್ರಸಂಗದ ವರ್ಣನೆ, ಶೈಲಿಯ ಆಡಂಬರ ಇವು ಇಂದಿಗೆ ತ್ಯಾಜ್ಯ. ಪ್ರತಿಭೆಯ ಓಟಕ್ಕೆ ನಿಗ್ರಹದ, ವಿವೇಕದ ಕಡಿವಾಣ ಹಾಕುವುದೇ ಇಂದಿನ ಕಾದಂಬರಿಯ ಗೊತ್ತುಗುರಿ. ನೂರಾರು ಅಪೂರ್ಣವ್ಯಕ್ತಿಗಳ ಸಂತೆ ನೆರಸುವುದಕ್ಕಿಂತ ಕೆಲವು ವ್ಯಕ್ತಿಗಳ ಸಂಪೂರ್ಣ ಪೃಥಕ್ಕರಣಕ್ಕೇ ಹೊಸ ಕಾದಂಬರಿಕಾರರು ಹಾತೊರೆಯುತ್ತಾರೆ. ಆದುದರಿಂದ ಕಾದಂಬರೀ ಪ್ರಪಂಚದಲ್ಲಿ ಸೂಕ್ಷ್ಮಮನೋವಿಜ್ಞಾನಕ್ಕೆ ಬಹಳ ಬೆಲೆ ಬಂದಿದೆ. ಸಂವಿಧಾನೈಕ್ಯ—ಸಮಬಂಧ, ಪಾತ್ರಸುಸಂಗತಿ ಪೃಥಕ್ಕರಣ ಇವುಗಳಿಂದ ಕೂಡಿದ ಬುದ್ಧಿಗ್ರಾಹ್ಯವಾದ ಕಲೆಯೇ ಹೊಸ ತಂತ್ರದಸಾರ.

ಈ ಬಗೆಯ ಸಾಮಾನ್ಯ ವೈಶಿಷ್ಟ್ಯವನ್ನು ತೋರುವುದಲ್ಲದೆ, ಕೆಲವೊಂದು ಅಂಶಗಳ ಪ್ರಾಧಾನ್ಯದಿಂದ ಹೊಸ ಕಾದಂಬರಿ ವಿವಿಧರೂಪಗಳನ್ನು ತಾಳಿದೆ, ತಾಳುತ್ತಲಿದೆ. ಯಾವೊಂದು ಅಂಶಕ್ಕೆ ಪ್ರಾಧಾನ್ಯ ಕೊಡುವುದರಲ್ಲಿ ಸಾಮಾನ್ಯ ವೈಶಿಷ್ಟ್ಯಕ್ಕೆ ಇಲ್ಲವೆ ಎಲ್ಲಾ ಅಂಶಗಳ ಸಮತೂಕಕ್ಕೆ ಎದ್ದುಕಾಣುವ ಭಂಗ ಬಾರದಂತೆ ನೋಡಿಕೊಳ್ಳುವ ಸೂಕ್ಷ್ಮಕಲೆ ಇಂದಿನ ಗುರಿಯಾಗಿದೆ. ಅಂತೇ ವಸ್ತುಪ್ರಧಾನ, ವ್ಯಕ್ತಿಪ್ರಧಾನ ಎಂದು ಹೆಸರಿಟ್ಟೊಡನೆ ಆಯಾಕೃತಿಗಳಲ್ಲಿ ಇತರ ಅಂಶಗಳು ತೀರ ಗೌಣ ಎಂದಲ್ಲ. ಅವಧಾರಣೆ ಅತಿರೇಕವಾದರೆ ಅದು ಕೃತಿದೋಷವಾಗುತ್ತದೆ. ಒಮ್ಮೊಮ್ಮೆ

ಯಾವುದು ಮುಖ್ಯ, ಯಾವುದು ಗೌಣ ಎಂಬುದನ್ನು ಅರಿಯುವುದು ಕೂಡ ಅರಿದಾಗಿ ಬಿಡುತ್ತದೆ. ಉದಾಹರಣೆಗೆ, 'ಬೆಟ್ಟದ ಜೀವ'ವನ್ನು ಪರಿಸರಪ್ರಧಾನ ಎಂದು ಹೇಳಿದರೂ ಅದರಲ್ಲಿ ವಸ್ತು ವ್ಯಕ್ತಿಗಳಿಗೆ ದೊರೆತ ಪ್ರಾಧಾನ್ಯ ಕಡಿಮೆಯೇ ಎಂದು ಕೇಳಬೇಕಾಗುತ್ತದೆ. ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿ ಸಕಲಾಂಶಗಳು ಸಮಪ್ರಧಾನವಾದ ಸಮಗ್ರಕೃತಿಯೆಂದು ಅದನ್ನು ಕರೆದರೆ ತಪ್ಪಾಗಲಾರದು. ಸಾಮಾನ್ಯವಾಗಿ ವಸ್ತು, ವ್ಯಕ್ತಿ, ಪರಿಸರ ಇವು ಮೂರು ಪ್ರಧಾನವಾಗಿದ್ದ ಕಾದಂಬರಿಗಳು ಹೊಸ ಕಾಲದಲ್ಲಿ ಹುಟ್ಟಿವೆ. ಅಲ್ಲದೆ, ಸಮಾಜ ವಿಮರ್ಶೆಯ ಪದ್ಧತಿಯಲ್ಲಿ 'ದೇವದೂತರು,' 'ವಿಶ್ವಾಮಿತ್ರನ ಸೃಷ್ಟಿ,' 'ಗಾಳಿ ಗೋಪುರ' ಇವು ವಿಕೃತಿ ಚಮತ್ಕೃತಿನಿಷ್ಠವಾದ ವಿಡಂಬನಾತ್ಮಕ ಕಾದಂಬರಿಗಳಾಗಿವೆ. 'ಸೂಳೆಯ ಸಂಸಾರ' ಇದು ವಾಸ್ತವನಿಷ್ಠವಾದ ವಿಡಂಬಕ ಕಾದಂಬರಿ. ಸಮಸ್ಯಾತ್ಮಕ ಕಾದಂಬರಿಗಳಲ್ಲಿ 'ಮಾವಿನ ತೋಪು,' 'ಕಾರಣ ಪುರುಷ,' ಇವನ್ನು ಅಳವಡಿಸಬಹುದು. 'ಕಾರಣ ಪುರುಷ' ಸಮಸ್ಯಾತ್ಮಕವಾಗಿರುವಂತೆ ವೈಚಾರಿಕವೂ ಆಗಿದೆ ಎಂಬುದನ್ನು ನೆನೆಯಬೇಕು. ಮನೋವೈಜ್ಞಾನಿಕ ಕಾದಂಬರಿಗಳಲ್ಲಿ 'ಅಂತರಂಗ' ಹಾಗೂ ಇತ್ತೀಚೆ ಹೊರಟ 'ಮನೆಗೆ ಬಂದ ಮಹಾಲಕ್ಷ್ಮಿ' ಇವನ್ನು ಗಮನಿಸಬೇಕು. ಸತೀಹಿತೈಷಿಣೀ ಗ್ರಂಥಮಾಲೆಯ ಗ್ರಂಥಗಳಂತೆ ಚರ್ಚಾತ್ಮಕ ಸ್ವತಂತ್ರ ಕಾದಂಬರಿಗಳು ಈ ಕಾಲದಲ್ಲಿ ತಲೆದೋರಿಲ್ಲ. 'ರತ್ನಾ' ಎಂಬ ಅನುವಾದ ಕಾದಂಬರಿಯಲ್ಲಿ ಮಾತ್ರ ಈ ಪ್ರಕಾರವಿದೆ. ಉಳಿದನೇಕ ಸ್ವತಂತ್ರ ಕಾದಂಬರಿಗಳಲ್ಲಿ ಆನುಷಂಗಿಕವಾಗಿ ಸಾಮಾಜಿಕ ಚರ್ಚೆ ಬಂದಿದೆ. ಪ್ರಾದೇಶಿಕ ಕಾದಂಬರಿಗಳ ಉದಯ ಮತ್ತು ಉತ್ಕರ್ಷ ಈ ಕಾಲದ ಗುಣವಿಶೇಷ. 'ಕಾನೂರು ಸುಬ್ಬಮ್ಮ ಹೆಗ್ಗಡಿತಿ,' ಮತ್ತು 'ಮರಳಿ ಮಣ್ಣಿಗೆ' ಯಂಥ ಮಹಾ ಕಾದಂಬರಿಗಳು ಪ್ರಾದೇಶಿಕವಾಗಿವೆ. 'ಸರಸಮ್ಮನ ಸಮಾಧಿ,' 'ಬೆಟ್ಟದ ಜೀವ' 'ಗ್ರಾಮ ಪಂಚಾನನ' ಇವುಗಳನ್ನೂ ಈ ವಿಭಾಗದಲ್ಲಿ ಸೇರಿಸಬಹುದು. 'ಸಂಧ್ಯಾರಾಗ,' 'ಮಂಗಳಸೂತ್ರ,' 'ಇಜ್ಜೋಡು' ಈ ಮುಂತಾದ ಕೆಲವು ಕೃತಿಗಳಲ್ಲಿ ಪ್ರಾದೇಶಿಕ ಅಂಶಗಳು ಗಮನಾರ್ಹವಾಗಿವೆ. 'ಬಿಡುಗಡೆಯ ಬೆಲೆ' ಎಂಬುದು ರಾಜಕೀಯ ಜೀವನ-ಆತ್ಮ ಚರಿತ್ರಗಳನ್ನು ಮೇಳವಿಸಿದ ವಿಶಿಷ್ಟಕೃತಿಯಾಗಿದೆ. 'ಭರಮಪ್ಪನ ಭೂತ'ವೊಂದೇ ಬಹುಶಃ ಹೊಸಗನ್ನಡದಲ್ಲಿ ಸ್ವತಂತ್ರ ಪತ್ತೇದಾರಿ ಕಾದಂಬರಿಯಾಗಿ ಈವರೆಗೆ ಮೆರೆದಿದೆ. ಅನುವಾದದಲ್ಲಿ ಪತ್ತೇದಾರಿ ಕಥೆಗಳು ಬೇಕಾದಷ್ಟಿವೆ. ತಂತ್ರದೃಷ್ಟಿಯಿಂದ ತೀರ ಹೊಸದೆಂದರೆ ಕಳೆದ ವರ್ಷದಲ್ಲಿ ಪ್ರಕಟವಾದ 'ಚಕ್ರದೃಷ್ಟಿ.' ಅದರ ಹೆಸರೇ ಅದರ ತಂತ್ರವನ್ನು ಸಾರುತ್ತದೆ. 'ಅನೇಕ ವ್ಯಕ್ತಿಗಳು ಹೇಳಿದ ಕಥೆಯೆಲ್ಲ ಕೂಡಿ ಒಂದು ಕೃತಿಯಾದಂತೆ ಭಾಸವಾಗುವ

ಕಾದಂಬರಿ' ಅಥವಾ ಅನೇಕರ ದೃಷ್ಟಿಯಲ್ಲಿ ಒಬ್ಬ ವ್ಯಕ್ತಿ ತೋರಿದ ಬಗೆಯಿಂದ ಆ ವ್ಯಕ್ತಿಯ ಸ್ವಭಾವ ಚಿತ್ರವನ್ನು ರಚಿಸುವ ಕಾದಂಬರಿ ಇಲ್ಲಿ ಕನ್ನಡಕ್ಕೆ ಮೊದಲನೆಯ ಸಲವೇ ದೊರೆತಿದೆ. ಹೀಗೆ ಕಳೆದ ಯುಗದಲ್ಲ ಸಂಖ್ಯೆಯಿಂದ ಕನ್ನಡ ಕಾದಂಬರಿಗಳು ಕಡಿಮೆಯಾಗಿದ್ದರೂ ತಂತ್ರವೈವಿಧ್ಯದ ದೃಷ್ಟಿಯಿಂದ ಕಡಿಮೆಯಾಗಿಲ್ಲ ಎಂಬುದು ತಲೆದೂಗತಕ್ಕ ವಿಷಯವಾಗಿದೆ. ಕೆಲವು ನಮ್ಮ ಕೃತಿಗಳಲ್ಲಿ ಕಥಾನಕದ ಸಮೃದ್ಧಿಯ ಇಲ್ಲವೆ ಏಕಸೂತ್ರತೆಯ ಅಭಾವ, ಚರ್ಚೆ—ವಿಡಂಬನೆ—ವರ್ಣನೆಗಳ ಅತಿರೇಕ ಮುಂತಾದ ಲೋಪ ದೋಷಗಳಿಂದ ಸಂಪೂರ್ಣ ಕಾದಂಬರಿಯ ಲಕ್ಷಣವು ಕೂಡಿ ಬಾರದೆ ಇರುವುದುಂಟು. ಹೀಗಾಗಿ ಪೂರ್ಣೋಪಮೆ, ಲುಪ್ತೋಪಮೆಯಂತೆ ಕಾದಂಬರಿಗಳಲ್ಲಿಯೂ ಪೂರ್ಣ ಲುಪ್ತ ಎಂಬ ಎರಡು ಭಾಗಗಳನ್ನು ಮಾಡಬೇಕಾದೀತು. . . .

ಇನ್ನು ಕೆಲವು ಕಾದಂಬರಿಕಾರರ ಮತ್ತು ಕಾದಂಬರಿಗಳ ಅವಲೋಕನ ಮಾಡಬಹುದು. ಮೊದಲು ಸ್ವತಂತ್ರ ಸಾಮಾಜಿಕ ಕಾದಂಬರಿಯ ಪ್ರಪಂಚವನ್ನು ಹೊಗೋಣ. ಇಲ್ಲಿ ಕಾರಂತರು ಮತ್ತು ಅ. ನ. ಕೃಷ್ಣರಾಯರು ಪ್ರಮುಖರು. ಕಾಲಕ್ರಮದಿಂದ 'ದೇವದೂತರು,' 'ಸೂಳೆಯ ಸಂಸಾರ,' 'ಚೋಮನ ದುಡಿ,' 'ಸರಸಮ್ಮನ ಸಮಾಧಿ,' 'ಮರಳಿ ಮಣ್ಣಿಗೆ,' 'ಬೆಟ್ಟದ ಜೀವ' ಇವು ಈವರೆಗಿನ ಕಾರಂತರ ಕೃತಿಗಳು. ತಮ್ಮ ಮೊದಲಿನ ಕಾದಂಬರಿ 'ವಿಚಿತ್ರ ಕೂಟ' ಎಂಬ 'ತೊದಲ್ನುಡಿ' ಎಂದವರು ಹೇಳಿದ್ದಾರೆ. ಅದು ನೋಡಲು ದೊರೆಯದ್ದರಿಂದ ಅವರ ಹೇಳಿಕೆ ಸತ್ಯವೋ ವಿನಯವೋ ತಿಳಿಯಲಿಲ್ಲ. ೧೯೩೦ ರಿಂದ ೧೯೪೩ ರವರೆಗೆ ಅಂದರೆ ಹದಿಮೂರು ವರ್ಷಗಳಲ್ಲಿ ಆಗಾಗ ಬರೆಯಲಾದ ಈ ಕಾದಂಬರಿಗಳಲ್ಲಿ ಕ್ರಮೇಣ ಕಾರಂತರ ಕಾದಂಬರೀಕಲೆ ಮೊನೆಗಳನ್ನು ನಯಗೊಳಿಸಿ ಹದಗೊಂಡು ನನೆಕೊನೆಹೋಗುತ್ತಿರುವುದು ಸ್ಫುಟವಾಗಿ ತೋರುತ್ತದೆ. ಅದರ ಪ್ರಥಮ ಆವೇಶವು 'ದೇವದೂತರು' ಎಂಬಲ್ಲಿ ವಿಡಂಬನಪ್ರಧಾನವಾಗಿ ತಲೆದೋರಿತು. ಅದರಲ್ಲಿ ಕಾದಂಬರಿಯ ಕಥನಾಂಶ ಸಾರ್ವತ್ರಿಕವಾಗಿಲ್ಲ. ವಿಡಂಬನೆ, ವ್ಯಂಗ್ಯೋಕ್ತಿ, ಚಮತ್ಕೃತಿ ಇವುಗಳ ಪ್ರಾಧಾನ್ಯದಿಂದ ಅದು ಕೇವಲ ಅಥವಾ ಪೂರ್ಣ ಕಾದಂಬರಿಯಲ್ಲ. ಮೊದಲರ್ಧದಲ್ಲಿದ್ದ ಕಥಾಂಶವು ಬರಬರುತ್ತ ಕರಗಿ ವಿಡಂಬನಪ್ರಧಾನವಾದ ವರದಿಯ ಸ್ವರೂಪ ಕೊನೆಗೆ ಬಂದಿದೆ. ವಿಡಂಬನೆಯ ದೃಷ್ಟಿಯಿಂದ ಸಮಾಜದ ತೀಕ್ಷ್ಣ ವಿಮರ್ಶೆಗಾಗಿ ಯೋಜಿಸಿದ ಪೌರಾಣಿಕ ಚಮತ್ಕೃತಿ ನವೀನವಾಗಿ ಪರಿಣಾಮಕಾರಕವಾಗಿದೆ. ವಸ್ತುಸ್ಥಿತಿಯ ತಳಹದಿಯಮೇಲೆ ವಿಕೃತಿ-ಚಮತ್ಕೃತಿಗಳ ನೆಲೆವನೆ ನಿಂತಿದೆ. ಆದರೂ ಕಲಾವಂತಿಕೆಯ ಪದ್ಧತಿಗಿಂತ ನೀತಿಬೋಧನೆಯ, ಕಟುಟೀಕೆಯ

ಪ್ರವೃತ್ತಿ ಹೆಚ್ಚಾಗಿದೆ. ಇದರಿಂದಲೇ ಕಥನಕಲಾದೃಷ್ಟಿಯಿಂದ ಹೆಚ್ಚಿನ ಘನತೆ ಉಂಟಾಗಿಲ್ಲ. ಯಶಸ್ವಿಯಾದ ವಿಡಂಬನೆಯೆಂಬ ಕಾರಣದಿಂದ ಅದನ್ನು ಮೆಚ್ಚಬೇಕು, ಮೇಲಾದ ಕಾದಂಬರಿ ಎಂದಲ್ಲ. 'ಸೂಳೆಯ ಸಂಸಾರ'ವೇ ಕಾರಂತರ ಮೊದಲನೆಯ ವಿಡಂಬನಾತ್ಮಕ ಪೂರ್ಣ ಕಾದಂಬರಿ. ಇದರಲ್ಲಿ ವಿಡಂಬನಕಾರ ಕಾರಂತರು ಮರೆಯಾಗಿಲ್ಲ; ಕಾದಂಬರಿಕಾರ ಕಾರಂತರು ಉದಯವಾಗಿದ್ದಾರೆ. ಇದು ಸಣ್ಣ ಗಾತ್ರದಲ್ಲಿ ಅತಿಕಟುವಾದ ಸತ್ಯವನ್ನು ನೇರವಾಗಿ ನಿರ್ಭಯವಾಗಿ ಸಾರಿದ ಮನೋವೇಧಕ ಕಥೆ. ಬಾಲವಿಧವೆಯಾದ ಮಾಲತಿ ನಿರ್ಗತಿಕಳಾಗಿ ರೊಚ್ಚಿಗೆದ್ದು ಬಾಳಿದ ವೇಶ್ಯೆಯ ಬಾಳು ಇದರ ಕೇಂದ್ರವಿಷಯ. ಈ ಬಾಳಿನ ಕರುಳಿರಿಯುವ ಕರುಣ, ಆ ವ್ಯಕ್ತಿಯ ಮನಶ್ಚಿತ್ರ ವಾಸ್ತವವಾಗಿ ಮಾರ್ಮಿಕವಾಗಿ ಚಿತ್ರಿತವಾಗಿವೆ. ಆದರೆ ಈ ಕೇಂದ್ರನಿಷ್ಠೆ ಮತ್ತು ವಿಡಂಬನೆಯ ಆವೇಶದ ಮೂಲಕ ಇತರ ಸಂನಿವೇಶ ಮತ್ತು ವ್ಯಕ್ತಿಸ್ವಭಾವಗಳು ಎಲ್ಲೆಡೆಗೆ ಸ್ವಾಭಾವಿಕವಾಗಿಲ್ಲ. ಅಲ್ಲಲ್ಲಿ ವಾಸ್ತವತೆಯ ಅತಿರೇಕ ಮತ್ತು ಸೀತಿಪರತೆ ಇವು ಸೇರಿ ಇದರ ಕಲೆಗೆ ಉನ್ನತಶ್ರೇಣಿಯನ್ನು ಗಳಿಸಿಕೊಟ್ಟಿಲ್ಲ. ಆದರೆ ರೂಢಿಮೂಢಸಮಾಜಕ್ಕೆ ಕೊಡಲಿಪೆಟ್ಟಾದ ಸ್ವರೂಪದಲ್ಲಿ ಈ ಕಾದಂಬರಿ ಕನ್ನಡಕ್ಕೆ ಮೊದಲನೆಯದೆಂಬುದನ್ನು ನೆನೆಯಬೇಕು. 'ಚೋಮನ ದುಡಿ' ಇದು ಹೊಲೆಯರ ಬಾಳುವೆಯ ಕರುಣವನ್ನು ಸತ್ಯಪೂರ್ಣವಾಗಿ ಎತ್ತಿ ತೋರಿಸುವ ಕಾದಂಬರಿಯೆಂಬ ದೃಷ್ಟಿಯಿಂದ ಹೊಸಗನ್ನಡಕ್ಕೆ ಹೊಸ ಕಾಣಿಕೆಯೆ ಸರಿ. ಇದರಲ್ಲಿ ವಿಡಂಬನಕಾರ ಕಾರಂತರು ತುಸುಮರೆಯಲ್ಲಿ ನಿಂತು ಕಥನಕಾರರಾಗಿದ್ದಾರೆ; ಕಥೆಯ ಮೂಲಕ ವಿಡಂಬನೆಯನ್ನು ಸಾಧಿಸಿದ್ದಾರೆ. ಹೃದಯದ್ರಾವಕ ಸಹಜ ಸಂನಿವೇಶಗಳು, ಬಣ್ಣಬಳಿಯದ ನೇರವಾದ ಕಥನ, ಅಪರಿಹಾರ್ಯವಾದ ವಸ್ತುಪಾತ್ರಗಳ ಮೇಳದಿಂದ ದುರಂತವಸ್ತುವಿನ ಪರಿಪೋಷಣೆ ಇವೆಲ್ಲ ಇದರಲ್ಲಿ ತುಂಬ ಮೆಚ್ಚತಕ್ಕುವು. ಟಾಲಸ್ಟಾಯರ ಸರಳ ಅದ್ಭುತಕಲೆಯ ಸರಣಿ ಇಲ್ಲಿದೆ. ಸ್ಥಿತಿಪ್ರಿಯ ಹಿಂದೂಸಮಾಜ ಮತ್ತು ಪ್ರಚಾರ ಕುಶಲ ಕ್ರಿಸ್ತಸಮಾಜ ಇವುಗಳ ಅಡಕೊತ್ತಿನಲ್ಲಿ ಸಿಕ್ಕ ಚೋಮನ ನಿರ್ಗತಿಕ ಬಾಳಿನ ಮತ್ತು ಹವ್ಯಾಸಸ್ವಭಾವದ ವಾಸ್ತವಪೂರ್ಣನಿರೂಪಣೆಯಿದೆ. ವಸ್ತುರಚನೆಯಲ್ಲಿ ಅವನ ದುಡಿಗೆ ದೊರೆತ ಸ್ಥಾನ ಅಪೂರ್ವ. ಪ್ರಳಯರುದ್ರನ ಡಮರುವಿನಂತೆ ಅದು ಈ ಕಥೆಯ ದುರಂತಕ್ಕೆ ಪೋಷಕವಾಗಿದೆ; ಪರಿಸ್ಥಿತಿಯನ್ನು ಲೆಕ್ಕಿಸದೆ ಅವನು ಪಡೆಯುವ ಆನಂದೋನ್ಮಾದಕ್ಕೆ ಸಂಕೇತವಾಗಿದೆ. ಆದರೆ ಕಥನವೇಗದಿಂದ ಆಗಾಗ ಸುಂದರ ಸಂನಿವೇಶಗಳು ಹರಹಿಕೊಂಡು ಅರಳುವುದಿಲ್ಲ. ಹಲವು ವ್ಯಕ್ತಿಗಳ ಮನೋಭಾವದ ಸೂಕ್ಷ್ಮ ಪರಿಗಳು, ತಾಕಲಾಟ ತೂಗಾಟಗಳು, ಕಾವುಗೊಂಡು ಬಿಡಿಬಿಡಿಯಾಗಿ ತೋರುವುದಿಲ್ಲ. ಈ

ಕೊರತೆಯಿಂದ ಮಾತ್ರ ಇದರಲ್ಲಿ ಉತ್ತಮಕೃತಿಯಾಗಬಹುದಾದ ಸತ್ತ್ವವಿದ್ದರೂ ಇದು ಆಗಿಲ್ಲ. ಉತ್ತಮಕಲೆಯಲ್ಲಿ ಕಾಣಬರುವ ಗತಿವಿಲಾಸ, ಭಾವಪರಿಪುಷ್ಟಿ, ಮನೋವಿಜ್ಞಾನ ಇವು ಸರಿವಾದ ಇದರ ಓಟದಲ್ಲಿ ಸಾಕಷ್ಟು ತಲೆದೋರದೆಹೋಗಿವೆ. ಕಾರಂತರ ವಿಶಿಷ್ಟಕಲೆಯ ಹಿರಿಮೆಗೆ ಇಲ್ಲಿ ಮುಂಗುರುತು ಮಾತ್ರ ಸ್ಪಷ್ಟವಾಗಿ ದೊರೆಯುತ್ತದೆ. ಮೊದಮೊದಲು ವ್ಯಕ್ತಿಸಾಪೇಕ್ಷವಾಗಿ ವಿಡಂಬಕವಾಗಿದ್ದ ಅವರ ಪ್ರತಿಭೆ ವಿಡಂಬನೆಯನ್ನು ಹಿನ್ನೆಲೆಗೆ ಸರಿಸಿ ವ್ಯಕ್ತಿನಿರಪೇಕ್ಷವಾದ ಜೀವನನಿರೂಪಣೆ ಮಾಡಲು ಹೊರಟಿದೆ ಎಂಬುದಕ್ಕೆ ಈ ಕೃತಿ ಸಾಕ್ಷಿ. 'ಸರಸಮ್ಮನ ಸಮಾಧಿ' ಈ ದಾರಿಯಲ್ಲಿ ಇನ್ನೊಂದು ಹೆಜ್ಜೆ. ಸಮಾಜವಿಮರ್ಶೆ-ವಿಡಂಬನೆಗಳು ಇಲ್ಲಿ ವಸ್ತು ಚಮತ್ಕೃತಿಯ, ಪಾತ್ರಪ್ರಜ್ಞೆಯ ಕಾದಂಬರಿಯಾಗಿ ತಲೆದೋರಿವೆ. ಮೂಢರೂಢಿಯ ಮೇಲಿನ ಲತ್ತಾಪ್ರಹಾರಕ್ಕಾಗಿ ಕಲ್ಪಿಸಲಾದ ಸರಸಮ್ಮನ ಸಮಾಧಿಯ ವ್ಯಂಗ್ಯವಸ್ತು, ಅದರ ಸಾದ್ಯಂತ ಕುತೂಹಲ, ಅದರ ಸುತ್ತು ಸೇರಿಯುವ ವಿಷಮದಾಂಪತ್ಯದ ಭಿನ್ನ ಭಿನ್ನ ವ್ಯಕ್ತಿಗಳ ಸ್ವಭಾವಚಿತ್ರ ಸೊಗಸಾಗಿವೆ. ಈ ಕಥೆಗೆ ವಿಸ್ತಾರವಿಲ್ಲ, ವೇಗವಿದೆ. ಆದರೂ ಪಾತ್ರಗಳು ಸಜೀವವಾಗಿವೆ, ವೈಯಕ್ತಿಕವಾಗಿವೆ. ಹಿಂದೆ ಸಾಕಷ್ಟು ಕಣ್ಣಿಗೆ ಬೀಳದ ಬಿಡಿಬಿಡಿಯಾದ ಕಲಾವಂತಿಕೆ ಹಾಗೂ ಸಮುಚಿತನಿಗ್ರಹ ಇವೆರಡೂ ಇಲ್ಲಿ ವ್ಯಕ್ತವಾಗಿವೆ. ಉದಾಹರಣೆಗೆ, ನಾಗವೇಣಿ ಸೀತಾರಾಮರ ದಾಂಪತ್ಯದ ಘೋರರಾತ್ರಿ ಎಂಬ ಪ್ರಕರಣವನ್ನು ಓದಬೇಕು, ಮುಂಬರುವ ಹದಕ್ಕೆ ಇಲ್ಲಿ ಸೂಚನೆ ಸ್ಫುಟವಾಗಿದೆ. ಕಥನದ ಅವಸರ, ವಸ್ತುಪರಿಮಿತಿಗೂ ಪಾತ್ರವಿಪುಲತೆಗೂ ವೈಷಮ್ಯ ಈ ಕುಂದುಗಳಿವೆಯಾದರೂ ಕಾರಂತರ ವಿಡಂಬನೆ ಕಥನಕಲೆಯಾಗಿ ಅರಳಿದ್ದು ಈ ಕೃತಿಯಲ್ಲಿ ಮಾತ್ರ ಎನ್ನಬಹುದು.

'ಮರಳಿ ಮಣ್ಣಿಗೆ' ಇದು ಕಾರಂತರ ದೊಡ್ಡ ಸಾಹಸ, ದೊಡ್ಡ ಕೃತಿ; ಅವರ ಪ್ರತಿಭೆಯ ಪರಿಪಕ್ವಫಲ. ಈ ಪ್ರಾದೇಶಿಕ ಕಾದಂಬರಿಯಲ್ಲಿ, ಪಶ್ಚಿಮ ಕರಾವಳಿಯ ಹಳ್ಳಿಯೊಂದರಲ್ಲಿ ಬ್ರಾಹ್ಮಣ ಕುಟುಂಬವೊಂದು ಮೂರು ತಲೆಮಾರುಗಳ ಅಂದರೆ ಸುಮಾರು ನೂರು ವರುಷಗಳ ವರೆಗೆ ಬಾಳಿದ ಬಡತನದ ಬಾಳ್ವೆಯ ಕತೆಯಿದೆ. ಈ ಕತೆಯ ವಿಸ್ತಾರ, ವ್ಯಕ್ತಿ ವೈವಿಧ್ಯ ಕನ್ನಡ ಕಾದಂಬರಿಯ ಇತಿಹಾಸದಲ್ಲಿ ಒಂದು ಅಪೂರ್ವ ಘಟನೆ. 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಮಹಾಕಾದಂಬರಿಯ ಹರಹಿಗೆ ಈ ಮೊದಲು ವೀಳ್ಯವೆತ್ತಿರುವುದು ನಿಜವಾದರೂ ಇದಕ್ಕೆ ಸಮಾನವಲ್ಲ. ಇದು ಬಡತನದೊಡನೆ ಒಂದು ಕುಟುಂಬದ ಹೋರಾಟವನ್ನು ಮಾತ್ರವಲ್ಲ, ಆ ಕುಟುಂಬದ ಮತ್ತು ಅಂಥ ಲಕ್ಷಾವಧಿ ಕುಟುಂಬಗಳ ಮೊತ್ತವಾದ ಭಾರತೀಯ ಜನಾಂಗವು ಹೊಸ ನಾಗರಿಕತೆಯ ಕೂಡ ಹೂಡಿದ ಹೋರಾಟವನ್ನು ಸೂಚ್ಯವಾಗಿ ಚಿತ್ರಿಸುತ್ತದೆ.

ಮೂರು ತಲೆಮಾರುಗಳೆಂದರೆ ಈ ಹೋರಾಟದಲ್ಲಿ ಮೂರು ಅವಸ್ಥೆಗಳಾಗಿ ತೋರುವಂತಿದೆ; ಒಂದು, ಹೊಸದರ ಸಂಪರ್ಕಕ್ಕಿಂತ ಮೊದಲಿನ ಹಳೆಯ ಸಂಸ್ಕೃತಿಯ ಗುಣ; ಎರಡು, ಹೊಸದರ ಪ್ರಥಮಸಂಪರ್ಕದಿಂದ, ಅಂಧಸ್ವೀಕಾರದಿಂದ ಉಂಟಾದ ದುಃಖಪರಂಪರೆ; ಮೂರು, ಹೊಸದರ ಗುಣವನ್ನು ಮಾತ್ರ ಗ್ರಹಿಸಿ ಹಳೆಯದರ ತಿರುಳಿಗೆ ಮರಳಿ ಮಾರುಹೋಗುವಿಕೆ. ಇದರಿಂದ ಉತ್ತಮ ಕಾದಂಬರಿಯಲ್ಲಿರಬೇಕಾದ ಪ್ರಾದೇಶಿಕತೆ ಮತ್ತು ವಿಶ್ವವ್ಯಾಪಕತೆ ಇವುಗಳ ಸಂಮಿಳನವು ಇದರಲ್ಲಿ ತಾನಾಗಿ ತಲೆದೋರಿದೆ. ಇದರ ಗುಣಸಮುದಾಯವನ್ನೆಲ್ಲ ಇಲ್ಲಿ ವರ್ಣಿಸಲು ಸಾಧ್ಯವಿಲ್ಲ. ಆದರೆ ಚಿತ್ರಕಾರ ಸಹಜವಾದ ವಿವರಗಳ ಪ್ರಭುತ್ವ, ಪ್ರಮಾಣಜ್ಞಾನ, ಕಲೆಗಾರಸಲ್ಲಿರತಕ್ಕ ಸಂನಿವೇಶದೃಷ್ಟಿ, ಪಾತ್ರಪ್ರಜ್ಞೆ ಇವೆಲ್ಲಾ ಇಲ್ಲಿ ಪರಿಪಕ್ವದಶೆಯಲ್ಲಿ ನೆಲೆನಿಂತಿವೆ. ನಿಸರ್ಗವರ್ಣನೆ, ಮನುಷ್ಯಜೀವನದೊಡನೆ ನಿಸರ್ಗದ ಸಂಬಂಧನಿರೂಪಣೆ ಇವುಗಳಲ್ಲಿ ಕಾರಂತರ ಕವಿದೃಷ್ಟಿ ಫಲಿಸಿದೆ. ಕಲೆಯ ಸಮೃದ್ಧಿಯೊಡನೆ ಆಶ್ಚರ್ಯಕಾರಕವಾದ ನಿಗ್ರಹವು ಇಲ್ಲಿಯ ಉತ್ತಮಿಕೆಗೆ ನಿದರ್ಶನವಾಗಿದೆ. ಜೀವನವನ್ನು ಇದ್ದಂತೆ ಅದರೆಲ್ಲ ಜಟಿಲತೆಯಲ್ಲಿ ಸಾಕ್ಷಿಯಾಗಿ ನೋಡಿ ಅನುಭವಿಸುವುದೆಂದರೇನು ಎಂಬುದನ್ನು ಬೀಸಾಗಿ ತೋರಿಸುವ ಕಾದಂಬರಿಯೆಂದರೆ ಹೆಚ್ಚಾಗಿ ಇದೇ. ಕಾರಂತರ ವ್ಯಕ್ತಿನಿರಪೇಕ್ಷವಾದ ಕಥನಕಲೆ ಇಲ್ಲಿ ಪರಿಣತವಾಗಿದೆ. ವಿಡಂಬನಕಾರ ಕಾರಂತರು ಇಲ್ಲಿ ಬಹುಶಃ ಮರೆಯಾಗಿದ್ದು ಜೀವನದ್ರಷ್ಟಾರ ಕಾರಂತರು ತುಂಬುಕಳೆಯಲ್ಲಿ ತೋರಿದ್ದಾರೆ. ಪ್ರಾದೇಶಿಕ ಕಾದಂಬರಿಗಳಲ್ಲಿ ಇದಕ್ಕೆ ಎತ್ತರದ ಸ್ಥಾನವಲ್ಲದೆ, ಈ ವರೆಗಿನ ಕಾದಂಬರಿಗಳಲ್ಲಿ ಇದಕ್ಕೆ ಆದ್ಯಪಟ್ಟ ದೊರೆಯಬೇಕು. ಗುಣದಿಂದಲೂ ಗಾತ್ರದಿಂದಲೂ ಇದು ಮಹಾ ಕಾದಂಬರಿ ಎಂಬುದು ಸತ್ಯ. ಆದರೆ ಇದು ಮಹತ್ತರವಾಗಬಹುದಾಗಿತ್ತು. ಕೆಲಸಲ ವಿವರಗಳ ಹೆಚ್ಚಳ, ಪುನರುಕ್ತಿ, ಗತಿಭೇದ ಇವು ಇದರಲ್ಲಿಯ ಕೊರತೆಗಳಾದರೂ ಅಷ್ಟು ಮುಖ್ಯವಲ್ಲ. ಮುಖ್ಯವಾಗಿ ಕಾರಂತರ ನೇರವಾದ ವಾಸ್ತವಕಲೆಯ ಗುಣವೇ ಒಮ್ಮೊಮ್ಮೆ ದೋಷವಾಗುತ್ತದೆ. ಅವರ 'ಸೂಚೀಯಾನ ಕಲೆ' ಆಗಾಗ ಅತಿ ಸೂಚ್ಯವಾಗುತ್ತದೆ. ಸಂನಿವೇಶಗಳ ಸಂಪೂರ್ಣ ಆವಿಷ್ಕಾರ, ವ್ಯಕ್ತಿಗಳ ಭಾವಪ್ರಕರ್ಷ, ಸೂಕ್ಷ್ಮ ಕಲಾವಿಲಾಸ ಇವುಗಳಿಗೆ ಈ ಕೃತಿಯಲ್ಲಿ ಯಾವಾಗಲೂ ಎಡೆಯಿಲ್ಲ. ಈ ದಾರಿಯಲ್ಲಿ ಕಾರಂತರ ಕಲೆ ಮುಂದುವರಿಯಬೇಕಾಗಿದೆ. 'ಬೆಟ್ಟದ ಜೀವ' 'ಮರಳಿಮಣ್ಣಿಗೆ'ಯ ತರುವಾಯ ಬಂದು ಅದರ ಪರಿಪಾಕವನ್ನು ಸಣ್ಣಗಾತ್ರದಲ್ಲಿ ತೋರಿಸಿದೆ. ಪರಿಸರನಿಷ್ಠವಾದ ಕಾದಂಬರಿಗಳಲ್ಲಿ ಪಾತ್ರ, ವಸ್ತು, ಶೈಲಿಗಳ ಮುಪ್ಪುರಿಯಿಂದ ಉತ್ತಮಕೃತಿಯಿದು. ಬೆಟ್ಟದ ಜೀವನದ ಹಿನ್ನೆಲೆಯಲ್ಲಿ ಬೆಟ್ಟದ ಜೀವವೊಂದೆರಡು ಸಾಮಾನ್ಯವಾದರೂ ಆದರ್ಶ

ಮಾನವರನ್ನು ಸೂಚಿಸುವಂತೆ ಚಿತ್ರಿಸಲಾಗಿವೆ. ಪರಿಸರ, ವಸ್ತು, ಪಾತ್ರಗಳ ಅಚ್ಚ ಹೊಸತನ, ಸರಿಹೊಂದಿಕೆ ಕಂಡುಬರುತ್ತವೆ. ಶಂಭುವಿನ ಕಥೆಯ ಕುತೂಹಲ, ಸಹಜ ರಮ್ಯಹಾಸ್ಯ, ಜನಜೀವನದ ಸ್ಫುಟವಾದ ಚಿತ್ರ ಎಲ್ಲಾ ಹೃದ್ಯವಾಗಿವೆ. ಹೊಸ ಗನ್ನಡಕ್ಕೆ ಇದೊಂದು ಚಿರಸ್ಥಾಯಿಯಾದ ಕಾಣಿಕೆ ಎಂಬಲ್ಲಿ ಸಂಶಯವಿಲ್ಲ.

ಈ ವರೆಗೆ ಕಾರಂತರ ಕಾದಂಬರಿಗಳಲ್ಲಿ ಅವರ ಕಲೆಯ ಬೆಳೆವಣಿಗೆಯನ್ನೂ ಅದೀಗ ಮುಟ್ಟಿದ ನೆಲೆಯನ್ನೂ ಅರಿಯಲು ಹವಣಿಸಿದ್ದಾಯಿತು. ಇನ್ನು ಅ. ನ. ಕೃ. ರ ಕೃತಿಗಳ ಪರೀಕ್ಷಣದತ್ತ ಹೊರಳಬಹುದು. ಕಾಲಕ್ರಮದಿಂದ ಅವರ ಕಾದಂಬರಿಗಳೆಂದರೆ 'ಉದಯರಾಗ', 'ಜೀವನಯಾತ್ರೆ', 'ಸಂಧ್ಯಾರಾಗ', 'ಮಂಗಳಸೂತ್ರ', 'ಸಾಹಿತ್ಯ ರತ್ನ', 'ನಟ ಸಾರ್ವಭೌಮ' (ಅಪೂರ್ಣ). ೧೯೩೪ರಿಂದ ೧೯೪೪ರ ವರೆಗಿನ ಹತ್ತುವರುಷಗಳ ಅವಧಿಯಲ್ಲಿ ಇವನ್ನು ಬರೆಯಲಾಗಿದೆ. ಅ. ನ. ಕೃ. ರ ಸಮೃದ್ಧ ಪ್ರತಿಭೆ ಮಾಡಿದ ನಿರ್ಮಾಣಕಾರ್ಯ ಅಚ್ಚರಿಯನ್ನುಂಟುಮಾಡುವಂಥದು. ಅವರ ಈ ಕೃತಿಗಳಲ್ಲಿ ಅವರ ದೃಷ್ಟಿಸೃಷ್ಟಿಗಳು ಮಾಗಿದ ಬಗೆಯನ್ನು ಗಮನಿಸಬಹುದು. ಸಮಾಜದ ಕೊಳೆಯನ್ನು ಬಯಲಿಗೆಳೆದಂತೆ ಅದರ ಒಳಿತನ್ನೂ ಅವರು ಚಿತ್ರಿಸಿದ್ದಾರೆ. ಅವರನೇಕ ಕಾದಂಬರಿಗಳಲ್ಲಿ ಪ್ರತಿವಿಧದ ಕಲಾವಿದನ ಜೀವನವೂ ವ್ಯಕ್ತಿತ್ವವೂ ಕಂಡರಣೆಯನ್ನು ಪಡೆದಿವೆ. ಮುಖ್ಯವಾಗಿ ಹೊಸಯುಗದ ವಿಚಾರ ಕ್ರಾಂತಿಗಾಗಿ ಹೊಸ ಆದರ್ಶಗಳ ಮತ್ತು ನೈತಿಕಮೂಲ್ಯಗಳ ಸ್ಥಾಪನೆಗಾಗಿ ತಮ್ಮ ಕಥನಕಲೆಯನ್ನು ಅವರು ಬಳಸಿಕೊಂಡಿದ್ದಾರೆ. ಅದರಿಂದ ಅವರ ಕಲಾಕೃತಿಗಳ ವಿಮರ್ಶೆಯಲ್ಲಿ ವಿಚಾರವಿಮರ್ಶೆ, ಮೂಲ್ಯಮಾಪನ ಇವು ತಪ್ಪಿದ್ದಲ್ಲ. ಆದರೆ ಅವರ ವಿಚಾರಪ್ರಣಾಲಿಯೆಷ್ಟು ಗ್ರಾಹ್ಯ ಎಂಬ ಮಾತಿಗಿಂತ ಅವರ ಕಾದಂಬರಿಗಳಲ್ಲಿಯ ವಸ್ತುಪಾತ್ರಗಳಿಗೆ ಅದೆಷ್ಟು ಸಹಜ-ಸಮರ್ಪಕವಾಗಿ ಒಂದಿದೆ ಎಂಬುದು ನಮಗೆ ಹೆಚ್ಚು ಪ್ರಸ್ತುತ ವಿಷಯವಾಗಿದೆ. ಈ ದೃಷ್ಟಿಯಿಂದ ಕೆಳಗಿನ ಪರೀಕ್ಷಣವನ್ನು ಮಾಡಿದೆ.

. . . ಅ. ನ. ಕೃ. ರ ಮೊದಲನೆಯ ಕಾದಂಬರಿಯಾದ 'ಉದಯರಾಗ'ದಲ್ಲಿ ಮಾಣಿಯೆಂಬ ಹೋಟಲಿನ ಹುಡುಗನು ತನ್ನಲ್ಲಿದ್ದ ಚಿತ್ರಕಲೆಯ ಅದ್ಭುತ ಶಕ್ತಿಯನ್ನು ಹೇಗೆ ಬೆಳೆಸಿಕೊಂಡನು, ಜೀವನದ ವ್ಯಾಮೋಹಗಳಿಗೆ ಒಳಗಾಗಿ ಅನುಭವಹೊಂದಿ ತನ್ನ ಕಲೆಯಲ್ಲಿ ಹೇಗೆ ಘನತೆಯನ್ನು ತೋರಿದನು, ಪತಿತನಾಗಿ ಕೆಲಕಾಲ ಬಾಳಿ ಕೊನೆಗೆ ಹೇಗೆ ಪಶ್ಚಾತ್ತಾಪ ಪುನೀತನಾದನು ಎಂಬುದು ಮುಖ್ಯವಿಷಯ. 'ಇಂತಹ ಸಮಸ್ಯೆಗಳನ್ನೆದುರಿಸಿ, ಸೋತು ಗೆದ್ದು ಬಂದ ಒಬ್ಬ ಕಲಾವಿದನ ವಿಪ್ಲವಜೀವನ' ಇಲ್ಲಿ ಸ್ಥೂಲವಾಗಿದೆ, ಆಳವಾಗಿಲ್ಲ. ಮಾಣಿಯ ಸಾಹಸ ಕಥೆಗೆ ಅವಶ್ಯವಾದ ಸಂನಿವೇಶ ಸೃಷ್ಟಿ, ಸಂಪಾದರಚನೆ ಇದ್ದರೂ ಸ್ವಭಾವಪೋಷಣೆ ತೃಪ್ತಿಕರವಾಗಿಲ್ಲ. ಅಂದರೆ ನಿಜವಾದ

ಸಾಹಸ, ಕಲಾವಿದನ ಸಾಧನೆ ಅವನಲ್ಲಿ ಸಮರ್ಪಕವಾಗಿ ತೋರಿಲ್ಲ. ದಾರುಣವಾದ ಪ್ರತಿಕೂಲ-ಪರಿಸ್ಥಿಯ ಕೂಡ ಹೋರಾಡಿ ಮಾಡಿದ ಘೋರ ಸಾಹಸಕ್ಕಿಂತ ತನ್ನ ಸಾಹಸ ಬುದ್ಧಿಗೆ ಆಕಸ್ಮಿಕವಾಗಿ ಒದಗಿಬಂದ ಅನುಕೂಲಗಳ ಮೂಲಕ ಅವನು ಪಡೆದ ಯಶಸ್ಸು ಹೆಚ್ಚಾಗಿದೆ. ಅಲ್ಲದೆ ಜೀವನಾನುಭವದಲ್ಲಿ ಅವನು ಪಡೆದ ಸೋಲು ಗೆಲವುಗಳ, ಕಲಾವಿಷಯದಲ್ಲಿಯ ಕ್ರಿಯೆ ಪ್ರತಿಕ್ರಿಯೆಗಳ ಸೂಕ್ಷ್ಮ ಪೃಥಕ್ಕರಣವಿಲ್ಲ, ಸ್ವಾಭಾವಿಕವಾದ ಕ್ರಮಬದ್ಧವಾದ ಬೆಳವಣಿಗೆಯಿಲ್ಲ. ಅವನ ಹೃದಯದಲ್ಲಿ ಕಾಮವು ತಾಂಡವವಾಡಿದ್ದರಿಂದ ಕಥೆ ಕದಡಿದೆ ಎಂದಲ್ಲ, ಕಾಮ ತಾಂಡವಕ್ಕೆ ಅವನ ವ್ಯಕ್ತಿ ವಿಶೇಷವು ಹೇಗೆ ಹೆಜ್ಜೆ ಹಾಕಿತೆಂಬುದರ ವಿಶ್ಲೇಷಣವಿಲ್ಲದೆ ಕಥೆ ಅಸಮರ್ಪಕ ವಾಗಿದೆ. ರೂಪದಾಸಿಗೆ ಅವನೊಲಿದ ಸಂದರ್ಭವನ್ನು ಇದಕ್ಕೆ ಉದಾಹರಣೆಯಾಗಿ ನೋಡಬೇಕು. ಮಾಣಿಯ ತೂಗಾಟ–ತೊಳಲಾಟಗಳನ್ನು ಈ ಸಂದರ್ಭದಲ್ಲಿ ಹೆಚ್ಚು ಸಮಂಜಸವಾಗಿ ಚಿತ್ರಿಸಬೇಕಾಗಿತ್ತು. ಈಗಿನ ಚಿತ್ರಣದಲ್ಲಿಯ ಗುಣಭಾಗವನ್ನು ಮೆಚ್ಚಿಯೂ ನಮ್ಮ ಅತೃಪ್ತಿಯನ್ನು ಸೂಚಿಸದಿರಲಾರೆವು. ಒಟ್ಟಿನಲ್ಲಿ ಕಲಾವಿದನ ಜೀವನ ಮತ್ತು ಕಲೆ ಇವುಗಳ ಅನ್ಯೋನ್ಯ ಸಂಬಂಧ, ವೇಶ್ಯೆಯರಲ್ಲಿಯೂ ತೋರುವ ಪವಿತ್ರಪ್ರೇಮ ಈ ಮುಂತಾದ ವಿಷಯಗಳ ಬಗ್ಗೆ ಗ್ರಂಥಕರ್ತರು ತಳೆದ ಅಭಿಪ್ರಾಯ ಗಳಿಗೆ ಕಥೆ–ವ್ಯಕ್ತಿಗಳು ಅಧೀನವಾಗಿ ಬಿಡುತ್ತವೆ. ನಾಯಕನ ಬಗ್ಗೆ ಆರಂಭದಿಂದಲೇ ಅತಿಪ್ರಶಂಸೆ, ಅವನ ಮೇಲೆ ಅವನ ವ್ಯಕ್ತಿತ್ವಕ್ಕೆ ಹೊಂದಿಕೆಯಾಗದಂತೆ ಸ್ವಂತ ಅಭಿಪ್ರಾಯ ಮತ್ತು ನೈತಿಕಮೂಲ್ಯಗಳ ಆರೋಪ ಇದರಿಂದ 'ಉದಯರಾಗ'ಕ್ಕೆ ಕುಂದು ತಟ್ಟಿದಂತೆ ಮುಂದಿನ ಹಲವು ಕೃತಿಗಳ ಮೇಲೂ ಅದರ ಕಾನೆರಳು ಬಿದ್ದಿದೆ. ಆದರೆ ಕಾದಂಬರಿಕಾರನ ಕೆಲವು ಶ್ಲಾಘ್ಯ ಗುಣಗಳು ಅ. ನ. ಕೃ. ರಲ್ಲಿ ನಿಃಸಂಶಯ ವಾಗಿ ಇರುವವೆಂಬುದನ್ನು ಈ 'ಉದಯರಾಗ'ವು ಸ್ವರವೆತ್ತಿ ಸಾರುತ್ತದೆ.

'ಜೀವನಯಾತ್ರೆ' ಯಲ್ಲಿ ದಾಂಪತ್ಯ ಜೀವನ ಮತ್ತು ವೇಶ್ಯಾಜೀವನದ ವಿರಸ ವಿಪರಿಣಾಮಗಳ ನಿರ್ಭಯ ನಿರೂಪಣೆಯಿದೆ. ವೇಶ್ಯಾಜೀವನದ ಭಾಗ ಒಟ್ಟಿನಲ್ಲಿ ಚೆನ್ನಾಗಿ ಚಿತ್ರಿತವಾಗಿದೆ. ತುಂಬ ಕೃತಕ ಮತ್ತು ಕ್ಷೋಭಕಾರಿಯಾದ ಕಥಾಂಶ ವೆಂದರೆ ಸ್ವಾಮಿ, ಲಲಿತಮ್ಮರ ಪ್ರಣಯಸಂಬಂಧ. ಮನವೊಲ್ಲದ ಪತಿಯೊಡನೆ ಇರುವುದಕ್ಕಿಂತ ಪರಪುರುಷನ ಕೂಡ ಮನೆಯ ಹೆಂಡತಿಯಂತೆ ಇರುವುದು ಮೇಲಾದ ದಾಂಪತ್ಯಯೋಗ ಎಂಬ ಅತಿರೇಕದ ಪ್ರತಿಕ್ರಿಯೆಯನ್ನು ಉದಾಹರಿಸಲು ಹೋಗಿ ವಾಸ್ತವ ಜೀವನದ ಆಭಾಸ ಮಾಡಲಾಗಿದೆ. ಇಂಥ ಸಂನಿವೇಶ ಸಮಾಜದಲ್ಲಿ ಕ್ವಚಿತ್ತಾಗಿ ನಡೆಯಬಹುದೆಂದು ಒಪ್ಪಿದರೂ ಅದನ್ನು ಪವಿತ್ರಪ್ರೇಮದ ಮೇಲಟ್ಟ ಕ್ಕೇರಿಸಿ ಉದಾತ್ತಗೊಳಿಸಿ ಹೇಳುವುದು ತಪ್ಪುಮೂಲ್ಯ ಪ್ರಜ್ಞೆ. ಇಲ್ಲಿಯಂತೂ

ಆ ಪರಪುರುಷನು ಅನೇಕರೊಡನೆ ಸಖ್ಯ ಬೆಳೆಸಿದ ಸ್ತ್ರೀವ್ಯಸನಿಯಾದ್ದರಿಂದ ಇನ್ನಿಷ್ಟು ಆಭಾಸವಾಗಿದೆ. ಇಂಥಲ್ಲಿ ಸತ್ಯ, ನೀತಿ, ಕಲೆ ಮೂರರ ಹಾನಿ ಸಾಕಷ್ಟಾಗುತ್ತದೆ. ಸುಂದರಿಯ ಸ್ವಭಾವಚಿತ್ರ ಮತ್ತು ಆರಂಭ ಮುಕ್ತಾಯಗಳ ವಸ್ತುವಿನ್ಯಾಸ ಇವುಗಳಲ್ಲಿ ತೋರಿದ ಗುಣ ಮೇಲಿನ ಅವಗುಣದಿಂದ ಮಸಕಾಗಿದೆ. 'ಉದಯರಾಗ' ದಲ್ಲಿ ಇದ್ದಷ್ಟು ಕಲಾಗುಣ ಇಲ್ಲಿ ಕಡಿಮೆಯಾಗಿ ಅದರ ನೈತಿಕಚ್ಯುತಿ ಇಲ್ಲಿ ಹೆಚ್ಚಾಗಿದೆ.

ಅ. ನ. ಕೃ. ರ ಮೂರನೆಯ ಕಾದಂಬರಿಯಾದ 'ಸಂಧ್ಯಾರಾಗ' ವು ಮುತ್ತಿನಂಥ ಕೃತಿ. ಇದರಲ್ಲಿ ಸಂಗೀತಕಲಾವಿದ ಲಕ್ಷ್ಮಣನ ಸ್ವಭಾವಚಿತ್ರ ಮುಖ್ಯಗುರಿಯಾದರೂ ಶ್ರೀನಿವಾಸರಾಯರು ಮೀನಾಕ್ಷಮ್ಮ ಮುಂತಾದ ಹಲವು ಪಾತ್ರಗಳೂ ತುಂಬಿ ಬಂದಿವೆ. ಸವೇಗಕಥನ, ಸಜೀವ ವ್ಯಕ್ತಿಗಳು, ಸಹಜ ಸಂನಿವೇಶ, ಉಚಿತ ಸಂವಾದ–ಇವುಗಳಿಂದ ಇದು ಹೊಸಗನ್ನಡದ ಮೇಲಾದ ಕಾದಂಬರಿಗಳಲ್ಲಿ ಒಂದಾಗಿದೆ. ಇದರಲ್ಲಿ ವಾಸ್ತವ–ಆದರ್ಶಗಳ ಸರಿಯಾದ ಬೆರಕೆಯಿದೆ. ಸಾಂಪ್ರದಾಯಿಕ ಜೀವನದ ಉತ್ತಮಾಂಶಗಳ ಉತ್ತಮ ನಿರೂಪಣೆಯಿದೆ. ಮೀನಾಕ್ಷಮ್ಮನ ಸೃಷ್ಟಿ ಈ ಕೃತಿಯ ಕಳಸ. ಅವಳ ತರುವಾಯ ಒಡೆದುಹೋದ ಕುಟುಂಬದ ಕಟ್ಟು ಸೊಗಸಾಗಿ ಚಿತ್ರಿತವಾಗಿದೆ. ಲಕ್ಷ್ಮಣ ಹಿರಿಯ ಕಲಾವಿದ, ಉದಾತ್ತವ್ಯಕ್ತಿಯೆಂಬುದು ಅನೇಕ ಸಂನಿವೇಶಗಳಲ್ಲಿ ಬೆಳೆದು ಬಂದು ಕೊನೆಯ 'ಸಂಧ್ಯಾರಾಗ' ದ ಸಂದರ್ಭದಲ್ಲಿ ಅತ್ಯಂತ ಹೃದಯಸ್ಪರ್ಶಿಯಾಗಿ ತೋರುತ್ತದೆ. ಇಷ್ಟೆಲ್ಲ ಗುಣಭೂಯಿಷ್ಠವಾದ ಈ ಕೃತಿಯಲ್ಲಿ ಕಲೆಯ ಮುಂದೋಟದ ಮೂಲಕ ಪಾತ್ರ ವಿಕಾಸದ ಸೂಕ್ಷ್ಮಾಂಶಗಳಿಗೆ ಎಲ್ಲೆಡೆ ಅವಕಾಶ ದೊರೆಯಲಿಲ್ಲ. ಹಾರಿಕೆಗಳ ಮೂಲಕ ಸಹಜ ಹೆಜ್ಜೆ ಇಲ್ಲದಂತೆ ಆಗಾಗ ತೋರುತ್ತದೆ. ಆಯ್ದ ಕತೆಯ ಮೊತ್ತಕ್ಕಿಂತ ಗಾತ್ರ ಕಡಿಮೆಯಾಗಿದೆ. ಮುಖ್ಯ ನಾಯಕನಾದ ಲಕ್ಷ್ಮಣನ ವ್ಯಕ್ತಿವಿಕಾಸದಲ್ಲಿ ಅವನ ಹೋರಾಟ, ತೂಗಾಟ, ಕಷ್ಟ–ತ್ಯಾಗ ಇವುಗಳನ್ನು ಇದರಲ್ಲಿ, ವಿಶೇಷವಾಗಿ ಉತ್ತರಾರ್ಧದಲ್ಲಿ, ಬಿಡಿಬಿಡಿಸಿ ತೋರಿಸಿ ಕಾದ ಚಿನ್ನದಂತೆ ಅವನ ಸಿದ್ಧಿಯ ಕಾಂತಿಯನ್ನು ತೋರಬಹುದಾಗಿತ್ತು. ಆಕಸ್ಮಿಕ ಅನುಕೂಲಗಳು ಈಗಿನ ಕತೆಯಲ್ಲಿ ಹೆಚ್ಚಾಗಿ ಪರಿಸ್ಥಿತಿಯೊಡನೆ ಹೋರಾಟವನ್ನು ಸಾಕಷ್ಟು ತೋರಿಲ್ಲ. ಅ. ನ. ಕೃ. ರ ಕೃತಿಗಳಲ್ಲಿ ಇದು ಮೇಲಾದ, ಸಣ್ಣ ಗಾತ್ರದಲ್ಲಿ ಬಹುಶಃ ಪೂರ್ಣತೆವೆತ್ತ ಕಾದಂಬರಿ. ಆದರೆ ಇದನ್ನು ಹಿರಿದಾದ ಕೃತಿ ಇಲ್ಲವೆ ಹೊಸಗನ್ನಡದ ಉತ್ತಮ ಕಾದಂಬರಿಯೆಂದೂ ವಿಶ್ವಸಾಹಿತ್ಯದಲ್ಲಿ ಇದಕ್ಕೆ ಮೇಲಾದ ಸ್ಥಾನವಿದೆಯೆಂದೂ ಕರೆಯುವುದು ಅತಿಶಯೋಕ್ತಿ. 'ಸಂಧ್ಯಾರಾಗ ಪ್ರಶಸ್ತಿ'ಯ ಬರೆಹಗಾರರು ಅಭಿಮಾನದಿಂದ ಇದರ ಗುಣಗಳನ್ನು ತೋರಿದ್ದು ಸರಿಯಾದರೂ ಇದರ ಬಗ್ಗೆ ಹಲವರ ಅತ್ಯುಕ್ತಿಯನ್ನು

ಒಪ್ಪುವುದು ವಿಮರ್ಶವಿವೇಕವಾಗಲಾರದು. ಇದರಲ್ಲಿಯ ವ್ಯಕ್ತಿಗಳ ಘನತೆ ಕಾದಂಬರಿಯ ಘನತೆಯ ಬಗ್ಗೆ ನಿಃಸಂಶಯ ಪರಿಣಾಮವನ್ನುಂಟುಮಾಡುವಂತಾದರೂ ಕಲಾವಂತಿಕೆಯ ಘನತೆಗೆ ಬೇಕಾದ ಹರಹು, ಹದ, ಆಳ ಇದರಲ್ಲಿ ಸಾಕಷ್ಟಿಲ್ಲ. ಇದ್ದುದು ಹಿರಿಮೆಗೆ ಕೈಚಾಚಿದೆ. ಈ ಕಾದಂಬರಿ ಅ. ಸ. ಕೃ. ರ ಹೆಚ್ಚಿನ ಶಕ್ತಿಗೆ ಸ್ಪಷ್ಟನಿದರ್ಶನ, ಹಿರಿಯ ಬರವಣಿಗೆಗೆ ಸಂಚಕಾರ, ಇದೇ ಹಿರಿದಲ್ಲ.

‘ಸಂಧ್ಯಾರಾಗ’ದ ತರುವಾಯ ಒಟ್ಟಿನಲ್ಲಿ ಅದೇ ಮಟ್ಟದಲ್ಲಿರುವ ಮೇಲಾದ ಕೃತಿಯೆಂದರೆ ‘ಮಂಗಳಸೂತ್ರ’. ‘ಸಂಧ್ಯಾರಾಗ’ದಂತೆ ಇಲ್ಲಿಯೂ ಲೇಖಕರು ಉತ್ತಮ ನಿರೀಕ್ಷಕರೂ ನಿರೂಪಕರೂ ಆಗಿ ಕೃತಿಸಾಫಲ್ಯ ಹೊಂದಿದ್ದಾರೆ. ಹಳ್ಳಿಯ ರಾಜಕಾರಣ, ನಾರಣಪ್ಪನವರ ಸಂಸಾರ, ಸಂಜುಂಡ-ಸುಬ್ಬನಂಥ ವ್ಯಕ್ತಿಗಳು—ಎಲ್ಲಾ ಮಿಗಿಲಾದ ಕೈವಾಡದಿಂದ ಚಿತ್ರಿಸಲಾಗಿವೆ. ರತ್ನಾ-ಶಂಕರ ಇವರ ದಾಂಪತ್ಯ ವರ್ಣನೆಯಲ್ಲಿ ಉದಾತ್ತೀಕರಣವಿದೆ. ಅಲ್ಲಲ್ಲಿ ಅದು ತುಸು ಪ್ರಮಾಣಮೀರಿದೆ. ಅವರ ಸುಖಮಯವಾದ ವಿವಾಹೋತ್ತರ ಜೀವನವು ಶಂಕರನ ಆಕಸ್ಮಿಕ ಮರಣದಿಂದ ಕೊನೆಗೊಳ್ಳುವುದು. ಸತ್ಯಸೃಷ್ಟಿಗೆ ವಿಸಂಗತವಲ್ಲವಾದರೂ ಪೂರ್ವ ಸೂಚನೆಗಳಿಂದ ಕುತೂಹಲವನ್ನು ಕೆರಳಿಸಿ ಅದನ್ನು ಹೆಚ್ಚು ಕಲಾಮಯವಾಗಿ ಮಾಡಬಹುದಾಗಿತ್ತು. ಸುಂದರೂನ ಪ್ರಣಯಲೀಲೆ ಮುಂತಾದ ಭಾಗದಲ್ಲಿ ಕೃತಕತೆ ಹೆಚ್ಚು. ಒಟ್ಟಿನಲ್ಲಿ ವ್ಯಕ್ತಿನಿರಪೇಕ್ಷವಾದ ಸಂಸಾರ ಚಿತ್ರದಿಂದ ಕನ್ನಡಕಾದಂಬರಿಗಳಲ್ಲಿ ‘ಸಂಧ್ಯಾರಾಗ’ದ ಜೊತೆಗೆ ಇದು ಕೊನೆಬಾಳತಕ್ಕ ಕೃತಿ. ‘ಮರಳಿಮಣ್ಣಿಗೆ’ಯ ಜೀವನಪ್ರಜ್ಞೆ ಇಲ್ಲಿಯೂ ಗೋಚರವಾಗುತ್ತದೆ. ಇದು ಹಿರಿಗತೆಯಲ್ಲದಿದ್ದರೂ ಹಿರಿಯ ಬರಹಗಾರನ ಶಕ್ತಿಯನ್ನು ಸ್ಫುಟವಾಗಿ ತೋರಿಸಿದೆ.

ಅನಂತರದ ಕಾದಂಬರಿ ‘ಸಾಹಿತ್ಯರತ್ನ’: ಇದರಲ್ಲಿ ಮೂರ್ತಿ ಎಂಬ ಸಾಹಿತ್ಯನಿರ್ಮಾತನಾದ ಕಲಾವಿದನೊಬ್ಬನ ಕಥೆಯಿದೆ. ‘ಗುರಿಬದ್ಧವಾದ ಜೀವನದ ಎದುರು ಬರುವ ಸಮಸ್ಯೆಗಳು, ಅಡ್ಡಿ ಆತಂಕಗಳನ್ನು ಒಬ್ಬ ಸಾಹಿತಿ ಹೇಗೆ ಎದುರಿಸಿದ ಎನ್ನುವುದೇ ಇದರ ಕಥಾವಸ್ತು’ ಎಂದು ಲೇಖಕರೂ ಹೇಳಿದ್ದಾರೆ. ‘ನನ್ನ ಕಥಾನಾಯಕ ಒಬ್ಬ ಸಾಧಕ, ಸಿದ್ಧನಲ್ಲ’ ಎಂದೂ ತಿಳಿಸಿದ್ದಾರೆ. ವಿಚಾರ ಪ್ರಚೋದನೆ ಇದರ ಹೆಗ್ಗುರಿಯೆಂದೂ ಸಾರಲಾಗಿದೆ. ಪ್ರತಿಭಾಶಾಲಿಯಾದ ಸಾಹಿತಿಯ ಆದರ್ಶ ಸಾಧನೆ, ವಿವಿಧಸಾಹಸ, ಸಂಪ್ರದಾಯ ಪ್ರತಿಭಟನೆ ಎಲ್ಲವೂ ಈ ಕಾದಂಬರಿಯಲ್ಲಿ ಸಾಕಷ್ಟು ಹರಡಿಕೊಂಡು ಬಂದಿದೆ. ಇದರಲ್ಲಿ ಕಲೆಯ ನಾಗಾಲೋಟ, ಸಂವಾದ ಚಾತುರ್ಯ, ವಾಸ್ತವಪ್ರಜ್ಞೆ, ಆದರ್ಶದ ಉತ್ಸಾಹ ಇವೆಲ್ಲಾ ಒಳ್ಳೆಯ ಗುಣಗಳಾಗಿ ತೋರಿವೆ. ಹೊಸ ಜೀವನದ ಪಡಿನೆಳಲು ಮೂಡಿದೆ. ಆದರೆ ಮೂರ್ತಿಯ

ಸ್ವಭಾವ ನಿರೂಪಣೆಯಲ್ಲಿ ಮೂಲ ಉದ್ದೇಶವು ಸಫಲವಾಗಿಲ್ಲ. ಅವನು ಹೆಚ್ಚಾಗಿ ಸಿದ್ಧಸಾಹಿತಿಯಂತೇ ಮೆರೆಯುತ್ತಾನೆ, ಸಾಧಕನಾಗಿ ಅಲ್ಲ. ಅವನ ಗ್ರಂಥರಚನೆ, ವಾಕ್ಪಟುತ್ವ ಎಲ್ಲವೂ ಕಲೆಯ ಪರಮಾವಧಿಯನ್ನೇ ಮುಟ್ಟಿರುತ್ತವೆ. ಅವನ ಕೀರ್ತಿ ಬೇಗನೆ ಅಂತರ್‌ಪ್ರಾಂತೀಯವಾಗಿ ಹಬ್ಬುತ್ತದೆ. ಅವನ ವ್ಯಕ್ತಿತ್ವಕ್ಕೆ ಆರಂಭ ವಿಕಾಸವೆಂಬುದರ ಸುದ್ದಿಯೇ ಇಲ್ಲ. ಅವನ ಗುರಿಬದ್ಧ ಜೀವನದೆದುರು ಬರುವ ಸಮಸ್ಯೆಗಳು, ಆತಂಕಗಳು ಪರಿಸ್ಥಿತಿಗಿಂತ ಹೆಚ್ಚಾಗಿ ಅವನ ವಿಚಿತ್ರ ಮನೋವೃತ್ತಿಯಿಂದಲೇ ಉದ್ಭವಿಸಿರುತ್ತವೆ. ಅವನ್ನು ಎದುರಿಸುವಲ್ಲಿ ಅದೇ ಮನೋವೃತ್ತಿಯನ್ನು ಅವನು ಪ್ರಕಟಿಸುತ್ತಾನೆ. ಸಿದ್ಧಸಾಹಿತಿ, ಆದರ್ಶಸಾಧಕ, ವಿಕ್ಷಿಪ್ತವ್ಯಕ್ತಿ ಈ ಮೂರು ವಿಸದೃಶ ಸ್ವಭಾವಗಳ ಜೋಡಣೆಯಿಂದ ಅವನ ಪಾತ್ರರಚನೆ ಆಭಾಸಮಯವಾಗಿದೆ, ಆದರ್ಶೀಕರಣದ ಅತಿರೇಕವಾಗಿದೆ. ಹೀಗಾಗಿ ಮೂರ್ತಿ ತ್ರಿಮೂರ್ತಿಯಾಗಿದ್ದಾನೆ. ಇಲ್ಲಿ ಅ. ನ. ಕೃ. ರ ಕಲಾದೃಷ್ಟಿ ಹಿಂದೆ ಸರಿದು ವಿಚಾರಪ್ರಣಾಲಿ ಮುಂದಾಗಿದೆ. ಹೊಸ ನೈತಿಕ ಮೂಲ್ಯ, ಸಾಹಿತ್ಯ ಮತ್ತು ಜೀವನ ಇವುಗಳ ಸಂಬಂಧ, ಸಾಹಿತಿಯ ವ್ಯಕ್ತಿತ್ವ ಹೇಗಿರಬೇಕು ಇದನ್ನು ಕುರಿತ ಅವರ ವಿಚಾರಪ್ರಣಾಲಿ ಇದರಲ್ಲಿ 'ಮೂರ್ತಿ'ಯಾಗಿ ಮೂರ್ತವಾಗಿದೆ. ವಾಸ್ತವ ಜೀವನದ ಭೂಮಿಯಲ್ಲಿ ಹದಗೊಳಿಸಿ ಹೊಸ ವಿಚಾರದ ಬೀಜಗಳನ್ನು ಬಿತ್ತುವ ಬದಲು ಉರಿಮಳಲಿನಲ್ಲಿ ಹುರಿದ ಬೀಜ ತೂರಿದಂತಾಗಿದೆ. ಮೂರ್ತಿ ಲಲಿತರ ಪ್ರಕರಣ ಈ ಕಾದಂಬರಿಯ ವಾದಗ್ರಸ್ತ ಭಾಗ. ಹೊಸ ದೃಷ್ಟಿಯಿಂದ ನೋಡಿದಾಗ ಮೂರ್ತಿ-ಲಲಿತರ ಇಬ್ಬರ ಪರಸ್ಪರ ಎಳೆತಗಳನ್ನು ತಿಳಿದುಕೊಳ್ಳಬಹುದು. ಆದರೆ ಹೊಸ ದೃಷ್ಟಿಗೆ ಸಹ ಅವರ ಮಾತು—ನಡತೆ ಅತಿರೇಕ, ಅಭಾಸಪೂರ್ಣ. ಮನಸ್ಸಿನ ವಿರುದ್ಧ ಲಗ್ನವಾದ ಹೆಂಡತಿಯನ್ನು ಒಲಿಸಿಕೊಳ್ಳುವುದು ಅಸಾಧ್ಯವಾಗಿತ್ತೇ ? ಅಂಥ ಪ್ರಯತ್ನಗಳನ್ನು ಆದರ್ಶಸಾಧಕನಾದ ಮೂರ್ತಿ ಎಷ್ಟು ನಿಷ್ಠೆಯಿಂದ ಮಾಡಿದ ? ತಾನು ವಿಕ್ಷಿಪ್ತವಾಗಿ ನಡೆದು ತನ್ನ ಹೆಂಡತಿಯನ್ನು ದೂಷಿಸಿ ಇನ್ನೊಬ್ಬಳ ಬೆನ್ನು ಹತ್ತುವ ಮೂರ್ತಿ, ಮದುವೆಯಾದ ಅವನಲ್ಲಿ ಆತ್ಮಾರ್ಪಣ ಮಾಡುವ ಲಲಿತ ಇವರನ್ನು ಹೇಗೆ ಮೆಚ್ಚಬೇಕು ? ಇದಾವ ನ್ಯಾಯ, ಎಲ್ಲಿಯ ನೀತಿ ? ಈ ಪ್ರಕರಣದ ನಿರೂಪಣೆಯಲ್ಲಿ ಸೂಕ್ಷ್ಮಮನೋವಿಜ್ಞಾನ, ವಾಸ್ತವ ದೃಷ್ಟಿಗಳ ಬೆಳಕನ್ನು ಬೀರಿದ್ದರೆ 'ಸಾಹಿತ್ಯರತ್ನ' ಸಾರ್ಥಕವಾಗಬಹುದಾಗಿತ್ತು. ಇಂದಿನ ಜೀವನದಲ್ಲಿ ಒಂದು ನಿಜವಾದ ಸಮಸ್ಯೆಯ ಕಲಾಮಯವಾದ ನಿರೂಪಣೆ ದೊರೆಯುತ್ತಿತ್ತು. ಈಗಿದ್ದಂತೆ ಕಾದಂಬರಿ ಗುಣದೋಷಗಳ ಗೂಡಾಗಿ ಮಿಶ್ರಪರಿಣಾಮಕಾರಿಯಾಗಿದೆ. 'ಸುಂದರವಾದ ಕಾದಂಬರಿ'ಯೆಂದು ಕರೆಯುವುದು ನಮಗಂತೂ ಆತ್ಮವಂಚನೆಯೆಂದು

ತೋರುತ್ತದೆ. 'ನಟಸಾರ್ವಭೌಮ' ಇದು ಇತ್ತೀಚೆಯ ಕಾದಂಬರಿ. ಸದ್ಯಃ ಅಪೂರ್ಣವಾಗಿ ಪ್ರಕಟವಾಗಿದ್ದರಿಂದ ಅದನ್ನು ಇಡಿಯಾಗಿ ನೋಡದೆ ಅದರ ವಿಮರ್ಶೆಗೆ ತೊಡಗುವುದು ಅನುಚಿತ. ಈಗ ನೋಡಿದ ಭಾಗದಲ್ಲಿ ನಟಸ್ವರೂಪಿಯಾದ ಕಲಾವಿದನ ಜೀವನಚಿತ್ರ ಚಿತ್ತವೇಧಕವಾಗಿ ಬಂದಿದೆ. ಆದರೂ ವಸ್ತು ಮತ್ತು ವ್ಯಕ್ತಿಗಳ ಸ್ವಾಭಾವಿಕತೆಯ ಬಗ್ಗೆ ಪ್ರಬಲಸಂಶಯಗಳೂ ಏಳುತ್ತವೆ. ಒಟ್ಟಿನಲ್ಲಿ ಉತ್ತಮ ಕಾದಂಬರಿಕಾರನ ಹಲವಾರು ಗುಣಗಳು ಅ. ನ. ಕೃ. ಅವರಲ್ಲಿ ನೆಲಸಿವೆ. ಅವರ ಒಂದೆರಡು ಕೃತಿಗಳು ಹೊಸಗನ್ನಡಕ್ಕೆ ಶಾಶ್ವತ ಕಾಣಿಕೆಗಳಾಗಿದ್ದು ಮುಂಬರುವ ಹಿರಿಮೆಗೆ ಕಣ್ಸನ್ನೆಯಂತಾಗಿವೆ. ಅವರ ವಿಚಾರದಂತೆ ಕಲೆಯೂ ಪ್ರಗತಿಶೀಲವಾಗುವುದೆಂದೂ ಜೀವನ ನಿಷ್ಠವಾಗಿ ಅವರ ವಿಚಾರಪ್ರಚೋದನೆ ಕಾದಂಬರಿಯಲ್ಲಿ ಮೈಗೊಳ್ಳುವುದೆಂದೂ ಆಶಿಸುತ್ತೇವೆ. ಅಲ್ಲದ ಟೀಕೆ, ಸಲ್ಲದ ಸ್ತುತಿಗಳ ದಾರಿಯನ್ನು ಬಿಟ್ಟು ಸಹೃದಯರು ಅವರ ಕೃತಿ ಪರೀಕ್ಷಣವನ್ನು ಮಾಡುವರೆಂದೂ ನಂಬಿದ್ದೇವೆ.

ಈ ವರೆಗೆ ಒಂದೇ ಆದರೂ ಮಹಾ ಕಾದಂಬರಿಯನ್ನು ರಚಿಸಿದ ಶ್ರೇಯಸ್ಸು ಕೆ. ವಿ. ಪುಟ್ಟಪ್ಪನವರದು. ಅವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಎಂಬ ಪ್ರಾದೇಶಿಕ ಕಾದಂಬರಿ ಗಾತ್ರದಲ್ಲಿ, ವಸ್ತುವಿಸ್ತರದಲ್ಲಿ ಹೊಸಗನ್ನಡಕ್ಕೆ ಮೊದಲನೆಯದಾಗಿ ಲಭಿಸಿತು. ಮಲೆನಾಡಿನ ಚರಾಚರ ಸೃಷ್ಟಿಯ ಸಾರವಿನ್ನಿಲ್ಲಿ ಸೆರೆ ಹಿಡಿಯಲು ಪುಟ್ಟಪ್ಪನವರು ಮಾಡಿದ ಸಾಹಸ ಅದ್ಭುತವೂ ರಮ್ಯವೂ ಆಗಿರುತ್ತದೆ. ಆಯಾ ಪ್ರದೇಶ ಜೀವನದ ವಿವಿಧತೆಯನ್ನು ಜಟಿಲತೆಯನ್ನು ತೋರಿಸುವ ಹರಹು ಇದರಲ್ಲಿ ಬಂದಕಾರಣ ಮಹಾ ಕಾದಂಬರಿಯೆಂಬ ಬಿರುದಿಗೆ ಇದು ಅರ್ಹವಾಗಿದೆ. ಆದರೆ ಕೆಲವು ಮುಖ್ಯತಂತ್ರಗಳ ಸ್ವಭಾವದರ್ಶನ ಮತ್ತು ಚಿತ್ರಣದಲ್ಲಿ ಅತಿಶಯಿತ ಧ್ಯೇಯವಾದವು ತನ್ನ ಪ್ರಭಾವಬೀರಿದೆ. ವಾಸ್ತವನಿರೂಪಣೆಯ ಕಲಾತಿಶಯದಲ್ಲಿ ಈ ಆದರ್ಶದ ಆಭಾಸವು ಸೇರಿಕೊಂಡ ಕಾರಣ, ಮಹಾ ಕಾದಂಬರಿಯ ಮಹತ್ತಿಗೆ ಬಾದೆಯುಂಟಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಹೀಗಿದ್ದರೂ ಕನ್ನಡ ಕಾದಂಬರಿಯ ಮಂದಿರದಲ್ಲಿ ನಂದಾದೀಪವಾಗಿ ಬೆಳಗತಕ್ಕ ಕೃತಿಗಳಲ್ಲಿ ಇದು ಒಂದು ಎಂಬುದನ್ನು ನೆನೆಯಬೇಕು.

ಈಗ ಪ್ರಸಿದ್ಧ ಕಾದಂಬರಿಗಳಲ್ಲಿ ಬೇರೆ ಹಲವನ್ನು ಕುರಿತು ವಿಹಂಗಮ ದೃಷ್ಟಿಯಿಂದ ನಿರೀಕ್ಷಿಸೋಣ. ಶ್ರೀನಿವಾಸರ 'ಸುಬ್ಬಣ್ಣ' ಇದು ಪ್ರತ್ಯಕ್ಷರೂಪದಲ್ಲಿ ನೀಳ್ಕತೆಯಾಗಿದ್ದರೂ ಅದರ ವಿಷಯದ ಹರಹು ಮತ್ತು ವ್ಯಕ್ತಿಚಿತ್ರಣದ ಸಾಕಲ್ಯದಿಂದ ಕಾದಂಬರಿಯ ಸತ್ತ್ವವುಳ್ಳುದಾಗಿದ್ದ ಕಾರಣ ಅದನ್ನಿಲ್ಲಿ ಉಲ್ಲೇಖಿಸಲು ಅಡ್ಡಿಯಿಲ್ಲ. ಶ್ರೀನಿವಾಸರ ಕತೆಗಾರಿಕೆ ಮತ್ತು ಬಾಳತಿಳಿವು ಅದರಲ್ಲಿ ಪರಿಪೂರ್ಣವಾಗಿ ಫಲಿಸಿವೆ.

ಕನ್ನಡ ಕಥಾಪ್ರಪಂಚಕ್ಕೆ ಅದೊಂದು ಚಿರಂತನ ಕೊಡುಗೆಯಾದ ಮಹಾಕೃತಿ. ಆನಂದಕಂದರ 'ಸುದರ್ಶನ' ಮನೋಹರ ಗ್ರಂಥಮಾಲೆಯಮೊದಲನೆಯ ಪುಷ್ಪ, ಅದರಲ್ಲಿ ಮೊದಲನೆಯ ಸ್ವತಂತ್ರ ಸಾಮಾಜಿಕ ಕಾದಂಬರಿ. 'ಇದರಲ್ಲಿ ಕಾದಂಬರಿಗಿಂತಲೂ ಸಣ್ಣಕತೆಯ ಲಕ್ಷಣಗಳೇ ವಿಶೇಷವಾಗಿ ಕಾಣುವುವು' ಎಂಬ ಅಭಿಪ್ರಾಯವೂ ಇದೆ. ಇದನ್ನು ನಿಡಿದಾದ ಸಣ್ಣಕತೆಯಲ್ಲಿ ಸೇರಿಸಿರುವುದುಂಟು. ನಮಗೆ ತೋರಿದ ಮಟ್ಟಿಗೆ ನೀಳ್ಕತೆಗಿಂತ ಉಪಕಾದಂಬರಿ ಎಂದಾದರೂ ಇದನ್ನು ಕರೆಯುವುದುಚಿತ. ಇದರಲ್ಲಿ 'ಒಂದು ಸಂಸಾರಕ್ಕೆ ಸೇರಿದ ನಾಲ್ಕು ಜನರ ಬಾಳಿನ ಕೆಲವು ದಿನಗಳ ತೆಳುಚಿತ್ರ'ವಿದೆ ಎಂಬುದು ಅರ್ಧಸತ್ಯ. ಹರಹು ಕಡಿಮೆಯಾಗಿದ್ದರೂ ಕೆಲವು ದಿನಗಳದಲ್ಲ, ಕನಿಷ್ಠ ನಾಲ್ಕು ತಿಂಗಳಿನ ಅವಧಿಯಲ್ಲಿ ನಾಲ್ಕು ಜನರಲ್ಲದೆ ಇನ್ನೂ ಕೆಲವು ವ್ಯಕ್ತಿಗಳ ಕತೆಯಿದೆ; ಸ್ವಭಾವನಿರೂಪಣೆಯಲ್ಲಿ ವಿಕಾಸ ಕಡಿಮೆಯೆನ್ನಬಹುದಾದರೂ ಉತ್ಕಟಸರಣಿ ಇದೆ, ಪರಿಸ್ಫುಟತೆ ಇದೆ. ಇದರ ವಸ್ತುಪಾತ್ರಗಳಲ್ಲಿ ವಾಸ್ತವದ ತಳದ ಮೇಲೆ ನಿಂತ ಆದರ್ಶವಿದೆ; ತುಸು ಪ್ರಮಾಣ ಮೀರಿದ ಆದರ್ಶೀಕರಣವೂ ಆಗಿದೆ. ಕಥಾನಕದ ಗತಿ ಚೆನ್ನಾಗಿದ್ದರೂ ಅದರ ಅಂತ್ಯಭಾಗ ಗಕ್ಕನೆ ನಿಂತ ಗಾಡಿಯಂತೆ ಭಾಸವಾಗುತ್ತದೆ; ಉಷಾ-ಸುದರ್ಶನರ ಮರುಬೆಟ್ಟಿ ಸಾಕಷ್ಟು ಕಳೆಗೊಂಡಿಲ್ಲ. ಈ ಕಾದಂಬರಿಯ ಗುಣವಿಶೇಷವೆಂದರೆ ಇದರ ಸಂಸ್ಕಾರ ಹೊಂದಿದ ಶೈಲಿ. ಕೃತಕತೆಯ ಅಂಶವಿದ್ದರೂ ಕಥನಸಂವಾದಗಳಲ್ಲಿ ದೇಸಿಪಡೆದ ನಯ ನವುರು ಆನಂದಕಂದರ ವೈಶಿಷ್ಟ್ಯವಾಗಿ ಮೆರೆದಿದೆ. 'ವಿಶ್ವಾಮಿತ್ರನ ಸೃಷ್ಟಿ' ಇದು ಹೆಸರಿಗನುಗುಣವಾಗಿ ವಿಲಕ್ಷಣಸೃಷ್ಟಿಯೆ ಆಗಿದೆ. ವಿಡಂಬನಾತ್ಮಕ ಕಾದಂಬರಿ ಎಂದು ಇದನ್ನು ಸ್ಥೂಲವಾಗಿ ಕರೆಯಬಹುದಾದರೂ ಕಾದಂಬರಿಯ ಅಂಶಗಳುಳ್ಳ ವಿಡಂಬನೆ ಎಂದರೆ ಹೆಚ್ಚು ಒಪ್ಪುವುದು. ಕಾದಂಬರಿಯ ಕಥನಾಂಶ, ಪಾತ್ರ ವಿಶ್ಲೇಷಣವಿದ್ದರೂ ವಿಕೃತಿಚಮತ್ಕೃತಿ ಪ್ರಧಾನವಾದ ವಿಡಂಬನೆ ಇದರ ಜೀವಾಳ. ತರತರದ ಹಾಸ್ಯ ಇದರ ಫಲ. ಇದು ಉಪನ್ಯಾಸಗಳ ಸಮುದಾಯವಲ್ಲ', ಒಂದು ಸಂನಿವೇಶದ ಮತ್ತು ಒಬ್ಬ ವ್ಯಕ್ತಿ ಕಂಡ ಜಗತ್ತಿನ ಹಿನ್ನೆಲೆಯಲ್ಲಿ ಇಡಿಯ ಸಮಾಜಕ್ಕೆ ಹಿಡಿದ ರಾವುಗನ್ನಡಿ. ಇದರಲ್ಲಿ ನಿಬಂಧಕಾರನ ವಿಷಯಾಂತರ, ತಾತ್ವಿಕನ ಚರ್ಚೆ, ಮೂರ್ತಿಭಂಜಕನ ದ್ವೇಷ, ಸಮಾಜಸುಧಾರಕನ ಆವೇಶ ಹೀಗೆ ಹಲವಾರು ರೀತಿಗಳು ಬೆರೆತಿವೆ. ಕೇವಲ ಕಾದಂಬರಿಯೆಂದು ಇದರ ಬೆಲೆ ಕಟ್ಟುವುದಕ್ಕಿಂತ ಮಿಶ್ರಸ್ವರೂಪದ ಕಾದಂಬರಿಯೆಂದು ಪರೀಕ್ಷಿಸಿದಾಗ ಇದೊಂದು ಕನ್ನಡಕ್ಕೆ ಹೊಸದಾದ ಉಜ್ವಲ ಪ್ರಯೋಗ ಎನ್ನಬೇಕಾಗುತ್ತದೆ. ನಾರಾಯಣನ ವ್ಯಕ್ತಿತ್ವದ ಅನೇಕ ರೂಪತೆ, ವರ್ಣನೆ ವಿಶ್ಲೇಷಣೆಗಳ ಅತಿಪ್ರಸಂಗ, ವಿಡಂಬಕ ಹಾಸ್ಯದ ಅತಿರೇಕ ಇವು ಈ ಕೃತಿಯ

ಸಾಹಿತ್ಯಗುಣವನ್ನು ಮುಸುಳಿಸಿರಬಹುದು. ಆದರೆ ಇದರಲ್ಲಿಯ ತೀವ್ರಸಮಾಜ ವಿಡಂಬನೆ, ಜನಸಾಮಾನ್ಯದರಿವು, ಚುಚ್ಚುನಗೆಯ ಸಾಮರ್ಥ್ಯ, ಕಲ್ಪಕತೆ ಇವನ್ನು ಮನವಾರೆ ಮೆಚ್ಚಬೇಕು.

ಗೋಕಾಕರ 'ಇಜ್ಜೋಡು' ಕಾದಂಬರಿಯಲ್ಲಿ ಪಾತ್ರಸೃಷ್ಟಿ ಮತ್ತು ವಾತಾವರಣ ಮುಖ್ಯವಾದುವೆಂದು ಅವರೇ ಹೇಳಿದ್ದಾರೆ. ಇಂಥ ಕೃತಿಯಲ್ಲಿ ವಸ್ತು ಶೈಥಿಲ್ಯವು ಅನಿವಾರ್ಯ ಮತ್ತು ಕ್ಷಮ್ಯ. ಆದರೂ ಇಜ್ಜೋಡಿನ ವೈಷಮ್ಯ ಬೀಜಗಳನ್ನು ಬಿತ್ತಿ ಬೆಳಸಿ ಕತೆಯ ಹಂದರಕ್ಕೆ ಹಬ್ಬಿಸಿರುವ ಕೌಶಲ್ಯ ಈ ಕಾದಂಬರಿಯಲ್ಲಿದೆ. ಕೇಶವ-ಪದ್ಮಾವತಿಯರ ಇಜ್ಜೋಡು ಎರಡೂ ಮನೆತನಗಳ ದಾಂಪತ್ಯ ವೈಷಮ್ಯದೊಡನೆ ಸೇರಿ ಇಂದಿನ ಕೌಟುಂಬಿಕ ಜೀವನದಲ್ಲಿ 'ವಿರಸಮರಣ'ವಾದ ಸಾರ್ವತ್ರಿಕ ದೃಶ್ಯವನ್ನು ಎತ್ತಿ ತೋರಿಸುತ್ತದೆ. ಗಂಭೀರ ಹಾಗೂ ಹಾಸ್ಯದ ಪಾತ್ರಗಳೆಲ್ಲ ಜೀವಕಳೆಯಿಂದ ಮಿನುಗುತ್ತವೆ. ಕೆಲವು ಸಂನಿವೇಶಗಳು ಚಿರಸ್ಮರಣೀಯವಾಗಿವೆ. ನರಹರಿ ಈ ಕಾದಂಬರಿಯ ಧ್ಯೇಯವಾದದ ಪ್ರತೀಕವಾಗಿದ್ದಾನೆ. 'ಇಜ್ಜೋಡಿ'ನ ಶೈಲಿಯಲ್ಲಿಯೂ ಇಜ್ಜೋಡು ತೋರಿದೆಯೆಂಬುದು ಅದರ ಯಶಸ್ಸಿಗೆ ಗುರುತು ಎಂದು ಹೇಳಿದರೆ ಸರಸ ಹಾಗೂ ಕೆಲಮಟ್ಟಿಗೆ ಸತ್ಯ. ವ್ಯಕ್ತಿಪ್ರಧಾನವಾಗಿದ್ದು ವಾಸ್ತವ ಆದರ್ಶಗಳನ್ನು ಸಮವಾಗಿ ಬೆರಸಿದ ಹೊಸ ಸಾಮಾಜಿಕ ಕಾದಂಬರಿಗಳಲ್ಲಿ 'ಇಜ್ಜೋಡು' ಮೇಲ್ತರಗತಿಯದೆಂಬಲ್ಲಿ ಸಂಶಯವಿಲ್ಲ. ಅದರ ಇನ್ನುಳಿದ ಭಾಗಗಳು ಪ್ರಕಟವಾದ ಮೇಲೆ ಒಟ್ಟುನೋಟಕ್ಕೆ ಅದು ಮಹಾ ಕಾದಂಬರಿಯಾಗಿ ತೋರಲಿ ಎಂದು ಆಶಿಸಬಹುದಾಗಿದೆ. ಇಜ್ಜೋಡಿನಂತೆ 'ಬಾಳುರಿ' 'ಕಾರಣಪುರುಷ'ಗಳಲ್ಲಿಯೂ ಉತ್ತರ ಕರ್ನಾಟಕದ ಸಾಮಾಜಿಕ ಜೀವನವು ಮೂಡಿದೆ, ವಿಷಮ ದಾಂಪತ್ಯವು ಚಿತ್ರಿತವಾಗಿದೆ. ಆದರೆ ಅವುಗಳ ಸ್ಥಾಯಿ ಮತ್ತು ಸರಣಿ ಬೇರೆ. ನಿರುದ್ಯೋಗದ ಪ್ರಶ್ನೆ 'ಬಾಳುರಿ'ಯಲ್ಲಿ ಮುಖ್ಯವಾದರೆ ಪ್ರಾಂತಜೀವನದ ಸಮಸ್ಯೆ 'ಕಾರಣಪುರುಷ'ದಲ್ಲಿ ಮುಖ್ಯವಾಗಿದೆ. ವಿಷಯ ವಸ್ತುಗಳ ಹೊಸತನ ಇವುಗಳಲ್ಲಿ ತೋರಿದೆಯಲ್ಲದೆ ಒಟ್ಟಿನಲ್ಲಿ ಚಿತ್ತವೇಧಕವಾದ ಬರೆವಣಿಗೆ ಎಂದು ಇವುಗಳ ಬಗ್ಗೆ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಎರಡರಲ್ಲಿಯೂ ಬಹುಶಃ ಹೆಚ್ಚು ಆತ್ಮಪ್ರಜ್ಞವಾದ ಕಲಾವಂತಿಕೆ ಮತ್ತು ಉದ್ದೇಶಾನುಗುಣವಾದ ಜೋಡಣೆ ದೋಷರೂಪವಾಗಿರುವವೆಂದು ತೋರಿದರೆ ತಪ್ಪಿಲ್ಲ.

ನಾ. ಕಸ್ತೂರಿಯವರ 'ಗಾಳಿಗೋಪುರ' ಹಾಗೂ 'ಚಕ್ರದೃಷ್ಟಿ' ಇವು ಹೊಸಗನ್ನಡಕ್ಕೆ ಹೊಸಮಾದರಿಯ ಮುಡಿಪಾಗಿವೆ. ಎರಡರಲ್ಲಿಯೂ ವಿಡಂಬಕ ಹಾಸ್ಯ ಪ್ರಧಾನವಾಗಿದೆ. ಅದರಲ್ಲಿ 'ಗಾಳಿಗೋಪುರ' ಸ್ವಾಭಾವಿಕ ವೈಪರೀತ್ಯಗಳ

ವಿಕೃತಿಯಿಂದ ವ್ಯಕ್ತಿಸಮಾಜಗಳ ವಿಡಂಬನೆಮಾಡಿದ ಒಳ್ಳೆಯ ಕಾದಂಬರಿ. ಕೆಲವು ಸಲ ವಿಡಂಬನೆಗೋಸ್ಕರ ಹಾಸ್ಯಜನಕ ಸಂನಿವೇಶಗಳೂ ವರ್ಣನೆಗಳೂ ಬಂದು ಮುಖ್ಯಕಥೆಯನ್ನು ಮರಸುವಷ್ಟು ಉದ್ದಾಗುತ್ತವೆ. ಆದರೂ ಸಮಾಜದ ವಿಧವಿಧದ ಚಿತ್ರ ಮತ್ತು ವ್ಯಕ್ತಿ ಇವನ್ನು ಕತೆಯಲ್ಲಿ ಹಾಸುಹೊಕ್ಕಾಗಿ ಸೇರಿಸಿದ್ದು ಶ್ರೇಯಸ್ಕರ ವಾಗಿದೆ. ಕತ್ತೆಯಂತೆ ಕಿರಿಚಿದ ಹನುಮಂತರಾಯನ ಕತೆ ತೋರಲಿಕ್ಕೆ ಅಸ್ವಾಭಾವಿಕ ವಾದರೂ ಇಲ್ಲಿಯ ವಿಡಂಬನ ಪದ್ಧತಿಗೆ ಅನುಸರಿಸಿಯೆ ಇದೆ. ನಗೆ-ತನ್ನೆಲ್ಲ ಬಗೆಯಲ್ಲಿ ಅಚ್ಚಹೊಸದಾಗಿ ಇಲ್ಲಿ ಅವತರಿಸಿದೆ. 'ಚಕ್ರದೃಷ್ಟಿ' ಇನ್ನೂ ನವೀನವಾದ ತಂತ್ರವುಳ್ಳ ಮೇಲಾದ ಕೃತಿ. ಅದರಲ್ಲಿಯ 'ಗುಂಡಾಯಣ' ಹೊಸಕಾಲದ ಮರಿರಾಮಾಯಣ ವಾಗಿದೆ. ರಾಮಾಯಣಕ್ಕಿಂತ ಬೇರೆ ಕಲಾರೂಪವುಳ್ಳುದಾಗಿದೆ. ಏಕಾದಶ ದೃಷ್ಟಿ ಗಳಿಂದ ಒಂದು ಕೇಂದ್ರವ್ಯಕ್ತಿಯ ಮೇಲೆ ಬೀರಿದ ಚಕ್ರದೃಷ್ಟಿಯ ಫಲವಾಗಿ ಆ ವ್ಯಕ್ತಿಯ ಸಾಧ್ಯವಿದ್ದಷ್ಟು ಸಮಗ್ರವಾದ ಜೀವನಕಥೆ—ಸ್ವಭಾವ ಪೋಷಣೆಗಳು ಇಲ್ಲಿ ದೊರೆಯುತ್ತವೆ. ಆ ದೃಷ್ಟಿಬೀರಿದ ಮತ್ತು ಇತರ ವ್ಯಕ್ತಿಗಳ ಸ್ವಭಾವವೂ ಪ್ರಕಟವಾಗಿದೆ. 'ವ್ಯಕ್ತಿಪರೀಕ್ಷೆ' ಎಂದು ಇದನ್ನು ಕರೆದಿದೆ. ಗುಂಡಪ್ಪನ ಚರಿತ್ರೆ ಕ್ರಮವಾಗಿ ಇದರಲ್ಲಿ ಅರಳಿದ ಮೂಲಕ ಇದಕ್ಕೆ ಕಾದಂಬರಿಯೆಂದು ಎನ್ನಲೂ ಬಹುದು. ಆದರೆ ಈ ಅರಳಿಕೆ ಕಾಲಕ್ರಮ ಇಲ್ಲವೆ ವಸ್ತುಕ್ರಮದಿಂದಲ್ಲ, ಅಲ್ಲಲ್ಲಿಯ ವ್ಯಕ್ತಿ ಸಂದರ್ಶನಗಳಲ್ಲಿ ಸೂರೆಯಾದ ಸಂಗತಿಗಳನ್ನು ವಾಚಕರು ಜೋಡಿಸಿಕೊಳ್ಳು ವುದರಿಂದ. ಸನ್ನಿವೇಶವು ಸ್ವಭಾವ ನಿರೂಪಣೆ, ಸಮಾಜ ವಿಮರ್ಶೆ, ಪದರಚನೆ, ಸುಭಾಷಿತ ಈ ಎಲ್ಲ ದಾರಿಗಳಲ್ಲಿ ಸಹಜ ಚಮತ್ಕೃತಿಯು ಹಾಸ್ಯಪ್ರತಿಭೆ ಬಹು ಚೆನ್ನಾಗಿ ಫಲಿಸಿದೆ. ಇಂಥ ಕೃತಿಯ ಸಾಫಲ್ಯ 'ಗುಂಡಾಯಣ'ದಲ್ಲಿ ಅಲ್ಲದೆ, 'ಬಾಳಾಯಣ'ದಲ್ಲಿ ಸಹ, ಅಂದರೆ ಹತ್ತೂ ನಿಟ್ಟಿನಿಂದ ಕಣ್ಣು ಮುಂದಿನ ವಿವಿಧ ಜೀವನದ ದರ್ಶನ ಮತ್ತು ವಿಮರ್ಶೆಗಳನ್ನು ಒದಗಿಸಿ ಹಾಸ್ಯದ ಲೇಪದಲ್ಲಿ ಅದನ್ನು ಉರುಳಿಸಿ ಕೊಡುವುದರಲ್ಲಿದೆ. ಕಸ್ತೂರಿಯವರ ಸಿದ್ಧಹಸ್ತದ ಫಲ ಇದು, ಹೊಸ ಗನ್ನಡದ ಮೇಲ್ತರಗತಿಯ ಕೃತಿಗಳಲ್ಲಿ ಒಂದು.

. . . ಇನ್ನೂ ಎಷ್ಟೋ ಕಾದಂಬರಿಗಳನ್ನು ಹೀಗೆ ನಿರೀಕ್ಷಿಸಬಹುದಾಗಿತ್ತು, ಎಡೆಯಿಲ್ಲದೆ ಬಿಡಬೇಕಾಗಿದೆ. ಈ ಇಪ್ಪತ್ತೈದು ವರ್ಷಗಳ ಕಾಲಾವಧಿಯಲ್ಲಿ ಒಂದೊಂದೆ ಸಾಮಾಜಿಕ ಕಾದಂಬರಿಯನ್ನು ಬರೆದು ಗವಿ ಸೇರಿದ ಕೆಲವು ಲೇಖಕ ರಿದ್ದಾರೆ. ಅವರು ಮತ್ತೆ ತಮ್ಮ ಲೆಕ್ಕಣಿಕೆಯನ್ನೆತ್ತಬೇಕು. ಉದಾಹರಣೆಗೆ, ಕ. ಶಂಕರಭಟ್ಟರು ಸೊಗಸಾದ 'ಧೂಮಕೇತು'ವೊಂದನ್ನೆ ರಚಿಸಿದ್ದಾರೆ, ಚಿರಾಯುವಾದ ನಕ್ಷತ್ರಮಾಲೆಗಳನ್ನು ನಿಲ್ಲಿಸಬೇಕು. 'ಧರ್ಮಸೆರೆ'ಯನ್ನು ಬರೆದ ಜಡಭರತರು ತಮ್ಮ

ಜಾಡ್ಯದ ಸೆರೆಯಿಂದ ಬೇಗ ಹೊರಬೀಳಬೇಕು. 'ಮಹಾಪೂರ'ವನ್ನು ಬರೆದ ಶೇಷಗಿರಿರಾಯರು ಮುಂದಿನ ಮಹಾಪೂರಗಳನ್ನು ಹರಿಯಿಸಬೇಕು, 'ಆದರ್ಶ'ದ ವಾಸುದೇವ ಬುರ್ಲಿಯವರು ತಮ್ಮ ಆದರ್ಶದ ಬೆನ್ನು ಹತ್ತಬೇಕು, 'ದೀಪದ ಕೆಳಗೆ' ಕತ್ತಲೆಯನ್ನು ಕಂಡ ಕು. ಶ್ರೀನಿವಾಸರು ಸುತ್ತೆಲ್ಲ ಬೆಳಕನ್ನು ಚಿಮ್ಮಿಸಬೇಕು, 'ಭಾಗ್ಯಲಕ್ಷ್ಮಿ'ಯ ಎಂ. ವಿ. ಸೀತಾರಾಮಯ್ಯನವರು ಕನ್ನಡದ ಭಾಗ್ಯಲಕ್ಷ್ಮಿಯನ್ನು ಹೊಸ ತೊಡವುಗಳಿಂದ ಅಲಂಕರಿಸಬೇಕು. ಕಳೆದ ವರ್ಷ ಬೆಳಕಿಗೆ ಬಂದ ಹೊಸ ಕಾದಂಬರಿಕಾರರೆಂದರೆ 'ಮನೆಗೆ ಬಂದ ಮಹಾಲಕ್ಷ್ಮಿ'ಯ ತ. ರಾ. ಸುಬ್ಬರಾಯರು. 'ಸಾವಿನ ಉಡಿಯಲ್ಲಿ'ಯ ಎನ್. ಕೆ. ಕುಲಕರ್ಣಿಯವರು. 'ಮಲಮಗಳು' ಬರೆದ ರಾ. ವೆಂ. ಶ್ರೀನಿವಾಸರು. ಇವರೆಲ್ಲರೂ ತಮ್ಮ ಕಥನಕಲೆಯಿಂದ ಹೊಸ ನಿರೀಕ್ಷೆಯನ್ನು ಹುಟ್ಟಿಸಿದ್ದಾರೆ. 'ಮನೆಗೆ ಬಂದ ಮಹಾಲಕ್ಷ್ಮಿ'ಯಲ್ಲಿಯ ಮನೋವೈಜ್ಞಾನಿಕ ನಿರೂಪಣೆ ತುಂಬ ಹೃದ್ಯವಾಗಿದೆ, ಪ್ರಭಾವಿಯಾಗಿದೆ. ಇವರೂ ಉಲ್ಲೇಖಹೊಂದದ ಇತರರೂ ಹೊಸ ಬರೆಹಗಾರರೂ ಕಾದಂಬರೀಕ್ಷೇತ್ರದಲ್ಲಿ ನುಗ್ಗಿ ಕನ್ನಡದ ಸಂಪತ್ತಿಯನ್ನು ಹೆಚ್ಚಿಸುವರೆಂದು ಹಾರೈಕೆ.

ಅನುವಾದಿತ ಕಾದಂಬರಿಗಳು ಎಂದಿನಿಂದಲೂ ಕನ್ನಡದಲ್ಲಿ ಹೇರಳವಾಗಿವೆ. ಈ ಯುಗದಲ್ಲಿಯೂ ಅವುಗಳ ಕೊರತೆಯಿಲ್ಲ. ಬಾಲ ಸರಸ್ವತಿ, ಭೀ. ಪ. ಕಾಳೆ ಮುಂತಾದ ಅನುವಾದಕರು ಬಂಗಾಲಿ ಮರಾಠಿ ಕಾದಂಬರಿಗಳನ್ನು ಕನ್ನಡಿಸಿದ್ದಾರೆ. ಆದರೆ ಹೊಸ ದೃಷ್ಟಿಯಿಂದ ಒಳ್ಳೆಯ ಕೃತಿಗಳನ್ನು ಇಂಗ್ಲಿಷ್ ಮುಂತಾದ ಬೇರೆ ಭಾಷೆಗಳಿಂದ ಕನ್ನಡಕ್ಕೆ ನೀಡಿದ ಮತ್ತು ನೀಡುತ್ತಿರುವ ಅನುವಾದಕರೆಂದರೆ ಆರ್. ವ್ಯಾಸರಾವ, ಗುರುನಾಥ ಜೋಶಿ, ಗೋವಿಂದ ಚುಳ್ಕಿ, ಗು. ಭೀ. ಜೋಶಿ, ನಾಗರಾಜ, ನಾರಾಯಣಶರ್ಮ, ಮಲ್ಲಾರಿ ಮುಂತಾದವರು. ನಾರಾಯಣ ಸಂಗಮರ 'ಅಕ್ಕತಂಗಿ'ಯಂಥ ಪುಸ್ತಕಗಳಲ್ಲಿ ಮೂಲವನ್ನು ಆದರಿಸಿ ಬರೆದ ಅನುವಾದಕೃತಿಗಳಿವೆ. ಪ್ರಸಿದ್ಧವಾದ ವಿದೇಶೀಯ ಕಾದಂಬರಿಗಳಲ್ಲಿ ಕೆಲವು ಕನ್ನಡಕ್ಕೆ ದೊರೆತಿವೆ. ಆದರೆ ಹೆಚ್ಚಾಗಿ ಬಂಗಾಲಿ ಮರಾಠಿ ಕಾದಂಬರಿಗಳ, ಅದರಲ್ಲಿಯೂ ಶರಚ್ಚಂದ್ರ ಕೃತಿಗಳ, ಅನುವಾದವು ಈವರೆಗೆ ಆಗಿದೆ, ಇನ್ನೂ ಆಗಬೇಕಾದ್ದು ಅಪಾರವಾಗಿದೆ ಎಂದರೂ ಅಡ್ಡಿಯಿಲ್ಲ. ಭಾಷಾಂತರ ಗ್ರಂಥಗಳು ಯಾವೊಂದು ಭಾಷೆಯ ಪ್ರಾಥಮಿಕಾವಸ್ಥೆಯಲ್ಲಿ ಮಾತ್ರವಲ್ಲ, ಪ್ರೌಢಾವಸ್ಥೆಯಲ್ಲಿ ಹೆಚ್ಚಾಗಿ ಬೇಕು. ಇತರ ಭಾಷೆಗಳಲ್ಲಿಯ ಉತ್ತಮ ಕೃತಿಗಳೆಲ್ಲ ಕನ್ನಡದ ನುಡಿ ಬೊಕ್ಕಸವನ್ನು ಸೇರಬೇಕು. ರೋಮೆನ್ ರೋಲ್ಲಾ, ಹಾರ್ಡಿ, ಗಾಲ್ಸವರ್ದಿ, ಬಾಲ್ಸಾಕ್, ಟಾಲಸ್ಟಾಯ್, ಡೊಸ್ಟೊವಸ್ಕಿ ಮುಂತಾದ ಮಹಾ ಲೇಖಕರ ಗ್ರಂಥಗಳನ್ನು ಕನ್ನಡಿಸಬೇಕಾಗಿದೆ. ಈಗ ಆಗಿರುವ

ಮೂರು ನಾಲ್ಕು ತೀರ ಕಡಿಮೆ. ಭಾರತದ ಸುಪ್ರಸಿದ್ಧ ಪ್ರತಿಭಾಶಾಲಿಗಳಾದ ರವೀಂದ್ರನಾಥರ ಕಾದಂಬರಿಗಳನ್ನೂ ಇತರ ಕೃತಿಗಳನ್ನೂ ಪರಿವರ್ತಿಸಬೇಕಾಗಿದೆ. ಭಾರತದ ಇತರ ಭಾಷೆಗಳಲ್ಲಿಯ ಕೃತಿಗಳನ್ನು ಕನ್ನಡಕ್ಕೆ ತರಬೇಕಾಗಿದೆ. ಇದಕ್ಕಾಗಿ ಸುಸಂಘಟಿತ ಪ್ರಯತ್ನಗಳಾಗಬೇಕು, ಭಾಷಾಂತಮಾಲೆಗಳು ಜನ್ಮ ತಾಳಬೇಕು. ಸ್ಥಲಾಭಾವದಿಂದ ಈ ಕಾಲದ ಅನುವಾದ ಗ್ರಂಥಗಳ ಪರಿಚಯುವನ್ನೂ ವಿಮರ್ಶೆಯನ್ನೂ ಇಲ್ಲಿ ಮಾಡಿಲ್ಲ. ಹಿಂದೆ ತಿಳಿಸಿದಂತೆ ಐತಿಹಾಸಿಕ ಕಾದಂಬರಿಗಳು ಈ ಕಾಲದಲ್ಲಿ ಸುಮಾರು ೧೫ ಮಾತ್ರ. ಇವುಗಳನ್ನು ರಚಿಸಿದವರಲ್ಲಿ ಗಳಗನಾಥರು, ದೇವುಡು ಮತ್ತು ಆನಂದಕಂದರು ಅಗ್ರಗಣ್ಯರು. ದೇವಡು ಅವರ 'ಮಯೂರ' ಕಾದಂಬರಿ ಅಪರಿಹಾರ್ಯವಾಗಿ ಹೆಚ್ಚು ಕಾಲ್ಪನಿಕವಾಗಿದ್ದರೂ ಅದ್ಭುತರಮ್ಯವಾಗಿದೆ. ಆನಂದಕಂದರ 'ರಾಜಯೋಗಿ' ಮತ್ತು 'ಅಶಾಂತಿಪರ್ವ' ಇವು ವಿಜಯನಗರ ಕಾಲದ ರಾಜಕೀಯ ಸಾಮಾಜಿಕ ಜೀವನವನ್ನು ಒಪ್ಪುವ ಬೆಡಗಿನ ಶೈಲಿಯಲ್ಲಿ ಚಿತ್ರಿಸಿರುತ್ತವೆ. 'ಅಶಾಂತಿಪರ್ವ' ಇದು ಇಂದಿನ ಐತಿಹಾಸಿಕ ಕಾದಂಬರಿಗಳಲ್ಲಿ ಮೇಲಾದ ಸ್ಥಾನಕ್ಕೆ ಅರ್ಹವಾಗಿದೆ. ಇತ್ತೀಚೆಗೆ ಪಾಂ. ಭೀ. ದೇಸಾಯಿ ಇವರು 'ಕುಂತಲೇಶ್ವರ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಇವರೆಲ್ಲರಲ್ಲಿ ಐತಿಹಾಸಿಕ ಕಾದಂಬರೀ ಲೇಖನಕ್ಕೆ ಅವಶ್ಯಗುಣಗಳಿರುತ್ತವೆ. ಇವರು ಇತರರೂ ಈ ಕಡೆಗೆ ಗಮನಕೊಟ್ಟು ಬರಲಿರುವ ಕಾಲದಲ್ಲಿ ಐತಿಹಾಸಿಕ ಕಾದಂಬರಿಗಳ ಉಜ್ವಲಪರಂಪರೆಯೊಂದನ್ನು ಉಂಟುಮಾಡುವರೆಂದು ನಂಬುತ್ತೇವೆ.

ಈ ವರೆಗಿನ ವಿವೇಚನೆಯಿಂದ ಹೊಸಗನ್ನಡ ಕಾದಂಬರಿಯ ಒಳಹೊರಗುಗಳ ದಿಗ್ದರ್ಶನವಾಯಿತು. ಅದು ಸಾಧಿಸಿದ್ದೇನು ಎಂದು ಕೇಳಿದರೆ, ಸ್ವತಂತ್ರ ಸಾಮಾಜಿಕ ಕಾದಂಬರಿಯ ಹುಟ್ಟುಬೆಳೆವಣಿಗೆ, ವಿಷಯ-ರೂಪ-ಶೈಲಿಗಳ ವೈವಿಧ್ಯ, ಹೆಚ್ಚಾಗಿ ಮಧ್ಯಮವರ್ಗದ ಸಮಾಜಚಿತ್ರ, ವಿಡಂಬನೆ, ವಿಚಾರಪ್ರಚೋದನೆ ಎಂದು ಮುಂತಾಗಿ ಅಡಕವಾಗಿ ಹೇಳಬಹುದು. ಒಂದೆರಡು ಮಹಾ ಕಾದಂಬರಿಗಳು ಕಣ್ದೆರೆದಿವೆ, ಹತ್ತಾರು ಕಲಾಮಯವಾದ ಒಳ್ಳೆಯ ಕೃತಿಗಳು ಹುಟ್ಟಿವೆ, ಅವುಗಳಲ್ಲಿ ಹಲಕೆಲವು ಹಿರಿಮೆಗೆ ಕೈಚಾಚಿವೆ. ಹೊಸ ಕಲಾತಂತ್ರ, ಹೊಸ ಮನೋಧರ್ಮ ಕೆಲಮಟ್ಟಿಗಾದರೂ ಹೊಸ ಕಾದಂಬರಿಯಲ್ಲಿ ಮೂಡಿದೆ. ಅನುವಾದ ಕಾದಂಬರಿಯೂ ಹೊಸ ದಾರಿಯನ್ನು ತುಳಿಯುತ್ತಲಿದೆ. ಆದರೂ ಸಾಧಿಸಿದ್ದರಲ್ಲಿಯ ಕೊರತೆ, ಸಾಧಿಸದೆ ಇದ್ದುದರ ಕೊರಗು ಹೇಗೆ ಕಣ್ಮರೆಯಾದೀತು? ಇಪ್ಪತ್ತೈದು ವರ್ಷಗಳ ಕಾಲದಲ್ಲಿ ನಮ್ಮ ಪ್ರಾಂತ, ರಾಷ್ಟ್ರ ಮತ್ತು ಜಗತ್ತಿನ ಚರಿತ್ರೆಯಲ್ಲಿ ನೂರಾರು ವರ್ಷಗಳ ರಾಜಕೀಯ ಸಾಮಾಜಿಕ ಘಟನೆಗಳಾಗಿವೆ. ಪ್ರತಿನಿತ್ಯದ ಜೀವನವು ಕಾಣುವ

ಕಣ್ಣಿಗೆ ಒಂದು ಪವಾಡವಾಗಿದೆ. ನಮ್ಮ ಕಾದಂಬರಿ ಈ ಪವಾಡದ ಪ್ರತಿಬಿಂಬವಾಗಿ ಸಾಕಷ್ಟು ಸಂಪನ್ನವಾಗಿಲ್ಲ, ವಿವಿಧವಾಗಿಲ್ಲ. ಸಂಖ್ಯೆಯಲ್ಲಿ ಅದು ದರಿದ್ರ, ಗಾತ್ರದಲ್ಲಿ ಇನ್ನೂ ದರಿದ್ರ. ಬಾಳಿನ ಎಲ್ಲ ಮಟ್ಟಗಳನ್ನೂ ನೋವುನಲಿವುಗಳನ್ನೂ ಅದು ಚಿತ್ರಿಸುವುದಕ್ಕೆ ಸಮರ್ಥವಾಗಿಲ್ಲ. ಅದಕ್ಕೆ ಪೂರ್ವಭಾವಿಯಾದ ವಾಙ್ಮಯತಪವನ್ನು ನಾವು ಕೈಕೊಂಡಿಲ್ಲ. ಅಕ್ಕರಿಗರಲ್ಲಿ ಓದಿನ ಅಭಿರುಚಿಯನ್ನು ಹೊಸ ಕಾದಂಬರಿ ಉಂಟುಮಾಡಿದೆಯಾದರೂ ಅವರ ಮೈಮನವನ್ನು ಅಲ್ಲಾಡಿಸಿ ಚೈತನ್ಯವನ್ನು ಅದ್ಭುತ ವಾಗಿ ಪ್ರೇರಿಸಿಲ್ಲ. ಕಾದಂಬರೀ ಕಲೆಯಲ್ಲಿ ಅಪರಿಹಾರ್ಯವಾದ ವಸ್ತು-ಪಾತ್ರಗಳ ಮೇಳದ ನಡೆ ಕಡಿಮೆಯಾಗಿದೆ. ಸಮತೂಕಕ್ಕಿಂತ ಅತಿರೇಕ ಹೆಚ್ಚು. ಜೀವನಕ್ಕಿಂತ ತತ್ವ, ವಿಚಾರ, ಪೂರ್ವಗ್ರಹಗಳಿಗೆ ಹೆಚ್ಚಿನ ಸ್ಥಾನ ದೊರೆತು ಕಲೆ ಹದಗೆಟ್ಟಿದೆ; ವ್ಯಕ್ತಿಗಳು ವಿಚಾರಪ್ರಣಾಲಿಯ ಕೈಗೊಂಬೆಗಳಾಗಿವೆ. ಒಬ್ಬ ವಿಮರ್ಶಕರು ಹೇಳಿ ದಂತೆ, ನಮ್ಮ ಮಹಾ ಕಾದಂಬರಿಗಳಲ್ಲಿ ಸಹ ಅನೇಕ ಮುಖತೆಯಷ್ಟೆ ಅಂತರ್ಮುಖತೆ ಸಫಲವಾಗಿಲ್ಲ. ಒಟ್ಟಿನಲ್ಲಿ ನೋಡಿದರೆ ಅನೇಕ ಮುಖತೆಯೇನು, ಅಂತರ್ಮುಖತೆ ಯೇನು ನಮ್ಮ ಕಾದಂಬರಿಗಳಲ್ಲಿ ಇನ್ನೂ ಮೇಲಾಗಿ ತಲೆದೋರಬೇಕು.

.... ಇನ್ನು ಮುಂದಿನ ಕಾದಂಬರಿಯ ಗುರಿಯೇನು, ಬಗೆಯೇನು? ಈ ಕೊನೆಯ ವಿಷಯವನ್ನು ಎತ್ತಿದೊಡನೆ ಇತ್ತೀಚೆ ತಲೆಯೆತ್ತಿದ ಪ್ರಗತಿಶೀಲಪಂಥದ ಪ್ರಸ್ತಾಪ ಅನಿವಾರ್ಯವಾಗುತ್ತದೆ. ಈ ವರೆಗಿನ ಕನ್ನಡ ಸಾಹಿತ್ಯ—ಅದರಲ್ಲಿ ಕಾದಂಬರಿ ಸಹ—ಈ ಪಂಥಕ್ಕೆ ತೀವ್ರ ಅತೃಪ್ತಿಯನ್ನುಂಟುಮಾಡಿದೆ. ಕೆಲವು ಅಪವಾದಗಳನ್ನು ಬಿಟ್ಟರೆ ಉಳಿದದ್ದೆಲ್ಲ 'ಸತ್ತ ಸಾಹಿತ್ಯ' ಎಂದು ಸಾರಲಾಗಿದೆ. ಯಾಕಂದರೆ ಅದರಲ್ಲಿ ಜನತೆಯ ಜೀವನವಿಲ್ಲ, ಮಧ್ಯಮವರ್ಗದ ಶ್ರೀಮಂತರ ಜೀವನ ವಿದೆ. ಆದುದರಿಂದ ಇನ್ನು ಮುಂದಿನ ಸಾಹಿತ್ಯ ಬಾಯಿಲ್ಲದ ಬಡಜನತೆಯ ವಾಣಿ ಯಾಗಬೇಕು, ಅಂದರೆ ಅದು ಜೀವಂತ ಸಾಹಿತ್ಯ. ಕಾದಂಬರಿಯ ಬಗ್ಗೆಯೂ ಈ ಬಗೆಯ ಆಶೆ ಆಕಾಂಕ್ಷೆಗಳು, ಮೂಲ್ಯಗಳು ಅಭಿವ್ಯಕ್ತವಾಗಿವೆ. ವಿಸ್ತಾರವಾದ ಚರ್ಚೆ ಇಲ್ಲಿ ಅಪ್ರಸ್ತುತ. ಆದರೆ ಕೆಲವು ಮುಖ್ಯಾಂಶಗಳನ್ನು ಹೇಳದೆ ಗತಿಯಿಲ್ಲ. ನಮ್ಮ ಸಾಹಿತ್ಯಜನತೆಯ ವಾಣಿಯಾಗಬೇಕು ಎಂಬುದು ನಿರ್ವಿವಾದ. ಇದು ಎಷ್ಟು ಮಟ್ಟಿಗೆ ಹೊಸ ಮಾತು ಎಂಬುದನ್ನು ಬಿಟ್ಟುಬಿಡೋಣ. ಆದರೆ ಜನತೆಯಲ್ಲಿ ಎಲ್ಲ ವರ್ಗದವರೂ ಬರುತ್ತಾರೆ. ಬಹುಸಂಖ್ಯಾತರಾದ ಶ್ರಮಜೀವಿಗಳ ನಿಕೃಷ್ಟ ಜೀವನ ವನ್ನು ಚಿತ್ರಿಸಿ ಅವರ ಉದ್ಧಾರಕ್ಕೆ ಸಮಾಜವನ್ನು ಪ್ರೇರಿಸಬೇಕೆಂದು ಹೇಳುವುದ ನ್ನೊಪ್ಪಿದರೂ ಅವರಿವರು ಬೇಡ, ಅಂಥಿಂಥ ಸಾಹಿತ್ಯ ಬೇಡ ಎಂಬ ವಿಧಿನಿಷೇಧದ ಅರ್ಥವೇನು? ಸಾಹಿತ್ಯದಲ್ಲಿ ಸರ್ವಾಧಿಕಾರಿತ್ವವೇಕೆ? ಇದು ಪ್ರಗತಿಶೀಲತೆಯ

ಲಕ್ಷಣವೇ? ಪ್ರಗತಿಶೀಲ ಸಮಾಜದಲ್ಲಿ ಪ್ರಾಮಾಣಿಕ ಸಾಹಿತಿಗೆ ಸಮಂಜಸ ಸ್ವಾತಂತ್ರ್ಯ ಬೇಡವೇ? ಒಹಳೆಂದರೆ, ಇದು ಹೆಚ್ಚಾಗಿ ಜನಸಾಮಾನ್ಯದ ಚಿತ್ರ ಕೊಡಬೇಕು, ಅವರ ಬೇಕುಬೇಡಗಳನ್ನರುಹಬೇಕು ಎಂಬುದನ್ನು ಒಪ್ಪಬಹುದು. ಆದರೆ ವಿಷಯ ಯಾವುದೇ ಇರಲಿ ಸಾಹಿತ್ಯದ ಒರೆಗೆ ಮಾತ್ರ ಹತ್ತಬೇಕು, ಜೀವನದ ಅರಿವು ನೆರವಾಗಬೇಕು, ಪೂರ್ವಗ್ರಹರಹಿತವಾಗಬೇಕು. ಇಲ್ಲಿಯೇ ಮುಂದಿನ ಕಾದಂಬರಿಯ ಗುರಿಯಿದೆ. ನಾಗಚಂದ್ರ ಸುಮಾರು ಸಾವಿರ ವರ್ಷದ ಹಿಂದೆ ವಿದ್ಯಾನಟಿಯನ್ನು 'ಜನತಾಂತರ್ದೃಷ್ಟಿ' ಎಂದು ವರ್ಣಿಸಿದನು. ಇಂದಿಗೂ ಅದು ಸಾಹಿತ್ಯದ ಜೀವಾಳ. ನಮ್ಮ ಕಾದಂಬರಿ ನಮ್ಮ ಜನತೆಯ ಅಂತರ್ದೃಷ್ಟಿ, ಒಳನೋಟವಾಗಲಿ. ಜೀವನಭರದಲ್ಲಿ, ರಾಗದ್ವೇಷದಲ್ಲಿ ಕಾಣದ ಸತ್ಯವನ್ನು, ಧರ್ಮವನ್ನು ಈ ಒಳನೋಟ ತಿಳಿಸಲಿ, ಕಲಾಪೂರ್ಣವಾಗಿ ರಸಸ್ಯಂದಿಯಾಗಿ ತಿಳಿಸಲಿ. ನಮ್ಮ ರಸಯೋಗವು ಪ್ರೀತಿಯೋಗವನ್ನು ಬೆಳಸಲಿ. ನಮ್ಮ ಕಾದಂಬರಿಕಾರರು ದೇಶಕಾಲಪರಿಮಿತವಾದ ಮತ್ತು ಕಾಲಾತೀತವಾದ ಜೀವನದ ವಿರಾಟ್‌ಸ್ವರೂಪದ ದರ್ಶನವನ್ನು ಪಡೆಯಲಿ, ಅದರ ಆಳ ಅಗಲಗಳನ್ನು ತಮ್ಮ ಬಾಳಿನಲ್ಲಿ ಕಂಡು ಕೃತಿಗಳಲ್ಲಿ ಕಾಣಿಸಲಿ. ಆಗ ಕನ್ನಡದಲ್ಲಿ ಮಹಾ ಕಾದಂಬರಿಗಳ ಸುಗ್ಗಿ ಬಂದೀತು. ಅಲ್ಲದೆ, ಬೇರೆಬೇರೆ ವರ್ಗಗಳ ಮತ್ತು ಮಟ್ಟಗಳ ಜನಜೀವನವನ್ನು ಉದ್ದೇಶಪೂರ್ವಕವಾಗಿ ವ್ಯಾಸಂಗಮಾಡಿ, ಸ್ವಾನುಭವವನ್ನು ರಸಾನುಭವವಾಗಿಸಿ ಚಿತ್ರಿಸಿದಲ್ಲಿ, ಸಮಾಜದಲ್ಲಿ ಸದ್ಯಸ್ಸ್ಥಿತಿಯ ಬಗ್ಗೆ ಕಲಮಲವೆದ್ದು ಕ್ರಾಂತಿಯ, ಸುಧಾರಣೆಯ ಪ್ರೇರಣೆ ಮೂಡೀತು. ಮುಂದಿನ ಕನ್ನಡ ಕಾದಂಬರಿ ಜೀವನದ ವಿಸ್ತಾರ-ವೈವಿಧ್ಯಗಳ ಗಾಂಭೀರ್ಯ-ಗಹನತೆಗಳ ರನ್ನಗನ್ನಡಿಯಾಗಲಿ ಎಂದು ಹಾರೈಸದಿರುವವರಾರು?

ರಂ. ಶ್ರೀ. ಮುಗಳಿ.

೪. ಹೊಸಕನ್ನಡ ಸಣ್ಣಕತೆಗಳು

ಸಣ್ಣಕತೆಯೆಂಬ ಸಾಹಿತ್ಯ ವಿಶೇಷ ಕನ್ನಡಕ್ಕೆ ಹೊಸದು. ಈ ಸಾಹಿತ್ಯ ಕನ್ನಡಕ್ಕೆ ಮಾತ್ರವೇ ಹೊಸದೆಂದಲ್ಲ. ಇದರ ಉಗಮಸ್ಥಾನವಾದ ಅಮೇರಿಕ ದೇಶದಲ್ಲಿ ಸಹ ಈ ಸಾಹಿತ್ಯ ಪ್ರಚಾರಕ್ಕೆ ಬಂದು ಸುಮಾರು ೮೦-೯೦ ವರುಷಗಳಿಗಿಂತ ಹೆಚ್ಚಾಗಿಲ್ಲ. ಕತೆ ಹೇಳುವುದು ಹಿಂದೆ ನಮ್ಮಲ್ಲಿಯಾಗಲಿ ಪಾಶ್ಚಾತ್ಯ ದೇಶಗಳಲ್ಲಿಯಾಗಲಿ ಪ್ರಚಾರ ದಲ್ಲಿರಲಿಲ್ಲವೆಂದಲ್ಲ. ಆದರೆ ಯಾವುದನ್ನು ನಾವು ಇಂದು ಕಲೆಯ ಮುದ್ರೆಯನ್ನೊಳ ಗೊಂಡ ಸಣ್ಣಕತೆ (Short Story) ಎನ್ನುತ್ತೇವೆಯೋ ಅದು ಸಣ್ಣ ಕತೆಯ ರೂಪದಲ್ಲಿ ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ದೊರೆಯುತ್ತಿಲ್ಲ. ಸಣ್ಣ ಕತೆಗೆ ಕೆಲವು ಲಕ್ಷಣಗಳಿರ ಬೇಕೆಂದು ನಾವು ಹೇಳುತ್ತೇವೆ. "ಉರ್ವಶೀ ಪುರೂರವರ ಸಂವಾದ" ಪಂಚತಂತ್ರ, ಹಿತೋಪದೇಶ, ಬೃಹತ್ಕಥಾಮಂಜರಿ, ಕಥಾಸರಿತ್ಸಾಗರ, ದಶಕುಮಾರ ಚರಿತ್ರೆ ಇವು ಆ ದೃಷ್ಟಿಯಿಂದ ಸಣ್ಣ ಕತೆಗಳಲ್ಲ. ಬರಿಯ ಕತೆಗಳು. ಹತ್ತೊಂಬತ್ತನೆಯ ಶತಮಾದಲ್ಲಿ ಸಣ್ಣ ಕತೆ ಮೊದಲು ಅಮೇರಿಕದಲ್ಲಿ ಪ್ರಚಾರಕ್ಕೆ ಬಂದಿತು. ಅಲ್ಲಿ ಯಾವುದೂ ಬೇಗ ಬೇಗ ಬೆಳೆಯುವಂತೆ ಈ ಕಲೆಯೂ ಬೆಳೆಯಿತು, ಪ್ರಪಂಚದಲ್ಲೆಲ್ಲ ಪ್ರಸಾರಗೊಂಡಿತು. ಫ್ರಾನ್ಸು, ಇಂಗ್ಲೆಂಡ್, ರಷ್ಯ, ಜರ್ಮನಿ, ನಾರ್ವೆಗಳಲ್ಲಿ ಸಣ್ಣ ಕತೆಗಳು ಅಸಂಖ್ಯಾತ ವಾಗಿ ಜನಜೀವನವನ್ನು ಚಿತ್ರಿಸ ತೊಡಗಿದವು. ಆಧುನಿಕ ತ್ವರಿತ ಜೀವನ ವೇಗ, ಜನರ ವಿದ್ಯೆಯ ಮಟ್ಟ ಏರಿದುದು, ಅಚ್ಚಿನ ಸೌಕರ್ಯ, ನಾಗರಿಕತೆ ಬೆಳೆದಂತೆ ಹೆಚ್ಚು ಹೆಚ್ಚು ತೊಡಕಾಗುತ್ತಿರುವ ಜೀವನ ಸಮಸ್ಯೆಗಳು ಇವೆಲ್ಲಾ ಈ ಸಾಹಿತ್ಯ ಪ್ರಕಾರ ವನ್ನು ಪೋಷಿಸಿದವು.

ಭಾರತದಲ್ಲಿ ಬಂಗಾಳಾ ಪ್ರಾಂತ ಮೊದಲು ಸಣ್ಣ ಕತೆಗಳಲ್ಲಿ ಪ್ರಯೋಗ ನಡೆ ಸಿತು. ಆ ಪ್ರಯೋಗದಲ್ಲಿ ಮೊದಲು ಕೀರ್ತಿಪಡೆದವರು ವಿಶ್ವಕವಿ ಟಾಗೂರರು. ಅವರ ಕೈಗೆ ಸಿಕ್ಕಿದ ಮೇಲೆ ಆ ಸಾಹಿತ್ಯ ವಿಶೇಷ ರಂಜಿಸಿದುದರಲ್ಲಿ ಆಶ್ಚರ್ಯವಿಲ್ಲ. ಟಾಗೂರರು ಮುನ್ನೂರಕ್ಕಿಂತ ಹೆಚ್ಚು ಸಣ್ಣ ಕತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಬಹು ಭಾಗ ಇಂಗ್ಲಿಷಿಗೆ ಅನುವಾದಿತವಾಗಿ ಜಗತ್ತಿನ ಮನ್ನಣೆಯನ್ನು ಪಡೆದಿವೆ. ಟಾಗೂರರ ಪ್ರಭಾವ ಅಖಿಲ ಭಾರತದಲ್ಲಿಯೂ ವಿಶೇಷ. ಕರ್ನಾಟಕವು ಬಹು ಬೇಗ ಸಣ್ಣ ಕತೆಯ ಪ್ರಭಾವವನ್ನು ಕಂಡುಕೊಂಡಿತು. ಧೀರರಾದ ಸಾಹಸಿಗಳು ಮುಂದೆ ಬಂದು ಈ ಸಾಹಿತ್ಯದ ಮೂಲಕ ಜನರ ಹೃದಯದ ತಂತಿಗಳನ್ನು ಮಿಡಿಯತೊಡಗಿದರು.

"ಕನ್ನಡ ಸಾಹಿತ್ಯದಲ್ಲಿ ಮೊದಲು ಕಲಾಪ್ರಸಿದ್ಧಿಗೆ ಬಂದ 'ಸಣ್ಣ ಕತೆ'ಗಳು ಶ್ರೀನಿವಾಸರು ಬರೆದುವು. ಕೀ.ಶೇ. ಗಳಾದ ಶ್ರೀಮಾನ್ ಪಂಜೆಯವರೂ, ಶ್ರೀ. ಎಂ. ಎನ್. ಕಾಮತರೂ, ಕೆರೂರು ವಾಸುದೇವಾಚಾರ್ಯರೂ ಸಣ್ಣ ಕತೆಗಳ ಹುಟ್ಟು ಬೆಳವಣಿಗೆಗಳ ಸಂಬಂಧದಲ್ಲಿ ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವ್ಯವಸಾಯ ಮಾಡಿದವರು.

ಸಣ್ಣ ಕತೆಯ ಸ್ವರೂಪವೇನು? ಎಂಬುದನ್ನು ಕುರಿತು ಒಂದೆರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ಸಣ್ಣ ಕತೆ ಒಂದು ರಸಬಿಂದು ಅಥವ ರಸದಗಟ್ಟಿ. ಅದರ ಗುರಿ ಸೂಜಿಯ ಮೊನೆಯಂತೆ ಚೂಪು. ಅದರ ಶೈಲಿಯವೇಗ ಜೂಜಿನ ಕುದುರೆಯ ನಾಗಾ ಲೋಟ ಅದು ಉಪಯೋಗಿಸಿಕೊಳ್ಳುವ ಮಾತುಗಳು ಅತಿಸ್ವಲ್ಪ! ತೋರಿಸುವ ಸತ್ಯ ಅದ್ಭುತ. ಓದುವುದಕ್ಕೆ ಸ್ವಲ್ಪವೇ ಕಾಲ ಹಿಡಿದರೂ ಅದು ತೆರೆಯುವ ರಸಭಂಡಾರ ವನ್ನು ಅನೇಕ ಗಂಟೆಗಳ ಕಾಲ ಸವಿಯಬಹುದು. ಸಣ್ಣದರಲ್ಲಿ ದೊಡ್ಡದನ್ನು ಅಡಗಿಸುವ ಸ್ವಲ್ಪದರಲ್ಲಿ ಬಹಳವನ್ನು ಹೇಳುವ ಚಾತುರ್ಯ ಅದು. ಸಣ್ಣ ಕತೆಯಲ್ಲಿ ಭಾವದ ಹಿರಿಮೆ ಇರಬೇಕು. ಭಾವನಿರೂಪಣ ಸುಂದರವಾಗಿರಬೇಕು. ವಸ್ತುವಿಗಿಂತ ವಸ್ತುವಿನ ವಿರಚನೆಗೆ ಹೆಚ್ಚು ಪ್ರಾಧಾನ್ಯ. ಮೊದಲಿನಿಂದ ಕೊನೆಯವರೆಗೆ ಪ್ರತಿಯೊಂದು ಮಾತೂ, ಪರಿಣಾಮರಮಣೀಯತೆಗೆ ಸಹಾಯಕವಾಗಬೇಕು. ಎಲ್ಲೋ ಒಂದುಕಡೆ ಒಂದು ಹೊಳಪು ಬಂದ ಮಾತ್ರಕ್ಕೆ ಉತ್ತಮ ಸಣ್ಣ ಕತೆಯಾಗುವುದಿಲ್ಲ. ಯಾವುದೂ ಮಿತಿ ಯನ್ನು ಮೀರಬಾರದು. ಆವಶ್ಯಕವಲ್ಲದ ಪದ ಒಂದೂ ಅಲ್ಲಿರಬಾರದು. ಲೇಖಕನು ಕಡ್ಡಾಯವಾಗಿ ಈ ಫಲವನ್ನು ಸಾಧಿಸಬೇಕು. ಸ್ಫೂರ್ತಿಯಿಲ್ಲದೆ ಬೆಳಕು ಹೊಳೆಯು ವುದಿಲ್ಲವಾದರೂ ಬರಿಯ ಸ್ಫೂರ್ತಿಯ ಮೇಲೆಯೇ ಅವಲಂಬಿಸಿದರೆ ಸಾಧ್ಯವಿಲ್ಲ. ಪ್ರತಿಯೊಂದು ಮಾತನ್ನೂ ತೂಗಿ ಚೂಪುಮಾಡಿ ಬಳಸಬೇಕು. ಆದರೆ ಸ್ವಾಭಾವಿಕತೆಗೆ ಭಂಗ ಬರಬಾರದು. ಕೃತಕತೆಯ ನೆಳಲು ದೂರದಿಂದ ಬಿದ್ದರೂ ಕೆಟ್ಟಿತು ಕತೆಯ ಹದ.

ಸಾಧಾರಣವಾಗಿ ಕತೆ ಬರೆಯಲು ಹೊರಡುವವರಿಗೆಲ್ಲಾ ಈ ಸೂತ್ರಗಳು ಗೊತ್ತು. ಆದರೆ ತಮ್ಮ ಸಣ್ಣ ಕತೆಗಳನ್ನು ಸಣ್ಣ ರತ್ನವಾಗಿ ವಾಚಕನ ಕೈಗೆ ಕೊಡುವ ಪುಣ್ಯ ಧನ್ಯರಿಗೆ ಮಾತ್ರ ಲಭಿಸುತ್ತದೆ. ಕತೆಗಾರರ ಎಲ್ಲಾ ಕತೆಗಳೂ ಒಂದೇ ಸಮನಾಗಿ ಶ್ರೇಷ್ಠವಾಗಿರುವುವೆಂದೂ ಹೇಳಲು ಸಾಧ್ಯವಿಲ್ಲ. ಕಾವ್ಯದೇವಿಯ ಸಾಕ್ಷಾತ್ಕಾರವಾದಾಗ ಲೇಖಕ ಆ ಒಂದು ಗಳಿಗೆಯಲ್ಲಿ ತಾನು ಕಂಡ ದಿವ್ಯ ಸತ್ಯವನ್ನು ಶಬ್ದಗಳ ಮೂಲಕ ಹಿಡಿದು ವಾಚಕನಿಗೆ ಅರ್ಪಿಸುತ್ತಾನೆ. ಅನಂತರವೂ ಅವನು ಏನೇನೋ ಬರೆಯುತ್ತಲೇ ಇರುತ್ತಾನೆ, ಹುಚ್ಚನಂತೆ ತೊಳಲುತ್ತಲೇ ಇರುತ್ತಾನೆ. ಆದರೆ ಮತ್ತೆ ಆ ದಿವ್ಯದರ್ಶನ ಅವನಿಗೆ ದೊರೆಯುವ ವರೆಗೆ ಅವನು

ಬರೆಯುವುದೆಲ್ಲಾ ಬರಿಯ ಜಿನ್ನು ಪಿಟೀಲು. ಮೊದಲು ಕೊಟ್ಟ ಉತ್ತಮ ಕೃತಿಯಿಂದ ಅವನ ತಲೆ ತಿರುಗದೆ ಇದ್ದರೆ, ಅವನ ಹೃದಯ ನಮ್ರವಾಗಿ ಶುದ್ಧವಾಗಿದ್ದರೆ ಮತ್ತೆ ಅದೇ ದಿವ್ಯದರ್ಶನ ಅವನ ಕೈಯಿಂದ ಮತ್ತೊಂದು ಕೃತಿರತ್ನವನ್ನು ಸೃಷ್ಟಿಸಬಲ್ಲದು.

ಸಾಧಾರಣವಾಗಿ ಮೇಲು ನೋಟಕ್ಕೆ ನೋಡಿದರೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಸಣ್ಣ ಕತೆಗಳಿಗೆ ಕೊರತೆ ಇಲ್ಲವೆಂಬಂತೆ ಕಾಣುತ್ತದೆ. ಯಾವ ಪತ್ರಿಕೆ ನೋಡಲಿ ಒಂದು ಕತೆ ಇದ್ದೇ ಇರುತ್ತದೆ. ಪತ್ರಿಕೆಗಳೂ ಅನೇಕವಾಗಿವೆ. ಆದರೆ ಸಾಧಾರಣವಾಗಿ ಕತೆಗಳಲ್ಲಿ ವಿಷಯ ಪುಷ್ಟತೆ ಇರುವುದಿಲ್ಲ. ಹಾಗೂ ತೆಗೆದು ಕೊಂಡರೂ ತಮಿಳು ತೆಲುಗುಗಳಲ್ಲಿ ಬರುತ್ತಿರುವಷ್ಟು ಸಂಖ್ಯೆಯ ಕತೆಗಳು ಸಹ ನಮ್ಮಲ್ಲಿ ಬರುತ್ತಿಲ್ಲ. ಒಂದೊಂದು ಕತೆಗಳನ್ನು ಬರೆದು ತೆಪ್ಪಗಾಗಿರುವ ಕತೆಗಾರರನ್ನು ನೋಡಿ "ಇವರು ಯಾಕೆ ಸುಮ್ಮನೆ ಕುಳಿತಿದ್ದಾರೆ. ಇನ್ನೂ ಕೆಲವು ಅಂತಹ ಕತೆಗಳನ್ನು ಯಾಕೆ ಬರೆಯಬಾರದು" ಎಂದು ನಮಗೆ ಕೋಪವೇ ಉಂಟಾಗುವುದು. ನಮ್ಮ ಸಾಹಿತ್ಯದಲ್ಲಿ ಕತೆಗಳು ಎಷ್ಟು ಬೇಕೋ ಅಷ್ಟು ಬೆಳೆದಿಲ್ಲ. ಹಿಂದಿಯಲ್ಲಿ ಪ್ರೇಮಚಂದರಂಥವರು ೨೦೦ ಕತೆ ಬರೆದಿದ್ದಾರೆ. ಮರಾಠಿಯಲ್ಲಿ ಸಹ ಖಾಂಡೇಕರ್ ಮುಂತಾದವರು ನೂರಕ್ಕೆ ಕಡಿಮೆ ಇಲ್ಲದೆ ಬರೆದಿದ್ದಾರೆ. ತಮಿಳಿನಲ್ಲಿ ಶ್ರೀ ಕು. ಪ. ರಾಜಗೋಪಾಲನ್, ಕಲ್ಕಿ, ಕೊಸಿಷ್ಟೆ, ಪುದುಮೈಪಿತನ್ ಮುಂತಾದವರು ೫೦—೬೦ ಕತೆಗಳನ್ನು ಬರೆದಿದ್ದಾರೆ. ಆದರೆ ಕನ್ನಡದಲ್ಲಿ ಶ್ರೀನಿವಾಸರೊಬ್ಬರೇ ಸುಮಾರು ೩೫ ಕತೆಗಳನ್ನು ಬರೆದಿರುವವರು.

ಬರಿಯ ಕತೆಗಳ ಸಂಖ್ಯೆ ಹೆಚ್ಚಾಗುವುದರಿಂದ ಮಾತ್ರ ಉತ್ತಮ ಕತೆಗಳು ಹೆಚ್ಚುವುದಿಲ್ಲವೆಂದು ಮೊದಲೇ ಹೇಳಿರುವುದರಿಂದ ಈ ಪರಿಸ್ಥಿತಿ ಹೆಚ್ಚು ವಿಷಾದಕ್ಕೆ ಕಾರಣವಲ್ಲ. ಆದರೆ ಈ ವರೆಗೆ ನಮ್ಮಲ್ಲಿ ಬೆಳೆದಿರುವ ಅನೇಕ ಸಣ್ಣ ಕತೆಗಳು ಶ್ರೇಷ್ಠ ವರ್ಗಕ್ಕೆ ಸೇರಿದುವಾದರೂ ನಮ್ಮ ಬಾಳಿನ ಅನೇಕ ಸಮಸ್ಯೆಗಳನ್ನು ಅವು ಮುಟ್ಟಿಯೇ ಇಲ್ಲ. ನಮ್ಮ ದಾರಿದ್ರ್ಯ, ರೈತನ ಅಜ್ಞಾನ, ಅವನ ಮೇಲೆ ದಬ್ಬಾಳಿಕೆ, ಕೂಲಿಗಾರರ ಸಮಸ್ಯೆ, ಭಂಡವಾಳದ ಬಡಾಯಿ, ಅವಿಭಕ್ತ ಕುಟುಂಬದ ನಾನಾ ಬಗೆಯ ಕಷ್ಟಗಳು, ಸ್ತ್ರೀಯರ ಸಮಸ್ಯೆಗಳು ಇವುಗಳನ್ನೆಲ್ಲಾ ಪರಿಣಾಮಕಾರಿಯಾಗುವಂತೆ ಚಿತ್ರಿಸುವ ಸಣ್ಣ ಕತೆಗಾರರು ನಮ್ಮಲ್ಲಿ ಇನ್ನೂ ಬರಬೇಕಾಗಿದೆ. ನಮ್ಮ ಬಾಳನ್ನೂ ಜೀವನವನ್ನೂ ನೋಡಿ, ಇದರಿಂದಲೇ ಕಲಿತು, ಇದರಿಂದಲೇ ಸ್ಫೂರ್ತಿ ಹೊಂದಿ ಇದರ ಏಳಿಗೆಗಾಗಿಯೇ ಇನ್ನು ಸಾಹಿತ್ಯ ನಿರ್ಮಾಣವಾಗಬೇಕು.

ಈ ಸಂದರ್ಭದಲ್ಲಿ ಉತ್ತಮ ಕನ್ನಡ ಕತೆಗಾರರ ಹೆಸರನ್ನು ನಾನು ಹೇಳುವುದಿಲ್ಲ. ಅದು ಪ್ರಬುದ್ಧ ಕರ್ನಾಟಕದ ವಾಚಕರಿಗೆ ಗೊತ್ತೇ ಇರುತ್ತದೆ. ಮತ್ತು

ಯಾವ ವಿಮರ್ಶಕನೂ ಎಲ್ಲಾ ಲೇಖಕರ ಹೆಸರನ್ನು ಹೇಳುವುದು ಸಾಧ್ಯವಿಲ್ಲ. ಆದರೆ ಸಣ್ಣ ಕತೆಯ ಲೇಖಕರಾಗಿ ಭಾಷಾ ಸೇವೆ ಮಾಡಬೇಕೆಂದಿರುವ ಯುವಕ ಉತ್ಸಾಹಿಗಳ ಹೆಗ್ಗುರುತುಗಳಿಗಾಗಿ ಕೆಲವು ಎಚ್ಚರಿಕೆಗಳನ್ನು ಕೊಡುತ್ತೇನೆ.

ಕತೆಗಾರ ತನ್ನ ಸುತ್ತಮುತ್ತಲ ಪ್ರಪಂಚವನ್ನು ನೋಡಿ ಅಲ್ಲಿ ಕಣ್ಣಿಗೆ ಬೀಳುವುದನ್ನು ತನ್ನ ಕಥಾವಸ್ತುವನ್ನಾಗಿ ಆರಿಸಿಕೊಳ್ಳಬೇಕು.

ಇತರ ಸಾಹಿತ್ಯಗಳಿಂದ ಉತ್ತಮವಾದ ಕೃತಿಗಳನ್ನು ತೆಗೆದು ಅನುವಾದವಾಗಿಯೋ ರೂಪಾಂತರಿಸಿಯೋ ನಮ್ಮ ಸಾಹಿತ್ಯಕ್ಕೆ ಕೊಡುವುದು ತಪ್ಪಲ್ಲ; ಉದಾ. ಟೇಂಗ್ಸೆ ಗೋವಿಂದರಾಯರ ಗಂಗೆಯ ಗುತ್ತಿಗೆ, ಬಿ. ಎಸ್. ವೆಂಕಟರಾಮರ ಡೊಂಕುಬಾಲ, ಅ. ನ. ಕೃಷ್ಣರಾಯರ ರಾತ್ರಿ ೧೦ತ್ತಿ ಗಂಟೆ, ಶ್ರೀಮಾನ್ ರಾಜರತ್ನಂ ಅವರು ಬೆಳದಿಂಗಳಲ್ಲಿ ಪ್ರಕಟಿಸಿರುವ ಮೃಗಾಲಯದ ನಿರಂಜನನೆಂಬುವನ ಕತೆ.

ಸಣ್ಣ ಕತೆಗಳ ವಸ್ತು ಯಾವುದೇ ಇರಬಹುದಾದರೂ, ಸಮಸ್ಯೆಗಳು ಜೀವನವನ್ನು ಮುಟ್ಟಿದವುಗಳಾಗಿರಬೇಕು. ಮೇಲು ಮೇಲಿನ ಶೃಂಗಾರವಾಗಲಿ ಬರಿಯ ಕಾಲೇಜು ಹುಡುಗ ಹುಡುಗಿಯರ ಸರಸ ಜೀವನವಾಗಲಿ ಮಾತ್ರವೇ ಚಿತ್ರಿತವಾದರೆ ಲೇಖಕನಿಗೆ ಸಾರ್ಥಕ್ಯ ಉಂಟಾಗುವುದಿಲ್ಲ.

ಶೈಲಿಗೆ ಯಾವ ನಿರ್ಬಂಧವೂ ಇಲ್ಲ. ಆದರೆ ಶೈಲಿ ಮತ್ತು ವರ್ಣನಾಕ್ರಮವನ್ನು ಕುರಿತು ಒಂದು ಎಚ್ಚರಿಕೆ ಕೊಡಬೇಕು.

ಧಾರವಾಡ ಮೈಸೂರು ಮಂಗಳೂರು ಶೈಲಿಗಳಲ್ಲಿ ಸ್ವಲ್ಪಸ್ವಲ್ಪ ಭಿನ್ನತೆಯಿರುವುದರಿಂದ ಒಂದೊಂದುವೇಳೆ ಆಭಾಸವುಂಟಾಗುತ್ತದೆ. ತಾವು ಉಪಯೋಗಿಸುವ ಭಾಷೆ ಎಲ್ಲಾ ಕಡೆಯವರಿಗೂ ಸಾಧಾರಣವಾಗಿ ತಿಳಿಯುವಂತೆ ಲೇಖಕರು ಎಚ್ಚರಿಕೆಯಿಂದಲೇ ಇರುತ್ತಾರೆ. ಆದರೆ ಎಂಥವರಿಂದಲೂ ಒಂದೊಂದು ತಪ್ಪು ಸಂಭವಿಸುತ್ತದೆ. ಮೈಸೂರು ಪ್ರಾಂತದವರು ಉಚ್ಚರಿಸಲಾಗದ ಒಂದು ಪದ ಧಾರವಾಡದ ಕಡೆ ಅಶ್ಲೀಲವಲ್ಲವಾದರೆ ಅವರ ದೃಷ್ಟಿಯಲ್ಲಿ ಮೈಸೂರವರದು ಯಾವುದೋ ಒಂದು ಶಬ್ದ 'ದುಷ್ಟ.'

ಈಗ ಕನ್ನಡದಲ್ಲಿ ಬಂದಿರುವ ಸಣ್ಣ ಕತೆಗಳಲ್ಲಿ ಅತ್ಯುತ್ತಮವಾದುವು ಭಾರತದ ಇತರ ಭಾಷೆಗಳ ಉತ್ತಮ ಕತೆಗಳಿಗೂ, ಅನೇಕ ಪಾಶ್ಚಾತ್ಯ ಉತ್ತಮ ಕತೆಗಳಿಗೂ ಯಾವ ವಿಧದಲ್ಲಿಯೂ ಕಡಿಮೆ ಅಲ್ಲ. ಈ ಕತೆಗಳಲ್ಲಿ ನಮ್ಮ ಜನರ ಬಾಳ್ವೆಯನ್ನು ವ್ಯಕ್ತಿತ್ವ ದೃಷ್ಟಿಯಿಂದ ಚಿತ್ರಿಸಿರುವ ಕತೆಗಳು ಉದಾ. ರಂಗಪ್ಪನ ಮದುವೆ, ದೀಪಾವಳಿ, ಪ್ರೇಮ, ನಮ್ಮ ಮೇಷ್ಟ್ರು; ನಮ್ಮ ಜನರ ಬಾಳುವೆಯನ್ನು ಸಮೂಹದೃಷ್ಟಿಯಿಂದ ವರ್ಣಿಸಿರುವವುಗಳು ಉದಾ. ಮೊಸರಿನ ಮಂಗಮ್ಮ, ಮೇಲೂರು ಲಕ್ಷ್ಮಮ್ಮ, ಉಗ್ರಪ್ಪನ ಯುಗಾದಿ, ನಾನು ಕೊಂದ ಹುಡುಗಿ; ಪ್ರೇಮದ ವಿಧವಿಧವಾದ ಸೂಕ್ಷ್ಮರೇಖೆ

ಗಳನ್ನು ಕೌಶಲ್ಯದಿಂದ ಚಿತ್ರಿಸಿರುವ ಆನಂದರ ಕತೆಗಳು ; ಇತಿಹಾಸದ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಬರೆದಿರುವ ನಿಜಗಲ್ಲಿನ ರಾಣಿ ಮತ್ತು ಆಲಂಗಿರಿ; ಪಾತ್ರ ರಚನೆಯನ್ನೇ ಪ್ರಧಾನವಾಗಿಟ್ಟುಕೊಂಡಿರುವ ಮೋಚಿ; ಆವರಣಪ್ರಧಾನವಾದ ಇಂದಿರೆಯೋ ಅಲ್ಲವೋ, ವೈಣಿಕ; ಊಹನಾಶಕ್ತಿಪ್ರಧಾನವಾದ ಹೇಮಕೂಟದ ಆಶ್ರಮದಿಂದ ಬಂದಮೇಲೆ, ಆಚಾರ್ಯರ ಪತ್ನಿ, ಗಯಟೆ ಕವಿಯ ಅಂತ್ಯದಿನಗಳು; ಒಂದೇ ಪಾತ್ರ ಕಥೆ ಹೇಳುವ ಮುಟ್ಟಿದ್ದೆಲ್ಲ ಚಿನ್ನ. ಹಾಸ್ಯಪ್ರಧಾನವಾದ ನನ್ನ ಭಾವ, ಕರ್ಣಪಿಶಾಚ. ಜೀವನದಲ್ಲಿ ಪ್ರಕಟವಾದ ಈ ಕತೆಯು ಅನೇಕ ವಾಚಕರ ದೃಷ್ಟಿಯನ್ನು ಎಳೆದಂತೆ ಕಾಣುವುದಿಲ್ಲ. ಇದನ್ನು ಓದದವರು ರಸಕವಳದಿಂದ ವಂಚಿತರಾಗಿದ್ದಾರೆಂದು ಮಾತ್ರ ಹೇಳಬಲ್ಲೆ. ಬೇಂದ್ರೆ, ಶ್ರೀ ಕೆ. ವಿ. ಪುಟ್ಟಪ್ಪ, ಮುಗಳಿ, ಕಾರಂತ್, ಗೋಪಾಲಕೃಷ್ಣರಾಯ, ಅ. ನ. ಕೃಷ್ಣರಾಯ, ಸಿ. ಕೆ. ವೆಂಕಟರಾಮಯ್ಯ, ಶ್ರೀ ಕಲ್ಲೂರ, ರಾಜರತ್ನಂ, ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್, ಹ. ಪಿ. ಜೋಷಿ, ಕ್ಷೀರಸಾಗರ, ಕಲ್ಯಾಣಮ್ಮ ಇವರು ಸಣ್ಣ ಕತೆಗಳಲ್ಲಿ ವಿಧವಿಧಗಳಾದ ಪ್ರಯೋಗಗಳನ್ನು ನಡೆಸಿದ್ದಾರೆ. ಸೌ|| ಶಾಮಲೆ, ಪ. ಟಿ. ಜಿ. ಕೃಷ್ಣ, ಕುಮಾರಿ ಪದ್ಮಾವತಿ, ಲೀಲಾಕಾರಂತ್ ಇವರ ಸಣ್ಣಕತೆಗಳು—ಹೀಗೇ ಈ ಪಟ್ಟಿ ಬಲವಾಗಿಯೇ ಇದೆ. ಸಂಖ್ಯೆಯಲ್ಲಿಯಾಗಲಿ ವಿವಿಧತೆಯಲ್ಲಿಯಾಗಲಿ ಯಾವ ಸಾಹಿತ್ಯಕ್ಕೂ ಬೀಳುವಂತೆ ಇಲ್ಲ.

ಕನ್ನಡ ಭಾಷೆಯಲ್ಲಿ ಪ್ರಕಟವಾಗಿರುವ ಈ ಸಣ್ಣಕತೆಗಳು ಭಾರತದ ಇತರ ಭಾಷೆಗಳ ಶ್ರೇಷ್ಠ ಕೃತಿಗಳಿಗೆ ಮಾದರಿಗಳಾಗಿವೆ. ಶ್ರೀನಿವಾಸರ ಕೃತಿಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿ ಇಂಗ್ಲಿಷ್ ಬಲ್ಲವರ ಮನ್ನಣೆಯನ್ನು ಹೊಂದುತ್ತಿವೆ.[1] ಇವರ ಎರಡು ಕತೆಗಳನ್ನು (ವೇಣುಗಾನಂ, ಮಂಗಮ್ಮ) ಈ ಹಿಂದೆಯೇ ಮದರಾಸಿನ ಮಾಜಿ ಮಂತ್ರಿ ಚಕ್ರವರ್ತಿ ರಾಜಗೋಪಾಲಾಚಾರ್ಯರು ತಮಿಳಿಗೆ ಭಾಷಾಂತರಿಸಿದ್ದರು. ತಮಿಳುನಾಡಿನ ಶ್ರೇಷ್ಠ ವಿಮರ್ಶಕಕಾರರೊಬ್ಬರು ಭಾರತಮಣಿ ಮಾಸಪತ್ರಿಕೆಯಲ್ಲಿ ಶ್ರೀನಿವಾಸರ ಕತೆಗಳನ್ನು ಕುರಿತು ಹೀಗೆ ಹೇಳಿದರು: "ತಮಿಳುಭಾಷೆಯ ಪ್ರಬಲರಾದ ಬರಹಗಾರರು ಮನೋಹರವಾದ ವರ್ಣನೆ ಸಂವಿಧಾನಗಳೊಡನೆ ಕತೆ ಬರೆಯುವುದರಲ್ಲಿ ಗಟ್ಟಿಗರು. ಆದರೆ ಅವರೂ ಸಹ ಮಾಸ್ತಿ ವೆಂಕಟೇಶಯ್ಯಂಗಾರ್ಯರ ಕಲೆಯನ್ನು ಮೆಚ್ಚಿ ಅವರ ಕತೆಗಳನ್ನು ಓದುವುದರಿಂದ, ತಮ್ಮ ಕಲೆಯನ್ನು ಹಿಂದೆ ಇದ್ದುದಕ್ಕಿಂತ ಹೆಚ್ಚಿನ ಸೌಂದರ್ಯಶಿಖರಕ್ಕೆ ಮುಟ್ಟಿಸಲು ಅವರಿಗೆ ಸಹಾಯವಾಗುವುದು."

---

[1] ಬೇಂದ್ರೆ, ಪುಟ್ಟಪ್ಪ ಇವರ ಕೃತಿಗಳ ವಿಷಯದಲ್ಲಿ ಬಂಗಾಳಿ ಪತ್ರಿಕೆಯಲ್ಲಿ ಪ್ರಶಂಸೆಯ ವಿಮರ್ಶೆಗಳು ಬಂದವು, ಪು. ತಿ. ನರಸಿಂಹಾಚಾರ್ಯರ ಕನ್ನಡ ಪದ್ಯಗಳು ತ್ರಿವೇಣಿಯಲ್ಲಿ ಇಂಗ್ಲಿಷಿನಲ್ಲಿ ಅನುವಾದಿತವಾದವು. ವಿಶಾಲಭಾರತಿ ಎಂಬ ಹಿಂದಿ ಪತ್ರಿಕೆಯಲ್ಲಿ 'ಹಳ್ಳಿಯ ಚಿತ್ರಗಳು' ಅನುವಾದ ಹೊಂದಿತು.

ಶ್ರೀನಿವಾಸರು ಹೇಗೆ ಕನ್ನಡ ಕತೆಗೆ ಸೀಮಾ ಪುರುಷರೆಂದೆವೋ ಹಾಗೆಯೇ ಕನ್ನಡ ಸಣ್ಣಕತೆಗಳ ಪ್ರಭಾವ ಯೋಗ್ಯತೆ ಹೆಚ್ಚಾಗಿ ಹೊರಗಿನ ಪ್ರಪಂಚಕ್ಕೆ ತಿಳಿದಿರುವುದೂ ಶ್ರೀನಿವಾಸರ ಕೃತಿಗಳಿಂದಲೇ. "ವೆಂಕಟೇಶ ಐಯಂಗಾರ್ಯರ ಕಲೆ, ಕಲೆಯ ಅಭಾವ ಅಂದರೆ ಸ್ವಾಭಾವಿಕ. ಇದೇ ಅದರ ಮೂಲಗುಣ. ವಿಷಯಗಳನ್ನು ಸಂಗ್ರಹಿಸಿದ ಸುದ್ದಿಗಾರರಂತೆ ಅವರು ಸರಳವಾಗಿ ಒಳ್ಳೆಯ ಕಲೆಯ ಪರಿಣಾಮವನ್ನುಂಟುಮಾಡುತ್ತಾರೆ. ಪರಿಸ್ಥಿತಿಯ ಸೂಕ್ಷ್ಮಜ್ಞಾನ, ಮನೋಹರತೆ, ಸೌಂದರ್ಯ ಇವೆಲ್ಲಾ ಅವರ ಸ್ವತ್ತು. ಅವರು ಸಂಗತಿಗಳನ್ನು ಎಚ್ಚರಿಕೆಯಿಂದ ಆರಿಸಿಕೊಳ್ಳುತ್ತಾರೆ. ಪೂರ್ಣ ಪರಿಣಾಮ ಸರಿಯಾಗಿ ಫಲಕಾರಿಯಾಗಲೆಂದು ಕೆಲವು ಸಾಮಾನ್ಯ ಸಂಗತಿಗಳನ್ನೂ ಆರಿಸಿಕೊಳ್ಳುತ್ತಾರೆ. ಸಂಸಾರದಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಮಾತುಗಳೇ ಅವರ ಶೈಲಿ.

"ಮಾಸ್ತಿಯವರ ಕಲೆ, ಅವರ ಉಪಮಾನವನ್ನೇ ಹೇಳಬೇಕಾದರೆ ತಾಯಿಯ ಎದೆಯಲ್ಲಿ ಮುಖವನ್ನು ಅಪಚಿಕೊಂಡು ಹಾಲನ್ನು ಹುಡುಕುವ ಮಗುವಿನಂತೆ. ಅದಕ್ಕೆ ಹಾಲು ಮಾತ್ರವಲ್ಲ. ಪ್ರೇಮವೂ ದೊರೆಯುತ್ತದೆ. ಹೇಳುವ ಕ್ರಮ ಸಾದಾ, ತೀರ ಸಾದ. ಆದರೆ ಅದರ ಪರಿಣಾಮ ಸುಂದರವಾದ ಅನೇಕ ಸೂಚನೆಗಳು. ಈ ಗುಣಗಳೆಲ್ಲ ಸೇರುವುದರಿಂದಲೇ ನಿಜವಾದ ಸಾಹಿತ್ಯವಾಗುತ್ತದೆ. ಸುಬ್ಬಣ್ಣನ ಪಾತ್ರರಚನೆಯಲ್ಲಿ ಪರಿಪೂರ್ಣತೆಯನ್ನು ಕತೆಗಾರ ಸಾಧಿಸಿದ್ದಾನೆ. ಗಾನ ಮನಸ್ಸಿನ ಮೇಲೆ ಯಾವ ಪರಿಣಾಮವನ್ನುಂಟುಮಾಡಬಲ್ಲದೋ ಆ ದೃಷ್ಟಿಯಿಂದಲೇ ಈ ಪಾತ್ರದ ರಚನೆಯಾಗಿದೆ. ಸಂಗೀತವೇ ಸರ್ವಸ್ವವಾದ ಸಂಗೀತಗಾರನ ಸ್ವಭಾವಚಿತ್ರ, ಪರಿಪೂರ್ಣವಾದ ಕಲಾದೃಷ್ಟಿಯಿಂದ ಚಿತ್ರಿತವಾಗಿ ಕತೆಯನ್ನು ಬಹಳ ಮೇಲು ಮಟ್ಟದ ಕತೆಯನ್ನಾಗಿ ಮಾಡಿದೆ. ಈ ಕತೆಯ ಆದರ್ಶವೂ ಉಚ್ಚವಾಗಿದೆ.

"ಮಾಸ್ತಿಯವರು ಪ್ರಕೃತಿಯನ್ನು, ಬಾಳನ್ನು, ಅದರ ವಿವಿಧತೆಯಲ್ಲಿ ಚಿತ್ರವಿಚಿತ್ರದಲ್ಲಿ ನೋಡುತ್ತಾರೆ. ತಮ್ಮ ಕಲೆಗೂ ತಮಗೂ ನಡುವೆ ಇತರ ಸಂಭಾಷಣೆಗಳನ್ನು ಸಹ ಅವರು ಬರಗೊಡುವುದಿಲ್ಲ. ಹೇಳಬೇಕಾದುದನ್ನೆಲ್ಲಾ ತಾವೇ ಹೇಳುತ್ತಾ ತಮ್ಮ ನೇರವಾದ ಸಂಬಂಧವನ್ನು ವಿಷಯದೊಂದಿಗೆ ಇಟ್ಟುಕೊಂಡಿರುತ್ತಾರೆ. ಸುಬ್ಬಣ್ಣನಿಗೆ ಸಂಗೀತ ಹೇಗೆ ಸ್ವಾಭಾವಿಕವಾಗಿ ಒಲೆಯಿತೋ ಹಾಗೆಯೇ ಮಾಸ್ತಿಗೆ ಈ ಕಲೆ, ಪ್ರಕೃತಿ ತನ್ನ ನಿಸರ್ಗರೂಪದಲ್ಲಿ ಕೊಟ್ಟ ವರ. ಬಂಡೆಗಳ ಮೇಲೂ ಗುಡ್ಡಗಳ ಮೇಲೂ ತನ್ನಪಾಡಿಗೆ ತಾನು ಉರುಳುತ್ತ ಮಂಜುಳವಾಗಿ ತೊರೆ ಗಾನಮಾಡುವಂತೆ ಮಾಸ್ತಿಯವರ ಕಲೆ ನಡೆಯುತ್ತದೆ. ಸೌಂದರ್ಯವನ್ನು ನೋಡುವ ಕಣ್ಣುಳ್ಳವರಿಗೆ ಅದರ ಆನಂದ.

"ತಾಯಿಯ ಮೊಲೆಯ ಹಾಲನ್ನು ಎಳೆಯಬೇಕಾದರೂ ಮಗುವಿನ ಅಕೃತ್ರಿಮವಾದ ಬಾಯಿನ ಸಂಪರ್ಕ ಬೇಕು. ಹಾಗೆಯೇ ಮೊಸ್ತಿಯವರ ಕಲೆಯನ್ನೂ ಪ್ರತಿಭೆಯನ್ನೂ ಅರಿಯಬೇಕಾದರೆ ಆ ಕಲೆಯನ್ನು ನಾವು ಇದೇ ದೃಷ್ಟಿಯಿಂದ ಹೊಗಬೇಕು."

ಕನ್ನಡ ಕತೆಗಾರರೆಲ್ಲ ಶ್ರೀನಿವಾಸರನ್ನು, ಸಣ್ಣ ಕತೆಗಳ ಆಚಾರ್ಯರಾಗಿ ಪರಿಗಣಿಸುತ್ತಿರುವುದರಿಂದಲೂ ಅವರ ಮಾರ್ಗವನ್ನು ಅನುಸರಿಸಲು ಪ್ರಯತ್ನಿಸುತ್ತಿರುವುದರಿಂದಲೂ, ಉಳಿದ ಕತೆಗಳನ್ನು ಕುರಿತು ಹೆಚ್ಚಿಗೆ ಹೇಳುವುದಿಲ್ಲ. ಆದರೆ ಕನ್ನಡ ಕತೆಗಳ ಭವಿಷ್ಯವೇನು? ಮುಂದೆ ಅವು ಬೆಳೆಯಬೇಕಾದ ದಾರಿ ಯಾವುದು? ಅವು ಆಕ್ರಮಿಸುವ ಕ್ಷೇತ್ರಗಳಾವುವು? ದಿನದಿನವೂ ಬೆಳೆಯುತ್ತಿರುವ ಇತರ ಸಾಹಿತ್ಯದ ಕೃತಿಗಳೊಂದಿಗೆ ಸಮವಾಗಿ ನಿಲ್ಲಬೇಕಾದರೆ ನಮ್ಮ ಸಾಧನೆ ಏನಾಗಬೇಕು? ನಮ್ಮ ಇಂದಿನ ಆತುರ ಜೀವನದಲ್ಲಿ ಈ ಸಾಹಿತ್ಯ ಎಷ್ಟರಮಟ್ಟಿಗೆ ನಮ್ಮ ಬಾಳಿನ ಭಾಗವಾಗಬಹುದು, ಇವುಗಳನ್ನು ಪ್ರತಿಯೊಬ್ಬ ಸಾಹಿತಿಯೂ ಯೋಚಿಸಬೇಕು.

ಯುವಕ ಸಾಹಿತಿಗಳು ಮುಖ್ಯವಾಗಿ ನಮ್ಮ ದೇಶದ ಜನರ ಬಾಳಿನಿಂದ ಸ್ಫೂರ್ತಿಯನ್ನು ಹೊಂದಬೇಕು. ನಮ್ಮ ಜನರ ಜೀವನದಲ್ಲಿ ಅವರ ಸಾಹಿತ್ಯ ಬೇರು ಬಿಡಬೇಕು. ಸಮತೆಯ ದೃಷ್ಟಿಯಿಲ್ಲದೆ ಯಾವ ಪರಸಂಸ್ಕೃತಿಯನ್ನೂ ಬಲಾತ್ಕಾರವಾಗಿ ನಮ್ಮ ಜನರ ಮೇಲೆ ಹೇರಲು ಪ್ರಯತ್ನಿಸಬಾರದು. ಸಂಸ್ಕೃತಗೊಡ್ಡು ಹೇಗೆ ಒಂದು ವಿಧವಾದ ಪಿತ್ಥವೋ, ಇಂಗ್ಲಿಷ್ ಗೊಡ್ಡು ಹೇಗೆ ಒಂದು ವಿಧವಾದ ಪಿತ್ಥವೋ ರಷ್ಯ ಗೊಡ್ಡೂ ಹಾಗೆಯೇ ಒಂದು ವಿಧವಾದ ಪಿತ್ಥ. ಭಾರತದ ಸಾಹಿತ್ಯಸಾಮ್ರಾಜ್ಯದಲ್ಲಿ ಇಂಗ್ಲೆಂಡನ್ನು ಸ್ಥಾಪಿಸುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ರಷ್ಯವನ್ನು ಸ್ಥಾಪಿಸುವುದೂ ಸಾಧ್ಯವಿಲ್ಲ. ಭಾರತೀಯರು ಭಾರತವನ್ನು ಭಾರತೀಯರಂತೆ ಮಾತ್ರ ಪ್ರೀತಿಸಬಲ್ಲರು. ರಷ್ಯನರಂತೆ ಪ್ರೀತಿಸಲು ಸಾಧ್ಯವಿಲ್ಲ. ಜಗತ್ತಿನಲ್ಲಿರುವ ಎಲ್ಲಾ ಸಾಹಿತ್ಯವೂ ನಮಗೆ ಬೇಕು. ಆದರೆ ಎಲ್ಲವೂ ಅದರದರ ಸ್ಥಾನದಲ್ಲಿರಬೇಕು. ಹಾಗಲ್ಲದೆ ನಾವು ಸಾಹಿತಿಗಳು ಬಲಾತ್ಕಾರವಾಗಿ ಜನರಮೇಲೆ ಅವುಗಳನ್ನು ಹೇರಲು ಪ್ರಯತ್ನಿಸಿದರೆ ಜನ ಆ ಸಾಹಿತ್ಯವನ್ನು ನಾಶಮಾಡಿಬಿಡುವುದು.

ಮುಂದಲ ದಿನಗಳಲ್ಲಿ ಜಗತ್ತಿನ ಸ್ಥಿತಿಗತಿಗಳನ್ನೂ ಪ್ರಜಾಸ್ವಾತಂತ್ರ್ಯ, ಕೂಲಿ ಭಂಡವಾಳ ಸಮಸ್ಯೆಗಳನ್ನೂ ಕುರಿತ ಸಣ್ಣಕತೆಗಳು ಹೇರಳವಾಗಿ ಹುಟ್ಟುವುವು. ಅವು ನಮ್ಮ ಜನರ ರಕ್ತಗತವಾಗಬೇಕಾದರೆ, ನಮ್ಮ ದೇಶದ ಪರಿಸ್ಥಿತಿಗೆ ಅವು ಹೊಂದಿಕೊಳ್ಳುತ್ತವೆಯೇ ಎಂಬುದನ್ನು ಕತೆಗಾರರು ಚೆನ್ನಾಗಿ ಯೋಚಿಸಬೇಕು. ಹಾಗಾಗದಿದ್ದರೆ ಕತೆ ಪುಸ್ತಕದಲ್ಲಿ ಉಳಿಯುವುದು. ಜನ ತಮ್ಮಪಾಡಿಗೆ ತಾವು ಇರುವರು. ನಮ್ಮ ಜನರ ಬಾಳಿನಿಂದ ಪ್ರಚೋದಿತವಾದ ಸ್ವತಂತ್ರ ಕೃತಿಗಳೇ ನಮ್ಮ

ದೇಶದ ನಿಜವಾದ ಸಾಹಿತ್ಯ. ಮಹಾತ್ಮಾ ಗಾಂಧಿಯವರು ಹೇಳಿರುವಂತೆ ಬರಿಯ ಭಾಷಾಂತರಕಾರರ ಗುಂಪು ಇದ್ದಮಾತ್ರಕ್ಕೇ ಯಾವ ನಾಡೂ ಧೀರರ ನಾಡು ಆಗುವುದಿಲ್ಲ. ಭಾಷಾಂತರಕಾರರು ಮಾತ್ರವೇ ಅಲ್ಲ. ಅಂಥರಾಗಿ ಒಂದು ದೇಶದ ಸಾಹಿತ್ಯದಂತೆ ಕ್ರಾಂತಿಸಾಹಿತ್ಯ, ಕೂಲಿಸಾಹಿತ್ಯ, ಖೂನಿಸಾಹಿತ್ಯ, ಲಿಂಗಸಾಹಿತ್ಯ ಇವುಗಳನ್ನು ತಾವೂ ಸೃಷ್ಟಿಸುತ್ತೇವೆಂದು ಹೊರಡುವ ಅನುಕರಣ ಪಟುಗಳ ಸೈನ್ಯ ದಿಂದಲೂ ನಾಡು ಧೀರರ ನಾಡಾಗುವುದಿಲ್ಲ. ನಮ್ಮ ಜನರಿಗೆ ಅರ್ಪಿಸುವ ಸಾಹಿತ್ಯ ನಮ್ಮ ಜನರ ಬಾಳಿಂದ ಹುಟ್ಟಿದುದಾಗಬೇಕು. ನಮ್ಮ ಜನರ ಬಾಳನ್ನು ತಿದ್ದುವುದಾ ಗಿರಬೇಕು. ನಮ್ಮ ಜನರ ಬಾಳನ್ನು ಬೆಳಗುವುದಾಗಿರಬೇಕು.

ಪರದೇಶದಲ್ಲಿ ಅಸಂಖ್ಯಾತವಾಗಿ ಬೆಳೆಯುತ್ತಿರುವ ಸಾಹಿತ್ಯಗಳನ್ನು ನೋಡಿ ನಮಗೆ ದೈನ್ಯವುಂಟಾಗುತ್ತದೆ. ನಾವು ಅಂತಹ ರಸಋಷಿಗಳನ್ನು ಸೃಷ್ಟಿಸುವುದು ಯಾವಾಗ ಎಂದು ಕೊರಗುತ್ತೇವೆ. ಹಿಂದೆ ನಮ್ಮಲ್ಲಿ ವಾಲ್ಮೀಕಿ, ವ್ಯಾಸ, ಕಾಳಿದಾಸರು ಹುಟ್ಟಿ ಭಾರತದ ಹೆಸರು ಜಗದ್ವಿಖ್ಯಾತವಾಗುವಂತೆ ಮಾಡಿದರು. ಇಂದಿಗೂ ಭಾರತೀ ಯರಾದ ನಮಗೆ ಉಳಿದಿರುವ ಸಾಹಿತ್ಯ ಆ ಋಷಿಗಳ ಕೃತಿಗಳೇ ಹೊರತು ಬೇರೆ ಇಲ್ಲ. ಸಾಹಿತ್ಯದ ಸೃಷ್ಟಿ ಒಂದು ತಪಸ್ಸು, ಒಂದು ಸಾಧನೆ. ಅದು ಹಟದಿಂದಾಗಲಿ ಕರುಬಿ ನಿಂದಾಗಲಿ ಕರಗತವಾಗುವುದಿಲ್ಲ. ಅದು ಸುಲಭವಾಗಿ ಇತರ ಸಾಹಿತ್ಯಗಳ ಅನುಕರಣ ಉಪಾಯದಿಂದಲೂ ಸಾಧ್ಯವಾಗುವುದಿಲ್ಲ. ಕಾವ್ಯದೇವಿಯ ಮುಂದೆ ಅನೇಕ ಕಾಲ ನಮ್ರತೆಯಿಂದ ಮಂಡಿಯೂರಿ ಮೂಗು ಉಜ್ಜಬೇಕು. ಪುಸ್ತಕ ಜ್ಞಾನದೊಂದಿಗೆ ಜೀವನವನ್ನು ನೋಡಿದ ಜ್ಞಾನವನ್ನೂ ಸಂಪಾದಿಸಬೇಕು. ಜ್ಞಾನಾರ್ಜನೆಯ ದೀಕ್ಷೆ ಯನ್ನು ಹೊಂದಬೇಕು. ಹೀಗೆ ತಪಸ್ಸು ಮಾಡಿದಾಗ ಎಲ್ಲೋ ಒಂದುಸಲ ಕಾವ್ಯ ದೇವಿ ಪ್ರತ್ಯಕ್ಷವಾದಾಗ ಒಂದೇ ಒಂದು ಸಣ್ಣ ಕತೆಯನ್ನೋ ಭಾವಗೀತೆಯನ್ನೋ ಬರೆದರೂ ಸಾಕು. ಅದು ನಿಮ್ಮ ಜೀವದ ಜೀವ, ನಿಮ್ಮ ರಕ್ತದ ರಕ್ತ, ನಿಮ್ಮ ಉಸಿರಿನ ಉಸಿರು, ನಿಮ್ಮ ಸ್ವಂತದ ಸ್ವಂತ. ಅಲ್ಲಿಂದ ಮುಂದೆ, ಹಿಂದೆ ನಿಮ್ಮ ಕೃತಿ ಏನೂ ಇಲ್ಲದಿದ್ದರೂ ಚಿಂತೆಯಿಲ್ಲ. ಹಾಗಲ್ಲದೆ, ಅರ್ಧ ಅಗಿದ ಆಹಾರವನ್ನು ತಿಂದು ಅಜೀರ್ಣಗೊಳ್ಳುವಂತೆ ಸಿಕ್ಕಿಸಿಕ್ಕಿದ್ದನ್ನು ಬರೆದು ಸುಮ್ಮನೆ ನೂರಾರು ಪುಟಗಳನ್ನು ತುಂಬುವುದರಿಂದಲೂ ಪ್ರಯೋಜನವಿಲ್ಲ. ಇಂದಿನ ಯುವಕರೂ ಹೊಸ ಬರಹ ಗಾರರೂ ಮುಖ್ಯವಾಗಿ ಈ ಸೂಚನೆ ಗಮನಿಸಬೇಕು. ಅಸಂಖ್ಯಾತವಾಗಿ ಹೊರಡು ತ್ತಿರುವ ಪತ್ರಿಕೆಗಳಲ್ಲಿ ವಾರವಾರವೂ ತಿಂಗಳುತಿಂಗಳೂ ಕತೆಗಳು ಪ್ರಕಟವಾಗು ತ್ತಿರುವುವಷ್ಟೆ. ಈ ಕತೆಗಳಲ್ಲಿ ಓ ಹೆನ್ರಿ, ಮೋಪಸಾ, ಜೇಕಬ್ಸ್, ಓನೀಲ್, ಗಾಲ್ಸ್ ವರ್ದಿ ಮುಂತಾದವರ ಕತೆಗಳೆಲ್ಲಾ ಬಗೆಬಗೆಯ ವೇಷಗಳನ್ನು ಹಾಕಿಕೊಂಡು

ಬೇರೆಬೇರೆ ಬರಹಗಾರರ ಹೆಸರಿನಲ್ಲಿ ಬರುತ್ತಿವೆ. ನಮ್ಮ ಎಲ್ಲ ಸಂಪಾದಕರಿಗೆ ಈ ಕೃತಿಚೌರ್ಯ ತಿಳಿಯುವುದು ಸಾಧ್ಯವಿಲ್ಲ. ಅನೇಕ ವೇಳೆ ಹೊಸದಾಗಿ ಸಾಹಿತಿಗಳಾಗುತ್ತಿರುವವರೂ ಹಳೆಯ ಹೆಸರಾದ ನುರಿತ ಸಾಹಿತಿಗಳೂ ಗಮನಿಸಬೇಕಾದ ಅಂಶ ಮತ್ತೊಂದಿದೆ. ಆಧುನಿಕ ಜ್ಞಾನಾರ್ಜನೆಯ ಸೌಕರ್ಯದಿಂದ ಜನರಲ್ಲಿ ತಿಳಿವಿನ ಮಟ್ಟ ದಿನದಿನಕ್ಕೂ ಹೆಚ್ಚುತ್ತಿದೆ. ಅವರು ಕತೆಗಾರನಲ್ಲಿ ಹೆಜ್ಜೆಹೆಜ್ಜೆಗೂ ಉತ್ತಮತೆಯನ್ನು ನಿರೀಕ್ಷಿಸುತ್ತಾರೆ. ಆಧುನಿಕ ನಾಗರಿಕತೆಯ ಸೌಕರ್ಯಗಳಿಂದ, ಒಬ್ಬನ ಕೃತಿಯನ್ನು ಮತ್ತೊಬ್ಬನ ಕೃತಿಯೊಂದಿಗೆ ಹೋಲಿಸಲು ಅನುಕೂಲಗಳಿವೆ. ನಿನ್ನೆಯ ಸಂಗೀತಗಾರನೊಂದಿಗೆ ಇವತ್ತಿನ ಸಂಗೀತಗಾರ, ನಿನ್ನೆಯ ನಟನೊಂದಿಗೆ ಇಂದಿನ ನಟ, ನಿನ್ನೆಯ ಕತೆಗಾರನೊಂದಿಗೆ ಇಂದಿನ ಕತೆಗಾರ ಈ ಸ್ಪರ್ಧೆಯಲ್ಲಿ ನಾವು ಜಗತ್ತನ್ನೇ ಎದುರಿಸಬೇಕು. ಜನ ಒಳ್ಳೆಯದನ್ನು ಸ್ವಾಭಾವಿಕವಾಗಿ ಸಾಯಗೊಡುವುದಿಲ್ಲ. ಎತ್ತಿ ಹಿಡಿಯುತ್ತದೆ. ಆದರೆ ಕೆಟ್ಟದ್ದನ್ನು ಜನ ಹೆಚ್ಚು ಕಾಲ ಅಪ್ಪುವುದಿಲ್ಲ. ನಮ್ಮದು ಎಂಬ ಮಾತ್ರದಿಂದಲೂ ಜನ ಕೆಟ್ಟದ್ದನ್ನು ಪ್ರೋತ್ಸಾಹಿಸುವುದಿಲ್ಲ. ಕನ್ನಡ ಚಲನ ಚಿತ್ರ, ನಾಟಕ ಸಂಗೀತ ನಡೆಯುತ್ತಿದ್ದರೂ, ಅವು ಸರಿಯಾದ ಮಟ್ಟಕ್ಕೆ ಬರದಿದ್ದರೆ ಜನ ತಮಿಳು ತೆಲುಗು ಹಿಂದಿ ಇಂಗ್ಲಿಷ್ ಚಿತ್ರಗಳಿಗೆ ಹೋಗುವಂತೆ. ಕನ್ನಡ ಲೇಖಕರು ತಮ್ಮ ಅಪಾಯವನ್ನು ಸರಿಯಾಗಿ ಅರಿತುಕೊಳ್ಳದಿದ್ದರೆ ಅವರಿಗೂ ಅದೇ ಗತಿ ಬಂದೀತು. ಕನ್ನಡ ಲೇಖಕರೂ ಕಾದಂಬರಿಕಾರರೂ ಸಣ್ಣ ಕತೆಗಾರರೂ ಕವಿಗಳೂ ತಪಸ್ಸುಮಾಡಿ ಜನತಾಜನಾರ್ದನನಿಗೆ ಅರ್ಹವಾದ ಕೃತಿಗಳನ್ನು ಒಪ್ಪಿಸಿ ಜನತೆಯನ್ನು ಒಲಿಸಿಕೊಳ್ಳಬೇಕು. ಕೃತಿ ಸರಿಯಾದ ಮಟ್ಟಕ್ಕೆ ಬರದಿದ್ದರೆ ಇಂಗ್ಲಿಷ್ ಬಲ್ಲವನು ಇಂಗ್ಲಿಷ್ ಸಾಹಿತ್ಯಕ್ಕೆ ಹೋಗುತ್ತಾನೆ. ತಮಿಳು ಬಲ್ಲವರು ತಮಿಳಿಗೆ; ಹಿಂದಿ ಬಲ್ಲವರು ಹಿಂದಿಗೆ; ಉರ್ದುದವರು ಉರ್ದುಗೆ; ತೆಲುಗರು ತೆಲುಗಿಗೆ; ಮರಾಠಿ ಬಲ್ಲವರು ಮರಾಠಿಗೆ. ಈ ದುರದೃಷ್ಟದ ಕನ್ನಡ ನಾಡಿನಲ್ಲಿ ಕನ್ನಡಿಗರನ್ನು ಎಳೆಯಲು ಇಷ್ಟು ಭಾಷೆಗಳೂ ಸಂಚುಮಾಡುತ್ತಿವೆ.

ಜನ ನಮ್ಮ ಬಂಜೆತನವನ್ನು ಕಂಡು, ಬಿಟ್ಟು, ಬೇರೆ ಕಡೆಗೆ ತಿರುಗಿಬಿಡುವುದಕ್ಕೆ ಅವಕಾಶ ಕೊಡದೆ ಪ್ರತಿಯೊಬ್ಬ ಕತೆಗಾರನೂ ತನ್ನದಾದ ಅತ್ಯುತ್ತಮ ಕೃತಿಯನ್ನೇ ಜನತೆಗೆ ನೀಡುತ್ತಾ ಹೋಗಬೇಕು.

'ಮಸಿ ಕುಡಿಕೆಯನು ಬಿಸುಡು, ಲೇಖನಿಯನೆಸೆಯತ್ತ,
ಪ್ರಖರ ಧೀ ಲೇಖನಿಯಿನೆದೆಯ ತೋಡು;
ಬಿಸಿ ರಕ್ತ ಉದಿದು ಬರೆ ಅದನದ್ದಿ ನೀನು ಬರೆ
ಮೂಡುವುದು ನಿನ್ನದೇ ಹೊಸತು ಹಾಡು.'

ಗೊರೂರು ರಾಮಸ್ವಾಮಿ ಅಯ್ಯಂಗಾರ್

೫. ನಾಡಿನಲ್ಲಿ ಕಲೆಗಳ ಮೆಲ್ನಡೆ

ಯಾವುದೊಂದು ದೇಶದ ಇಲ್ಲವೆ ಕಾಲಮಾನದ ಅಭಿವೃದ್ಧಿ, ಸುಖಸಂತೋಷ, ಉತ್ಸಾಹ, ನಯಗಾರಿಕೆ—ಇವುಗಳನ್ನೇ ಅಳೆಯಲು ನಮಗೆ ಸಹಾಯವಾಗುವ ಹಿರಿಯ ಸಾಧನಗಳೆಂದರೆ ಆಯಾ ಕಾಲದ, ಜನದ ಕಲೆಗಳು. ಪ್ರಭಾವಶಾಲಿಯಾದ ಕಲೆಗಳ ನಿರ್ಮಾಣಕ್ಕೆ ಸಮಾಜದ ಪರಿಸ್ಥಿತಿಯೇ ಕಾರಣ; ಸಮಾಜದ ಪರಿಸ್ಥಿತಿಯನ್ನು ಮಾರ್ಪಡಿಸುವುದರಲ್ಲಿ ಕಲೆಗಳ ಪ್ರಭಾವ ಬೀರುತ್ತವೆ. ಮನುಷ್ಯಸಂಸ್ಕೃತಿಯೊಡನೆ ನಿಕಟವಾಗಿ ಹೊಂದಿರುವ ವಸ್ತು ಕಲೆ. ಜಡವಾದ ಸಮಾಜದಲ್ಲಿ ಅದರ ನಡಿಗೆ ತೀರ ಮೆಲ್ಲದೆ; ತೃಪ್ತಜನರಲ್ಲಿ ಅದು ಉಲ್ಲಾಸದ ರೂಪ ತಾಳುವುದು; ಅತೃಪ್ತರ ಎಡೆಯಲ್ಲಿ ಬೆಳೆಯುವ ಕಲೆಗಳು ತುಂಬ ತೀಕ್ಷ್ಣ. ಈ ಮಾನದಿಂದಲೇ ನಮ್ಮ ಕನ್ನಡನಾಡಿನ ಜನಜೀವನದ ಬೆಳವಣಿಗೆಯನ್ನು ಅಳೆದರೆ—ಈ ಇಪ್ಪತ್ತನೆಯ ಶತಮಾನವು ಆಶಾದಾಯಕವಾಗಿಲ್ಲ. ಕಲೆಗಳ ಹೆಸರಿಗೆ ಪಾತ್ರವಾದ ಸಂಗೀತ, ಚಿತ್ರ, ವಾಸ್ತು, ಶಿಲ್ಪ, ನೃತ್ಯ, ನಾಟಕ ಮೊದಲಾದವುಗಳಲ್ಲಿ ಕೆಲವು ನಾಡಿನಲ್ಲಿ ಕಾಲಿರಿಸಿದಂತೆಯೇ ಇಲ್ಲ. ಇನ್ನು ಕೆಲವು ಬರಿದೆ ಬದುಕಿ ಉಳಿದಿವೆ. ಅವುಗಳ ಕಾಯ-ಮನಸ್ಸುಗಳೆರಡೂ ನಿನ್ನೆಯವು. ಇಂದಿನ ಬದುಕಿನ ರೂಪವೂ ನಮಗೆ ಕಾಣಸಿಗುವಂತಿಲ್ಲ; ಸೃಷ್ಟಿಯೂ ಕಾಣುತ್ತಲಿಲ್ಲ. ಸಾಹಿತ್ಯ, ಕಲೆಗಳಲ್ಲಿ—ಕನ್ನಡ ನಾಡನ್ನು ಎಣಿಸುವಲ್ಲಿ ಮೊದಲಿನದೇ ಅದೃಷ್ಟಶಾಲಿಯೆನ್ನಬೇಕು. ಅರ್ಧ ಶತಮಾನ ಮುಗಿಯಲು ಇನ್ನೈದು ವರ್ಷಗಳೇ ಉಳಿದುವು. ಚೇತನಮಯ ಜನಜೀವನದಲ್ಲಿ—ಕಲೆಗಳ ವಿಕಾಸ, ಪ್ರಗತಿಗಳಿಗೆ ಇಷ್ಟು ಕಾಲ ಧಾರಾಳವಾಯಿತು. ಆದರೂ ನಮ್ಮ ಜನಗಳ ಪಾಲಿಗೆ ಅದು ವ್ಯರ್ಥವಾಗಿದೆ. ಇರುವ ದೇಸೀ—ಕಲಾಪಂಥಗಳು ಬರಿದೆ ಉಳಿದಿವೆ; 'ಮಾರ್ಗ'ಗಳೂ ಮುಂದುವರಿದಿಲ್ಲ.

ಮೊದಲು ನಾವು ಸಂಗೀತದ ವಿಚಾರವನ್ನೇ ಎತ್ತಿಕೊಳ್ಳೋಣ. ಅದೇ ಬಹು ಜನಗಳ ಪಾಲಿನ ಒಂದು ಕಲೆ. ನಮ್ಮ ಜನಗಳಲ್ಲಿ ಅದರ ವಿಶಾಲ ಸಂಪರ್ಕವಿದೆ. ನಾನು ಅದನ್ನಾಗಲಿ, ಇನ್ನಾವ ಕಲೆಯನ್ನಾಗಲಿ ನೋಡುತ್ತಿರುವ ದೃಷ್ಟಿ— ಪಾಂಡಿತ್ಯದ ದೃಷ್ಟಿಯಲ್ಲ. ನನ್ನ ಪಾಲಿಗೆ ಕಲೆ ಶಾಸ್ತ್ರವಲ್ಲ. ಅದು ಕಲಾವಿದನ ಬದುಕಿನ ಅರಳುವಿಕೆ. ಕಲಾವಿದನ ಭಾವವನ್ನು ಬಿಂಬಿಸಲು ಅವನ ಶಾಸ್ತ್ರ ಏನು ಕೆಲಸಮಾಡುತ್ತಿದೆ—ಎಂಬುದು ನನಗೆ ಮುಖ್ಯ. ಅದನ್ನೇ ನಾನು ಸೃಷ್ಟ್ಯಾತ್ಮಕ ಕಲೆ (Creative Art) ಎಂದು ತಿಳಿಯುವುದು. ಈ ಕೆಲಸ ಮಾಡುವುದಕ್ಕಾಗಿ ಶಾಸ್ತ್ರ ಬೆಳೆಯುತ್ತದೆ, ಅಳಿಯುತ್ತದೆ, ಉಳಿಯುತ್ತದೆ. ಅದನ್ನು ಬಿಟ್ಟಿರುವ ಶಾಸ್ತ್ರ ಏನಿದ್ದರೂ ಅದು ಬರಿಯ ಕಸುಬು

ಗಾರಿಕೆ. ಬೇಕಾದರೆ ಅದಕ್ಕೆ "ಪಾಂಡಿತ್ಯ" ಎಂಬ ಗೌರವದ ಹೆಸರನ್ನು ನೀವು ಸಲ್ಲಿಸಿರಿ. ಪಾಂಡಿತ್ಯ ಪಾಠಸಾಧ್ಯ; ಪರಂಪರೆಯಿಂದ ಬರಬಲ್ಲುದು. ಸೃಷ್ಟ್ಯಾತ್ಮಕ ಕಲೆ ಮಾತ್ರ ವ್ಯಕ್ತಿಯಸೃಷ್ಟಿ. ಅವನನ್ನು ಆವರಿಸಿರುವ ಸಮಾಜವನ್ನೇ ಅದು ಹೊಂದಿದೆ.

ಸಂಗೀತದಲ್ಲಿ ನಮ್ಮ ದೇಶದಲ್ಲೇ ಎರಡು ಪಂಥವಿರುವುದು ಗೊತ್ತು : ಮಾರ್ಗ, ದೇಶೀ—ಗಳು. ದೇಸೀ—ಈಗ ಬರಿಯ ಜನತೆಯಲ್ಲಿ ಉಳಿದು ಬಂದಿರುವ ಹಾಡುವ ರೀತಿ. ಅಲ್ಲಿ ರಾಗಪ್ರಸ್ತಾರ, ತಾಳಪ್ರಸ್ತಾರ (ಯಕ್ಷಗಾನ ಬಿಟ್ಟರೆ) ವಿಶೇಷ ಬೆಳೆದಿಲ್ಲ. ಕಾರಣ ಅದು ರಾಗದ ಅಪೂರ್ವ ಸಂಖ್ಯೆಯ ಮೇಲೆ ತನ್ನ ಜೀವಿತವನ್ನೇ ಹೊಂದಿಸಿಲ್ಲ. ಅಲ್ಲಿ ಶೈಲಿ, ರಚನೆಗಳೇ ಕೃತಿಯ ಜೀವಾಳಗಳು. ಅದರಲ್ಲಿ ಬೆಳವಣಿಗೆಯ ವಿಮರ್ಶೆ ಮುಂದೆ ಮಾಡುತ್ತೇನೆ.

ಈ ಶತಮಾನ ಕಾಲಿರಿಸುವ ಎಷ್ಟೋ ಮುಂಚೇನೆ—ನಮ್ಮ ನಾಡಿನ ಉತ್ತರಾದಿ (ಹಿಂದುಸ್ತಾನಿ), ದಕ್ಷಿಣಾದಿಗಳು—ಬೆಳೆದು ಬಂದ ಗಾನಪದ್ಧತಿಗಳು. ಅವುಗಳ ವೈಖರಿಯನ್ನು ಕನ್ನಡಿಗರೇ ಆದ ಶೇಷಣ್ಣನವರು, ಬಿಡಾರಂ ಕೃಷ್ಣಪ್ಪನವರು, (ಕುಂದಗೋಳದಲ್ಲಿ ಬಹುಕಾಲ ಬಾಳಿದ) ಅಬ್ದುಲಕರೀಮರು ಸಾಧಿಸಿದರು. ಇಂದಿಗೂ ಆ ಪರಂಪರೆಯ ಹಾಡುಗಾರರು ವಾದನಕಾರರು ನಮ್ಮಲ್ಲಿ ಹಲವರು ಇದ್ದಾರೆ. ಅವರಲ್ಲಿ ಶ್ರೀ ಬಿಡಾರಂ ಅವರು ಪುರಂದರದಾಸರ ಸಾದಾ ಜಾನಪದಗೀತೆಗಳಿಗೆ, 'ಕೃತಿಗಳ' ಬೆಡಗನ್ನೇ ಒಪ್ಪಿಸಿದರು. ಈ ಮಾರ್ಗಪದ್ಧತಿಯ ಶಾಸ್ತ್ರಪಾಂಡಿತ್ಯವನ್ನು ತೋರಿಸಿದ, ತೋರಿಸಬಲ್ಲ ವಿದ್ವಾಂಸರು ಈಗ ನಮ್ಮ ನಾಡಿನಲ್ಲಿ ಇದ್ದಾರೆ. ಆದರೂ ತಮಿಳು ದೇಶವನ್ನು ನಾವು ದಕ್ಷಿಣಾದಿಯಲ್ಲಿ ಸೋಲಿಸುವ ಮಟ್ಟದಲ್ಲಿಲ್ಲ. ಈ ಶತಮಾನದ ನಡೆಯನ್ನೆ ನಾವು ಅಳೆಯಬೇಕಾದರೆ ನಾವು—ಕೃತಿನಿರ್ಮಾಣದಲ್ಲಿ ಕಾಣಬೇಕಾಗುತ್ತದೆ! ನಮ್ಮ ಮಾರ್ಗಗೀತದ ಕೃತಿಗಳೆಲ್ಲ ವಿರಕ್ತಿ, ಭಕ್ತಿಗಳಿಗೆ ಮೀಸಲು. ಆದುದರಿಂದ ಸೂರದಾಸ, ತುಲಸಿದಾಸ ತ್ಯಾಗರಾಜರಂಥವರು, ತಮ್ಮ ಬದುಕಿನ ಬಿಂಬವನ್ನು ಸಾರಿದರು. ಆದರೆ ಈಗಿನ ನಮ್ಮವರು? ಆಳದ ಭಕ್ತಿಯಿಲ್ಲದೆ ಭಕ್ತಿನಾಟಕ ಕವನಗಳನ್ನು ಹೆಣೆದು, ಅದನ್ನು ತಾಲ, ಪಲ್ಲವಿಗಳ ಚಮತ್ಕಾರಕ್ಕೆ ತಿರುಗಿಸಿದ ನಿದರ್ಶನಗಳಿವೆ—ಹೊರತು, ಅನುಭವದ ಆಳಕ್ಕೆ ಗೀತದ ಮೈಯನ್ನಿತ್ತು ನಿರ್ಮಿಸಿದ ಉದಾಹರಣೆಗಳಿಲ್ಲ.

ಕಾರಣವಿಷ್ಟೆ. ಇಂದಿನ ಗಾನಕಾರರ ಬದುಕು ಎಲ್ಲರ ಬದುಕಿನಂತೆ ಪ್ರಾಪಂಚಿಕವಾಗಿದೆ. ಅವರು ತಮ್ಮ ನಿತ್ಯಸುಖದುಃಖಗಳ ಕೃತಿಗೆ ಗಾನವನ್ನು ಮೀಸಲಿರಿಸುವ ಬದಲು, ತಮ್ಮದಾಗಿರದ ಭಕ್ತಿಯನ್ನೇ ನಟಿಸುತ್ತಿದ್ದರೆ —ಶಾಸ್ತ್ರ ಕಂಡೀತು; ಸೃಷ್ಟಿ ಉಂಟಾಗಲಾರದು.

ಮಾರ್ಗಪದ್ಧತಿಯಿಂದಲೇ ಅವತರಿಸಿದ ಸಂಗೀತ—ನಾಟಕಸಂಗೀತ. ಇದರಲ್ಲಿ ಉತ್ತರ ಕರ್ಣಾಟಕದ ಜನರು ಮಹಾರಾಷ್ಟ್ರರ ಧಾಟಿಗಳನ್ನು ಅಪಹರಿಸಿ ಅದಕ್ಕೆ—ಕನ್ನಡ ಅಕ್ಷರಗಳನ್ನು ತುಂಬಿಸಲು ಯತ್ನಿಸಿದ್ದಾರೆ. ಅಲ್ಲಿ ಕನ್ನಡಿಗರ ಸ್ವಂತ ಸರಕಿಲ್ಲ, ಗೀತಕೃತಿಗಳು ಒಂದೇ ಕಾಲಕ್ಕೆ ಉದಯಿಸಿದ 'ಕವನ'—'ಕೃತಿಗಳು' ಹೊರತು, ಯಾರದೊ ಮೈಗೆ ಯಾವುದೋ ಅಂಗಿ ಸೇರಿಸುವ ಬಗೆಗಳಲ್ಲ. ದಕ್ಷಿಣಾದಿಯಿಂದಲೂ ನಾಟಕಿ ಹಾಡುಗಳು ಉದ್ಭವಿಸಿದುವು. ಆದರೆ ಶ್ರೀ ವರದಾಚಾರ್ಯರಂತಹರ ಪ್ರೇರಣೆಯಲ್ಲಿ ಅನೇಕ ಸ್ವತಂತ್ರ ಕೃತಿಗಳು ಆದಂತೆ ಕಾಣುತ್ತದೆ. ಅನೇಕ ಶೃಂಗಾರ ಪರವಾದ ಅವರ ಹಾಡುಗಳು—'ನೀಲಕುಂತಳೆ' 'ನೀರಜಗಂಧಿಯ ಮುಖ ನೀರಜವಸು' ಇತ್ಯಾದಿಗಳು, ಈಗ ಹಳಸಿ ಹೋದರೂ—ಸಾಮಾನ್ಯವಾದ ನಡೆಗಳು. ಇವುಗಳನ್ನು ಒಟ್ಟು ಹಾಕಿ ನಾವು ವಿಮರ್ಶಿಸಿದರೆ ನಮಗೆ ಕಾಣಬಹುದಾದ ಒಂದು ಸಂಗತಿಯೆಂದರೆ—ಮಾರ್ಗರೀತ್ಯಾ ಬೆಳೆದು ಬಂದಿರುವ ಗೀತ ಏಕೋ—ಉತ್ಸಾಹ, ಶೃಂಗಾರ, ವೀರಗಳನ್ನು ಚಿತ್ರಿಸುವುದರಲ್ಲಿ ನಾವು ಇನ್ನೂ ಯಶಸ್ವಿಯಾಗಿಲ್ಲವೆಂಬುದು. ೧೯೨೦-೩೦ರಲ್ಲಿ ಅಪಾರವಾಗಿ ರಾಷ್ಟ್ರಗೀತೆಗಳು ನಮ್ಮ ನಾಡಿನಲ್ಲಿ ಹುಟ್ಟಿದುವು. ನಿಜಕ್ಕೂ ಜನರ ಕೆಚ್ಚು—ಗೀತಕೃತಿಗಳಿಗೆ ಜನ್ಮ ಕೊಡಬೇಕಿತ್ತು. ಆದರೆ ಅಲ್ಲೂ "ಚರಕಾ ಚಲಾ ಚಲಾಕೇ"—ಎಂಬ ಅನುಕರಣೆಯ ರೋದನ! 'ಉದಯವಾಗಲಿ ನಮ್ಮ' ಎಂದು ಮಲೇರಿಯದವನ ಉದಯರಾಗ. ಬಂಕಿಮರ 'ವಂದೇಮಾತರಂ' ಹೇಳಿದರೂ—ಅಳುವೇ ಶ್ರುತಿ. 'ದ್ವಿತ್ರಿಂಶತ್' (ಅವರ, ಸಪ್ತ) ಕೋಟಿ ಕಂಠ ಕಲಕಲನಿನಾದ ಕರಾಲೇ—ಎಂಬ ಉಸಿರೇ ಹೊರಡುವಂತಿಲ್ಲ.

ಈಗ ಸಿನೆಮಾ ಗೀತ ಒಂದಿದೆ! ಪೊಮೇಡ್ ವೆಸಲೀನಷ್ಟು ಅಗ್ಗ, ಜನಪ್ರಿಯವಾಗಿದೆ. ಆದರೆ ಹೇತುವೇನು! ಏನು—ಸಾರ್ಥಕ? ಇವುಗಳನ್ನು ನೋಡಲು ನಮ್ಮ ಜನರು ಇನ್ನೂ ಅಳುಯುಗದಲ್ಲಿರುವಂತೆ ಕಾಣುತ್ತದೆ. ಹೊಟ್ಟೆ ತುಂಬ ಗಾಯಕ ನಗಬೇಕು, ರುದ್ರನಾಗಬೇಕು, ಕವಿಯಂತೆ ಧ್ವನಿಗಳ ವಿಶ್ವಕರ್ಮನಾಗಬೇಕು. ನಮ್ಮ ಶಾಸ್ತ್ರಕಾರರು—ತಮ್ಮ ಗಮನವನ್ನು ಸ್ವರಪ್ರಸ್ತಾರಗಳಲ್ಲಿ ಆರೋಹ ಸಂಚಾರಕ್ಕೂ—ಉತ್ಸಾಹ, ಉಕ್ಕು, ಕೆಚ್ಚುಗಳಿಗೂ ಅವರೋಹಕ್ಕೂ, ಉದಾಸೀನ, ದುಃಖ, ಜಡತೆಗಳಿಗೂ ಇರುವ ನಿಕಟ ಸಂಬಂಧವನ್ನು ಪರಿಶೀಲಿಸಿ, ಕೃತಿ ನಿರ್ಮಾಣದಲ್ಲಾಗಲಿ, ಪ್ರದರ್ಶನದಲ್ಲಾಗಲಿ—ಆರೋಹ, ಅವರೋಹಗಳ ಪ್ರಮಾಣವನ್ನು, ಸ್ಥಾನಗಳನ್ನು ನಿರ್ಧರಿಸಬೇಕಾದೀತು.

ದೇಸೀ ಸಂಗೀತ ಇನ್ನೂ ದೇಸೀ ಆಗಿ—ಉಳಿದಿದೆ. ಅದಕ್ಕೆ ಮನ್ನಣೆಯೂ ಇಲ್ಲ. ಪುರಸ್ಕಾರವೂ ಇಲ್ಲ. ಈ ಶತಮಾನದ ಹಲವಾರು ಯಕ್ಷಗಾನದ ಹಾಡುಗಳು

ಉಕ್ಕು, ರೌದ್ರ ಮೊದಲಾದ ಭಾವಗಳುಳ್ಳ ರಚನೆಯನ್ನು ನಮಗೆ ಕೊಟ್ಟಿವೆ. ನಮ್ಮ ಲಾವಣಿಕಾರರು ಅನೇಕ ಲಾವಣಿಗಳನ್ನು ಕಾದುಕೊಂಡು ಬಂದಿದ್ದಾರೆ. ಆದರೆ ಈ ಭಾಗದಲ್ಲಿ ತುಂಬ ಹೇಳಬಹುದಾದ ಕೃತಿ ನಿರ್ಮಾಣದ ಶ್ರೇಯಸ್ಸು ಗಾಯಕರೆಂದು ತಾವೇ ತಿಳಿದಿಲ್ಲದ ಶ್ರೀಮಾನ್ ಬೇಂದ್ರೆಯವರಿಗೆ. ಅವರ ಎಷ್ಟೋ ಹಾಡುಗಳು 'ಕವನ'ದ ತೂಕಕ್ಕೆ ಸರಿಯೊಪ್ಪುವಂತೆ, ದೇಸೀಯವಾದರೂ ಉತ್ತಮ ಗೀತ ಕೃತಿಗಳೇ.

ಗೀತದ ವಿಚಾರವಾಗಿ ವಿಮರ್ಶಿಸುವಾಗ—ಈಗೀಗ ತುಂಬ ಪ್ರಚಾರಕ್ಕೆ ಬಂದಿರುವ 'ಗಮಕ'ದ ವಿಚಾರ. ಈ ರಾಜ್ಯದಲ್ಲಿ, ಈ ಶತಮಾನದಲ್ಲಿ ಮೊದಲಿಗರಾಗಿಯೂ ಯಶಸ್ವಿಯಾಗಿಯೂ ನಿಲ್ಲುವವರೆಂದರೆ ಶ್ರೀಮಾನ್ ಬಿಂದುರಾಯರು. ನಮ್ಮಲ್ಲಿ ಅನೇಕ ರಾಗಜ್ಞರು ರಾಮಾಯಣ ಭಾರತ ವಾಚನಗಳಿಗೆ ಕೈಯಿಕ್ಕಿದ್ದಾರೆ. ಅವರ ಮೊದಲಿನ ಕೊರತೆಯೇ ತಾವು ರಾಗಜ್ಞರೆಂಬ ಪ್ರಜ್ಞೆಯುಳ್ಳವರಾಗಿರುವುದು. ಸಾಮಾನ್ಯವೇ ಆದ ರಾಗಜ್ಞಾನವುಳ್ಳ ಭಾವಜ್ಞರವರಾದರೆ ಸಾಕಿತ್ತು. ಕಾರಣ, ಷಟ್ಪದಿಯ ಹಾಡುಗಳು ನಿಯತಚರಣ, ಶಬ್ದವಿಭಾಗದ ಕವಿಗೆ ಈಡಾದ ಸಾಹಿತ್ಯ. 'ಕೃತಿ'ಯಾಗಿ ಜನ್ಮವೆತ್ತಿದ ತುಣುಕುಗಳಲ್ಲ. ಸಾಹಿತ್ಯವನ್ನೆ ಮುಂದಿರಿಸಿ ನಿರ್ಮಿಸಿದ ಆಕೃತಿಗಳಿಗೆ ನಾವು ತ್ಯಾಗಯ್ಯನವರ 'ಕೃತಿ'ಗೆ ಕೊಟ್ಟ ಮೆರುಗುಕೊಡಲು ಬಂದರೆ ತಪ್ಪು. ಅದು ಸಾಹಿತ್ಯವನ್ನು ನುಂಗೀತು. ಬರಿಯ ಸಂಗೀತ ಶೈಲಿಯ ಒಪ್ಪ ಅದಕ್ಕೆ ಬೇಕೇ ಹೊರತು, ಪಾಂಡಿತ್ಯ ಚಮತ್ಕಾರ ಅಲ್ಲ. ಹೀಗಾಗಿ ಕೃತಿಗಳನ್ನು ಹಾಡುವ ನಮ್ಮ ಗವಯಿಗಳು ಅದನ್ನು ಮರೆತು ರಾಗತಾಲದ ಪ್ರಜ್ಞೆಯಲ್ಲಿ ಸುತ್ತುವರಿಯುತ್ತಿರಲು, ಅಂಥವರು ಗಮಕಕ್ಕೆ ಕೈಯಿಕ್ಕಿದರೆ ಗತಿಯೇನು!

ಷಟ್ಪದಿಯು ಕೆಲವೊಂದು ವಿಧದಿಂದ ಹಾಡಲು ಬಂತೆಂದು ಉಳಿದೆಲ್ಲಾ ಸಾಹಿತ್ಯ ಬರುತ್ತದೆಂದು ತಿಳಿಯಬಾರದು. ಹಾಡುವ ಉದ್ದೇಶದಿಂದ ಬರೆದುವು ಹಾಡಬರುವಂತೆ, ಅದಿಲ್ಲದೆ ಬರೆದುವುಗಳನ್ನು ಹಾಡಬರದು. ಈ ವಿಷಯದಲ್ಲಿ ಕಲ್ಲನಾಗನನ್ನು, ತಾಲಲಯಗಳ ಕಟ್ಟಿಗೆ ಸಿಲುಕಿಸಿ ಹಾಡಿಸುವ ಯತ್ನ, ಗಮಕವಂತು ಆಗಲಾರದು. ಹಾಗೆ ಪ್ರಯತ್ನಿಸಿ ವರ್ತಮಾನ ಪತ್ರಗಳನ್ನು 'ಗಮಕಿಸಿ'ಬಿಡುವುದು ಅಸಾಧ್ಯವೆ? ಬೇಕಾದಲ್ಲಿ ಜಗ್ಗಿಬಿಟ್ಟರೆ ಅವೂ ತಾಳಕ್ಕೆ ಬರುತ್ತವೆ.

ನೃತ್ಯ—ಸಂಗೀತದ ಬೆನ್ನಿಗೆ ಇದನ್ನು ಅವಲೋಕಿಸುವ. ಈ ಶತಮಾನ ಕಾಲಿರಿಸಿ ಬಹು ವರ್ಷಗಳ ಬಳಿಕ ಅಂದರೆ ಬರಿಯ ಹತ್ತೆಂಟು ವರ್ಷಗಳಿಂದೀಚೆಯೆಂದರೂ ಸಲ್ಲುವುದು—ಜನರ ಅನಾದರಕ್ಕೆ ಪಾತ್ರವಾಗಿದ್ದ ಈ ಕಲೆಯು ಮನ್ನಣೆಗೆ ಪಾತ್ರವಾಗುತ್ತಿರುವುದೇ ಹಿರಿಯ ವಿಷಯ. ಇದೇ ಶತಮಾನದ ಆದಿಯಲ್ಲಿ ಕನ್ನಡ

ನಾಡಿನ ಹಲವು ಭಾಗಗಳಲ್ಲಿ ದೇವರ ಮುಂದೆಯೂ, ಮದುವೆಮುಂಜಿಗಳಲ್ಲೂ— ಭರತನಾಟ್ಯವಾಡಿಸುವ ರೂಢಿಯಿತ್ತು. ಅದನ್ನು ಪ್ರದರ್ಶಿಸುವವರು ದೇವದಾಸಿಯರು. ದೇವರ ಸೇವೆಗಳಲ್ಲಿ ಅದು ಒಂದಾಗಿ ಉಳಿದಿದೆ. ಆದರೆ ಅದನ್ನು ನೃತ್ಯವೆಂದು ಅವಲೋಕಿಸುವವರು ಕಡಮೆ. ಇನ್ನು ಮದುವೆಮುಂಜಿಗಳಲ್ಲಿ ಅವುಗಳ ಪ್ರದರ್ಶನವಾಗುವುದು ನಿಂತೇಬಿಟ್ಟಿತು. ಕಾರಣ—ಅದು ವೇಶ್ಯೆಯರ ಕಸುಬಾಗಿ ಉಳಿದುದರಿಂದ. ಈಚೆಗೆ ಉದಯಶಂಕರನಂಥ ವ್ಯಕ್ತಿಯು ಅದನ್ನು ಅಧುನಿಕ ಒಪ್ಪದಿಂದ ಬೆಳಕಿಗೆ ತರತೊಡಗಿದುದರಿಂದ—ನೃತ್ಯ ತಿರುಗಿ ಜನಪ್ರಿಯವಾಗ ತೊಡಗಿತು. ಚಲಚ್ಚಿತ್ರದ ಚೆಲುವೆಯರು ಅದನ್ನು ಸಾಧಿಸಿಕೊಳ್ಳತೊಡಗಿ—ತಿರುಗಿ ನೃತ್ಯ ಬೆಳಕಿಗೆ ಬಂದಿದೆ.

ಇಲ್ಲಿಯೂ ಮಾರ್ಗ ಮತ್ತು ದೇಸೀ ರೀತಿಗಳಿವೆ. ಮಾರ್ಗಪದ್ಧತಿ ನಮಗಿರುವುದು—ಭರತನಾಟ್ಯವೇ. ಅದರಲ್ಲಿ ಈ ಕಾಲದ ಬೆಳವಣಿಗೆಯನ್ನು ನಾವು ಕಾಣುತ್ತಲ್ಲಿಲ್ಲ. ಪ್ರಾಚೀನ ಕಾಲದ 'ಶಾಸ್ತ್ರ'ವನ್ನು ಕಾಣಬಹುದಾಗಿದೆ. ಈ ಶಾಸ್ತ್ರಪ್ರದರ್ಶನದಲ್ಲಿ ಪ್ರವೀಣೆಯರಾದ ಹಲಕೆಲವು—ದೇವದಾಸಿ ಮುದುಕಿಯರಿದ್ದಾರೆ. ಇದಕ್ಕೆ ಪ್ರತಿಯಾದ 'ದೇಸೀ'ಪದ್ಧತಿ ಜನರಲ್ಲಿ ಇನ್ನೂ ಪ್ರಚಾರದಲ್ಲಿದೆ. ಉತ್ಸವಗಳಲ್ಲಿ, ಕೋಲಗಳಲ್ಲಿ, ಹಬ್ಬಗಳಲ್ಲಿ ಕುಣಿಯುವ ಜನವರ್ಗವಿದೆ. ಕನ್ನಡದ್ದೇ ಆದ ಯಕ್ಷಗಾನ ನೃತ್ಯ ಕಥಾನಿದರ್ಶನಕ್ಕೆ ಬಳಕೆಯಾಗುತ್ತಿದೆ. ಇವಾವುದರಲ್ಲೂ ಬೆಳವಣಿಗೆಯೆಂಬುದು ಈ ಕಾಲದ ಹೆಸರಲ್ಲಿ ಉಂಟಾಗಿಲ್ಲ. ಅವು ಸತ್ತಿಲ್ಲ ಎಂಬುದೇ ಸಂತೋಷ. ದೇಸೀಪದ್ಧತಿಯಲ್ಲಿ—ಭಾವಾವೇಶದಿಂದ ತುಂಬಿ ಕುಣಿಯುವ ಬೈದ್ಯ, ಪರವ, ನಲಿಕೆಯವರನ್ನೂ, ಆಟದ ವೇಷಧಾರಿಗಳನ್ನೂ ನಾವು ಕಾಣಬಹುದು. ಕಾರಣವೆಂದರೆ—ಈ ಜನಪದ ನೃತ್ಯಗಳು ಭಾವಕ್ಕೆ ಅಡಿಯಾಳಾದ—ನೃತ್ತಗಳು, ಲಹರಿಶೀಲ ಗತಿವಿನ್ಯಾಸಗಳು. ಮಾತಿನ ಕೆಲಸವನ್ನು—ಹಾವದಿಂದ ತೋರಿಸುವ ಮೂಕಭಾಷೆಗಳಲ್ಲ. ಜನಪದ ನೃತ್ಯಗಳಲ್ಲಿ ಭಾವಕ್ಕೂ ತಾಲಗತಿಗೂ ನಿಕಟ ಸಂಬಂಧವಿದೆ. ಯಕ್ಷಗಾನ ತಾಲಪದ್ಧತಿಯು ಅತ್ಯಂತ ಮುಂದುವರಿದುದು. ಭರತನಾಟ್ಯದಂತಹ ಪ್ರದರ್ಶನಗಳಲ್ಲಿ—ತಾಲಶಾಸ್ತ್ರವೇ ಸ್ವತಂತ್ರ ವಸ್ತುವೆಂಬಷ್ಟು ಪ್ರಾಮುಖ್ಯತೆಯಿಂದ ತೋರಿಸಲ್ಪಡುತ್ತಿದೆ.

ಅಂತು ಕನ್ನಡಿಗರಾದ ನೃತ್ಯಕಾರರು ಕೆಲವರೇ ಆದರೂ—ಅವರ ಗಮನವೆಲ್ಲ "ಶಾಸ್ತ್ರ"ದ ಹೆಸರನ್ನು ತಗುಲಿಸಿಕೊಳ್ಳುವ ಆತುರದಲ್ಲಿ ಲೀನವಾದಂತಿದೆ. ಸಾಲದುದಕ್ಕೆ ಮಣಿಪುರಿ, ಕಥಕ್, ಕಥಕ್ಕಳಿ—ಎಂಬ ಅನ್ಯನಾಡಿನ ಹೆಸರುಗಳಲ್ಲಿ ಏನೋ ಹೆಚ್ಚಳ ಕಾಣುವ ಆತುರವಿದ್ದಂತೆ. ಸ್ವತಃ ಅವರಾಡುವ ಪ್ರದರ್ಶನಗಳಲ್ಲಿ—ಯಾವುದು ಯಾವುದೆಂದು ಗುರುತಿಸುವುದು ಕಷ್ಟವಾಗಿದೆ. ಆದರೆ ಹೆಸರಿನ ಭವ್ಯತೆಯ ಮೋಹ ತಪ್ಪಿಲ್ಲ. ಇಂದಿನ ಜನಜೀವನದ ಭಾವನೆಗಳಿಗೆ ತಕ್ಕ ರೂಪವನ್ನು ನಮ್ಮ ಜನಪದದ

ನೃತ್ಯಗಳು ಕೊಡಬಲ್ಲುವು. ಆದರೂ—ಶಾಸ್ತ್ರವೇ ಕಲೆಯೆಂದು ಮೈಮರೆತಿರುವ ಜನರಿಗೆ ಸಾದಾ ಜನಪದ ನೃತ್ಯಗಳ ಮೇಲೆ ಮಮತೆ ಉಂಟಾಗದಿರುವುದು ಆಶ್ಚರ್ಯವಲ್ಲ.

ಭರತ ನಾಟ್ಯವಾಡುವವರು ಸಹ—ಮಾತಿನದೇ ಕೆಲಸವನ್ನು ನೃತ್ಯದಲ್ಲಿ ಮಾಡಲು ಹೋಗದೆ, ನೃತ್ಯಕ್ಕೆ ಸ್ವಂತವಾದೊಂದು ಬೆಳವಣಿಗೆಯು ಹಬ್ಬಿದೆಯೆಂದು ತಿಳಿಯ ಬೇಕು. ಭರತಮುನಿಯ ಕಾಲದ ನಾಟಕದಲ್ಲಿ ನಾಟ್ಯ ಅಭಿನಯದ ಅಂಗವನ್ನು ಪೂರೈಸುತ್ತಿದ್ದಂತೆ, ನಾವೂ ಮಾತುಗೀತಗಳ ಉದ್ದೇಶವನ್ನು ಹಾವಭಾವಗಳಿಂದ ಸಾಧಿಸುವುದರ ಪುರುಷಾರ್ಥವೇನು?

ಶಿಲ್ಪ—ಶಿಲ್ಪದ ವಿಚಾರವಾಗಿ ಕನ್ನಡ ಏನೂ ಕೆಲಸಮಾಡಿಲ್ಲ. ಈಗಲೂ ಮಾಡಿಲ್ಲ. ಕನ್ನಡ ಶಿಲ್ಪಿಗಳ ಹೆಸರು ಮುಷ್ಟಿಯಲ್ಲೇ ಮುಗಿಯುತ್ತದೆ. ಶ್ರೀಮಾನ್ ಕೆ. ವೆಂಕಟಪ್ಪನವರು ಹೆಸರಾದ ಶಿಲ್ಪಿಗಳು. ಆದರೆ ಅವರ ಉತ್ತಮಕೃತಿಗಳೊಂದೂ ಸಾಮಾನ್ಯರ ಕಣ್ಣಿಗೆ ಕಾಣಸಿಗುವಂತೆಯೇ ಇಲ್ಲ. ಅವುಗಳ ಭಾವಚಿತ್ರವೊಂದೆರಡನ್ನು ಕಂಡ ನಾನು ಅವರ ಉತ್ತೀರ್ಣ ಶಿಲ್ಪಗಳ ಬಗ್ಗೆ ತುಂಬ ಆನಂದಪಟ್ಟಿದ್ದೇನೆ. ರಾಮನು ಹನುಮಂತನಿಗೆ ಮುದ್ರಿಕೆಯೊಪ್ಪಿಸುವ ಪ್ಲಾಸ್ಟರ ಕೃತಿ ತುಂಬ ಚೆನ್ನಾಗಿದೆ. ಆದರೆ ಮೂಲಕೃತಿಗಳ ಪಾಲಿಗೆ ಶ್ರೀಮಂತರ ಮಹಲುಗಳು, ಅರಮನೆಗಳು, ಮರೆ, ತಡೆಗಳಾಗಿರುವಾಗ ನಮಗಿದ್ದ ಶಿಲ್ಪಿಗಳೂ ಇಲ್ಲದಂತಾಗಿದೆ.

ಇನ್ನೂ ಕೆಲವೊಂದು ಪ್ರತಿಮೆಗಳನ್ನು ಕೆತ್ತಿದ ಶ್ರೀ ಸಿದ್ಧಲಿಂಗಶಾಸ್ತ್ರಿಗಳವರ ವಿಗ್ರಹಗಳು ಕೆಲವಿವೆ. ಇವು ಶಾಸ್ತ್ರೋಕ್ತ ಶಿಲ್ಪ ಪ್ರಮಾಣದ ಅಳತೆಯನ್ನು ಹೊಂದಿರುವುವಾದರೂ ದೇವವಿಗ್ರಹಗಳ ಪ್ರಾಚೀನ ಗಾಂಭೀರ್ಯವಾಗಲಿ, ಸೊಬಗಾಗಲಿ ಶೂನ್ಯವೇ ಎನ್ನಬೇಕಾಗುತ್ತದೆ. ಪ್ರಪಂಚದಲ್ಲಿ ನೂರಾರು ವರ್ಷಗಳಿಂದ ಈಚೆಗೆ ಬೆಳೆದಿರುವ ಶಿಲ್ಪಾನುಭವ, ಕುಶಲತೆ ಮತ್ತು ದೃಷ್ಟಿ ಪ್ರಕಾರಗಳು ನಮ್ಮ ಪಾಲಿಗೆ ಬರುವ ಹಾಗೆಯೇ ಇಲ್ಲವೇನೊ?

ಇಷ್ಟನ್ನು ಬಿಟ್ಟರೆ—ಬೇರೊಂದು ಹೆಸರೆಂದರೆ ಕಾಣದ್ದು. ಶ್ರೀ ಹಂಜೇ ರುದ್ರಪ್ಪನೆಂಬ ಕನ್ನಡಿಗರು ಶಾಂತಿನಿಕೇತನದಲ್ಲಿ ನಂದಲಾಲವಸುಗಳ ಶಿಷ್ಯರಾಗಿದ್ದು ಈಗ ಹೆಸರಾಗಿದ್ದಾರೆ. ನಾನು ಅವರನ್ನು ಸಂಧಿಸಿದುದು ಹದಿನೆಂಟು ವರ್ಷಗಳ ಹಿಂದೆ; ಅವರು ಕಲಾಭ್ಯಾಸತೊಡಗಿದಾಗ. ಈಗ ಪತ್ರಿಕೆಗಳಲ್ಲಿ ಅವರ ಪ್ರಶಂಸೆ ಕೇಳಿದ್ದೇನೆ. ಕೆಲವು ಸ್ಥೂಲಚಿತ್ರಗಳನ್ನು ಕಂಡಿದ್ದೇನೆ. ಆದರೆ—ಅವರ ಕೃತಿಗಳ ಪ್ರದರ್ಶನ ನಮ್ಮ ಪಾಲಿಗೆ ಇನ್ನೂ ಆಗಿಲ್ಲ.

ಚಿತ್ರಕಲೆ—ಶಿಲ್ಪಕ್ಕಿಂತ ತುಸು ಭಾಗ್ಯಶಾಲಿಯೆನಿಸಿದೆ ನಮ್ಮ ನಾಡಿನಲ್ಲಿ. ಆದರೂ ನಾಡಿನ ವಿಸ್ತಾರ, ಈ ದೀರ್ಘ ಕಾಲಮಾನದ ದೃಷ್ಟಿಯಿಂದ ನಾವು ಬಹಳ ಸಾಧಿಸಿಲ್ಲ.

ಕೇಳ ಹೆಸರಾದರವರಲ್ಲಿ ಶ್ರೀಮಾನ್ ವೆಂಕಟಪ್ಪನವರೇ ಹಿರಿಯರು; ಮುಖ್ಯರು. ಅವರ ಶಿವರಾತ್ರಿ, ನೀಲಗಿರಿ ದೃಶ್ಯಗಳು, ವೀಣೆಯ ಹುಚ್ಚು ಮೊದಲಾದುವು—ಕಲಾವಿದನ ಸೂಕ್ಷ್ಮತರ ಚಿತ್ರಣ ಮಾರ್ಗವನ್ನು ತೋರಿಸುತ್ತವೆ. ಇತ್ತೀಚೆಗೆ ವೀಣೆ ಶಿಲ್ಪಗಳ ಬೆನ್ನು ಹತ್ತಿ ಅವರೂ ಹೆಚ್ಚಿನ ಚಿತ್ರಕೆಲಸ ಮಾಡುತ್ತಿದ್ದಾರೋ ಇಲ್ಲವೋ ತಿಳಿಯದು. ಅವರು ತಮ್ಮ ಕಲಾಮಂದಿರವನ್ನು ತೆರೆಯುವ ಕಾಲ ಬೇಗ ಬರಲಿ.

ಈ ನಾಡಿನಲ್ಲಿ ಚಿತ್ರಪ್ರದರ್ಶನಗಳು ಕ್ರಮವಾಗಿ ಮೈಸೂರೊಂದನ್ನು ಬಿಟ್ಟರೆ ಉಳಿದಲ್ಲಿ ಆಗುತ್ತಲಿಲ್ಲ. ಅಲ್ಲಿ ನಾವು ಯಲಗಟ್ಟಿ, ಕಮಡೋಳಿ ಮೊದಲಾದ ಕೆಲವರ ಚಿತ್ರ ಕಾಣುತ್ತೇವೆ. ಆದರೆ ನಮ್ಮ ಜನತೆಗೆ ಇನ್ನೂ ಅಗ್ಗದ ಜಪಾನಿ ಇಲ್ಲವೆ ಜರ್ಮನಿ ಚಿತ್ರಗಳ ಪ್ರಿಂಟ್ ಕೊಳ್ಳುವ ಭ್ರಮೆ ಹೋಗಿಲ್ಲ. ಅದು ತೀರ ಕನಿಷ್ಠವರ್ಗದ ಬಣ್ಣದ ಮೋಹ. ಹೀಗಾಗಿ ಕನ್ನಡಿಗರನ್ನು ನಂಬಿದ ಚಿತ್ರಕಾರ ಇಂದು ಬದುಕಲಾರ. ತುಸು ಅನ್ನ ಕೊಡಬಹುದಾದುದು Portraiture—ಜೀವಂತ ವ್ಯಕ್ತಿಗಳ ರೂಪ ಚಿತ್ರಣ. ಅದು ಕನ್ನಡ ನಾಡಿನಲ್ಲಿ ಉನ್ನತಮಟ್ಟ ಮುಟ್ಟಿಲ್ಲ. ವ್ಯಕ್ತಿಯನ್ನು ಕಾಣದೆಯೂ ಫೋಟೋಗಳ ಮೇಲಿಂದ ಪ್ರೇರಣೆಗೊಳ್ಳಬಲ್ಲ ಶ್ರೀ ಸ್ವಾಮಿಯವರ ಹೆಸರನ್ನು ಹೇಳಬಹುದು. ಆದರೆ ಭಾವಚಿತ್ರ—ಭಾವ ಪ್ರೇರಕನಾದ ವ್ಯಕ್ತಿಯಿಲ್ಲದೆ ಉಂಟಾಗಲಾರದು.

ಚಿತ್ರದ ಹೆಸರೆತ್ತುವಾಗ—ವ್ಯಾಪಾರೀ ಚಿತ್ರಕಲೆಯ ವಿಚಾರ ಹೇಳಬಹುದಂದೆರೆ ಅದೂ ಅಭಾವವೇ. ಪುಸ್ತಕದ ಚಿತ್ರಕಾರರು, ಜಾಹಿರಾತಿನ ನಿರ್ಮಾಣಕರು, ಮುಖಪತ್ರ ನಿರ್ಮಾಣ ಮಾಡುವ ಕಲಾವಿದರು—ಇವರಿಗೂ ಬರಗಾಲ ಬಂದಿದೆ. ಅದರಿಂದ ಕನ್ನಡ ಗ್ರಂಥಗಳು, ಪತ್ರಿಕೆಗಳು, ಜಾಹಿರಾತುಗಳು, ಪೋಸ್ಟರುಗಳು ಇನ್ನೂ ಬೈರಾಗಿ ವೇಷ ಬಿಡಲು ಸಾಧ್ಯವಾಗಿಲ್ಲ.

ವಾಸ್ತು-ಕಲೆಯಲ್ಲಿ ಕನ್ನಡ ನಾಡು ಹೆಸರುಗಳಿಸಿತ್ತು. ನಿಜ. ಮೂಲದಲ್ಲಿ ನಾಗರ, ದ್ರಾವಿಡ ವಾಸ್ತು ಶೈಲಿಗಳು ಪಟ್ಟದಕಲ್ಲಿನಲ್ಲಿ ಜನಿಸಿದುವು. ಗುಹಾಶೈಲಿ ಕಾರ್ಲೆ, ಅಜಂತಗಳಲ್ಲಿ ಉಂಟಾದುವು. ಸಾರ್ಸನಿಕ ಶೈಲಿ ಬಿಜಾಪುರದಲ್ಲಿ ಬೆಳಗಿತು. ಆದರೆ ಇಂದು ದೇಶೀಯ ಶೈಲಿಗಳ ಬೆಳವಣಿಗೆ ನಿಂತೇಹೋಗಿದೆ. ಮಸೀದಿ ಕಟ್ಟುವವರಿಗೂ ಅದು ಬೇಕಿಲ್ಲ. ಚರ್ಚ್ ಕಟ್ಟುವವರು ರೋಮಿಗೆ ಮುಖ ಮಾಡಿದ್ದಾರೆ. ದೇವಾಲಯ ಕಟ್ಟುವವರಿಗೆ ಅದರ ಸೊಗಸು ಮರೆತಿದೆ. (ಬೆಂಗಳೂರಿನ) ವಿಶ್ವೇಶ್ವರ ಪುರದಲ್ಲಿ ಕಟ್ಟಿಸಿದೊಂದು ವಿಮಾನ ಚಾಲುಕ್ಯ ಶೈಲಿಯ ಎಂಥ ವ್ಯಂಗ್ಯ ಟೀಕೆಯೆಂಬುದನ್ನೆ ಸಾರುತ್ತಿದೆ.

ನಿತ್ಯೋಪಯೋಗಿ ಕಟ್ಟಡಗಳ ಶೈಲಿ ಹೇಗಿದೆ? ಈ ಶತಮಾನದ ಆದಿಯ ಸರಕಾರಿ ಕಟ್ಟಡಗಳಿಗೆ—ಇಂಗ್ಲೆಂಡಿನ ಕ್ಯಾಸಲ್‌ಗಳು ಮಾದರಿಗಳೆನಿಸಿದ್ದರೆ, ಈಗಿನವಕ್ಕೆ



ಮೈಸೂರು ಅರಮನೆಯ ಕಚೇರಿಗಳು

ಸಿಮೆಂಟು ಕಾರ್ಖಾನೆಯವರ ಅನುಕೂಲತೆಯೇ ಆದರ್ಶ. ಅಮೇರಿಕದಿಂದ ಮುಂಬಯಿ ಹಾದು ಬರುತ್ತಿರುವ ನೂರಾರು ಗೃಹ ಮಾದರಿಗಳು—ನಾಡಿನ ವಾಸ್ತು ಪ್ರೇಮವನ್ನು ಕಾಯ್ದು ಇಲ್ಲ, ಬೆಳೆಸಿಕೊಂಡು ಬಂದೂ ಇಲ್ಲ. ಸ್ವಲ್ಪವಾದರೂ ಊರಿನ ಮಂದಿರಗಳು ಎನ್ನಬಹುದಾದವುಗಳಲ್ಲಿ—ಮೈಸೂರು ಅರಮನೆಯ ಆಫೀಸು ಕಟ್ಟಡಗಳು ಚೆಲುವಾದವು.

ನಾಟಕ, ಚಲಚ್ಚಿತ್ರ—ಎಲ್ಲವುದರ ಕೊನೆಗೆ ಈ ಎರಡು ಸಂಗತಿಗಳನ್ನು ಇರಿಸಿಕೊಂಡಿದ್ದೇನೆ. ಎರಡೂ ಉಳಿದೆಲ್ಲ ಕಲೆಗಳಿಗಿಂತ ಜನತೆಯ ಮೇಲೆ ತೀರ ಹೆಚ್ಚಿನ ಪ್ರಭಾವ ಬೀರಬಲ್ಲುವು—ಎಂಬುದರಿಂದ. ವಾಕ್ಚಿತ್ರಗಳು ಬರುವತನಕ, ಸಾಮಾನ್ಯವಾಗಿ ನಾಡಿನ ಮನೋರಂಜನೆಗೆ (ಈ ಶತಮಾನವೆಲ್ಲ) ನಾಟಕಗಳು ಮುಖ್ಯ ಶಕ್ತಿಗಳಾಗಿದ್ದುವು. ಗುಬ್ಬಿ ಚಂದಣ್ಣ, ವೀರಣ್ಣನವರ ಕಂಪೆನಿಗಳು, ರತ್ನಾವಳಿ ನಾಟಕಸಭೆ, ಅರಮನೆ ಕಂಪೆನಿ, ಉತ್ತರ ಕರ್ಣಾಟಕದ ದತ್ತಾತ್ರೇಯ, ಹೊಂಬಳ, ಶಿರಹಟ್ಟಿ ವಾಮನರಾವ್ ಮಾಸ್ತರರ ಮಂಡಲ ಮೊದಲಾದವು—ನಮ್ಮ ನಗರ, ಜಾತ್ರೆ, ಸಂತೆಗಳಲ್ಲಿ ತುಂಬ ಜನಾಕರ್ಷಣೀಯವಾಗಿದ್ದುವು. ವಾಕ್ಚಿತ್ರಗಳು ಬಂದಂತೆ ಸಾಮಾನ್ಯ ನಗರಗಳು ಸಹ—ಟಾಕೀಮುಖವಾಗಿಬಿಟ್ಟಿವೆ. ನಾಟಕಮಂಡಲ ಕಟ್ಟಿಕೊಂಡು ಬದುಕಿಯೇನು ಎಂಬ ಭರವಸೆ ಯಾರಿಗೂ ಬಾರದಾಗಿದೆ. ಆದರೂ ನಾಲ್ಕಾರು ವ್ಯವಸಾಯ ಮಂಡಲಗಳು, ಬೇರೆ ಉದ್ಯಮ ನಡೆಯಿಸಲಾರದ ತಪ್ಪಿಗೆ ನರಳುತ್ತ ಬಾಳಿವೆ.

ನಾಟಕಗಳ ಈ ಶತಮಾನದ ಬಾಳ್ವೆ ಬಹುವಾದ ಪ್ರಗತಿಯನ್ನೇನೂ ತೋರಿಸಿಲ್ಲ. ಅವುಗಳ ಜೀವನ ಅಗಣ್ಯವಾಗಿಯೂ ಇಲ್ಲ. ಈ ಶತಮಾನದ ಕನ್ನಡ ನಾಟಕಕ್ಕೆ ಕಳೆದ ಶತಮಾನದಲ್ಲಿ ಶ್ರೀ ಚಾಮರಾಜ ಒಡೆಯರವರು ಕೊಟ್ಟ ಪ್ರೇರಣೆ ಕಾರಣವೆನ್ನುತ್ತಾರೆ. ಆಗ ಅವರು ಅರಮನೆಯದೇ ಒಂದು ನಾಟಕ ಮಂಡಲ ಕೂಡಿಸಿ, ನಾಟಕಗಳನ್ನು ಬರೆಯಿಸಿದರು. ಅವರಿಗೆ ಪ್ರೇರಕವಾದುದೊಂದು ಫಾರಸೀ ನಾಟಕ ಮಂಡಲವೆನ್ನುತ್ತಾರೆ. ಇತ್ತ ಕನ್ನಡದವರೇ ಮಹಾರಾಷ್ಟ್ರದಲ್ಲಿ ನಾಟಕದ ಮೂಲ ಕರ್ತರೆಂದು ಅನ್ನುತ್ತಾರೆ. ಅವರ ನಾಟಕ ಕರ್ತೃಗಳಾದ ಅಣ್ಣಾಸಾಹಿಬ ಕಿರ್ಲೋಸ್ಕರರು—ಕನ್ನಡಿಗರಂತೆ. ಅವರದೇ ಅಲ್ಲಿನ ಮೊದಲಿನ ವ್ಯವಸಾಯ ನಾಟಕ ಮಂಡಲ. ಅಂತು ಅವರ ಸಾಗ್ರಸಂಗೀತ 'ಸುಭದ್ರೆ'ಯಂತಹ ನಾಟಕದ ಹಲವು ಹಾಡುಗಳು ಯಕ್ಷಗಾನದಿಂದ ಪ್ರೇರಿತವಾದಂತಿವೆ. ಉದಾ.—ಅರಸಿಕ ಕಿತಿ ಹಾಸೇಲಾ, ಪಾಂಡುನೃಪತಿ—ಹಾಡುಗಳು ತೀರ ಯಕ್ಷಗಾನ ಧಾಟಿಗಳು.

ಅಂತು ಈ ಶತಮಾನದ ಆದಿಯಿಂದಲೇ ನಾಡನ್ನು ಹಲವು ವ್ಯವಸಾಯ

ಮಂಡಲಿಗಳು ಸುತ್ತುತ್ತಿರುವುದು ಕಾಣುತ್ತದೆ. ಅವರಾಡುತ್ತಿರುವ ರೀತಿ ಅಂದಿಗೂ ಇಂದಿಗೂ ಬಹುವಾದ ಬದಲಾವಣೆ ಹೊಂದಿಲ್ಲ. ಆಗ ಗ್ಯಾಸುದೀಪಗಳ ಬೆಂಬಲ ವಿದ್ದರೆ ಈಗ ವಿದ್ಯುತ್ತಿನ ಬೆಂಬಲವಿದೆ. ಅಂತು—ದೃಶ್ಯಾವಳಿ, ನಟನೆ ಮೊದಲಾದ "ನಿರ್ಮಾಣ—ಪ್ರದರ್ಶನ"ಗಳಲ್ಲಿ ಸ್ಥಿತಿ ಬದಲಾಗಿಲ್ಲ. ಆದರೂ ಸಂಗೀತದ ಸಾಗರ ವಾಗಿದ್ದ ನಾಟಕಗಳು, ಬರಿಯ ಸಾಗ್ರಸಂಗೀತ ನಾಟಕಗಳಾದುದು, ಬರಿಯ ಪೌರಾಣಿಕ ನಾಟಕಗಳನ್ನು, ಪ್ರಭಾವತಿ, ಪ್ರಭಾಮಣಿಯಂತಹ ಹುರುಳಿಲ್ಲದ ರೋಮಾಂಟಿಕ್ ನಾಟಕಗಳನ್ನು ಆಡುತ್ತಿದ್ದವರು—ಅನೇಕ ನವೀನ ವಿಷಯಗಳಿಗೆ ಗಮನಕೊಡುತ್ತ ಬಂದುದೇ ಮುಖ್ಯ ಬದಲಾವಣೆ. ಈಗ ಇತಿಹಾಸದ ಕತೆಗಳು, ಸಾಮಾಜಿಕ ಪ್ರಶ್ನೆಗಳು, ಪ್ರಾಚೀನ ಕೃಷ್ಣಲೀಲೆ, ಮಹಾನಂದೆ, ಲಂಕಾದಹನಗಳ ನಡುನಡುವೆ ಪ್ರದರ್ಶನವಾಗುತ್ತಿವೆ.

ಅಭಿನಯ ಕಲೆಯಲ್ಲಿ ಕೆಲವೊಂದು ಹೆಸರಾದ ವ್ಯಕ್ತಿಗಳನ್ನೇ ವ್ಯವಸಾಯ ರಂಗಭೂಮಿಯಲ್ಲಿ ನಾವು ಕಾಣುವಂತಾಯಿತು. ರಂಗಾಚಾರ್ಯರು, ಸುಬ್ಬಣ್ಣನವರು, ವರದಾಚಾರ್ಯರು, ಪೀರರು, ಕೃಷ್ಣಮೂರ್ತಿಯವರು, ಲಕ್ಷ್ಮೀಪತಿ ಶಾಸ್ತ್ರಿಗಳು ಈ ಕಾಲದಲ್ಲಿ ಮೆರೆದು ಅಳಿದ ವ್ಯಕ್ತಿಗಳಲ್ಲಿ ಮುಖ್ಯರು. ಈಗ ಬದುಕಿರುವವರಲ್ಲಿ—ನಾಟಕ ಕಲೆಯಿಂದ ಸದ್ಯಃ ದೂರನಿಂತಿರುವ—ಶ್ರೀ ಗರುಡ ಸದಾಶಿವರಾಯರನ್ನೂ ನಾಗೇಂದ್ರರಾಯರನ್ನೂ ಅವಶ್ಯವಾಗಿ ಹೇಳಬಹುದು. ವ್ಯಕ್ತಿಸ್ವಭಾವ ನಿರೂಪಣ ಕಲೆಯಲ್ಲಿ—ಕೃಷ್ಣಮೂರ್ತಿಯವರು ಅಸಾಮಾನ್ಯರೆಂದು ನನ್ನ ನಂಬುಗೆ. ಅವರು ಲಕ್ಷ್ಮೀಪತಿ ಶಾಸ್ತ್ರಿಗಳಂತೆ—ಹಾಸ್ಯ ಭೂಮಿಕೆಯನ್ನು ವಹಿಸಿದರೂ, ಪಾತ್ರನಿರೂಪಣ ಕಲೆಯಿಂದ ಅವರು ತೀರ ಮಾನ್ಯವ್ಯಕ್ತಿಗಳು. ಈಗ ರಂಗಭೂಮಿಯ ಹಾಸ್ಯವೆಂಬುದು ಪಾತ್ರ ಕಲ್ಪನೆಯಿಲ್ಲದ, ಕೇವಲ ಕ್ಲೌನಿಂಗ ಅಂದರೆ ಸರ್ಕಸ್ ಹಾಸ್ಯದ ಮಟ್ಟಕ್ಕೆ ನಿಂತಿರುವುದು ಶೋಚನೀಯ. ನಾಟಕ ಪಾತ್ರಕ್ಕೂ ಹಾಸ್ಯಕ್ಕೂ ಸಂಬಂಧವನ್ನು ತಪ್ಪಿಸಿದಂತೆಯೇ ಅದು. ಈ ದರ್ಜೆಯಲ್ಲಿ ಹೆಸರಾದವರು ಶ್ರೀ ಲಕ್ಷ್ಮಣಪುರಿಯವರು.

ಶ್ರೀ ಗುಬ್ಬಿ ವೀರಣ್ಣನವರಲ್ಲಿ ಅಭಿನಯ ಚಾತುರ್ಯ ತುಂಬ ಇದ್ದರೂ—ಅವರು ಸಾಮಾನ್ಯರ ಕಣ್ಣಮೋಹಗಳನ್ನು ಸಾಧಿಸುವುದರಲ್ಲಿ ಇನ್ನೂ ನಿರತರಾಗಿದ್ದಾರೆ.

ನಮ್ಮ ರಂಗಭೂಮಿಯಲ್ಲಿ—ಸಂಗೀತವೇ ಪ್ರಧಾನವಾಗಿ ನಿಂತುದರಿಂದ—ಹಾಡುವವರಲ್ಲ ನಟರೆಂಬುದೇ ಜನರ ತಿಳಿವಳಿಕೆಯಾಗಿದೆ. ಹಳೆಯ ಪಾಂಡುವಿಜಯ, ಲಂಕಾದಹನಗಳಲ್ಲಿ ಅಲ್ಲೊಂದು ಇಲ್ಲೊಂದು ಮಾತುಗಳಿದ್ದುವು. ಅದನ್ನು ನಟನು ಕಲಿಯದೆಯೇ ನಾಟಕ ನಿರ್ವಹಿಸಬಲ್ಲ. ವರದಾಚಾರ್ಯರು ದಕ್ಷಿಣದಲ್ಲಿ ಅನೇಕ ನಾಟಕ ಬರೆಯಿಸಿದರು. ಅವರ ರಾಮವರ್ಮ ಲೀಲಾವತಿಯು ಷೇಕ್ಸ್‌ಪಿಯರ ನಾಟಕದ

ಅನುವಾದ. ಅವರ ನಿರುಪಮೆಯು ಬೇರೊಂದು ಇಂಗ್ಲಿಷ್ ಕತೆಯನ್ನೇ ಹಿಂಬಾಲಿಸಿತು. ಇವು ಅವರ ನಟನಾ ಚಾತುರ್ಯಕ್ಕೆ ಸ್ಥಾನ ಕೊಟ್ಟುವು. ಪೀರರು ಹೆಸರು ಪಡೆದ ಸಂಸಾರನೌಕೆಯು 'ಅತಿಭಾವ' ಪ್ರಧಾನವಾಗಿದ್ದರೂ ನಟನೆಗೆ ತುಂಬ ಎಡೆಯಿತ್ತಿತು.

ಉತ್ತರ ಕರ್ಣಾಟಕದಲ್ಲಿ—ಮರಾಟಿ ನಾಟಕಗಳ ಅನುವಾದಗಳು ಅವತರಿಸಿದುವು. ಗಣಪತಿರಾವ್ ಬೊಡಸರಂಥ ಗದ್ಯ ನಟಪ್ರವೀಣರಿಂದ ಅಲ್ಲಿನ ನಾಟಕ ಮಂಡಲಗಳು—ತಾನಾಜಿ, ರಾಕ್ಷಸೀ ಮಹತ್ವಾಕಾಂಕ್ಷಾ, ಏಕಚ್‌ಪ್ಯಾಲಾ ಮೊದಲಾದ ನಾಟಕಗಳ ಅನುವಾದಗಳನ್ನು ರಂಗಕ್ಕೆ ತಂದುವು. ಆದರೆ ಅವೆಲ್ಲವುಗಳಲ್ಲಿ ಕಾಣುವ ಅತಿವಾಗ್ಡಂಬರವೂ (verbosity) ಮರಾಟಿ ನಟರ—ಕಿರಿಚಾಟಕ್ಕೆ ನಟನೆ ಎಂಬ ತಪ್ಪುಹಾದಿಯು ನಮ್ಮ ಜನರಿಗೆ, ಒದರುವುದೇ ತಾಸುದ್ದದ ಗದ್ಯವನ್ನು ಉರುಳಿಸುವುದೇ ಆದರ್ಶವಾಯಿತು. ಗದ್ಯದಲ್ಲಿ ಅಭಿನಯಕ್ಕೆ ಅಸಾಧ್ಯವಾದ, ಅಭಿನಯ ಮರುಕಳಿಸದ ಯಾವ ಮಾತೂ ಹೊರೆಯಾಗುವುದೇ ಸರಿಯೆಂಬ ಭಾವನೆ ನಮ್ಮ ನಟರಲ್ಲಿ ಇನ್ನೂ ಮೂಡಿಲ್ಲ.

ವ್ಯವಸಾಯ ರಂಗಭೂಮಿಗಳಲ್ಲಿ ಮೊದಲು ಕಾಲಿರಿಸಿದ ಸಾಮಾಜಿಕ ಕತೆಯೆಂದರೆ—ಸಾರಂಗಧರ. ಅದೇ ಬರಲಿಲ್ಲ. ಅದರ ಪ್ರತಿಯಾದ ಇಂದಿರಾ ಮಾಧವ (ರತ್ನಾವಳಿ ಥಿಯೇಟ್ರಿಕಲ್ ಕಂಪೆನಿಯವರ), ಗರುಡ ಸದಾಶಿವರಾಯರ ವಿಷಮ ವಿವಾಹ—ಮೊದಲಿನ ಸಮಾಜಿಕ ಮಾದರಿಗಳು. ಅನಂತರ ಮಹಾರಾಷ್ಟ್ರದಲ್ಲಿ ಗಡಕರಿ, ಕಾಡಿಲ್‌ಕರ, ವರೇರಕರರನ್ನು ಅನುಸರಿಸಿ, ಅನುವಾದಿಸಿ ಹಲವೊಂದು ನಾಟಕಗಳು ಬಂದುವು. ಪಂತಾಚಿಸೂಸು ರಾಯರಸೊಸೆಯಾಯಿತು! ಏಕಚ್‌ಪ್ಯಾಲಾ—ನಿಷಾಮಹಿಮೆಯಾಯಿತು! ರಾಕ್ಷಸೀ ಮಹತ್ವಾಕಾಂಕ್ಷೆ—ಅದೇ ಹೆಸರಿಂದ ಮೆರೆಯಿತು. ಮೊದಮೊದಲು ಸ್ವತಂತ್ರ ಕೃತಿಗಳನ್ನೂ ಪ್ರೋತ್ಸಾಹಗೊಳಿಸಿದವರೆಂದರೆ ವರದಾಚಾರ್ಯರು, ಶ್ರೀ ಗರುಡ ಸದಾಶಿವರಾಯರು. ಅವರನಂತರ ಹಲವು ಕೃತಿಗಳು ಬಂದುವು. ನಾಟಕ ಕಲೆಯ ದೃಷ್ಟಿಯಿಂದ ಇವೆಲ್ಲ ಪೂರ್ವದ ಪುರಾಣಗಳಿಗಿಂತ ಎಷ್ಟೋ ವಾಸಿಯಾಗಿದ್ದವು—ಎನ್ನಲು ಅಡ್ಡಿಯಿಲ್ಲ.

ರಂಗನಿರ್ದೇಶನ, ಉಡುಗೆ ತೊಡುಗೆ, ಮುಖವರ್ಣಿಕೆಗಳಲ್ಲಿ ಈ ಶತಮಾನವೆಲ್ಲಾ ಬರಡೇ ಆಗಿದೆ. ಕಾಲಸೂಚಕ ಯಾಥಾರ್ಥಿಕ ದೃಶ್ಯಾವಳಿಗಳೂ ಕಾಣಿಸಲಿಲ್ಲ! ಭಾವಾತ್ಮಕ ದೃಶ್ಯಾವಳಿಗಳಂತು ಜನರ ಕಲ್ಪನೆಗೆ ಬಂದಿಲ್ಲ. ಮಿಾನಾ ಪೇಪರು, ಲೇಕ್ ಕಲರ್, ಟ್ರಾನ್ಸ್‌ಫರ್ ಪ್ಲಾಟ್, ಪಟಾಸುಗಳೇ—ಪಾಮರ ರಂಜನೆಯ ಕೀಲಿ ಕೈಗಳೆಂದು, ತೀರ ಯಶಸ್ವಿ ವ್ಯವಸಾಯಿಗಳಾದ ಶ್ರೀ ವೀರಣ್ಣನಂತಹವರು ತಿಳಿದಿರಲು ಬರಿಯ ಅಸ್ತಿತ್ವಕ್ಕೆ ಹೋರಾಡುತ್ತಿರುವ ಉಳಿದವರ ಪಾಡೇನು?

ನಮ್ಮ ನಾಟಕಗಳೆಲ್ಲ "ಸಾಗ್ರ ಸಂಗೀತ" ವಾದವು ಎಂದೆನ್ನಲ್ಲ. ಈ ಸಂಗೀತ ಭಾಗವನ್ನು ಉತ್ತರ ಕರ್ನಾಟಕದ ವ್ಯವಸಾಯ ಮಂಡಲಗಳು—ಕೇವಲ ಮರಾಟಿ ಧಾಟಿಗಳಿಗೆ ಕನ್ನಡ ಅಕ್ಷರಗಳನ್ನು ತುರುಕಿಸುವುದರಲ್ಲಿ ಕಳೆದರು! ಇನ್ನೂ ಹಾಗೇ ಇದೆ. ದಕ್ಷಿಣದಲ್ಲಿ ಎ. ವಿ. ವರದಾಚಾರ್ಯರಂತಹವರು ಕರ್ನಾಟಕ ಗೀತ ಪ್ರಬಂಧ ಗಳನ್ನೇ ಬೆಳಕಿಗೆ ತರಲು ಯತ್ನಿಸಿದರು. ಅವರ ಆಗಿನ ಕಾಲದ ಹಾಡುಗಳು ತುಂಬ ಜನಪ್ರಿಯವಾಗಿದ್ದುವು. ಅವರೂ ಆಮೇಲೆ ಗುಜರಾತಿ ಮರಾಟೀ ಮಟ್ಟುಗಳಿಗೆ ಎಡೆ ಕೊಟ್ಟದ್ದುಂಟು. ಈಗ ಈ ನಾಟಕಿ ಗಾನವೆಲ್ಲವನ್ನು ಸಿನೆಮಾ ಗೀತಗಳು ಸುಂಗು ತ್ರಿವೆಯಾದುದರಿಂದ ಅದರ ಜೀವನವೂ ಬಹುಕಾಲ ನಿಲ್ಲದು—ಎನ್ನುವಂತಾಗಿದೆ.

ರಂಗಭೂಮಿಯ ಋಣ ಬಹುವಾಗಿ ನಮ್ಮ ನಾಡಿನಲ್ಲಿ ವ್ಯವಸಾಯಿಗಳಿಗೇ ಸಲ್ಲಬೇಕು. ಆದರೂ ಬೆಂಗಳೂರು, ಬಳ್ಳಾರಿ, ಮೈಸೂರು, ಬಾಗಿಲಕೋಟೆಯಂತಹ ನಗರಗಳಲ್ಲಿ ಹೆಸರಾದ ಎಮೆಚೂರು ಸಂಘಗಳು ಹುಟ್ಟಿ ಬೆಳೆದುವು. ಅವರಿಗೂ ವ್ಯವಸಾಯ ಕಂಪೆನಿಗಳೇ ಆದರ್ಶ—ಎಂದರೂ ತಪ್ಪಾಗದು.

ಶ್ರೀಮಾನ್ ಕೈಲಾಸಂ ಅವರು ಕಾಲಿರಿಸಿದ ಬಳಿಕ—ಸಾದಾ, ಸರಸವಾದ ಗದ್ಯನಾಟಕಗಳ ಬೆಲೆ ಎಮೆಚೂರರಿಗೂ ತಿಳಿಯಿತು. ಅಲ್ಲಿಂದ ಅನೇಕ ಸಂಘ ಸಂಸ್ಥೆಗಳು—ಆಗಾಗ ಬರಿಯ ಗದ್ಯನಾಟಕಗಳನ್ನು ಏಕಾಂಕ ರೂಪಕಗಳನ್ನು ಆಡ ತೊಡಗಿದುವು. ಅಲ್ಲಿಂದ ವ್ಯವಸಾಯಿಗಳಿಗೂ, ನಾಟ್ಯವಿಲಾಸಿಗಳಿಗೂ ಅಂತರ ಒಡೆದು ಮೂಡುವಂತಾಯಿತು. ಶ್ರೀ ಜಾಗಿರದಾರರಂತಹ ಬರಹಗಾರರು ಇನ್ನೂ ಹಲವರು ಏಕಾಂಕ ನಾಟಕಗಳನ್ನು ಬರೆದು ಒಪ್ಪಿಸಿದರು. ಆದರೂ ಇಂಥ ನಾಟಕಗಳು "ಕಾಸುಮಾಡುವ ಕಂಪೆನಿಗಳಿಗೆ' ಪ್ರಯೋಜನವಿಲ್ಲೆಂಬ ಅಭಿಪ್ರಾಯ ನಮ್ಮಲ್ಲಿ ಸಾಮಾನ್ಯವಾಗಿ ಉಳಿದೇ ಇದೆ.

ಈ ಸಂದರ್ಭದಲ್ಲಿ ಈ ಲೇಖಕನು ತನ್ನದೇ ಕೆಲವು ನವೀನ ಪ್ರಯೋಗಗಳನ್ನು ಮಾಡಿದುದನ್ನು ಹೇಳಿದರೆ ಅನುಚಿತವಾಗಲಾರದಷ್ಟೆ. ಸುಮಾರು ೧೨-೧೫ ವರ್ಷಗಳ ಪ್ರಯತ್ನಗಳಿವು. ಬರಿಯ ಗೀತನಾಟಕಗಳು, ಛಾಯಾ ನಾಟಕಗಳು, ಮೂಕ ನಾಟಕಗಳೆಂದು—ಹಲವೊಂದು ರಂಗನಿರ್ದೇಶನದ ನವೀನ ಮಾದರಿಗಳನ್ನು—ಎಮೆಚೂರರ ಸಹಾಯದಿಂದ ಆಡಿ ನೋಡಿದ್ದಾಯಿತು. ಅವುಗಳ ಸತ್ವವನ್ನು ಮನ ಗಾಣಲು ಶಕ್ಯವಾದರೂ—ಇಂದಿದ್ದು ನಾಳೆ ಕೈತಪ್ಪುವ, ಇದ್ದರೂ ಅಭ್ಯಾಸಕ್ಕೆ ವ್ಯವಧಾನವಿಲ್ಲದಿರುವ ಲಘುಮತಿ ಎಮೆಚೂರರೇ ನಾಡಿನಲ್ಲಿ ತುಂಬ. ಅದರಿಂದ ಹೆಚ್ಚಿನ ಯಾವ ಕೆಲಸವೂ ಸಾಧಿಸದೆಂಬುದೇ ನನ್ನ ಅಭಿಮತ.

ಒಟ್ಟಿನಿಂದ ನೋಡುವಾಗ—ಈ ಅರೆಶತಮಾನದ ಅಂತ್ಯದೊಳಗೆ ಸಿನೆಮಾ

ಮೊಸಳೆಯು, 'ಮೂಗೀ' ಇದ್ದುದು 'ವಾಗೀ' ಆಗಿ—ವ್ಯವಸ್ಥೆಯ ನಾಟಕ ಮಂಡಳಗಳನ್ನು ನುಂಗುವುದು ಖಂಡಿತ. ನಾಟಕಕ್ಕಿಂತ ಅವು ಸುಧಾರಿಸಿವೆಯೆನ್ನುವ ಧೈರ್ಯ ನನಗಿಲ್ಲ. ಆದರೂ ಅದರ ಮಂಕೆರಚುವ ಶಕ್ತಿ ಅದ್ಭುತವಿರುವುದರಿಂದ, ಆ ದಾಳಿಗೆ—ಸುಧಾರಿಸಲಾರದ ಬಡಪಾಯಿ ವ್ಯವಸಾಯಮಂಡಲಗಳು ಬಲಿಯಾಗುತ್ತಿರುವುದೂ, ಮುಂದೆ ನಿಶ್ಶೇಷವಾಗುವುದೂ ಖಂಡಿತ.

ನಾಟಕವನ್ನು ಹಿಂದಟ್ಟುತ್ತಿರುವ—ಚಲಚ್ಚಿತ್ರದ ಗತಿಯೇನು ನಮ್ಮ ನಾಡಿನಲ್ಲಿ? ಕನ್ನಡ ನಾಡು ದಿನದಿನ ಒಂದುಲಕ್ಷ ರೂಪಾಯಿಗಳನ್ನಾದರೂ ಈ ಉದ್ಯಮಕ್ಕೆ ಟಿಕೆಟಿನ ರೂಪದಿಂದ ತೆರುತ್ತಿದೆಯೋ ಏನೋ. ಅಷ್ಟಿದ್ದರೂ ಕನ್ನಡ ಚಲಚ್ಚಿತ್ರಗಳು—ಅವು ಮೂಕು ಚಿತ್ರಗಳಾಗಿದ್ದಾಗ ಬರಿಯ ೫, ೬. ಈ ಮಾತನಾಡತೊಡಗಿದಮೇಲೆ ೬, ೮, ಅಷ್ಟೇನೆ. ಆ ಉದ್ಯಮ ಬಲವಾಗಿ ನಮ್ಮಲ್ಲಿ ಕಾಲೂರಿಲ್ಲ. ಹಿಂದೀ, ತಮಿಳು, ತೆಲುಗುಗಳ ಪ್ರಬಲ ದಾಳಿಗೆ ನಮ್ಮ ಜನರು ತಲೆಯೊಡ್ಡುತ್ತಿದ್ದಾರೆ. ಅಂದರೆ ಅವೇ ಉತ್ತಮವೆಂದು ತಿಳಿಯಬೇಕೇ. 'ತಮಿಳು' ಚಿತ್ರಕ್ಕಿಂತ ಉತ್ತಮ ಚಿತ್ರವನ್ನು ಎಂಥವರಿಗೂ ಹೊರಡಿಸಲು ಬಂದೀತು. ಆದರೆ ಅದಕ್ಕೆ ಬೇಕಾಗುವ ವ್ಯಾಪಾರಿ ತಜ್ಞರು ನಮ್ಮಲ್ಲಿ ಉದಯಿಸಿಲ್ಲ. ಕಲೆಯ ದೃಷ್ಟಿಯಿಂದ ಆಗಿರುವ ಕನ್ನಡ ಚಿತ್ರಗಳು ಏನೂ ಮಹತ್ವದವಲ್ಲ. ಹಿಂದೊಮ್ಮೆ ಹೆಸರಾದ ಚಿತ್ರವಿಮರ್ಶಕ ಪಾಲ್ ರೋಥಾ—ಎಂಬವನು ಜಗತ್ತಿನ ಚಲಚ್ಚಿತ್ರಗಳ ವಿಮರ್ಶೆ ಮಾಡುವಾಗ ಉಳಿದ ಚಿತ್ರಗಳಿಗೆ ೩೦೦-೪೦೦ ಪುಟ ವಿನಿಯೋಗಿಸಿದನು. ಅಂಥವನು ಈ ದೇಶದ ಚಿತ್ರಗಳ ಕುರಿತು ಬರಿಯ ಒಂದು ಪ್ಯಾರಾ ಬರೆದು ಮುಗಿಸಿದ್ದನು. ಕನ್ನಡ ಚಿತ್ರಗಳ ವಿಷಯ ಬರೆಯುವುದಾದರೆ ಆ ಪ್ಯಾರಾದಲ್ಲೊಂದು ಪಂಕ್ತಿ ಬರುವುದೂ ಕಷ್ಟ.

ಹೀಗಿದೆ ನಮ್ಮ ನಾಡಿನ ಕಲಾಜೀವನ. ನಾಡಿನ ಜನಸಂಖ್ಯೆ ಕಡಮೆಯಿಲ್ಲ. ಅವರು ಪಡುತ್ತಿರುವ ಕಷ್ಟಗಳೂ ಕಡಿಮೆಯಿಲ್ಲ; ವ್ಯಯಿಸುತ್ತಿರುವ ಹಣವೂ ನಮ್ಮ ಯೋಗ್ಯತೆಗೆ ಸಾಕೋ ಏನೋ. ಆದರೂ 'ಕಲೆಯ' ಪಾಲು 'ಬರಿದೋ ಬರಿದು' ತೆರವೋ ತೆರವು.

ಇದು ಬದುಕುವ ಜನವೆ? ಬದುಕಲು ಬಯಸುವ ಜನವೆ? ಬಯಕೆಯ ಬೆನ್ನಿಗೆ ಬೇಕಾದ ಹಟವುಳ್ಳವರೆ—ಇವರು?

ಶಿವರಾಮ ಕಾರಂತ.


೬. ಉತ್ತರ ಕರ್ಣಾಟಕದಲ್ಲಿ ಪ್ರಾಚ್ಯ ವಸ್ತುಸಂಶೋಧನೆ

ಉತ್ತರ ಕರ್ನಾಟಕದಲ್ಲಿ—ಧಾರವಾಡ, ಬೆಳಗಾವಿ, ವಿಜಾಪುರ, ಉತ್ತರ ಕನ್ನಡ ಜಿಲ್ಹೆ (ಕಾರವಾರ), ಸೋಲಾಪುರ, ಮತ್ತು ಜಮಖಂಡಿ, ಮಿರಜಿ, ರಾಮದುರ್ಗ, ಸಾಂಗ್ಲಿ, ಕುರುಂದವಾಡ, ಜತ್ ಮೊದಲಾದ ಸಂಸ್ಥಾನಗಳಲ್ಲಿ—ಸಂಶೋಧನ ಕಾರ್ಯವು ನಿಯಮದಿಂದ ನಡೆದಿಲ್ಲವೆಂದು ಹೇಳಬೇಕಾಗಿದೆ. ಫ್ಲೀಟ್ ಮೊದಲಾದ ಪಂಡಿತರು ೧೯ ನೆಯ ಶತಮಾನದ ಕೊನೆಯ ಭಾಗದಲ್ಲಿ ಅವಕಾಶ ಸಿಕ್ಕಾಗ ಹರಕು ಮುರುಕಾಗಿ ಮಾಡಿದ ಶಾಸನ ಸಂಗ್ರಹವನ್ನು ಬಿಟ್ಟರೆ ೧೯೨೫-೨೬ ರ ವರೆಗೆ ಯಾವ ವಿಧವಾದ ಪ್ರಯತ್ನವೂ ಸರ್ಕಾರದಿಂದಾಗಲಿ, ಜನತೆಯಿಂದಾಗಲಿ ಜರುಗಲಿಲ್ಲ. ಉತ್ತರ ಕರ್ಣಾಟಕದಲ್ಲಿ ಮೌರ್ಯರು, ಆಂಧ್ರಭೃತ್ಯರು, ಕದಂಬರು, ಚಾಳುಕ್ಯರು ಇವರೇ ಮೊದಲಾದ ಅರಸರು ತಮ್ಮ ಪ್ರಭುತ್ವದ ಅನೇಕ ಅವಶೇಷಗಳನ್ನು ಉಳಿಸಿದ್ದಾರೆ. ಪ್ರಾಗೈತಿಹಾಸಿಕ ಅವಶೇಷಗಳಂತೂ ಶಿಲಾಯುಗದಿಂದ ಆರಂಭಮಾಡಿ ಹೇರಳವಾಗಿ ದೊರೆಯುತ್ತವೆ. ಒಳ್ಳೇ ಫಲಕಾರಿಯಾದ ಈ ಪ್ರದೇಶದಲ್ಲಿ ಶೋಧನೆಯನ್ನು ನಡೆಸದಿದ್ದರೆ ಕನ್ನಡನಾಡಿನ ಚರಿತ್ರೆಯನ್ನು ಪರಿಪೂರ್ಣವಾಗಿ ತಿಳಿಯಲಿಕ್ಕಾಗದು. ಫ್ಲೀಟ್, ಭಾಂಡಾರಕರ್, ರಾಯಿಸ್, ಕೀಲಹಾರ್ನ್ ಮೊದಲಾದ ಪಂಡಿತರು ಮಾಡಿದ ಶೋಧನೆಗಳಿಂದ ಕನ್ನಡನಾಡಿನ ಚರಿತ್ರದ ರೇಖಾಮಯ ಚಿತ್ರವು ಮಸುಕು ಮಸುಕಾಗಿ ಹೊರಬಿದ್ದಿದೆಯಾದರೂ ಅದರ ಅಶೇಷ ವಿಶೇಷಗಳನ್ನೂ ಸಾಂಸ್ಕೃತಿಕ ದೃಷ್ಟಿಯಿಂದ ಅದರ ಮಹತ್ವವನ್ನೂ ತಿಳಿಯಬೇಕಾದರೆ ಅಖಂಡ ಕರ್ನಾಟಕದ ಭಾಗಗಳಲ್ಲಿ ಸರ್ವಾಂಗೀಣವಾದ ಐತಿಹಾಸಿಕ, ವಾಙ್ಮಯ ವಿಷಯಕ ವಿಮರ್ಶೆಯು ಅತ್ಯವಶ್ಯವಾದದ್ದು. ಪ್ರಕೃತ ಉತ್ತರ ಕರ್ಣಾಟಕದಲ್ಲಿ ಈ ದೃಷ್ಟಿಯಿಂದ ಕಳೆದ ೨೫ ವರ್ಷಗಳಲ್ಲಿ ನಡೆದ ಕಾರ್ಯವನ್ನು ಕೆಳಗಿನ ಐದು ವಿಭಾಗಗಳಲ್ಲಿ ಸಮಾಲೋಚಿಸುವೆವು:—(೧) ಪ್ರಾಚೀನ ನಿವೇಶನಗಳ ಭೂಶೋಧನೆ—ಅಗಿತ, (೨) ಶಿಲಾ ಮತ್ತು ತಾಮ್ರ ಶಾಸನಗಳ ಸಂಗ್ರಹ ಮತ್ತು ಅಭ್ಯಾಸ, (೩) ಕಲಾಕೃತಿಗಳ ಅಭ್ಯಾಸ; (ಅ) ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪ, (ಬ) ಬಣ್ಣದ ಚಿತ್ರಗಳು; (೪) ನಾಣ್ಯಗಳು, (೫) ವಸ್ತುಸಂಗ್ರಹಾಲಯದ ಆವಶ್ಯಕತೆ:—ಐತಿಹಾಸಿಕ ಪ್ರಕಟನೆಗಳು.

(೪) ಈ ೨೫ ವರ್ಷಗಳಲ್ಲಿ ಆದ ಸಂಶೋಧನೆ—(೧) ಪ್ರಾಚೀನ ನಿವೇಶನಗಳ ಶೋಧನೆ ಅಗಿತಗಳು

ಪ್ರಾಚೀನ ನಿವೇಶನಗಳಲ್ಲಿ ಐತಿಹಾಸಿಕ ಮತ್ತು ಪ್ರಾಗೈತಿಹಾಸಿಕ ಪ್ರದೇಶಗಳನ್ನು ಸೇರಿಸುವೆವು. ೧೯೨೧ ರ ವರೆಗೆ ಆಯಾ ಪ್ರಾಂತ ಸರ್ಕಾರಗಳು ತಮ್ಮದೊಂದು ಆರ್ಕ್ಯಾಲಾಜಿಕಲ್ ಸರ್ವೇ ಕಚೇರಿಯನ್ನು ನಿರ್ಮಾಣಮಾಡಿ ಹಳೆಯ ಗುಡಿಗುಂಡಾರಗಳನ್ನು ರಕ್ಷಿಸುವುದು, ಅಲ್ಲಲ್ಲಿ ಶಾಸನಗಳನ್ನು ಸಂಗ್ರಹಿಸುವುದು, ಜೀರ್ಣೋದ್ಧಾರ ಮಾಡುವದು—ಇವೇ ಮೊದಲಾದ ಕಾರ್ಯಗಳನ್ನು ಮಾಡುತ್ತಿದ್ದವು. ೧೯೧೯ ರ ಹೊಸ ರಾಜಕೀಯ ಸುಧಾರಣೆಗಳ ಪರಿಣಾಮವಾಗಿ ಪ್ರಾಚ್ಯವಸ್ತುಸಂಶೋಧನೆಯು ಹಿಂದುಸ್ಥಾನ ಸರ್ಕಾರದ ಆಡಳಿತಕ್ಕೆ ಒಳಪಟ್ಟಿದ್ದರಿಂದ ೧೯೨೧-೨೨ ರಿಂದ ಎಲ್ಲ ಪ್ರಾಂತ 'ಸರ್ವೇ' ಕಚೇರಿಗಳು ಮಧ್ಯವರ್ತಿಯಾದ ಡಾಯರೆಕ್ಟರ ಜನರಲ್ ಆಫ್ ಆರ್ಕ್ಯಾಲಾಜಿ, ದಿಲ್ಲಿ, ಇವರ ಅಂಕಿತಕ್ಕೆ ಒಳಪಟ್ಟು ಪರಸ್ಪರ ವಿಚಾರ ವಿನಿಮಯದಿಂದ ಭಾರತ ವರ್ಷದ ಪ್ರಾಚ್ಯವಸ್ತುಸಂಶೋಧನಾ ಕಾರ್ಯವನ್ನು ಕೈಕೊಂಡವು. ಪ್ರಾಚೀನ ಭೂಶೋಧನೆ—ಅಗಿತಗಳು ಮಧ್ಯವರ್ತಿ ಸರಕಾರದ ಕಾರ್ಯಕ್ಷೇತ್ರದಲ್ಲಿ ಬಂದದ್ದರಿಂದ ಸ್ಥಾನಿಕ ಸರ್ಕಾರವು ಅಷ್ಟೊಂದು, ಅತ್ತಕಡೆಗೆ, ಗಮನಿಸಲಿಲ್ಲ. ಮಧ್ಯವರ್ತಿ ಸರ್ಕಾರದ ಮುಂಬಯಿ ಪ್ರಾಂತದ ಸರ್ವೇಕಚೇರಿಯು ಪುಣೆಯಲ್ಲಿ ನೆಲಸಿದ್ದರಿಂದ ಕರ್ನಾಟಕ ಸಂಶೋಧನೆಗೆ ಅದರ ಲಕ್ಷ್ಯ ಹೋಗಲಿಲ್ಲ. ೧೯೨೪ ರಲ್ಲಿ ಬೆಳಕಿಗೆ ಬಂದ ಮಹೆಂಜೊದಾರೋ, ಹರಪ್ಪಗಳ ಅಗಿತದಲ್ಲಿ ಎಲ್ಲರೂ ತೊಡಗಿದ್ದರಿಂದ ಉಳಿದ ಭಾಗದ ಸಂಶೋಧನೆಗೆ ಯಾರೂ ಮನಸ್ಸು ಹಾಕಲಿಲ್ಲ. ಎಲ್ಲ ವಿದ್ವಾಂಸರು ಆ ಅಗಿತದ ಪರಿಣಾಮ ನಿರೀಕ್ಷಣೆಯಲ್ಲಿ ಉತ್ಸುಕರಾಗಿದ್ದರು. ಮುಂಬಯಿ ಪ್ರಾಂತದ ದಕ್ಷಿಣ ಮೂಲೆಯಲ್ಲಿದ್ದ ಕರ್ನಾಟಕವನ್ನು ಕೇಳುವವರಾರು! ಆದರೂ ಕರ್ನಾಟಕದ ಮುಂದಾಳುಗಳು ಅಲ್ಲಿರುವ ಐತಿಹಾಸಿಕ ಸಂಪತ್ತಿಯನ್ನು ವಿದ್ವಾಂಸರ ಮತ್ತು ಸರ್ಕಾರದ ಗಮನಕ್ಕೆ ತರಲು ಅವ್ಯಾಹತ ಪರಿಶ್ರಮಪಟ್ಟರು. ಶ್ರೀಮಾನ್ ಆಲೂರು ವೆಂಕಟರಾಯರು ೧೯೧೭ ರಲ್ಲಿಯೇ ಇತಿಹಾಸ ಸಂಶೋಧಕ ಮಂಡಳವನ್ನು ಧಾರವಾಡದಲ್ಲಿ ಸ್ಥಾಪಿಸಿ ಅದರ ಮುಖವಾಗಿ ಕರ್ಣಾಟಕದ ಗತವೈಭವವನ್ನು ಜನರ ಸ್ಮರಣೆಗೆ ತಂದುಕೊಟ್ಟಿದ್ದರು. ೧೯೨೫ ರಲ್ಲಿ ಪುಣೆಯಲ್ಲಿ ಆರ್ಕ್ಯಾಲಾಜಿ ಸೂಪರಿಂಟೆಂಡೆಂಟರಾಗಿದ್ದ ಕೆ. ಎನ್. ದೀಕ್ಷಿತರು ಕರ್ನಾಟಕಕ್ಕೊಂದು ಸ್ವತಂತ್ರ ಸಂಶೋಧನಾ ಕೇಂದ್ರವು ಅವಶ್ಯವೆಂಬುದನ್ನು ಸರ್ಕಾರದ ಗಮನಕ್ಕೆ ತಂದುಕೊಟ್ಟರು. ಅದರ ಪರಿಣಾಮವಾಗಿ ಕರ್ನಾಟಕ ಕಾಲೇಜಿನಲ್ಲಿ ಪ್ರಾಚ್ಯ ವಸ್ತುಸಂಗ್ರಹಾಲಯವನ್ನು ಸ್ಥಾಪಿಸುವ ನಿರ್ಧಾರವಾಯಿತು.

ಕೆಲವು ಶಾಸನಗಳ ಸಂಗ್ರಹವೂ ಆಯಿತು. ಆದರೆ ಅದರ ಭಾರವನ್ನು ನಿರ್ವಹಿಸತಕ್ಕ ಯೋಗ್ಯ ವಿದ್ವಾಂಸರು ಇಲ್ಲದ್ದರಿಂದ ಈ ಪ್ರಯತ್ನವು ಮುಂದುವರಿಯಲಿಲ್ಲ. ಅಷ್ಟಕ್ಕೇ ಕುಗ್ಗಿ ಮುಗ್ಗಿಹೋಯಿತು. ಮುಂದೆ ಉತ್ತರ ಕರ್ನಾಟಕದಲ್ಲಿ ಬೇರೆ ಸಂಶೋಧನೆಯ ಪ್ರಯತ್ನಗಳಾಗಲಿಲ್ಲ. ಆದರೆ ೧೯೩೯ ರಲ್ಲಿ ಮುಂಬಯಿ ಸರ್ಕಾರವು ಧಾರವಾಡದಲ್ಲಿ Kannada Research Institute—ಕನ್ನಡ ಸಂಶೋಧನ ಸಂಸ್ಥೆ—ಯನ್ನು ಸ್ಥಾಪಿಸಿ ಕರ್ನಾಟಕ ಇತಿಹಾಸ-ವಾಙ್ಮಯಗಳಲ್ಲಿ ಸಂಶೋಧನೆ ನಡೆಯುವ ವ್ಯವಸ್ಥೆ ಮಾಡಿದರು. ಪ್ರಕೃತ ಲೇಖಕರು ಈ ಸಂಸ್ಥೆಯ ಡಾಯರಕ್ಟರರಾಗಿದ್ದು ಅವರ ಸಂಚಾಲನದಲ್ಲಿ ಪ್ರಾಗೈತಿಹಾಸಿಕ ಭೂಶೋಧನೆಯು ನಡೆಯುತ್ತಲಿದೆ. ಮದ್ರಾಸದಲ್ಲಿ ಜಿಯಾಲಾಜಿ ಶಾಲೆಯ ಮುಖ್ಯಾಧಿಕಾರಿಗಳಾಗಿದ್ದ ರಾಬರ್ಟ ಬ್ರೂಸ್ ಫೂಟರು (೧೮೬೫–೧೯೧೨) ಹಳೆಯ ಶಿಲಾಯುಗದಿಂದ ಕಬ್ಬಿಣಯುಗದ ವರೆಗಿನ ಅವಶೇಷಗಳನ್ನು ಕಂಡು ಹಿಡಿದು ಅವುಗಳನ್ನು ಪರಿಶೀಲಿಸಿದ್ದರು (*Bruce Footes' Collections*, Vols. I—III.) ಅವರು ಧಾರವಾಡ ಜಿಲ್ಹೆ ನವಲಗುಂದ ತಾಲೂಕಿನಲ್ಲಿ ಹರಿಯುವ ಬೆಣ್ಣೆ ಹಳ್ಳದ ದಂಡೆಯಲ್ಲಿ ಪ್ರಾಚೀನ ಶಿಲಾಯುಧಗಳನ್ನೂ, ಬಿಜಾಪುರ ಜಿಲ್ಹೆಯ ಬದಾಮಿ ತಾಲ್ಲೂಕಿನಲ್ಲಿರುವ ಖೇಡ, ಮಡಗಿ (?) ಗ್ರಾಮಗಳ ವಂಡಿನಲ್ಲಿ ಅದೇ ಮಾದರಿಯ ಆಯುಧಗಳನ್ನೂ, ಬೆಳಗಾವಿ ಜಿಲ್ಲೆಯ ಗೋಕಾವಿಯ ಹತ್ತಿರ ಘಟಪ್ರಭೆ ದಂಡೆಯಲ್ಲಿ ಹಳೆಯ ಶಿಲಾಯುಗದ ಸುತ್ತಿಗೆ ಮೊದಲಾದುವನ್ನು ಹುಡುಕಿದ್ದರು. ಈ ಸ್ಥಳಗಳ ವಿನಾ ಪ್ರಾಗೈತಿಹಾಸಿಕ ಕುರುಹುಗಳುಳ್ಳ ಸ್ಥಳಗಳು ಸಂಶೋಧಕರ ನಿದರ್ಶನಕ್ಕೆ ಬಂದಿದ್ದಿಲ್ಲ. ಆದರೆ ಕನ್ನಡ ಸಂಶೋಧನ ಸಂಸ್ಥೆಯ ಚಟುವಟಿಕೆಯಿಂದ ಹಳೆಯ ಶಿಲಾಯುಗದ ಅವಶೇಷಗಳೂ, ನವಶಿಲಾಯುಗದ ಅವಶೇಷಗಳೂ, ಕಬ್ಬಿಣಯುಗದ ಅವಶೇಷಗಳೂ ಉತ್ತರ ಕರ್ನಾಟಕದ ಆಯಾ ಸ್ಥಳಗಳಲ್ಲಿ ಹೇರಳವಾಗಿ ಸಿಕ್ಕಿರುತ್ತವೆ. ಈ ಕೆಳಗಿನ ಪಟ್ಟಿಯಲ್ಲಿ ಆ ಸ್ಥಳಗಳ ಹೆಸರುಗಳನ್ನೂ ಮೇಲೆ ತೋರುವ ಅಥವಾ ಸ್ವಲ್ಪ ಅಗಿತಕ್ಕೆ ಕಣ್ಣಿಗೆ ಬೀಳುವ ಕುರುಹುಗಳನ್ನೂ ಅವುಗಳ ಮಹತ್ವದ ಸೂಚಿಕೆಯೊಂದಿಗೆ ಸಂಶೋಧಕರ ಗಮನಕ್ಕೆ ತರಬಯಸುತ್ತೇವೆ. (ಮಗ್ಗುಲಲ್ಲಿ ಕೊಟ್ಟ ನಕಾಶವನ್ನು ನೋಡಿರಿ).


ಮುಂಬಯಿ
ಅಹಮ್ಮದನಗರ
ಪುಣೆ
ಸತಾರೆ
ಪಂಢರಪುರ
ಸೊಲ್ಲಾಪುರ
ಕಲ್ಯಾಣಿ
ಬ್ರಹ್ಮಪುರಿ
ಜುನಾ ಚೋಗೌನ್
ಗುಲಬುರುಗ
ಹೈದರಾಬಾದು
ರತ್ನಾಗಿರಿ
ಸಾಂಗ್ಲಿ
ಜತ್ ಸಂಸ್ಥಾನ
ಮಾಲಖೇಡ
ಮಿರಜ್
ಬಿಜಾಪುರ
ಕೊಲ್ಹಾಪುರ
ಕೃಷ್ಣಾ ನದಿ
ಜಮಖಂಡಿ
ಮುಧೋಳ
ಹೆರಕಲ್
ಕೃಷ್ಣಾ ನದಿ
ಘಟಪ್ರಭಾ ನದಿ
ಬಾಗಲಕೋಟೆ
ರಾಯಿಚೂರು
ಬಾದಾಮಿ
ಬೆಳಗಾಂವಿ
ಪಟ್ಟದಕಲ್
ವಡಗಾಂವ
ತುಂಗಭದ್ರಾ ನದಿ
ಗೋವ
ಧಾರವಾಡ
ಗದಗ
ಕೊಪ್ಪಳ
ಹರ್ತಿ
ವಿಜಯನಗರ
ಬೆಲ್ಲತ್ತಿ
ಬಳ್ಳಾರಿ
ಇಟಗಿ
ಕಾರವಾರ
ವರದಾ ನದಿ
ಅಗಡಿ
ಬನವಾಸಿ
ಬಳ್ಳಿಗಾವೆ
ಕೆಳದಿ
ಇಕ್ಕೇರಿ
ಭಟಕಳ
ಪೆನುಗೊಂಡೆ
ಚಿತ್ರದುರ್ಗ
ಉಡುಪಿ
ದ್ವಾರಸಮುದ್ರ
ಬೇಲೂರು
ಬೆಂಗಳೂರು
ಮಂಗಳೂರು
ಮಡಿಕೇರಿ
ಮೈಸೂರು
ತಲಕಾಡು
ಉದಕಮಂಡಲ

ಬಿಜಾಪುರ ಜಿಲ್ಲೆ

ಬಾಗಲಕೋಟೆ ತಾಲ್ಲೂಕ

೧. ಬಡಗಿ
೨. ಬಿಸನಾಳ
೩. ಚಮ್ಮಲಗಿ
೪. ಗರುಡದಿನ್ನಿ
೫. ಗುಂಡನಪಲ್ಲಿ
೬. ಗಿರಿಗಾವಿ
೭. ಗಿರಿಸಾಗರ
೮. ಹೆರಕಲ್
೯. ಕಂದಲ
೧೦. ರೊಲ್ಲಿ
೧೧. ಸಿದ್ದಾಪುರ
೧೨. ಸೊನ್ನ
೧೩. ಅನಗವಾಡಿ

ಬಾದಾಮಿ ತಾಲ್ಲೂಕ

ಪಟ್ಟದಕಲ್

ಬೆಳಗಾಂ ಜಿಲ್ಲಾ

ವಡಗಾಂ
ಕುರಂದವಾಡ (ಕಿರಿ)

ಧಾರವಾಡ ಜಿಲ್ಲಾ

ಗದಗ ತಾಲ್ಲೂಕ

ಹರ್ತಿ

ಶಿರಹಟ್ಟಿ ತಾಲ್ಲೂಕ

೧. ಇಟಗಿ
೨. ಬೆಲ್ಲತ್ತಿ

ಹಾವೇರಿ ತಾಲ್ಲೂಕ

ಅಗಡಿ

ಸೊಲ್ಲಾಪುರ ಜಿಲ್ಲೆ

ಪಂಢರಪುರ ತಾಲ್ಲೂಕ —ಬ್ರಹ್ಮಪುರಿ
ಕೊಲ್ಹಾಪುರ ಸಂಸ್ಥಾನ—ಬ್ರಹ್ಮಪುರಿ
ಸಾಂಗಲಿ ಸಂಸ್ಥಾನ —ಜುನಾ ಚೋಗೌನ್
ಜಮಖಂಡಿ ಸಂಸ್ಥಾನ —ಗೊಂಬಿಗುಡ್ಡ

ಸ್ಥಳ	ಅವಶೇಷಗಳು	ಮಹತ್ವ—ಕಾಲ ವಗೈರೆ
ವಿಜಾಪುರ ಜಿಲ್ಹೆ ಬಾಗಲಕೋಟ		
೧. ತಾಲ್ಲೂಕು—ಹೆರಕಲ್ (ಘಟಪ್ರಭಾ ದಂಡೆ)	ಬಣ್ಣದ ನುಣುಪಾದ ಮಣ್ಣಿನ ಪಾತ್ರೆ; ರೇಖಾ ಚಿತ್ರವುಳ್ಳವು. ಆನೆಯ ಮುಖ, ಕಿಟ್ಟದಮೂರ್ತಿ ಶಂಖದ ವಸ್ತಗಳು, ಕಬ್ಬಿಣದ ಕಿಟ್ಟ	ಪ್ರಾಕ್‌ಮೌರ್ಯ ಅಥವಾ ಹಳೆಯ ಕಬ್ಬಿಣಯುಗಕ್ಕೆ ಸೇರಿದ್ದು (ಕ್ರಿ.ಪೂ. ೧೦೦೦-೫೦೦)
೨. ,, ಬೀಳಗಿ ಪೇಠಾ:—ಅನಗವಾಡಿ, ಬೀರಬಬ್ಬಿ (ಕೃಷ್ಣಾನದಿ ದಂಡೆ) ವಗೈರೆ (ನಕಾಶ ನೋಡಿರಿ)	ಶಂಖದ ವಸ್ತಗಳು, ಬಣ್ಣದ ಮಣ್ಣಿನ ಪಾತ್ರೆಗಳು, ಇತ್ಯಾದಿ	ಸದರ
೩. ,, ಬಾದಾಮಿ ತಾಲೂಕು—ಪಟ್ಟದಕಲ್ಲು, ಮಲಪ್ರಭಾದಂಡೆ	ದಪ್ಪ ಮತ್ತು ತೆಳ್ಳಗಿನ ನುಣುಪಾದ ಮಣ್ಣಿನ ಪಾತ್ರೆ	ಬಾದಾಮಿ ಚಾಲುಕ್ಯ ಅಥವಾ ಆಂಧ್ರ ಕಾಲದವು
೪. ,, ಸೊಲ್ಲಾಪುರ—ಭೀಮಾದಂಡೆ ಬ್ರಹ್ಮಪುರಿ (ಪಂಢರಪುರ ತಾಲೂಕು)	ಬಣ್ಣದ ಪಾತ್ರೆ, ಶಂಖದ ತುಣುಕು, ಕಬ್ಬಿಣದ ಕಿಟ್ಟ ಇತ್ಯಾದಿ	ಮತ್ತೂ ಆಂಧ್ರ, ಮೌರ್ಯಕಾಲದವು (ಕ್ರಿ.ಪೂ. ೧-೩ ಶತಮಾನ)
೫. ,, ಕೊಲ್ಲಾಪುರ ಸಂಸ್ಥಾನ—ಪಂಚಗಂಗಾನದಿಯ ಮೂಲೆ ಬ್ರಹ್ಮಪುರಿ (ಕೊಲ್ಲಾಪುರದ ಹತ್ತಿರ)	ಸುಟ್ಟ ಮಣ್ಣಿನ ಗೊಂಬೆ, ಬಣ್ಣದ ಪಾತ್ರೆ ಇತ್ಯಾದಿ	ಆಂಧ್ರಕಾಲದವು (ಕ್ರಿ.ಶ ೨-೩ನೆಯ ಶತಮಾನ)
೬. ,, ಸಾಂಗ್ಲಿ ಸಂಸ್ಥಾನ—ಶಿರಹಟ್ಟಿ ತಾಲೂಕು ಇಟಗಿ (ಗೋಗಾವ, ದಿಗ್ರಜ್ ಇತ್ಯಾದಿ)	ಬಣ್ಣದ ಪಾತ್ರೆ, ಸುಟ್ಟ ಮಣ್ಣಿನ ಯಜ್ಞಪಾತ್ರೆ (ಉಖಾಪಾತ್ರ)	ಯಜ್ಞಪಾತ್ರೆಯು ಹಿಂದುಸ್ತಾನದಲ್ಲೆಲ್ಲಿಯೂ ಸಿಕ್ಕಿಲ್ಲ. ಅಪರೂಪ. ಕಬ್ಬಿಣ ಯುಗ—ಆಂಧ್ರಕಾಲದ್ದು
೭. ,, ಬೆಳಗಾವಿ ಹತ್ತಿರ—ಕುರುಂದವಾಡ ಸಂಸ್ಥಾನದ ರಾಜಧಾನಿ: ವಡಗಾವ	ಬಣ್ಣದ ಚೌಕಾನೆ, ರೇಖಾಚಿತ್ರಗಳುಳ್ಳ ಪಾತ್ರೆ (ಮಣ್ಣಿನವು) ಇಟ್ಟಂಗಿ. ಕಬ್ಬಿಣದ ಆಯುಧ. ಕ್ರಿ.ಪೂ. ೧ನೆಯ ಶತಮಾನದ ಬ್ರಾಹ್ಮೀಸ್ತಂಭ ಲಿಪಿ. ಆಂಧ್ರನಾಣ್ಯ (ಬೆಳ್ಳಿಯದು)	ಆಂಧ್ರ ಮೌರ್ಯ, ಕಬ್ಬಿಣಯುಗದ ಅವಶೇಷಗಳು
೮. ,, ಜಮಖಂಡಿಯ ಹತ್ತಿರ ಗೊಂಬಿಗುಡ್ಡ	ಪ್ರಾಗೈತಿಹಾಸಿಕ ಗುಡ್ಡದ ಓರೆಯಲ್ಲಿ ಕೊರೆದ ರೇಖಾಚಿತ್ರಗಳು	ಇವುಗಳ ಮಹತ್ವವನ್ನು ಕೆಳಗೆ ಲೇಖನದಲ್ಲಿ ನೋಡಿರಿ

ಟೀಪು—ಉಳಿದ ಸನ್ನಿವೇಶಗಳನ್ನು ನಕಾಶದಲ್ಲಿ ನೋಡಬಹುದು.

ಈ ಸ್ಥಳಗಳ ಶೋಧನೆಯು ಕರ್ನಾಟಕ ಸಂಸ್ಕೃತಿಯ ಜ್ಞಾನಕ್ಕೆ ಎಷ್ಟು ಉಪಕಾರಕವಾಗಿರುವದೆಂಬುದನ್ನು ಕೆಳಗಿನ ವಿವೇಚನೆಯಿಂದ ತಿಳಿಯಬಹುದು. ೧೯೨೪ ಕ್ಕೆ ಮುಂಚೆ ಭಾರತ ವರ್ಷದ ಚರಿತ್ರವು ಕ್ರಿ. ಶ. ೩ ನೆಯ ಶತಮಾನಕ್ಕೆ ಮೊದಲುಗೊಂಡಿತ್ತು. ಮಹೆಂಜೋದಾರೋ ಅಗಿತದಿಂದ ಆ ಚರಿತ್ರವು ಒಮ್ಮೆಲೇ ಕ್ರಿ.ಪೂ. ೩೦೦೦ ಕ್ಕೆ ಹಿಮ್ಮೆಟ್ಟಿತು. ಆದರೆ ಕ್ರಿ.ಪೂ. ೩೦೦೦ ದಿಂದ ಕ್ರಿ.ಪೂ. ೩೦೦ ವರ್ಷಗಳ ಮಧ್ಯಕಾಲದ ಚರಿತ್ರವು ಕಾಣದಂತಾಗಿತ್ತು. ಈ ಮಧ್ಯ ಯುಗದಲ್ಲಿ ಹಳೆಯ ಮತ್ತು ಹೊಸ ಕಬ್ಬಿಣ ಯುಗಗಳು ಸೇರುತ್ತವೆ. ಉತ್ತರ ಹಿಂದೂಸ್ಥಾನದಲ್ಲಿ ಆಗ ತಾಮ್ರ ಯುಗವು ಪ್ರಚಾರದಲ್ಲಿತ್ತು. ಹೆರಕಲ್ಲು, ವಡಗಾವ, ಮಾಧವಪುರ, ಇಟಗಿ, ಬೀಳಗಿ ಪೇಠೆಯ ಸ್ಥಳಗಳು—ಇವೆಲ್ಲ ಹಳೆಯ ಕಬ್ಬಿಣ ಯುಗಕ್ಕೆ ಹೊಂದುತ್ತವೆ. ಅಂತು ಕ್ರಿ.ಪೂ. ೧೦೦೦—೧೫೦೦ ವರ್ಷಗಳ ಚಾರಿತ್ರಿಕ ಅಂಶಗಳನ್ನು ಈ ಶೋಧನೆಯು ಬೆಳಕಿಗೆ ತರುವದರಿಂದ ಕತ್ತಲೆಯಲ್ಲಿ ಮರೆಯಾಗಿದ್ದ ವಸ್ತು ಕೆಲ ಮಟ್ಟಿಗೆ ಬಯಲಿಗೆ ಬಂದಂತಾಯಿತು. ಈ ಸ್ಥಳಗಳಲ್ಲಿ ದೊರೆತದ ಮಣ್ಣಿನ ಪಾತ್ರೆಗಳು, ಬಣ್ಣದ ನುಣುಪಾದ ಗಡಿಗೆ ಮಡಿಕೆಗಳು, ಇಟ್ಟಂಗಿಗಳು, ಶಂಖದ ವಸ್ತುಗಳು, ಯಜ್ಞದ ಪಾತ್ರೆ (ಉಖಾಪಾತ್ರ) ಕಿಟ್ಟದ ಮೂರ್ತಿಗಳು ಇತ್ಯಾದಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಆ ಕಾಲದ ಜನಜೀವನವು ಗೊತ್ತಾಗುವಂತಿದೆ. ಈ ಶೋಧಗಳ ಮಹತ್ವವನ್ನು ಕುರಿತು ಆರ್ಕ್ಯಾಲಾಜಿ ಡಾಯರಕ್ಟರ ಜನರಲ್‌ರಾಗಿದ್ದ ರಾವ ಬಹದ್ದೂರ್ ಕೆ. ಎನ್. ದೀಕ್ಷಿತರು ೧೯೪೧ ಮತ್ತು ೧೯೪೩ ರಲ್ಲಿ ಪರೀಕ್ಷಿಸಿ ಈ ರೀತಿ ಬರೆಯುತ್ತಾರೆ:

'During the last year, Mr. Panchamukhi has been fortunate in bringing to light important material for the study of Archaeology of Karnatak. The existence of sites of the early iron or historic age in the Mysore and Hyderabad states, such as Brahmagiri and Maski, had been known to Archaeologists for some time past. The Archaeological survey with its preoccupations covering the provinces of Sind and Bombay have hitherto been unable to do such exploration in the Bombay-Karnatak as would have connected the discoveries in Hyderabad, Mysore and Madras Presidency with the Bombay-Karnatak. It was left to Mr. Panchamukhi to discover the links in the chain on the side of the Bombay Karnatak, and he has thus opened a new field for work for Archaeologists.—*20th September, 1941.*

'His examination of the surface-remains in various parts of the Karnatak has revealed a chain of sites in the Bilgi Petha of the



A



B

ಪನಾಥ
ವಾಲಯ,
ಟ್ಟದಕಲ್.
ಣ ನೋಟ



C ಉತ್ತರ ಗೋಪುರವಿರುವ ದೇವಾಲಯ, ಮಹಾಕೂಟ.
ಮಹಾಕೂಟೇಶ್ವರದೇವಾಲಯದ ಅಂಗಳದಲ್ಲಿ

B ಲಕುಲೀಶ—
ಪಟ್ಟದಕಲ್.
ವಿರೂಪಾಕ್ಷ
ದೇವಾಲಯ;
ಹಿಂಬದಿಯ ಗೋ

ಕ್ಷಾಪಾತ್ರ—
ಗಿಯಲ್ಲಿ
ದ್ಧರಿಸಿದ್ದು.
ರವಾಡ ಕನ್ನಡ
ಶೋಧಾಲಯದ
ವಸ್ತುಶಾಲೆ
ಲ್ಲಿದೆ

E ಭೈರವ ಮೂರ್ತಿ
ಪಟ್ಟದಕಲ್.
ವಿರೂಪಾಕ್ಷ
ದೇವಾಲಯದ
ಹೊರಗೋಡೆ.

D

E





Bijapur district, the existence of which was never suspected. The time has now come for starting a programme of regular and systematic excavation in the Bombay-Karnatak, particularly in view of the connected cultures in the adjoining districts of Mysore, Madras Presidency and Hyderabad.'—*11 April*, *1943*.

ಈ ನಿವೇಶನಗಳಲ್ಲಿ ಕೆಲವನ್ನಾದರೂ ಆರಿಸಿ ಅಗಿಸುವದು ಅವಶ್ಯವದೆ. ಇದರಿಂದ ಸಶಾಸ್ತ್ರವಾಗಿ ಪ್ರಾಚೀನ ಚರಿತ್ರೆಯ ಸಾಮಗ್ರಿಗಳ ಅಧ್ಯಯನವನ್ನು ಮಾಡಲಿಕ್ಕೆ ಶಕ್ಯವಾಗುವದು.

(ಇ) ಶಿಲಾ ಮತ್ತು ತಾಮ್ರ ಶಾಸನಗಳ ಸಂಗ್ರಹ—ಅಭ್ಯಾಸ

ಶಿಲಾ ಮತ್ತು ತಾಮ್ರ ಶಾಸನಗಳ ಸಂಗ್ರಹ ಕಾರ್ಯವು ಉತ್ತರ ಕರ್ನಾಟಕದಲ್ಲಿ ೧೯೨೫—೨೬ ರಲ್ಲಿ ಮೊದಲುಗೊಂಡಿತು. ದಿವಂಗತ ರಾವಬಹದ್ದೂರ ಹೊಸಕೋಟಿ ಕೃಷ್ಣಶಾಸ್ತ್ರಿಗಳು ಇಂಡಿಯಾ ಗವರ್ನಮೆಂಟ್ ಎಪಿಗ್ರಾಫಿಸ್ಟ ಹುದ್ದೆಯಿಂದ ನಿವೃತ್ತರಾಗುವ ಪೂರ್ವದಲ್ಲಿ ಮುಂಬಯಿ ಕರ್ನಾಟಕದ ಶಾಸನ ಸಂಗ್ರಹದ ಕಾರ್ಯವು ನೀಲಗಿರಿಯಲ್ಲಿರುವ ಶಾಸನ ಕಚೇರಿಯಿಂದ ನಡೆಯಬೇಕೆಂದು ವ್ಯವಸ್ಥಗೊಳಿಸಿದರು. ಅಂದಿನಿಂದ ಕೆಲವು ವರ್ಷ ಎನ್. ಲಕ್ಷ್ಮೀನಾರಾಯಣರಾವ್, ಎಂ.ಎ. ಮತ್ತು ಆರ್. ಎಸ್. ಪಂಚಮುಖಿ, ಎಂ.ಎ. ಇವರ ನೇತೃತ್ವದಲ್ಲಿ ವಿಜಾಪುರ, ಧಾರವಾಡ ಜಿಲ್ಹೆಗಳ ಭಾಗಗಳಲ್ಲಿ ಸಮಗ್ರ ಲಿಪಿ ಕಲ್ಲುಗಳ ಅಚ್ಚುಗಳನ್ನು ತೆಗೆದುಕೊಳ್ಳಲಾಯಿತು. ಆ ಕೆಲಸವನ್ನು ಮದ್ರಾಸ ಕಚೇರಿಯಿಂದ ಮಾಡಹತ್ತಿ ಪ್ರತಿ ವರ್ಷ ಅಲ್ಲಿಂದ ಒಬ್ಬ ಅಧಿಕಾರಿಗಳು ಮುಂಬಯಿ ಕರ್ನಾಟಕಕ್ಕೆ ಬಂದು ಶಾಸನಗಳ ಪ್ರತಿಗಳನ್ನು ಮಾಡುತ್ತಿರುವರು. ೧೯೩೯, ಅಕ್ಟೋಬರದಲ್ಲಿ ಮುಂಬಯಿ ಸರಕಾರದವರು ಸ್ಥಾಪಿಸಿದ ಕನ್ನಡ ಸಂಶೋಧನ ಸಂಸ್ಥೆಯು ಈ ಕಾರ್ಯದಲ್ಲಿ ನೆರವಾಗಿ ಸಂಗ್ರಹದ ಕಾರ್ಯವನ್ನು ಒತ್ತರದಿಂದ ಸಾಗಿಸುತ್ತಿರುವದು. Kannada Research Institute ಅಧಿಕಾರಿಗಳು ಈಗಾಗಲೇ ಅಕ್ಕಲಕೋಟ ಸಂಸ್ಥಾನ, ಅಥಣಿ ತಾಲ್ಲೂಕು, ಸಾಂಗ್ಲಿ, ಶಿರಹಟ್ಟಿ, ಭಟಕಳ್ ಪೇಠೆ, ಹೊನ್ನಾವರ ಕುಮಟಾ ತಾಲೂಕುಗಳು, ಸಿದ್ದಾಪುರ, ಕಾರವಾರದ ಕೆಲವು ಭಾಗಗಳು, ಈ ಪ್ರದೇಶದಲ್ಲಿ ಸಂಚರಿಸಿ ಶಾಸನಗಳನ್ನು ಇತರ ಸಾಂಸ್ಕೃತಿಕ ಸಾಮಾಗ್ರಿಗಳನ್ನು ಕಲೆಹಾಕಿ ಶೋಧಿಸುತ್ತಿರುವರು.

ಕಳೆದ ೨೫ ವರ್ಷಗಳ ಶಾಸನ ಸಂಗ್ರಹದಿಂದ ಅನೇಕ ಹೊಸ ಸಂಗತಿಗಳು ಬಯಲಿಗೆ ಬಂದಿವೆ. ರಾಜವಂಶದ ಚರಿತ್ರದಲ್ಲಿ ಎಷ್ಟೋ ಸಂಶಯಗಳು ಹೊಸ ಶೋಧದಿಂದ ನಿವಾರಿತವಾಗಿವೆ. ಹಳೆಯ ಕಲ್ಪನೆಗಳು ಅಳಿದಿವೆ. ಹೆಚ್ಚಿನ ಅಂಶಗಳು

ತಿಳಿದಿವೆ. ೧೯೨೫—೨೬ ರಲ್ಲಿ ಸಂಗ್ರಹಿಸಿದ ಶಾಸನಗಳಿಂದ ಗೋವೆಯ ಕದಂಬರಲ್ಲಿ ೧ ನೆಯ ಜಯಕೇಶಿಯು ಶಕ. ೯೯೩ ರಲ್ಲಿ ೬ನೆಯ ವಿಕ್ರಮಾದಿತ್ಯನ ಅಂಕಿತದಲ್ಲಿ ಆಳುತ್ತಿದ್ದನೆಂದೂ ಶಕ. ೧೦೦೩ ರಲ್ಲಿ ಗೂವಲದೇವನು ಆಳುತ್ತಿದ್ದನೆಂದೂ ೩ ನೆಯ ಜಯಕೇಶಿಗೆ ಶ್ರೀ ದೇವ ಅಥವಾ ಶ್ರೀ ವಜ್ರದೇವನೆಂಬ ಮಗನಿದ್ದನೆಂದೂ ಕದಂಬರ ಕಡೆಯ ರಾಜನಾದ ಚಟ್ಟಯ್ಯದೇವನು ಯಾದವ ಮಹಾ ದೇವರಾಯನ ಅಂಕಿತದಲ್ಲಿ ಶಕ. ೧೧೮೯ರಲ್ಲಿ ಆಳುತ್ತಿದ್ದನೆಂದೂ ಗೊತ್ತಾಗುತ್ತದೆ. ೧೯೨೬-೨೭ರಲ್ಲಿ ಗದುಗು—ರೋಣ ತಾಲೂಕುಗಳ ಶಾಸನ ಪರೀಕ್ಷೆಯಿಂದ ಚಾಲುಕ್ಯರ ಚರಿತ್ರೆಯಲ್ಲಿ ಹೊಸ ಅಂಶಗಳು ತಿಳಿದವು. ೧೧ ನೆಯ ಶತಮಾನದ ಆದಿಯಲ್ಲಿ ಚಾಳುಕ್ಯ ೫ ನೆಯ ವಿಕ್ರಮಾದಿತ್ಯನ ಶಕ ೯೩೪ರ ಕೋಟುಮಚಿಗೆ ಶಾಸನದಿಂದ ಅಗ್ರಹಾರ ಉಮ್ಮಚಿಗೆಯು ನ್ಯಾಸ, ಗಣಿತ, ಜ್ಯೋತಿಷ, ಅಲಂಕಾರ, ಛಂದಸ್ಸುಗಳನ್ನು ಕಲಿಸುವ ವಿದ್ಯಾಪೀಠವಾಗಿತ್ತೆಂದು ಗೊತ್ತಾಗುತ್ತದೆ. ೧೯೨೭—೨೮ರ ಶಾಸನ ಸಂಗ್ರಹವು ೬ನೆಯ ವಿಕ್ರಮಾದಿತ್ಯನೂ ಭುವನೈಕಮಲ್ಲ ಸೋಮೇಶ್ವರನೂ ರಾಜ್ಯಪಟ್ಟಕ್ಕಾಗಿ ಪರಸ್ಪರ ಕದನ ಮಾಡುತ್ತಿದ್ದರೆಂದು ಸೂಚಿಸುತ್ತದೆ. ಇಬ್ಬರೂ ಶಕ. ೯೯೪ರಲ್ಲಿ ಸಾರ್ವಭೌಮಪದದಿಂದ ದತ್ತಿಗಳನ್ನು ಬಿಟ್ಟ ಉಲ್ಲೇಖವಿದೆ. ಇದೇ ವಿಷಯವನ್ನು ಕುರಿತು ವಿಕ್ರಮಾಂಕದೇವ ಚರಿತ್ರದಲ್ಲಿ ಹೇಳುವ ವಿಧಾನಗಳು ಶಾಸನ ಸಂವಾದದಿಂದ ಪುಷ್ಟಿಗೊಳ್ಳುತ್ತವೆ. ಎರಂಬರಗೆಯ (ಯಲಬುರ್ಗಿ) ಸಿಂದರ ವಂಶಾವಳಿ ಕಾಲಮಾನಗಳಲ್ಲಿ ಹೊಸ ಸಂಗತಿಗಳು ಗೊತ್ತಾದವು. ಯಾದವ ಸಿಂಹಣನು ಮಲಪ್ರಭಾ ನದಿಯ ದಕ್ಷಿಣಕ್ಕಿದ್ದ ರಾಜ್ಯವನ್ನು ಹೊಯ್ಸಳ ಬಲ್ಲಾಳನಿಂದ ಕಿತ್ತು ಸ್ವಾಧೀನಪಡಿಸಿಕೊಂಡು ವ್ಯಯಸಂವತ್ಸರಕ್ಕೆ (ಕ್ರಿ.ಶ. ೧೨೨೬) ೧೬ ವರ್ಷಗಳಾಗಿದ್ದವೆಂದು ದೋಣಿಯ ಒಂದು ಶಾಸನವು ಹೇಳುತ್ತದೆ. ಇದರಿಂದ ಸಿಂಹಣನ ಈ ವಿಜಯವು ಕ್ರಿ.ಶ. ೧೨೧೧ರಲ್ಲಿ ಆಗಿರಬೇಕೆಂದು ಗೊತ್ತಾಗುತ್ತದೆ. ೧೯೨೮-೨೯ರ ಶಾಸನಗಳಲ್ಲಿ ಶ್ರೀ ಪೆರ್ಗ್ಗಡೆ ಮಹಾರಾಜ ತೈಲಮಹಾಧಿರಾಜನು ೯ನೆಯ ಶತಮಾನದಲ್ಲಿದ್ದನೆಂದು ಪಟ್ಟದಕಲ್ಲು ಲಿಪಿಯಿಂದ ಗೊತ್ತಾಗುತ್ತದೆ. ಇವನು ಕಲ್ಯಾಣ ಚಾಲುಕ್ಯರ ಮೂಲಪುರುಷನಾದ ೧ನೆಯ ತೈಲನಾಗಿರಬಹುದು. ಇನ್ನೊಂದು ಲಿಪಿಯಿಂದ ಕನ್ನಡ—೪೦೦೦ ಪ್ರಾಂತದಲ್ಲಿ ಕಂದಗಲೆಯು (ಕಂದಗಲ್ಲು—ಹುನಗುಂದ ತಾಲೂಕು) ಕನ್ನಡ ನಾಲ್ಸಾಸಿರ ಪ್ರಾಂತದ ಮಳಿಗೆಯಾಗಿತ್ತೆಂದು ಗೊತ್ತಾಗುತ್ತದೆ. ಯಾದವಸಿಂಘಣನ ಮೊಮ್ಮಗನಾದ ಕೃಷ್ಣನು ಕಂಧಾರಪುರದ ನೆಲೆವೀಡಿನಿಂದ ರಾಜ್ಯವಾಳುತ್ತಿದ್ದನೆಂದು ಯೆಂಡಿಗೇರಿ ಶಾಸನದಿಂದ ತಿಳಿಯುತ್ತದೆ. ಇದರಿಂದ ಆ ಪುರವು ಫ್ಲೀಟರ ಅಭಿಪ್ರಾಯದಂತೆ ಕಲ್ಪಿತ (ಸುಳ್ಳು) ಅಲ್ಲವೆಂದು ನಿರ್ಧಾರಿತವಾಗುತ್ತದೆ. ೧೯೨೯-೩೦ರ ಶಾಸನ

ಸಂಗ್ರಹದಿಂದ ತೈಲಮಹಾರಾಜನು ಮಳಖೇಡದ ರಾಷ್ಟ್ರಕೂಟ ೩ನೆಯ ಕೃಷ್ಣರಾಜನ ಮಾಂಡಲಿಕನಾಗಿದ್ದನೆಂದೂ ಮುಂದೆ ಸ್ವತಂತ್ರ ಚಾಳುಕ್ಯ ರಾಜ್ಯವನ್ನು ಸ್ಥಾಪಿಸಿದನೆಂದೂ ತಿಳಿಯಬಹುದಾಗಿದೆ. ಶಕ ೮೭೯ರ ಕಾರಜೋಳ ಶಿಲಾಶಾಸನದಲ್ಲಿ ಮತ್ತು ಶಕ ೮೮೬ರ ನರಸಲಗೆಯ ಶಾಸನದಲ್ಲಿ ತದ್ದೇವಾಡಿ ನಾಡನ್ನು ೨ನೆಯ ತೈಲನು ಕೃಷ್ಣರಾಜನ ಮಾಂಡಲಿಕನಾಗಿಯೂ ಶಕ ೯೧೫ರ ಕಾಖಂಡರೆ ಶಾಸನದಲ್ಲಿ ತೈಲನೃಪನು ಮಾನ್ಯಖೇಟದಲ್ಲಿ ಸ್ವತಂತ್ರನಾಗಿಯೂ ರಾಜ್ಯಭಾರ ಮಾಡುತ್ತಿದ್ದನೆಂದು ಬರೆದಿರುವದರಿಂದ ಕಲ್ಯಾಣದ ಚಾಳುಕ್ಯರು ಮಾಂಡಲಿಕ ಪದದಿಂದ ಸಾರ್ವಭೌಮ ಪದವನ್ನು ಹೊಂದಿದರೆಂದು ತಿಳಿಯಬಹುದು. ಪರಭಣಿ, ವೇಮುಲವಾಡ ಶಾಸನಗಳಿಂದಲೂ ಪಂಪಭಾರತದಿಂದಲೂ ಪಂಪನ ಪೋಷಕನಾದ ೨ನೆಯ ಅರಿಕೇಸರಿಯು ಬಾದಾಮಿಯ ಚಾಲುಕ್ಯ ಮನೆತನಕ್ಕೆ ಸೇರಿದವನೆಂದೂ ಕಲ್ಯಾಣದ ಚಾಲುಕ್ಯರೂ ಬಾದಾಮಿಯ ಮನೆತನದವರೆಂದೂ ಊಹಿಸಬಹುದಾಗಿದೆ. ೧೯೩೨-೩೩ರಲ್ಲಿ ದೊರಕಿದ ಶಾಸನಗಳು ಹಾವೇರಿ ತಾಲೂಕಿನ ಕಲ್ಲಿಹಾಳ, ಹಾವೇರಿ, ದೇವಗಿರಿ ಮೊದಲಾದ ಗ್ರಾಮಗಳಲ್ಲಿ ಯಾದವರಿಗೂ ಹೊಯ್ಸಳರಿಗೂ ನಡೆದಿದ್ದ ಕದನಗಳನ್ನು ತಿಳಿಸುತ್ತವೆ. ಯಾದವರು ತುಂಗಭದ್ರೆಯ ವರೆಗೂ ತಮ್ಮ ಯುದ್ಧರಂಗವನ್ನು ಬೆಳೆಸಿದ್ದರೆಂಬುದು ಗೊತ್ತಾಗುತ್ತದೆ. ೧೯೩೩-೩೪ರಿಂದ ೧೯೩೮-೩೯ರ ವರೆಗೆ ರಾಣಿಬಿನ್ನೂರು, ಮಣಿಪುರ, ಸಿಂದಗಿ, ಇಂಡಿ, ಜಮಖಂಡಿ, ಕುಂದಗೋಳ, ರಾಮದುರ್ಗ, ಲಕ್ಷ್ಮೇಶ್ವರ, ಸವದತ್ತಿ ಮೊದಲಾದ ಭಾಗಗಳಲ್ಲಿ ಶಾಸನ ಸಂಗ್ರಹವಾಗಿ ಅದರಿಂದ ರಾಜಮನೆತನ, ಜನಜೀವನ, ಧರ್ಮಸ್ಥಿತಿ ಇವುಗಳ ವಿಷಯದಲ್ಲಿ ಹೊಸಹೊಸ ಸಂಗತಿಗಳು ಗೊತ್ತು ಮಾಡಲ್ಪಟ್ಟವು. ಸಿಂದಗಿ ತಾಲೂಕು ಭೀಮಾತೀರದ ಕಡಲೇವಾಡವು ೧೨ನೆಯ ಶತಮಾನದಲ್ಲಿ ಘಟಿಕಾಸ್ಥಾನ (University) ವಾಗಿತ್ತೆಂದು ತಿಳಿಯುತ್ತದೆ.

೧೯೩೯ರಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ಚಾಲಕತ್ವವನ್ನು ವಹಿಸಿದ ಮೇಲೆ ಪ್ರಕೃತಲೇಖಕರು ಬಾದಾಮಿಯಲ್ಲಿ ಅತ್ಯಂತ ಮಹತ್ವದ ಶಾಸನವನ್ನು ಶೋಧಿಸಿದರು. ಇದು ಬಾದಾಮಿಯ ಗುಡ್ಡದ ಎತ್ತರವಾದ ಬಂಡೆಯ ಮಧ್ಯದಲ್ಲಿ ಕೊರೆಯಲ್ಪಟ್ಟಿದೆ. ಶಕ ೪೬೫ರಲ್ಲಿ, ಅಶ್ವಮೇಧಯಾಜಿಯಾದ ಚಾಲುಕ್ಯವಲ್ಲಭೇಶ್ವರನು (೧ನೆಯ ಪುಲಿಕೇಶಿ) ವಾತಾಪಿ ದುರ್ಗವನ್ನು ಮಾಡಿಸಿದನೆಂದು ಈ ಶಾಸನವು ಹೇಳುತ್ತದೆ. ಹಿಂದುಸ್ಥಾನದಲ್ಲಿ ಎಲ್ಲಕ್ಕೂ ಹಳೆಯ ಶಕಾಂಕವುಳ್ಳ ಶಾಸನವಿದು. ೧ನೆಯ ಪುಲಿಕೇಶಿಯ ವಿಶ್ವಸನೀಯವಾದ ಶಿಲಾಶಾಸನ. ಇದರಿಂದ ಕದಂಬರ ಅಳಿಗಾಲವಾದ ಮೇಲೆ ಚಾಲುಕ್ಯರು ಮಾಂಡಲಿಕತ್ವದಿಂದ ಸ್ವತಂತ್ರರಾಗಿ ರಾಜ್ಯಸ್ಥಾಪಿಸಿದರೆಂದು ತಿಳಿಯಬಹುದು. ಇನ್ನೊಂದು ಅಮೌಲ್ಯಶೋಧವೆಂದರೆ—ಬೆಳಗಾವಿಯ ಹತ್ತಿರ

ವಡಗಾವ--ಮಾಧವಪುರದಲ್ಲಿ ಷಟ್ಕೋನಾಕಾರದ ಸ್ತಂಭಲಿಪಿಯನ್ನು ಗೊತ್ತು ಹಚ್ಚಿದ್ದು. ಇದು ಪ್ರಾಕೃತಭಾಷೆಯಲ್ಲಿ ಕ್ರಿ. ಪೂ. ೧ನೆಯ ಶತಮಾನದ ಬ್ರಾಹ್ಮೀ ಲಿಪಿಯಲ್ಲಿ ಬರೆಯಲ್ಪಟ್ಟಿದೆ. ಈ ಭಾಷೆ, ಲಿಪಿಯ ಶಾಸನಗಳು ಪ್ರಾಯಃ ಬೌದ್ಧ ಧರ್ಮದವಿರುತ್ತವೆ. ಆದರೆ ಇದರಲ್ಲಿ ತ್ರಿವಾಜಪೇಯಯಾಜಿ, ಅಶ್ವಮೇಧಯಾಜಿ, ಕಾಸ್ಯಪಗೋತ್ರದ ಪುರುಷನ ಉಲ್ಲೇಖವಿರುವದರಿಂದ ಇದು ವೈದಿಕ ಧರ್ಮದ ಶಾಸನವೆಂದು ತಿಳಿಯಬಹುದು. ಆ ಕಾಲದ ವೈದಿಕಧರ್ಮದ ಪರಿಸ್ಥಿತಿಯನ್ನು ತಿಳಿದುಕೊಳ್ಳಲಿಕ್ಕೆ ಅನುಕೂಲವಾದ ಆಧಾರವಿದು. ಮೇಲ್ಕಂಡ ಶೋಧಗಳಲ್ಲದೆ ಕನ್ನಡಸಂಶೋಧನ ಸಂಸ್ಥೆಯು ಅಕ್ಕಲಕೋಟ—ವಿಜಾಪುರದ ಲಿಪಿಗಳಿಂದ ೧೨ನೆಯ ಶತಮಾನದಲ್ಲಿ ಹೊಸದೊಂದು ಶಿಲಾಹಾರ ಮನೆತನವು ಅಲ್ಲಿ ಆಳುತ್ತಿತ್ತೆಂದೂ ಮಂಗಳವೇಡೆಯು ಕಳಚುರ್ಯ ಜೋಗಮರಸನ ಕಾಲದಲ್ಲಿಯೇ ಆ ಮನೆತನದ ರಾಜಧಾನಿ ಆಗಿತ್ತೆಂದೂ, ಭಟ್ಕಳದ ಲಿಪಿಗಳಿಂದ ನಗಿರೆ, ಹಾಡುವಳ್ಳಿಗಳಲ್ಲಿ ವಿಜಯನಗರದ ಮಾಂಡಲಿಕರಾದ ಚಿಕ್ಕಪುಟ್ಟರಾಜ ಮನೆತನಗಳು ಬಾಳಿ ಕರ್ನಾಟಕದ ವೈಭವಕ್ಕೆ ಕಾರಣರಾಗಿದ್ದರೆಂದೂ ಅವರ ಕಾಲದಲ್ಲಿ ೧೬ನೆಯ ಶತಮಾನದಲ್ಲಿ ಶಬ್ದಾನುಶಾಸನವನ್ನು ಬರೆದ ಭಟ್ಟಾಕಳಂಕಮುನಿಯು ಪೋಷ್ಯನಾಗಿದ್ದನೆಂದೂ ಇವೇ ಮೊದಲಾದ ಹೊಸ ಸಂಗತಿಗಳನ್ನು ಬಯಲಿಗೆ ತಂದು ಇತಿಹಾಸಲೇಖಕರಿಗೆ ಬಹಳ ಉಪಕಾರವನ್ನು ಮಾಡಿದೆ. ಹೊನ್ನಾವರ ಕುಮಟಾ ತಾಲೂಕಿನ ಶಾಸನಗಳಿಂದ 'ಪೊನ್ನವುರ ಪುರವರಾಧೀಶ್ವರ'ರಾದ ಕದಂಬರು ೧೧-೧೨ನೆಯ ಶತಮಾನಗಳಲ್ಲಿ ಪಶ್ಚಿಮಕರಾವಳಿಯಲ್ಲಿ ಆಳುತ್ತಿದ್ದರೆಂದು ಗೊತ್ತಾಗುತ್ತದೆ. ಈ ಕದಂಬರು ಹಾನುಗಲ್ ಗೋವೆ ಮನೆತನಗಳಿಗೆ ಸೇರಿದವರಲ್ಲ.

ಗೋವೆಯ ಸಿರೋಡಾ ತಾಮ್ರ ಶಾಸನದಿಂದ ಪಶ್ಚಿಮ ಕರಾವಳಿಯಲ್ಲಿ ಕ್ರಿ.ಶ. ೪-೫ನೆಯ ಶತಮಾನದಲ್ಲಿ 'ಗೋಮಿನ್' ಎಂಬ ಮನೆತನದ ರಾಜರಾಳುತ್ತಿದ್ದರೆಂದು ಗೊತ್ತಾಗಿದೆ. ಹಳದೀಪುರ ತಾಮ್ರಶಾಸನವು ೬ನೆಯ ಶತಮಾನದ ಗದ್ಯ ಕನ್ನಡದಲ್ಲಿ ಬರೆಯಲ್ಪಟ್ಟಿದ್ದು ಪಲ್ಲವಮನೆತನದ ಪಲ್ಲವರಾಜ ಗೋಪಾಲದೇವನು ಆ ಕಾಲದ ಚಾಳುಕ್ಯದ ಸೇವಕನಾಗಿದ್ದನೆಂದು ತಿಳಿಸುತ್ತದೆ. ಗೊಡಚಿತಾಮ್ರ ಶಾಸನವು ಕತ್ತಿಅರಸನ (ಕೀರ್ತಿವರ್ಮ) ಕಾಲದ್ದು. ಇದಾದರೂ ೬-೬ನೆಯ ಶತಮಾನದ ಕನ್ನಡಗದ್ಯವನ್ನು ಉಪಯೋಗಿಸುತ್ತದೆ. ಹೀಗೆ ರಾಜಕೀಯ ಚರಿತ್ರದಲ್ಲಿ ಅನೇಕ ಹೊಸ ರಾಜಮನೆತನಗಳು, ರಾಜರ ರಾಣಿಯರ ಹೆಸರುಗಳು, ಕಾಲಮಾನಗಳು ಶೋಧಿಸಲ್ಪಟ್ಟಿವೆ. ಈ ಎಲ್ಲ ಶಾಸನಗಳ ಸೂಕ್ಷ್ಮ ವಿಮರ್ಶೆಯಿಂದ ೬ನೆಯ ಶತಮಾನದಿಂದ ೧೬ನೆಯ ಶತಮಾನದ ವರೆಗಿನ ವಿಶಾಲವೆಂಬ ಅವಧಿಯಲ್ಲಿ

ಧಾರ್ಮಿಕ, ಸಾಮಾಜಿಕ, ಲಲಿತ ಕಲೆಗಳ ಮತ್ತು ಜನಜೀವನದ ಪರಿಸ್ಥಿತಿ ಹೇಗೆ ಇತ್ತೆಂಬುದು ಸ್ಪಷ್ಟವಾಗುವುದು.

(ಉ) ಕಲಾಕೃತಿಗಳ ಅಭ್ಯಾಸ

ಈ ೨೫ ವರ್ಷಗಳ ಅವಧಿಯಲ್ಲಿ ಉತ್ತರ ಕರ್ನಾಟಕದ ಕಲಾಕೃತಿಗಳ ಅಧ್ಯಯನವು ಅಷ್ಟೊಂದು ತೃಪ್ತಿಕರವಾಗಿ ಸಾಗಿಲ್ಲ. ಅಭ್ಯಾಸಕ್ಕೆ—ಸಂಶೋಧನಕ್ಕೆ ಹೊಸ ಅನ್ನವನ್ನು ಪೂರೈಸತಕ್ಕ ಕೃತಿಗಳು ಈ ಭಾಗದಲ್ಲಿ ಹೇರಳವಾಗಿ ಸಿಕ್ಕುತ್ತವೆ. ಇಂಥ ಕೃತಿಗಳನ್ನು (೧) ದೇವಾಲಯಗಳು (ವಾಸ್ತುಶಿಲ್ಪ), (೨) ಚಿತ್ರಗಳು (ರೇಖಾಮಯ ಮತ್ತು ವರ್ಣಮಯ), ಮತ್ತು (೪) ಸಂಗೀತ ಎಂದು ನಾಲ್ಕು ಬಗೆಯಾಗಿ ವಿಂಗಡಿಸಬಹುದು. ಈ ಎಲ್ಲ ಅಂಗಗಳಲ್ಲಿ ದೊರಕುವ ವಿಪುಲವಾದ ಸಾಮಗ್ರಿಯನ್ನು ಯಾರೂ ಕೂಲಂಕಷವಾಗಿ ವಿಮರ್ಶೆಮಾಡಿಲ್ಲ. ಕನಿಂಗಹ್ಯಾಮರು *Indian and Eastern Architecture* ಎಂಬ ಗ್ರಂಥದಲ್ಲಿ ಚಾಳುಕ್ಯಶೈಲಿಯ ದೇವಾಲಯಗಳನ್ನು ಕುರಿತು ಸಂಕ್ಷೇಪವಾಗಿ ಬರೆದಿದ್ದಾರೆ. ಕಸೆನ್ಸರು *Chalukyan Architecture* ಎಂಬ ಪುಸ್ತಕದಲ್ಲಿ ವಾಸ್ತುಶಿಲ್ಪದ ದಿಗ್ದರ್ಶನಮಾಡಿದ್ದಾರೆ. *Bas Reliefs of Badami* ಎಂಬ ಗ್ರಂಥದಲ್ಲಿ ದಿವಂಗತ ಬ್ಯಾನರ್ಜಿಯವರು ಚಾಲುಕ್ಯರ ಮೂರ್ತಿಶಿಲ್ಪವನ್ನು ಕುರಿತು ಬರೆದಿದ್ದಾರೆ. ಹ್ಯಾವೆಲ್ ಎಂಬ ಕಲಾವಿದರು ಹಿಂದೂದೇಶದ ಮೂರ್ತಿಶಿಲ್ಪವನ್ನು ಕುರಿತು ಬರೆಯುವಾಗ ಕರ್ನಾಟಕ ಶಿಲ್ಪಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ತೋರಿಸಿದ್ದಾರೆ. ಗಂಗೂಲಿ ಎಂಬ ಬಂಗಾಲಿ ವಿದ್ವಾನರು *South Indian Architecture* (ದಕ್ಷಿಣ ದೇಶದ ವಾಸ್ತುಶಿಲ್ಪ) ವಿಷಯವಾಗಿ ಬರೆಯುವಾಗ ಕರ್ನಾಟಕದ ದೇವಾಲಯಗಳ ಬಗ್ಗೆ ಸಂಕ್ಷೇಪವಾಗಿ ವಿವರಿಸಿದ್ದಾರೆ. ಆದರೆ ಕ್ರಿ. ಶ. ೬ ನೆಯ ಶತಮಾನದಿಂದ ೧೬-೧೭ ನೆಯ ಶತಮಾನದ ವರೆಗೆ ವಿವಿಧ ಶೈಲಿಗಳನ್ನು ತೋರಿಸುವ ಆಯಾ ದೇವಾಲಯಗಳನ್ನು ಅಂಗಾಂಗಗಳಲ್ಲಿ ವಿಮರ್ಶಮಾಡಿ ಕರ್ನಾಟಕ ಶಿಲ್ಪದ ವೈಶಿಷ್ಟ್ಯ ವೈಲಕ್ಷಣ್ಯಗಳನ್ನು ಕಂಡುಹಿಡಿಯಲಿಕ್ಕೆ ಯಾರೂ ಪ್ರಯತ್ನ ಮಾಡಿಲ್ಲ. ಮತ್ತು ಆ ಮೂರ್ತಿಗಳ ಸೂಕ್ಷ್ಮ ಪರೀಕ್ಷೆಯಿಂದ ಆ ಆಕಾಲದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನವನ್ನು ತಿಳಿದುಕೊಳ್ಳುವದು ಅವಶ್ಯವಿದೆ.

ಚಿತ್ರಕಲೆಯು ಬುನಾದಿಯಿಂದಲೂ ಕರ್ನಾಟಕದಲ್ಲಿ ಪ್ರೌಢ ಸ್ಥಿತಿಯಲ್ಲಿತ್ತೆಂದು ಹೇಳಬಹುದು. ಜಮುಖಂಡಿಯ ಹತ್ತಿರ ಕುಲ್ಲಹಳ್ಳಿ ಆಸಂಗಿಗಳ ಮಧ್ಯದಲ್ಲಿ ಗೊಂಬಿ ಗುಡ್ಡ ಎಂಬ ಗುಡ್ಡವಿರುವದು. ಅದರ ಓರೆಯಲ್ಲಿ ಚಿಗರಿ, ಹೋರಿಗಳು, ಆನೆ, ಒಂಟೆ, ಮನುಷ್ಯ, ಇತ್ಯಾದಿ ಪ್ರಾಣಿಗಳ ರೇಖಾಮಯ ಚಿತ್ರಗಳನ್ನು ಕಲ್ಲಿನಲ್ಲಿ ಕೊರೆದಿರುವರು.

ಇಂಥ ರೇಖಾಮಯ ಚಿತ್ರಗಳು ಬಳ್ಳಾರಿಯ ಹತ್ತಿರ ಕುಪ್ಪಗಲ್ಲಿನಲ್ಲಿಯ ವಿಂಧ್ಯಪರ್ವತಾವಳಿ, ಕೌನಾರ ಬೆಟ್ಟ, ಸಂಯುಕ್ತ ಪ್ರಾಂತದ ಮಿರಝಾಪುರ ಜಿಲ್ಹೆಯ ದಕ್ಷಿಣ ಭಾಗ, ಪೂರ್ವ ಸಂಸ್ಥಾನವಾದ ರಾಯಗಡ ಸಂಸ್ಥಾನದ ಸಿಂಘಾಪುರ, ಪಂಜಾಬದ ಅಟಕ್ ಜಿಲ್ಹೆ ಮತ್ತು ಮಲಬಾರದ ಎಡಕಲ್ ಗವಿಗಳು, ಇತ್ಯಾದಿ ಪ್ರದೇಶಗಳಲ್ಲಿ ದೊರೆತಿವೆ. ಇವೆಲ್ಲವು ಪ್ರಾಗೈತಿಹಾಸಿಕ ರೇಖಾ ಚಿತ್ರಗಳೆಂದು ಪಂಡಿತರು ಅಭಿಪ್ರಾಯಪಟ್ಟಿರುತ್ತಾರೆ. ಇವುಗಳಲ್ಲಿ ಕೆಲವು ಐತಿಹಾಸಿಕ ಯುಗಕ್ಕೆ ಹೊಂದುವಂಥವೂ ಇರುತ್ತವೆ. ಆದರೆ ಗೊಂಬಿಗುಡ್ಡದ ರೇಖಾಮಯ ಚಿತ್ರ (ಶಿಲ್ಪ) ಗಳು ಕಪ್ಪಗಲ್ಲಿನ ಪ್ರಾಗೈತಿಹಾಸಿಕ ರೇಖಾಶಿಲ್ಪಗಳನ್ನು ಹೋಲುವದರಿಂದ ಅವು ಪ್ರಾಗೈತಿಹಾಸಿಕವೆಂದು ತಿಳಿಯಬಹುದು. ಪ್ರಕೃತ ಲೇಖಕರು ಈ ಗೊಂಬಿಗುಡ್ಡದ ಅವಶೇಷಗಳನ್ನು ಶೋಧಿಸಿ ತೆಗೆದು *Annual Report on Kannada Research*, Bombay Province, 1939-40, p. 21-22 ರಲ್ಲಿ ಅವುಗಳನ್ನು ಟಿಪ್ಪಣಿಯೊಂದಿಗೆ ಪ್ರಸಿದ್ಧಿಸಿರುವರು. ೧೯೪೦ ರಲ್ಲಿ ಮದ್ರಾಸದಲ್ಲಿ ನೆರೆದ Indian Science Congress ದ Anthropology and Archaeology ವಿಭಾಗದ ಅಧ್ಯಕ್ಷರಾಗಿದ್ದ ರಾ. ಬ. ಕೆ. ಎನ್. ದೀಕ್ಷಿತರು ಈ ಹೊಸ ಶೋಧನೆಗಳ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ. ವರ್ಣಮಯ ಚಿತ್ರಗಳಲ್ಲಿ ಅತ್ಯಂತ ಪ್ರಾಚೀನವಾದ ಚಿತ್ರಪಟ್ಟಿಕೆಗಳು ಕರ್ನಾಟಕದಲ್ಲಿ ಇತ್ತೀಚೆಗೆ ಶೋಧಿಸಲ್ಪಟ್ಟಿವೆ. ಹಿಂದುಸ್ತಾನದಲ್ಲಿ ಎಲ್ಲಕ್ಕೂ ಹಳೆಯ ಚಿತ್ರಗಳು (ಕ್ರಿ. ಶ. ೯ ಶತಮಾನ) ಶಿರಗುಜ ಸಂಸ್ಥಾನದ ರಾಮಗಡ, ಅಜಂಟಾ ಮತ್ತು ಬಾಗಗಳಲ್ಲಿ ದೊರಕುತ್ತವೆ. ಆಮೇಲೆ ಬಾದಾಮಿಯ ವೈಷ್ಣವ ಗವಿಯ ಲೋವಿಯ ಹಿಂಬದಿಯಲ್ಲಿ ಚಾಲುಕ್ಯ ಕಾಲದ ಕಲಾಕೌಶಲ್ಯವನ್ನು ವ್ಯಕ್ತಪಡಿಸುವ ರಾಣೀ ನಿವಾಸವನ್ನು ಚಿತ್ರಿಸುವ ಚಿತ್ರಗಳು ದೊರೆತಿವೆ. ಇವುಗಳ ಶೋಧವು ೧೯೩೫ ರಲ್ಲಿ ಆಯಿತು. ಈ ಚಿತ್ರಗಳನ್ನು ನಿರ್ಮಿಸಿದ ಕಲಾವಿದನ ಹೆಸರು 'ದುಟ್ಟಮನೋದಾರುಣನ್' ಎಂದು ಅಲ್ಲಿಯೇ ಚಾಲುಕ್ಯ ಲಿಪಿಯಲ್ಲಿ (೯ ನೆಯ ಶತಮಾನ) ಬರೆದಿದೆ. ಇದಾದಮೇಲೆ ೭ ನೆಯ ಶತಮಾನದ ಚಿತ್ರಗಳು ಪುದುಕೋಟೆ ಸಂಸ್ಥಾನದ ಸಿತ್ತನ್ನವಾಶಲ್ ಗವಿಗಳಲ್ಲಿ ದೊರೆತಿವೆ. ಇವುಗಳನ್ನು ಪಲ್ಲವ ಮಹೇಂದ್ರವರ್ಮನು ಕೊರೆಯಿಸಿದನು. ಬಾದಾಮಿಯ ಚಿತ್ರಪಟ್ಟಿಕೆಯಲ್ಲಿ ಮೇಲುಪ್ಪರಿಗೆ, ಒಳ ಅಂಗಳ, ಕ್ರೀಡಾ ಸರೋವರ, ಹಂಸಗಳು, ಕಮಲಗಳು, ಪುಷ್ಪಾವಚಯವನ್ನು ಮಾಡುವ ಸುಂದರ ಸ್ತ್ರೀಯರು, ವಿರಹದಿಂದ ಬಳಲುವ ರಾಜಪುತ್ರಿ (?) ಇತ್ಯಾದಿ ಸನ್ನಿವೇಶಗಳು ರಸವತ್ತಾಗಿ ನಿರೂಪಿಸಲ್ಪಟ್ಟಿವೆ. ಈ ಚಿತ್ರಗಳು ಹಿಂದುಸ್ತಾನದ ಚಿತ್ರಕಲೆಯ ಇತಿಹಾಸದಲ್ಲಿ ಒಳ್ಳೇ ಮಹತ್ವದ ಸ್ಥಾನವನ್ನು ಹೊಂದುತ್ತವೆಂಬಲ್ಲಿ ಸಂದೇಹವಿಲ್ಲ.

(ಖು) ನಾಣ್ಯಗಳ ಅಭ್ಯಾಸ

ಪ್ರಾಚೀನ ನಾಣ್ಯಗಳ ಪರೀಕ್ಷೆಯು ನಾಡಿನ ಚಾರಿತ್ರಿಕ ವಿವೇಚನಕ್ಕೆ ಅತ್ಯಂತ ಮಹತ್ವವಾದ ಸಾಮಗ್ರಿಯು. ಉತ್ತರ ಕರ್ನಾಟಕದಲ್ಲಿ ಮೌರ್ಯರಿಂದ ಆರಂಭಿಸಿ ಪ್ರಸಿದ್ಧ ರಾಜಮನೆತನಗಳು ರಾಜ್ಯಭಾರಮಾಡಿರುವವು. ಆಂಧ್ರರ ನಾಣ್ಯಗಳು ಕೊಲ್ಲಾಪುರದ ಹತ್ತಿರ ಪಂಚಗಂಗಾ ನದಿಯ ದಂಡೆಯಲ್ಲಿ ಬ್ರಹ್ಮಪುರಿಯಲ್ಲಿ ಸೇತುವೆಯನ್ನು ಕಟ್ಟುವಾಗ ಅಗಿತದಲ್ಲಿ ಸಿಕ್ಕವು. ಅವುಗಳ ಅಭ್ಯಾಸವನ್ನು ಸ್ಮಿತ್‌ರೂ ರಾಪ್ಸನ್‌ರೂ ತಮ್ಮ ನಾಣ್ಯ ವಿವೇಚನೆಯ ಪುಸ್ತಕಗಳಲ್ಲಿ ಮಾಡಿದ್ದಾರೆ. ಇಲಿಯಟರು ತಮ್ಮ *Coins of South India* ಎಂಬ ಪುಸ್ತಕದಲ್ಲಿ ಕರ್ನಾಟಕದ ಹಳೆಯ ನಾಣ್ಯಗಳ ವಿವರವನ್ನು ತಿಳಿಸಿದ್ದಾರೆ. ಹುಲ್ಷರು ವಿಜಯನಗರದ ನಾಣ್ಯಗಳ ಬಗ್ಗೆ ಕೆಲವು ಟಿಪ್ಪಣಿಗಳನ್ನು *Indian Antiquary* ಯಲ್ಲಿ ಪ್ರಸಿದ್ಧಿಸಿರುವರು. ಬೀಡಿ ಎಂಬವರು ವರಾಹ ಅಥವಾ ಇಂಡಿಯನ್ ಪಗೋಡಾ ಎಂಬ ಚಿಕ್ಕ ಪುಸ್ತಕದಲ್ಲಿ **ವರಾಹ**ಗಳನ್ನು ಕುರಿತು ವಿವೇಚಿಸಿರುವರು. ಪ್ರಿನ್ಸೆಪ್ಸ ಇವರು ತಮ್ಮ *Indian Antiquities* **Vol. I and II** ಗಳಲ್ಲಿ ತಕ್ಕಮಟ್ಟಿಗೆ ಹಳೆಯ ನಾಣ್ಯಗಳ ವಿವೇಚನೆಯನ್ನು ಮಾಡಿದ್ದಾರೆ. ಆದರೆ ಕನ್ನಡ ರಾಜಮನೆತನಗಳ ನಾಣ್ಯಗಳ ಬಗ್ಗೆ ದಿಗ್ದರ್ಶಕ ಗ್ರಂಥಗಳಾವುವೂ ಆಗಿಲ್ಲ. ಪ್ರೊ. ಕುಂದಣಗಾರರು ಕೊಲ್ಲಾಪುರದಲ್ಲಿ ದೊರೆತ ಆಂಧ್ರ ನಾಣ್ಯಗಳನ್ನು ಕುರಿತು *Journal of the Numismatic Society of India* ದಲ್ಲಿ ಬರೆದಿರುವರು. ಡಾ. ಕೃಷ್ಣ ಇವರು ಮೈಸೂರು ಆರ್ಕ್ಯಾಲಾಜಿ ರಿಪೋರ್ಟುಗಳಲ್ಲಿ ಕೆಲವು ವಿಜಯನಗರದ ನಾಣ್ಯಗಳನ್ನು ಪಟಗಳೊಂದಿಗೆ ಪ್ರಸಿದ್ಧಿಸಿರುವರು. ಪ್ರಕೃತ ಲೇಖಕರು *Vijayanagara Sexcentenary* Volume 1936 ರಲ್ಲಿ ವಿಜಯನಗರದ ಅರಸರ ಬಂಗಾರದ ನಾಣ್ಯಗಳನ್ನು ವಿವೇಚಿಸುವಾಗ ಕರ್ನಾಟಕದ ನಾಣ್ಯಪದ್ಧತಿಯ ಬೆಳವಣಿಗೆಯನ್ನು ಸಂಕ್ಷೇಪವಾಗಿ ವಿವರಿಸಿರುವರು. *Journal of the Numismatic Society of India*, Bombay, 1942 ರಲ್ಲಿ ವಿಜಯನಗರದ ತಾಮ್ರ ನಾಣ್ಯಗಳನ್ನು ವಿವೇಚಿಸಿ ಪಟದೊಂದಿಗೆ ಪ್ರಸಿದ್ಧಿಸಿರುವರು. ಉತ್ತರ ಕರ್ನಾಟಕದಲ್ಲಿ ನಾಣ್ಯಗಳನ್ನು ಸಂಗ್ರಹಿಸಿ ವಿಮರ್ಶೆಮಾಡುವ ಕಾರ್ಯವು ಇನ್ನೂ ಎಳಕದಲ್ಲಿದೆ. ಜಿಜ್ಞಾಸುಗಳು ಅದನ್ನು ಆದರದಿಂದ ಕೈಕೊಳ್ಳುವದು ಅವಶ್ಯವಿದೆ.

(ಜ) ಉತ್ತರ ಕರ್ನಾಟಕದಲ್ಲಿ ವಸ್ತುಸಂಗ್ರಹಾಲಯದ ಆವಶ್ಯಕತೆ —ಐತಿಹಾಸಿಕ ಪ್ರಕಟನೆಗಳು

ಈ ಸಂದರ್ಭದಲ್ಲಿ ಉತ್ತರಕರ್ನಾಟಕದಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯದ ಆವಶ್ಯಕತೆಯನ್ನು ಕುರಿತು ಒಂದೆರಡು ಮಾತು ಹೇಳಬಯಸುವೆವು. ಮುಂಬಯಿ,

ಮದ್ರಾಸ್, ಕಲ್ಕತ್ತೆ, ಹೈದರಾಬಾದಗಳಲ್ಲಿ ಐತಿಹಾಸಿಕ ವಸ್ತುಸಂಗ್ರಹಾಲಯಗಳು ಪುಷ್ಟವಾಗಿ ಬೆಳೆದು ವಿದ್ಯಾರ್ಥಿಗಳಿಗೂ ಪಂಡಿತರಿಗೂ ಉಪಕಾರಕವಾಗಿವೆ. ಆದರೆ ಪ್ರಾಚ್ಯ ಅವಶೇಷಗಳಿಂದ ತುಂಬಿ ಮೆರೆಯುತ್ತಿದ್ದ ಉತ್ತರ ಕರ್ನಾಟಕದಲ್ಲಿ ಅವುಗಳನ್ನು ವ್ಯವಸ್ಥೆಯಿಂದ ಸಂಗ್ರಹಿಸಿ ಅವುಗಳ ಮಹತ್ವವನ್ನು ತಿಳಿಸುವ **ಮ್ಯುಜಿಯಂ** ಒಂದಾದರೂ ಇಲ್ಲ. ಈ ಕೊರತೆಯನ್ನು ಹೋಗಲಾಡಿಸಲು ಕನ್ನಡ ಸಂಶೋಧನ ಸಂಸ್ಥೆಯ ಅಂಗವಾಗಿ ಧಾರವಾಡದಲ್ಲಿ **ಕನ್ನಡ ರಿಸರ್ಚ ಮ್ಯುಜಿಯಂ** ಅನ್ನು ಆರಂಭಿಸಿದ್ದೇವೆ. ಈಗ ೪-೫ ವರ್ಷಗಳಲ್ಲಿ ಅಲ್ಲಿ ಸಂಗ್ರಹಿಸಲ್ಪಟ್ಟ ವಸ್ತುಗಳು ಒಳ್ಳೇ ಅಪರೂಪವಾಗಿದ್ದು ಬೇರೆ ಮ್ಯುಜಿಯಂದಲ್ಲಿ ಕಾಣದೆ ಕರ್ನಾಟಕಕ್ಕೇ ವಿಲಕ್ಷಣವಾಗಿದ್ದು ಆ ನಾಡಿನ ಸಂಸ್ಕೃತಿಯ ವೈಶಿಷ್ಟ್ಯವನ್ನು ತಿಳಿಸುವಂತಿವೆ. ಶಾಲೆ ಕಾಲೇಜುಗಳಂತೆ 'ಮ್ಯುಜಿಯಂ' ಒಳ್ಳೇ ಮಹತ್ವದ ಶಿಕ್ಷಣ ಸಂಸ್ಥೆ ಎಂಬ ಮಾತನ್ನು ಶಿಕ್ಷಣಾಭಿಮಾನಿಗಳೂ, ಸರಕಾರದವರೂ ಮರೆಯತಕ್ಕದಲ್ಲ. ಮ್ಯುಜಿಯಂಗಳಿಗೂ ಶಿಕ್ಷಣ ಸಂಸ್ಥೆಗಳಿಗೂ ನಿಕಟವಾದ ಸಂಬಂಧವಿರಬೇಕು. ಕನ್ನಡ ರಿಸರ್ಚ ಮ್ಯುಜಿಯಂದಲ್ಲಿ ಪ್ರಾಗೈತಿಹಾಸಿಕ ವಸ್ತುಗಳು ಮೂರ್ತಿ ಶಿಲ್ಪ, ವಾಸ್ತು ಶಿಲ್ಪ, ನಾಣ್ಯಗಳು, ಶಾಸನದ ಅಚ್ಚುಗಳು, ತಾಮ್ರ ಪಟಗಳು, ಕಡಿತಗಳು, ತಾಡವಾಲಿಯ ಗ್ರಂಥಗಳು, ಚಿತ್ರಗಳು ಇವೇ ಮೊದಲಾದ ಅಂಗಗಳಲ್ಲಿ ವಿವಿಧ ಸಾಮಗ್ರಿಗಳನ್ನು ಕೂಡಿಸಿ ಸಶಾಸ್ತ್ರವಾಗಿ ಪ್ರದರ್ಶಿಸಿದೆ. ಉತ್ತರಕರ್ನಾಟಕದ ಸಾಂಸ್ಕೃತಿಕ ಅಧ್ಯಯನಕ್ಕೆ ಜೀವಾಳವಾದ ಈ ವಸ್ತುಸಂಗ್ರಹಾಲಯವನ್ನು ಸರ್ವಾಂಗಗಳಲ್ಲಿ ಬೆಳೆಸುವದು ಅತ್ಯವಶ್ಯವಿದೆ.

ಮೇಲ್ಕಂಡ ವಿವೇಚನೆಯಿಂದ ಉತ್ತರಕರ್ನಾಟಕದಲ್ಲಿ ಪ್ರಾಚ್ಯವಸ್ತು ವಿಜ್ಞಾನದಲ್ಲಿ ಯಾವ ಬಗೆಯ ಪ್ರಯತ್ನಗಳು ನಡೆದಿವೆ ಎಂಬುದನ್ನು ಸಂಕ್ಷೇಪವಾಗಿ ತಿಳಿಸಿದ್ದೇವೆ. ಕರ್ನಾಟಕ ಇತಿಹಾಸ ಸಂಶೋಧಕ ಮಂಡಳ, ಧಾರವಾಡ; ಕರ್ನಾಟಕ ವಿದ್ಯಾವರ್ತಕಸಂಘ, ಧಾರವಾಡ; ಕರ್ನಾಟಕ ಸಾಹಿತ್ಯ ಪರಿಷತ್, ಬೆಂಗಳೂರು ಇವೇ ಮೊದಲಾದ ಸಂಸ್ಥೆಗಳು ಉತ್ತರಕರ್ನಾಟಕದ ಪ್ರಾಚ್ಯವಿಜ್ಞಾನದ ಅಧ್ಯಯನಕ್ಕೆ ಬೇಕಾಗುವ ಸಾಮಗ್ರಿಗಳನ್ನು ಆಗಾಗ್ಗೆ ಪ್ರಸಿದ್ಧಿಸುತ್ತಿವೆ. ಇತಿಹಾಸ ಸಂಶೋಧಕ ಮಂಡಳವು ಪ್ರಚಾರ—ಪ್ರಸಿದ್ಧಿಗಳ ಕಾರ್ಯದಿಂದ ಜನರಲ್ಲಿ ಪೂರ್ವ ವೈಭವದ ಸ್ಮರಣೆಯನ್ನು ಜಾಗೃತವಾಗಿಟ್ಟಿರುವರು. ಕನ್ನಡ ಸಂಶೋಧನ ಸಂಸ್ಥೆಯು ಪ್ರತಿವರ್ಷ ವಿದ್ವಾಂಸರಿಂದ ಇತಿಹಾಸ—ಸಾಹಿತ್ಯೋಪನ್ಯಾಸಮಾಲೆಗಳನ್ನು ಏರ್ಪಡಿಸಿ ಜನತೆಯಲ್ಲಿ ಸಂಶೋಧನ ಪ್ರಿಯತೆಯನ್ನು ಹೆಚ್ಚಿಸಿರುವದು. ಇದಲ್ಲದೆ ತಾನು ಸಂಗ್ರಹಿಸಿದ ಶಾಸನಗಳನ್ನು *Karnatak Inscriptions* Vol. I (ಕನ್ನಡ ಶಾಸನಗಳು ಸಂಪುಟ ೧, ಪುಸ್ತಕದಲ್ಲಿ ಪ್ರಸಿದ್ಧಿಸಿ ೭ನೆಯ ಶತಮಾನದಿಂದ ೧೭ನೆಯ ಶತಮಾನದ

ವರೆಗೆ ತಾನು ಮಾಡಿದ ಹೊಸ ಶೋಧನೆಗಳನ್ನು ನಿರೂಪಿಸಿರುವದು. ಹಿಂದೆ ಹೇಳಿದ ಕನ್ನಡ ರಿಸರ್ಚ ರಿಪೋರ್ಟು ಹೊಸ ಸಂಗತಿಗಳಿಂದ ತುಂಬಿದೆ. ಜೈನ ಧರ್ಮದ ಮೂರ್ತಿ ಶಿಲ್ಪದ ಮೇಲೆ ಅಪರೂಪವಾದ ಸಶಾಸ್ತ್ರೀಯ ಪ್ರಮಾಣಬದ್ಧ ವಿವೇಚನೆಯನ್ನು ಮಾಡಿ ಉತ್ತರಕರ್ನಾಟಕದಲ್ಲಿ ಆದ ಜೈನ ಧರ್ಮದ ಪ್ರಸಾರವನ್ನು ತಿಳಿಸುತ್ತದೆ. ಮಧ್ಯವರ್ತಿ ಸರಕಾರದವರು ಈ ಭಾಗದಿಂದ ಸಂಗ್ರಹಿಸಿದ ಶಾಸನಗಳಲ್ಲಿ ಕೆಲವನ್ನು *Bombay Karnatak Inscriptions* Vol. I, Part I. ಪುಸ್ತಕದಲ್ಲಿ ಪ್ರಸಿದ್ಧಿಸಿರುವರು. ಇವೆಲ್ಲವುಗಳಲ್ಲಿ ಐತಿಹಾಸಿಕ, ವಾಙ್ಮಯ ವಿಷಯಕ ಸಾಮಗ್ರಿಯು ವಿಪುಲವಾಗಿರುವದು. ಇವುಗಳನ್ನು ಬಿಟ್ಟರೆ ಶಾಸ್ತ್ರೀಯವಾದ ಪ್ರಕಟನೆಗಳು ಹೆಚ್ಚಾಗಿ ಆಗಿಲ್ಲ.

(೬) ಮುಂದೇನು ಬೇಕು

ಉತ್ತರಕರ್ನಾಟಕದಲ್ಲಿ ಇನ್ನೂ ನಡೆಯಬೇಕಾದ ಸಂಶೋಧನ ವಿಷಯವು ಹಿಂದೆ ಆಗಿದ್ದಕ್ಕಿಂತ ಎಷ್ಟೋಪಟ್ಟು ಹೆಚ್ಚು ಇದೆ. ಶಾಸನ ಸಂಗ್ರಹವಾಗಬೇಕು. ಅವೆಲ್ಲವುಗಳನ್ನು ಶಾಸ್ತ್ರೀಯ ಪದ್ಧತಿಯಿಂದ ಪ್ರಸಿದ್ಧಿಸಬೇಕು. ಪ್ರಾಗೈತಿಹಾಸಿಕ ಹಾಗು ಐತಿಹಾಸಿಕ ಸ್ಥಳಗಳ ಶೋಧವಾಗಿ ಅವುಗಳ ಅಗಿತವನ್ನು ಕೈಕೊಳ್ಳಬೇಕು. ತಾಮ್ರಪಟಗಳು, ನಾಣ್ಯಗಳು, ಕಡಿತಗಳು, ತಾಡವಾಲಿಯ ಅಪರೂಪ ಗ್ರಂಥಗಳು—ಇವುಗಳನ್ನು ಸಂಗ್ರಹಿಸಿ ಪ್ರಸಿದ್ಧಿಸಬೇಕು. ಇವೆಲ್ಲವುಗಳನ್ನು ಯೋಗ್ಯವಾಗಿ ಪ್ರದರ್ಶಿಸಲಿಕ್ಕೆ ತಕ್ಕ ಏರ್ಪಾಡು ಆಗಬೇಕು. ಜನತೆಯೂ ಸರಕಾರವೂ ಈ ವಿಷಯದಲ್ಲಿ ಆದರವುಳ್ಳವರಾಗಿ ತಕ್ಕ ಸೌಕರ್ಯಗಳನ್ನು ಒದಗಿಸಬೇಕು. ಅಲ್ಲಲ್ಲಿ ವಿಮರ್ಶೆ ಮಂಡಲಗಳು ಹುಟ್ಟಬೇಕು. ಹಳೆಯ ವಾಸ್ತು ಶಿಲ್ಪ, ಮೂರ್ತಿ ಶಿಲ್ಪ, ಗುಡಿಗುಂಡಾರಗಳು ಇವುಗಳನ್ನು ಕುರಿತು ವಿಜ್ಞಾನಿಗಳು ಪ್ರಬಂಧಗಳನ್ನು ಬರೆಯಬೇಕು. ಈ ಸಂಶೋಧನ ಪ್ರಕಟನೆಗಳನ್ನು ಮಾಡಲು ಉದ್ಯುಕ್ತವಾದ ಕನ್ನಡ ಸಂಶೋಧನ ಸಂಸ್ಥೆಗಳಿಗೆ ಬೆಂಬಲವಾಗಿ ವಿದ್ವಾಂಸರೂ ವಿದ್ಯಾರ್ಥಿಗಳೂ ಮುಂದೆ ಬಂದು ತಕ್ಕ ಸಹಾಯವನ್ನು ನೀಡಬೇಕು. ಎಳಕದಲ್ಲಿದ್ದ ಸಂಶೋಧನೆಯ ಕೆಲಸವು ಬೇಗನೇ ಪ್ರೌಢಾವಸ್ಥೆಯನ್ನು ತಾಳುವುದರಲ್ಲಿ ಸಂದೇಹವಿಲ್ಲ. ಈಗ ಐದು ವರ್ಷಗಳ ಕಾರ್ಯದಿಂದ ಕನ್ನಡ ಸಂಶೋಧನ ಸಂಸ್ಥೆಯು ಭಾರತ ವರ್ಷದ ಸಂಶೋಧನ ಸಂಸ್ಥೆಗಳಲ್ಲಿ ಗಣ್ಯವಾದ ಸ್ಥಾನವನ್ನು ಪಡೆದಿದೆ. ಅಖಂಡ ಕರ್ನಾಟಕದ ವಿಜ್ಞಾನದ ಬೆಳವಣಿಗೆಗೆ ಆಯಾ ಕರ್ನಾಟಕ ಭಾಗದ ಸಂಶೋಧನ ಸಂಸ್ಥೆಗಳು ಪರಸ್ಪರ ವಿಚಾರ ವಿನಿಮಯದಿಂದ, ಒಮ್ಮತದಿಂದ ಕಾರ್ಯ ನಡೆಸುವಂತೆ ಏರ್ಪಾಡು ಮಾಡಿಕೊಳ್ಳುವದು ಈಗ ಅತ್ಯವಶ್ಯ.

ಆರ್. ಎಸ್. ಪಂಚಮುಖಿ, ಎಂ.ಎ.

೭. ಕರ್ನಾಟಕ ಚರಿತ್ರೆಯಲ್ಲಿ ಪರಿಶೋಧನೆ

ಕಳೆದ ಕಾಲು ಶತಮಾನದ (೧೯೧೯-೪೪) ಕರ್ಣಾಟಕ ಚರಿತ್ರೆಯ ರಂಗದಲ್ಲಿ ನಡೆದಿರುವ ಕಾರ್ಯವನ್ನು ಸಂಕ್ಷಿಪ್ತವಾಗಿ ಪರಿಶೀಲಿಸುವುದು ಇದೀಬರೆಹದ ಗುರಿಯಾಗಿದೆ. ಚರಿತ್ರೆ ಎನ್ನುವುದು ಜನದ ಬದುಕಿನ ಶಾಸ್ತ್ರೀಯ ವಿಮರ್ಶೆ. ಜನಾಂಗದ ಮೂಲಸ್ಥಿತಿಯನ್ನು ಮೊದಲುಗೊಂಡು ಇಂದಿನವರೆಗಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಮೊದಲಾದ ಚಲನವಲನಗಳನ್ನು ಕಂಡುಹಿಡಿದು ಎತ್ತಿ ತೋರಿಸುವುದು ನೈಜಚರಿತ್ರೆಯ ಕರ್ತವ್ಯವು. ವ್ಯಾಪಕವಾದ ಈ ವಿಶೇಷಾರ್ಥದಲ್ಲಿಯೇ ಚರಿತ್ರೆ ಎಂಬ ಮಾತನ್ನು ಬಳಸಬಹುದಾದರೂ ಇಂತಹ ಸಂದರ್ಭಗಳಲ್ಲಿ ಸಾಮಾನ್ಯವಾಗಿ ರಾಜಕೀಯ ಚರಿತ್ರೆಯನ್ನೇ ವಿಮರ್ಶಿಸುವುದು ಸಾಂಪ್ರತ ಮಹಾಜನಗಳ ಮಾರ್ಗವಾಗಿರುವುದರಿಂದ ಈ ದಾರಿಯನ್ನು ಅನುಸರಿಸಿ ನಾನಿಲ್ಲಿ ಪ್ರಾಮುಖ್ಯವಾಗಿ ಕರ್ನಾಟಕ ಚರಿತ್ರೆಯ ರಾಜಕೀಯ ವಿನ್ಯಾಸವನ್ನು ನಿರೂಪಿಸಲಿರುವೆ.

ಚರಿತ್ರಲೇಖನವು ಇತರ ಸಾಹಿತ್ಯದಂತಹದಲ್ಲ. ಇದರ ಒಂದೊಂದು ಮಾತೂ ಅಸಂದಿಗ್ಧವಾದ ಪ್ರಮಾಣಬಲದಿಂದ ಪೋಷಿತವಾಗಿರಬೇಕಾದುದರಿಂದ ಇಂತಹ ಪ್ರಾಮಾಣಿಕವಾದ ಚಾರಿತ್ರಕ ಸಾಧನಗಳನ್ನು ಪರಿಶೋಧಿಸಿ ಸಂಗ್ರಹಿಸುವುದು ಚರಿತ್ರಕಾರನು ಮಾಡಬೇಕಾದ ಮೊದಲಿನ ಮುಖ್ಯ ಕಾರ್ಯವು. ಅನಂತರ ಆ ಸಾಧನಸಾಮಗ್ರಿಯನ್ನು ಒಂದಕ್ಕೊಂದಾಗಿ ಸಮಗೊಳಿಸಿ ನಯವಾಗಿ ಹೆಣೆದು ರುಚಿರ ಪ್ರಬಂಧ ರೂಪದಿಂದ ನಾಡಿನ ಚಿತ್ರವನ್ನು ಪ್ರಕಟಪಡಿಸುವುದು ಚರಿತ್ರಕಾರನ ಆ ಮೇಲಿನ ಕೆಲಸವು. ಈ ಎರಡು ಪರಿಯಿಂದಲೂ ಕನ್ನಡ ನಾಡಿನ ಚರಿತ್ರೆಯ ಕ್ಷೇತ್ರದಲ್ಲಿ ಆಗಿರುವ ಕೆಲಸವನ್ನು ಇಲ್ಲಿ ತೂಗಿ ಹೇಳುವೆ.

ಪುರಾತನ ಯುಗ

ನಿಶ್ಚಿತವಾದ ಕಾಲಗಣನೆಯಿಂದ ನಿರ್ಧರಿಸಲಿಕ್ಕೆ ಬಾರದ ಬಹಳ ಹಿಂದಿನ ಸಂಗತಿಗಳಿಗಾಗಿ ಒಂದು ಕಾಲ ವಿಭಾಗವನ್ನು ಕಲ್ಪಿಸಿ ಅದನ್ನು ಪುರಾತನ ಯುಗ (Prehistoric age) ಎಂದು ಕರೆಯುವ ವಾಡಿಕೆ ಇದೆ. ಈ ಯುಗದಲ್ಲಿ ಮಾನವನ ಇರುವಿಕೆ ಹೆಚ್ಚಾಗಿ ಸಂಸ್ಕಾರಗೊಂಡಿರಲಿಲ್ಲ. ಇಂತಹ ಹಳೆಯ ಇರುವಿಕೆಯ ಕುರುಹುಗಳನ್ನು ತೋರಿಸುವ ನೆಲೆಗಳಲ್ಲಿ ಭೂಮಿಯನ್ನು ಶೋಧಿಸಿ ಕಂಡುಹಿಡಿದ ಇಟ್ಟಿಗೆ, ಕಲ್ಲು, ಮಣ್ಣು, ಲೋಹದ ಪಾತ್ರೆ, ಆಯುಧ, ಉಪಕರಣ, ಮೊದಲಾದ ವಸ್ತುಗಳ

ಸಹಾಯದಿಂದ ಈ ಯುಗದ ಕಾಲ ಮರ್ಯಾದೆಯನ್ನು ಸ್ಥೂಲವಾಗಿ ಎಣಿಸಿ ಅದರ ಚರಿತ್ರೆಯನ್ನು ಹೇಳುವರು. ಇಂತಹ ಪುರಾತನ ಸ್ಥಳಗಳು ಭಾರತದೇಶದ ಮಿಕ್ಕ ಪ್ರದೇಶಗಳಂತೆ ಕರ್ನಾಟಕದಲ್ಲಿಯೂ ವಿಪುಲವಾಗಿ ದೊರೆಯುವಂತಿದ್ದು ಅವುಗಳಲ್ಲಿ ಕೆಲವಾರು ಮಾತ್ರ ಈಚೆಯ ಅನ್ವೇಷಣಗಳಲ್ಲಿ ಪ್ರಕಾಶಕ್ಕೆ ಬಂದಿವೆ. ಇಂತೀ ಪುರಾತನ ಯುಗದ ನಿದರ್ಶನಗಳನ್ನು ನಿಜಾಮ ಕರ್ನಾಟಕದ ರಾಯಚೂರು ಜಿಲ್ಲೆಯ ಮಸ್ಕಿ, ಮುದಗಲ್, ಮುಂಬಯಿ ಕರ್ನಾಟಕದ ಕಾರವಾರ, ಬೆಳಗಾವ, ವಿಜಾಪುರ ಜಿಲ್ಲೆಗಳ ಸಿದ್ದಾಪುರ, ವಡಗಾವ-ಮಾಧವಪುರ, ಹೆರಕಲ್, ಮದ್ರಾಸ ಪ್ರಾಂತದ ಬಳ್ಳಾರಿ ಅನಂತಪುರ ಜಿಲ್ಲೆಗಳ ಕುಪಗಲ್, ವಜ್ರಕರೂರು, ಮೈಸೂರು ಸಂಸ್ಥಾನದ ಚಿತ್ರದುರ್ಗ, ಕೋಲಾರ ಜಿಲ್ಲೆಗಳ ಬ್ರಹ್ಮಗಿರಿ, ಚಂದ್ರವಳ್ಳಿ, ಹುನಗುಂದ ಮೊದಲಾದ ನೆಲೆಗಳಲ್ಲಿ ಗುರುತಿಸಲಾಗಿದೆ. ಇವುಗಳನ್ನು ಪರೀಕ್ಷಿಸಿ, ಹೈದರಾಬಾದದಿಂದ ಮೈಸೂರ ವರೆಗೂ ಬಳ್ಳಾರಿಯಿಂದ ಕಾರವಾರದವರೆಗೂ ವಿಸ್ತಾರವಾಗಿ ಹಬ್ಬಿದ ಕರ್ನಾಟಕ ಪ್ರದೇಶದಲ್ಲಿ ಕ್ರಿಸ್ತ ಪೂರ್ವ ಒಂದೆರಡು ಸಾವಿರ ವರ್ಷಗಳ ಆಚೆಯ ಕಾಲದಲ್ಲಿ, ಮೊದಮೊದಲು ಕಲ್ಲುಮಣ್ಣಿನ ಕಾಡು ಆಯುಧ ಉಪಕರಣಗಳನ್ನು ಬಳಸುವ ಅಸಂಸ್ಕೃತ ಜನಗಳು ಬಾಳಿದ್ದರೆಂದೂ ; ಆಮೇಲೆ ಲೋಹಗಳ ಉಪಯೋಗ ವನ್ನು ಹೆಚ್ಚಾಗಿ ಅರಿತ, ಸ್ವಲ್ಪ ನಯವಾದ ಒಡವೆಗಳನ್ನೂ ಶಂಖ, ಕಪ್ಪೆಚಿಪ್ಪು, ಮೊದಲಾದ ವಸ್ತುವಿನ ಆಭರಣಗಳನ್ನು ಒದಗಿಸಿಕೊಂಡ, ನಾಗರಿಕತೆಯಲ್ಲಿ ಮುಂದಡಿ ಯಿಟ್ಟ ಮಾನವರು ಜೀವಿಸಿದ್ದರೆಂದೂ ಅನ್ವೇಷಕರು ಅಭಿಪ್ರಾಯಪಟ್ಟಿರುವರು. ಆದರೆ ಪುರಾತನಯುಗದ ಕರ್ನಾಟಕ ಪ್ರದೇಶದಲ್ಲಿ ನೆಲಸಿದ ಜನಗಳ ಸಾಮೂಹಿಕ ಸ್ಥಿತಿ ಗತಿಗಳ ವಿಚಾರದಲ್ಲಿ ಆಗಲಿ, ಭಾಷಾದಿ ವ್ಯವಹಾರಗಳ ವಿಚಾರದಲ್ಲಿ ಆಗಲಿ, ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಲು ಸಾಕಷ್ಟು ಸಾಧನಗಳು ದೊರೆತಿಲ್ಲ.

ಭಾರತೀಯ ಪುರಾತತ್ವ ವಿಭಾಗದವರು ಸಿಂಧು ನದೀತೀರದ ಮಹೆಂಜೋ ದಾರೊ, ಹರಪ್ಪ, ಮೊದಲಾದ ಪ್ರದೇಶಗಳಲ್ಲಿ ಕಿ. ವ. ೧೯೨೧ ರಿಂದ ಈಚೆಗೆ ನಡೆಸಿದ ಭೂಶೋಧನೆಗಳಿಂದ ಪುರಾತನ ಭಾರತೀಯ ಚರಿತ್ರೆಯಲ್ಲಿ ಕ್ರಾಂತಿಯನ್ನು ಉಂಟು ಮಾಡುವ ಅನೇಕ ಸಂಗತಿಗಳು ಬೆಳಕಿಗೆ ಬಂದಿವೆ. ಈ ಪ್ರದೇಶದಲ್ಲಿ ಬಾಳಿದ ಜನಗಳ ನಾಗರಿಕತೆ ಕ್ರಿ. ಪೂ. ಸು. ಮೂರು ಸಾವಿರ ವರ್ಷಗಳ ಆಚೆಯದು ಎಂದು ಹೇಳು ವರು. ಈ ನಾಗರಿಕತೆ ವೇದಕಾಲದ ಆರ್ಯನಾಗರಿಕತೆಯನ್ನೋ ಇಲ್ಲವೆ ಮೂಲ ದ್ರಾವಿಡ ನಾಗರಿಕತೆಯನ್ನೋ ಹೋಲುವ ವಿಚಾರದಲ್ಲಿ ಆಗಲಿ, ಅದು ವೇದಕಾಲ ಕ್ಕಿಂತ ಆಚೆಯದೋ ಇಲ್ಲವೆ ಈಚೆಯದೋ ಎಂಬ ವಿಚಾರದಲ್ಲಿ ಆಗಲಿ, ಶಾಸ್ತ್ರಜ್ಞರು ಇನ್ನೂ ಏಕಾಭಿಪ್ರಾಯವನ್ನು ಕಂಡಿಲ್ಲ. ಅಲ್ಲಿ ದೊರೆತ ಕೆಲವು ವಸ್ತುಗಳ ಮೇಲೆ

ರೂಪಿಸಿದ ಸುಬದ್ಧ ಚಿತ್ರಾಕೃತಿಗಳಿಂದ ಆ ಕಾಲದ ಜನಗಳಿಗೆ ಲೇಖನ ವಿದ್ಯೆ ವಿದಿತವಾಗಿತ್ತು ಎಂದು ತೋರಿದೆ. ಈ ಚಿತ್ರಲಿಪಿ ಇದುವರೆಗೆ ಜ್ಞಾತವಾಗಿರುವ ಪ್ರಪಂಚದ ಎಲ್ಲ ಲಿಪಿಗಳಿಗಿಂತ ವಿಲಕ್ಷಣವಾಗಿದ್ದು ಅದರ ಗೂಢವನ್ನು ಬಿಡಿಸಲು ಶಾಸ್ತ್ರಜ್ಞರು ಶ್ರಮಿಸುತಲಿದ್ದಾರೆ. ಇಂತಹರಲ್ಲಿ ಫಾದರ ಹೆರಾಸ ಎಂಬವರು ಮುನ್ನುಗ್ಗಿ, ಇದು ಪೂರ್ವ ದ್ರಾವಿಡ ಲಿಪಿ ಮತ್ತು ಭಾಷೆ ಎಂದು ವಾದಿಸುತ್ತ ಅಲ್ಲಿಯ ಲೇಖನಗಳನ್ನು ಸರಾಗವಾಗಿ ಓದಿ ಹೇಳಿರುವರು. ಈ ಲೇಖನಗಳ ಮಧ್ಯದಲ್ಲಿ ಒಂದೆರಡು ಎಡೆಯಲ್ಲಿ ಮೈದೋರುವ ಒಂದು ಸಂಕೇತವನ್ನು 'ಕಣನಿರ್' ಎಂಬುದಾಗಿ ಓದಿ, ಅದರಿಂದ ಕರ್ನಾಟಕರು ಇಲ್ಲವೆ ಕನ್ನಡಿಗರು ಎಂಬ ಅರ್ಥವು ಹುಟ್ಟುತ್ತದೆ ಎಂದು ಅವರು ಪ್ರತಿಪಾದಿಸಿದ್ದಾರೆ. ಈ ಪ್ರತಿಪಾದನೆ ಕನ್ನಡ ಅಭಿಮಾನಿಗಳಿಗೆ ಸದ್ಯೋರಮಣೀಯವಾಗಿ ತೋರಿದರೂ ಅದರ ಸತ್ಯತೆ ಇನ್ನೂ ನಿಷ್ಕರ್ಷೆ ಮಾಡಬೇಕಾಗಿದೆ.

ಚಾರಿತ್ರಕ ಯುಗ

ನಿಶ್ಚಿತ ಕಾಲಪ್ರಮಾಣದಿಂದ ನಿರ್ಧರಿಸಬಹುದಾದ ಘಟನೆಗಳು ಚಾರಿತ್ರಕ ಯುಗದ ವಿಷಯಗಳಾಗುವುವು. ಈ ಯುಗದ ಮೊದಲಿನ ಮುಖ್ಯ ಸಂಗತಿಗಳು ನಮಗೆ ತಿಳಿದ ಮಟ್ಟಿಗೆ ಮೌರ್ಯಕುಲದ ಅಶೋಕ ಮಹಾರಾಜನ ಶಾಸನಗಳಿಂದ ಪ್ರಾರಂಭವಾಗುವುವು. ಕ್ರಿ. ವ. ೧೯೨೯ ರಲ್ಲಿ ಭಾರತೀಯ ಪುರಾತತ್ವ ಸಂಶೋಧನ ವಿಭಾಗದವರು ಮದ್ರಾಸ ಆಧಿಪತ್ಯದ ಅನಂತಪುರ ಜಿಲ್ಲೆಯ ಎರ್ರಗುಡಿ ಎಂಬ ಸ್ಥಳದ ಗುಡ್ಡದ ಬಂಡೆಗಳ ಮೇಲೆ ಪ್ರಾಚೀನ ಬ್ರಾಹ್ಮೀ ಲಿಪಿಯಲ್ಲಿ ಕಂಡರಿಸಿದ ಅಶೋಕ ಮಹಾರಾಜನ ಹನ್ನೆರಡು ಪ್ರಧಾನ ಪ್ರಸ್ತರ ಲೇಖಗಳನ್ನು ಮತ್ತು ಒಂದು ಅಪ್ರಧಾನ ಪ್ರಸ್ತರ ಲೇಖವನ್ನು ಕಂಡುಹಿಡಿದರು. ಆಮೇಲೆ ಕ್ರಿ. ವ. ೧೯೩೧ರಲ್ಲಿ ನಿಜಾಮ ರಾಜ್ಯದ ಕೊಪ್ಪಳಗ್ರಾಮದ ಬಳಿಯ ಗುಡ್ಡಗಳಲ್ಲಿ ಅಶೋಕ ಮಹಾರಾಜನ ಇನ್ನೆರಡು ಅಪ್ರಧಾನ ಪ್ರಸ್ತರ ಲೇಖಗಳನ್ನು ಕಂಡುಹಿಡಿಯಲಾಯಿತು. ಈ ಮೊದಲು ನಿಜಾಮ ಮತ್ತು ಮೈಸೂರು ಸಂಸ್ಥಾನಗಳ ಮಸ್ಕಿ, ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗ ರಾಮೇಶ್ವರ, ಎಂಬೀ ಸ್ಥಳಗಳಲ್ಲಿ ಅಶೋಕ ಮಹಾರಾಜನ ಶಾಸನಗಳು ದೊರೆತಿರುವುದರಿಂದ, ಹೊಸತಾಗಿ ಕಂಡುಹಿಡಿದ ಆತನೀ ಲೇಖಗಳಿಂದ ಹೆಚ್ಚಿನ ಸಂಗತಿಗಳು ತಿಳಿಯುವುದಿಲ್ಲವಾದರೂ ಇವುಗಳಿಂದ ದಕ್ಷಿಣಭಾರತ ಮತ್ತು ಕರ್ನಾಟಕ ಈ ಭಾಗಗಳು ಭಾರತದೇಶದ ಮಿಕ್ಕ ಭಾಗಗಳಂತೆ ಆ ಮಹಾರಾಜನ ಪ್ರಭಾವಕ್ಕೆ ಒಳಪಟ್ಟಿದ್ದವು ಎಂಬ ಮಾತು ಇನ್ನಿಷ್ಟು ಸ್ಫುಟವಾಗುತ್ತದೆ.

ಅಶೋಕನ ಕಾಲದಿಂದ ನಾಮಾಂಕಿತವಾಗಿದ್ದ, ಉತ್ತರಕನ್ನಡ ಜಿಲ್ಲೆಯ ಬನವಾಸಿಯಲ್ಲಿ, ಈ ಹಿಂದೆಯೇ ಗುರುತಿಸಲಾಗಿದ್ದ ಬುದ್ಧಮತೀಯ ಬ್ರಾಹ್ಮೀ ಪ್ರಾಕೃತ

ಶಾಸನವಲ್ಲದೆ, ಕ್ರಿಸ್ತಕಾಲದ ಸು. ಒಂದನೆಯ ಶತಕದವಾಗಬಹುದಾದ ಬುದ್ಧಮತದ ಸ್ತೂಪಾವಶೇಷಗಳನ್ನು ಕಂಡುಹಿಡಿಯಲಾಗಿದೆ. ಈಚೆಗೆ ಪೈಠಣ, ಮಸ್ಕಿ, ಬ್ರಹ್ಮ ಗಿರಿ, ಚಂದ್ರವಳ್ಳಿ ಮೊದಲಾದ ನೆಲೆಗಳಲ್ಲಿ ನಡೆದ ಭೂಶೋಧನೆಗಳಲ್ಲಿ ದೊರೆತ ನಾಣ್ಯವೇ ಮೊದಲಾದ ಸಾಧನಗಳಿಂದ ಈ ಪೂರ್ವದಲ್ಲಿ ಹಿರೆ ಹಡಗಲಿ, ಮ್ಯಾಕಡೋನಿ, ಮೊದ ಲಾದ ಶಾಸನಧಾರಗಳಿಂದ ತಿಳಿದುಬಂದಂತೆ ಅಶೋಕನ ತರುವಾಯ ಆಂಧ್ರ ಸಾತ ವಾಹನರು ಕರ್ನಾಟಕದಲ್ಲಿ ಸಾಮ್ರಾಜ್ಯವಾಳಿದ ವಿಷಯವು ದೃಢಮೂಲವಾಗುತ್ತದೆ.

ಮುಂಬಯಿ ಕರ್ನಾಟಕದ ಬೆಳಗಾವಿಯ ಬಳಿಯ ವಡಗಾವ—ಮಾಧವಪುರ ಎಂಬಲ್ಲಿ ಮೂಪದ ಆಕಾರದ ಒಂದು ಕಲ್ಲು ಕಂಬದ ಮೇಲೆ ಬ್ರಾಹ್ಮೀ ಲಿಪಿಯಲ್ಲಿ ಮತ್ತು ಪ್ರಾಕೃತ ಭಾಷೆಯಲ್ಲಿ ಕೊರೆದ ಒಂದು ಶಾಸನವನ್ನು ಮುಂಬಯಿ ಪ್ರಭುತ್ವದ ಕನ್ನಡ ಸಂಶೋಧನೆ ಸಂಸ್ಥೆಯವರು ಕ್ರಿ. ವ. ೧೯೪೧ ರಲ್ಲಿ ಶೋಧಿಸಿರುವರು. ಇದರಲ್ಲಿ ಅನೇಕ ವೈದಿಕ ಯಜ್ಞಗಳ ಅನುಷ್ಠಾನದ ನಿರ್ದೇಶವು ಸಿಕ್ಕುತ್ತಿದ್ದು ಇದರ ಕಾಲವು ಕ್ರಿ. ಪೂ. ಸು. ಎರಡನೆಯ ಶತಮಾನವಾಗಬಹುದು. ಪ್ರಾಕೃತ ಭಾಷೆಯಲ್ಲಿ ವೈದಿಕ ವಿಷಯಗಳನ್ನು ಪ್ರತಿಪಾದಿಸುವುದಾದ ಇದುವೇ ಈ ಪ್ರಾಂತದಲ್ಲಿಯ ಮೊದಲನೆಯ ಪ್ರಾಚೀನ ಶಾಸನವೆನ್ನಬಹುದು.

ಮೈಸೂರ ಪುರಾತತ್ವ ವಿಭಾಗದವರು ಕ್ರಿ. ವ. ೧೯೨೯ರಲ್ಲಿ ಪರಿಶೋಧಿಸಿದ, ಚಂದ್ರವಳ್ಳಿಯ ಸಮಿಪದ ಒಂದು ಬಂಡೆಯಮೇಲೆ ಸು. ಕ್ರೈಸ್ತ ಎರಡನೆಯ ಶತಮಾನದ ಪ್ರಾಕೃತ ಭಾಷೆ ಮತ್ತು ಬ್ರಾಹ್ಮೀ ಲಿಪಿಯಲ್ಲಿ ಬರೆಸಿದ ಕರ್ನಾಟಕದ ಪ್ರಾಚೀನ ಕದಂಬಕುಲ ಸಂಸ್ಥಾಪಕನಾದ ಮಯೂರವರ್ಮನ ಶಾಸನವು ಈ ಕಾಲದ ದಕ್ಷಿಣಭಾರತ ಮತ್ತು ಕರ್ನಾಟಕದ ಚರಿತ್ರೆಯ ಮೇಲೆ ಬೆಳಕನ್ನು ಬೀರುತ್ತ, ಕೆಲವು ಸಮಸ್ಯೆಗಳನ್ನು ಸುಲಭಗೊಳಿಸಲು ಸಹಾಯಕಾರಿಯಾಗಿದೆ. ಅದೇ ವಿಭಾಗದವರು ಕ್ರಿ. ವ. ೧೯೩೬ ರಲ್ಲಿ ಹಾಸನ ಜಿಲ್ಲೆಯ ಹಾಲ್ಮಿಡಿ ಎಂಬ ಗ್ರಾಮದಲ್ಲಿ ಪ್ರಾಚೀನ ಕನ್ನಡ ಭಾಷೆ ಮತ್ತು ಲಿಪಿಯಲ್ಲಿ ಬರೆದ ಒಂದು ಶಿಲಾಶಾಸನವನ್ನು ಸಂಶೋಧಿ ಸಿರುವರು. ಇದರ ಕಾಲವು ಸು. ಕ್ರೈಸ್ತ ಆರನೆಯ (೫ ?) ಶತಮಾನದ ಆರಂಭಕ್ಕೆ ಹೋಗುವಂತಿದ್ದು, ಇದುವರೆಗೆ ದೊರೆತ ಕನ್ನಡ ಶಾಸನಗಳಲ್ಲಿ ಇದುವೇ ಪ್ರಾಚೀನ ವೆಂದು ಪರಿಗಣಿಸಲಾಗಿದೆ.

ಭಾರತೀಯ ಪುರಾತತ್ತ್ವವಿಭಾಗದ ಪುಣೆಯ ಶಾಖೆಯವರು ಮತ್ತು ಕನ್ನಡ ಸಂಶೋಧನ ಸಂಸ್ಥೆಯವರ ಸಾಹಸದ ಫಲವಾಗಿ ಬಾದಾಮಿಯ ಬೆಟ್ಟದ ಕಡಿದಾದ ಒಂದು ಬಂಡೆಗಲ್ಲಿನ ಮೇಲೆ ಕೊರೆದ ಶಾಸನವು ಪ್ರಕಾಶಮಾನವಾಗಿದೆ. ೪೬೫ ನೆಯ ಶಕ ವರ್ಷದಲ್ಲಿ ಚಾಲುಕ್ಯ ವಲ್ಲಭೇಶ್ವರನು ಉನ್ನತವಾದ ಬಾದಾಮಿಯ ದುರ್ಗವನ್ನು

ಕಟ್ಟಿಸಿದ ಸಂಗತಿ ಇದರಲ್ಲಿ ಉಕ್ತವಾಗಿದ್ದು, ಪಶ್ಚಿಮ ಚಾಲುಕ್ಯರ ಮತ್ತು ಆ ಮನೆತನದ ಮೊದಲನೆಯ ನರೇಂದ್ರನಾದ ಒಂದನೆಯ ಪುಲಕೇಶಿಯ ಮೊದಲನೆಯ ಶಾಸನವಿದು ಎಂಬ ವಿಚಾರದಿಂದ ಮಾತ್ರವಲ್ಲ, ಶಕವರ್ಷವನ್ನು ನಿವೇದಿಸುವ ಶಾಸನಗಳಲ್ಲಿಯೇ ಮೊತ್ತಮೊದಲನೆಯದು ಎಂಬ ವಿಚಾರದಿಂದಲೂ ಈ ಶಾಸನವು ಮಹತ್ತ್ವಪೂರ್ಣವಾಗಿದೆ.

ಬಾದಾಮಿಯ ಚಾಲುಕ್ಯರ ತರುವಾಯ ಕರ್ನಾಟಕ ಸಾಮ್ರಾಜ್ಯದ ಕರ್ಣಧಾರರಾಗಿ ಪ್ರಸಿದ್ಧಿವೆತ್ತ ರಾಷ್ಟ್ರಕೂಟರು ಚಾಲುಕ್ಯರಿಗಿಂತ ಪೂರ್ವಕಾಲದಲ್ಲಿಯೂ ಬಾಳಿದ್ದು ಆ ಕುಲದ ಕೆಲವು ಅರಸರು ಕ್ರೈಸ್ತ ಆರನೆಯ ಶತಮಾನದ ಆದಿಯಲ್ಲಿ ಕರ್ನಾಟಕದ ಕೆಲ ಪ್ರದೇಶಗಳಲ್ಲಿ ರಾಜ್ಯವಾಳುತ್ತಿದ್ದರು ಎಂಬ ಸಂಗತಿ ಈಚೆಗೆ ದೊರೆತ ಪಾಂಡುರಂಗಪಲ್ಲಿ ತಾಮ್ರಶಾಸನದಿಂದ ಊಹಿಸಬಹುದಾಗಿದೆ.

ಶಾಸನಗಳ ಪರಿಶೋಧನ, ಪ್ರಕಾಶನ

ಪ್ರಾರಂಭದಿಂದಲೂ (ಕ್ರಿ. ವ. ೧೮೮೭) ದಕ್ಷಿಣ ಭಾರತದ ಶಾಸನಗಳ ಪರಿಶೋಧನ ಮತ್ತು ಪ್ರಕಾಶನ ಕಾರ್ಯದಲ್ಲಿ ನಿರತರಾಗಿದ್ದ ಪುರಾತತ್ತ್ವ ವಿಭಾಗದ ಮದ್ರಾಸ ಕಾರ್ಯಾಲಯದವರು ಈ ನಮ್ಮ ಕಾಲ ಖಂಡದ ಮೊದಲನೆಯ ಕೆಲ ವರ್ಷಗಳಲ್ಲಿ ಮದ್ರಾಸ ಪ್ರಾಂತದ ತೆಲುಗು ಮತ್ತು ತಮಿಳು ಜಿಲ್ಲೆಗಳಂತೆ ಬಳ್ಳಾರಿ, ಅನಂತಪುರ, ದಕ್ಷಿಣ ಕನ್ನಡ ಈ ಜಿಲ್ಲೆಗಳಲ್ಲಿಯೂ ಅನ್ವೇಷಣಗಳನ್ನು ನಡೆಯಿಸಿ ಅನೇಕ ಕನ್ನಡ ಶಾಸನಗಳನ್ನು ಸಂಗ್ರಹಿಸಿದರು. ಈ ಹೊತ್ತಿಗೆ ಮೈಸೂರು ಸಂಸ್ಥಾನದಲ್ಲಿಯೂ ಶಾಸನಗಳ ಪರಿಶೋಧನ ಕಾರ್ಯವು ಕ್ರಮಬದ್ಧವಾಗಿ ಮುಂದುವರಿದಿದ್ದಿತು. ಆದರೆ ಮುಂಬಯಿ ಆಧಿಪತ್ಯದ ಉತ್ತರ ಕನ್ನಡ, ಬೆಳಗಾವ, ವಿಜಾಪುರ, ಧಾರವಾಡ, ಈ ಕನ್ನಡ ಜಿಲ್ಲೆಗಳಲ್ಲಿ ಕಾರ್ಯವೇನೂ ನಡೆದಿರಲಿಲ್ಲ. ಈ ಕೊರತೆಯನ್ನು ಮನಗಂಡ ಅಲ್ಲಿಯ ಜನನಾಯಕರು ಕ್ರಿ. ವ. ೧೯೧೪ ರಲ್ಲಿ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ ಎಂಬ ಸಂಸ್ಥೆಯನ್ನು ಧಾರವಾಡದಲ್ಲಿ ಸ್ಥಾಪನಮಾಡಿ ಅದರ ಮುಖಾಂತರ ಜನಜಾಗೃತಿಯನ್ನೂ ಪ್ರಭುತ್ವದಲ್ಲಿ ಚಳವಳಿಯನ್ನೂ ಪ್ರಾರಂಭಿಸಿದ್ದರು. ಇವರ ಪರಿಶ್ರಮವು ಫಲಿಸಿ ಭಾರತೀಯ ಪುರಾತತ್ತ್ವ ವಿಭಾಗದವರು ಮದ್ರಾಸದಂತೆ ಮುಂಬಯಿ ಭಾಗದ ಕನ್ನಡ ಜಿಲ್ಲೆಗಳಲ್ಲಿಯೂ ಶಾಸನಗಳ ಪರಿಶೋಧನ ಕಾರ್ಯವನ್ನು ಕೈಕೊಳ್ಳಲು ಒಪ್ಪಿದರು. ಆ ಮೇರೆಗೆ ಈ ಶಾಸನಾನ್ವೇಷಣ ಶಾಖೆಯವರು (Epigraphical Branch of the Archaeological Survey of India) ಮೊದಲು ಕೆಲವರ್ಷ (೧೯೨೬-೩೧) ಉದಕಮಂಡಲ ಕಾರ್ಯಾಲಯದಿಂದಲೂ ಆ ಮೇಲೆ ಮದ್ರಾಸ ಕಾರ್ಯಾಲಯದಿಂದಲೂ ಮುಂಬಯಿ ಕರ್ನಾಟಕದ ಭಾಗಗಳಲ್ಲಿ ಕ್ರಮ

ಬದ್ಧ ಪರಿಶೋಧನಗಳನ್ನು ನಡೆಯಿಸಿ ಸಾವಿರಾರು ಶಾಸನಗಳನ್ನು ಸಂಗ್ರಹಿಸಿರುವರು. ಈ ಕೆಲಸವು ಇನ್ನೂ ಮುಂದುವರಿಯುತ್ತಲಿದೆ.

ಈ ನಡುವೆ ಮುಂಬಯಿ ಆಧಿಪತ್ಯದ ಕನ್ನಡ ಭಾಗದಲ್ಲಿ ಹೆಚ್ಚಾಗಿ ಪರಿಶೋದನೆ ನಡೆಯುವ ಅಗತ್ಯವು ತೋರಿ ಮುಂಬಯಿ ಪ್ರಭುತ್ವದವರು ಕ್ರಿ. ವ. ೧೯೩೯ ರಲ್ಲಿ ಕನ್ನಡ ಸಂಶೋಧನ ಸಂಸ್ಥೆಯನ್ನು ಧಾರವಾಡಲ್ಲಿ ಪ್ರಾರಂಭಿಸಿದರು. ಈ ಸಂಸ್ಥೆಯವರು ಮುಂಬಯಿ ಪ್ರಾಂತದ ಕನ್ನಡ ಮತ್ತು ಮರಾಠಿ ಪ್ರದೇಶಗಳಲ್ಲಿ ಸಂಚರಿಸುತ್ತ ಕನ್ನಡ ನಾಡಿನ ಚರಿತ್ರೆ, ಸಾಹಿತ್ಯ, ಧರ್ಮ, ಕಲೆ ಇವುಗಳ ಅಧ್ಯಯನ ಸಾಮಗ್ರಿಯಾದ ಶಾಸನ, ಹಳೆಯ ಗ್ರಂಥ, ನಾಣ್ಯ, ಮೂರ್ತಿ, ಮೊದಲಾದ ವಸ್ತುಗಳನ್ನು ಸಂಗ್ರಹಿಸುತ್ತ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದ್ದಾರೆ. ಇವರೀ ಅನ್ವೇಷಣಗಳಲ್ಲಿ ಮುಂಬಯಿ ಕರ್ನಾಟಕದಲ್ಲಿ ಭೂಶೋಧನೆ ಮಾಡತಕ್ಕಂತಹ, ಪುರಾತನ ಯುಗದ ಅನೇಕ ಸ್ಥಳಗಳನ್ನು ಹೊಸತಾಗಿ ಗುರುತಿಸಿ ತೋರಿಸಿದುದನ್ನು ಪ್ರಾಮುಖ್ಯವಾಗಿ ನಿರ್ದೇಶಿಸಬೇಕಾದುದು.

ಭಾರತೀಯ ಪುರಾತತ್ತ್ವವಿಭಾಗದವರು ದೇಶದ ನಾನಾ ಭಾಗಗಳಲ್ಲಿ ಆಗಾಗ ಪರಿಶೋಧಿಸಿದ ಶಾಸನಗಳನ್ನು ವಿಮರ್ಶಾಪೂರ್ವಕವಾಗಿ ಪ್ರಕಟಿಸಲು ‘ಭಾರತೀಯ ಶಾಸನ ಪತ್ರಿಕೆಯನ್ನು (*Epigraphia Indica*) ಕ್ರಿ. ವ. ೧೮೯೨ರಲ್ಲಿ ಪ್ರಾರಂಭಗೊಳಿಸಿದರು. ಈ ಪತ್ರಿಕೆಯ ಪ್ರಥಮ ಸಂಪುಟದಿಂದ ಇತರ ಶಾಸನಗಳಂತೆ ಕನ್ನಡ ಶಾಸನಗಳೂ ಪ್ರಕಾಶಕ್ಕೆ ಬರತೊಡಗಿದ್ದುವು. ಈ ಮಧ್ಯೆ ದಕ್ಷಿಣ ಭಾರತದ ಶಾಸನಾನ್ವೇಷಣ ಕಾರ್ಯದಲ್ಲಿ ಮುಂದುವರಿದ ಮದ್ರಾಸ ಕಾರ್ಯಾಲಯದಲ್ಲಿ ಸಂಗ್ರಹವಾದ ಶಾಸನಗಳು ಸಾವಿರಾರು ಸಂಖ್ಯೆಯಿಂದ ಬೆಳೆದುಕೊಂಡುವು. ಇವುಗಳು ಈ ಪೂರ್ವದಲ್ಲಿ ದಕ್ಷಿಣ ಭಾರತ ಶಾಸನಾವಳಿಯ (*South Indian Inscriptions*) ಸಂಪುಟಗಳಲ್ಲಿ ಪ್ರಕಾಶನವಾಗುತ್ತ ಇಂತಹ ಮೂರು ಗ್ರಂಥಗಳು ಪ್ರಕಟವಾಗಿದ್ದುವು. ಅವುಗಳ ಪ್ರಕಾಶನ ಯೋಜನೆ ಮುಂದುವರಿದು ಈ ನಮ್ಮ ಕಾಲಖಂಡದಲ್ಲಿ ಏಳು ಸಂಪುಟಗಳು (*South Indian Inscriptions* Vols. IV—IX) ಪ್ರಕಟವಾಗಿದ್ದು, ಅವುಗಳ ಐದರಲ್ಲಿ (Vols. IV—VIII) ತಮಿಳು, ತೆಲುಗು ಶಾಸನಗಳ ಜೊತೆಗೆ ಕನ್ನಡ ಶಾಸನಗಳೂ ಸೇರಿಕೊಂಡಿವೆ. ಮಿಕ್ಕ ಎರಡು ಹೊತ್ತಿಗೆಗಳು ಮಾತ್ರ (Vol. IX, parts 1 and 2) ಕೇವಲ ಕನ್ನಡ ಶಾಸನಗಳಿಗೆ ಮೀಸಲಾಗಿವೆ. ಈ ಶಾಸನಗಳು ಮದ್ರಾಸ ಪ್ರಾಂತದ ಬಳ್ಳಾರಿ, ಅನಂತಪುರ, ದಕ್ಷಿಣಕನ್ನಡ ಈ ಜಿಲ್ಲೆಗಳಲ್ಲದೆ ಸೇಲಂ, ಗುಂಟೂರು, ಕಡಪ, ಕರ್ನೂಲು, ಚಿತ್ತೂರು ಈ ಜಿಲ್ಲೆಗಳಲ್ಲಿಯೂ ಕಿ. ವ. ೧೯೨೮ರ ವರೆಗೆ ಸಂಗ್ರಹಿಸಿದುವು ಆಗಿವೆ. ಇವುಗಳ ಸಂಖ್ಯೆ

೧೦೧೮. ಆ ಬಳಿಕ ೧೯೨೯-೧೯೪೪ ಈ ವರ್ಷಗಳಲ್ಲಿ ಸುಮಾರು ೪೦೦ ಶಾಸನಗಳು ಸಂಗ್ರಹವಾಗಿದ್ದು ಅವು ಇನ್ನೂ ಪ್ರಕಟವಾಗಿಲ್ಲ. ಈ ಶಾಸನಾನ್ವೇಷಣವು ಅನಂತಪುರ, ಬಳ್ಳಾರಿ, ದಕ್ಷಿಣಕನ್ನಡ, ಈ ಮೂರು ಜಿಲ್ಲೆಗಳ ಬಹು ಭಾಗದಲ್ಲಿ ನಡೆದಿದೆ ಎಂದು ಹೇಳಬಹುದಾದರೂ ಅಲ್ಲಲ್ಲಿ ಪರಿಶೋಧನೆಗೆ ಇನ್ನೂ ಅವಕಾಶವು ಉಳಿದಿದೆ.

ಮೈಸೂರು ಸಂಸ್ಥಾನದಲ್ಲಿ ಕ್ರಿ. ವ. ೧೮೭೯ ರಿಂದ ೧೯೦೬ರ ವರೆಗೆ ಶಾಸನ ಸಂಗ್ರಹ ಪ್ರಕಾಶನ ಕಾರ್ಯವು ನಡೆದು ಕರ್ನಾಟಕ ಶಾಸನಾವಳಿಯ (*Epigraphia Carnatica*) ೧೨ ಸಂಪುಟಗಳಲ್ಲಿ ಸು. ೯,೦೦೦ ಶಾಸನಗಳು ಪ್ರಕಟವಾಗಿದ್ದುವು. ಆ ಬಳಿಕ ಕ್ರಿ. ವ. ೧೯೦೬ ರಿಂದ ೧೯೨೨ ಈ ವರ್ಷಗಳಲ್ಲಿ ನಡೆದ ಪುನರನ್ವೇಷಣದಲ್ಲಿ ಸು. ೫೦೦೦ ಹೊಸ ಶಾಸನಗಳು ಸಂಗ್ರಹವಾದುವು. ಇವುಗಳನ್ನು ಆರು ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆ ಮುಂದುವರಿದು ಇದೀಗ ಎರಡು ಸಂಪುಟಗಳು *Epigraphia Carnatica* Vols. XIV and XV ಹೊರಬಿದ್ದಿವೆ. ಈ ಎರಡು ಸಂಪುಟಗಳಲ್ಲಿ ಪ್ರಕಾಶಿತವಾದ ಶಾಸನಗಳು ಸು. ೧,೧೩೦ ಕ್ರಿ. ವ. ೧೯೨೨ ರಿಂದ ಈಚೆಗೆ ನಡೆದ ಪುನರನ್ವೇಷಣಗಳಲ್ಲಿ ಆ ಆ ವರ್ಷ ಸಂಗ್ರಹಿಸಲಾದ ಶಾಸನಗಳು ಆ ಆ ವರ್ಷದ ವರದಿಗಳಲ್ಲಿ (*Mysore Archaeological Reports*) ಪ್ರಕಟವಾಗುತ್ತಲಿವೆ. ಹೀಗೆ ಪ್ರಕಾಶಿತವಾದ ಶಾಸನ ಸಂಖ್ಯೆ ಸು. ೧೮೧೭.

ಮದ್ರಾಸ ಮತ್ತು ಉದಕಮಂಡಲದ ಶಾಸನ ಕಾರ್ಯಾಲಯದವರು ಕ್ರಿ. ಶ. ೧೯೨೬—೪೪ ಈ ವರ್ಷಗಳಲ್ಲಿ ಮುಂಬಯಿ ಕರ್ನಾಟಕದ ಸಂಪೂರ್ಣ ವಿಜಾಪುರ ಜಿಲ್ಲೆ, ಧಾರವಾಡ ಜಿಲ್ಲೆಯ ಬಹುಭಾಗ, ಬೆಳಗಾವ ಮತ್ತು ಕಾರವಾರ ಜಿಲ್ಲೆಗಳ ಕೆಲಭಾಗ, ಜಮಖಂಡಿ, ರಾಮದುರ್ಗ, ಮಿರಜ (ಜ್ಯೂನಿಯರ ಮತ್ತು ಸೀನಿಯರ) ಮತ್ತು ಜತ್ತ ಈ ಸಂಸ್ಥಾನದ ಪ್ರದೇಶಗಳಲ್ಲಿ ಸಂಗ್ರಹಿಸಿದ ಶಾಸನಗಳ ಸಂಖ್ಯೆ ಸು. ೨,೧೬೪. ಇವುಗಳಲ್ಲಿ ೧೧೮ ಮುಂಬಯಿ ಕರ್ನಾಟಕ ಶಾಸನಾವಳಿಯ (*Bombay Karnatak Inscriptions*) ಪ್ರಥಮ ಸಂಪುಟದ ಪ್ರಥಮ ಭಾಗದಲ್ಲಿ ಪ್ರಕಾಶಿತವಾಗಿದೆ. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯವರು ಮೊದಲನೆಯ ವರ್ಷ (೧,೯೩೬—೪೦) ಸಂಗ್ರಹಿಸಿದ ೧೦೨ ಶಾಸನಗಳಲ್ಲಿ ೬೭ ಕರ್ನಾಟಕ ಶಾಸನಾವಳಿಯ (*Karnatak Inscriptions*) ಪ್ರಥಮ ಸಂಪುಟದಲ್ಲಿ ಪ್ರಕಟಿಸಿರುವರು. ಈಚೆಯ ನಾಲ್ಕು ವರ್ಷಗಳಲ್ಲಿ ಅವರು ಸು. ೩೦೦ ಶಾಸನಗಳನ್ನು ಸಂಗ್ರಹಿಸಿರಬಹುದಾದರೂ ಯುದ್ಧಪರಿಸ್ಥಿತಿಯ ಮೂಲಕ ಅವರ ವರದಿಗಳು ನಿಂತು ಹೋದುದರಿಂದ ಸರಿಯಾದ ಎಣಿಕೆ ತಿಳಿದಿಲ್ಲ.

ಅಂತೂ ಕಳೆದ ಕಾಲು ಶತಮಾನದಲ್ಲಿ ಕರ್ನಾಟಕದ ಆ ಆ ಭಾಗಗಳಲ್ಲಿ ಸಂಗ್ರಹಿಸಲಾದ ಶಾಸನಗಳ ಒಟ್ಟು ಸಂಖ್ಯೆ ಸುಮಾರು ೬,೦೦೦ ಆಗುತಿದ್ದು ಬೇರೆಬೇರೆ ಶಾಸನಾವಳಿಯ ಸಂಪುಟಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಪ್ರಕಾಶಿತವಾದ ಶಾಸನಗಳ ಸಂಖ್ಯೆ ಸುಮಾರು ೪,೫೦೦ ಆಗುವುದು. ಈ ಪರಿಯಾಗಿ ಪರಿಶೋಧಿತವಾದ ಶಾಸನಗಳಿಂದ ಕರ್ನಾಟಕದಲ್ಲಿ ಆಳಿದ ಚಾಲುಕ್ಯ, ರಾಷ್ಟ್ರಕೂಟ, ಕಲಚುರ್ಯ, ಹೊಯ್ಸಳ, ಯಾದವ, ವಿಜಯನಗರ, ಮೊದಲಾದ ಪ್ರಧಾನ ರಾಜವಂಶಗಳಲ್ಲದೆ ಗಂಗ, ಕದಂಬ, ಬಾಣ, ವೈದುಂಬ, ರಟ್ಟ, ಸಿಂದ, ಶಿಲಹಾರ, ಮೊದಲಾದ ಅನೇಕ ಮಾಂಡಲಿಕ ಅರಸರು ಸಾಮಂತರು, ಅಧಿಕಾರಿಗಳು, ಇವರುಗಳ ವಿಷಯವಾಗಿ ಅನೇಕಾನೇಕ ವಿವರಗಳು ವಿದಿತವಾಗಿ ಕರ್ನಾಟಕ ಚರಿತ್ರೆಯ ಕ್ಷೇತ್ರವು ಬಹುವಾಗಿ ವಿಸ್ತಾರಗೊಂಡಿದೆ. ನಮ್ಮ ನೆರೆಯ ನಾಡುಗಳಲ್ಲಿ ದೊರೆತ ತಮಿಳು, ತೆಲುಗು, ಮೊದಲಾದ ಭಾಷೆಯ ಶಾಸನಗಳಿಂದ ರಾಜಕೀಯವೇ ಮೊದಲಾದ ಕರ್ನಾಟಕದ ಪರಪ್ರಾಂತೀಯ ವ್ಯವಹಾರಗಳ ವಿಷಯದಲ್ಲಿ ಹೆಚ್ಚಿನ ತಿಳಿವು ಉಂಟಾಗಿದೆ. ಬರಿಯ ಒಂದು ರಾಜಕೀಯ ಚರಿತ್ರೆಯ ವಿಚಾರದಿಂದ ಮಾತ್ರವಲ್ಲ, ಸಾಹಿತ್ಯ, ಧರ್ಮ, ಸಮಾಜ, ಭಾಷೆ ಮೊದಲಾದ ಮಿಕ್ಕ ವಿಚಾರಗಳಿಂದಲೂ ಈ ಶಾಸನ ಸಾಹಿತ್ಯದ ಬೆಲೆ ಅಧಿಕವಾಗಿದ್ದು, ಈ ವಿವಿಧ ಅಂಗಗಳಿಂದ ಅವುಗಳ ಅಧ್ಯಯನವು ನಡೆಯಬೇಕಾದುದು.

ಇತರಸಾಧನಗಳು

ಶಾಸನಗಳಲ್ಲದೆ ಚರಿತ್ರೆಗೆ ಸಹಾಯಕರವಾದ ಇತರ ಸಾಧನಗಳ ಅನ್ವೇಷಣ ಕ್ಷೇತ್ರದಲ್ಲಿಯೂ ಕೆಲಸವು ನಡೆದಿದೆ. ಸಾತವಾಹನರ ಕಾಲದಿಂದ ಈಚೆಯ ಮೊಗಲ ಆಳಿಕೆಯ ವರೆಗಿನ ನೂರಾರು ನಾಣ್ಯಗಳು ದೊರೆತಿವೆ. ಕಾವ್ಯಾಲಾಪ ಸರಣಿಯಿಂದ ಚರಿತ್ರೆಯನ್ನು ಹೇಳಲು ಹೊರಟ, ಕನ್ನಡ ಮತ್ತು ಸಂಸ್ಕೃತವೇ ಮೊದಲಾದ ಭಾಷೆಗಳಲ್ಲಿ ರಚಿತವಾದ, ಅನೇಕ ಚಾರಿತ್ರಕ ಕಾವ್ಯಗಳು ಪ್ರಕಟವಾಗಿವೆ. ಇಂತಹವುಗಳಲ್ಲಿ ಕನ್ನಡದ ಕೆಳದಿನೃಪವಿಜಯಂ, ಪರದಾರ ಸೋದರ ರಾಮನ ಕಥೆ, ಚಿಕದೇವರಾಯ ವಂಶಾವಳಿ, ಸಂಸ್ಕೃತದ ಮಧುರಾವಿಜಯಂ, ಸಾಳುವಾಭ್ಯುದಯಂ, ವರದಾಂಬಿಕಾ ಪರಿಣಯಂ, ಶಿವತತ್ತ್ವರತ್ನಾಕರ ಮತ್ತು ತೆಲುಗಿನ ರಾಯವಾಚಕಮು, ರಾಮರಾಜೀಯಮು, ಇಂತಿವುಗಳನ್ನು ನಿರ್ದೇಶಿಸಬಹುದು. ಇದೇ ಸಂದರ್ಭದಲ್ಲಿ ಚಾರಿತ್ರಕವಲ್ಲದ ವಿಷಯಗಳನ್ನು ಕುರಿತು ಕೇವಲ ಸಾಹಿತ್ಯರೀತಿಯಲ್ಲಿ ಬರೆದುವಾದರೂ ಅವುಗಳಲ್ಲಿ ಅಲ್ಲಲ್ಲಿ ಅಡಕವಾಗಿರುವ ಚರಿತ್ರಾಂಶಗಳಿಂದ ಚರಿತ್ರೆಯ ತಿಳವಳಿಕೆಗೆ ಹೆಚ್ಚಿನ ನೆರವನ್ನು ನೀಡುವ ಪಂಪಭಾರತ, ಬಸವದೇವರಾಜರಗಳೆ, ಮೊದಲಾದ ಕಾವ್ಯಗಳನ್ನು ನಾವು

ಮರೆಯಲಾಗದು. ಈಚೆಯ ಕಾಲದ ಚರಿತ್ರೆಯನ್ನು ನಿರೂಪಿಸುವ, ರಾಮರಾಯನ ಬಖರ, ಮಹಿಸೂರು ಸಂಸ್ಥಾನದ ದೊರೆಗಳ ಪಾರಂಪರೆ ಕೈಫಿಯತ್ತು, ಹೈದರನಾಮಾ, ಇವುಗಳ ಜಾತಿಯ ಕೆಲವು ಗದ್ಯಲೇಖನಗಳು ದೊರೆತಿವೆ. ಮುಸಲ್ಮಾನರ ಆಳಿಕೆಯಲ್ಲಿಯ ಕರ್ನಾಟಕದ ಚರಿತ್ರೆಯ ಅಧ್ಯಯನಕ್ಕೆ ಫಿರಿಷ್ತನ ದಕ್ಖನದ ಚರಿತ್ರೆ ಈಸಾಮಿಯ ಫುತುಹ್-ಉಸ್-ಸಲಾತೀನ್, ನಿಜಾಮುದ್ದೀನನ ತಬಕಾತ್-ಇ-ಅಕಬರಿ ಮೊದಲಾದ ಗ್ರಂಥಗಳಿಂದ ಉಪಯೋಗವಾಗಿದೆ. ಇಂತಹ ಗ್ರಂಥಗಳಿಗಿಂತ ಹೆಚ್ಚು ಪ್ರಮಾಣಭೂತ ಮತ್ತು ಉಪಯುಕ್ತವಾದುವು ಆ ಕಾಲದ ಸಮಸಾಮಯಿತ ರಾಜಕೀಯ ಪತ್ರವ್ಯವಹಾರ, ಸನದ, ಮಹಜರ, ಮುಂತಾದುವು. ಪುಣೆಯ ಭಾರತ ಇತಿಹಾಸ ಸಂಶೋಧಕ ಮಂಡಲದ ಅಖಂಡ ಪರಿಶ್ರಮಗಳಿಂದ ಮರಾಠಿ, ಪರ್ಶಿಯನ್ ಮೊದಲಾದ ಭಾಷೆಗಳಲ್ಲಿ ಬರೆದ ಇಂತಹ ಸಾವಿರಾರು ಕಾಗದಗಳು ಪರಿಶೋಧನೆ ಗೊಂಡು ಪ್ರಕಾಶಿತವಾಗಿವೆ. ವಿಶೇಷವಾಗಿ ಮಹಾರಾಷ್ಟ್ರ ಪ್ರದೇಶಗಳಿಂದ ಸಂಗ್ರಹಿಸಲಾದ ಈ ಸಾಮಗ್ರಿಯಿಂದ ಮುಸಲ್ಮಾನ ಮತ್ತು ಮರಾಠರ ಆಳಿಕೆಯಲ್ಲಿಯ ಕರ್ನಾಟಕದ ಚರಿತ್ರೆಯ ಮೇಲೆ ಕೆಲಮಟ್ಟಿಗೆ ಬೆಳಕು ಕಾಣುತ್ತಿದ್ದರೂ ಕರ್ನಾಟಕ ಪ್ರದೇಶದಲ್ಲಿ ವಿಪುಲತೆಯಿಂದ ದೊರೆಯುವ ಈ ಸಾಧನಗಳ ಸಂಗ್ರಹಕಾರ್ಯವು ಇನ್ನೂ ಸಾಕಷ್ಟು ನಡೆದಿಲ್ಲ.

ನಿಜಾಮ ಕರ್ನಾಟಕ

ಮೇಲಿನ ಕಿರಿನೋಟದಲ್ಲಿ, ಹರಿದು ಹಂಚಿ ಹೋದ ಕರ್ನಾಟಕದ ಅನೇಕ ಭಾಗಗಳಲ್ಲಿ ನಡೆದ ಕೆಲಸಗಳ ನಿರ್ದೇಶ ಬಂದಿದ್ದರೂ ನಿಜಾಮ ಕರ್ನಾಟಕದ ವಿಷಯವನ್ನು ಮಾತ್ರ ಪ್ರಸ್ತಾಪಿಸದೆ ಇದ್ದುದು ಕೆಲವರಿಗೆ ಸೋಜಿಗವೆನಿಸಬಹುದು. ಇದಕ್ಕೆ ಕಾರಣಗಳು ಇಲ್ಲದೆ ಇಲ್ಲ. ಈ ಭಾಗವು ಕರ್ನಾಟಕದ ಚರಿತ್ರೆಯ ಅನೇಕ ಮಹತ್ತರ ಘಟನೆಗಳಿಗೆ ಕಾರ್ಯರಂಗವಾಗಿದ್ದಿತು; ಇಲ್ಲಿಯ ರಾಯಚೂರು, ಕಲಬುರ್ಗಿ, ಬಿದರ, ಮುಂತಾದ ಪ್ರದೇಶಗಳಲ್ಲಿ ಶಿಲಾಶಾಸನಗಳೇ ಮೊದಲಾದ ಚಾರಿತ್ರಕ ಸಾಧನಗಳು ಸಮೃದ್ಧಿಯಾಗಿ ಸಿಕ್ಕುವುವು; ಆದರೂ ಕ್ರಮಬದ್ಧವಾಗಿ ಅವುಗಳ ಸಂಗ್ರಹ ಮತ್ತು ಸಂಶೋಧನ ಇದುವರೆಗೆ ನಡೆಯದೇ ಇದ್ದುದು ಕರ್ನಾಟಕ ಚರಿತ್ರೆಗೆ ಒಂದು ಹಿರಿದಾದ ಹಾನಿ. ಇಲ್ಲಿಯ ಪುರಾತತ್ತ್ವ ವಿಭಾಗದವರು ಆಗೊಂದು ಈಗೊಂದರಂತೆ ಕೈಯೆತ್ತಿ ಪ್ರಕಟಗೊಳಿಸಿದ ಕನ್ನಡ ಶಿಲಾಶಾಸನಗಳ ಸಂಖ್ಯೆ ಕೈ ಬೆರಳಿನಿಂದ ಎಣಿಸುವಷ್ಟು ಮಾತ್ರ. ಮೈಸೂರು ಸಂಸ್ಥಾನದಂತೆ ಇಲ್ಲಿಯೂ ಹಳ್ಳಿ ಹಳ್ಳಿಗೆ ತಿರುಗಿ ಶಾಸನಗಳನ್ನು ಸಂಗ್ರಹಿಸುವುದಾದರೆ ಅವುಗಳ ಲೆಕ್ಕವು ಕಡಿಮೆಯೆಂದರೆ ೫,೦೦೦ ಕ್ಕಾದರೂ ಏರಬಹುದು. ಈ ದೃಷ್ಟಿಯಿಂದ ಕೆಲ ವರ್ಷಗಳ ಹಿಂದೆ ಪ್ರಸ್ತುತ

ಲೇಖಕನು ಸ್ವಪರಿಶ್ರಮದಿಂದ ಕೊಪ್ಪಳ ಜಿಲ್ಲೆಯ ಬಹುಭಾಗದಲ್ಲಿಯೂ ಕಲಬುರ್ಗಿ ಜಿಲ್ಲೆಯ ಕೆಲಭಾಗಗಳಲ್ಲಿಯೂ ಸಂಚರಿಸಿ ಸು. ೨೦೦ ಶಾಸನಗಳನ್ನು ಸಂಗ್ರಹಿಸಿರುವನು. ಅವುಗಳ ಪ್ರಕಾಶನದ ಯೋಗವು ಇನ್ನೂ ಬಂದಿಲ್ಲ. ಅವುಗಳ ಸಂಕ್ಷಿಪ್ತ ಪಟ್ಟಿಯೊಂದು ಕರ್ನಾಟಕ ಇತಿಹಾಸ ಸಂಶೋಧಕ ಮಂಡಲದ ಇಂಗ್ಲಿಷ ಪತ್ರಿಕೆಯಲ್ಲಿ—*Karnataka Historical Review*, Vol. II, No. 2, Appendix—ಪ್ರಕಟವಾಗಿದೆ.

ಚರಿತ್ರಲೇಖನ

ಈ ಬರಹದ ಪ್ರಾರಂಭದಲ್ಲಿ ಹೇಳಿದಂತೆ ಸಾಧನಸಂಗ್ರಹಾನಂತರ ಚರಿತ್ರೆಯ ರಂಗದಲ್ಲಿ ನಡೆಯಬೇಕಾದ ಎರಡನೆಯ ಕಾರ್ಯ ಚರಿತ್ರಲೇಖನ. ಕಳೆದ ಕಾಲು ಶತಮಾನದಲ್ಲಿ ಸಾಧನ ಸಂಗ್ರಹ ಕ್ಷೇತ್ರದಲ್ಲಿ ನಡೆದ ಘನವಾದ ಕಾರ್ಯವನ್ನು ಈ ಹಿಂದಿನಂತೆ ನಿರೀಕ್ಷಿಸಿ ಈಕಡೆ ಹೊರಳಿದರೆ ನಮ್ಮ ಕಣ್ಣುಗಳು ತಣಿಯುವಂತಿಲ್ಲ. ಆ ಆ ಪ್ರಭುತ್ವದ ಪುರಾತತ್ತ್ವ ವಿಭಾಗದವರು ತಮ್ಮ ತಮ್ಮ ವರದಿಗಳಲ್ಲಿ ತಾವು ಕಂಡುಹಿಡಿದ ಅನ್ವೇಷಣಗಳ ಮೇಲೆ ಬರೆದ ಟಿಪ್ಪಣಿಗಳು ; ಶಾಸನಾವಳಿ ಸಂಪುಟಗಳ ಪೀಠಿಕೆಯಲ್ಲಿಯ ವಿವೇಚನೆಗಳು ; ಭಾರತೀಯ ಶಾಸನಪತ್ರಿಕೆಯಲ್ಲಿ (*Epigraphia Indica*) ಪ್ರಕಟವಾದ ಶಾಸನಗಳ ಸಂದರ್ಭದಿಂದ ಉಂಟಾದ ಚರ್ಚೆಗಳು ; ಫ್ಲೀಟರ ಕನ್ನಡ ರಾಜ ವಂಶಗಳ ಚರಿತ್ರೆ, ರಾಷ್ಟ್ರ ಕೂಟ, ವಿಜಯನಗರ, ಮೊದಲಾದ ಕೆಲವು ರಾಜವಂಶಗಳ ಖಂಡಚರಿತ್ರೆಗಳು ; ಆ ಆ ಪತ್ರಿಕೆಗಳಲ್ಲಿ ಅಲ್ಲೊಂದು ಇಲ್ಲೊಂದರಂತೆ ಪ್ರಕಾಶಿತವಾದ ಐತಿಹಾಸಿಕ ಲೇಖನಗಳು ; ಮೊದಲಾದ ಬರವಣಿಗೆಗಳಲ್ಲಿ ಕರ್ನಾಟಕ ಚರಿತ್ರೆಯ ಅನೇಕ ಅಂಗಗಳು ಪ್ರಕಟವಾಗಿದ್ದರೂ ಅದುವರೆಗೆ ಉಪಲಬ್ಧವಾಗುವ ವಿವಿಧ ಸಾಧನಗಳನ್ನೆಲ್ಲ ಸಂಪೂರ್ಣವಾಗಿ ಬಳಸಿಕೊಂಡು ಸಮಗ್ರ ಕನ್ನಡ ನಾಡಿನ ಸಂಪೂರ್ಣ ಚರಿತ್ರೆಯನ್ನಾಗಲಿ, ಅಥವಾ ಆ ಚರಿತ್ರೆಯ ರಾಜಕೀಯ, ಸಾಮಾಜಿಕ, ಧಾರ್ಮಿಕ, ಮೊದಲಾದ ಅಂಗಗಳನ್ನಾಗಲಿ ಸವಿಸ್ತರವಾಗಿ ಪ್ರತಿಪಾದಿಸುವ ಪ್ರಾಮಾಣಿಕ ಚರಿತ್ರ ಗ್ರಂಥಗಳು, ಕನ್ನಡದಲ್ಲಿಯಂತೂ ಸರಿ, ಇಂಗ್ಲಿಷಿನಲ್ಲಿಯೂ ಇನ್ನೂ ಮೈದೋರಿಲ್ಲ. ವಿಜಯನಗರ ಸ್ಥಾಪನೆಯ ಆರುನೂರನೆಯ ವರ್ಷದ ಸ್ಮಾರಕ ಸಮಾರಂಭದ ನಿಮಿತ್ತದಿಂದ ಕರ್ನಾಟಕ ಚರಿತ್ರೆಯ ವಿಷಯದಲ್ಲಿ ಸ್ವಲ್ಪ ಜಾಗೃತಿ ಉಂಟಾಗಿ ಅನೇಕ ಲೇಖನಗಳು ಪ್ರಕಟವಾದುವು ; ಆ ಸಾಮ್ರಾಜ್ಯದ ಒಂದು ಚರಿತ್ರ ಗ್ರಂಥವು ಕನ್ನಡದಲ್ಲಿ ಪ್ರಕಟವಾಯಿತು. ಇಂತಹ ಒಂದೆರಡು ಚರಿತ್ರೆಯ ಸಂಪುಟಗಳು ಮತ್ತು ಕೆಲವು ಚಿಕ್ಕ ಪುಟ್ಟ ಪತ್ರ ಪುಸ್ತಕಗಳನ್ನು ಉಳಿದರೆ ಕನ್ನಡದಲ್ಲಿ ಹೆಸರುಗೊಳ್ಳುವಂತಹ ಚರಿತ್ರಗ್ರಂಥಗಳ ಅಭಾವವೇ ನಿಂತಿದೆ ಎಂದು ಹೇಳಬಹುದು.

ಈ ವಿಚಾರದಲ್ಲಿ ನಾವು ಇನ್ನೂ ಪ್ರಾರಂಭಸ್ಥಿತಿಯಲ್ಲಿಯೇ ಇರುವೆವು. ನಮ್ಮ ನೆರೆಯ ಮಹಾರಾಷ್ಟ್ರ, ತೆಲುಗು ಮತ್ತು ತಮಿಳು ನಾಡುಗಳಲ್ಲಿ ಚಾರಿತ್ರಕ ಸಂಶೋಧನದಂತೆ ಲೇಖನ ಕ್ಷೇತ್ರದಲ್ಲಿಯೂ ಹೆಚ್ಚಿನ ಪ್ರಗತಿ ಕಂಡುಬಂದಿದೆ. ಕರ್ನಾಟಕ ಸಾರಸತ್ವದ ವಿವಿಧ ಅಂಗಗಳನ್ನು ಪರೀಕ್ಷಿಸಿ ಹೇಳುವುದಾದರೆ, ಕನ್ನಡ ಶಾರದೆಯ ಕಥೆ, ಕವನ. ಪ್ರಬಂಧ, ನಾಟಕ ಮೊದಲಾದ ಮಂದಿರಗಳಿಗಿಂತ ಚರಿತ್ರೆಯ ಮಂದಿರವು ಹೆಚ್ಚು ಅಲಂಕಾರಹೀನವಾಗಿದೆ ಎಂದು ಅಭಿಪ್ರಾಯ ಪಡಬೇಕಾಗುವುದು.

ಕೊನೆಯ ಅರಿಕೆ

ಅನೇಕ ಕಾರಣಗಳ ಮೂಲಕ ಪ್ರಸ್ತುತ ವಿಮರ್ಶೆಯನ್ನು ನಿರ್ದಾಕ್ಷಿಣ್ಯವಾಗಿ ಸಂಕ್ಷೇಪಗೊಳಿಸಬೇಕಾಯಿತು. ಮೇಲಿನ ಬರವಣಿಗೆಯಲ್ಲಿ ಕೆಲವು ಸಂಸ್ಥೆಗಳ ಹೆಸರುಗಳು ನಿರ್ದಿಷ್ಟವಾಗಿವೆ. ಆ ಸಂಸ್ಥೆಗಳಲ್ಲಿ ಚಾಲಕರಾಗಿಯೂ ಸಹಾಯಕರಾಗಿಯೂ ಅನೇಕ ಮಹನೀಯರು ಕೆಲಸಮಾಡಿದ್ದಾರೆ, ಮಾಡುತಲಿದ್ದಾರೆ. ಅನೇಕ ವಿದ್ವಾಂಸರು ಕನ್ನಡ ಮತ್ತು ಆಂಗ್ಲ ಪತ್ರಿಕೆಗಳಲ್ಲಿ ಕರ್ನಾಟಕ ಚರಿತ್ರೆಗೆ ಸಂಬಂಧಿಸಿದ ಘನವಾದ ಲೇಖನಗಳನ್ನು ಪ್ರಕಟಿಸಿದ್ದಾರೆ. ವೀರಶೈವ, ಜೈನ, ಮೊದಲಾದ ಮತೀಯ ಪ್ರಾದೇಶಿಕ ಕ್ಷೇತ್ರಗಳಲ್ಲಿ ಚಾರಿತ್ರಕ ಪರಿಶೋಧನಗಳನ್ನು ಮುಂದುವರಿಸಿದ ಮಾನ್ಯರು ಇದ್ದಾರೆ. ಇಂತಹರೆಲ್ಲರು ಗೌರವಪುರಸ್ಸರವಾಗಿ ನಾಮನಿರ್ದೇಶಮಾಡಲು ಅರ್ಹರಾಗಿದ್ದರೂ ವಿಸ್ತಾರಭಯದಿಂದ ಅಂತಹ ಪ್ರಯತ್ನವನ್ನು ಬಿಟ್ಟುಬಿಡಬೇಕಾಗಿದೆ. ಈ ಲೇಖನಕ್ಕೆ ಆಧಾರವಾದ ಸಾಹಿತ್ಯವನ್ನು ಇಲ್ಲಿ ಕಾಣಿಸದೆ ಇರುವ ಕಾರಣವಾದರೂ ಇದುವೆ. ಈ ವಿಷಯದಲ್ಲಿ ಸ್ವಲ್ಪ ಅಭಿರುಚಿಯುಳ್ಳವರು ಅದನ್ನು ಸುಲಭವಾಗಿ ಗುರುತಿಸಿಕೊಳ್ಳಬಹುದು. ಕೊನೆಗೆ ವಿಸ್ತಾರವಾದ ಕನ್ನಡನಾಡಿನ ನಾಲ್ಕುಸಾವಿರ ವರ್ಷಗಳ ಚರಿತ್ರೆಯಲ್ಲಿ ನಡೆದ ಮಹಾಕಾರ್ಯಗಳನ್ನು ಈ ನಾಲ್ಕು ಪುಟಗಳಲ್ಲಿ ವಿಮರ್ಶಿಸಲು ಮಾಡಿದ ನನ್ನೀ ಸಾಹಸದಲ್ಲಿ ಉಂಟಾದ ಕುಂದುಕೊರತೆಗಳನ್ನು ಬಲ್ಲವರು ಮನ್ನಿಸುವುದಾಗಿ ಬೇಡುವೆ.

—ದೇಸಾಯಿ ಪಾಂಡುರಂಗರಾಯ.

೮. ಹೊಸಗನ್ನಡ ನಾಟಕಗಳು

೩

ಹೊಸಗನ್ನಡ ಸಾಹಿತ್ಯದ ಉಗಮಕ್ಕೆ ಪ್ರಚೋದಕವಾದ ಶಕ್ತಿಗಳೆಲ್ಲ ನಾಟಕ ಸಾಹಿತ್ಯದ ನಿರ್ಮಾಣಕ್ಕೂ ಕಾರಣವಾಗಿವೆ. ದೇಶೀಯ ಭಾಷೆಗಳಲ್ಲಿ ಸಾಹಿತ್ಯ ನಿರ್ಮಾಣವು ಚುರುಕಿನಿಂದ ನಡೆದುದು ಇಪ್ಪತ್ತನೆಯ ಶತಮಾನದ ಆದಿಯಿಂದಲೇ ಎಂದು ಹೇಳಬೇಕು. ಇಂಗ್ಲಿಷ್ ಶಿಕ್ಷಣವು ಆರಂಭವಾಗಿ ಸುಮಾರು ಐವತ್ತು ವರ್ಷಗಳ ವರೆಗೆ ಭಾರತೀಯತೆಯ ಕಲ್ಪನೆ ಬಲವಾಗಿ ಜಾಗ್ರತವಾಗಲಿಲ್ಲ. ಅದಾಗದ ವರೆಗೆ ತನ್ನತನವು ಹುಟ್ಟುವಂತಿರಲಿಲ್ಲ. ತನ್ನತನವು ಹುಟ್ಟುವ ವರೆಗೆ ತನ್ನ ಭಾಷೆ ಯಲ್ಲಿ ಸಾಹಿತ್ಯವು ನಿರ್ಮಾಣವಾಗುವಂತಿರಲಿಲ್ಲ. ಈ ಲೆಕ್ಕದಿಂದ ಕನ್ನಡ ಸಾಹಿತ್ಯ ದಲ್ಲಿ ಹೊಸ ಹುರಿಪು ಹುಟ್ಟಿ ಅದರ ಬೆಳವಣಿಗೆ ಪ್ರಾರಂಭವಾಗಬೇಕಾದರೆ ೨೦ ನೆಯ ಶತಮಾನದ ಆದಿಯ ವರೆಗೆ ತಡೆಯಬೇಕಾಯಿತು. ಹೊಸಗನ್ನಡ ನಾಟಕ ಸಾಹಿ ತ್ಯವೂ ಇದೇ ಕಾಲದಿಂದ ಬೆಳೆಯಲು ಪ್ರಾರಂಭವಾಯಿತೆಂದು ಸ್ಥೂಲವಾಗಿ ಹೇಳಬಹುದು.

ನಾಟಕಸೃಷ್ಟಿಯ ಹಿನ್ನೆಲೆಯಲ್ಲಿದ್ದ ಸಮಾಜಸ್ಥಿತಿಯನ್ನು ಪರಿಶೀಲಿಸಿದರೆ ನಾಟಕ ಗಳ ವಸ್ತು, ಶೈಲಿ, ವಿಷಯ ಮತ್ತು ಆಶಯಗಳು ಚೆನ್ನಾಗಿ ವ್ಯಕ್ತವಾಗುವುವು. ಧರ್ಮಾಂಧತೆ, ಶ್ರದ್ಧಾದಾಸ್ಯ, ಸಂಪ್ರದಾಯ ಶೃಂಖಲೆ ಮತ್ತು ಮೌಢ್ಯದಿಂದ ಬಳಲುತ್ತಿದ್ದ ನಾಡಿನಲ್ಲಿ ಹೊಸ ಬೆಳಕಿನ ಹೊಂಬಿಸಿಲು ಕಂಡೊಡನೆ ಕಣ್ಣು ಕುಕ್ಕಿ ದುವು ಕೆಲವರಿಗೆ. ಸ್ವಂತ ವ್ಯುತ್ಪತ್ತಿ ಜಾಗ್ರತವಾಗದಿರಲು ಅನುವಾದ ಮತ್ತು ಅನು ಕರಣದಲ್ಲಿ ಸಾರ್ಥಕ್ಯವನ್ನು ಪಡೆಯಿತು ಅವರ ಪ್ರತಿಭೆ. ಅಪರಿಚಿತವಾದ ರೂಢಿಗಳ ಆರಂಭವು ಆಕ್ರೋಶವನ್ನುಂಟುಮಾಡಿತು ಹಲವರಲ್ಲಿ. ಶಿಕ್ಷಣಸಂಭ್ರಮ ನಾಟಕವು ಈ ಬಗೆಯ ಮನೋವೃತ್ತಿಯ ದ್ಯೋತಕವಾಗಿದೆ.

ಶಿಕ್ಷಣದ ಸಾರವು ಚೆನ್ನಾಗಿ ಇಳಿದು ಸ್ವಂತದ ಅರಿವು ಬೆಳೆದು ಆತ್ಮವಿಶ್ವಾ ಸವು ಬಲಿದು ಸದಸದ್ವಿವೇಕವು ಪುಷ್ಟವಾಗುತ್ತ ನಡೆದಂತೆ ನಿಷ್ಪಕ್ಷಪಾತ ಬುದ್ಧಿ ಯಿಂದ ಸಮಾಜಜೀವನವನ್ನು ವಿಮರ್ಶಿಸಿ ಅದರ ಕೊರತೆಗಳನ್ನು ತುಂಬುವ ಮತ್ತು ಬೇರೆಯವರಲ್ಲಿದ್ದ ಸುಂದರಾಂಶಗಳನ್ನು ಕನ್ನಡಕ್ಕೆ ಅಳವಡಿಸಿಕೊಳ್ಳುವ ಹವಣಿಕೆ ಪ್ರಾರಂಭವಾಯಿತು. ಇದರ ಫಲವಾಗಿ ಕನ್ನಡ ನಾಟಕ ಸಾಹಿತ್ಯವು ವಿವಿಧ ಮತ್ತು ವಿಪುಲವಾಗಿ ಬೆಳೆಯಿತು.

ಆದಾಯದ ದೃಷ್ಟಿಯನ್ನಿಟ್ಟು ಜನರ ಪ್ರಧಾನ ಪ್ರವೃತ್ತಿಗಳಿಗೆ ಚೇತನವನ್ನು

ಕೊಟ್ಟು ಕಿಂಚಿನ್ಮನೋರಂಜನೆ ಮಾಡುವ ನಾಟಕ ಕಂಪನಿಗಳು ನಾಟಕವನ್ನು ಸಮಾಜ ಸುಧಾರಣೆಯ ನಾಟಕವನ್ನಾಗಿ ಮಾಡಲು ಯಶಸ್ವಿಯಾಗಲಿಲ್ಲ. ಸಮಾಜದ ಜೀವನಚಿತ್ರವನ್ನು ಪ್ರತಿಬಿಂಬಿಸುವುದಕ್ಕೆ ಅವು ಹೆಚ್ಚಾಗಿ ನುಗ್ಗಲಿಲ್ಲ. ಪಾಶ್ಚಾತ್ಯ ಸಂಸ್ಕಾರ ಶಿಕ್ಷಣವನ್ನು ಪಡೆದು ನಾಟಕವನ್ನು ಆಧುನಿಕಗೊಳಿಸಿದವರು ಬಹುಮಟ್ಟಿಗೆ ಇತ್ತೀಚಿನ ವಿಶ್ವವಿದ್ಯಾಲಯಗಳ ಯುವಕರು ಮತ್ತು ಅಲ್ಲಿಯ ಬೋಧಕವರ್ಗ. ಒಂದು ಜನಾಂಗದ ಹೊಸ ಹುಟ್ಟಿನಲ್ಲಿ ಅದರ ಹಿಂದಿನ ಹೆಮ್ಮೆ ಜಾಗ್ರತವಾಗುವುದು ಸಹಜ. ಈ ಬಗೆಯಾಗಿ ಕನ್ನಡ ನಾಟಕಗಳಲ್ಲಿ ಇತಿಹಾಸಾಂಶವೂ ಸ್ಥಾನವನ್ನು ಪಡೆಯಿತು. ಜೀವನವನ್ನು ನಿಷ್ಕಾಮವಾಗಿ ನೋಡುವ ಸಾಕ್ಷಿಯಂತೆ ಕೆಲವರು ನಾಟಕವನ್ನು ಸೃಜಿಸಿದರೆ ಅದರ ಬೇಗೆಗೆ ಬೆಂದು ತಾಳ್ಮೆಗೊಂಡು ತಮಗೆ ತೋರಿದ ಮದ್ದನ್ನು ಹಿತಮಿತವಾಗಿ ಸೂಚಿಸಿದರು ಕೆಲವರು. ಬಾಳ ಕರಾಳ ಗರ್ಭದಲ್ಲಿ ಕಂಡುಬಂದ ಘೋರ ಹಿಂಸ್ರಕ ಜಂತುಗಳನ್ನು ನೋಡಿ ಕತ್ತಿ ಹಿರಿದೆದ್ದರು ಕೆಲವು ಲೇಖಕರು. ಸಮಸ್ಯೆಗಳನ್ನು ಎತ್ತಿ ಬಿಡಿಸ ಹೊರಟರು ಕೆಲವರು. ಕನ್ನಡ ನಾಟಕ ಸಾಹಿತ್ಯದಲ್ಲಿ ಕಂಡುಬರುವ ದೃಶ್ಯ ಇದು.

ಈ ಚಿಕ್ಕ ಲೇಖನದಲ್ಲಿ ವೈಯಕ್ತಿಕ ನಾಟಕಕಾರರ ವಿವರವಾದ ವಿಮರ್ಶೆಯನ್ನು ಕೊಡುವುದು ಅಸಾಧ್ಯ. ಆದರೆ ನಾಟಕ ಸಾಹಿತ್ಯದಲ್ಲಿ ಹರಿದುಬಂದ ಮುಖ್ಯವಾಹಿನಿಗಳನ್ನು ಗುರುತಿಸಲಾಗುವುದು. ಇಂದು ಕನ್ನಡದಲ್ಲಿ ನೂರಾರು ನಾಟಕಗಳಿವೆ. ವಸ್ತು ಮತ್ತು ಶೈಲಿಯ ದೃಷ್ಟಿಯಿಂದ ನಾವು ಅವನ್ನು ಹೀಗೆ ವಿಭಜಿಸಬಹುದು: ಪದ್ಯ ನಾಟಕಗಳು, ಗೀತ ನಾಟಕಗಳು, ಗದ್ಯ ನಾಟಕಗಳು, ಧಾರ್ಮಿಕ, ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳು; ವಿಷಾದಾಂತ ಮತ್ತು ಸುಖಾಂತಗಳು; ಪ್ರಹಸನಗಳು ಮತ್ತು ಏಕಾಂಕಗಳು; ಸ್ವತಂತ್ರ ನಾಟಕಗಳು ಮತ್ತು ಅನುವಾದಗಳು.

ನಾಟಕ ಕಂಪನಿಗಳು ಬರಸಿದ ಧಾರ್ಮಿಕ ನಾಟಕಗಳು ಹೇರಳವಾಗಿವೆ. ಆದರೆ ಧಾರ್ಮಿಕ ವ್ಯಕ್ತಿಗಳನ್ನೇ ಆಯ್ದು ಹೊಸ ಬೆಳಕಿನ ಹೊಸ ವಿಮರ್ಶೆಯಿಂದ ಪಾತ್ರಪೋಷಣೆಯನ್ನು ಮಾಡಿ ಸ್ವತಂತ್ರ ಸಂದೇಶವನ್ನು ಕೊಡುವ ಧಾರ್ಮಿಕ ನಾಟಕಗಳೂ ಹೊಸಗನ್ನಡದಲ್ಲಿ ಹುಟ್ಟಿವೆ. ಬರಿಯ ಧರ್ಮಬೋಧೆಗಾಗಿ ಅವು ಹುಟ್ಟಿರದೆ ಕಲಾಮಯವಾಗಿಯೂ ಇವೆ. ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರ ಮಂಡೋದರಿ ಮತ್ತು ನಚಿಕೇತ; ಶ್ರಿ ಕೆ. ವಿ. ಪುಟ್ಟಪ್ಪನವರ ಯಮನ ಸೋಲು, ಮತ್ತು ಶ್ಮಶಾನ ಕುರುಕ್ಷೇತ್ರ; ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಅಶ್ವತ್ಥಾಮನ್; ಶ್ರೀ ರಾಜರತ್ನಂ ಅವರ ಗಂಡುಗೊಡಲಿ ಇಂಥ ನಾಟಕಗಳು ಉದಾಹರಣೆಯಾಗಿವೆ. ಮಾಸ್ತಿಯವರ ತಾಳೀಕೋಟೆ, ಛತ್ರಪತಿ ಶಿವಾಜಿ; ಸಂಸರ ಸುಗುಣಗಂಭೀರ ಮತ್ತು ವಿಗಡ ವಿಕ್ರಮ

ರಾಯ; ಮನ್‌ಸಬದಾರರ ಪ್ರತಿಜ್ಞಾಪಾಲನೆ; ಗರೂಡರ ಎಚ್ಚಮನಾಯಕ; ದೇವುಡು ಅವರ ಮಯೂರ; ಡಿ. ವಿ. ಗುಂಡಪ್ಪನವರ ವಿದ್ಯಾರಣ್ಯ ವಿಜಯ—ಐತಿಹಾಸಿಕ ನಾಟಕಗಳಲ್ಲಿ ಹೆಸರುವಾಸಿಯಾಗಿವೆ.

ಸಾಮಾಜಿಕ ನಾಟಕಗಳನ್ನು ಕುರಿತು ದೀರ್ಘವಾಗಿ ಬರೆಯಬಹುದು. ಶ್ರೀಮಾನ್ ಟಿ. ಪಿ. ಕೈಲಾಸಂ ಅವರು ಕನ್ನಡ ಸಾಮಾಜಿಕ ನಾಟಕಗಳಲ್ಲಿ ಕ್ರಾಂತಿಯನ್ನು ತಂದರು. ಇಂದು ಕೈಲಾಸಂ ಅವರ ಹೆಸರು ಕನ್ನಡ ನಾಡಿನಲ್ಲಿ ಮನೆಮಾತಾಗಿದೆ. ಒಂದು ವೈಶಿಷ್ಟ್ಯವೆಂದರೆ, ಯಥಾರ್ಥವಾದ ಶೈಲಿಯಲ್ಲಿ ವ್ಯಕ್ತಿದೌರ್ಬಲ್ಯಗಳನ್ನು ವಿಮರ್ಶಿಸುವುವು ಇವರ ನಾಟಕಗಳು. ಕುಂದನ್ನು ಕಂಡು ಇವರಿಗೆ ಕೋಪ ಬರುವುದಿಲ್ಲ; ಮರುಕಬರುವುದು. ಬಾಳಗತಿಯೇ ಇಷ್ಟು, ಯಾರು ಮಾಡುವುದೇನು ಎಂಬ ಒಳದನಿ ಮೂಡುವಂತೆ ಪಾತ್ರಪೋಷಣೆ ಮಾಡುವರು. ಕೈಲಾಸಂ ಇವರ ಇನ್ನೊಂದು ವೈಶಿಷ್ಟ್ಯವೆಂದರೆ ಮಾನವ ಸ್ವಭಾವಗಳ ಎರಡು ವಿರೋಧಾಂಶಗಳನ್ನು ಎಕ್ಕಟಗೊಳಿಸಿ ಪ್ರತೀಕಕೊಡುವರು. ಟೊಳ್ಳು ಇದ್ದಲ್ಲಿ ಗಟ್ಟಿ ಇರಬೇಕು, ಅಮ್ಮಾವ್ರ ಗಂಡ ಇದ್ದಲ್ಲಿ ಯಜಮಾನ್ರ ಹೆಂಡ್ತಿ ಇರಬೇಕು ಕೈಲಾಸಂ ಅವರಿಗೆ, ಹೋಂ ರೂಲು, ಗಂಡಸ್ಕತ್ರಿ ಮುಂತಾದ ನಾಟಕಗಳಲ್ಲಿ ಕೈಲಾಸಂ ಅವರು ಗೃಹಕೃತ್ಯದ ಲೋಪದೋಷಗಳನ್ನು ನಮ್ಮೆದುರು ಇಟ್ಟಿದ್ದಾರೆ. ಅವರ ಬರವಣಿಗೆಯಲ್ಲಿ ಸಹಜತೆ ಇದೆ. ಕರುಳು ಕೊರೆವ ಕಾಠಿನ್ಯವಿಲ್ಲ. ಮನಮುಟ್ಟುವ ಮಾರ್ದವವಿದೆ. ಹಾಸ್ಯ ಅವರ ಹುಟ್ಟುಗುಣ. ಅದೇ ಅವರ ತಂತ್ರ ಸಾಧನ. ಕೈಲಾಸಂ ಅವರು ಸಾಮಾಜಿಕ ಲೋಪದೋಷಗಳಿಗಿಂತ ವೈಯಕ್ತಿಕ ಲೋಪದೋಷಗಳನ್ನು ಹೆಚ್ಚು ಪ್ರತಿಬಿಂಬಿಸುವರು. ಯಾವ ಉಪದೇಶವನ್ನೂ ಕೊಡುವ ಹವ್ಯಾಸಕ್ಕೆ ಇವರು ಹೋಗದೆ ಇದ್ದ ಚಿತ್ರವನ್ನು ಇದ್ದಂತೆ ಕೊಟ್ಟು ದಾಟಹೋಗುವ ದಾಕ್ಷಿಣ್ಯ ಇವರಿಗಿದೆ. ಇವರ ಶೈಲಿಯ ನಾವೀನ್ಯವೆಂದರೆ ಆಡುವ ಮಾತನ್ನೆ ಸಂಭಾಷಣೆಯಲ್ಲುಪಯೋಗಿಸುವರು. ಅರ್ಧಕ್ಕರ್ಧ ಇಂಗ್ಲಿಷ್ ಬೇರೆ. ನಾಟಕೀಯತೆ ಕೈಲಾಸಂ ಅವರಿಗೆ ಅದ್ಭುತವಾಗಿ ಅಳವಟ್ಟದೆ, ಕ್ರಿಯೆ ಕುಗ್ಗದೆ ನಡೆವುದು ಇವರ ನಾಟಕಗಳಲ್ಲಿ. ಸಂಭಾಷಣೆ ದೀರ್ಘವಾಗಿ ಬೇಸರವನ್ನುಂಟುಮಾಡದೆ ಪ್ರಸಂಗಕ್ಕೆ ತಕ್ಕಷ್ಟು ಮತ್ತು ತಕ್ಕಂತೆ ಇದ್ದು ಹೊಳೆವುಕೊಡುವುದು ನಾಟಕಕ್ಕೆ. ಕೈಲಾಸಂ ಅವರ ವಸ್ತು ಹೆಚ್ಚಾಗಿ ಗೃಹಕೃತ್ಯಕ್ಕೆ ಸಂಬಂಧಪಟ್ಟುದು. ಗಂಡುಹೆಣ್ಣಿನ ಸಂಬಂಧ, ತಂದೆ ಮಕ್ಕಳ ಸಂಬಂಧ, ಹಳಬ ಹೊಸಬರ ಸಂಬಂಧ, ಸ್ವಭಾವ ಸ್ವಭಾವಗಳ ಸಂಬಂಧ. ಇವರ ಪಾತ್ರಗಳು ಮನುಷ್ಯತೆಯ ಸಾಮಾನ್ಯ ಮಾದರಿಗಳು. ವಿಶಿಷ್ಟ ಜಾತಿ ಮತ್ತು ಸಂಪ್ರದಾಯಗಳ ಟೀಕೆಗಿಂತ ಒಟ್ಟು ಮಾನವ ಸ್ವಭಾವದ ವಿಮರ್ಶೆಯಲ್ಲಿ ಇವರಿಗೆ ಆಸಕ್ತಿ ಹೆಚ್ಚು.

ಕಾರಂತ ಮತ್ತು ಜಾಗಿರದಾರರು ಒಳ್ಳೆಯ ಸಾಮಾಜಿಕ ನಾಟಕ ಲೇಖಕರು. ಕಾರಂತರಲ್ಲಿ ವಿಡಂಬನೆಯ ವೈಖರಿ ಅಸಾಮಾನ್ಯವಾಗಿದೆ. ಅವರ ಗರ್ಭಗುಡಿ, ಹೇಗೇ ಆಗಲಿ, ನಾಟಕದಲ್ಲಿ ನಾಟಕ—ಎಂಬ ಕೃತಿಗಳು ಅವರ ಈ ಶಕ್ತಿಯನ್ನು ಚೆನ್ನಾಗಿ ವ್ಯಕ್ತಮಾಡುತ್ತವೆ. ಕಾರಂತರ ಲೇಖಿನಿ ಮೊನೆಯಾದ್ದು, ಅಂತೆಯೇ ಪರಿಣಾಮ ಚುರುಕಾಗಿಯಾಗುವುದು. ಜಾಗಿರದಾರರು ಅಪ್ರತಿಮ ಪ್ರತಿಭಾವಂತರು. ಅವರ ಕಲ್ಪನಾಶಕ್ತಿ ಅಸಾಮಾನ್ಯವಾದುದು. ಅವರ ಪ್ರವೃತ್ತಿ ಪ್ರತಿಕ್ರಿಯೆಯನ್ನೊಲಿವುದಾಗಿದೆ. ಜಾಗಿರದಾರರ ಕೆಲವು ವೈಶಿಷ್ಟ್ಯಗಳನ್ನು ನಾವಿಲ್ಲಿ ಹೇಳಬಹುದು: "ಭೂಮಿ ಬಿರುಸಾಯಿತು, ಮನುಷ್ಯ ಮೆತ್ತಗಾದ, ಇನ್ನು ಭೂಮಿಯನ್ನು ಹರಗುವ ಬದಲು ಮನುಷ್ಯನನ್ನು ಹರಗಬೇಕು; ಅವನ ಎದೆಯನ್ನು ಸೀಳಬೇಕು. ಅವನ ಮಿದುಳೊಳಗಿನ ಹುಲ್ಲು ಕೀಳಬೇಕು. ಅವನ ತಲೆಯೊಳಗಿನ ಹೆಂಟೆ ಒಡೆಯಬೇಕು. ಅನ್ನ ಬೇಕು, ಎಲ್ಲರಿಗೂ ಅನ್ನ ಬೇಕು . . . ಹೊಸತಾಗಿ ಬಿತ್ತಬೇಕು. ಮಳೆ ಆಗಲಿ ಆಗದಿರಲಿ ಹತ್ತಿಯನ್ನು ಬಿತ್ತುವ ಮೂರ್ಖರಂತೆ—ತಿಳಿಯಲಿ ತಿಳಿಯದಿರಲಿ ವಿದ್ಯೆಯನ್ನು ಬಿತ್ತಿದ್ದಾರೆ ಈ ತಲೆಯೊಳಗೆ . . . ಹಸನಾಗಿ ಹರಗಬೇಕು ಅದನ್ನ, ಕಸರಿಲ್ಲದ ಹಾಗೆ ಕೆದರಬೇಕು, ಅದನ್ನು ಹರಗಬೇಕು—ಕೆದರಬೇಕು! ಹಸನಾಗಬೇಕು, ಕಸರ ಕಳೆಯಬೇಕು! ಹರಗುವ—ಹರಗುವ ಶಕ್ತಿಬೇಕು ಕೆದರುವ ಧೈರ್ಯಬೇಕು." (ನರಕದಲ್ಲಿ ನರಸಿಂಹ, ಪುಟ ೫೫) 'ಜಾತಿಯ ತತ್ತ್ವದಿಂದ ಜಾಣರನ್ನು ಸಾಯಹೊಡೆಯುವೆವು. ನೀತಿಯ ತತ್ತ್ವದಿಂದ ಸತ್ಯವನ್ನು ಸಾಯಹೊಡೆಯುವೆವು. ರೀತಿಯ ತತ್ತ್ವದಿಂದ ಹೆಂಗಸರನ್ನು ಸಾಯಹೊಡೆಯುವೆವು (ನರಕದಲ್ಲಿ ನರಸಿಂಹ, ಪುಟ ೮೦) 'ಹೊಟ್ಟೆಗಿಂತ ಬೇರೆ ದೇವನಿಲ್ಲ, ಹಸಿವೆಗಿಂತ ಬೇರೆ ಸತ್ಯವಿಲ್ಲ, ತನಗಾಗಿ ತಾನು ದುಡಿಯಲು ನಾಚಿಕೆಯಿಲ್ಲ' (ನರಕದಲ್ಲಿ ನರಸಿಂಹ, ಪುಟ ೧೧೯) ಎಂಬ ಸಂತಾಪದಿಂದ ಕೊರಗುತ್ತಿದೆ ಅವರ ಹೃದಯ. ಇದು ಎಷ್ಟು ಆಳವಾಗಿ ಅವರ ಮನಸ್ಸನ್ನು ಭೇದಿಸಿದೆ ಎಂದರೆ ನೋವು ಸಹನೆಗೆ ಮೀರಿದೆ, ಸಹನೆಯ ಬದಲು ರೋಷ ಮೂಡಿದೆ. "ಇಂದು ತಿಳಿಯಿತೊ ಇಲ್ಲೊ ನಿಮಗ ಇದು ಹುಡುಗಾಟಿಕೆ ಅಲ್ಲ ಅಂತ"? (ನರಕದಲ್ಲಿ ನರಸಿಂಹ, ಪುಟ ೧೧೩) ಎಂದು ಕೂಗಿ ಹೇಳುವರು ಅವರು ಲೋಕಕ್ಕೆ. ಅವರ ಸಿದ್ಧಾಂತದಂತೆ ಮುದುಕರು ಅವಿವೇಕಿಗಳು, ಆಷಾಢಭೂತಿಗಳು. ಯುವಕರು ಅವಿಧೇಯರು ಮತ್ತು ಶಿಖಂಡಿಗಳು. ಇದ್ದಬಿದ್ದುದರಲ್ಲಿ ಮನೆಯ ಒಡತಿಯೆ ಹೆಚ್ಚು ವಿವೇಕ ಸಂಪನ್ನಳು ಮತ್ತು ಶೀಲವಂತಳು. ಇದಕ್ಕೆ ವೇಣಕ್ಕನೆ ಉದಾಹರಣೆ. ಸಂಧ್ಯಾಕಾಲದಲ್ಲಿ ಬರುವ 'ನಾ ಅಂತಲೂ ಯಾವಾಗಲೂ ಅಂತಿರತೀನಿ ನೋಡಿರಿ, ಆಚಾರ್ರ; ನಾವು ಮಾಡೋದು ಮಟ್ಟೋದು ಎಲ್ಲಾ ಸುಳ್ಳು; ಮನಸ್ಸಿನಾಗ

ಹ್ಯಾಂಗ ಇರತೀವೆಯೊ ಅದೇ ಗಟ್ಟಿ ಅಂತ . . . ಹಾಂಗ ಮಾಡಬಾರದು ಪುಟ್ಟಾ; ಮಂದಿಯ ಸಲುವಾಗಿ ಮಾಡೋದು ಎಷ್ಟು ದಿವಸ ಅಂತ ನಡೆದೀತು—ಮಾತಾಗಲಿ ಮನಸಾಗಲಿ ಮಾಡೋದಾಗಲಿ ಮನುಷ್ಯಗ ತನ್ನದು ಅಂತ ಒಂದು ಗಟ್ಟಿ ಇರಬೇಕು—ನಿನಗ ಬ್ಯಾಡಾದರೆ ಬಿಟ್ಟುಬಿಡು—ಒಂದು ದಿವಸ ಬೈದಾರು, ಎರಡು ದಿವಸ ಬೈದಾರು' (ಸಂಧ್ಯಾಕಾಲ, ಪುಟ ೬೮)—ಎಂಬ ಮಾತು ಎಷ್ಟು ಉಚಿತವಾಗಿದೆ ನೋಡಿ. ಈ ಮಾತು ಬರುವುದು ಹೆಣ್ಣುಮಗಳ ಬಾಯಿಂದ. ಜಾಗಿರದಾರರು ಸಮಾಜದ ದುರವಸ್ಥೆಯಿಂದ ಎಷ್ಟು ನೊಂದಿದ್ದಾರೆಂದರೆ ಆ ನೋವು ಆಕ್ರೋಶದಲ್ಲಿ ಪರಿವರ್ತಿತವಾಗಿದೆ. ಹಳೆಯ ನಂಬಿಕೆಗಳು ಅಂಧಶ್ರದ್ಧೆಗಳು, ವಿರೋಧಾಭಾಸವಾದ ನಡತೆಗಳು ನಿಂತುಹೋಗಬೇಕು. 'ಮುಗಿದೇತರಿ ಇದರ ಕಾಲ, ಅಣ್ಣಾ ಅವರ; ಒಳಗ ಇಟ್ಟರ ಸೋರತೈತಿ, ಹೊರಗ ಒಯ್ದರ ಆರತೈತಿ' (ಸಂಧ್ಯಕಾಲ, ಪುಟ ೭೬) ಆದುದರಿಂದ 'ನಿಂ ಸಂಧ್ಯಾಬ್ಯಾಡ, ನಿಂ ಕಾಲ ಮುರಿಯೋದೂ ಬ್ಯಾಡ' (ಸಂಧ್ಯಾಕಾಲ, ಪುಟ ೭೬) ಎಂಬುದು ಅವರ ಮತ. ಜಾಗಿರದಾರರು ತಮ್ಮ ಚೈತನ್ಯವನ್ನೆಲ್ಲ ಬ್ರಾಹ್ಮಣ ಸಮಾಜದ ಅದರಲ್ಲೂ ಮಾಧ್ವವೃಂದದ ಲೋಪದೋಷಗಳನ್ನು ವ್ಯಕ್ತಗೊಳಿಸುವಲ್ಲಿ ಕೇಂದ್ರೀಕರಿಸಿದ್ದಾರೆ. ಇವರ ಪಾತ್ರಗಳು ಆದುದರಿಂದ ಜಾತೀಯವಾಗಿವೆ. ಅದಕ್ಕೆ ಸಾರ್ವತ್ರಿಕ ಪ್ರಾತಿನಿಧ್ಯ ಸಿಕ್ಕುವುದು ಕಷ್ಟ. ಮನುಷ್ಯ ಸಾಮಾನ್ಯವಾದ ಸ್ವಭಾವಾಂಶಗಳ ಕಡೆಗೆ ಗಮನ ಹೋಗದೆ ವಿಶಿಷ್ಟ ಸಂಪ್ರದಾಯಗಳಿಗೆ ತೊತ್ತಾಗಿದ್ದಾರೆ. ಹಾಸ್ಯಾಸ್ಪದವಾದ ಒಂದು ಪಂಗಡದ ಉದ್ಧಾರಕ್ಕೆ ನಿಂತಿದ್ದಾರೆ ಜಾಗಿರದಾರರು. ಇವರ ಮಾತು ಚುರುಕು ಏಕೆ ಕೆಲಸಲ ಕಟುವಾಗಿದೆ. ಆದರೆ ಉದ್ದೇಶ ಕೆಟ್ಟುದಲ್ಲ. ಬ್ರಾಹ್ಮಣ ಸಮಾಜದ ವೈದ್ಯರಾಜರು ಇವರು. ಬ್ರಾಹ್ಮಣ ನರಸಿಂಹರು ನರಕದಲ್ಲಿದ್ದಾರೆ. ಅವರಿಗೆ ಸಂಧ್ಯಾಕಾಲ ಬಂದಿದೆ; ಹರಿಜನವಾರದ ಕೂಗನ್ನೆತ್ತಬೇಕು ಅವರು ಎಂಬ ಸಿದ್ಧಾಂತವನ್ನು ಎತ್ತಿ ಹಿಡಿದಿದ್ದಾರೆ ಜಾಗಿರದಾರರು. ದೋಷ ನೋಡಿ ರೇಗಿಕೊಳ್ಳುವ ಸ್ವಭಾವ ಜಾಗಿರದಾರರದು. ಸಮಾಜದ ಅನ್ಯಾಯಗಳನ್ನೇ ಕುಕ್ಕಿ ತೋರಿಸುವ ಇನ್ನೊಂದು ನಾಟಕಶೈಲಿ ಶ್ರೀ ಅ. ನ. ಕೃ. ಅವರದು. ಮನಸ್ಸಿಗೆ ತಟ್ಟುವಂತೆ, ವಕ್ರೋಕ್ತಿ ನುಡಿವವರು ಕಾರಂತರು.

'ನಮ್ಮ ಮನವನು ನೋಡಿ ನೋವವರ ಸಲುವಾಗಿ ಮನವ ಬಿಗಿಹಿಡಿವೆ' ಎಂದು ಬರೆವ ಲೇಖಕರೂ ಇದ್ದಾರೆ. ಮಾಸ್ತಿಯವರ ತಿರುಪಾಣಿ ಮತ್ತು ಯಶೋಧರಾ ಇದೇ ಬಗೆಯ ಸಾಮಾಜಿಕ ಸಮಸ್ಯೆಗಳನ್ನು ತಂದೊಡ್ಡಿವೆ. ಮುಟ್ಟು ಮೈಲಿಗೆಗಳ ಸಮಸ್ಯೆಯನ್ನು ಮಾಸ್ತಿಯವರು ತಿರುಪಾಣಿಯಲ್ಲಿ ಬಿಡಿಸಿದ್ದಾರೆ. ಆದರೆ ಛಲವಾಗಲಿ, ದ್ವೇಷದ ಅಸಹನೆಯಾಗಲಿ ಪ್ರಧಾನವಾಗದೆ ತಾಳ್ಮೆ ತನ್ಮಯತೆಯನ್ನು ಪಡೆದಿದೆ ತಿರುಪಾಣಿಯಲ್ಲಿ.

ಹಿರಿತನದ ಹೆಮ್ಮೆ ಅವನಲಿ ಒಳ್ಳಿತಲ್ಲಾ
ಕಿರಿತನದ ಹೀನಾಯ ನಿನಗೆ ಸಲ್ಲಾ
ಹರಿಯ ನೆನೆಯುವ ಮನವೆ ವೈಕುಂಠವೆನಲಾಗಿ
ಸರಿಯಾದರಲ್ಲವೇ ಭಕ್ತರೆಲ್ಲಾ

ಎಂದು ನಯವಾಗಿ ಹೇಳಿದ್ದಾರೆ. ಸಮಾಜವನ್ನು ತಿದ್ದುವುದು ಇದೂ ಒಂದು ಬಗೆಯಲ್ಲವೆ; ಇದೇ ತೆರನಾಗಿ ಯಶೋಧರಾ ನಾಟಕದಲ್ಲಿ,

ಎಂಬ

ಮತದಲೇ ತಪ್ಪಿಹುದೊ ? ನನಗಿಂತೆ ತೋರುತಿದೆ.
ಇದು ಯಾವ ಮತ ಯಾವ ಧರ್ಮ ? ಇದು ತಹುದೇನ ?
ಬಾಳುಗಳ ಸೀಳಿ ಮನೆಗಳ ಮುರಿದು ಹೃದಯಗಳ
ಪುಡಿಮಾಡಿ ಕಣ್ಣೀರ ಕಾಲ್ವೆಯಲಿ ಕದಡಿಸುವ
ಈ ಧರ್ಮ ಮತಗಳೇತರ ಧರ್ಮಮತಗಳು ?
ಲೋಕಗಳ ಶುಭವನಿವು ಸಾಧಿಸುವುವೆನ್ನುವುದು
ಬರಿಯ ಭ್ರಾಂತಿಯ ಮಾತು. ಉಸಿರುಸಿರ ಬೆಸೆವ ಮತ
ಮತವೆನಲು ಒಪ್ಪುವುದು. ಬೆಚ್ಚ ಬೆಸುಗೆಯ ಬಿಡಿಸಿ
ಜೀವಗಳ ಕುದಿಸುವುದು ಮತವೆನಲು ಸಲ್ಲದು.

ಎಂದು ಉಪದೇಶಮಾಡಿದ್ದಾರೆ. ಪರಿಣಾಮವು ಅಷ್ಟೆ ಆಗುವುದಲ್ಲವೆ ?

ಒಳಗೆ ಬೆಳಗುವ ಬೆಳಕ ಸರಿಪಡಿಸಿಕೊಳಬೇಕು
ಬಡವನಿಗೆ ಮನೆಯೊಳೇ ನಿಧಿಯೊಂದ ಹುಗಿದಿಟ್ಟು
ಎಲ್ಲಿರುವುದೆಂದು ಹೇಳಿದ ರೀತಿ, ಮನುಜನಿಗೆ
ಅವನೊಳಗೆ ನಿಲಿಸಿರುವ ಬುದ್ಧಿ. ಅದರಿಂದವನು
ಒಳಗಿರುವ ಅರಿವ ಶಕ್ತಿಯ ಅಳವನಾರೈಸಿ
ಹಿರಿದಾಗುವಂತೆಸಗಬೇಕು. ತಿಳಿವಿನ ಚಿಲುಮೆ
ಅನುದಿನದ ಸುಖದುಃಖದಿಂದ ಬಗ್ಗಡವಾಗಿ
ಕೆಡುತಿರಲು ಸಾವಧಾನದಿ ಮನವ ನಿಲ್ಲಿಸುತ
ಕದಡು ತಳಕಿಳಿವಂತೆ ಭಾವ ತಿಳಿಯಪ್ಪಂತೆ
ಶಾಂತ ಚಿತ್ತವನು ಸಾಧಿಸಬೇಕು. ಇದುವೆ ತಪ,
ಇದೆ ಧರ್ಮ, ಇದೆ ಯಾತ್ರೆ: ಇದೆ ಮುಕ್ತಿ, ಕಲ್ಯಾಣ.
ಈ ಸ್ಥಿತಿಯ ಸಾಧಿಸಲು ಎಲ್ಲರೂ ತೊಡಗುವುದು.

ಎಂಬ ವಿಶ್ವ ಧರ್ಮವನ್ನು ಪ್ರಕಟಪಡಿಸಿದ್ದಾರೆ.

'ಎರಡನೆಯ ಜೀವವೊಪ್ಪುವ ಮುನ್ನ ದಾಂಪತ್ಯ ಮುಗಿಯಬಹುದೆಂತು ?' ಎಂಬ ಸಾಮಾಜಿಕ ಸೂಕ್ಷ್ಮ ಪ್ರಶ್ನೆಗೆ,

' ಧರ್ಮಸೂಕ್ಷ್ಮವನರಿವ ಮನ ತನ್ನ ಸುಖದಿಂದ
ಧರ್ಮವನು ಅಳೆಯಲಾಗದು. ಮೂಲ ಸೂತ್ರವಿದು.
ನಾನೆಂಬ ಭಾವನೆಯು ಹೆಚ್ಚಿಸುವ ಬಾಳ್ಬದುಕು
ಧರ್ಮ ಪಥವನು ಬಿಟ್ಟು ಅಲೆಯುತಿದೆ ನಿಶ್ಚಯ.
ಎನ್ನಿಂದ ಅನ್ಯರಿಗೆ ಒಳಿತಾಗಲೆಂಬುದೇ
ಸದ್ಯಃ ಪ್ರಮಾಣ ಧರ್ಮದೊಳಿರುವೆವೆಂಬುದಕೆ '

ಎಂಬ ಔಷಧವನ್ನು ಸಮಾಜಕ್ಕೆ ಕೊಟ್ಟಿದ್ದಾರೆ. ಸಮಾಜದ ಕುತ್ತನ್ನು ಕಳೆಯಲು ಔಷಧ ನಿದಾನ ಮತ್ತು ಶಸ್ತ್ರ ನಿದಾನ ಎರಡೂ ಉಪಯುಕ್ತ. ಜಾಗಿರದಾರರದು ಶಸ್ತ್ರ ಚಿಕಿತ್ಸೆ. ಮಾಸ್ತಿಯವರದು ಮದ್ದು. ಶಸ್ತ್ರಕ್ರಿಯೆಯಲ್ಲಿ ಕದಡುಬರುವ ಕೊಯ್ತು, ನೋವು, ರಕ್ತಸ್ರಾವ ಮದ್ದಿನಲ್ಲಿ ಕಾಣುವುದಿಲ್ಲ. ಅದು ಒಳಗೊಳಗೆ ಪರಿಣಮಿಸುತ್ತದೆ.

ಕನ್ನಡನಾಡಿನ ಇಂದಿನ ಬಾಳಿಗೆ ಸಂಬಂಧಪಟ್ಟ ಎಲ್ಲ ಅಂಶಗಳನ್ನೊಳಗೊಂಡ ಸಾಮಾಜಿಕ ನಾಟಕಗಳು ಕನ್ನಡದಲ್ಲಿ ಹುಟ್ಟಿವೆ. ಬ್ರಾಹ್ಮಣ ಬ್ರಾಹ್ಮಣೇತರ ಜಗಳ, ಆಯ್ಕೆಯ ಜಗಳ, ಪುನರ್ವಿವಾಹದ ಪ್ರಶ್ನೆ, ಬಡತನದ ಗೋಳು, ಅಷಾಢಭೂತಿಗಳ ಡೌಲು, ರಾವ್ ಬಹದ್ದೂರರ ರಂಪು, ವಿಷಮ ವಿವಾಹಗಳ ವೈಪರೀತ್ಯ, ದಾಂಪತ್ಯ ಜೀವನಗಳ ವಿಸ್ಫೋಟ, ಅಸ್ಪೃಶ್ಯೋದ್ಧಾರ, ಈ ಎಲ್ಲ ಅಂಶಗಳು ನಾಟಕದ ರೂಪದಲ್ಲಿ ಪ್ರಕಟವಾಗಿವೆ.

ಪದ್ಯನಾಟಕಗಳನ್ನು ಕುರಿತು ಒಂದೆರಡು ಮಾತು. ಕಂಪನಿಗಳ ನಾಟಕದಲ್ಲಿ ಬರುವ ಸಂಗೀತಗಳನ್ನು ಹಳಿದರೂ ಗೀತ ಮತ್ತು ಪದ್ಯನಾಟಕಗಳು ಕನ್ನಡದಲ್ಲಿ ಅನೇಕ ಹುಟ್ಟಿವೆ. ಇಂಗ್ಲಿಷ್ ಸಾಹಿತ್ಯದಿಂದ ಅನುವಾದ[1]ವಾಗಿ ಬಂದ ರಕ್ತಾಕ್ಷಿ, ಬಿರುಗಾಳಿ, ಮ್ಯಾಕ್‌ಬೆತ್, ಪಾರಸಿಕರು ಈ ಎಲ್ಲ ನಾಟಕಗಳು ಸರಳ ರಗಳೆಯಲ್ಲಿವೆ. ಸ್ವತಂತ್ರವಾಗಿ ರಚಿತವಾದ ಯಮನಸೋಲು, ಯಶೋಧರಾ, ತಪಸ್ವಿನಿ ಮುಂತಾದುವು ಪದ್ಯದಲ್ಲಿವೆ. ಮುಕ್ತದ್ವಾರ, ಕಿಸಾಗೋತಮಿ ಮುಂತಾದ ಗೀತ ನಾಟಕಗಳೂ ಕನ್ನಡದಲ್ಲಿ ಪ್ರಾಚುರ್ಯವನ್ನು ಪಡೆದಿವೆ. ಮುಕ್ತದ್ವಾರದ ಆಶಯ ಅಮೋಘವಾದುದು.। ಕಾಲ ನರ್ತನದಲ್ಲಿ ತೆರೆತೆರೆಯಾಗಿ ಬಿಚ್ಚಿದ ಮಾನವಹೃದಯದ ಮಹಾದರ್ಶಗಳ ವಿಕಾಸವು ಮುಕ್ತದ್ವಾರದಲ್ಲಿ ಕಾಣುವುದು. ಶ್ರೀ ಪು. ತಿ. ನರಸಿಂಹಾಚಾರ್ಯರ ಅಹಲ್ಯೆಯಂತಹ ಗೀತ ನಾಟಕಗಳು ಅರ್ಥವತ್ತಾದವು, ಚೆಲುವಾದವು.

[1] ಅನುವಾದಗಳೆಂಬಾಗ ಶ್ರೀಗಳಾದ ಎಸ್. ಜಿ. ಶಾಸ್ತ್ರಿಗಳವರ 'ಆರ್ಯಕ' 'ಸೂತ್ರದ ಬೊಂಬೆ'ಯನ್ನೂ, ಎ. ಎನ್. ಮೂರ್ತಿರಾಯರ 'ಆಷಾಢಭೂತಿ'ಯನ್ನೂ, ದೇವುಡು ಅವರ 'ಯೇಸುವಿನ ಮರಣ'ವನ್ನೂ, ವೆಂಕಟಾಚಾರ್ಯರ 'ಸಾವಿನ ಸಮಸ್ಯೆ'ಯನ್ನೂ ಉತ್ತಮ ಕೃತಿಗಳೆಂದು ಗಣಿಸಬೇಕು.

ವ್ಯಂಗ್ಯವನ್ನೂ ವಿಡಂಬನೆಯನ್ನೂ ಪದ್ಯಲಯಕ್ಕೆ ಸಂವಾದಕ್ಕೆ ತಂದು ನಾಟಕ ರಚನೆಯಲ್ಲಿ ಬಲಿಸುವ 'ಯಾರೋ ಅಂದರು' ಅಲ್ಲಿನ ಕಾರಂತರ ಕಲಾತಂತ್ರ ವಿಶೇಷವಾದ್ದು.

ಅಶ್ವತ್ಥಾಮನ್ ಕನ್ನಡ ರುದ್ರನಾಟಕಗಳಲ್ಲಿ ಅಗ್ರವಾಗಿದೆ. ಕನ್ನಡ ಸಾಹಿತ್ಯ ವಿರುವ ವರೆಗೆ ಅಶ್ವತ್ಥಾಮನ್ ನಾಟಕವು ಇರುವುದು. ಅದರ ಶೈಲಿ ಹಳಗನ್ನಡ. ಅದರ ವಸ್ತು ಪ್ರಾಚೀನ. ಆದರೆ ನಡೆ ಅರ್ವಾಚೀನ. ಗ್ರೀಕ್ ನಾಟಕದ ಉತ್ತಮ ಮಾದರಿ ಅಶ್ವತ್ಥಾಮನ್. ಅನುವಾದವಲ್ಲವದು; ಅಳವಡಣೆ ಸ್ವತಂತ್ರ; ನಾಟಕ ದೃಷ್ಟಿ ಸುಂದರವಾಗಿದೆ. ಪ್ರಾಚ್ಯಸಂಪ್ರದಾಯಕ್ಕೆ ವಿರೋಧವಾದ ದುರಂತ ನಾಟಕ ಗಳ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಟ್ಟು ಹೊಸಕನ್ನಡ ನಾಟಕಗಳಲ್ಲಿ ಅಗ್ರಸ್ಥಾನವನ್ನು ಪಡೆದಿದೆ ಅದು. ಇದರ ವೈಶಿಷ್ಟ್ಯ ಇಬ್ಬಗೆಯಾಗಿ: ಒಂದು, ಅದು ಪದ್ಯನಾಟಕ; ಇನ್ನೊಂದು, ಅದು ವಿಷಾದಾಂತ ನಾಟಕ. ಮೂರನೆಯದೊಂದು ವೈಶಿಷ್ಟ್ಯವೆನ್ನಬಹುದಾದರೆ ಹೊಸಗನ್ನಡ ಕಾಲದಲ್ಲಿ ವೀರ್ಯವತ್ತಾದ ಹಳಗನ್ನಡ ದಲ್ಲಿ ಬರೆಯಲಾದ ಇದು ಬಗೆ ಬಗೆಯ ಛಂದೋಪ್ರಕಾರಗಳನ್ನೂ ಗೀತಗಳನ್ನೂ ಒಳಗೊಂಡು ಕನ್ನಡದಲ್ಲಿನ ಮೊಟ್ಟಮೊದಲ ಗೀತನಾಟಕವಾಗಿದೆ.

ಕನ್ನಡದಲ್ಲಿ ಪ್ರಹಸನಗಳಿಗೂ ಏಕಾಂಕ ನಾಟಕಗಳಿಗೂ ಕೊರತೆಯಿಲ್ಲ. ಬೇಂದ್ರೆಯವರ ಹುಚ್ಚಾಟಗಳು, ಕಲ್ಲೂರು ಕೃಷ್ಣಕುಮಾರವರ ಮಿಂಚಿನ ಹುಡಿ, ಜಾಗಿರದಾರರ ಪೂರ್ವರಂಗ ಮತ್ತು ಉತ್ತರ ರಂಗಗಳು ಈ ವರ್ಗಕ್ಕೆ ಸೇರಿವೆ. ರಾಜರತ್ನಂ, ಎನ್ಕೆ. ಕುಲಕರ್ಣಿ, ನಾ. ಕಸ್ತೂರಿ, ಕ್ಷೀರಸಾಗರ ಮತ್ತು ಇತರರು ಇತ್ತೀಚೆಗೆ ಒಳ್ಳೆಯ ಪ್ರಹಸನ ಮತ್ತು ಏಕಾಂಕ ನಾಟಕಗಳನ್ನು ನಿರ್ಮಿಸುತ್ತಿದ್ದಾರೆ.

ಒಟ್ಟಿನ ಮೇಲೆ ಹೊಸಗನ್ನಡ ನಾಟಕಗಳ ಪ್ರಪಂಚ ವಿವಿಧ ಮತ್ತು ವಿಪುಲ ವಾಗಿದೆ. ವಸ್ತು ಮತ್ತು ಶೈಲಿಯಲ್ಲಿ ಬಗೆಬಗೆಯಾಗಿದೆ ಈ ಶಾಖೆ. 'ನಾಟ್ಯಂ ಭಿನ್ನ ರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ' ಎಂದು ಕಾಳಿದಾಸನು ಹೇಳಿ ದಂತೆ ಇಂದಿಗೂ ನಾಟಕವು ಹೆಚ್ಚು ಆಕರ್ಷಕವಾಗಿದೆ. ಆದುದರಿಂದ ನಾಟಕದ ರಚನೆ ಹೊಸಗನ್ನಡದಲ್ಲೂ ಹೇರಳವಾಗಿದೆ. ಪ್ರಾಂತೀಯ ಮತ್ತು ರಾಷ್ಟ್ರೀಯ ಜೀವನದ ಎಲ್ಲ ಅಂಶಗಳೂ ಪಾಶ್ಚಾತ್ಯ ಪ್ರಭಾವಗಳ ಎಲ್ಲ ದೃಶ್ಯಗಳೂ ಹೊಸಗನ್ನಡ ನಾಟಕಗಳಲ್ಲಿ ಪ್ರತಿಬಿಂಬವಾಗುತ್ತಲಿವೆ. ಶೈಲಿ ಹಳಗನ್ನಡದಿಂದ ಹಿಡಿದು ಮಾತಿನ ಮಟ್ಟದ ವರೆಗೆ ಇಳಿದಿದೆ. ಪ್ರಾಂತೀಯ ವೈಶಿಷ್ಟ್ಯಗಳು ಶೈಲಿಯಲ್ಲಿ ಕಾಣದೆ ಹೋಗಿಲ್ಲ. ಬರೆದ ನಾಟಕಗಳಲ್ಲಿ ಎಷ್ಟೊ ಬರಿಯ ಓದಲು ಯೋಗ್ಯವಾಗಿದ್ದರೆ ಹಲವು ಬರಿಯ ರಂಗಕ್ಕೆ ಸಜ್ಜಾಗಿವೆ. ಮತ್ತೆ ಕೆಲವು ಎರಡಕ್ಕೂ ಒಗ್ಗುವುವು. ಕೆಲವು ಚಿರಂತವಾದ

ಮಾನವ ಸ್ವಭಾವಗಳಿಗೆ ಪ್ರತೀಕವಾಗಿದ್ದರೆ ಹಲವು ತಾತ್ಕಾಲಿಕ ಪರಿಣಾಮದ ಫಲವಾಗಿ ಹುಟ್ಟಿದ ದೃಶ್ಯಗಳಾಗಿವೆ. ವೃತ್ತಿಪ್ರಧಾನವಾದ ನಾಟಕಗಳು ಕೆಲವಾದರೆ ಕಲಾ ಪ್ರಧಾನವಾದ ನಾಟಕಗಳು ಹಲವಾಗಿವೆ. ಅನುವಾದ, ಅಳವಡಣೆ, ಸ್ವತಂತ್ರ ನಿರ್ಮಾಣ ಈ ಎಲ್ಲ ಮಟ್ಟಗಳು ಹೊಸಕನ್ನಡ ನಾಟಕಗಳಲ್ಲಿ ಗೋಚರವಾಗುವುವು. ಪಾತ್ರಪ್ರಧಾನವಾದ ನಾಟಕಗಳು ಕೆಲವು, ವಸ್ತುಪ್ರಧಾನವಾದ ನಾಟಕಗಳು ಕೆಲವು, ಆಶಯಪ್ರಧಾನವಾದ ನಾಟಕಗಳು ಕೆಲವು, ವಿನೋದ ಅಥವಾ ಸಂಕೇತಪ್ರಧಾನವಾದವು ಕೆಲವು, ಇಂದಿನ ಜೀವನವನ್ನು ಚಿತ್ರಿಸುವ ನಾಟಕಗಳು ಕೆಲವು, ಹಿಂದಿನ ಜೀವನವನ್ನು ಚಿತ್ರಿಸಿದ ನಾಟಕಗಳು ಕೆಲವು ಏಕೆ ಮುಂದಿನ ಜೀವನವನ್ನು ಸೂಚಿಸುವ ನಾಟಕಗಳೂ ಹಲವು. ಭರತನ ನಾಟ್ಯಶಾಸ್ತ್ರಕ್ಕೆ ಲಕ್ಷ್ಯವಾಗುವ ನಾಟಕಗಳು ಒಂದೆಡೆಯಿದ್ದರೆ ಯಾವ ನಿಯಮಕ್ಕೂ ನಿಲುಕದ ನಾಟಕಗಳೂ ಕನ್ನಡದಲ್ಲನೇಕ ಇವೆ. ಸಾಂಕುಶ ನಿರಂಕುಶ ಪ್ರಭುತ್ವಗಳೆರಡೂ ನಾಟಕ ಪ್ರಪಂಚದಲ್ಲಿ ನಡೆದಂತಿದೆ. ಪೂರ್ವ ಪಶ್ಚಿಮಗಳ ಸಂಗಮವಾಗದೆ ಹೊಸಗನ್ನಡ ನಾಟಕವಿಂದು. ಇದು ಹೊಸಗನ್ನಡ ನಾಟಕದ ಸಂಕ್ಷಿಪ್ತಚರಿತ್ರೆ.

ನಾಟಕಗಳ ರಚನಾತಂತ್ರವನ್ನಾಗಲಿ, ಅವಕ್ಕೂ ಅವುಗಳ ಪ್ರದರ್ಶನಕ್ಕೂ ಸಂಬಂಧಪಡುವ ವಿವರಣೆ ವಿಮರ್ಶೆಯನ್ನಾಗಲಿ, ಚಲಚ್ಚಿತ್ರಗಳ ಪ್ರಾಬಲ್ಯ ನಾಟಕದ ಮೇಲೆ ಯಾವ ಪರಿಣಾಮವನ್ನುಂಟುಮಾಡಿದೆ ಎಂಬುದನ್ನಾಗಲಿ ಕುರಿತು ಇಲ್ಲಿ ಏನನ್ನೂ ಹೇಳಲಾಗಿಲ್ಲ.

ಮಾನ್ವಿ.

೯. ಕನ್ನಡದಲ್ಲಿ ಜೀವನ ಚರಿತ್ರೆಗಳು

೧

"ಒಂದು ದೇಶದ ಇಲ್ಲವೆ ಒಂದು ಜನಾಂಗದ ಚರಿತ್ರೆಯನ್ನು ಕುರಿತು ಬರೆಯದೆ ಒಬ್ಬ ವ್ಯಕ್ತಿಯನ್ನು ಕುರಿತು ಬರೆದ ಗ್ರಂಥ ಜೀವನ ಚರಿತ್ರೆ" ಎಂದೂ "ಜೀವನದ ಹೋರಾಟದಲ್ಲಿ ವ್ಯಕ್ತಿಯು ತೋರಿದ ಸಾಹಾಸಗಳ ವಾಸ್ತವ ಪ್ರತಿಪಾದನೆಯೇ ಜೀವನ ಚರಿತ್ರೆ" ಎಂದೂ "ಯಾವ ಬರವಣಿಗೆ ಮಾನವ ವ್ಯಕ್ತಿಯ ಜೀವನ ಚರಿತ್ರೆಯನ್ನು ಸಾಹಿತ್ಯದ ರೀತಿಯಲ್ಲಿ ನಿರೂಪಿಸಲಿರುವುದೋ ಆ ಬರವಣಿಗೆ ಜೀವನ ಚರಿತ್ರೆ" ಎಂದೂ "ಒಬ್ಬ ವ್ಯಕ್ತಿಯ ವೃತ್ತಿ ಪ್ರವೃತ್ತಿಗಳನ್ನೂ ಕಾರ್ಯರೂಪ ಗಳನ್ನೂ ಶೀಲಚಾರಿತ್ರಗಳನ್ನೂ ಸೂಕ್ಷ್ಮತಮವಾದ ಪ್ರಾತಿಭ ಚಕ್ಷುವಿನಿಂದ ಒಳ ಹೊಕ್ಕು ನೋಡಿ ಆ ವ್ಯಕ್ತಿಯ ಮೂರ್ತಿಸ್ವರೂಪವನ್ನು ಕಥಾರೀತಿಯಲ್ಲಿ ಸರಸವಾಗಿ ಉಪಪಾದಿಸುವ ಗ್ರಂಥ ಜೀವನ ಚರಿತ್ರೆ" ಎಂದೂ ಬೇರೆ ಬೇರೆ ರೀತಿಯಲ್ಲಿ ಜೀವನ ಚರಿತ್ರೆಯ ವಿಷಯವಾಗಿ ಹಲವರು ತಮ್ಮ ಅಭಿಪ್ರಾಯಗಳನ್ನು ಪ್ರಕಟಪಡಿಸಿದ್ದಾರೆ.

೨

ಜೀವನ ಚರಿತ್ರೆ ಸಾಹಿತ್ಯದ ರೀತಿಯಲ್ಲಿ ಇರಬೇಕು ಎಂದು ಹೇಳಿದಾಗ ಸಾಹಿತ್ಯದ ಇತರ ಪ್ರಕಾರಗಳಲ್ಲಿ ಜೀವನ ಚರಿತ್ರೆಗೆ ಸಮೀಪ ಬಂಧುವಾಗಿರುವ ಕಾದಂಬರಿ ಯೊಡನೆ ಜೀವನ ಚರಿತ್ರೆಯನ್ನು ಹೋಲಿಸಿ ನೋಡುವುದು ಉಚಿತವಾಗಿದೆ. ಕಾದಂಬರಿ ಹಲವು ಜನರ ವೃತ್ತಿಪ್ರವೃತ್ತಿಗಳನ್ನು ಚಿತ್ರಿಸುವುದಾದರೆ ಜೀವನ ಚರಿತ್ರೆ ಒಬ್ಬನನ್ನು ಚಿತ್ರಿಸುತ್ತದೆ. ಕಾದಂಬರಿಯಲ್ಲಿ ಕಾದಂಬರಿಕಾರ ತನಗೆ ದೊರೆತ ಅಲ್ಪ ಸ್ವಲ್ಪ ಚರಿತ್ರೆಯ ಆಧಾರಗಳಿಂದ ಕಥಾನಾಯಕನ ಬೆಳವಣಿಗೆಯನ್ನು ವಿವರ ವಿವರ ವಾಗಿ ಪ್ರತಿಪಾದಿಸುತ್ತಾನೆ. ಅದರ ಬಹುಪಾಲು ಸ್ವಕಪೋಲ ಕಲ್ಪಿತ. ಜೀವನ ಚರಿತ್ರೆಯಲ್ಲಿ ಜೀವನ ಚರಿತಕಾರರ ದಿನಚರಿ ಕಾಗದಪತ್ರ, ಸ್ಮೃತಿ ಲೇಖ, ಉಪಾ ಖ್ಯಾನಾದಿ ಪ್ರಮಾಣಗಳ ಆಧಾರಗಳಿಂದ ಮಾತ್ರವೆ ಕಥಾನಾಯಕನನ್ನು ಚಿತ್ರಿಸ ಬೇಕು. ಇಲ್ಲಿ ಸ್ವಕಲ್ಪನೆಗೆ ಅವಕಾಶವಿಲ್ಲ; ನಡೆದುದನ್ನು ನಡೆದಂತೆಯೇ ಹೇಳಬೇಕು. ನಡೆಯಬಹುದಾದುದನ್ನೂ ಕಾದಂಬರಿಕಾರ ನಡೆದಂತೆ ಹೇಳಬಹುದು; ತನಗೆ ಯಾವುದು ಬೇಕೋ ಅದನ್ನು ಮಾತ್ರ ಆರಿಸಿಕೊಳ್ಳುವ, ಯಾವುದು ಬೇಡವೋ ಅದನ್ನು ಬಿಟ್ಟುಬಿಡುವ, ತನ್ನ ಕಥಾ ವೃಕ್ಷಕ್ಕೆ ಬಂದಳಿಕೆ ಎಂದು ಕಾಣುವುದನ್ನು

ಕಡಿದುಹಾಕುವ ತನ್ನ ಚಿತ್ರ ಸೃಷ್ಟಿಗೆ ಅಸಹ್ಯವಾದುದನ್ನು ವಿಸರ್ಜಿಸುವ ಸರ್ವ ಸ್ವಾತಂತ್ರ್ಯವೂ ಕಾದಂಬರಿಕಾರನಿಗಿದೆ. ಜೀವನ ಚರಿತಕಾರನಿಗೆ ಈ ಸ್ವಾತಂತ್ರ್ಯಗಳಾವುವೂ ಇಲ್ಲ. ಬಿಡುವುದು, ಸೇರಿಸುವುದು, ಅದಲು ಬದಲು ಮಾಡುವುದು, ವಿರೂಪಗೊಳಿಸುವುದು, ಮರೆಮಾಚುವುದು ಇವು ಯಾವುದಕ್ಕೂ ಜೀವನ ಚರಿತಕಾರ ಅಧಿಕೃತನಲ್ಲ. ಕಥಾನಿರೂಪಣ ಕ್ರಮದಲ್ಲಿಯೂ ಕಾದಂಬರಿಕಾರನಿಗೆ ಸ್ವಾತಂತ್ರ್ಯವುಂಟು. ಘಟನೆಗಳನ್ನು ಹಿಂದುಮುಂದಾಗಿ ಚಿತ್ರಿಸುವುದು, ದೊಡ್ಡ ಕಥೆಯ ಹೊಟ್ಟೆಯಲ್ಲಿ ಸಣ್ಣ ಕಥೆಗಳನ್ನು ಸೇರಿಸುವುದು, ಚಮತ್ಕಾರ ವರ್ಣನೆಗಳನ್ನು ಮಾಡುವುದು ಇಷ್ಟವಾದ ಸಂಗತಿಗಳನ್ನು ಲಂಬಿಸುವುದು ಮುಂತಾದ ನಾನಾರೀತಿಗಳಲ್ಲಿ ವಾಚಕರ ಕುತೂಹಲವನ್ನು ಕೆರಳಿಸಬಹುದು. ಜೀವನ ಚರಿತಕಾರ ತನ್ನ ವ್ಯಕ್ತಿಯನ್ನು ನೆರಳಿನಂತೆ ಅನುಸರಿಸಿ ಆತನ ಜನನದಿಂದ ಮರಣದವರೆಗಿನ ಘಟನಾವಳಿಗಳನ್ನು ನಡೆದ ಕಾಲಕ್ರಮದಲ್ಲಿ ಚಿತ್ರಿಸಬೇಕಾಗುವುದು.

ಈ ವಿಚಾರ ಸರಣಿಯಿಂದ ಜೀವನ ಚರಿತ್ರಕಾರನಿಗಿಂತ ಕಾದಂಬರಿಕಾರನಿಗೆ ಹೆಚ್ಚಿನ ಸ್ವಾತಂತ್ರ್ಯವೂ ಸೌಲಭ್ಯವೂ ಇವೆ ಎಂದೂ ಜೀವನ ಚರಿತೆಗಿಂತ ಕಾದಂಬರಿ ಹೆಚ್ಚು ಮನೋರಂಜಕವಾದುದೆಂದೂ ತೋರಬಹುದು. ಆದರೆ ಸತ್ಯ ನಿರೂಪಣೆಯೆ ಮುಖ್ಯವಾಗಿರುವ ಜೀವನ ಚರಿತ್ರೆಯಲ್ಲಿ ಪ್ರತಿಭಾವಂತ ಕವಿ ಕಾದಂಬರಿಯ ಕಲ್ಪನಾ ವಿಲಾಸವನ್ನು ತರುವುದು ಸಾಧ್ಯ.

೩

"ಪ್ರತಿಯೊಬ್ಬರೂ ತಮ್ಮ ತಮ್ಮ ಜೀವನವನ್ನು ತಾವೇ ಬರೆದಿಡುವುದು ಸರ್ವೋತ್ತಮ" ಎಂದು ಡಾ. ಜಾನ್‌ಸನ್ ಹೇಳಿದ್ದಾನೆ. ಪ್ರತಿಯೊಬ್ಬನಿಗೂ ತನ್ನ ವಿಷಯ ಇತರರಿಗಿಂತ ಹೆಚ್ಚಾಗಿಯೂ ಚೆನ್ನಾಗಿಯೂ ಗೊತ್ತಾಗಿರುತ್ತದೆ. ಆದುದರಿಂದ ತಾನೇ ಅವುಗಳನ್ನು ಕುರಿತು ಬರೆದರೆ ಹೆಚ್ಚು ಉಪಯುಕ್ತವಾಗಿರುತ್ತದೆ. ತನ್ನ ಹೃದಯದ ಕಾವು ನೋವುಗಳನ್ನೂ ಸುಖ ಸಂತೋಷಗಳನ್ನೂ ನೇರವಾಗಿ ಹೇಳಬೇಕಾದರೆ ತನ್ನ ಹೊರತು ಉಳಿದವರು ಯಾರಿಗೆ ಸಾಧ್ಯ? ಈ ದೃಷ್ಟಿಯಲ್ಲಿ ಆತ್ಮಕಥೆ ವ್ಯಕ್ತಿಪರಿಚಯಕ್ಕೆ ಸರ್ವೋತ್ತಮವಾದ ಸಾಧನ. ಆದರೆ ಇಲ್ಲಿಯೂ ಲೋಪ, ದೋಷಗಳು ಒದಗಿಬರುವುದುಂಟು.

ವಿಸ್ಮೃತಿ ಅಥವಾ ಮರವು ಇಂತಹ ದೋಷಗಳಲ್ಲಿ ಒಂದು. ತನ್ನ ಎಳಮೆಯ ಸಂಗತಿಗಳನ್ನೂ, ಹುಡುಗತನದ ವಿವರಗಳನ್ನೂ ಎಷ್ಟೋ ಜನ ಮರೆತಿರುತ್ತಾರೆ. ಮರೆಯದಿದ್ದರೂ ಪೂರ್ಣ ವಿವರಗಳನ್ನು ನೆನಪಿನಲ್ಲಿಟ್ಟುಕೊಂಡಿರುವುದಿಲ್ಲ. ದೊಡ್ಡವರಾದ ಮೇಲೂ ಈ ವಿಸ್ಮೃತಿ ಅನೇಕರಲ್ಲಿ ಮನೆಮಾಡಿರುತ್ತದೆ. ಗಯಟೆ, ಟಾಲ್‌ಸ್ಟಾಯ್,

ಗಾಂಧೀ ಮುಂತಾದ ಮಹನೀಯರನ್ನು ಬಿಟ್ಟರೆ ಉಳಿದ ಅನೇಕರ ಆತ್ಮ ಕಥನ ಈ ದೋಷ ದಿಂದ ಸತ್ಯದೂರವಾಗುವುದು ಸಹಜ. ಇದನ್ನು ಹೇಳಿದರೆ ಕಲೆಗೆ ಕುಂದು, ಇದನ್ನು ಹೇಳಿದರೆ ಸಭ್ಯತೆಗೆ ಲೋಪ ಎಂದು ಮರೆಮಾಚುವುದೂ ದೋಷ. ತಮ್ಮ ದೋಷ ವನ್ನು ತಾವೇ ಉದ್ಘಾಟನ ಮಾಡಿಕೊಳ್ಳುವ ಮಹನೀಯರು ವಿರಳ. ಗ್ರಂಥ ವಿಸ್ತಾರದ ಭಯದಿಂದಲೂ ನಮಗೆ ಕೆಲವು ಸಂಗತಿಗಳು ಸಾಮಾನ್ಯವೆಂದು ತೋರಿಬರುವುದ ರಿಂದಲೂ, ನಾವು ನಿತ್ಯ ಜೀವನದ ಸಣ್ಣ ಸಣ್ಣ ಘಟನೆಗಳನ್ನು ಹೇಳದೆ ಕೇವಲ ಮಹತ್ವ ಪೂರ್ಣವಾದ ವಿಶೇಷ ಕಾರ್ಯಗಳನ್ನು ಮಾತ್ರ ಚಿತ್ರಿಸುತ್ತೇವೆ. ಇದರಿಂದ ನಮ್ಮ ಬದುಕಿನ ಒಂದು ಬಣ್ಣ ಮಾತ್ರ ಎದ್ದು ಕಾಣುವಂತಾಗುತ್ತದೆ. ಇದೂ ಒಂದು ದೋಷ. ಯಾವ ಕಾಲದಲ್ಲಿಯೋ ಯಾವ ಕಾವಿನಲ್ಲಿಯೋ ನಾವು ಪೂರ್ವಾಪರ ವಿವೇಚನೆಯಿಲ್ಲದೆ ಕೆಲಸಮಾಡುತ್ತೇವೆ. ಆಮೇಲೆ ಬರೆಯುವಾಗ ನಮ್ಮ ಹಿಂದಿನ ವರ್ತನೆಯನ್ನು ಸಮಂಜಸವಾದ ಕಾರಣಗಳಿಂದ ಸಮರ್ಥಿಸುತ್ತೇವೆ. ಇದೂ ದೋಷವೇ. ಆತ್ಮಕಥನಕಾರನಲ್ಲಿ ಕಾಣಬರಬಹುದಾದ ಈ ದೋಷಗಳು ಜೀವನ ಚರಿತ್ರಕಾರನಲ್ಲಿ ಕಾಣಬರದಿರುವುದು ಸಾಧ್ಯ. ರಾಗದ್ವೇಷಾದಿಗಳಿಗೆ, ವಿಸ್ಮೃತಿಗೆ, ಲೋಕಭೀತಿಗೆ, ತರ್ಕಪ್ರತಿಪಾದನೆಗೆ, ಪಕ್ಷಭಕ್ತಿಗಳಿಗೆ, ಜೀವನ ಚರಿತಕಾರನಲ್ಲಿ ಎಡೆಯಿರಕೂಡದು. ತಾನು ಇನ್ನೊಬ್ಬನ ಚರಿತ್ರೆಯನ್ನು ಬರೆಯಲಿರುವುದರಿಂದ, ಗಾಂಧಿಯವರಂತೆ ದೋಷರಹಿತವಾದ ರೀತಿಯಲ್ಲಿ ಆತ್ಮ ಕಥೆ ಬರೆದರೆ ಸತ್ಯನಿರೂಪಣೆಗೆ ಅದು ಸರ್ವೋತ್ತಮ ಸಾಧನವಾಗುವುದು. ಅದಿಲ್ಲದಿದ್ದರೆ ಆತ್ಮ ಕಥೆಗಿಂತ ಜೀವನ ಚರಿತ್ರೆಯೇ ಎರಡನೆಯ ಸಾಧನ ಎಂದು ಧಾರಾಳವಾಗಿ ಹೇಳಬಹುದು.

೪

ತನ್ನ ಧ್ಯೇಯ ಧೋರಣೆಗಳಿಗೆ ಹೊಂದಿಕೊಳ್ಳುವ ವ್ಯಕ್ತಿಯನ್ನೆ ನಾಯಕ ನನ್ನಾಗಿ ಆರಿಸಿಕೊಂಡಲ್ಲಿ ಅವಶ್ಯವಾಗಿ ಲೇಖಕನು ತನ್ನ ಕೃತಿಯನ್ನು ಭಾವಪ್ರಕಾಶ ನದ ಒಂದು ಅಂಗವಾಗಿ ರಚಿಸಬಹುದು. ಅಂತಹ ಜೀವನ ಚರಿತ್ರೆ ಹೆಚ್ಚು ಸುಂದ ರವೂ ಆಗುವುದು. ಲೇಖಕನ ಮನೋಧರ್ಮವೂ ನಾಯಕನ ಮನೋಧರ್ಮವೂ ಬೇರೆ ಬೇರೆಯಾಗಿರುವಾಗ ಈ ವಿಧವಾದ ಕೃತಿರಚನೆ ಸಾಧ್ಯವಾಗದು. ಸಾಮಾನ್ಯ ವಾಗಿ ಜೀವನ ಚರಿತ್ರಕಾರ ತನ್ನ ಸಂಸ್ಕೃತಿಗೂ ಮನೋಧರ್ಮಕ್ಕೂ ಒಗ್ಗುವಂತಹ, ಮತ್ತು ಯಾರಲ್ಲಿ ತನಗೆ ಗೌರವವೂ ಶ್ರದ್ಧೆಯೂ ಇರುವುದೋ ಅಂತಹ ವ್ಯಕ್ತಿಯನ್ನೇ ಆರಿಸಿಕೊಳ್ಳುವನಾದುದರಿಂದ ಆತನ ಕೃತಿ ಭಾವಪ್ರಕಾಶನಕ್ಕೆ ಒಳಗಾಗಿರುತ್ತದೆ ಎಂದು ಹೇಳಬಹುದು. ಇದೇ ರೀತಿಯಲ್ಲಿ ವಾಚಕನಿಗೂ ಭಾವಪ್ರಕಾಶನದ ಸಾಧನ ವಾಗಿ ಜೀವನ ಚರಿತ್ರೆ ಒದಗುವುದು ಸಾಧ್ಯ. ಗಯತೆ ಗಾಂಧೀ ಟಾಗೋರರನ್ನು

ಓದಿದವರೆಲ್ಲ ಅವರಂತೆಯೆ ಆಗುವುದಿಲ್ಲ. ಆ ಮಹಾನುಭಾವರ ಕ್ರಿಯಾ ಶಕ್ತಿಯನ್ನೂ ಬುದ್ಧಿ ಶಕ್ತಿಯನ್ನೂ ಅರ್ಥಮಾಡಿಕೊಳ್ಳುತ್ತಾರೆ. ಅಷ್ಟರಮಟ್ಟಿನ ಮನೋಧರ್ಮ ಅವರಲ್ಲಿ ಇರುತ್ತದೆ. ಆಮೇಲೆ ತಮ್ಮ ತಮ್ಮ ಶಕ್ತ್ಯನುಸಾರ ಉದ್ಧಾರವಾಗುತ್ತಾರೆ, ಪಾವನವಾಗುತ್ತಾರೆ. ಹೀಗೆ ಉತ್ತಮವಾದ ಜೀವನ ಚರಿತ್ರೆ ಎರಡು ರೀತಿಯಲ್ಲಿ ವಾಚಕನಿಗೆ ಪ್ರಯೋಜನಕಾರಿ. ಭಾವಪ್ರಕಾಶನದ ಸಾಧನವಾಗಿ ರಸಸ್ಯಂದಿಯಾಗಿ ವಾಚಕನ ಪರವಶತೆಗೆ ಕಾರಣವಾಗಿ ಅವನಿಗೆ ಆನಂದಾನುಭವವನ್ನು ಉಂಟುಮಾಡುವುದು ಒಂದು; ಬೋಧಪ್ರದವಾಗಿ ಲೋಕಸ್ವರೂಪವನ್ನು ತಿಳಿಸುವುದಾಗಿ ವಾಚಕನ ಎಚ್ಚರಿಕೆಗೆ ಕಾರಣವಾಗಿ ಅವನಿಗೆ ಜ್ಞಾನೋದಯವನ್ನು ಉಂಟುಮಾಡುವುದು ಇನ್ನೊಂದು.

೫

ಜೀವನ ಚರಿತ್ರೆ ಸುಂದರವೂ ಸತ್ಯಪೂರ್ಣವೂ ಆಗಲು ಅನುಸರಿಸಬೇಕಾದ ತಂತ್ರಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ವಿಚಾರಮಾಡಬಹುದು. ಜೀವನ ಚರಿತಕಾರ ತನಗೆ ಹಿತವಾದ ನಾಯಕನನ್ನು ಆರಿಸಿಕೊಳ್ಳಬೇಕು. ಆಮೇಲೆ ಆತನಿಗೆ ಸಂಬಂಧಿಸಿದ ದಿನಚರಿ, ಕಾಗದಪತ್ರ, ಸ್ಮೃತಿಲೇಖ, ಉಪಾಖ್ಯಾನ, ಸಂವಾದ, ಸಮಕಾಲೀನರ ಹೇಳಿಕೆ, ಆತನವೆ ಆದ ಕೃತಿಗಳು ಇವನ್ನೆಲ್ಲ ಚೆನ್ನಾಗಿ ಪರೀಕ್ಷಿಸಬೇಕು. ಬಳಿಕ ಈ ಸಾಧನ ಸಾಹಿತ್ಯವನ್ನು ಸಂಗ್ರಹಿಸಬೇಕು. ತನಗೆ ತಿಳಿದುದು ಎಲ್ಲವನ್ನೂ ಹೇಳುವುದು ಸಾಧ್ಯವೂ ಅಲ್ಲ, ಸಾಧುವೂ (?—ಸಂ.) ಅಲ್ಲ. ಯಾವ ವಿಷಯ ನಿರೂಪಯಿಂದ ನಾಯಕನ ಮೂರ್ತಿಸ್ವರೂಪ ರೂಪುಗೊಳ್ಳುವುದೊ ಆ ವಿಷಯವನ್ನು ಮಾತ್ರ ಆರಿಸಬೇಕು. ಆರಿಸಿದ ಒಂದೊಂದು ವಿಷಯವೂ ನಾಯಕನ ಭಾವಚಿತ್ರವನ್ನು ತುಂಬುವ ಕುಂಚದ ಗರೆಯಾಗಿರಬೇಕು. ಒಂದೊಂದು ವಿಷಯವು ತನ್ನ ತನ್ನ ಸ್ಥಾನದಲ್ಲಿ ನಿಂತು ತನ್ನ ತನ್ನ ಪಾಲಿನ ಹೊರೆ ಹೊತ್ತು ಒಟ್ಟು ಸೇತುವಿನ ರಚನೆಗೆ ನೆರವಾಗುವವ ಕಮಾನಿನ ಕಲ್ಲಿನಂತೆ ಇರಬೇಕು. ಸಣ್ಣ ಸಂಗತಿ ಎಂದು ವಿಷಯ ಬಿಡಬಾರದು. ಎಷ್ಟೋ ವೇಳೆ ಹತ್ತು ಪುಟಗಳ ನೀರಸ ಬಣ್ಣನೆಗಿಂತ ಒಂದು ಪುಟದ ಸ್ವಾರಸ್ಯವಾದ ಉಪಾಖ್ಯಾನ ವ್ಯಕ್ತಿಯ ಗುಣವನ್ನು ಚೆನ್ನಾಗಿ ನಿರೂಪಿಸಬಲ್ಲದು. ವಿಷಯಗಳನ್ನು ಸೇರಿಸುವಾಗಲೂ ಬಿಡುವಾಗಲೂ ಔಚಿತ್ಯ ಜ್ಞಾನವಿರಬೇಕು. ಸಣ್ಣ ಗಾತ್ರದಲ್ಲಿ ವಾರಕ್ಕೆ ಒಂದು ಜೀವನಚಿತ್ರವನ್ನು ಬರೆಯುತ್ತಿದ್ದ ಸೇಂತ್‌ಬೂವ್ ಎಂಬಾತನು ಈ ಬಗೆಗೆ ಉತ್ತಮ ಮಾದರಿ.

ಸಂಗ್ರಹಕಾರ್ಯ ಎಷ್ಟು ಮುಖ್ಯವೋ ಅದು ಪ್ರಾಮಾಣಿಕ ಬುದ್ಧಿಯಿಂದ ನಡೆಯಬೇಕು ಎನ್ನುವುದೂ ಅಷ್ಟೇ ಮುಖ್ಯ. ಗೌರವ ಬುದ್ಧಿ, ದಾಕ್ಷಿಣ್ಯ ಶೀಲ,

ಸಭ್ಯಮನೋಭಾವ, ಸಮಾಜ ಭೀತಿ ಇವುಗಳಿಂದ ತಮ್ಮ ನಾಯಕರ ಎಷ್ಟೋ ವಿಷಯ ಗಳನ್ನು ತಗ್ಗಿಸಿ ಹೇಳುವುದೂ ಮರೆಮಾಜುವುದೂ ಹೇಳದಿರುವುದೂ ಉಂಟು. ಇದು ತಪ್ಪು. 'ಬದುಕಿರುವ ನಮ್ಮ ಸ್ನೇಹಿತರ ವಿಷಯದಲ್ಲಿಯೆ ನಮಗೆ ತಿಳಿದಿರುವ ಕೆಟ್ಟ ಸಂಗತಿಗಳನ್ನು ಇನ್ನೊಬ್ಬರಿಗೆ ಹೇಳದಿರುವಾಗ ಸತ್ತಿರುವ ಮಹಾತ್ಮರ ವಿಷಯದಲ್ಲಿ ಕೆಟ್ಟದು ಇದ್ದರೂ ಏಕೆ ಹೇಳಬೇಕು' ಎಂದು ಹೇಳುವವರಿದ್ದಾರೆ. ಇದಕ್ಕೆ ಉತ್ತರ ವಾಗಿ ಹೀಗೆ ಹೇಳಬಹುದು: ಇದು ವಿಜ್ಞಾನದ ಯುಗ, ಪ್ರತ್ಯಕ್ಷ ಪ್ರಮಾಣಗಳನ್ನು ಬಯಸುವ ಪ್ರಯೋಗ ಶೀಲರ ಯುಗ. ನಡೆದುದನ್ನು ನಡೆದಂತೆ ಹೇಳಿದರೆಯೇ ಜನರಿಗೆ ಗೌರವವೂ ವಿಶ್ವಾಸವೂ ಉಂಟಾಗುತ್ತದೆ. ಕೇವಲ ಸದ್ಗುಣಗಳ ಶಿಖಾಮಣಿಯ ನ್ನಾಗಿಯೆ ಒಬ್ಬನನ್ನು ಚಿತ್ರಿಸಿದರೆ ಸದ್ಗುಣಗಳ ಅಸ್ತಿತ್ವದಲ್ಲಿಯೆ ಜನರಿಗೆ ಅಪನಂಬಿಕೆ ಉಂಟಾಗುತ್ತದೆ; ಅಮಾನುಷ ವ್ಯಕ್ತಿಯ ವಿಷಯದಲ್ಲಿಯೂ ಪವಾಡ ಪುರುಷನ ವಿಷಯದಲ್ಲಿಯೂ ಇರುವ ಗೌರವಕ್ಕಿಂತ ತಮ್ಮ ಹಾಗೆಯೇ ಲೋಪದೋಷಗಳಿದ್ದು ತಿದ್ದಿಕೊಂಡು ನಡೆದ ಮಹಾತ್ಮರ ವಿಷಯದಲ್ಲಿ ಸಹಾನುಭೂತಿಯೂ ವಿಶ್ವಾಸವೂ ಜನರಿಗೆ ಹೆಚ್ಚು. ಇದರಮೇಲೆ ಜೀವನಚರಿತ್ರೆ ಎಂದಮೇಲೆ ಅದರಲ್ಲಿ ವ್ಯಕ್ತಿಯ ದುರ್ಗುಣ ಸದ್ಗುಣಗಳೆರಡೂ ಚಿತ್ರಿತವಾಗಿರಬೇಕು.

ಸಂಗತಿಗಳನ್ನು ಮೊದಲಿಂದ ಕೊನೆಯವರೆಗೆ ಅವು ನಡೆದ ಕಾಲದ ಕ್ರಮದಲ್ಲಿ ವಿವರಿಸಿಕೊಂಡು ಹೋಗಬೇಕು ಎನ್ನುವುದೂ ವ್ಯಕ್ತಿಯ ಗುಣಗಳನ್ನು ಪ್ರಕಟಿಸುವ ಉಪಾಖ್ಯಾನಗಳನ್ನು ಸಂದರ್ಭಾನುಸಾರವಾಗಿ ಅಲ್ಲಲ್ಲಿ ಮುಖ್ಯ ಕಥೆಯೊಡನೆ ಸೇರಿ ಸಿಯೇ ಹೇಳಬೇಕು ಎನ್ನುವುದೂ ಪ್ರತಿಯೊಂದು ವಿಷಯವನ್ನು ನಾಯಕನ ಕಣ್ಣಿನಿಂದ ನೋಡಿ ಹೇಳಿದಂತೆ ಬರೆಯಬೇಕು ಎನ್ನುವುದೂ ನಾಯಕನ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯನ್ನು ಕ್ರಮವಾಗಿ ಮೆಟ್ಟಿಲು ಮೆಟ್ಟಿಲಾಗಿ ವರ್ಣಿಸಬೇಕು ಎನ್ನುವುದೂ ಜೀವನ ಚರಿತ್ರಕಾರನು ಗಮನಿಸಬೇಕಾದ ಇತರ ಮುಖ್ಯ ಸಂಗತಿಗಳು. ಕಥನ ತಂತ್ರ, ಬರಹಗಾರನ ವಿಶೇಷ ಸೊತ್ತು. ಮೂಲಸ್ವಭಾವಕ್ಕೆ ಹೊಂದುವ ಅಂಶಗಳನ್ನು ಎಲ್ಲಿ ಹೇಗೆ ಬೇಕಾದರೂ ಬಳಸಬಲ್ಲ ಸ್ವಾತಂತ್ರ್ಯವೂ ಕುಶಲತೆಯೂ ಅವನವು.

ಜೀವನ ಚರಿತ್ರೆಯಲ್ಲಿ ಚರಿತ್ರೆಯನ್ನು ಹೇಗೆ ಸೇರಿಸಿ ಹೇಳಬೇಕು ಎನ್ನುವುದು ತೊಡಕಿನ ವಿಷಯ. ಸಾಧಾರಣ ವ್ಯಕ್ತಿಯ ಜೀವನವನ್ನು ಚಿತ್ರಿಸುವಾಗ ಚರಿತ್ರೆ ಹಿನ್ನೆಲೆಯಾಗಿ ಬಂದರೆ ಸಾಕು. ಗಾಂಧಿಜಿ, ನೆಹರು, ಚರ್ಚಿಲ್, ಸ್ಟಾಲಿನ್, ಹಿಟ್ಲರ್, ರೂಸೆವೆಲ್ಟ್, ಕೆಮಾಲ್ ಮುಂತಾದ ಚರಿತ್ರೆಯ ನಿರ್ಮಾಣಕಾರರಾಗಿರುವವರ ಜೀವನ ವನ್ನು ಚಿತ್ರಿಸುವಾಗ ಚರಿತ್ರೆ ಹಾಸಾಗಿ, ಜೀವನ ಹೊಕ್ಕಾಗಿ ಜೀವನಚರಿತ್ರೆ ನೇಯು

ವುದಾದರೆ ದೋಷವಿಲ್ಲ. ಚರಿತ್ರೆ ಭೂತಭವಿಷ್ಯದ್ವರ್ತಮಾನಗಳನ್ನೆಲ್ಲ ಒಳಕೊಂಡಿರುವುದರಿಂದ ಅದಕ್ಕೆ ಕಾಲದ ಮಿತಿಯಿಲ್ಲ. ಜೀವನಚರಿತ್ರೆಗೆ ಕಾಲದ ಮಿತಿಯಿರುತ್ತದೆ. ಒಂದು ದೇಶ ಇಲ್ಲವೆ ಒಂದು ಜನಾಂಗದ ರಾಜಿಕ, ಧಾರ್ಮಿಕ, ಬೌದ್ಧಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಪುರೋಗತಿ ಇಲ್ಲವೆ ಅಧೋಗತಿ ಜೀವನ ಚರಿತ್ರೆಯ ವಸ್ತು. ಒಬ್ಬನೆ ವ್ಯಕ್ತಿಯ ಜೀವನದ ಬಹುಮುಖವಾದ ಕಾರ್ಯಕ್ಷೇತ್ರಗಳ ಏಳುಬೀಳುಗಳ ಚಿತ್ರ ಜೀವನ ಚರಿತ್ರೆಯ ವಸ್ತು. ಈ ಅಂಶವನ್ನು ಜೀವನ ಚರಿತ್ರಕಾರ ನೆನಪಿಡುವುದು ಅವಶ್ಯ. ಚಿತ್ರಕಾರನಿಗೆ ಪಟ ಹೇಗೊ ಜೀವನ ಚಿತ್ರಕಾರನಿಗೆ ಚರಿತ್ರೆ ಹಾಗೆ.

ಜೀವನ ಚರಿತ್ರಕಾರನಿಗೆ ವೈಜ್ಞಾನಿಕ ಮನೋಧರ್ಮವೂ ಚಿಕಿತ್ಸಕ ಬುದ್ಧಿಯೂ ಅವಶ್ಯ. ಸಮಾಜಶಾಸ್ತ್ರ, ತತ್ವಶಾಸ್ತ್ರ, ಮನಶ್ಶಾಸ್ತ್ರಗಳ ಪರಿಚಯವಿದ್ದರೆ ಇನ್ನೂ ಒಳ್ಳೆಯದು. ಇತ್ತೀಚೆಗೆ ದೊಡ್ಡ ದೊಡ್ಡ ವಿಜ್ಞಾನಿಗಳು ಮಹಾತ್ಮರ ಗುಣಾವಗುಣಗಳನ್ನು ವೈಜ್ಞಾನಿಕ ಸಂಶೋಧನೆಗಳ ಸಹಾಯದಿಂದ ವಿವರಿಸಲು ಪ್ರಯತ್ನಿಸಿದ್ದಾರೆ. ಈ ಪ್ರಯತ್ನದಿಂದ ಒಬ್ಬ ವ್ಯಕ್ತಿಯ ನಡತೆಯನ್ನು ಶಾಸ್ತ್ರೀಯವಾಗಿ ವಿವರಿಸಬಹುದು. ಆದರೆ ಇಂತಹ ಬರವಣಿಗೆ ಬಹುಜನರಿಗೆ ಪ್ರಿಯವಾದ ಸಾಹಿತ್ಯವಾಗದಿರಬಹುದು. ಒಟ್ಟಿನಲ್ಲಿ ವೈಜ್ಞಾನಿಕ ದೃಷ್ಟಿ ನಿರ್ದಾಕ್ಷಿಣ್ಯವಾದ ಬುದ್ಧಿಯನ್ನೂ, ನಿಷ್ಪಕ್ಷಪಾತ ದೃಷ್ಟಿಯನ್ನೂ, ನಿರ್ದುಷ್ಟವಾದ ಸತ್ಯಪ್ರೇಮವನ್ನೂ ಲೇಖಕನಲ್ಲಿ ಹುಟ್ಟಿಸುತ್ತದೆ.

ಜೀವನ ಚರಿತ್ರಕಾರ ತನ್ನ ಬರವಣಿಗೆ ಸಾಹಿತ್ಯದ ರೀತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಅವನ ಮಾತುಗಾರಿಕೆ ತಿಳಿಯಾಗಿಯೂ, ಮನೋಹರವಾಗಿಯೂ ಇರಬೇಕು. ಜೀವನ ಚರಿತ್ರೆ ಸ್ವಾರಸ್ಯವಾದ ಕಥೆಗಳಿಂದಲೂ, ಉಪಾಖ್ಯಾನಗಳಿಂದಲೂ, ಸಂವಾದಗಳಿಂದಲೂ, ಕಾಗದ ಪತ್ರ, ದಿನಚರಿಗಳ ಉದ್ಧಾರಗಳಿಂದಲೂ ನಿಬಿಡವಾಗಿರಬೇಕು. ನಾಯಕನ ಆಸೆ, ನಿರಾಸೆ, ಸುಖ, ದುಃಖ ಮರ್ಮಗಳ ಚಿತ್ರಗಳನ್ನು ಸೇರಿಸಿರಬೇಕು. ಮನೆಯವರೊಡನೆ, ಸಮಾಜದವರೊಡನೆ, ದೇಶದವರೊಡನೆ ನಡೆದುಕೊಳ್ಳುವ ರೀತಿಯನ್ನೂ ಹರ್ಷದಲ್ಲಿ, ಉದ್ವೇಗದಲ್ಲಿ, ಕೋಪದಲ್ಲಿ ತೋರಿಸುವ ವರ್ತನೆಯನ್ನೂ ಎಲ್ಲ ಸಂಬಂಧ ಸಂದರ್ಭಗಳಲ್ಲಿಯೂ ಅಭಿವ್ಯಕ್ತವಾಗುವ ನಾಯಕನ ಮೂರ್ತಿ ಸ್ವರೂಪವನ್ನೂ ಚಿತ್ರಿಸಬೇಕು. ಜೀವನ ಚರಿತ್ರಕಾರನಲ್ಲಿ ಕಾದಂಬರಿಕಾರನ ಕಲ್ಪನಾ ವಿಲಾಸವೂ, ಆತ್ಮಕಥನಕಾರನ ಸತ್ಯಶೋಧನ ಬುದ್ಧಿಯೂ, ಕವಿಯ ಭಾವ ಪ್ರಕಾಶನದ ರೀತಿಯೂ, ವಿಜ್ಞಾನಿಯ ನಿಶಿತ, ನಿಶ್ಚಿತ ಜ್ಞಾನವೂ ಇದ್ದರೆ ಆತನಿಂದ ರಚಿತವಾದ ಜೀವನಚರಿತ್ರೆ ಉತ್ತಮವಾಗುವುದರಲ್ಲಿ ಸಂದೇಹವಿಲ್ಲ.

೬

ಇದುವರೆಗಿನ ವಿವರಣೆಗಳಿಗೆ ತಕ್ಕಂತೆ ರಚಿತವಾಗಿರುವ ಜೀವನಚರಿತ್ರೆ ನಮ್ಮಲ್ಲಿ ಹಲವಿಲ್ಲ. ಜೀವನಚರಿತ್ರೆಯನ್ನು ಬರೆಯುವುದೂ, ಓದುವುದೂ, ಈಚಿನ ಸಂಪ್ರದಾಯ. ಪಾಶ್ಚಾತ್ಯ ಸಂಸರ್ಗದಿಂದ ಉಂಟಾದ ಲಾಭಗಳಲ್ಲಿ ಇದೂ ಒಂದು. ಪಾಶ್ಚಾತ್ಯ ಸಾಹಿತ್ಯದಲ್ಲಿಯೇ ಜೀವನಚರಿತ್ರೆ ಇನ್ನೂ ಹಸುಗೂಸು ಎಂದು ಹೇಳುವವರಿದ್ದಾರೆ.

ಜೀವನಚರಿತ್ರೆ ನಮ್ಮಲ್ಲಿ ಇರಲೇ ಇಲ್ಲವೆಂದರೆ ಅದು ತಪ್ಪಾಗಲಾರದು. ಎಲ್ಲ ದೇಶಗಳ ಹಾಗೆ ಇಲ್ಲಿಯೂ ಸತ್ತವರ ನೆನಪನ್ನು ಉಳಿಸುವುದು, ಅವರ ವಿಷಯದಲ್ಲಿ ತಮ್ಮ ಶ್ರದ್ಧಾಭಕ್ತಿಗಳನ್ನು ಪ್ರದರ್ಶಿಸುವುದು, ಅವರ ವ್ಯಾಜದಿಂದ ಜನತೆಗೆ ಆದರ್ಶ ನೀತಿಯನ್ನು ಬೋಧಿಸುವುದು ಈ ಮೂರು ಕಾರಣಗಳಿಂದ ಜೀವನಚರಿತ್ರೆ ಅವತರಿಸಿತು. ಮಾಸ್ತಿಕಲ್ಲು, ವೀರಗಲ್ಲು, ಶಿಲಾಶಾಸನಗಳಲ್ಲಿಯೂ, ಪುರಾಣ ಪುಣ್ಯಕಥೆಗಳಲ್ಲಿಯೂ, ದಂತಕಥೆ ಪವಾಡಗಳಲ್ಲಿಯೂ, ಸ್ಥಳಪುರಾಣ, ಕ್ಷೇತ್ರಮಹಿಮೆಗಳಲ್ಲಿಯೂ, ಪುರಾಣಕಾವ್ಯ, ಜಾನಪದಗೀತೆಗಳಲ್ಲಿಯೂ ಈ ಅವತಾರದ ಹಲವು ಬಗೆಗಳನ್ನು ಕಾಣಬಹುದು. ಆದರೆ ಪ್ರಕೃತದಲ್ಲಿ ಇಂತಹ ಜೀವನಚರಿತ್ರೆಗಳನ್ನು ನಾವು ಇಲ್ಲಿ ಕುರಿಯುತ್ತಿಲ್ಲ. ಆಧುನಿಕ ಸಂಪ್ರದಾಯದಲ್ಲಿ ರಚಿತವಾದ ಗಣ್ಯವ್ಯಕ್ತಿಗಳ ಚರಿತ್ರೆಯನ್ನು ಕುರಿತು ಹೇಳುವುದು ನಮ್ಮ ಉದ್ದೇಶ. ಕನ್ನಡದಲ್ಲಿ ಈ ಬಗೆಯ ಗ್ರಂಥಗಳು ಸಣ್ಣವೂ ದೊಡ್ಡವೂ ಸೇರಿ ಸುಮಾರು ಒಂದು ನೂರು ಇರಬಹುದು. ಇವುಗಳಲ್ಲಿ ಮುಖ್ಯವೂ, ಉತ್ತಮವೂ ಆದವುಗಳನ್ನು ಈ ಕೆಳಗೆ ಕೆಲವು ಗುಂಪುಗಳಲ್ಲಿ ಕಾಣಿಸಿ ಅವುಗಳ ವಿಷಯದಲ್ಲಿ ಒಂದೊ ಎರಡೊ ಮಾತು ಹೇಳಿದೆ.

೭

ಚ. ವಾಸುದೇವಯ್ಯನವರ 'ಛತ್ರಪತಿ ಶಿವಾಜಿ', ಪುಟ್ಟಪ್ಪನವರ 'ರಾಮಕೃಷ್ಣ ಪರಮಹಂಸ' ಮತ್ತು 'ಸ್ವಾಮಿ ವಿವೇಕಾನಂದ', ಮೂರ್ತಿರಾಯರ 'ಸಾಕ್ರಟೀಸನ ಕೊನೆಯ ದಿನಗಳು', ಆಲೂರು ವೆಂಕಟರಾಯರ 'ಕರ್ನಾಟಕದ ವೀರರತ್ನಗಳು' ಇವುಗಳನ್ನು ಒಂದು ಪಂಥದ ಬರವಣಿಗೆ ಎನ್ನಬಹುದು. ಈ ಮೂವರೂ ತಮ್ಮ ತಮ್ಮ ನಾಯಕರನ್ನು ಚಿತ್ರಿಸಿರುವ ರೀತಿ ಅದ್ಭುತವಾಗಿದೆ; ಕವಿ ಸಹಜವಾದ ಶ್ರೀಮಂತ ಪ್ರತಿಭೆಗೆ ಸಾಕ್ಷಿಯಾಗಿದೆ. ಬರವಣಿಗೆಯಲ್ಲಿ ಬಿಗಿಯಿದೆ, ಬನಿಯಿದೆ. ಗಂಡುಗನ್ನಡದ ತೇಜೋಮಯವಾದ ಶೈಲಿಯಲ್ಲಿ ಬರೆದಿದಾರೆ. ಆ ರೀತಿ ನಾಯಕರ ಮೂರ್ತಿಸ್ವರೂಪ ಸ್ಫುರಿಸುತ್ತದೆ. ಓದುವಾಗ ವ್ಯಕ್ತಿಯ ಮಹದ್ದರ್ಶನದಿಂದ ವಾಚಕನು ಪರವಶವಾಗುತ್ತಾನೆ.

ಶ್ರೀ ಡಿ. ವಿ. ಗುಂಡಪ್ಪನವರು ಗೋಪಾಲಕೃಷ್ಣ ಗೋಖಲೆ, ರಂಗಾಚಾರ್ಲು ಇವರ ಕಾರ್ಯಕ್ಷೇತ್ರಗಳನ್ನು ವಿಶದವಾಗಿ ವರ್ಣಿಸಿ ಅವರ ಜೀವನದ ಧ್ಯೇಯ, ಅದನ್ನು ಅವರು ಸಾಧಿಸಿದ ರೀತಿ, ಆ ಸಾಧನೆಯಲ್ಲಿ ಬಂದ ತೊಡಕು ಇವುಗಳನ್ನು ಚಿತ್ರಿಸಿ ಆ ಮಹನೀಯರ ವ್ಯಕ್ತಿ ಮಹಿಮೆಯನ್ನು ತೋರಿಸಿಕೊಟ್ಟಿದ್ದಾರೆ. ಲೋಕ ಕಲ್ಯಾಣ ಬುದ್ಧಿಯಿಂದ ದೇಶದ ಏಳಿಗೆಗಾಗಿ ದುಡಿಯುವ ಈ ಇಬ್ಬರ ಚಿತ್ರ ಚೆನ್ನಾಗಿ ವ್ಯಕ್ತವಾಗುವ ಹಾಗೆ ಲೇಖಕರು ಅವರ ಜೀವನದ ಮುಖ್ಯ ಘಟನೆಗಳನ್ನು ಮಾತ್ರ ಹೇಳಿದ್ದಾರೆ. ಲೇಖಕ ತನ್ನ ಮನೋಧರ್ಮಗಳಿಗೆ ಹೊಂದಿಕೊಳ್ಳುವ ನಾಯಕನನ್ನು ಆರಿಸಿಕೊಂಡರೆ ಆಗ ಆ ಬರವಣಿಗೆ ಹೇಗೆ ಚೆನ್ನಾಗುವುದು ಎನ್ನುವುದಕ್ಕೆ ಈ ಪುಸ್ತಕ ಗಳು ನಿದರ್ಶನ. ಈ ಪುಸ್ತಕಗಳಿಗೇ ವಿಶೇಷವಾಗಿ ಸಲ್ಲುವ ಗೌರವ ಇನ್ನೊಂದಿದೆ. ಅನ್ಯಭಾಷಾ ಗ್ರಂಥಗಳ ಋಣ ಇವುಗಳಿಗಿಲ್ಲ. ಲೇಖಕರ ಸ್ವತಂತ್ರವಾದ ಬುದ್ಧಿ ವ್ಯವಸಾಯದ ಫಲವಾಗಿ ರಚಿತವಾದ ಕೃತಿಗಳು ಇವು.

ಪುಟ್ಟಣ್ಣನವರ ಕುಣಿಗಲ್ ರಾಮಶಾಸ್ತ್ರಿಗಳ ಚರಿತ್ರೆಯನ್ನೂ ಮಾಸ್ತಿಯವರ ರಾಮಕೃಷ್ಣ ಪರಮಹಂಸರನ್ನೂ ಒಂದು ಗುಂಪಾಗಿ ಹೇಳಬಹುದು. ಸ್ವಾರಸ್ಯವಾದ ಉಪಾಖ್ಯಾನಗಳಿಂದ ಮೊದಲಿಂದ ಕೊನೆಯ ವರೆಗೂ ಉದ್ವೇಗಕ್ಕೆ ಆಸ್ಪದವಿಲ್ಲದ ತಿಳಿಯಾದ, ಶುಚಿಯಾದ ಬರವಣಿಗೆ ಇಲ್ಲಿ ಕಾಣಬರುತ್ತದೆ. ಕಥನ ಕಲೆಯಲ್ಲಿ ಪ್ರವೀಣ ರಾದ ಮಾಸ್ತಿಯವರ ಪ್ರತಿಭೆ ರಾಮಕೃಷ್ಣ ಪರಮಹಂಸರಲ್ಲಿ ಪುಟಪುಟಕ್ಕೆ ಮಿಂಚು ತ್ತಿದೆ. ಅನೇಕ ಉಪಕಥೆ ಆಖ್ಯಾನಗಳನ್ನು ಸೇರಿಸಿ ವಿಷಯ ಸ್ವಾರಸ್ಯವಾಗುವ ಹಾಗೆ ಹೇಳಿದ್ದಾರೆ. ಈ ಚಾತುರ್ಯ ಪುಟ್ಟಣ್ಣನವರ ಕೆಲಸದಲ್ಲಿದೆ.

ಸಿಂಗ್ರಯ್ಯನವರ, ಶ್ರೀಕಂಠಶಾಸ್ತ್ರಿಗಳ, ವೆಂಕಟರಾಮಯ್ಯನವರ ಗ್ರಂಥಗಳನ್ನು ಇನ್ನೊಂದು ಗುಂಪಾಗಿ ಹೇಳಬಹುದು. ಕಥಾನಾಯಕರಲ್ಲಿ ಅಪಾರವಾದ ಗೌರವ, ಭಕ್ತಿ, ಶ್ರದ್ಧೆ ಇವು ಇಲ್ಲಿ ವ್ಯಕ್ತವಾಗಿವೆ. ಈ ಗುಂಪಿನಲ್ಲಿ ಎದ್ದು ಕಾಣುವ ಗ್ರಂಥ 'ಆಳಿದ ಮಹಾಸ್ವಾಮಿಯವರ ಚರಿತ್ರೆ, ಗಾತ್ರದಿಂದಲೂ ಗುಣದಿಂದಲೂ ವಿಷಯಕ್ಕೆ ಗೌರವ ತರುವ ಗ್ರಂಥ ಇದು'. ಶ್ರೀಮಾನ್ ವೆಂಕಟರಾಮಯ್ಯನವರು ವಿಷಯ ಸಂಗ್ರಹದಲ್ಲಿಯೂ, ವಿಷಯ ನಿರೂಪಣೆಯಲ್ಲಿಯೂ ಅದ್ವಿತೀಯವಾದ ಜಾಣ್ಮೆ ತೋರಿಸಿದ್ದಾರೆ. ಚರಿತ್ರೆಯೂ ಚಾರಿತ್ರವೂ ಅಲ್ಲಿ ಕಣ್ಣಿಗೆ ಕಟ್ಟುತ್ತವೆ. ಚಿತ್ತಾಕರ್ಷಕ ವಾದ ಅನೇಕ ಕಥೆಗಳನ್ನು ಜೀವನ ಉಪಾಖ್ಯಾನಗಳನ್ನು ಹೇರಳವಾಗಿ ಜೋಡಿಸಿ ದ್ದಾರೆ. ಇದರಿಂದ ನ್ಯಾಯಕವ್ಯಕ್ತಿಯ ಗುಣಶೀಲ ಚೆನ್ನಾಗಿ ರೂಪಗೊಳ್ಳುತ್ತದೆ.

ವೆಂಕಟಕೃಷ್ಣಯ್ಯನವರು, ಸುಬ್ಬರಾಯರು, ರಾಮಚಂದ್ರರಾಯರು, ಇವರದು ಇನ್ನೊಂದು ಗುಂಪು. ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಉಪದೇಶಾತ್ಮಕವಾಗಿರುವ

ಬರವಣಿಗೆ. ಭಾಷೆ ಸರಳವಾಗಿರುತ್ತದೆ, ವಿಷಯವೂ ಸರಳವಾಗಿರುತ್ತದೆ: ವ್ಯಕ್ತಿಯ ಜನನದಿಂದ ಮರಣದವರೆಗಿನ ಘಟನೆಗಳು ಕಾಲಕ್ರಮಾನುಸಾರವಾಗಿ ಬಿಡದಂತೆ ನಿರೂಪಿತವಾಗಿರುತ್ತವೆ.

ಶ್ರೀರಂಗರ ಕೆಮಾಲಪಾಶ, ಹರಿದಾಸರ ಸ್ಟಾಲಿನ್, ಕಸ್ತೂರಿಯವರ ದಿಲ್ಲೀಶ್ವರನ ದಿನಚರಿ, ಸೀತಾರಾಮಶಾಸ್ತ್ರಿಗಳ ನೆಪೋಲಿಯನ್ ಬೋನಪಾರ್ಟೆ, ಶ್ರೀಮತಿ ರತ್ನಮ್ಮನವರ ಮೆಡೇಮ್ ಕ್ಯೂರಿ ಇವು ಇನ್ನೊಂದು ಗುಂಪು. ಇವರಲ್ಲಿ ಮೊದಲು ಮೂವರು ಚಾರಿತ್ರಕವ್ಯಕ್ತಿಗಳು; ಚರಿತ್ರೆಯನ್ನು ಮಾಡಿರುವರು. ಆದುದರಿಂದ ಇವರ ಜೀವನಚರಿತ್ರೆಯಲ್ಲಿ ಆ ಕಾಲದ ದೇಶ ಕಾಲ ವರ್ತಮಾನಗಳ ವಿವರಗಳೆಲ್ಲ ಸಾಮಾನ್ಯವಾಗಿ ಸೇರಿಕೊಳ್ಳುತ್ತವೆ. ನಾಯಕ ಜೀವನವೂ ಅವನ ದೇಶದ ಚರಿತ್ರೆಯೂ ಕೂಡಿಯೆ ಬರುತ್ತವೆ. ಇದು ಮೊದಲನೆಯ ಮೂರು ಪುಸ್ತಕಗಳಲ್ಲಿಯೂ ಬಹಳ ಚೆನ್ನಾಗಿ ಬಂದಿದೆ. ರತ್ನಮ್ಮನವರು 'ಮೆಡೇಮ್ ಕ್ಯೂರಿ'ಯ ಜೀವನಚರಿತ್ರೆಯನ್ನು ಸರಳವಾಗಿಯೂ ಸುಂದರವಾಗಿಯೂ ಬರೆದಿದಾರೆ. ವಿಜ್ಞಾನಶೀಲಳಾದ ಮೆಡೇಮ್ ಕ್ಯೂರಿಯ ವ್ಯಕ್ತಿತ್ವ ಚೆನ್ನಾಗಿ ಒಡಮೂಡಿದೆ.

ಈ ಸಂದರ್ಭದಲ್ಲಿ ಶ್ರೀಮಾನ್ ಎಂ. ರಾಮರಾಯರ ಕೃತಿಗಳನ್ನು ಪ್ರತ್ಯೇಕವಾಗಿ ಹೇಳಬೇಕಾಗಿದೆ. ಸುಭೋಧಕುಸುಮಾಂಜಲಿ ಗ್ರಂಥಮಾಲೆಯಲ್ಲಿ ಶ್ರೀಯುತರು ಭಾರತದ ಮತ್ತು ಭಾರತೇತರ ಪ್ರಪಂಚದ ಧಾರ್ಮಿಕ ಪ್ರಧಾನ ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ಆಬಾಲವೃದ್ಧರಿಗೂ ಅರ್ಥವಾಗುವ ರೀತಿಯಲ್ಲಿ ನೂರರ ಮೇಲೆ ಪುಸ್ತಕಗಳನ್ನು ಬರೆದಿದ್ದಾರೆ.

'ಇಬ್ಬರು ಕನ್ನಡಿಗರು' ಅನುವಾದ ಮಾಡಿಕೊಟ್ಟಿರುವ ಮಹಾತ್ಮ ಗಾಂಧಿಯವರ ಆತ್ಮಕಥೆಯ ಐದು ಭಾಗಗಳೂ, ಅಶ್ವತ್ಥ ನಾರಾಯಣರಾಯರು ಅನುವಾದ ಮಾಡಿಕೊಟ್ಟಿರುವ ಜವಾಹಿರಲಾಲ್ ನೆಹರೂ ಅವರ ಆತ್ಮಕಥೆಯ ಎರಡು ಸಂಪುಟಗಳೂ ಕನ್ನಡ ಜೀವನ ಚರಿತ್ರೆಯ ಸಾರಸ್ವತ ಸಂಪತ್ತನ್ನು ವಿಶೇಷರೀತಿಯಲ್ಲಿ ಹೆಚ್ಚಿಸಿವೆ. ಮೊದಲನೆಯ ತರಗತಿಗೆ ಸೇರಬಹುದಾದ ಆತ್ಮ ಕಥನಗಳೆಂದು ಹೆಸರಾದ ಈ ಇಬ್ಬರ ಕೃತಿಗಳನ್ನು ಮೂಲಕ್ಕೆ ಅವಿರೋಧವಾದ ರೀತಿಯಲ್ಲಿ ಸರಳವೂ ಸುಂದರವೂ ಆದ ರೀತಿಯಲ್ಲಿ ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿರುವುದು ಸ್ತುತ್ಯವಾದ ಕೆಲಸ.

ನಮ್ಮ ನಾಡಿನ ವಿಭೂತಿ ಪುರುಷರ ಜೀವನ ಚರಿತ್ರೆಯನ್ನು ಪರಿಶೋಧನಾತ್ಮಕ ದೃಷ್ಟಿಯಿಂದ ಪುನರ್ರಚಿಸುವುದು ಇತ್ತೀಚೆಗೆ ನಡೆಯುತ್ತಿದೆ. ಇವುಗಳನ್ನು ಜೀವನ ಚರಿತ್ರೆಗಳ ಪಂಕ್ತಿಗೇ ಸೇರಿಸಬೇಕು. ಗುಂಡಪ್ಪನವರ 'ಶ್ರೀ ವಿದ್ಯಾರಣ್ಯರು ಮತ್ತು ಅವರ ಕಾಲ' ಮತ್ತು 'ವಿದ್ಯಾರಣ್ಯರ ಸಮಕಾಲೀನರು' ಎಂ. ಆರ್. ಶ್ರೀನಿವಾಸ

ಮೂರ್ತಿಗಳ 'ಭಕ್ತಿಭಾಂಡಾರಿ ಬಸವಣ್ಣನವರು' ಹುಲ್ಲೂರು ಶ್ರೀನಿವಾಸ ಜೋಯಿಸರ 'ಕುಮಾರ ರಾಮ' ಕುಂದಣಗಾರರ 'ಮಹಾದೇವಿಯಕ್ಕ' ಈ ಮುಂತಾದುವು ಇವುಗಳಲ್ಲಿ ಮುಖ್ಯ.

ಮೇಲೆ ಕಾಣಿಸಿದ ಜೀವನ ಚರಿತ್ರೆಗಳಲ್ಲಿ ಅನೇಕವು ಪರಭಾಷಾ ಸಾಹಿತ್ಯಗಳಿಂದ ಕನ್ನಡಿಸಿದವು. ಇಂಗ್ಲಿಷು, ಬಂಗಾಳಿ, ಮರಾಠಿ, ಗುಜರಾಥಿ ಮುಂತಾದ ಭಾಷೆಗಳ ಗ್ರಂಥಗಳನ್ನು ಆಶ್ರಯಿಸಿ, ಕನ್ನಡಕ್ಕೆ ಇಳಿಸಿದ ಗ್ರಂಥಗಳು ನಮ್ಮಲ್ಲಿ ಹಲವು. ಕನ್ನಡೇತರ ಲೋಕನಾಯಕರನ್ನು ಕುರಿತು ಬರೆಯುವಾಗ ಈ ಕಾರ್ಯ ಅನಿವಾರ್ಯವಾದರೂ ಸ್ವತಂತ್ರವಾದ ಬುದ್ಧಿಶಕ್ತಿ, ಕ್ರಿಯಾಶಕ್ತಿಗಳಿಂದ ಕೃತಿರಚನೆ ಮಾಡುವುದರ ಕಡೆಗೆ ನಾವು ವಿಶೇಷ ಗಮನಕೊಡಬೇಕಾಗಿದೆ.

೮

ವ್ಯಕ್ತಿಯ ಜೀವನವನ್ನು ಆದ್ಯಂತವಾಗಿ ಹೇಳದೆ ಆ ವ್ಯಕ್ತಿಯನ್ನು ಯಾವುದೋ ಒಂದು ನಿಲವಿನಿಂದ ನೋಡಿ ಯಾವುದೋ ಒಂದು ಗುಣವನ್ನು ಮಾತ್ರ ಮಾರ್ಮಿಕವಾಗಿ ಚಿತ್ರಿಸುವುದು ಇನ್ನೊಂದು ಪದ್ಧತಿ. ಇಂತಹ ವ್ಯಕ್ತಿಚಿತ್ರ ನಮ್ಮಲ್ಲಿ ಇಚೀಚೆಗೆ ಬೆಳೆಯುತ್ತಿದೆ. ಈ ಪಂಥದಲ್ಲಿ ಮೊದಲಿಗರೆಂದೂ ಮುಂದೋಡಿದವರೆಂದೂ ಹೆಸರಾದವರು ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರು. 'ವರ್ಧಾಯಾತ್ರೆ' 'ಪರ್ಣಕುಟಿ' 'ಕುಲದೀಪಕರು' 'ಕನ್ನಡದ ಕಿಡಿಗಳು' ಮುಂತಾದ ಕೃತಿಗಳಲ್ಲಿ ಶರ್ಮರು ತಮ್ಮ ಈ ಶಬ್ದಚಿತ್ರದ ಶಕ್ತಿಯನ್ನು ಅದ್ಭುತವಾಗಿಯೂ ಅನುಪಮವಾಗಿಯೂ ಪ್ರದರ್ಶಿಸಿದ್ದಾರೆ. ಒಂದು ಮಾತು ಹೇಳಿ, ಒಂದು ಸಂಗತಿ ವಿವರಿಸಿ ಕುರಿತ ವ್ಯಕ್ತಿಯ ಒಂದು ಚಿತ್ರ ನಿರ್ಮಿಸುತ್ತಾರೆ. ಈ ಕಾರ್ಯಕ್ಕೆ ಪಾದರಸದಂತೆ ಚುರುಕಾದ, ವಿದ್ಯುತ್ತಿನಂತೆ ತೀಕ್ಷ್ಣವಾದ, ಕ್ಷುರಧಾರೆಯಂತೆ ನಿಶಿತವಾದ ಪ್ರತಿಭೆ ಬೇಕು. ವ್ಯಕ್ತಿಯ ಗೂಢವೂ ಗಾಢವೂ ಆದ ಪರಿಚಯ ಬೇಕು. ಯಾವ ಮಾತಿಗೆ ಏನು ಅರ್ಥ ಏನು ವ್ಯಾಪ್ತಿ ಎನ್ನುವುದನ್ನು ತಿಳಿದಿರಬೇಕು. ಒಂದು ಮಾತಿನಲ್ಲಿ ಇಂತಹ, ಸೃಷ್ಟಿಗೆ ಲೇಖಕ ಶಬ್ದಬ್ರಹ್ಮನೇ ಇರಬೇಕು. ಶ್ರೀ ಶರ್ಮರಲ್ಲಿ ಈ ಎಲ್ಲ ಗುಣಗಳೂ ಇವೆ. ಶರ್ಮರ ಕಥನ್ನ ವರ್ಣನ ಟೀಕೆಗಳಲ್ಲಿ ನಾಟಕೀಯತೆಯಿದೆ, ಸರಸಹಾಸ್ಯವಿದೆ, ವ್ಯಂಗ್ಯಾರ್ಥವಿದೆ, ಬೆಡಗಿದೆ. ಅಂತೇ ಕಾರಂತರು ಕನ್ನಡನಾಡಿನ ಕೆಲವು ವ್ಯಕ್ತಿಗಳ ಪರಿಚಯವನ್ನು ಒಂದು ಚುರುಕಾದ ಹೊಳಪು ಶೈಲಿಯಲ್ಲಿ ಮಾಡಿಕೊಟ್ಟಿದ್ದಾರೆ. ಬೇಂದ್ರೆಯವರ ಒಂದೆರಡು ವ್ಯಕ್ತಿ ಚಿತ್ರಗಳೂ ತುಂಬಾ ಕಳೆಯಿಂದ ಕೂಡಿವೆ.—ಪ್ಲುಟಾರ್ಕ್ ಸಂಪ್ರದಾಯ ಎಂದಿಗೂ ಜೀವನ್ನವಾದುದು.

೯

ದಿನಚರಿ, ಕಾಗದಪತ್ರ, ಸ್ಮೃತಿಲೇಖ, ಆತ್ಮವೃತ್ತ—ಇವು ಜೀವನ ಚರಿತ್ರೆಗಳಾಗದಿದ್ದರೂ ಅವಕ್ಕೆ ಆಧಾರ ಕೃತಿಗಳಾಗುವುದರಿಂದ ಇಂತಹ ಕೃತಿಗಳು ಕನ್ನಡದಲ್ಲಿ ಯಾವುವು ಎಂಬುದನ್ನು ಇಲ್ಲಿ ಕಾಣಿಸಿದೆ. ಅಶ್ವತ್ಥನಾರಾಯಣರಾಯರ 'ಬಿಡುಗಡೆಯ ಬೆಲೆ' ದಿವಾಕರರ 'ಸೆರೆಯಮರೆಯಲ್ಲಿ' ಗೋಕಾಕರ 'ಸಮುದ್ರದಾಚೆಯಿಂದ' ಆಲೂರರ 'ನನ್ನ ಜೀವನ ಸ್ಮೃತಿಗಳು' ರಾಜರತ್ನಂರ 'ಹತ್ತುವರುಷ' ಸೆರಂಗರ 'ಶ್ರೀರಂಗ' ಮಧುರ ಚೆನ್ನರ 'ಪೂರ್ವರಂಗ' 'ಕಾಳರಾತ್ರಿ' 'ಬೆಳಗು' ಇವು ಹೆಸರಾಗಿವೆ.

೧೦

ಆಂಗ್ಲ ಸಾಹಿತ್ಯದಲ್ಲಿ ಈ ವರೆಗೆ ಹೆಸರಾದವರಲ್ಲಿ ಬಾಸ್‌ವೆಲ್, ಲೋಕಾರ್ಟ್, ಮಾರ್ಲೆ, ಲಿಟ್ಟನ್ ಸ್ಟ್ರಾಚೀ, ಎಡ್ಮಂಡ್ ಗಾಸ್ ಮುಂತಾದವರು ಒಂದೊಂದು ವಿಶೇಷಬಗೆಯ ಜೀವನ ಚರಿತಕಾರರು. ಆಧುನಿಕರಲ್ಲಿ ಲಘು, ವ್ಯಂಗ್ಯ ಅಥವಾ ಸಣ್ಣ ರೇಖಾ ಚಿತ್ರದಿಂದ ಹಿಡಿದು ಪೂರ್ಣ ಸ್ವರೂಪಚಿತ್ರಗಳ ವರೆಗೂ ವ್ಯಾಪಿಸುವ ಹಲವು ಬಗೆಯ ಜೀವನ ಚಿತ್ರನಿರ್ಮಾಣ ಸಂಪ್ರದಾಯಗಳಿವೆ. ನಮ್ಮ ಸಾಹಿತ್ಯಕ್ಕೂ ಆ ಅನೇಕ ಪ್ರಕಾರಗಳ ವಿಲಾಸವೂ ಶಕ್ತಿಯೂ ಬರಬೇಕು. ಒಳ್ಳೆಯ ಬದುಕು ಬಾಳಿದ ವ್ಯಕ್ತಿ ದುರ್ಲಭವಾಗಿರುವಂತೆ ಒಳ್ಳೆಯ ಬದುಕನ್ನು ಒಳ್ಳೆಯ ರೀತಿಯಲ್ಲಿ ಚಿತ್ರಿಸುವ ಜೀವನ ಚರಿತ್ರಕಾರನೂ ದುರ್ಲಭನೇ ಸರಿ.

ಎಸ್. ವಿ. ಪರಮೇಶ್ವರ ಭಟ್ಟ.

೧. ಇಂದಿನ ಮರಾಠಿ ಸಾಹಿತ್ಯ

(೧೯೨೦—೧೯೪೫)

೧೯೨೦ನೆಯ ವರುಷಕ್ಕೆ ಅಧುನಿಕ ಮರಾಠಿ ಸಾಹಿತ್ಯದ ಚರಿತ್ರೆಯಲ್ಲಿ ಒಂದು ಬಹು ಮುಖ್ಯವಾದ ಘಟ್ಟ ಮುಗಿಯುತ್ತದೆ. ಹಿಂದಿನ ಗ್ರಂಥಕರ್ತೃಗಳಲ್ಲಿ ಕೆಲವರು ವಿಶ್ರಾಂತಿಪಡೆದಿದ್ದರು. ಕೆಲವರು ತೀರಿಕೊಂಡಿದ್ದರು. ಮಹಾಯುದ್ಧವು ಜನತೆಯಲ್ಲೆಲ್ಲ ತಳಮಳಮಳವನ್ನುಂಟುಮಾಡಿತ್ತು. ಟಿಳಕ್ ಗೋಖಲೆಯವರಂತಹ ಹಿರಿಯ ನಾಯಕರು ಕಳೆದುಹೋಗಿದ್ದರು. ದಿಗಂತದ ಮೇಲೆ ಮಹಾತ್ಮಜಿಯವರ ಹೊಸ ಬೆಳಕು ಕಾಣಿಸುತ್ತಿತ್ತು. ಈ ಸಂಗತಿಗಳು ಈ ಕಾಲದ ಮೊದಲ ಪಾದವು ಮುಗಿದುದನ್ನು ಸೂಚಿಸುತ್ತಿದ್ದವು.

ಕವಿತೆ

ಹೊಸಮರಾಠಿ ಕವಿತೆಯ ಯುಗವು ೧೮೮೦ ರಲ್ಲಿ ಕೇಶವಸುತರ ಕೃತಿಗಳಿಂದ ಮೊದಲಾಯಿತು; ಅಥವಾ, ಜನರ ಮಾತಿನಲ್ಲಿ ಹೇಳುವುದಾದರೆ 'ತುತಾರಿ' ಎಂಬ ಅವರ ಕವಿತೆಯ ತುತ್ತೂರಿರವದಿಂದ ಆರಂಭಿಸಿತು. ಮಹಾರಾಷ್ಟ್ರದಲ್ಲಿ ಒಂದು ಹೊಸ ಎಚ್ಚರ ಆಗ ಉಂಟಾಗಿತ್ತು. ಅದನ್ನು ಉಂಟುಮಾಡಿದ್ದವರು ರಾನಡೆ, ಟಿಳಕ್, ಆಗರ್‌ಕರ್, ಗೋಖಲೆ ಮುಂತಾದ ಗಣ್ಯ ನಾಯಕರು. ಕೇಶವಸುತರು ಇಂಗ್ಲಿಷ್ ಸಾಹಿತ್ಯದ ವ್ಯಾಸಂಗ ಮಾಡಿದ್ದರು. ಈ ನಾಯಕರ ಉಪದೇಶಗಳ ಪರಿಚಯವೂ ಅವರಿಗಿತ್ತು. ಹೊಸ ಬದುಕು ಹೊಸ ಧ್ಯೇಯಗಳ ಪ್ರಭಾವ ಅವರ ಮೇಲೆ ಬಿದ್ದಿತ್ತು. ಆದುದರಿಂದ ಹೊಸ ಭಾವನಾ ಪ್ರಪಂಚಕ್ಕೆ ಒಂದು ಶಕ್ತಿಯುತವಾದ ಅಭಿವ್ಯಂಜನೆಯನ್ನು ಹೊಮ್ಮಿಸಿದರು. ಅದರ ಧ್ವನಿಯಾದರು; ನುಡಿಯಾದರು. ಅವರ ವಿಷಯ, ಛಂದಸ್ಸು, ಭಾವಗಳನ್ನು ವ್ಯಕ್ತಗೊಳಿಸುವ ರೀತಿ—ಇವೆಲ್ಲ ಜನರಿಗೆ ತೀರ ಹೊಸದು. ಆದ್ದರಿಂದ ಮರಾಠಿ ಓದುವ ಜನರ ಗಮನವನ್ನು ಅವರು ಆಕರ್ಷಿಸಿದರು. ಅದೇ ಕಾಲದಲ್ಲಿ ಹುಟ್ಟಿ ಕವಿತೆಗಳನ್ನು ಬರೆಯಲು ಟಿಳಕ್, ದತ್ತ, ವಿನಾಯಕ, ಮಾಧವಾನುಜ, ಚಂದ್ರಶೇಖರ, ತಾಂಬೆ ಮುಂತಾದ ಯುವಕ ಕವಿಗಳು ಕೇಶವಸುತರ ಜೊತೆಗೆ ಸೇರಿಕೊಂಡರು. ಅವರ ಧ್ವನಿಗಳು ಇವರ ಉಚ್ಚಸ್ವರಕ್ಕೆ ಸೇರಿದವು. ಕೇಶವಸುತರು ಒಂದು ಮಹಾಶಕ್ತಿಯ ಹಾಗಿದ್ದರು. ಹಿಂದಿನ ಸಂಪ್ರದಾಯಕ್ಕೆ ವೀರಪ್ರತಿಭಟನೆಯನ್ನು ಮಾಡಿದರು. ಅವರೇ ಹೊಸ ಸಾಹಿತ್ಯಪ್ರಪಂಚದಲ್ಲಿ

ಮೊದಲಿಗರು. ತುತಾರಿಯ ಮೂಲಕ ಸಮಾಜಸಂಸ್ಕರಣವನ್ನು ಎತ್ತಿ ಹಿಡಿದರು. ಅಲ್ಲದೆ ತಮ್ಮ 'ವಾತಚಕ್ರ', 'ಸ್ಫೂರ್ತಿ' ಮುಂತಾದ ಇತರ ಕವನಗಳ ಮೂಲಕ ಯುವಕರ ಮನಸ್ಸಿಗೆ ಉಜ್ವಲತೆ ತಂದುಕೊಟ್ಟರು. ಹೀಗೆ, ಸಹಜವಾಗಿ, ಅವರು ಹೊಸ ಮರಾಠಿ ಸಾಹಿತ್ಯಕ್ಕೆ ದಾರಿಹಾಕಿ ನಡೆದ ಮುಂದಾಳಾದರು. ಇನ್ನು ಬೇರೆ ಕಾರಣಗಳೂ ಉಂಟು. ಕೇಶವಸುತರ ಕವಿತೆಗಳ ವಿಷಯಗಳು ಅನೇಕ; ಮಾನವ ಜನ್ಮದ ಅನೇಕ ಮುಖಗಳ ದರ್ಶನ ಅಲ್ಲಿ ಕಾಣುತ್ತದೆ. ಆದುದರಿಂದ ಆತನ ಬೇರೆ ಬೇರೆ ರೀತಿ ಮಾರ್ಗಗಳನ್ನು ಬೆಳಸಲು ಮುಂದಿನ ತಲೆಮೊರೆಯಲ್ಲಿ ಬರೆದ ಕವಿಗಳಿಗೆ ಮುಂದಿನ ನಲವತ್ತು ವರುಷಗಳ ಕಾಲ ಹಿಡಿಯಿತು. ಈ ಕವಿಗಳಿಗೆ ತಮ್ಮದೇ ಆದ ವಿಶೇಷ ವ್ಯಕ್ತಿತ್ವವೇನೋ ಇತ್ತು. ಅವರದೇ ಆದ ಭಾವಸಂಪತ್ತಿ ಇತ್ತು. ಆದರೆ ಮುಂದಾಳಾಗಿ ನುಗ್ಗಿದ ಈತನ ಸತ್ವವಾಗಲಿ, ಶಕ್ತಿಯಾಗಲಿ ಇರಲಿಲ್ಲ. ಉದಾಹರಣೆಗೆ ಟಿಳಕರಲ್ಲಿ ಧರ್ಮದ ಸತ್ವಾಂಶ ಅಧಿಕ; ದತ್ತರಲ್ಲಿ ಶಿಶುಗೀತಗಳ ಅಂಶ ವಿಶೇಷ; ವಿನಾಯಕರಲ್ಲಿ ಇತಿಹಾಸದ ಸಂಗತಿಗಳನ್ನು ಕುರಿತ ಕವಿತೆಗಳು ಬಹಳ. ಮಾಧವಾನುಜರಲ್ಲಿ ತತ್ವಮೀಮಾಂಸ ಭಾಗ ಹೆಚ್ಚು; ಚಂದ್ರಶೇಖರರಿಗೆ ಪ್ರಕೃತಿಯ ನಡುವೆ ಜೀವಿಸುವ ಸಾಮಾನ್ಯ ಜನರ ಜೀವನ ಚಿತ್ರಗಳನ್ನು ಕೊಡುವುದರಲ್ಲಿ ಆಸಕ್ತಿ; ತಾಂಬೆ ಅವರ ಪ್ರೇಮಗೀತಗಳು ವಿಶೇಷವಾದವು. ತಮ್ಮ ತಮ್ಮ ಕೃತಿಮಾರ್ಗಗಳಲ್ಲಿ ಅವರು ನಿಷ್ಣಾತರಾಗಿ ಇದ್ದರೂ ಅವುಗಳಲ್ಲಿ ಕೇಶವಸುತರ ರೀತಿ ಧಾತು ಇದ್ದುವೆನ್ನಬೇಕು. ಹಾಗೆಯೆ ಮರಾಠಿ ಕವಿತೆಯು ಎಲ್ಲ ಕಡೆಗಳಲ್ಲಿಯೂ ಬೆಳವಣಿಗೆಗೊಳ್ಳುತ್ತಿತ್ತು, ಸಂಪನ್ನವಾಗುತ್ತಿತ್ತು.

ಕೇಶವಸುತರು ೧೯೦೫ರಲ್ಲಿ ತೀರಿಕೊಂಡಾಗ ಈ ಕಾಲಮಾನದ ಮೊದಲಭಾಗ ಮುಗಿಯಿತು. ಈ ಶತಮಾನದ ಮೊದಲ ದಶಕದಲ್ಲಿ ಯುವಕರಲ್ಲಿ ರಾಷ್ಟ್ರಜೀವನದ ಉತ್ಸಾಹಗಳನ್ನು ಕುರಿತು ದೊಡ್ಡ ಶ್ರದ್ಧೆ ಹುಟ್ಟಿಕೊಂಡಿತ್ತು. ರಾಷ್ಟ್ರದ ಬದುಕು ರಾಷ್ಟ್ರೀಯ ಶಿಕ್ಷಣ, ರಾಷ್ಟ್ರದ ಸ್ವಾತಂತ್ರ್ಯ ಮುಂತಾದುವನ್ನು ಕುರಿತು ಅವರ ಮನಸ್ಸು ಕುದಿಯುತ್ತಿದ್ದಿತು. ತರುಣ ಕವಿಗಳಾದ ಸಾವರ್‌ಕರ್ ಮತ್ತು ಅವರ ಸಹೋದ್ಯೋಗಿಯಾದ ಗೋವಿಂದ್ ಶಾಹಿರ್ ಇಬ್ಬರೂ ಮುಂದೆ ಬಂದು ಈ ರಾಷ್ಟ್ರಾಭಿಮಾನವನ್ನು ತುಂಬಿ ಮೆರೆಸುವ ಗೀತಗಳನ್ನು ಬರೆದರು. ಕೇಶವಸುತರ ಬೇರೆ ಬೇರೆ ಕಾವ್ಯ ಲಕ್ಷಣಗಳನ್ನು ರೆಂಡಾಲಕರ್, ಗೋವಿಂದಾಗ್ರಜ, ಬೀ, ಬಾಲಕವಿ ಠೊಂಬ್ರೆ ಮುಂತಾದ ಗಣ್ಯಕವಿಗಳು ಮುಂದುವರಿಸಿದರು. ಆತನು ಬಳಸಿದ ಹೊಸ ಛಂದೋಜಾತಿಗಳು ಹೆಚ್ಚಿನ ಕುಶಲತೆಯಿಂದ ಇವರ ಕೈಯಲ್ಲಿ ಪಳಗಿದವು. ಕಲೆಗಾರಿಕೆಯೂ ಭಾವತೀವ್ರತೆಯೂ ಅವಕ್ಕೆ ಸೇರಿದವು. ಕವಿತೆ ಹೆಚ್ಚು ಜನಪ್ರಿಯವಾಗಿ ಹಬ್ಬಿತು.

ರೆಂಡಾಲಕರ್ ಗೋವಿಂದಾಗ್ರಜ ಇಬ್ಬರೂ ಪ್ರೇಮಗೀತಗಳನ್ನು ಬರೆದರು; ಬೀ ಅವರು ಅನುಭಾವದ ಮತ್ತು ಚರಿತ್ರೆಗೆ ಸಂಬಂಧಿಸಿದ ಜಾನಪದಗೀತೆಗಳನ್ನು ಬರೆದರು. ತೋಂಬ್ರೆಯವರದು ಪ್ರಕೃತಿಸೌಂದರ್ಯವನ್ನು ಕುರಿತ ಕವಿತೆ. ಗೋವಿಂದಾಗ್ರಜ ಮತ್ತು ತೋಂಬ್ರೆಯವರ ಚಿತ್ರಕಲ್ಪನಾಶಕ್ತಿ ಆಧುನಿಕ ಮರಾಠಿಯಲ್ಲಿ ಸಾಟಿಯಿಲ್ಲದುದು.

ಆದರೆ ನಮ್ಮ ಸಾಹಿತ್ಯದ ದುರದೃಷ್ಟದಿಂದ ರೆಂಡಾಲಕರ್, ಗೋವಿಂದಾಗ್ರಜ ಮತ್ತು ತೋಂಬ್ರೆ ಈ ಮೂವರೂ ಚಿಕ್ಕ ವಯಸ್ಸಿನಲ್ಲಿಯೇ ಕಾಲವಶರಾದರು. ಇಲ್ಲಿಗೆ ಈ ಕಾಲಮಾನಕ್ಕೆ ಸಂಬಂಧಿಸಿದ ಎರಡನೆಯ ಭಾಗ ಮುಗಿಯಿತು.

ಮೊದಲನೆಯ ಗುಂಪಿಗೆ ಸೇರಿದ ಕವಿಗಳಲ್ಲಿ ಚಂದ್ರಶೇಖರ್ ಮತ್ತು ತಾಂಬೆ ಮೂರನೆಯ ಭಾಗ ಮುಗಿಯುವವರೆಗೂ ಬದುಕಿ ಕೆಲಸಮಾಡಿದರು. ತಮ್ಮ ತಮ್ಮ ಕಾವ್ಯರೂಪಗಳಲ್ಲಿ, ರೀತಿಗಳಲ್ಲಿ ಎಂದರೆ—ಸಾಮಾನ್ಯ ಜೀವನ ಚಿತ್ರಣ ಮತ್ತು ಪ್ರೇಮ ಗೀತಗಳಲ್ಲಿ—ಉತ್ತಮ ಕೃತಿಗಳನ್ನು ನಿರ್ಮಾಣಮಾಡಿ ಹೊಸ ಕವಿತೆಗೆ ಸುಂದರವಾದ ರೂಪನ್ನು ತಂದುಕೊಟ್ಟರು. ಪ್ರೇಮಗೀತಗಳ ರಚನೆಯಲ್ಲಿ ತಾಂಬೆ ಅವರು ಎದ್ದು ಕಾಣುವ ವ್ಯಕ್ತಿ. ಇಂದಿಗೂ ಅವರ ಶಕ್ತಿಯನ್ನು ಮೀರಿಸಿದವರಿಲ್ಲ. ಅವರಲ್ಲಿ ಶಾಶ್ವತವಾಗಿ ಉಳಿಯಬಲ್ಲ ಶಕ್ತಿ ಇದೆ. ವ್ಯಕ್ತಿಗೆ ಸಂಬಂಧಿಸುವ ಅಂಶಗಳಿಗಿಂತ ಸಮಗ್ರಮಾನವತೆಗೆ ಸಂಬಂಧಿಸಿದ ಭಾವರೂಪಣವಿದೆ.

೧೯೨೦ ರೊಡನೆ ಹೊಸಕಾಲ ಆರಂಭವಾಯಿತೆಂದೆ. ಇದು ಮರಾಠಿ ಕವಿತೆಯ ಚರಿತ್ರೆಯಲ್ಲಿ ಎರಡನೆಯ ಘಟ್ಟ. ಈ ಕಾಲದ ಯುವಕ ಕವಿಗಳೆಂದರೆ ಶ್ರೀಧರ ರಾನಡೆ, ಮನೋರಮಾಬಾಯಿ, ರಾನಡೆ, ಗಿರೀಶ್, ಮಾಧವ ಜೂಲಿಯನ್, ಯಶವಂತ್, ಘಾಟೆ, ಗೋಖಲೆ, ಮಾಡಖೋಲ್ಕರ್. ಒಬ್ಬಿಬ್ಬರನ್ನು ಬಿಟ್ಟರೆ ಅವರಲ್ಲಿ ಬಹುಶಃ ಎಲ್ಲರೂ ಆಗತಾನೆ ಹೊಸದಾಗಿ ಕಾಲೇಜು ವ್ಯಾಸಂಗದಿಂದ ಹೊರಬಿದ್ದವರು. ಅವರಲ್ಲಿ ಹೊಸಜೀವನದ ಭಾವನೆ ತುಂಬಿಬಂದಿತ್ತು. ಅವರಲ್ಲಿ ಹಲವರು, ಉದಾಹರಣೆಗೆ ರಾನಡೆ, ಗಿರೀಶ್, ಘಾಟೆ—ಇವರು ಕವಿಗಳೆಂಬ ಕೀರ್ತಿಯನ್ನು ಅಷ್ಟು ಹೊತ್ತಿಗಾಗಲೆ ಸ್ಥಾಪಿಸಿಕೊಂಡಿದ್ದರು. ಈ ತರುಣ ಕವಿಗಳು ಸೇರಿ ಒಂದು ಮಂಡಲವನ್ನು ಮಾಡಿಕೊಂಡರು. ಭಾನುವಾರದ ಚಾ ಸಮಾಜ (Sun. Tea) ಎಂದು ಆ ಮೇಲೆ ಜನರು ಅದನ್ನು ಕರೆದರು. ಅಲ್ಲಿ ಕವಿತೆಯ ವಿವಿಧ ಲಕ್ಷಣಗಳನ್ನು ಕುರಿತು ಸಾಮಾನ್ಯವಾಗಿಯೂ ಹೊಸಕವಿತೆಯನ್ನು ಕುರಿತು ವಿಶೇಷವಾಗಿಯೂ ಚರ್ಚೆಗಳು ನಡೆಯುತ್ತಿದ್ದವು. ಅವರು ಬಗೆಬಗೆಯ ಪ್ರಯೋಗ ಪರೀಕ್ಷೆಗಳನ್ನು ಮಾಡಿದರು. ಹೊಸ ವಿಷಯಗಳನ್ನು ಕುರಿತು ಕವಿತೆ ಬರೆದರು. ಹೊಸ ಛಂದಸ್ಸುಗಳನ್ನು ಬಳಕೆಗೆ ತಂದರು, ಕವಿತೆಯಲ್ಲಿ ಕಲೆಗಾರಿಕೆ ಬೆಳಸಿದರು. ಒಳಹೊರ ಎರಡು ಅಂಶಗಳಲ್ಲಿಯೂ ಕವಿತೆಯ

ಒಟ್ಟು ರೂಪವನ್ನು ಮಾರ್ಪಡಿಸಿದರು. ಈ ಮಂಡಲಿಗೆ ಆ ಮೇಲೆ ರವಿಕಿರಣ ಮಂಡಲ ವೆಂದು ಹೆಸರಾಯಿತು. ಭಾನುವಾರದ ಚಾ ಸಂಬಂಧದಿಂದ ರವಿಯೆಂಬ ಭಾಗವೂ ಕಿರಣ ವೆಂಬ ಹೆಸರು ಒಂದು ಸಿಡಿಮದ್ದಿನ ಚೆಂಡಿನಂತೆ ಆ ಮಂಡಲ ಮೊದಲು ಎಸೆದ ಅವರ ಮೊದಲನೆಯ ಸಣ್ಣ ಪುಸ್ತಕದ ಕಿರಣವೆಂಬ ಹೆಸರಿನ ಭಾಗಕ್ಕೂ ಸುಮಾರು ಕಾರಣ. ಮಂಡಲಕ್ಕೆ ವಿಶೇಷವಾದ ಭಾವಪ್ರಪಂಚ ಒಂದಿತ್ತು. ಅದು ಅದ್ಭುತಚಿತ್ತಾಕರ್ಷಕ ವಾದ ಜೀವನವನ್ನು ಕುರಿತದ್ದು. ಆದುದರಿಂದ ಆಗಾಗ್ಗೆ ಹೊಸ ಅದ್ಭುತ-ರಮ್ಯ ಕವಿತೆಯನ್ನು ಪ್ರಕಟಿಸಿತು. ಮಂಡಲದ ಕಾರ್ಯ ಅತ್ಯತಿಶಯವಾದುದು. ಈ ವರೆಗೆ ಅದು ಎಂಬತ್ತು ಪುಸ್ತಕಗಳನ್ನು ಪ್ರಕಟಿಸಿದೆ. ಜನಕ್ಕೆ ಭಾವಗೀತಗಳನ್ನೂ ನಿಡು ಗವನಗಳನ್ನೂ ಶಾಸ್ತ್ರಗ್ರಂಥಗಳನ್ನೂ ಕಾದಂಬರಿಗಳನ್ನೂ ಸರಳ ಪ್ರಬಂಧಗಳನ್ನೂ ವಿಮರ್ಶೆ ಸಣ್ಣಕಥೆ ಮತ್ತು ಇತರ ಬಗೆಯ ಕೃತಿಗಳನ್ನೂ ದೊರಕಿಸಿದೆ. ಬದುಕನ್ನು ಕುರಿತು ಹೊಸದೃಷ್ಟಿ, ಕಲಾಪೂರ್ಣವಾದ ಚಿತ್ತವೃತ್ತಿ, ಭಾವತೀವ್ರತೆ, ಪರಿಣತವಾದ ಉಕ್ತಿಶಕ್ತಿ ಸರ್ವವ್ಯಾಪಿಯಾದ ಅನುಭೂತಿ ಇವು ಮಂಡಲದ ಕೆಲವು ವಿಶೇಷ ಲಕ್ಷಣಗಳು.

೧೯೨೦ರಿಂದ ೩೫ರವರೆಗೆ ರವಿಕಿರಣಮಂಡಲದ ಕಾಲ ಎನ್ನುವುದುಂಟು. ಏಕೆಂದರೆ ಯುವಕರಾಗಲಿ ವಯಸ್ಸಾದವರಾಗಲಿ ಎಲ್ಲರ ಬರವಣಿಗೆಯ ಮೇಲೂ ಮಂಡಲ ತನ್ನ ಅಧಿಕಾರವನ್ನೂ ಪ್ರಭಾವವನ್ನೂ ನಡಸಿತು. ಅದು ನವಮರಾಠಿ ಕವಿತೆ ಯನ್ನು ಜನತೆಯಲ್ಲಿ ಪ್ರಚಾರಮಾಡುವ ಕೆಲಸವನ್ನು ಕೈಗೊಂಡಿತು. ಕವಿತೆಗಳನ್ನು ಜನಗಳ ಮುಂದೆ ಓದಿ ಹೊಸ ಛಂದಸ್ಸುಗಳನ್ನು ಜನಗ್ರಾಹ್ಯವಾಗಿ ಜನಪ್ರಿಯವಾಗಿ ಮಾಡಿತು. ೧೯೨೮ರಲ್ಲಿ ಮನೋರಮಾಬಾಯಿಯವರ ಜೀವನ ಮುಗಿಯಿತು. ಮಾಧವ ಜೂಲಿಯನ್ ಅವರು ೧೯೩೯ರಲ್ಲಿ, ಅವರ ಕೀರ್ತಿ ವೈಭವದ ತುದಿಗೆ ಏರಿದ್ದಾಗ ತೀರಿಕೊಂಡರು. ಇದರಿಂದ ಮಂಡಲಕ್ಕೆ ಬಹುದೊಡ್ಡ ಪೆಟ್ಟುಬಿದ್ದಿತು. ಮಂಡಲದ ಇತರ ಸದಸ್ಯರು ಇನ್ನೂ ಕೃತಿಗಳನ್ನು ಬರೆಯುತ್ತ ಪುಸ್ತಕಗಳನ್ನು ಪ್ರಕಟಿಸುತ್ತ ಇದ್ದಾರೆ. ಮೊದಲು ಈ ಸದಸ್ಯರು ಒಟ್ಟಿಗೆ ಸೇರಿದುದು ಸ್ನೇಹಗಳನ್ನು ಬೆಳಸುವು ದಕ್ಕೆ. ಸಾಹಿತಿಗಳಾಗುವ ಕೆಲಸ ಎರಡನೆಯದು, ಆಮೇಲಿನದು. ಆದುದರಿಂದ ಆಧುನಿಕ ಮರಾಠಿ ಸಾಹಿತ್ಯದಲ್ಲಿ ಈ ರವಿಕಿರಣಮಂಡಲವನ್ನು ಸಾಹಿತಗಳ ಒಂದು 'ಸಮಗ್ರಕುಟುಂಬ' ಎಂದು ಕರೆದಿದ್ದಾರೆ.

ಇದೇಕಾಲದಲ್ಲಿ (೧೯೨೦-೩೫) ಇತರ ಉತ್ತಮಕವಿಗಳು ಸ್ವತಂತ್ರವಾಗಿ ರಚಿಸಿರುವರು. ಅವುಗಳಲ್ಲಿ ಕಲೆಯ ವಿಲಾಸವಿತ್ತು, ಅನನ್ಯವಾದ ಹೊಸ ಸ್ಫೂರ್ತಿ ಇತ್ತು, ಗಣ್ಯತೆ ಇತ್ತು. ಅವರ ಅಭಿಮಾನದಿಂದ ಹೇಳಬಹುದಾದ ಹೆಸರುಗಳು ಪ್ರೇಮಗೀತೆಗಳ

ತಾಂಬೆ, ಅಣಕಗಳ ಕೇಶವಕುಮಾರ, ಚಾರಿತ್ರಕ ಕೃತಿ ಮತ್ತು ಜನಪದ ಗೀತಗಳಿಗೆ ಮಾಧವ ಕಾಟದರೆ, ಶಿಶುಗವಿತೆಗಳಿಗೆ ಮಾಯದೇವ ಮತ್ತು ಅಜ್ಞಾತವಾಸಿ, ಪ್ರೇಮ ಗೀತೆ ಮತ್ತ ಮುಕ್ತಛಂದಕ್ಕೆ ಅನಿಲ್, ಕೊಂಕಣಗೀತೆಗಳಿಗೆ ಆನಂದ, ವಿಡಂಬನಗಳಿಗೆ ಕಾವ್ಯವಿಹಾರಿ. ಸಂಜೀವನಿ ಮರಾಠೆ ಅವರ ಹೆಸರು ಪ್ರೇಮಗೀತಾರಚನೆಯಲ್ಲಿ ಹೆಸರಾದುದು. ಇವರ ಕವಿತೆಗಳೆಲ್ಲ ಆಧುನಿಕ ಮರಾಠಿ ಕವಿತೆಗೆ ಒಂದು ಹೊಸ ಸಂಪತ್ತಿಯನ್ನು ತಂದು ಸೇರಿಸಿವೆ.

ಈ ವರೆಗೂ ಗಾಂಧೀ ತತ್ತ್ವೋಪದೇಶಗಳಾಗಲಿ ಸಮತಾವಾದದ ಪ್ರಭಾವ ವಾಗಲಿ ಮಹಾರಾಷ್ಟ್ರದಲ್ಲಿ ನಟ್ಟು ನಿಲ್ಲಲಿಲ್ಲ. ೧೯೩೫ನೆಯ ವರ್ಷದಲ್ಲಿ ಈ ತತ್ವವು ನೆಲಸಿ ನಿಲ್ಲುವಂತಾಯಿತು. ಹಾಗೆಯೆ ಕವಿತೆಗೆ ಒಂದು ಹೊಸ ಧಾತು ಬಂದು ಸೇರಿತು. ಆಗ ಪುನಃ ಯುವಕ ಕವಿಗಳ ಇನ್ನೊಂದು ಗುಂಪು ಸೇರಿತು. ಸ್ಫೂರ್ತಿಗೊಂಡು ಕೃತಿನಿರ್ಮಾಣ ಮಾಡಿತು. ಅನಂತ ಕಾಣೇಕರ್, ಕುಸುಮಾಗ್ರಜ, ಕಾಳೇಲೆ, ಕಾಂತ, ನಿಕುಂಬ ಎಂಬ ಹೆಸರಿನ ಉತ್ತಮ ಸಾಹಿತಿವರ್ಗ ಅವರು. ಚಾಂದ್‌ರಾತ್ ಎಂಬ ಕೃತಿಯಲ್ಲಿ ಈ ಹೊಸ ದರ್ಶನವನ್ನು ಮೊದಲು ನುಡಿಸಿದವರು ಅನಂತ ಕಾಣೇಕರ್ ಅವರು. ೧೯೩೧ರಿಂದ ಇಂದಿನ ವರೆಗೂ ಕೆಲಸಮಾಡಿದ ಈ ಹೊಸ ಯುಗದ ಆಶ್ಚರ್ಯ ಇದು: ಪ್ರತಿ ಕವಿಯೂ ಸ್ವತಂತ್ರನಾಗಿ ತನ್ನ ದಾರಿ ತುಳಿಯುತ್ತಿದ್ದಾನೆ. ಎಲ್ಲರೂ ಒಂದೆ ಗುರಿಯನ್ನು ಕುರಿತು ಮಾತನಾಡುತ್ತಿದ್ದರೂ ಒಂದೆ ಜೀವನತತ್ವವನ್ನು ಉಸಿರುತ್ತಿದ್ದರೂ ಒಬ್ಬೊಬ್ಬರದೂ ಒಂದೊಂದು ಬಗೆ. ಅವರ ಚಿತ್ರಕಲ್ಪನೆ, ಭಾವ ತೀಕ್ಷ್ಣತೆ, ಪದಬಂಧ, ಕತೆಗಾರಿಕೆ ಈ ಎಲ್ಲ ಅಂಶಗಳೂ ಸಹಜ ಸುಂದರವಾದುವು; ಕವಿತೆಗಳು ನೇರವಾಗಿ ಹೃದಯವನ್ನು ಮುಟ್ಟುತ್ತವೆ. ಅವರ ಮನಸ್ಸು ಭಾವನಾ ಮಯವಾದುದು, ಧೀರವಾದುದು. ಓದುವವರ ಮನಸ್ಸನ್ನು ಹೊಕ್ಕು ಪ್ರಭಾವ ಗೊಳಿಸಬಲ್ಲುದು. ಕುಸುಮಾಗ್ರಜರ ವಿಶಾಖಾ ಎಂಬ ಕವಿತೆಯೂ ನಿಕುಂಬರ 'ಉಜ್ವಲಾ' ಎಂಬುದೂ ಜನರ ಮನಸ್ಸಿನಲ್ಲಿ ಉನ್ನತವಾದ ಆಶೋತ್ತರಗಳನ್ನು ಹುಟ್ಟಿ ಸಿವೆ. ಪ್ರಪಂಚದ ಕವಿತಾಸಾಧನೆಯಲ್ಲಿ ಆಧುನಿಕ ಮರಾಠಿ ಕವಿತೆಯು ತನಗೆ ಒಂದು ಸ್ಥಾನವನ್ನು ಬೇಗ ಸಂಪಾದಿಸಿಕೊಳ್ಳುವುದೆನ್ನುವುದಕ್ಕೆ ಬೇಕಾದಷ್ಟು ಆಧಾರವಿದೆ.

ಕಾದಂಬರಿ

ಹರಿನಾರಾಯಣ ಆಪ್ಟೆಯವರ ಬರವಣಿಗೆಯ ಮೂಲಕ ಹೊಸ ಮರಾಠಿ ಸಾಹಿತ್ಯದಲ್ಲಿ ಕಾದಂಬರಿ ಅಂತರ್‌ರಾಷ್ಟ್ರೀಯ ಉನ್ನತಿಗೆ ಏರಿತ್ತು. ಅದರ ಮೂಲವು ನಮ್ಮ ಕಹಾನಿ ಎಂಬ ಜನಪದ ಕಥೆ ಬಖರುಗಳು, ಪಂಚತಂತ್ರದ ಕಥೆಗಳು,

ಮಹಾನುಭಾವರ ಕಥಾ ಗ್ರಂಥಗಳು ಮುಂತಾದವುಗಳಲ್ಲಿ ಇದೆ. ಇವುಗಳನ್ನು ಪರಿಶೀಲಿಸಿದರೆ ೧೮೦೦ ರಿಂದ ೧೮೬೦ ರವರೆಗೆ ಭಾಷಾಂತರದ ಯುಗ ಎನ್ನಬಹುದು. ೧೮೬೦ ರಿಂದ ೧೮೭೫ ವಿಚಿತ್ರ ಕಟ್ಟುಕಥೆಗಳ ಕಾಲ ಎನ್ನಬಹುದು. ೭೫ ರಿಂದ' ೮೫ ಐತಿಹಾಸಿಕ ಕಾದಂಬರಿಗಳದು. ೧೮೮೫ ರಿಂದ ೧೯೧೫ ವಾಸ್ತವಕಾದಂಬರಿಗಳದು ; ೧೯೧೫ ರಿಂದ ೧೯೨೫ ತತ್ವಾತ್ಮಕ ಕಾದಂಬರಿಗಳದು ; ೧೯೨೫ ರಿಂದ, ೩೫ ಅದ್ಭುತ ರಮ್ಯ ಕಾದಂಬರಿಗಳದು. ೧೯೩೫ ರಿಂದೀಚೆಗೆ ರಾಜಕೀಯ ಕಾದಂಬರಿಗಳದು. ಬಾಬಾ ಪದ್ಮಣಜಿ ಅವರ ಯಮುನಾಪರ್ಯಟನ ಎಂಬುದು ಮೊದಲು ಬರೆದ ಕಾದಂಬರಿ ಎಂದು ತೋರುವುದಾದರೂ ವಾಸ್ತವ ಕಾದಂಬರಿಗಳ ನಿಜವಾದ ಕಾಲ ಹರಿಭಾವು ಆಪ್ಟೆ ಅವರು ಅಲ್ಲಿಂದೀಚೆಗೆ ಬರೆದ 'ಪಣ್ ಲಕ್ಷ್ಯಾತ್ ಕೋಣ್ ಘೇತೋ' ಎಂಬ ಮಹಾ ಕಾದಂಬರಿಯಿಂದ ಆರಂಭವಾಗುವುದು. ಹರಿಭಾವು ಅವರು ಜೀವನವನ್ನು ಸಮಗ್ರವಾಗಿ ನೋಡಿದ್ದವರು. ತತ್‌ಕಾಲದ ಜೀವನ ಚಿತ್ರಗಳನ್ನು ಕಾಣಿಸುವುದರಲ್ಲಿ ಅವರ ದೃಷ್ಟಿ ಸೂಕ್ಷ್ಮವಾದುದು, ತೀಕ್ಷ್ಣವಾದುದು, ಮರ್ಮಸ್ಪರ್ಶಿಯಾದುದು. ಅವರದು ಸಿದ್ಧಹಸ್ತ. ಕಾದಂಬರಿ ಬರೆಯುವ ಕಲೆಯನ್ನು ಅವರು ಒಂದು ಪರಿಣತ ಪೂರ್ಣರೂಪಕ್ಕೆ ತಂದರು. ಹಿರಿಯ ಗ್ರಂಥಕಾರರೆಂದು ಅವರ ಹೆಸರು ಎಂದಿಗೂ ನಿಲ್ಲುವಂಥಾದ್ದು.

ಹರಿಭಾವು ಅವರ ಕಾಲದ ತರುವಾಯ ರಾಗಿಣಿಯ ಕಾಲ ನಡೆಯಿತು. ರಾಗಿಣಿ ಪ್ರೊ. ವಾಮನರಾವ್ ಜೋಶಿ ಅವರ ನಿರ್ಮಿತಿ. ಅದು ಈ ಕಾಲದಲ್ಲಿ ಅತ್ಯಂತ ಜನಪ್ರಿಯವಾದ ಪ್ರತಿನಿಧಿಯಂತಿರುವ ಕಾದಂಬರಿ. ಹರಿಭಾವು ತರುವಾಯ ಮಹಾರಾಷ್ಟ್ರ ಕಾದಂಬರಿಯ ದೃಷ್ಟಿ ಹೆಚ್ಚು ತಾತ್ವಿಕವೂ ಯುಕ್ತಿನಿಷ್ಠವೂ ಆಯಿತು. ಆದ್ದರಿಂದ ಪ್ರೊ. ಜೋಶಿಯವರು ಆ ಕಾಲದ ಸೃಷ್ಟಿಯಾದದ್ದು ಸರಿಯೇ. ಪ್ರೊ. ಜೋಶಿಯವರು ತಮ್ಮ ಕಾಲದ ಸಮಸ್ಯೆಗಳೊಡನೆ ಬಲವಾಗಿ ಸೆಣಸಿದರು. ಅವರು ಮಾಡಿದ ತೀರ್ಮಾನಗಳೆಲ್ಲ ಯುಕ್ತಿಸಿದ್ಧವಾದ ತೀರ್ಮಾನ ಗಳು. ಅವರ ಪಾತ್ರಗಳು ಸಭೆಯಲ್ಲಿಯೊ ಅಧಿವೇಶನದಲ್ಲಿಯೊ ಕುಳಿತವು. ವಿಷಯ ವನ್ನು ಚರ್ಚಿಸಿ ನಿರ್ಣಯಗಳನ್ನು ಕಂಡುಹಿಡಿಯಲು ಪ್ರಯತ್ನಿಸುವಂತೆ ರೂಪಣ ಮಾಡುವುದು ಅವರ ಮಾರ್ಗ. ಈ ಬಗೆಯ ರಚನಾತಂತ್ರ ಕೆಲವು ವೇಳೆ ಬೇಸರ ತರಬಲ್ಲದು. ಆದರೂ ಸಾಮಾಜಿಕ ಮತ್ತು ಮಾನಸಿಕ ದೃಷ್ಟಿಗಳಿಂದ ಪರೀಕ್ಷಿಸಿದರೆ ಇಂದಿಗೂ ಅವರ ಕಾದಂಬರಿಗಳು ಕುತೂಹಲಜನಕವಾಗಿವೆ. ಅವುಗಳನ್ನು ಮೀರಿ ಸಿರುವುದು ಬೇರೊಂದಿಲ್ಲ. ಅವರು ಮೊದಲು ಸೃಷ್ಟಿಸಿದುದು ಪಾತ್ರಗಳನ್ನು, ಸಮಸ್ಯೆ ಗಳನ್ನು ;—ಆ ಬಳಿಕ ಸನ್ನಿವೇಶಗಳನ್ನು ಹುಡುಕತೊಡಗುತ್ತಿದ್ದರು. ಅವರ 'ರಾಗಿಣಿ'

'ಸುಶೀಲೇಚ ದೇವ್' 'ಇಂದು ಕಾಳೆ' 'ಸರಳಾ ಭೋಳೆ'—ಇವು ಈ ಕಾಲದ ಉತ್ತಮ ಕೃತಿಗಳು.

ಜೋಶಿಯವರೊಡನೆ 'ಜಗಹೇ ತ್ರಿವಿಧ ಆಹೆ' ಬರೆದ ಎಸ್. ಕೆ. ದಾಮ್ಲೆ ಅವರ ಹೆಸರನ್ನೂ 'ದುಟಪ್ಪೀಕಿ ದುಹೇರಿ' ಮತ್ತು 'ಶಾಮಸುಂದರ್' ಅನ್ನು ಭರೆದ ಎಸ್. ಕೆ. ಕೊಲ್‌ಹಟ್‌ಕರ್ ಅವರದನ್ನೂ 'ಮಾಝೆ ರಾಮಾಯಣ' ಅನ್ನು ಬರೆದ ಟಿ. ಎ. ತುಳಜಾಪೂರ್‌ಕರ್ ಅನ್ನೂ , 'ಪ್ರೇಮ ಕೀ ಲೌಕಿಕ್' ಬರೆದ ಪ್ರಿನ್ಸಿಪಲ್ ಜಿ. ಸಿ. ಭಾಟೆ ಅವರನ್ನೂ ಹಲವು ಉತ್ತಮ ಕಾದಂಬರಿಗಳನ್ನು ಬರೆದ ಡಾ. ಎಸ್. ವಿ. ಕೇತ್‌ಕರ್ ಅವರನ್ನೂ ಸೇರಿಸಬೇಕು. ಇವರಲ್ಲಿ ಮರಾಠಿಯ ಶ್ರೇಷ್ಠ ಜ್ಞಾನ ಕೋಶಕಾರರಾದ ಡಾ. ಕೇತಕರ್ ಅವರು ತಮ್ಮ ಬರವಣಿಗೆಯ ಮೂಲಕ ಕಾದಂಬರಿ ಪ್ರಪಂಚದಲ್ಲಿ ಒಂದು ಕ್ರಾಂತಿಯನ್ನು ಉಂಟುಮಾಡಿದರು. ಅವರ 'ಗೊಂಡವನಾಂತೀಲ್ ಪ್ರಿಯಂವದಾ' ಮತ್ತು 'ಪರಾಗಂದ' ಮತ್ತು 'ಬ್ರಾಹ್ಮಣ ಕನ್ಯಾ' ಮುಂತಾದವು ಆ ಕಾಲದ ಸಮಾಜದ ಮೇಲೆ ಅವರು ಎಸೆದ ಸ್ಫೋಟಕಗಳೇ ಎನ್ನಬೇಕು. ಅವರ ಕಾದಂಬರಿಗಳಲ್ಲಿ ಕಥನ ತಂತ್ರವೂ ರಚನೆಯೂ ದುರ್ಬಲವಾಗಿರಬಹುದು. ಆದರೆ ಅವು ಅವರ ಬೃಹನ್ಮೂರ್ತಿತ್ವದ ಮತ್ತು ಇಂಡಿಯಾ ದೇಶದ ಒಳಗೂ ಹೊರಗೂ ಪಡೆದ ಅನುಭವಗಳ ಸಾರವಾಗಿವೆ. ಸಮಾಜವನ್ನು ಕುರಿತ ಅವರ ಟೀಕೆ ಭಾಷ್ಯಗಳು ಮನುಷ್ಯರ ಮನಸ್ಸಿನ ವಿಷಯದಲ್ಲಿ ಅವರಿಗೆ ಎಷ್ಟು ಆಳವಾದ ಪರಿಶ್ರಮವಿದೆ ಎಂಬುದನ್ನು ತೋರಿಸುತ್ತವೆ. ಅವುಗಳ ಯೋಗ್ಯತೆ ಹಿರಿದು.

ಮುಂದಿನ ಕಾಲದ ಕಾದಂಬರಿಯು ತಮ್ಮ ಕಾಲದಲ್ಲಿ ಹರಿಭಾವು ಮತ್ತು ಜೋಶಿಯವರು ಬಯಸಿ ಆಸೆಪಟ್ಟಿದ್ದ, ಬೋಧಿಸಿದ ಆದರ್ಶವಾದದ ಫಲವಾಗಿದೆ. ಈ ಕಾಲದ ಕಾದಂಬರಿಕಾರರು (೧೯೨೫—೩೫) ಸ್ತ್ರೀ ವಿದ್ಯಾಭ್ಯಾಸದ ಹಬ್ಬುಗೆ, ಸ್ತ್ರೀ ಪುರುಷರು ಧಾರಾಳವಾಗಿ ಸೇರಿ ವ್ಯವಹರಿಸುವುದು, ತಡೆದು ಆಗುವ ಮದುವೆಗಳು, ವಿಧವೆಯರ ಪುನರ್ವಿವಾಹ, ಸ್ತ್ರೀಯರ ಆರ್ಥಿಕ ಸ್ವಾಧೀನತೆ, ಈ ಸಮಸ್ಯೆಗಳನ್ನೆಲ್ಲ ಕುರಿತು ಬರೆದರು. ಚೆಲುವಾದ ಅನೇಕ ಮನೋಹರ ಕಾದಂಬರಿಗಳು ನಿರ್ಮಾಣವಾದವು. ಪ್ರೇಮಸಮಸ್ಯೆ ಈ ಎಲ್ಲದರ ಸಾರಾಂಶವಾಗಿತ್ತು. ಪ್ರೊ. ಎನ್. ಎಸ್. ಫಡಕೆ, ವಿ. ಎಸ್. ಖಾಂಡೇಕರ್, ಬಿ. ವಿ. ವರೇರ್‌ಕರ್ ಪಿ. ವೈ. ದೇಶಪಾಂಡೆ ಚಿತ್ರಗಳನ್ನು ಚಿತ್ರಿಸುವುದರಲ್ಲಿ ನುರಿತ ಕೈಗಳು. ಈ ಕಾಲದ ಕಾದಂಬರಿಯು ತಂತ್ರ, ರಚನೆ, ಕಥಾವಸ್ತುವಿನ ನೆಯ್ಗೆ, ಪಾತ್ರ ನಿರ್ಮಾಣ, ಆವರಣ ಮತ್ತು ಶೈಲಿ ಈ ಅಂಶಗಳಲ್ಲೆಲ್ಲ ಉಳಿದ ಎಲ್ಲವುಗಳನ್ನು ಮೀರಿಸುತ್ತದೆ. ಇವರಲ್ಲಿ ಪ್ರತಿಯೊಬ್ಬರಿಗೂ ಅವರದೇ ಆದ ಒಂದು ಸ್ಫುಟವಾದ ವ್ಯಕ್ತಿತ್ವವಿದೆ. ಫಡಕೆಯವರಲ್ಲಿ ಶ್ರೇಷ್ಠಶೈಲಿ,

ಖಾಂಡೇಕರ್ ಅವರಲ್ಲಿ ಸುಂದರವಾದ ಪಾತ್ರನಿರ್ಮಾಣ ಮತ್ತು ಚಿತ್ರಕಲ್ಪನೆ, ವರೇರ್‌ಕರವರ ಸರಳತೆ, ದೇಶಪಾಂಡೆ ಅವರ ಭಾವಸಮುನ್ನತಿ—ವಿಶೇಷ ಲಕ್ಷಣಗಳು. ಅವರ ಕಾದಂಬರಿಗಳು ಬೇರೆ ಭಾಷೆಗಳಿಗೆ ಪರಿವರ್ತಿತವಾಗಿರುವುದರಿಂದ ಅವರ ಕೀರ್ತಿ ಅಂತಪ್ರಾರ್ಂತೀಯವಾಗಿದೆ. ಇವರೊಡನೆ ಶಾಂತಾಬಾಯಿ ನಾಸಿಕ್‌ಕರ್, ವಿಭಾವರೀ ಶಿರೂರ್‌ಕರ್, ಗೀತಾ ಸಾನೆ ಅವರ ಹೆಸರುಗಳನ್ನು ಖಂಡಿತವಾಗಿ ಸೇರಿಸಿ ಹೇಳಬೇಕು.

ಈಗ ನಡೆಯುತ್ತಿರುವ ಕಾಲವು ರಾಜಕೀಯ ಕಾದಂಬರಿಗಳ ಕಾಲ. ಜಿ. ಟಿ. ಮಾಡಖೋಲ್ಕರ್ ಅವರು ೧೯೩೩ರಲ್ಲಿ ಮುಕ್ತಾತ್ಮಾ ಎಂಬುದರಲ್ಲಿ ತಮ್ಮ ಶಕ್ತಿಯ ಮತ್ತು ಜೀವದರ್ಶನದ ಮೊದಲ ರುಚಿಯನ್ನು ತೋರಿಸಿದರು. ಈ ಎಳೆಯನ್ನು ಇನ್ನು ಹಲವರು ಎತ್ತಿಕೊಂಡರು. ಅವರಲ್ಲಿ ಪ್ರೊ. ಫಡಕೆ, ಖಾಂಡೇಕರ್, ದೇಶ ಪಾಂಡೆ ಮತ್ತು ಸಾನೆ ಗುರುಜೀ ಅವರು ಪ್ರಮುಖರು. ಅವರ ಬರವಣಿಗೆ ಹೆಚ್ಚು ಯಶಸ್ವಿಯಾಗಿಯೂ ಇದೆ. ಆದರೂ ರಾಜಕೀಯ ಕಾದಂಬರಿ ಇನ್ನೂ ಪರೀಕ್ಷಾ ಪ್ರಯೋಗದ ಅವಸ್ಥೆಯಲ್ಲಿಯೆ ಇದೆಯೆನ್ನಬೇಕು. ಅದು ಪೂರ್ಣತೆಗೆ ಬರಬಹುದೆಂಬ ವಿಶ್ವಾಸ ಬಹಳವಾಗಿದ್ದರೂ ಅದರ ಭವಿಷ್ಯ ಹೇಗಾಗಬಹುದೊ ಹೇಳುವಂತಿಲ್ಲ.

ವಿಠ್ಠಲ ಸೀತಾರಾಮ ಗುರ್ಜರ್ ಮತ್ತು ಎನ್. ಎಚ್. ಆಪ್ಟೆ ಯಂತಹ ಹಿಂದಿನ ಕಾಲದ ಪ್ರಖ್ಯಾತಿಯ ಕಾದಂಬರಿಕಾರರು ಇಂದಿಗೂ ಬರೆಯುತ್ತಿದ್ದಾರೆ. ದಿಘೇ, ಕವಠೇಕರ್, ಬೊಕೀಲ್ ಅಂತಹ ಕೆಲವು ಯುವಕರು ಹೊಸ ಯುಗದ ಸತ್ವಾವೇಶ ವುಳ್ಳವರಾಗಿದ್ದಾರೆ. ಈ ಲಕ್ಷಣಗಳನ್ನು ನೋಡಿದರೆ ಅಂತರ್‌ರಾಷ್ಟ್ರೀಯ ಖ್ಯಾತಿ ಪಡೆಯಬಲ್ಲ ಮಹಾ ಕಾದಂಬರಿಕಾರನು ಹುಟ್ಟುವ ಅವಕಾಶ ಪ್ರತಿ ನಿಮಿಷದಲ್ಲಿಯೂ ಹತ್ತಿರ ಬರುವ ಮುನ್ನೋಟ ಕಾಣುತ್ತಿದೆ. ಈ ಅಂಶದಲ್ಲಿ ಇಂದಿನ ಮರಾಠಿ ಸಾಹಿತ್ಯಕ್ಕೆ ನಿಜವಾಗಿಯೂ ಉಜ್ವಲಭವಿಷ್ಯವುಂಟು.

ನಾಟಕ

ಹಿಂದಿನ ಸ್ಥಿತಿಗೆ ಹೋಲಿಸಿದರೆ ಮಹಾರಾಷ್ಟ್ರದ ರಂಗಭೂಮಿಯಲ್ಲಿ ಇಂದು ಹೆಚ್ಚಿಗೆ ಏನೂ ಕಾಣುತ್ತಿಲ್ಲ. ಏಕೆಂದರೆ ಮಹಾರಾಷ್ಟ್ರದಲ್ಲಿ ಇಂದು ರಂಗ ಭೂಮಿಯೇ ಇಲ್ಲ. ಒಬ್ಬಿಬ್ಬರನ್ನು ಬಿಟ್ಟರೆ ನಾಟಕ ಕರ್ತೃಗಳೇ ಇಲ್ಲ ಎನ್ನಬಹುದು.

ಮರಾಠಿ ನಾಟಕರಂಗವನ್ನು ೧೮೪೩ರಲ್ಲಿ ಸಾಂಗ್ಲಿಯ ವಿಷ್ಣುದಾಸ ಭಾವೆ ಎಂಬವರು ಆರಂಭಿಸಿದರು. ಆತನ ಮೊದಲ ನಾಟಕ ಸೀತಾಸ್ವಯಂವರ. ಅದು ಆಗಿನ ಒಂದು ಕನ್ನಡ ನಾಟಕದ ಅನುಕರಣ. ಇದಕ್ಕೂ ಮುಂಚೆ ತಂಜಾವೂರಿನಲ್ಲಿ

ಮರಾಠಿ ರಂಗಸ್ಥಳ ಬದುಕಿತ್ತು. ಆದರೆ ಮಹಾರಾಷ್ಟ್ರಕ್ಕೂ ತಂಜಾವೂರಿಗೂ ಸಾಹಿತ್ಯ ಸಂಬಂಧಗಳು ಯಾವುವೂ ಇರಲಿಲ್ಲ. ಅಲ್ಲಿ ಏನು ನಡೆಯುತ್ತಿತ್ತೆಂಬುದು ಇಲ್ಲಿ ತಿಳಿಯುವ ಮಾರ್ಗವೂ ಇರಲಿಲ್ಲ. ಈ ಸಂಗತಿ ಕೂಡ ಬೆಳಕಿಗೆ ಬಂದುದು ಈಚಿನ ಅನ್ವೇಷಣಗಳಿಂದ. ಅದು ಹೇಗೇ ಇರಲಿ ನಿಜವಾದ ಮರಾಠಿ ನಾಟಕ ಹುಟ್ಟಿದ್ದು ೧೮೮೦ರಲ್ಲಿ. ಅಣ್ಣಾಸಾಹೇಬ್ ಕಿರ್ಲೋಸ್ಕರ್ ಮತ್ತು ಸೋಕರ್ ಬಾಪೂಜಿ ತ್ರಿಲೋಕೇಕರ್ ಇವರು ಜಯಪ್ರದವಾದ ಸಂಗೀತ ನಾಟಕಗಳನ್ನು ಬರೆದವರಲ್ಲಿ ಮೊದಲಿಗರು. ಅವರು ತಮ್ಮ ಕೃತಿಗಳಿಂದಲೂ ಅಭಿನಯದಿಂದಲೂ ಈ ಕಲೆಯನ್ನು ಬಹುವಾಗಿ ಅಭಿವೃದ್ಧಿಗೊಳಿಸಿದರು. ದೇವಲ್ ಎಂಬ ಇನ್ನೊಬ್ಬ ಹಿರಿಯ ನಾಟಕಕಾರರು ಕಿರ್ಲೋಸ್ಕರರ ತರುವಾಯ ಬಂದರು. ಆದುದರಿಂದ ೧೮೮೦ರಿಂದ ೧೯೦೦ರ ಕಾಲವನ್ನು ಕಿರ್ಲೋಸ್ಕರ್ ಮತ್ತು ದೇವಲ್ ಕಾಲವೆನ್ನುವುದು ವಾಡಿಕೆ. ಅದು ಸಂಗೀತ ನಾಟಕದ ಕಾಲ. ಇವರಿಬ್ಬರೂ ತಮ್ಮ ಕೈಯಲ್ಲಾದ ಮಟ್ಟಿಗೆ ಶ್ರೇಷ್ಠಕೃತಿಗಳನ್ನು ಕೊಡಲು ಪ್ರಯತ್ನಿಸಿದರು. ಕಿರ್ಲೋಸ್ಕರವರ ಸೌಭದ್ರ, ದೇವಲರ ಶಾರದ ಈ ಎರಡೂ ಮರಾಠಿ ನಾಟಕದ ಮೇಲೆ ಅಚ್ಚಳಿಯದ ಗುರುತುಗಳನ್ನು ಉಳಿಸಿಹೋಗಿವೆ. ಎಲ್ಲ ಕಾಲಕ್ಕೂ ರಮ್ಯವಾದ ನಾಟಕವೆಂದರೆ ಶಾರದ ಎಂಬುದು ಸಾಮಾಜಿಕ ವಿಷಯದ ಮೇಲೆ ಅತಿ ಜಯಪ್ರದವಾಗಿ ಬರೆದ ಮೊದಲನೆಯ ಮರಾಠಿ ನಾಟಕ. ದೇವಲರ 'ಸಂಶಯ ಕಲ್ಲೋಲ' ಕೂಡ ಸಾರ್ವಕಾಲಿಕ ರಂಜನೆಯುಳ್ಳದ್ದು. ಮರಾಠಿ ನಾಟಕ ಪ್ರಪಂಚವು ಹೆಚ್ಚುಕಡಮೆ ಷೇಕ್ಸ್‌ಪಿಯರ್ ದುರಂತ ಮತ್ತು ಹರ್ಷ ನಾಟಕಗಳ ಪ್ರಭಾವಕ್ಕೆ ಒಳಪಟ್ಟಿತು. ಈ ಪ್ರಭಾವವು ಮುಂದಿನ ಕಾಲಕ್ಕೆ ಕೂಡ ನಡೆಯಿತು.

೧೯೦೦ ರಿಂದ ೧೯೨೦ರ ವರೆಗಿನ ಕಾಲ ಕೊಲ್ಹಟ್‌ಕರ್ ಮತ್ತು ಖಾಡಿಲ್‌ಕರ್ ಕಾಲ. ಅವರಿಬ್ಬರೂ ಹೊಸಬಗೆಯ ಶಿಕ್ಷಣಪಡೆದ ಬರಹಗಾರರು. ಅವರಿಗೆ ಪಾಶ್ಚಿಮಾತ್ಯ ನಾಟಕ ಮತ್ತು ನಾಟಕರಂಗದ ವ್ಯಾಸಂಗವನ್ನು ಮಾಡಿದ ಅನುಭವವಿತ್ತು. ಆದರೂ ಅವರಿಬ್ಬರ ಯೋಚನಾರೀತಿಗಳಲ್ಲಿಯೂ ನಾಟಕಕ್ರಿಯಾನಿರ್ವಾಹದಲ್ಲಿಯೂ ವ್ಯತ್ಯಾಸವಿತ್ತು. ಕೊಲ್ಹಟ್‌ಕರ್ ಅವರ ದಾರಿ ಅದ್ಭುತ ರಮ್ಯ ರಚನೆಗಳ ಕಡೆಗೆ ಓಲುತ್ತಿತ್ತು. ಆತನು ಸಾಮಾಜಿಕ ವಿಷಯಗಳನ್ನು ಕುರಿತೇ ಬರೆದರು. ಖಾಡಿಲ್‌ಕರವರ ಮಾರ್ಗ ಹೆಚ್ಚು ಆದರ್ಶರೂಪವಾದುದು. ಅವರು ಪುರಾಣಗಳಿಂದ ವಿಷಯಗಳನ್ನು ಆರಿಸಿಕೊಳ್ಳುತ್ತಿದ್ದರು. ತಮ್ಮ ಕಾಲದ ರಾಜಕೀಯ ಸಮಸ್ಯೆಗಳನ್ನು ಸಂಕೇತ ರೂಪದಲ್ಲಿ ತೋರಿಸುತ್ತಿದ್ದರು. ಇಬ್ಬರೂ ದೊಡ್ಡ ನಾಟಕ ಕರ್ತೃಗಳು. ವಸ್ತು, ತಂತ್ರ, ರಂಗರಮ್ಯತೆ, ಪಾತ್ರ ಪೋಷಣೆ, ಶೈಲಿ, ಸಂಗೀತ ಇವುಗಳ ದೃಷ್ಟಿ

ಯಿಂದ ಮರಾಠಿ ನಾಟಕವನ್ನು ಒಂದು ಉನ್ನತ ಮಟ್ಟಕ್ಕೆ ತಂದು ನಿಲ್ಲಿಸಿದರು. ಭಾವುರಾವ್ ಕೊಲ್ಹಟಕರ್, ಗಣಪತಿರಾವ್ ಜೋಶಿ, ನವ್‌ಬಾ ಗೋಖಲೆ, ಹಲ ಯಾಳ್‌ಕರ್, ಕೇಶವರಾವ್ ಭೋಸಲೆ, ಬಾಲಗಂಧರ್ವ ಮತ್ತು ಪೆಂಢರ್‌ಕರ್ ಅಂತಹ ದೊಡ್ಡ ನಟರು ಈ ಎರಡು ಕಾಲಗಳ ನಿರ್ಮಾಣಗಳು. ಆದರೂ ಆ ಕಾಲದ ನಾಟಕ ಕರ್ತೃಗಳಿಗೂ ಅವರದಕ್ಕೆ ಕಡಮೆಯಿಲ್ಲದಷ್ಟು ಕೀರ್ತಿ ಸಲ್ಲುತ್ತದೆ.

೧೯೨೦ರಿಂದ ೩೦ರವರೆಗಿನ ಮುಂದಿನ ಕಾಲಭಾಗ ಗಡಕರಿ ಮತ್ತು ವರೇರ್ ಕರ್ ಕಾಲ. ಅವರಿಬ್ಬರೂ ಹಿಂದಿನ ದಶಕದಲ್ಲಿ ಪ್ರಖ್ಯಾತರಾಗಿದ್ದ ಕೊಲ್‌ಹಟಕರ್ ಅವರ ಉತ್ತಮ ಶಿಷ್ಯರು. ಪೂರ್ವ ಮತ್ತು ಪಶ್ಚಿಮ ದೇಶಗಳ ಸಾಹಿತ್ಯವನ್ನ ಬಹು ಚೆನ್ನಾಗಿ ವ್ಯಾಸಂಗಮಾಡಿದ್ದವರು. ಇಬ್ಬರೂ ತಮ್ಮ ಬೇರೆಬೇರೆ ನಾಟಕಗಳಲ್ಲಿ ಬೇರೆ ಬೇರೆ ತಂತ್ರ ಪದ್ಧತಿಗಳನ್ನು ಅನುಸರಿಸಿದರು. ವರೇರ್‌ಕರಿಗಿಂತ ಗಡಕರಿಯವರು ಹೆಚ್ಚು ಅದ್ಭುತ ರಮ್ಯದಕಡೆ ಒಲವು ಉಳ್ಳವರು. ಅವರಲ್ಲಿ ಹೆಚ್ಚಿನ ಕವಿತಾವಿಲಾಸವಿತ್ತು. ಅವರ ನಾಟಕಗಳು ಬಹುವಾಗಿ ಜನಪ್ರಿಯವಾದುವು. ಆತನ ಉನ್ನತ ಕವಿಕಲ್ಪನೆಯೂ ಹೊಳಪುಹಾಸ್ಯವೂ ಮಹಾಜನದ ಮನಸ್ಸನ್ನು ಸೆಳೆದವು. ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದವು. ಅವರ 'ಪುಣ್ಯಪ್ರಭಾವ' 'ಏಕಚ್‌ಪ್ಯಾಲ' 'ಭಾವಬಂಧನ' ಇವು ಹಾಸ್ಯ, ಪಾತ್ರಯೋಜನೆ, ಮತ್ತು ವಸ್ತುವಿನ್ಯಾಸದಲ್ಲಿ ಮಹಾಕೃತಿಗಳು. ಗಡಕರಿಯ ಪಾತ್ರನಿರ್ಮಾಣಕೌಶಲ ಹಿರಿದು. ಆದರೂ ಸನ್ನಿವೇಶಗಳಲ್ಲಿ, ಬಹು ವೇಳೆ, ವಿಚಕ್ಷಣೆ ಇಲ್ಲ. ಅಸಹಜವೂ ಅಶಕ್ಯವೂ ಆದುದು. ಮಹಾರಾಷ್ಟ್ರದ ದುರ ದೃಷ್ಟದಿಂದ ಆತನು ಚಿಕ್ಕತನದಲ್ಲಿಯೆ ತೀರಿಕೊಂಡರು. ಮುಂದಿನ ಕಾಲದಲ್ಲಿ ಇನ್ನೂ ಮೇಲ್ತರಹ ಕೃತಿಗಳನ್ನು ಬರೆಯಬಲ್ಲ ನಾಟಕಕಾರನನ್ನು ನಾಡು ಕಳೆದು ಕೊಂಡಿತು.

ವರೇರ್‌ಕರ್ ಹೆಚ್ಚು ವಾಸ್ತವ ಪಕ್ಷಪಾತಿಗಳು. ಅವರು ತಮ್ಮ ಕಾಲದ ದಿನ ಜೀವನದಿಂದ ತಮ್ಮ ನಾಟಕಗಳಿಗೆ ವಿಷಯವನ್ನು ಆರಿಸಿಕೊಳ್ಳುತ್ತಾರೆ. ಆತನ ಮೇಲೆ ಆಧುನಿಕ ಇಂಗ್ಲಿಷ್ ನಾಟಕಗಳ ಪ್ರಭಾವ ಬಹಳ. ಈಗ ಆಗ ಪಾಶ್ಚಾತ್ಯನಾಟಕ ತಂತ್ರಗಳನ್ನು ಅವರು ಬಳಸುತ್ತಾರೆ. ನವಜೀವನದಲ್ಲಿ ರೂಢವಾಗಿರುವ ಸಂಗತಿ ಗಳನ್ನು ಆರಿಸಿಕೊಳ್ಳುವ ಒಂದು ಜಾಣ್ಮೆ ಇದೆ ಅವರಲ್ಲಿ. ಅವರ ಕ್ರಿಯಾಸಾಧನಾ ಶಕ್ತಿಯ ವೇಗ ಆಶ್ಚರ್ಯಕರವಾದುದು. ಅವರಿಗೆ ಈಗತಾನೆ ಅರವತ್ತು ವಯಸ್ಸಾಗಿದೆ. ಆದರೂ ಅವರಲ್ಲಿ ತರುಣ ಲೇಖಕರ ಚುರುಕುಚೈತನ್ಯವಿದೆ. ವರೇರ್‌ಕರ್ ಸಾಹಿತ್ಯ ಶಕ್ತಿ ಅನೇಕ ಮುಖವಾದುದು. ಅವರು ಈ ಕಾಲದ ಉತ್ತಮ ಗ್ರಂಥಕರ್ತೃಗಳಲ್ಲಿ ಒಬ್ಬರು. ತಮ್ಮ ನಾಟಕಗಳಲ್ಲಿ ಕೆಲಸಗಾರರ ಮತ್ತು ಕೂಲಿಯವರ ಭಾವಗಳನ್ನು ಹೊರಗೆಡಹಿದ್ದಾರೆ. ಜೀವನದ ಚಿತ್ರಗಳನ್ನು ಬಹು ಶ್ರದ್ಧೆಯಿಂದ ಬಣ್ಣಿಸಿದ್ದಾರೆ.

ಹಿಂದಿನಕಾಲಗಳಲ್ಲಿ ಮರಾಠಿ ನಾಟಕಗಳು ಇಂಗ್ಲಿಷ್ ಆಪೆರಗಳಂತೆಯೆ (ಸಂಗೀತ

ನಾಟಕಗಳಂತೆ) ಬಹುಮಟ್ಟಿಗೆ ಇದ್ದುವು. ಆದರೆ ಈ ಕಾಲದಲ್ಲಿ ಅವನ್ನು ಹೆಚ್ಚು ಕಡಮೆ ಕಟ್ಟಿನಲ್ಲಿ ಇಡಲಾಯಿತೆನ್ನಬಹುದು. ಹಾಡುಗಳು ಸರಿಯಾದಮಟ್ಟಕ್ಕೆ ಏರಲಿಲ್ಲ. ನಾಟಕದಲ್ಲಿ ಪರಿಣಾಮಕಾರಿಯಾದ ಉತ್ತಮ ಹಾಡುಗಳನ್ನು ಬರೆದವರೆಂದರೆ ಅಣ್ಣಾ ಸಾಹೇಬ್ ಕಿರ್ಲೋಸ್ಕರ್ ಮತ್ತು ದೇವಲ್. ಸ್ವಲ್ಪಮಟ್ಟಿಗೆಮಾತ್ರ ಕೊಲ್‌ಹಟಕರ್.

೧೯೩೦ರಿಂದ ಈಚೆಗೆ ನಾಟಕ ಪ್ರಪಂಚದಲ್ಲಿ ಸಂಪೂರ್ಣವಾಗಿ, ಕೇವಲವಾಗಿ ಆಧಿಪತ್ಯ ಮಾಡುವವರೆಂದರೆ ಪಿ. ಕೆ. ಅತ್ರೆ. ಅವರು ಈ ಕಾಲದ ನಿಪುಣ ಹಾಸ್ಯ ಕಾರರು, ಕವಿಗಳು, ನಾಟಕಕರ್ತರು. ಏಕಾಂಕನಾಟಕಗಳನ್ನು ರಂಗದಮೇಲೆ ಮೊದಲು ತಂದವರು ಅವರೇ. ರಂಗತಂತ್ರವನ್ನೂ ರಂಗಕಲೆಯನ್ನೂ ಬೆಳಸಿ ಒಂದು ಮೇಲ್ತರದ ಹದಕ್ಕೆ ತಂದಿದ್ದಾರೆ. ಅವರ ವಿಷಯಗಳೆಲ್ಲ ಸಾಮಾಜಿಕ. ಹಾಸ್ಯಸಮ್ಮಿತಿಯಿಂದ ಬಹು ಚಮತ್ಕಾರವಾಗಿ ಸನ್ನಿವೇಶಗಳನ್ನು ಸಾಧಿಸುತ್ತಾರೆ. ವಸ್ತುರಚನಾಶಕ್ತಿ ಯಲ್ಲಿ ಲೋಪಗಳಿದ್ದರೂ ಮನೋವ್ಯಾಪಾರಸಹಜತೆಯ ದೃಷ್ಟಿಯಿಂದ ಅವರ ನಾಟಕಗಳು ಬಹು ಪರಿಣಾಮಕಾರಿಯಾದವು.

ಹಿಂದಿನ ನಟರು ಕಳೆದುಹೋಗಿದ್ದಾರೆ. ನಾಟಕ ಸಂಘಗಳು ದಿವಾಳಿಯಾಗಿವೆ. ಹೊಸ ನಾಟಕಕರ್ತೃಗಳು—ಎಲ್ಲೋ ಭಟ್, ಸಾಠೆ ಮುಂತಾದ ಕೆಲವರನ್ನು ಬಿಟ್ಟರೆ—ಇನ್ನೂ ಹುಟ್ಟಿಲ್ಲ. ಹೀಗಾಗಿ ಕಾಂತಿಪೂರ್ಣವಾದ ಚರಿತ್ರೆಯುಳ್ಳ ಮರಾಠಿ ನಾಟಕಕ್ಕೆ ಸದ್ಯಕ್ಕೆ—ಮುಂದಿನ ಕೆಲವು ದಿನಗಳಲ್ಲಿ—ಯಾವ ಭವಿಷ್ಯವೂ ಕಾಣಿಸುತ್ತಿಲ್ಲ. ಆ ವರೆಗೂ ಅತ್ರೆಯವರು ಏಕಾಂಗಿಯಾಗಿ ನಿಲ್ಲುವರು. ಅವರ 'ಉದ್ಯಾಚಾ ಸಂಸಾರ್' ಮತ್ತು 'ಘರಾ ಬಾಹೆರ್' ನಾಟಕಗಳು ಎಲ್ಲ ಕಾಲಕ್ಕೂ ನಿಲ್ಲುವವು. ಅವರ 'ಭ್ರಮಾಚ ಭೋಪಳಾ' ದಲ್ಲಿರುವ ವಿಸ್ಮಯಕರ ಹಾಸ್ಯಶಕ್ತಿ ಅದನ್ನು ಎಂದೆಂದಿಗೂ ಜನದ ಮೆಚ್ಚಿಕೆಯಲ್ಲಿ ಉಳಿಸುವುದು.

ಈಚೆಗೆ ಮಹಾರಾಷ್ಟ್ರದ ಎಲ್ಲಾ ಭಾಗಗಳಲ್ಲಿಯೂ ಬೃಹನ್ಮಹಾರಾಷ್ಟ್ರ ದಲ್ಲಿಯೂ ಮರಾಠಿ ನಾಟಕದ ಶತಮಾನೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು. ಹಳೆಯ ನಾಟಕಗಳನ್ನು ಆಡಿದರು. ಇದು ಅದರ ಪುನರುಜ್ಜೀವನಕ್ಕೆ ನೆರವಾಗುವುದೆಂದು ನಂಬಿದೆ.

ಇತರ ಪ್ರಕಾರಗಳು

ಮರಾಠಿ ಬರವಣಿಗೆಯಲ್ಲಿ ಅನೇಕ ಪ್ರಕಾರಗಳು ಹುಟ್ಟಿಕೊಂಡಿವೆ, ಬೆಳೆದಿವೆ. ಅವುಗಳ ಚರಿತ್ರೆಯನ್ನು ಪೂರ್ತಿಯಾಗಿ ಹೇಳಹೋದರೆ ಬಹಳ ಸ್ಥಳಾವಕಾಶ ಬೇಕಾಗುವುದು. ಆದುದರಿಂದ ಸದ್ಯಕ್ಕೆ ವಿಹಂಗವೀಕ್ಷಣ ಮಾತ್ರ ಸಾಕು.

ಈ ಕಾಲ ಸಣ್ಣ ಕಥೆಗಳ ಮತ್ತು ಸಣ್ಣ ಸಣ್ಣ ಕಥೆಗಳ ಯುಗ. ಕಿರುಗತೆಗಳ

ಕಲಾತಂತ್ರ ಒಂದು ಪರಿಪೂರ್ಣ ಸ್ಥಿತಿಯನ್ನು ಮುಟ್ಟಿದೆ. ಆದರೂ ಸನ್ನಿವೇಶಗಳು, ವಿಶೇಷವಾಗಿ ಪಾತ್ರಗಳು, ಹೆಚ್ಚು ವಾಸ್ತವವಲ್ಲ. ವಿ. ಎಸ್. ಖಾಂಡೇಕರ್, ಪ್ರೊ. ಫಡಕೆ, ಜೋರ್‌ಘಡೆ, ಕಾಣೇಕರ್, ದಿಘೆ, ವೈ. ಜಿ. ಜೋಶಿ, ಪ್ರೊ. ಗೋರೆ, ಇವು ಸಣ್ಣ ಕಥೆಯ ನಿರ್ಮಾಪಕರಲ್ಲಿ ಗಣ್ಯವಾದ ಹೆಸರುಗಳು.

ಲಘುಪ್ರಬಂಧ ಬಹು ಜನರಿಗೆ ಪ್ರಿಯವಾಗಿದೆ. ಅದರಲ್ಲಿ ಹಲವು ಮಂದಿ ಬರಹಗಾರರು ಕೈಹಾಕಿ ಜಯಶೀಲರಾಗಿದ್ದಾರೆ. ಈ ಕಳದಲ್ಲಿ ಕೂಡ ಪ್ರೊ. ಫಡಕೆ, ಖಾಂಡೇಕರ್ ಮತ್ತು ಕಾಣೇಕರ್ ಅವರು ಉನ್ನತಿಯನ್ನು ಸಾಧಿಸಿ ಪ್ರಸಿದ್ಧರಾಗಿದ್ದಾರೆ. ಸಾಕಷ್ಟು ಅವಕಾಶ ದೊರೆತರೆ ಅವರು ಅಂತರ್ರಾಷ್ಟ್ರೀಯ ಕೀರ್ತಿ ತರುವ ಬರಹಗಾರರೊಡನೆ ತೂಗಬಲ್ಲವರು.

೧೮೭೪ ರಿಂದ ಪುಷ್ಕಲ ಬರವಣಿಗೆಯಿದ್ದರೂ ವಿಮರ್ಶೆಯ ಕಳದಲ್ಲಿ ಹೆಚ್ಚು ವಿತರಣೆಯಿಂದ ಕೃಷಿ ನಡೆದಿಲ್ಲ. ಚಿಪ್ಳೂಂಕರ್, ಟಿಳಕ್, ಆಗರ್‌ಕರ್, ಭಿಡೆ, ಎನ್. ಸಿ. ಕೇಳಕರ್, ಮಡಖೋಲಕರ್, ಡಿ. ಕೆ. ಕೇಳಕರ್, ಆರ್. ಎಸ್. ಜೋಗ್, ಬಿ. ಎಸ್. ಮರಢೇಕರ್, ಎಸ್. ಕೆ. ಕ್ಷೀರಸಾಗರ್, ಪಾಧ್ಯೆ ಮುಂತಾದ ನುರಿತ ಲೇಖಕರು ಆಗಿಹೋಗಿದ್ದಾರೆ, ಇದ್ದಾರೆ. ಮುಂದಿನ ಯುಗ ವಿಮರ್ಶೆಯ ಯುಗವಾದೀತು ಎಂಬ ನಿರೀಕ್ಷೆಯಿದೆ. ಏಕೆಂದರೆ ಹಲವು ಮಂದಿ ಯುವಕರೂ ತರುಣ ವಿದ್ವಾಂಸರೂ ವಿಮರ್ಶೆಗೆ ಕೈಹಚ್ಚುತ್ತಿದ್ದಾರೆ. ನಾಟ್ಯಚ್ಛಟಾ ಎಂಬ (ಗದ್ಯದ ಏಕಪಾತ್ರಾಭಿನಯ) ಮರಾಠಿಗೆ ತೀರ ಹೊಸದು. ಅದು ಬ್ರೌನಿಂಗ್ ಮಾರ್ಗವನ್ನು ಅನುಸರಿಸಿ ಬಂದುದು. ಅದನ್ನು ದಿವಾಕರವರು ಬೆಳಸಿ ಒಂದು ಪೂರ್ಣತೆಗೆ ತಂದರು. ಆತನಿಗೆ ಪಾತ್ರ ನಿರ್ಮಾಣ ಮಾಡುವುದಕ್ಕೂ ಚಿತ್ರಣಕ್ಕೂ ಅತಿಶಯ ಶಕ್ತಿಯಿದೆ. ಆದುದರಿಂದ ಆತನ ಕೃತಿ ಮರಾಠಿ ಸಾಹಿತ್ಯಕ್ಕೆ ಒಂದು ತೊಡವಾಗಿದೆ. ಆತನ ಅನುಯಾಯಿಗಳು ಅನೇಕರು. ಆದರೆ ಅವರು ಯಾರೂ ತಮ್ಮ ಕಾರ್ಯದಲ್ಲಿ ತೇರಿಲ್ಲ. ಆದುದರಿಂದ ದಿವಾಕರೊಬ್ಬರೆ ಏಕಮೇವ ಅದ್ವಿತೀಯರಾಗಿ ನಿಂತಿದ್ದಾರೆ.

ಪ್ರತಿ ದಿನವೂ ಒಂದು ಹೊಸ ಸಾಹಿತ್ಯಪ್ರಕಾರ ಹುಟ್ಟಿಬರುತ್ತಿದೆ. ಮೂಡು, ಪಡುವಲು, ದಿನದಿನವೂ ಹತ್ತಿರ ಹತ್ತಿರ ಬಂದು ಸೇರುತ್ತಿವೆ. ಯುವಕವರ್ಗಕ್ಕೆ ಸೇರಿದ ಹೊಸ ತಲೆಮೊರೆಯವರು ಪ್ರಪಂಚದ ಸಾಹಿತ್ಯವನ್ನು ತೀವ್ರಾಸಕ್ತಿಯಿಂದ ಅಭ್ಯಾಸಮಾಡುತ್ತಿದ್ದಾರೆ. ಮಹಾರಾಷ್ಟ್ರ ವಿಶ್ವವಿದ್ಯಾನಿಲಯದ ಯೋಜನೆ ಎಲ್ಲರಿಗೂ ಉತ್ತೇಜನ ಕೊಡಲು ಕಣ್ಣು ಮುಂದಿದೆ. ಲೋಕದ ಪ್ರಮುಖ ಭಾಷೆಗಳ ಪಂಕ್ತಿಯಲ್ಲಿ ಸಮಸ್ಥಾನವನ್ನು ಪಡೆದು ನಿಲ್ಲುವ ಆಶೆ ನಿರೀಕ್ಷೆ ಮತ್ತು ಶಕ್ಯತೆಗಳು ಮರಾಠಿಗೆ ಇವೆ.

ಪ್ರೊ. ಎಸ್. ಕೆ. ಕಾನೆಟ್‌ಕರ್

(ಗಿರೀಶ್)

೨. ಆಧುನಿಕ ವಂಗ ಸಾಹಿತ್ಯ

ನಾನು ಸಾಹಿತ್ಯಜ್ಞನಲ್ಲ. ಸಂನ್ಯಾಸಿ. ನಾನು ಸಂನ್ಯಾಸವನ್ನು ಸ್ವೀಕಾರ ಮಾಡಿದರೂ ಜೀವನವನ್ನು ಅಲ್ಲಗಳೆದವನಲ್ಲ. ಜೀವನದೊಂದಿಗೆ ಸಾಹಿತ್ಯದ ಸಂಬಂಧವು ಅತಿನಿಕಟ. ಆದಕಾರಣವೆ ಪರಾವಿದ್ಯೆಯ ಅನುಷ್ಠಾನದೊಂದಿಗೆ ಅಪರಾವಿದ್ಯೆ ಕೂಡ ಇರಬಲ್ಲದು ಎಂಬುದು ನನ್ನ ಮತ. ಬ್ರಹ್ಮವಿದ್ಯಾ ಉಪಾಸನದೊಂದಿಗೆ ಸಾಹಿತ್ಯ ದೇವಿಯ ಪೂಜೆಯೂ ಕೂಡ ನನಗೆ ಸಾಧ್ಯ. ಯಾವುದು ಸತ್ಯವೂ, ಶಿವಮಯವೂ, ಸುಂದರವೂ ಆಗಿ ಜೀವನವನ್ನು ಅತಿಕ್ರಮಿಸಿರುವುದೊ ಅದು ಜೀವನದ ಪ್ರತಿಯೊಂದು ಕಾರ್ಯಕ್ಷೇತ್ರದಲ್ಲಿಯೂ ಸ್ಪಂದಿಸುತ್ತಿದೆ ಎನ್ನುವುದು ನನ್ನ ಅನುಭವ. ಆದರೆ ನಿಜವಾಗಿ ಸಾಹಿತ್ಯ ನನ್ನ ವೃತ್ತಿಯಲ್ಲ. ಆದಕಾರಣ ಸಾಹಿತ್ಯದ ಮೇಲೆ ನಾನು ವಿಶೇಷವಾಗಿ ಹೇಳುವುದಿಲ್ಲ. ನನ್ನದು ಸಾಧಾರಣ ಪಾಠಕರ ದೃಷ್ಟಿಭಂಗಿ.

ಭಾರತೀಯ ಜೀವನದಲ್ಲಿ ಹದಿನೆಂಟನೆಯ ಶತಮಾನವು ಸಂಧಿಸಮಯ. ಭಾರತವು ಈ ಶತಮಾನದಲ್ಲಿ ಎರಡನೆಯ ಬಾರಿ ತನ್ನ ಸ್ವಾತಂತ್ರ್ಯವನ್ನು ನೀಗಿಕೊಂಡಿತು ಎಂಬುದು ಇದರ ಪ್ರಾಮುಖ್ಯತೆಗೆ ಕಾರಣ. ಭಾರತ ಪ್ರಾಣದ ಜ್ಯೋತಿಯಲ್ಲಿ ಬಾಹ್ಯ ಸಂಸ್ಕೃತಿ ಮತ್ತು ನಾಗರಿಕತೆಯ ಅಭಿಘಾತದಿಂದ ಉದ್ಭವಿಸಿದ ವಿಸ್ಫುಲಿಂಗ ನಿಚಯವೇ ಇದರ ಪ್ರಾಮುಖ್ಯತೆಗೆ ಕಾರಣ. ಭಾರತೀಯ ಚೇತನದ ಅಂತರಾಳದಿಂದ ಹೊರಹೊಮ್ಮಿದ ಈ ಕಾಂತಿಯು ಭಾರತೀಯರ ಅಂತರಾತ್ಮವನ್ನು ಪ್ರಕಾಶ ಮಾಡಿ, ನಮ್ಮ ಸಂಸ್ಕೃತಿಯ ಕಾರ್ಯಕ್ಷೇತ್ರಗಳನ್ನೆಲ್ಲಾ ಬೆಳಕಿಗೆ ತಂದಿತು. ಆದಕಾರಣವೆ ನಾವು ಈ ಯುಗದಲ್ಲಿ, ಧಾರ್ಮಿಕ, ರಾಷ್ಟ್ರೀಯ, ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ನವೀನ ಆಲೋಚನೆಗಳ ಉದಯವನ್ನು ನೋಡುತ್ತೇವೆ. ಹದಿನೆಂಟನೆಯ ಶತಮಾನದಲ್ಲಿ ಅಂಕುರಾರ್ಪಣವಾದುದು ಹತ್ತೊಂಬತ್ತನೆಯ ಶತಮಾನದಲ್ಲಿ ಪೂರ್ಣ ವಿಕಾಸವಾಯಿತು. ಆದಕಾರಣವೆ ಹತ್ತೊಂಬತ್ತನೆಯ ಶತಮಾನವು ಆಧುನಿಕ ಯುಗದ ಆರಂಭವೆಂದು ಕಾಲನಿರ್ದೇಶ ಮಾಡುವುದು ಅಯುಕ್ತವಲ್ಲ.

ಕ್ರಿ. ಶ. ೧೭೫೭ ರಲ್ಲಿ ಪ್ಲಾಸಿ ಕದನವಾಯಿತು. ಅಂದಿನಿಂದ ವಂಗದೇಶವು ಪ್ರಥಮತಃ ಮತ್ತು ಪ್ರಧಾನವಾಗಿ ಬಾಹ್ಯ ಸಂಸ್ಪರ್ಶಕ್ಕೆ ಕೇಂದ್ರವಾಯಿತು. ಅಂದಿನಿಂದ ವಂಗದೇಶದಲ್ಲಿ ಆಧುನಿಕ ಯುಗದ ಆರಂಭ. ಧರ್ಮಕ್ಷೇತ್ರದಲ್ಲಿ, ರಾಷ್ಟ್ರೀಯ ಭಾವನೆಯಲ್ಲಿ, ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಒಂದು ಹೊಸ ಚೇತನದ

ಅರುಣೋದಯವಾಯಿತು. ಆಧುನಿಕ ವಂಗಸಾಹಿತ್ಯವು ಈ ಸಮಗ್ರಭಾವನೆಯನ್ನು ಅವಲೋಕಿಸುವುದು ಆವಶ್ಯಕ. ಏಕೆಂದರೆ ಸಮಾಜ ಅಂಗದಂತೆ. ಸಾಹಿತ್ಯವು ಅದಕ್ಕೆ ತೊಡಿಸಿರುವ ಅಂಗಿಯಂತೆ. ಸಾಹಿತ್ಯವು ಅನ್ಯನಿರುಪೇಕ್ಷವಾದುದು. ಸಾಹಿತ್ಯಕ್ಕೋಸ್ಕರ ಸಾಹಿತ್ಯ ಎನ್ನುವರು ಕೆಲವರು. ಆದರೆ ನಾವು ಈ ಅಭಿಪ್ರಾಯವನ್ನು ಗೌರವಿಸಬೇಕಾಗಿಲ್ಲ. ಜೀವನ ಗಂಗೋತ್ರಿಯಲ್ಲಿ ಉದ್ಭವಿಸಿದ ಬಹು ಮುಖವಾದ ಜೀವಧಾರೆಯು ಸಮಾಜದಲ್ಲಿ ಐಕ್ಯವಾಗಿ ಫಲಕಾರಿಯಾಗುವುದು. ಆದಕಾರಣವೆ ಸಮಾಜವನ್ನು ಅತಿಕ್ರಮಿಸಿದ ಸಾಹಿತ್ಯಪರ್ಯಾಲೋಚನೆ ಸಾಧ್ಯವಿಲ್ಲ.

ಹದಿನೆಂಟನೆಯ ಶತಮಾನದ ಆದಿಯಲ್ಲಿ ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಸಂಸ್ಕೃತಿ ಘರ್ಷಣೆಯಿಂದ ಉದ್ಭವಿಸಿದ ಕಿಡಿಗಳಲ್ಲಿ ಬೆಳಕಿಗಿಂತ ಉಷ್ಣವೇ ಹೆಚ್ಚಾಗಿತ್ತು. ಆದಕಾರಣವೆ ಸಮಾಜದಲ್ಲಿ ಸ್ವೇಚ್ಛಾಚಾರ ಪ್ರಾಬಲ್ಯಕ್ಕೆ ಬರುವುದು. ಆದರೆ ಕ್ರಮೇಣ ಉಷ್ಣವು ಕಾಂತಿಮಯವಾಯಿತು. ಆಗ ಧಾರ್ಮಿಕ, ರಾಷ್ಟ್ರೀಯ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ನೂತನ ಜ್ಯೋತಿಯ ಪುಂಜವು ಉದಯಿಸಿತು.

ಈ ಪ್ರಭಾತದಲ್ಲಿ ರಾಜಾರಾಮಮೋಹನರಾಯ್ ಪ್ರಕಾಶಮಾನವಾದ ಪ್ರಭಾತ ಕಾಂತಿ. ಯಾವ ಅಂಧತಮಸ್ಸಿನಲ್ಲಿ ವಂಗದೇಶವು ಆವೃತವಾಗಿತ್ತು, ಅದರ ಮೇಲೆ ಸರ್ವತೋಮುಖವಾದ ಪ್ರತಿಭಾಸಂಪನ್ನನಾದ ರಾಮಮೋಹನನು ತನ್ನ ಸ್ನಿಗ್ಧ ಮಧುರಕಾಂತಿಯನ್ನು ಬೀರಿ ದಾರಿತೋರಿದನು. ಆ ರಾಮಮೋಹನನ ವಿಚಾರವಾಗಿ ರವೀಂದ್ರನಾಥ ಠಾಕೂರರು ಹೀಗೆಂದಿರುವರು : "ರಾಜನೀತಿಯಾಗಲಿ, ವಿದ್ಯಾಭ್ಯಾಸವಾಗಲಿ, ಸಮಾಜನೀತಿಯಾಗಲಿ, ಭಾಷಾವಿಚಾರವಾಗಲಿ, ಆಧುನಿಕ ವಂಗದೇಶದಲ್ಲಿ ಆತನು ಕೈಹಾಕದ ವಸ್ತುವೇ ಇರಲಿಲ್ಲ." ಹಲವರ ದೃಷ್ಟಿಯಲ್ಲಿ ರಾಮಮೋಹನನು ವಂಗಗದ್ಯಕ್ಕೆ ಜನಕನು. ಆದರೆ ನಾವು ಈ ಅಭಿಪ್ರಾಯವನ್ನು ಅನುಮೋದಿಸುವುದಿಲ್ಲ. ಈ ವ್ಯಕ್ತಿಗೆ ಮುಂಚೆ ರಾಮರಾಮಬಸು ಮುಂತಾದವರು ಬರೆದ ವಂಗಭಾಷೆಯು ಪರಿಪುಷ್ಟವಾದ ವಂಗಗದ್ಯವಾಗಿತ್ತು. ಆದರೆ ರಾಮಮೋಹನನ ಲೇಖನಗಳಲ್ಲಿ ಆಶೆ ಆಕಾಂಕ್ಷೆಗಳು ಯಾವ ರೀತಿ ಆತ್ಮಪ್ರಕಾಶಕ್ಕೆ ಬಂದಿವೆಯೊ ಅಂತಹ ಸಾಹಿತ್ಯ ಪ್ರಯತ್ನಗಳು ಆಧುನಿಕ ವಂಗಸಾಹಿತ್ಯಕ್ಕೆ ಸಿಂಹದ್ವಾರರೂಪವಾಗಿವೆ ಎಂದು ಹೇಳಬಹುದು.

ರಾಮಮೋಹನನ ಬಳಿಕ ವಂಗಸಾಹಿತ್ಯದಲ್ಲಿ ಪ್ರತಿಭಾಪ್ರವಾಹವನ್ನು ಕಾಣಬಹುದು. ಆದಕಾರಣವೆ ಈ ಯುಗದ ಸಾಹಿತ್ಯಸಾಧನೆಯ ವಿಶಾಲ ಆಲೋಚನೆಯು ಈ ಸಣ್ಣ ಲೇಖನದಲ್ಲಿ ಸಾಧ್ಯವಿಲ್ಲ. ಸಾಹಿತ್ಯ ಸಾಧಕರ ಸಾಧನೆಯ ಧಾರಾ

ಪ್ರವಾಹದಲ್ಲಿ, ಸಣ್ಣದು ದೊಡ್ಡದು, ಮಧ್ಯ ತರಗತಿಯದು ಸಾಹಿತ್ಯ ಭಾಗೀರಥಿಯನ್ನು ಪರಿಪುಷ್ಟಿಗೊಳಿಸಿವೆ, ಸಮೃದ್ಧಿಗೊಳಿಸಿವೆ. ಅವುಗಳನ್ನೆಲ್ಲ ಇಲ್ಲಿ ವಿಚಾರಿಸಲು ಅಸಾಧ್ಯ. ಈ ಲೇಖನದಲ್ಲಿ ಆಧುನಿಕ ಗದ್ಯ, ಪದ್ಯ ಮತ್ತು ನಾಟಕಗಳ ತ್ರಿವೇಣಿಯನ್ನು ಯಥಾಶಕ್ತಿಯಿಂದ ಆಲೋಚಿಸುವೆನು. ಮತ್ತು ಈ ಆಲೋಚನಾಪ್ರಸಂಗದಲ್ಲಿ ಸಂಕ್ಷೇಪವಾಗಿ ಪ್ರತ್ಯೇಕ ಧಾರೆಯ ಪ್ರಾಣಪುರುಷರಾದ ಲೇಖಕರನ್ನು ವಿಮರ್ಶೆ ಮಾಡುವೆನು.

ವಂಗಗದ್ಯ

ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ವಂಗಭಾಷೆಯ ಬರವಣಿಗೆ ಮತ್ತು ಓದುವುದನ್ನು ಜಾರಿಗೆ ತರಬೇಕಾಗಿ ಬಂದಿತು. ವಂಗದೇಶದಲ್ಲಿ ಆಂಗ್ಲಪ್ರಭುತ್ವದವರ ಅಧಿಕಾರ ವಿಸ್ತರಣವಾದಂತೆಲ್ಲ ಇವರು ವಂಗಜನರೊಂದಿಗೆ ನಿಕಟ ಸಂಬಂಧವನ್ನು ಬೆಳಸಬೇಕಾಯಿತು. ಇದರ ಪರಿಣಾಮವಾಗಿ ಆಂಗ್ಲೇಯರು ವಂಗಭಾಷೆಯನ್ನು, ವಂಗದೇಶೀಯರು ಆಂಗ್ಲಭಾಷೆಯನ್ನು ಕಲಿಯಬೇಕಾಯಿತು. ಕ್ರಿ.ಶ. ೧೮೦೦ ಫೋರ್ಟ್ ವಿಲಿಯಂ ಕಾಲೇಜು ಸ್ಥಾಪಿತವಾಯಿತು. ಕಾಲೇಜಿನಲ್ಲಿ ಪ್ರಾಚ್ಯ ಭಾಷಾ ವಿಭಾಗಕ್ಕೆ ಶ್ರೀರಾಮಪುರದ ಪಾದ್ರಿಯಾದ ವಿಲಿಯಂ ಕೆರಿ ಅಧ್ಯಕ್ಷನಾದನು. ಇದು ಆಂಗ್ಲೇಯರಿಗೆ ಶಿಕ್ಷಣ ಕೊಡುವುದಕ್ಕಾಗಿ ಜನ್ಮತಾಳಿತು.

ಆಂಗ್ಲೇಯರಿಗೆ ವಂಗಭಾಷೆಯನ್ನು ಕಲಿಸುವಾಗ ವಂಗಸಾಹಿತ್ಯವೆಲ್ಲವೂ ಕಾವ್ಯರೂಪವಾಗಿದ್ದುದು ಕಂಡುಬಂದಿತು. ಅನಂತರ ವಿಲಿಯಂ ಕೆರಿಯು ವಂಗ ಪಂಡಿತರ ಸಹಾಯದಿಂದ ಗದ್ಯಸಾಹಿತ್ಯಸೃಷ್ಟಿಗಾಗಿ ಯತ್ನಿಸಿದನು. ಯಾವ ವರುಷ ಕಾಲೇಜಿನಲ್ಲಿ ಕಾವ್ಯಾರಂಭವಾಯಿತೋ ಅದೇ ವರುಷ ಕೆರಿಯ ವ್ಯಾಕರಣ, ಕಥೋಪಕಥನ, ರಾಮರಾಮುಬಸುವಿನ ಪ್ರತಾಪಾದಿತ್ಯಚರಿತ್ರೆ, ಗೋಲೋಕಶರ್ಮನ ಹಿತೋಪದೇಶ ಇವುಗಳು ಪ್ರಕಾಶಕ್ಕೆ ಬಂದವು. ಫೋರ್ಟ್‌ವಿಲಿಯಂ ಕಾಲೇಜಿನ ಶಿಕ್ಷಕ ವರ್ಗದಲ್ಲೂ ಶ್ರೇಷ್ಠ ಗದ್ಯಲೇಖಕ ಮೃತ್ಯುಂಜಯ ವಿದ್ಯಾಲಂಕಾರ. ಆತನ ಗದ್ಯಕೃತಿಗಳಲ್ಲೂ ಶ್ರೇಷ್ಠವಾದುವು ರಾಜಾವಳಿ ಮತ್ತು ಪ್ರಬೋಧಚಂದ್ರಿಕೆ.

ಈ ಕಾಲದ ಗದ್ಯಗ್ರಂಥಗಳಲ್ಲಿ ಮುಕ್ಕಾಲುಪಾಲೆಲ್ಲ ಸಂಸ್ಕೃತ, ಪಾರ್ಸಿ ಮತ್ತು ಆಂಗ್ಲೇಯ ಗ್ರಂಥಗಳ ಅನುವಾದಗಳು. ಎಲ್ಲೋ ಒಂದೆರಡು ಗ್ರಂಥಗಳು ಮಾತ್ರ ಸ್ವತಂತ್ರವಾದವು. ಈ ಸಮಯದ ಗದ್ಯದಲ್ಲಿ ಅಂತಹ ನಯವಿಲ್ಲ. ಆಗ ಗದ್ಯರಚನೆಗೆ ಒಂದು ನಿರ್ದಿಷ್ಟ ಶೈಲಿ ಇರಲಿಲ್ಲ. ಕೆಲವುವೇಳೆ ಸಂಸ್ಕೃತ ಮತ್ತು ಕೆಲವುವೇಳೆ ಆಂಗ್ಲೇಯ ಸರಣಿಯನ್ನು ಅನುಸರಿಸುತ್ತಿದ್ದರು. ವಂಗಶಬ್ದದೊಂದಿಗೆ ಸಂಸ್ಕೃತ ಪದಗಳ ಪ್ರಯೋಗಕ್ಕೆ ಒಂದು ನಿರ್ದಿಷ್ಟ ರೀತಿಯಿರಲಿಲ್ಲ. ರಚನೆಯಲ್ಲಿ

ಅಷ್ಟು ಶ್ರುತಿಮಾಧುರ್ಯವಿಲ್ಲ. ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಇದ್ದ ಗದ್ಯವು ಆಗತಾನೆ ನಡೆಯಲು ಪ್ರಯತ್ನಿಸುವ ಎಳ ಹಸುಳೆಯಂತಿತ್ತು.

ಯಾರು ವಂಗಗದ್ಯದ ದೋಷವನ್ನು ನಿರ್ಮೂಲಮಾಡಿ, ಪಂಗುತ್ವವನ್ನು ಕಳೆದು, ಇದನ್ನು ಉತ್ತಮಸಾಹಿತ್ಯ ಪ್ರದರ್ಶನಕ್ಕೆ ಬೇಕಾದ ಭಾಷೆಯನ್ನಾಗಿ ಮಾಡಿದನೋ ಆತನೇ ಈಶ್ವರಚಂದ್ರ ವಿದ್ಯಾಸಾಗರ. ವಿಧವಾವಿವಾಹ ಸಮರ್ಥಕನೂ ಮತ್ತು ಅಪರಿಮಿತ ದಯಾಶೀಲನೂ ಆದ ಈತನ ಹೆಸರು ದೇಶದಲ್ಲೆಲ್ಲ ಸುಪರಿಚಿತವಾಗಿರುವುದು. ಈತನು ೧೮೨೦ ರಲ್ಲಿ ಜನ್ಮವೆತ್ತಿ ೧೮೯೧ ರಲ್ಲಿ ದೇಹತ್ಯಾಗ ಮಾಡಿದನು. ಈತನು ರಚಿಸಿದ ಪುಸ್ತಕಗಳಲ್ಲಿ ಭೇತಾಳ ಪಂಚವಿಂಶತಿ, ವಂಗ ಇತಿಹಾಸ, ಜೀವನಚರಿತ್ರೆ, ಶಕುಂತಲಾ ಚರಿತಾವಳಿ, ಸೀತಾ ವನವಾಸ, ಭ್ರಾಂತಿವಿಲಾಸ, ವಿಧವಾ ವಿವಾಹವಿಷಯ ಪ್ರಸ್ತಾಪ, ಪ್ರಭಾವತೀ ಸಂಭಾಷಣ ಮುಂತಾದುವು ಪ್ರಮುಖವಾದ ಗ್ರಂಥಗಳು. ಇಂತಹ ಗ್ರಂಥಗಳ ಲೇಖಕನಾದ ವಿದ್ಯಾಸಾಗರನು ವಂಗಸಾಹಿತ್ಯಸೌಧಕ್ಕೆ ಅತ್ಯಂತ ಮುಖ್ಯವಾದ ಸ್ತಂಭದಂತೆ ಪರಿಗಣಿಸಲ್ಪಟ್ಟಿರುವನು. ಈತನ ಪ್ರತಿಭೆಯನ್ನು ಕುರಿತು ರವೀಂದ್ರನಾಥರು "ಈಶ್ವರಚಂದ್ರನು ವಂಗ ಭಾಷೆಯ ಪ್ರಥಮಶಿಲ್ಪಿ. ಅದಕ್ಕೆ ಮುಂಚೆ ವಂಗಗದ್ಯಸಾಹಿತ್ಯಕ್ಕೆ ಅಂಕುರಾರ್ಪಣವಾಗಿತ್ತು. ಆದರೆ ಈತನು ವಂಗಗದ್ಯದಲ್ಲಿ ಒಂದು ಕಲಾನಿಪುಣತೆಯನ್ನು ತಂದನು" ಎಂದಿರುವರು.

ವಂಗಗದ್ಯವನ್ನು ಬಳಕೆಗೆ ತರುವುದರಲ್ಲಿ ಈಶ್ವರಚಂದ್ರನ ಮುಖ್ಯವಾದ ಸಹೋದ್ಯೋಗಿಯು ಅಕ್ಷಯಕುಮಾರದತ್ತ (೧೮೨೦-೮೬). ಸಾಹಿತ್ಯ ಸಂಬಂಧವಾಗಿ ಅಕ್ಷಯಕುಮಾರನ ಕೃತಿಗಳು ಅಷ್ಟೇನು ಹೇರಳವಾಗಿಲ್ಲ. ಆದರೆ ನಮ್ಮ ದೇಶದಲ್ಲಿ ವೈಜ್ಞಾನಿಕ ರೀತಿ ಆಲೋಚಿಸುವ ಮಾರ್ಗವನ್ನು ತೋರಿದವರಲ್ಲಿ ಈತನು ಅಗ್ರಗಣ್ಯನು. ಈಶ್ವರಚಂದ್ರನ ದಾರಿಯನ್ನು ಅನುಸರಿಸಿ ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ವಂಗಗದ್ಯಪ್ರತಿಷ್ಠೆಗೆ ವಿಶೇಷ ಸಹಾಯಮಾಡಿದವರುಗಳಲ್ಲಿ, ರಾಜನಾರಾಯಣ ಬಸು, ರಾಜೇಂದ್ರಲಾಲ್‌ಮಿತ್ರ, ತಾರಾಶಂಕರ ತರ್ಕರತ್ನ, ರಾಮಗತಿ ನ್ಯಾಯರತ್ನ, ಭೂದೇವ ಮುಖ್ಯೋಪಾಧ್ಯಾಯ, ಕಾಳೀಪ್ರಸನ್ನಸಿಂಹ ಇವರುಗಳು ಉಲ್ಲೇಖಯೋಗ್ಯರಾದವರು.

ಬಂಕಿಮಚಂದ್ರನ ಕಾಲಕ್ಕೆ ವಂಗಸಾಹಿತ್ಯವು ದ್ವಿತೀಯ ಅಧ್ಯಾಯಕ್ಕೆ ಕಾಲಿಟ್ಟಿತು. ಬಂಕಿಮಚಂದ್ರನ ವಿಷಯವಾಗಿ ರವೀಂದ್ರನಾಥರು ಹೀಗೆ ಹೇಳುವರು: "ಬಂಕಿಮಚಂದ್ರನು ವಂಗಸಾಹಿತ್ಯದಲ್ಲಿ ಪ್ರಭಾತ ಸೂರ್ಯೋದಯವನ್ನು ಪ್ರಕಾಶಕ್ಕೆ ತಂದನು. ನನ್ನ ಹೃತ್‌ಕಮಲವು ಮೊದಲು ವಿಕಸಿತವಾಯಿತು

ಪೂರ್ವದಲ್ಲಿ ಇದ್ದುದೇಸು, ತರುವಾಯ ನಾವು ಯಾವುದನ್ನು ಪಡೆದೆವು ಎಂಬು ದನ್ನು ಎರಡು ಕಾಲಗಳ ಸಂಧಿಸಮಯದಲ್ಲಿ ನಿಂತು ಅನುಭವಿಸಿದೆವು. . . . ವಂಗ ಭಾಷೆಯು ತತ್‌ಕ್ಷಣವೆ ಬಾಲ್ಯದಿಂದ ಯೌವನಕ್ಕೆ ಕಾಲಿಟ್ಟಿತು.” ಕೇವಲ ಸಾಹಿತ್ಯ ದೃಷ್ಟಿಯಿಂದ ಮಾತ್ರ ಆತನ ಕೃತಿಗಳು ಪ್ರಮುಖವಾದುವುಗಳಲ್ಲ. ಬಂಕಿಮ ಚಂದ್ರನ ಸಾಹಿತ್ಯದಲ್ಲಿ ಜನಾಂಗದ ಸಂಸ್ಕೃತಿ ಮತ್ತು ಭಾವಪೋಷಣೆ ಮೊದಲು ರೂಪಧಾರಣೆಮಾಡಿತು. ಕಳೆದ ಶತಮಾನದಲ್ಲಿ ವಂಗದೇಶದ ಅಂತರಾತ್ಮವು ಪ್ರಕಾ ಶಕ್ಕೆ ಒಂದು ಮಾರ್ಗವನ್ನು ಅರಸುತ್ತಿತ್ತು. ಜನಾಂಗದ ಜೀವನದಲ್ಲಿ ಯಾವ ಸಮಸ್ಯೆಗಳು ತಲೆದೋರಿದರೂ ಅವುಗಳನ್ನು ಪರಿಹರಿಸುವುದಕ್ಕಾಗಿ ರಾಮಮೋಹನ ರಾಯನು ಮಾಡಿದ ಪ್ರಯತ್ನಗಳು ವಿರೋಧಮೂಲವಾದುದರಿಂದ ಜನರ ಚಿತ್ತ ವನ್ನು ಆಕರ್ಷಿಸಲಿಲ್ಲ. ಆದಕಾರಣ ರಾಮಮೋಹನನ ಪ್ರತಿಭೆ ಅನನ್ಯಸಾಧಾರಣ ವಾದರೂ ಆತನು ವಿಫಲಪ್ರಯತ್ನನಾದನು. ಈ ಸಮಯದಲ್ಲಿ ಬಂಕಿಮಚಂದ್ರನು ತನ್ನ ಅಲೋಕ ಸಾಧಾರಣವಾದ ಪ್ರತಿಭೆ ಮತ್ತು ಬುದ್ಧಿ ಸಾಮರ್ಥ್ಯದಿಂದಲೇ ಭವಿಷ್ಯ ಭಾರತದ ಚೌಕಟ್ಟನ್ನು (Frame-work) ನಿರ್ಮಾಣಮಾಡಿ, ಅಲ್ಲಿ ಜನಾಂಗದ ಆತ್ಮೀಯತೆಯನ್ನು ಪ್ರತಿಷ್ಠಿಸಿ ನವಯುಗನಿರ್ಮಾಣಕ್ಕೆ ಸಹಾಯಕನಾದನು.

ಸಮಾಜವನ್ನು ಉತ್ತಮವರ್ಗಕ್ಕೆ ಒಯ್ಯುವುದಕ್ಕಾಗಿ ಸಾಹಿತ್ಯ—ಎಂಬ ಅಭಿ ಮತವನ್ನು ಹಿಂದೆ ಸೂಚಿಸಿದೆವು. ಬಂಕಿಮಚಂದ್ರನು ಇದನ್ನು ಗ್ರಹಿಸಿದನು. ಆತನ ಸಾಹಿತ್ಯದಲ್ಲಿ ಚಿತ್ತಶುದ್ಧಿ ಮತ್ತು ಮನುಷ್ಯತ್ವಕ್ಕೆ ಅತಿಪ್ರಾಮುಖ್ಯವಾದ ಸ್ಥಾನವಿದೆ. ಕಾವ್ಯಪ್ರಾಮುಖ್ಯತೆ ಅನಂತರ. ಆತನು ತನ್ನ ಸಾಹಿತ್ಯದ ಮೂಲಕ ವಾಗಿ ಜನಾಂಗದ ಶೀಲವನ್ನು ನಿರ್ಮಾಣಮಾಡಲು ಯತ್ನಿಸಿದನು. ಭಾವ ಮತ್ತು ಕಲ್ಪನೆಗಳ ಸಹಾಯದಿಂದ ಜನಾಂಗ ಜೀವನದ ಕುಸಿದ ತಳಹದಿಯನ್ನು ಜೀರ್ಣೋ ದ್ಧಾರಮಾಡಿ ನೂತನ ಸೌಧವನ್ನು ಪ್ರತಿಷ್ಠಾಪನೆ ಮಾಡಿದನು. ಆದರೆ ಅವನ ಪ್ರತಿಭೆ ಅನನ್ಯಸಾಧಾರಣವಾದುದು. ಪ್ರಯೋಜನದೃಷ್ಟಿಯ ಕೋರಿಕೆಯನ್ನು ಸಲಿಸಿದನಂತರವೂ ಅವನ ಸಾಹಿತ್ಯಕ್ಕೆ ರಸಸೃಷ್ಟಿಯ ಭಂಗಬರಲಿಲ್ಲ. ಬಂಕಿಮ ಚಂದ್ರನ ಕಾಲದಲ್ಲಿ ಇದ್ದ ಇತರ ಗದ್ಯ ಲೇಖಕರಲ್ಲಿ ರಮೇಶಚಂದ್ರ ದತ್ತ, ಸಂಜೀವ ಚಂದ್ರ ಚಟ್ಟೋಪಧ್ಯಾಯ, ಅಕ್ಷಯಚಂದ್ರಸರ್ಕಾರ, ಹರಪ್ರಸಾದಶಾಸ್ತ್ರಿ, ಸ್ವರ್ಣ ಕುಮಾರಿದೇವಿ ಇವರುಗಳ ಹೆಸರು ಮಾನನೀಯವಾದುವು.

ತರುವಾಯ ಬಂದ ವಂಗಸಾಹಿತ್ಯದ ಅಧಿನಾಯಕ ರವೀಂದ್ರನಾಥ ಠಾಕೂರರು. ರವೀಂದ್ರನಾಥರ ಪ್ರತಿಭೆ ಸರ್ವತೋಮುಖವಾದುದು. ಅವರ ಗದ್ಯವಾಗಲಿ, ಪದ್ಯ ವಾಗಲಿ, ನಾಟಕವಾಗಲಿ, ಎಲ್ಲವೂ ಅಪೂರ್ವಕೃತಿಗಳು. ರವೀಂದ್ರರು ಸ್ಪರ್ಶ

ಮಾಡಿದುದನ್ನೆಲ್ಲ ಜೀವಕಳೆಯಿಂದ ತುಂಬಿದರು. ಆದರೆ ನಾವು ಇದನ್ನು ಮನಸ್ಸಿನಲ್ಲಿಡಬೇಕು: ರವೀಂದ್ರನಾಥರ ರಚನೆಗಳೆಲ್ಲವೂ ಸಮಾಸವಾಗಿ ಉತ್ಕೃಷ್ಟವಲ್ಲ. ಅವರ ಕಾವ್ಯಸಾಹಿತ್ಯವು ಜಗತ್ತಿನ ಪ್ರಥಮವರ್ಗದ ಕೃತಿಗಳಲ್ಲಿರಲು ಯೋಗ್ಯವಾದುದು. ಆದರೆ ರವೀಂದ್ರನಾಥರ ಇತರ ರಚನೆಗಳಿಗೆ ಇದು ಅನ್ವಯಿಸುವುದಿಲ್ಲ. ಅವರ ಕಾದಂಬರಿಗಳನ್ನು ಸಾಹಿತ್ಯ ಜಗತ್ತಿನಲ್ಲಿ ಎರಡನೆಯ ಶ್ರೇಣಿಗೆ ಸೇರಿದವೆಂದು ಪರಿಗಣಿಸಬಹುದು. ಬಂಕಿಮಚಂದ್ರರ ಕಾದಂಬರಿಗಳು ರವೀಂದ್ರನಾಥರ ಕಾದಂಬರಿಗಳಿಗಿಂತ ಉಚ್ಚವರ್ಗದವು. ಆದರೆ ರವೀಂದ್ರನಾಥರ ಸಣ್ಣ ಕಥೆಗಳು ಮತ್ತು ಪ್ರಬಂಧಗಳು ಬಹಳ ಅಪೂರ್ವವಾದುವುಗಳು. ಜಗತ್ತಿನ ಸಾಹಿತ್ಯದಲ್ಲಿ ಸರ್ವಶ್ರೇಷ್ಠರಾದ ಸಾಹಿತ್ಯಜ್ಞರ ಕೃತಿಗಳೊಂದಿಗೆ ಸರಿತೂಗುವ ಒಂದು ಮಹತ್ವವಿದೆ ಇವುಗಳಲ್ಲಿ.

ರವೀಂದ್ರನಾಥರನ್ನು ಬಿಟ್ಟರೆ ವಂಗಭಾಷೆಯ ಶ್ರೇಷ್ಠ ಸಣ್ಣ ಕಥೆಗಳ ಲೇಖಕರು ಪ್ರಭಾತಕುಮಾರ ಮುಖ್ಯೋಪಾಧ್ಯಾಯ. ರವೀಂದ್ರನಾಥರ ಪ್ರತಿಭೆಯನ್ನು ಮೀರಿ ಪ್ರಭಾತಕುಮಾರನು ತನ್ನ ವೈಶಿಷ್ಟ್ಯವನ್ನು ಬೆಳಗಿರುವನು. ಪ್ರಭಾತಕುಮಾರನ ಕಥೆಗಳಲ್ಲಿ ಭಾವವೇಗವು ಕಡಮೆ. ಕಥೆಯ ಆಕರ್ಷಣ ಹೆಚ್ಚು. ಆತನು ರಚಿಸಿದ ಗ್ರಂಥಗಳಲ್ಲಿ ನವಕಥೆ, ಷೋಡಶಿ, ದೇಶಿ ಮತ್ತು ವಿಲಾತಿ, ನವೀನಸಂನ್ಯಾಸಿ ಇವು ಮುಖ್ಯವಾದುವುಗಳು.

ಪ್ರಮಥ ಚೌಧುರಿ ವಂಗಗದ್ಯದಲ್ಲಿ ಒಂದು ಹೊಸ ಪ್ರವಾಹವನ್ನು ತಂದಿರುವನು. ಇದು ಗ್ರಾಮಭಾಷೆಯ ಮೇಲೆ ನಿಂತಿರುವುದು. ವಿರೋಧಾಭಾಸಗಳ ಪ್ರಾಚುರ್ಯವು ಇದರ ಮುಖ್ಯಲಕ್ಷಣ.

ಐತಿಹಾಸಿಕ ಕಾದಂಬರಿಗಳಲ್ಲಿ ರಾಖಾಲ್‌ದಾಸ್ ವಂದ್ಯೋಪಾಧ್ಯಾಯನು ವಿಶೇಷ ಪ್ರತಿಭೆಯನ್ನು ತೋರಿರುವನು. ಕರುಣ, ಶಶಾಂಕ, ಧರ್ಮಪಾಲ ಮತ್ತು ಮಯೂಖ ಕಾದಂಬರಿಗಳಲ್ಲಿ ಗುಪ್ತಪಾಲ, ಮತ್ತು ಮೊಗಲ ಯುಗದ ಜೀವನವನ್ನು ಚಿತ್ರಿಸಿರುವನು.

ಆಧುನಿಕ ಕಾಲದಲ್ಲಿ ಸರ್ವಜನಾದರಣೀಯವಾದ ಕಾದಂಬರಿ ಮತ್ತು ಸಣ್ಣ ಕಥೆಗಳ ಲೇಖಕನು ಶರತ್‌ಚಂದ್ರ ಚಟ್ಟೋಪಾಧ್ಯಾಯ. ಆತನ ಕೃತಿಗಳಲ್ಲಿ ಎಲ್ಲವೂ ಪ್ರಥಮಶ್ರೇಣಿಗೆ ಸೇರಿದುದಲ್ಲ. ಆದರೆ ದುಃಖಿಗಳು, ದರಿದ್ರರು, ದಳಿತರು ಇವರ ಪರವಾಗಿ ಅಜಸ್ರ ಸಹಾನುಭೂತಿ ಆತನ ರಚನೆಯನ್ನು ಮಧುರವಾಗಿ ಮಾಡಿವೆ. ಸಮಾಜದಲ್ಲಿ ದಾರಿತಪ್ಪಿದ ಪುರುಷರು ಮತ್ತು ಸ್ತ್ರೀಯರ ಆಂತರಿಕ ಕಥೆ ಮತ್ತು ವೇದನೆಗೆ ಈತನು ತನ್ನ ಸಾಹಿತ್ಯದಲ್ಲಿ ಒಂದು ರೂಪು ಕೊಟ್ಟಿರುವನು. ಇದೇ ಅವನ ಜನಾದರಣೀಯತೆಗೆ ಕಾರಣ. ಆದರೆ ಬಂಕಿಮಚಂದ್ರ ಮತ್ತು ರವೀಂದ್ರರ ರಚನೆಗಳಲ್ಲಿ ತೋರಿಬರುವ ಒಂದು ಗಾಢ ವಿಚಾರಶೀಲತೆ ಶರತ್‌ಚಂದ್ರನಲ್ಲಿ ಇಲ್ಲ.

ನವೀನ ಲೇಖಕರಲ್ಲಿ ವಿಭೂತಿಭೂಷಣ ವಂದ್ಯೋಪಾಧ್ಯಾಯ, ಪಥೇರ್ ಪಾಚಾಲಿ ಎಂಬ ಕಾದಂಬರಿಯನ್ನು ಬರೆದು ಯಶಸ್ವಿಯಾಗಿರುವನು. ಅದಕ್ಕೆ ಕಾರಣ ಆತನ ದೃಷ್ಟಿಭಂಗಿ. ಆತನ ರಚನೆಯು ಒಂದು ಹೊಸ ಬಗೆಯದು. ಶ್ರೀಯುಕ್ತ ತಾರಾಶಂಕರ್ ಮತ್ತು ವನಫುಲ್ (ಬಲಯಚಂದ್ರ ಮುಖ್ಯೋಪಾಧ್ಯಾಯ) ನವೀನ ಲೇಖಕರಲ್ಲಿ ಯಶಸ್ವಿಗಳು. ಕಾದಂಬರಿ ಮತ್ತು ಸಣ್ಣ ಕಥೆಗಳಲ್ಲಿ ಇವರು ತಮ್ಮ ಅಸಾಧಾರಣವಾದ ಪ್ರತಿಭೆಯನ್ನು ತೋರಿರುವರು. ಇವರನಂತರ ಶರದಿಂದು ವಂದ್ಯೋಪಾಧ್ಯಾಯ, ಸರೋಜಕುಮಾರ್ ರಾಯಚೌಧುರಿ, ವಿಭೂತಿ ಮುಖ್ಯೋಪಾಧ್ಯಾಯ ಮತ್ತು ಪ್ರಮಥನಾಥ ಬಿಶೀ ಇವರುಗಳು ಹೆಚ್ಚುಕಡಮೆ ರವೀಂದ್ರನಾಥ ಅಥವಾ ಶರತ್‌ಚಂದ್ರರ ಪ್ರಭಾವಕ್ಕೆ ಒಳಗಾದವರು.

ಇವುಗಳನ್ನು ಬಿಟ್ಟರೆ ವರ್ತಮಾನಯುಗದ ವಂಗಸಾಹಿತ್ಯದಲ್ಲಿ ಮತ್ತೊಂದು ಭಾವಧಾರೆಯು ಕಾಣಿಸುವುದು. ಇದನ್ನು ಸಾಹಿತ್ಯದಲ್ಲಿ ವಾಮಾಚಾರಪದ್ಧತಿ ಎನ್ನಬಹುದು. ಸುಸಾಹಿತ್ಯಜ್ಞರಾದ ಮೋಹಿತಲಾಲ್ ಮಜುಂದಾರ್ ಎಂಬವರು ಇವುಗಳ ವಿಚಾರವಾಗಿ ಹೀಗೆ ಬರೆಯುವರು. "ಈ ಸಾಹಿತ್ಯದ ಭಾವವಸ್ತುವು ಜೀವನಾ ವೇಗದಲ್ಲಿ ಉದ್ಭವಿಸಿದುದಲ್ಲ. ಮರಣೋನ್ಮುಖನಾದ ರೋಗಿಯ ಚಿತ್ತವಿಕಾರದಿಂದ ಜನಿತವಾದ ವೃಥಾಪ್ರಲಾಪ. ಇದು ರಸಹೀನ. ಇಲ್ಲಿರುವುದು ಕೆಲವು ಪದಗಳ ಆಡಂಬರ! ಅದರ ಅರ್ಥವು ಕೂಡ ಎರವಲಾಗಿ ತಂದದ್ದು. ಇಲ್ಲಿರುವ ಆವೇಗವು ದುರ್ಬಲ ದೇಹದಲ್ಲಿ ಕ್ಷಣಕಾಲ ಕಂಪಿಸುವ ಜ್ವರದಂತೆ.' ಬುದ್ಧದೇವಬಸು, ಅಚಿಂತ್ಯ ಕುಮಾರ ಸೇನಗುಪ್ತ, ಇವರುಗಳು ಈ ಸಂಪ್ರದಾಯಕ್ಕೆ ಸೇರಿದವರು.

ನಾಟಕ

ರಂಗಭೂಮಿ ಇಲ್ಲದ ಜಾತ್ರಾಗಾನವು ವಂಗನಾಟಕೀಯ ಪ್ರತಿಭೆಯ ಒಂದು ಹೆಮ್ಮೆ. ಆದರೆ ಹಿಂದಿನ ಜಾತ್ರಾಕೂಟಗಳಿಂದ ಇಂದಿನ ನಾಟಕವು ಜನ್ಮತಾಳಲಿಲ್ಲ. ಪಾಶ್ಚಾತ್ಯ ನಾಟಕಗಳ ಪ್ರಭಾವವು ಆಧುನಿಕ ನಾಟಕಕ್ಕೆ ಮೂಲ. ಹೇರಾಸಿಮ್ ಲೆಬೆಡೆಫ್ ಎಂಬ ರಷ್ಯಾದೇಶೀಯನು ಕ್ರಿ.ಶ. ೧೭೯೫ ಕಲ್ಕತ್ತೆಯಲ್ಲಿ ಒಂದು ನಾಟಕ ಶಾಲೆಯನ್ನು ಸ್ಥಾಪನೆಮಾಡಿ ಅಲ್ಲಿ ಎರಡು ಆಂಗ್ಲೇಯ ನಾಟಕದ ವಂಗ ಅನುವಾದವನ್ನು ವಂಗ ನಟನಟಿಯರ ಮೂಲಕವಾಗಿ ಅಭಿನಯಿಸಿದನು. ಅನಂತರ ಕ್ರಿ.ಶ. ೧೮೩೧ ರಲ್ಲಿ ಪ್ರಸನ್ನಕುಮಾರ ಠಾಕೂರನು ಒಂದು ನಾಟಕಶಾಲೆಯನ್ನು ಸ್ಥಾಪಿಸಿದನು. ಇದು ದೇಶೀಯರಿಂದ ಸ್ಥಾಪಿತವಾದ ನಾಟಕಶಾಲೆಗಳಲ್ಲಿ ಮೊದಲನೆಯದು. ಇಲ್ಲಿ ವಿದ್ಯಾಸುಂದರ ಕಥೆಯನ್ನು ನಾಟಕರೂಪಕ್ಕೆ ತಂದು ಅಭಿನಯಿ

ಸಿದರು. ವಂಗನಾಟಕಗಳ ಅಭಾವದಿಂದ ಅಂದಿನ ಕಾಲದಲ್ಲಿ ವಂಗನಾಟಕಶಾಲೆಗಳು ಸುಪ್ರತಿಷ್ಠವಾಗಲಿಲ್ಲ. ಸಂಸ್ಕೃತ ನಾಟಕಗಳನ್ನು ಅನುವಾದಮಾಡಿ ಅಭಿನಯಿಸುವ ಪ್ರಯತ್ನವು ನಡೆಯಿತು. ಅದು ಸಫಲವಾಗಲಿಲ್ಲ. ಕ್ರಿ.ಶ. ೧೮೫೨ರಲ್ಲಿ ಮೊದಲನೆಯ ಸ್ವತಂತ್ರ ವಂಗನಾಟಕ ರಚಿತವಾಯಿತು. ಅದೇ ಕೀರ್ತಿವಿಲಾಸ ಮತ್ತು ಭದ್ರಾರ್ಜುನ. ಭದ್ರಾರ್ಜುನ ನಾಟಕವನ್ನು ಹೊಸದಲ್ಲ. ಆದರೆ ರಚನಾರೀತಿಯಲ್ಲಿ ಸಂಪೂರ್ಣ ನವೀನತೆ ಇರುವುದು. ಸಂಸ್ಕೃತ ನಾಟಕ ರಚನಾಪದ್ಧತಿ ಮತ್ತು ಆಂಗ್ಲೇಯ ಪದ್ಧತಿಗಳನ್ನು ಸೇರಿಸಿ ತಾರಾಚರಣ ಎಂಬವನು ಈ ನಾಟಕವನ್ನು ರಚಿಸಿದನು. ಅನಂತರ ಆಂಗ್ಲೇಯ ನಾಟಕಗಳನ್ನು ಅನುಸರಿಸಿ ಪ್ರಕಾಶವಾದ ಮೊದಲನೆಯ ವಂಗನಾಟಕವು ಹರಚಂದ್ರಘೋಷರ ಭಾನುಮತೀ ಚಿತ್ತವಿಲಾಸ (೧೮೫೩). ಕಾಳೀಪ್ರಸನ್ನ ಸಿಂಹನು ಮೂರುನಾಲ್ಕು ನಾಟಕಗಳನ್ನು ರಚಿಸಿರುವನು. ರಚನಾದೃಷ್ಟಿಯಿಂದ ಅವುಗಳೇನು ಅಷ್ಟು ಪ್ರಾಮುಖ್ಯವಲ್ಲ. ರಾಮನಾರಾಯಣ ತರ್ಕರತ್ನ (೧೮೨೨-೧೮೮೬), ಉಮಾಚರಣ ಚಟ್ಟೋಪಾಧ್ಯಾಯ, ಶಾಮಾಚರಣ ಶ್ರೀಮಾನೀ, ಹಾರಾಣಚಂದ್ರ ಮುಖ್ಯೋಪಾಧ್ಯಾಯ ಮುಂತಾದವರು ಈ ಸಮಯದಲ್ಲಿ ನಾಟಕ ಕರ್ತೃಗಳಾಗಿ ಹೆಸರುವಾಸಿಯಾಗಿದ್ದರು. ಆದರೆ ಇವರಲ್ಲಿ ಯಾವ ಕೃತಿಯೂ ಉತ್ತಮವರ್ಗಕ್ಕೆ ಸೇರಿಲ್ಲ.

ಮೈಕೇಲ್ ಮಧುಸೂದನದತ್ತನ ಶರ್ಮಿಷ್ಠಾ ನಾಟಕವು (ಕ್ರಿ. ಶ. ೧೮೫೯) ವಂಗನಾಟಕದಲ್ಲಿ ಒಂದು ನೂತನ ಚೇತನವನ್ನು ತಂದಿತು. ಮಧುಸೂದನದತ್ತನ ರಚನಾದಕ್ಷತೆಯು ಕೌತುಕರಸದ ಪ್ರಾಮುಖ್ಯತೆ, ಮತ್ತು ಭಾಷೆಯ ಉತ್ಕೃಷ್ಟತೆ ಆತನ ನಾಟಕರಚನೆಗೆ ಒಂದು ವೈಶಿಷ್ಟ್ಯವನ್ನು ಕೊಟ್ಟಿವೆ. ಮಧುಸೂದನನು ನಾಲ್ಕು ನಾಟಕಗಳನ್ನೂ ಎರಡು ಪ್ರಹಸನಗಳನ್ನೂ ರಚಿಸಿದನು. ಕೃಷ್ಣಕುಮಾರಿ (ಕ್ರಿ. ಶ. ೧೮೬೧) ಮಧುಸೂದನನ ಶ್ರೇಷ್ಠನಾಟಕ. ಆತನ ಎರಡು ಪ್ರಹಸನಗಳಿಂದ ಏಕೆ ಇಕಿಬೊಲೆ ಸಭ್ಯತಾ? (ಇದನ್ನೆ ಸಭ್ಯತೆ ಎನ್ನುವುದು?) (೧೮೬೦) ಬುಡೊಶಾಲೀಕೇರ್ ಘಾಡೇರೊ (೧೮೬೦) ವಂಗಸಾಹಿತ್ಯದಲ್ಲಿ ಸರ್ವಶ್ರೇಷ್ಠವಾದುವುಗಳು.

ವಂಗನಾಟಕರಚನೆಗೆ ನೂತನ ಪ್ರೇರಣೆಯನ್ನು ಕೊಟ್ಟವನು ದೀನಬಂಧು ಮಿತ್ರ. (ಕ್ರಿ. ಶ. ೧೮೨೯-೭೩) ವಂಗಸಾಹಿತ್ಯದಲ್ಲಿ ಇದುವರೆಗೆ ಉತ್ಕೃಷ್ಟ ನಾಟಕಗಳು ನಿರ್ಮಾಣವಾಗಿರಲಿಲ್ಲ. ಅದಕ್ಕೆ ಕಾರಣ, ನಾಟಕರಚನೆಗೆ ಮಾನವ ಜೀವನ ಮತ್ತು ಅದನ್ನು ಯಾವ ರೀತಿ ನೋಡಬೇಕು ಎನ್ನುವ ಶಕ್ತಿ ಆವಶ್ಯಕವಾಗಿರಬೇಕಾಗಿತ್ತು. ಆ ದೃಷ್ಟಿ ವಂಗದೇಶದಲ್ಲಿ ಸ್ಥಿರವಾಗಿರಲಿಲ್ಲ. ಅತಿ ಚಂಚಲವಾಗಿತ್ತು; ಯಾವ ಸ್ವತಂತ್ರ ಚಲನೆಯು ನಾಟಕದ ಪ್ರಾಣವಾಗಿದೆಯೊ ಅದಕ್ಕೆ ವಂಗದೇಶದಲ್ಲಿ ಅಭಾವ. ಇದಲ್ಲದೆ ಕಲ್ಪನೆಯ ವಸ್ತುನಿಷ್ಠತೆ ನಾಟಕೀಯ ಪ್ರತಿಭೆಯ

ಶ್ರೇಷ್ಠ ಲಕ್ಷಣ. ಇದು ವಂಗನಾಟಕ ಕರ್ತೃಗಳಲ್ಲಿ ಬಹಳ ಸ್ವಲ್ಪವಾಗಿ ಪ್ರಕಟವಾಗಿತ್ತು. ಈ ಅಲ್ಪರದ ಮಧ್ಯದಲ್ಲಿ ದೀನಬಂಧುವಿನ ಪ್ರತಿಭೆ ಶ್ರೇಷ್ಠವಾದುದು. ಅವನ ಪ್ರಥಮ ನಾಟಕ ನೀಲದರ್ಪಣ (ಕ್ರಿ. ಶ. ೧೮೬೦) ಮಿಸೆಸ್ ಸ್ಟೌ ಅವರ ಅಂಕಲ್ ಟಾಂಸ್ ಕ್ಯಾಬಿನ್ ಕಾದಂಬರಿಯು ಅಮೇರಿಕಾ ದೇಶದ ಜನರಲ್ಲಿ ನಿಗ್ರೋ ಜನಾಂಗದವರಿಗೆ ತಾವು ಕೊಡುತ್ತಿದ್ದ ಹಿಂಸೆಯ ವಿಷಯವಾಗಿ ಅನುತಾಪ ಹುಟ್ಟುವಂತೆ ಮಾಡಿ ಪ್ರಬಲವಾದ ಜನಮತವನ್ನು ಹೇಗೆ ಕೆರಳಿಸಿತೊ ಹಾಗೆಯೆ ನೀಲ ದರ್ಪಣವು ಕೂಡ ನೀಲಕಾರರ ಅತ್ಯಾಚಾರವನ್ನು ನಿಲ್ಲಿಸುವುದಕ್ಕೆ ಸಹಾಯ ಮಾಡಿತು. ನೀಲದರ್ಪಣವನ್ನು ಬಿಟ್ಟರೆ ದೀನಬಂಧು, ನವೀನ ತಪಸ್ವಿನಿ, (೧೮೬೩) ಜಿಯೆ ಪಾಗಲಾಬುಡೋ (೧೮೬೬) ಸಧವಾರ್ ಏಕಾದಶೀ (೧೮೬೬) ಲೀಲಾವತಿ (೧೮೬೭) ಜಾಮಾಯಿ ಬಾರಿಕ್ (೧೮೭೨) ಕಮಲೆ ಕಾಮಿನಿ (೧೮೭೩) ಮುಂತಾದವುಗಳನ್ನು ರಚಿಸಿದನು.

ಅನಂತರ ಜ್ಯೋತಿರಿಂದ್ರನಾಥ ಠಾಕೂರರು, ಉಪೇಂದ್ರನಾಥ್‌ದಾಸ್, ಉಮೇಶ್‌ಚಂದ್ರಗುಪ್ತ ಮುಂತಾದವರು ಅನೇಕ ಸ್ವತಂತ್ರ ನಾಟಕಗಳನ್ನೂ ಭಾಷಾಂತರಗಳನ್ನೂ ಮಾಡಿ ಯಶಸ್ವಿಯಾದರು.

ಗಿರೀಶಚಂದ್ರಘೋಷ್ (ಕ್ರಿ. ಶ. ೧೮೪೪-೧೯೧೧) ವಂಗದೇಶದ ಶ್ರೇಷ್ಠ ನಾಟಕಕರ್ತೃ ಮತ್ತು ನಟನು. ವಂಗಜನಾಂಗದ ಭಾವಧಾರೆಯನ್ನು ಇವನು ಲಕ್ಷ್ಯದಲ್ಲಿಟ್ಟು ಸ್ವತಂತ್ರ ನಾಟಕಗಳನ್ನು ರಚಿಸಿದನು. ಶ್ರೀರಾಮಕೃಷ್ಣ ಮತ್ತು ಅವರ ಶಿಷ್ಯವರ್ಗದ ಪ್ರಭಾವದಿಂದ ಇವನ ನಾಟಕಗಳಲ್ಲಿ ಉಚ್ಚ ಆಧ್ಯಾತ್ಮಿಕ ಭಾವಗಳು ತುಂಬಿವೆ. ಪೌರಾಣಿಕ, ಸಾಮಾಜಿಕ, ಐತಿಹಾಸಿಕ, ಧಾರ್ಮಿಕ, ಮುಂತಾದವುಗಳಿಗೆ ಸೇರಿದ ಸುಮಾರು ಎಪ್ಪತ್ತು ನಾಟಕಗಳನ್ನು ಮತ್ತು ಪ್ರಹಸನಗಳನ್ನು ಇವನು ರಚಿಸಿರುವನು. ನಟನೆಯಲ್ಲಿಯೂ ಅತಿ ಪ್ರಖ್ಯಾತನಾದವನು. ಅನೇಕರು ಇವನನ್ನು ವಂಗದೇಶದ ಗ್ಯಾರಿಕ್ ಎಂದು ಕರೆದರು. ಈತನ ನಾಟಕಗಳನ್ನು ಸತ್ಯ ದೃಷ್ಟಿಯಿಂದ ವಿಮರ್ಶಿಸಿದರೆ ಮೂರು ನಾಲ್ಕನ್ನು ಬಿಟ್ಟರೆ ಉಳಿದವುಗಳು ಪ್ರಥಮ ದರ್ಜೆಗೆ ಸೇರಲಾರವೆಂದು ಒಪ್ಪಬೇಕಾಗಿದೆ.

ಕ್ಷೀರೋದ ಪ್ರಸಾದ್ ವಿದ್ಯಾವಿನೋದ, ಅಮೃತಲಾಲ್ ಬಸು, ದ್ವಿಜೇಂದ್ರಲಾಲ್ ರಾಯ್, ಈ ಕಾಲದ ನಾಟಕ ಕರ್ತೃಗಳು. ಆದರೆ ಇವರ ರಚನೆಗಳು ಅಷ್ಟೇನು ಉತ್ತಮವರ್ಗಕ್ಕೆ ಸೇರಿದುವಲ್ಲ.

ರವೀಂದ್ರನಾಥರು ಕೂಡ ನಾಟಕಗಳು, ಪ್ರಹಸನಗಳು, ರೂಪಕಗಳನ್ನು ರಚಿಸಿರುವರು. ಇವುಗಳೆಲ್ಲವೂ ರವೀಂದ್ರರ ಉಚ್ಚ ಪ್ರತಿಭಾ ಶಕ್ತಿಯಿಂದ ಕೂಡಿದ್ದರೂ

ಮೇಲು ತರಗತಿಯ ನಾಟಕಗಳಲ್ಲ. ವಂಗಸಾಹಿತ್ಯದಲ್ಲಿ ನಾಟಕರಚನೆಯು ಮುಂದು ವರಿದಿರುವುದು ಬಹಳ ಕಡಮೆ. ಗದ್ಯ ಮತ್ತು ಪದ್ಯದಲ್ಲಿ ಜಗತ್ತಿನ ಇತರ ಸಾಹಿತ್ಯ ಗಳೊಂದಿಗೆ ಸರಿಸಮನಾಗಿ ನಿಲ್ಲಬಲ್ಲುದು. ಆದರೆ ವಂಗಭಾಷೆಯ ನಾಟಕಗಳನ್ನು ಷೇಕ್ಸ್‌ಪಿಯರ್ ಕಾಳಿದಾಸರೊಂದಿಗೆ ಹೋಲಿಸಿ ನೋಡಿದರೆ ಇವುಗಳು ಎರಡನೆಯ ದರ್ಜೆಗೆ ಸೇರಿವೆ ಎಂದು ಒಪ್ಪಬೇಕಾಗಿದೆ. ಇದಕ್ಕೆ ಕಾರಣವನ್ನು ನಾವು ಹಿಂದೆಯೇ ಹೇಳಿದೆವು.

ಕಾವ್ಯ

ಹತ್ತೊಂಬತ್ತನೆಯ ಶತಮಾನದ ಮಧ್ಯದ ವರೆಗೆ ಎರಡು ಕಾವ್ಯ ಪ್ರವಾಹಗಳು ಸಮಾನವಾಗಿ ಹರಿದು ಬಂದವು. ಮೊದಲನೆಯದು ವೈಷ್ಣವಪದಾವಳಿ ಮತ್ತು ಪುರಾಣಿಕ ಕಾವ್ಯಗಳು, ಎರಡನೆಯದು ಭಾರತಚಂದ್ರನ ಅನ್ನದಾಮಂಗಳ ಮುಂತಾದ ಲೌಕಿಕ ಕಾವ್ಯಗಳು. ಹತ್ತೊಂಬತ್ತನೆಯ ಶತಮಾನದಲ್ಲಿ ಮೊದಲನೆಯ ವರ್ಗಕ್ಕೆ ಸೇರಿದವರಲ್ಲಿ ಉಲ್ಲೋಕ ಯೋಗ್ಯವಾದವರು, ರಘುನಂದನ ಗೋಸ್ವಾಮಿಯ ರಾಮ ರಸಾಯನ, ರಾಮಚಂದ್ರ ತರ್ಕಾಲಂಕಾರನ ಅಕ್ರೂರಸಂವಾದ; ಇವರ ಕಾವ್ಯಗಳಲ್ಲಿ ಹಿಂದಿನ ಕವಿಗಳಾದ ಚಂಡಿದಾಸ್, ಮತ್ತು ಗೋವಿಂದದಾಸರ ಕೃತಿಗಳಲ್ಲಿರುವ ಮಾಧುರ್ಯವಿಲ್ಲ. ಇವರು ಹಿಂದಿನ ಸಂಪ್ರದಾಯದ ಕೊನೆಯ ಕವಿಗಳು. ಭಾರತ ಚಂದ್ರನ ಪದ್ಧತಿಗೆ ಸೇರಿದವರಲ್ಲಿ ಸರ್ವಮಾನ್ಯರಾದವರು ಮದನಮೋಹನ ತರ್ಕಾ ಲಂಕಾರ, (ಕ್ರಿ. ಶ. ೧೮೧೬-೫೮) ಮತ್ತು ಈಶ್ವರಚಂದ್ರಗುಪ್ತ. ಕಾವ್ಯದೃಷ್ಟಿಯಿಂದ ಈಶ್ವರಚಂದ್ರನ ಸ್ಥಾನ ಮದನಮೋಹನನಿಗಿಂತ ಮೇಲಿನದು. ಈಶ್ವರಚಂದ್ರನು ಒಂದು ದೃಷ್ಟಿಂದ ಪೂರ್ವಪದ್ಧತಿಯ ಕೊನೆಯ ಕವಿಯಾಗಿಯೂ, ಆಧುನಿಕ ಪದ್ಧತಿಯ ಮೊದಲನೆಯ ಕವಿಯಾಗಿಯೂ ಇರುವನು. ಈಶ್ವರಚಂದ್ರ ಮತ್ತು ಆತನ ಅನು ಯಾಯಿಗಳ ಮೂಲಕ ಆಧುನಿಕ ವಂಗಕಾವ್ಯದ ಜನ್ಮೋದಯವಾಯಿತು. ಅವರಲ್ಲಿ ಪ್ರಮುಖರಾದವರು ದ್ವಾರಕಾನಾಥ ಅಧಿಕಾರೀ, ರಂಗಲಾಲ್ ವಂದ್ಯೋಪಾಧ್ಯಾಯ, ದೀನಬಂಧುಮಿತ್ರ ಮತ್ತು ಬಂಕಿಮಚಂದ್ರ ಚಟ್ಟೋಪಾಧ್ಯಾಯ.

ಆಧುನಿಕ ವಂಗಸಾಹಿತ್ಯದಲ್ಲಿ ಯುಗಪ್ರವರ್ತಕ ಮಹಾಕವಿ ಮಧುಸೂದನ ದತ್ತ (ಕ್ರಿ. ಶ. ೧೮೨೪-೭೩). ಆತನ ಮೇಘನಾದವಧ ಕಾವ್ಯದ ಭಾಷೆ ಛಂಧಸ್ಸು ಮತ್ತು ಪ್ರಕಾಶಭಂಗಿಯು ವಂಗಸಾಹಿತ್ಯದಲ್ಲಿ ಒಂದು ಅಪೂರ್ವ ಸೃಷ್ಟಿ. ಹೋಮರ್, ವರ್ಜಿಲ್, ಡಾಂಟೆ, ಮಿಲ್ಟನ್ ಕವಿಗಳನ್ನು ಅನುಸರಿಸಿ ವಂಗಭಾಷೆಯಲ್ಲಿ ಒಂದು ಓಜಸ್ಸನ್ನು ತಂದಿರುವನು. ಮಧುಸೂದನದ ಪ್ರತಿಭೆ ವಿಷಯವಾಗಿ ಸುಲೇಖಕ ಪಂಡಿತ ರಾದ ಮೋತಿಲಾಲ್ ಮಜುಂದಾರರು ಹೀಗೆ ಬರೆಯುತ್ತಾರೆ. ಐವತ್ತು ವರುಷ

ಗಳಲ್ಲಿ ನಮ್ಮ ವಂಗಕಾವ್ಯದ ನವಯುಗ ರೀತಿಯನ್ನು ನೋಡಬೇಕಾದರೆ, ಆ ನವ ಜಾಗರಣದ ಸಂಜೀವನೀ ಮಂತ್ರದ ಆದಿಸೃಷ್ಟಿಕರ್ತನು ಮಧುಸೂಧನ. ಮಧುಸೂದನನು ಯಾವ ಕಾವ್ಯಸಂಪ್ರದಾಯವನ್ನೂ ಬಳಕೆಗೆ ತರಲಿಲ್ಲ. ಆತನ ಕಲ್ಪನಾಭಂಗಿಯನ್ನು ಉಳಿದವರು ಸ್ವೀಕರಿಸಲಿಲ್ಲ. ಈತನು ವಂಗಕಾವ್ಯದಲ್ಲಿ ಶಕ್ತಿ ಮತ್ತು ಸಾಹಸವನ್ನು ತಂದಿರುವನು. ಗ್ರಾಮ್ಯತಾ ಸೀಮೆಯನ್ನು ದಾಟಿ ಕಾವ್ಯವನ್ನು ವಿಶ್ವಸಾಹಿತ್ಯದ ಕಡೆಗೆ ಒಯ್ದಿರುವನು. ಲಜ್ಜಾ ಸಂಕೋಚಗಳನ್ನು ತೊರೆದು ಯೂರೋಪ್ ದೇಶದ ಕೂಲಂಕಷಭಾವ ಧಾರೆಯನ್ನು ಸ್ವೀಕರಿಸಿ, ಸಂಪ್ರದಾಯದ ದಡಗಳನ್ನು ಒಡೆದು, ಒಂದು ಅಪೂರ್ವ ಛಂದಸ್ಸಿನಲ್ಲಿ ಹೊಸ ತರಂಗಗಳನ್ನು ನಿರ್ಮಿಸಿ ಸಾಗರ ಸಂಗಮಕ್ಕೆ ಹರಿದಿರುವನು. ಇದೇ ಶಕ್ತಿ, ಇದೇ ಸಾಹಸ, ಇದೇ ನವಯುಗದ ಭರವಸೆ ಮತ್ತು ಆಕಾಂಕ್ಷೆ. ಭಾಷೆಯಲ್ಲಿ ಅಂತರ್ನಿಹಿತಶಕ್ತಿಯನ್ನು ಪ್ರಕಟಗೊಳಿಸಿ, ಕಾವ್ಯಕಲೆಯ ಪ್ರಯೋಜನಾರ್ಥವಾಗಿ ಅದರ ಸಾಮರ್ಥ್ಯವನ್ನು ತೋರಿ, ವಂಗೀಯರ ಮನಸ್ಸನ್ನು ಸಾಹಿತ್ಯಗೌರವದ ಕಡೆಗೆ ಕಣ್ದೆರೆಯುವಂತೆ ಮಾಡಿದನು. ಅಂತಹ ಕಾರ್ಯಕ್ಕೆ ಎಷ್ಟು ಪ್ರತಿಭೆಯು ಆವಶ್ಯಕವೆಂಬುದು ನಾವು ಆಲೋಚಿಸಬೇಕಾದ ವಿಷಯ. ವಂಗಗದ್ಯದಲ್ಲಿ ಬಂಕಿಮಚಂದ್ರನು ಏನನ್ನು ಮಾಡಿದನೋ, ಅದಕ್ಕಿಂತ ಹೆಚ್ಚಾಗಿ ಮಧುಸೂದನನು ಅಸಾಧ್ಯವನ್ನು ಸಾಧಿಸಿದನು. ಬಂಕಿಮಚಂದ್ರನಿಗೆ ಹಿಂದಿನವರ ಮಾರ್ಗ ಗೋಚರಿಸಿತು. ಮಧುಸೂದನನಿಗೆ ಅದು ಇರಲಿಲ್ಲ. ಈತನು ಒಂದು ಕಡೆ ವರ್ಜಿಲ್ ಮತ್ತು ಮಿಲ್ಟನ್ ಕವಿಗಳಿಗೆ ಮತ್ತೊಂದು ಕಡೆ ಭಾರತಚಂದ್ರ ಮತ್ತು ಕೃತ್ತಿವಾಸರಿಗೆ ಸೇತುವೆಯನ್ನು ಕಟ್ಟಿದನು.''

ಈ ಕಾಲದ ಉಳಿದ ಕವಿಗಳಲ್ಲಿ ಸುಪ್ರಸಿದ್ಧರಾದವರು ಬಿಹಾರಿಲಾಲ್, ಸುರೇಂದ್ರನಾಥ, ಹೇಮಚಂದ್ರ ಮತ್ತು ನವೀನಚಂದ್ರ. ಬಿಹಾರಿಲಾಲ್ ಚಕ್ರವರ್ತಿಯು (ಕ್ರಿ.ಶ. ೧೮೩೫-೯೪). ವಂಗಸುಂದರಿ, ಪ್ರೇಮಪ್ರವಾಹಿನಿ, ನಿಸರ್ಗ ಸಂದರ್ಶನ, ಶಾರದಾಮಂಗಳ ಮುಂತಾದ ಕಾವ್ಯಗಳನ್ನು ರಚಿಸಿರುವನು. ವಂಗ ಸಾಹಿತ್ಯದಲ್ಲಿ ಈತನು ಪ್ರಥಮ ಕಲ್ಪನಾಪ್ರಧಾನವಾದ ಕವಿ (Romantic Poet). ಬಿಹಾರಿಲಾಲನ ಭಾಷೆಯು ಶಿಥಿಲ. ಅಮಾರ್ಜಿತ. ಆದರೂ ಅನುಭೂತಿ ಪ್ರಗಾಢತೆ ಮತ್ತು ಸಹಜತೆ ಆತನ ಕೃತಿಯ ಒಂದು ವೈಶಿಷ್ಟ್ಯ. ಕವಿಜೀವನದ ಪ್ರಾರಂಭದಲ್ಲಿ ರವೀಂದ್ರನಾಥ ಠಾಕೂರರು ತಾವು ಬಿಹಾರಿಲಾಲನ ಶಿಷ್ಯನೆಂದು ಭಾವಿಸಿದ್ದರು. ಸುರೇಂದ್ರನಾಥ ಮಜುಮ್‌ದಾರನು ಮಹಿಳಾಕಾವ್ಯ ಮುಂತಾದುವುಗಳನ್ನು ರಚಿಸಿರುವನು. ಸುರೇಂದ್ರನಾಥನ ರಚನೆ ಬಿಹಾರಿಲಾಲನ ರಚನೆಯಂತೆಯೇ ಇದೆ. ಆದರೆ ಭಾಷೆ ಬಿಹಾರಿಲಾಲನ ಭಾಷೆಗಿಂತಲೂ ಉತ್ತಮ ಶ್ರೇಣಿಯದು.

ಹೇಮಚಂದ್ರ ವಂದ್ಯೋಪಾಧ್ಯಾಯ (ಕ್ರಿ.ಶ. ೧೮೩೮-೯೩) ಈ ಕಾಲದ ಮತ್ತೊಬ್ಬ ಮಹಾಕವಿ. ಈತನ ಕೃತಿಗಳಲ್ಲಿ ವೃತ್ರಸಂಹಾರ, ವೀರಬಾಹುಕಾವ್ಯ, ಛಾಯಾಮಯೀ, ಆಶಾಕಾನನ ಮುಂತಾದವು ಪ್ರಸಿದ್ಧ. ನವೀನಚಂದ್ರರ ರೈವತಕ, ಕುರುಕ್ಷೇತ್ರ, ಪ್ರಾಭಾಸ, ಮುಂತಾದವು ಹೆಸರಾದುವುಗಳು. ಸಾಹಿತ್ಯ ಜಗತ್ತಿನಲ್ಲಿ ಹಿಂದಿನ ಕವಿಗಳಲ್ಲೆಲ್ಲ ಇವರು ಬಹಳ ಯಶಸ್ವಿಯಾಗಿರುವರು. ಆದರೆ ನವೋದಿತ ರವಿಯ ಅರುಣಾರುಣಸ್ಪರ್ಶದಲ್ಲಿ ಈ ತಾರೆಗಳೆಲ್ಲ ಮ್ಲಾನವಾದವು.

ರವೀಂದ್ರನಾಥ ಠಾಕೂರರು (ಕ್ರಿ.ಶ. ೧೮೬೧-೧೯೪೧) ವಂಗಭಾಷೆಯ ಸರ್ವಶ್ರೇಷ್ಠಕವಿ ಮತ್ತು ಲೇಖಕರು. ಕಾಳಿದಾಸನ ಅನಂತರ ಭಾರತವರ್ಷದಲ್ಲಿ ಶ್ರೇಷ್ಠತಮ ಕವಿ. ಇದು ಮಾತ್ರವಲ್ಲ. ವಿಶ್ವಕವಿಗೋಷ್ಠಿಯಲ್ಲೆ ಅನುಪಮಸ್ಥಾನ ದಲ್ಲಿರುವ ಕೆಲವು ಕವಿಗಳ ಮಧ್ಯದಲ್ಲಿದೆ ಇವರ ಸ್ಥಾನ. ಪೃಥ್ವಿಯ ಇತಿಹಾಸದಲ್ಲಿ ಇವರಷ್ಟು ವಿಚಿತ್ರ ಪ್ರತಿಭಾಸಂಪನ್ನರನ್ನು ಮತ್ತು ಸಾಹಿತ್ಯ ಶಿಲ್ಪಿಗಳನ್ನು ನೋಡ ಲಾರೆವು. ಕಥೆಗಳಲ್ಲೂ ಕಾದಂಬರಿಗಳಲ್ಲಿ, ಪ್ರಬಂಧಗಳಲ್ಲಿ, ನಾಟಕಗಳಲ್ಲಿ, ರವೀಂದ್ರ ನಾಥರ ದಾನವು ಅಸನ್ಯಸಾಧಾರಣವಾದುದು. ಅವುಗಳಲ್ಲೂ ಕಾವ್ಯದಲ್ಲಿ ಅವರ ಪ್ರತಿಭೆಯು ವಿಕಾಸದ ಚರಮಗುರಿಯನ್ನು ಮುಟ್ಟಿದೆ. ವಂಗಭಾಷೆಗೆ ರವೀಂದ್ರ ನಾಥರು ಯಾವ ಕವಿತಾಶ್ರೀಯನ್ನು ತಂದಿರುವರೋ ಅದರಿಂದ ವಂಗಸಾಹಿತ್ಯವು ಸಂಪೂರ್ಣವಾಗಿ ಬದಲಾಯಿಸಿರುವುದು. ಕವಿತಾಛಂದಸ್ಸು, ರೀತಿ, ಭಾವ, ಕಥಾ, ಸ್ವರಪ್ರಕಾಶಭಂಗಿ, ಮತ್ತು ಲಾಲಿತ್ಯದಲ್ಲಿ ರವೀಂದ್ರನಾಥರು ಯಾವ ಸಂಪತ್ತನ್ನು ಪ್ರಕಟಿಸಿರುವರೋ ಅದರ ಪರಿಣಾಮವಾಗಿ ವಂಗಭಾಷೆ ಮತ್ತು ಸಾಹಿತ್ಯವು ವಿಶ್ವದ ಶ್ರೇಷ್ಠಭಾಷಾ ಸಾಹಿತ್ಯಗಳಲ್ಲಿ ಒಂದಾಗಿದೆ. ರವೀಂದ್ರನಾಥರ ಕಾವ್ಯದಲ್ಲಿ ಪ್ರಧಾನ ವಾಗಿರುವುದು ಇದು:—ವಿಷಯವನ್ನು ಪ್ರತಿಬಿಂಬಗೊಳಿಸುವುದರಲ್ಲಿ ಮಾತ್ರ ಅವರು ತೃಪ್ತರಾಗಲಿಲ್ಲ. ವಿಷಯವಸ್ತು ಯಾವ ಪ್ರತಿಕ್ರಿಯೆಯನ್ನು ತರುವುದೊ ಅದರ ಅನುಭೂತಿಯ ಪ್ರಕಾಶವು ರವೀಂದ್ರಕಾವ್ಯದಲ್ಲಿರುವ ಒಂದು ಅಪೂರ್ವತೆ. ದಾರ್ಶನಿ ಕರಿಗೆ ಮಾತ್ರ ಸುಲಭಸಾಧ್ಯವಾದಂತಹ ಆಂತರಿಕದೃಷ್ಟಿ ರವೀಂದ್ರರ ಕಾವ್ಯದಲ್ಲಿರುವ ಎರಡನೆಯ ಮಹತ್ವ. ರವೀಂದ್ರನಾಥರು ಬರಿಯ ಕವಿಗಳಲ್ಲ ಅವರು ದಾರ್ಶನಿಕರು. ಜಗದ ಕವಿಗಳಲ್ಲಿ ಅತಿಕೆಲವರಿಗೆ ಮಾತ್ರ ಇದು ಅನ್ವಯಿಸುವುದು.

ಯಾವುದು ಬಂಕಿಮಚಂದ್ರರ ಮೂಲಕವಾಗಿ ಪ್ರೇರಿತವಾಗಿ ಸಾಹಿತ್ಯ ಧಾರೆಯ ಮಧ್ಯದಲ್ಲಿ, ಜನಾಂಗದ ಮರ್ಮವಾಣಿ ಪ್ರಾಣಶಕ್ತಿಯ ರೂಪನ್ನು ಧರಿ ಸಿತೋ ಅದು ರವೀಂದ್ರನಾಥರು ಮತ್ತು ಅವರನಂತರ ಬಂದ ಅವರ ಅನುಯಾಯಿ ಗಳಲ್ಲಿ ಸಂಪೂರ್ಣವಾಗಿ ಮಾಯವಾಯಿತು. ರವೀಂದ್ರರ ಸಾಹಿತ್ಯವು ವ್ಯಕ್ತಿಸ್ವಾತಂ

ತ್ರ್ಯದ್ದು. ಅವರ ಸಾಹಿತ್ಯವು ಜನಾಂಗದ ಜೀವನವನ್ನು ಮೀರಿ, ಸ್ವರ್ಗಧಾಮದಲ್ಲಿ ಕುಳಿತು, ನಕ್ಷತ್ರಮಾಲೆಗಳನ್ನು ನೇಯ್ದಿದೆ. ಮರ್ತ್ಯಭೂಮಿಯಲ್ಲಿರುವ ನಮ್ಮಂತಹವರು ಅದನ್ನು ನೋಡಿದಾಗ ನಮ್ಮನ್ನು ವಿಸ್ಮಿತರನ್ನಾಗಿ ಮಾಡಿ ಸೌಂದರ್ಯೋಪಾಸನೆಯ ಕಡೆಗೆ ನಮ್ಮನ್ನು ಆಕರ್ಷಿಸುವುದು. ಆದರೆ ಸಮಗ್ರಪ್ರಾಣಶಕ್ತಿಯನ್ನು ಅದು ಸ್ಪಂದನಗೊಳಿಸಲಾರದು. ಬಂಕಿಮಚಂದ್ರನ ಸಾಹಿತ್ಯ ಮೂಲಕವಾಗಿ ಭಾರತೀಯ ಸಂಸ್ಕೃತಿಗೆ ಯಾವ ರೂಪು ಬಂದಿತೋ ಯಾವುದರ ಮಧ್ಯದಲ್ಲಿ ವಿವೇಕಾನಂದರು ಆತ್ಮಶಕ್ತಿಯನ್ನು ತಂದು ಜನಾಂಗವನ್ನು ಒಂದು ನವೋದಯಕ್ಕೆ ಅಣಿಮಾಡಿದರೋ ಅಲ್ಲಿ ರವೀಂದ್ರನಾಥರ ಕಾವ್ಯ ಮತ್ತು ಸಾಹಿತ್ಯವು ಇದನ್ನು ಅಲ್ಲಗಳೆಯಿತು. ಬಂಕಿಮಚಂದ್ರನ ಸಾಹಿತ್ಯವು ಜನಾಂಗಕ್ಕೆ ಭಕ್ತಿ, ಕರ್ಮ ಜ್ಞಾನಗಳನ್ನು ಕೊಡಲು ಯತ್ನಿಸಿತು. ಇದನ್ನು ವಿವೇಕಾನಂದರು ವಾಸ್ತವಿಕ ಜಗತ್ತಿನಲ್ಲಿ ಪ್ರತಿಷ್ಠೆ ಮಾಡಿದರು. ಆದರೆ ರವೀಂದ್ರನಾಥರ ನಿರಂಕುಶಕಲ್ಪನೆಯು ಅದನ್ನು ವಿರೋಧಿಸಿ, ಜನಾಂಗದ ಮನಸ್ಸನ್ನು ಸರ್ವಬಂಧನ ವಿಮುಕ್ತವಮಾಡಿ ಒಂದು ಸ್ವಚ್ಛಂದ ಮಾರ್ಗಕ್ಕೆ ತಂದಿತು. ಇದರಿಂದ ಸಾಹಿತ್ಯಕ್ಕೂ ಜೀವನಕ್ಕೂ ದುರ್ಲಂಘನೀಯವಾದ ಅಂತರವನ್ನು ಕಲ್ಪಿಸಿತು. ರವೀಂದ್ರನಾಥರ ಸಾಹಿತ್ಯ ಪ್ರತಿಭೆ ಅನನ್ಯಸಾಧಾರಣವೆನ್ನುವುದರಲ್ಲಿ ಸಂದೇಹವಿಲ್ಲ. ಆದರೆ ನಮ್ಮ ಜನಾಂಗದ ಭಾವಧಾರೆಯನ್ನು ಕುಂಟುಮಾಡುವುದಕ್ಕೆ ಇದೊಂದು ಕಾರಣ. ರವೀಂದ್ರನಾಥರು ಯಾವುದಾದರೂ ಬಲಾಢ್ಯವಾದ ಸ್ವತಂತ್ರದೇಶದಲ್ಲಿ ಜನ್ಮವೆತ್ತಿದ್ದರೆ, ಆ ದೇಶಕ್ಕೆ ಯಾವ ತೊಂದರೆಯೂ ಆಗುತ್ತಿರಲಿಲ್ಲ. ಏಕೆಂದರೆ ಅವರ ಕಾವ್ಯದಲ್ಲಿರುವ ಲೀಲಾವಿಲಾಸ, ಮತ್ತು ನಿರಂಕುಶತೆ ದೃಢದೇಹ ಮತ್ತು ಮನಸ್ಸಿಗೆ ಅಷ್ಟು ಅಪಾಯಕರವಲ್ಲ. ಆದರೆ ಭಾರತದ ಇಂದಿನ ಅವಸ್ಥೆಯಲ್ಲಿ ಇದರಿಂದ ಅಗಾಧವಾದ ನಷ್ಟ. ರವೀಂದ್ರರ ಕಾವ್ಯೋಪಭೋಗಕ್ಕೆ ಮುಂಚೆ ಸಮಸ್ತ ಜನಾಂಗವೂ ಸಾಧನೆ ಮತ್ತು ತಪಶ್ಚರ್ಯದ ಮಾರ್ಗದ ಮೂಲಕವಾಗಿ ನಡೆಯಬೇಕು. ಎಂದು ದೇಶವು ಸ್ವತಂತ್ರವಾಗಿ ಸಬಲವಾಗುವುದೋ ಅಂದು ರವೀಂದ್ರರ ಕಾವ್ಯಲೋಕದಲ್ಲಿ ಸಂಚಾರಮಾಡುವುದಕ್ಕೆ ನಾವು ಯೋಗ್ಯರಾಗುವೆವು.

ರವೀಂದ್ರನಾಥರನಂತರ ಬಂದ ಕವಿಗಳಲ್ಲಿ ಯಾರು ವಂಗಭಾಷೆಯನ್ನು ಅಭಿವೃದ್ಧಿಗೊಳಿಸಿರುವರೋ ಅವರಲ್ಲಿ ದೇವೇಂದ್ರನಾಥ ಸೇನ್, ಅಕ್ಷಯಕುಮಾರ ಬಡಾಲ, ಸತ್ಯೇಂದ್ರನಾಥದತ್ತ ಮುಂತಾದವರು ಪ್ರಸಿದ್ಧರು. ಇವರೆಲ್ಲರೂ ಸುಕವಿಗಳು. ಆದರೆ ರವೀಂದ್ರನಾಥರ ಪ್ರತಿಭಾ ಪ್ರಾಕಾಶದಲ್ಲಿ ಸಿಕ್ಕಿ ಇವರು ಪೂರ್ಣ ಪ್ರಕಾಶಕ್ಕೆ ಬರಲಿಲ್ಲ.

ಸ್ಥಾನಾಭಾವದಿಂದ ಪತ್ರಿಕೆಯ ಒಂದು ಸಂಚಿಕೆಯಲ್ಲಿ ಆಧುನಿಕ ವಂಗ ಭಾಷೆಯ ಇತಿಹಾಸವನ್ನು ಸಂಪೂರ್ಣ ಆಲೋಚನೆಮಾಡುವುದು ಅಸಾಧ್ಯ. ನಾನು ಒಂದು ಚೌಕಟ್ಟನ್ನು ಮಾತ್ರ ತಯಾರಿಸಿರುವೆನು. ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ವಂಗಸಾಹಿತ್ಯವು ಏನಾಗಿತ್ತು, ಇಪ್ಪತ್ತನೆಯ ಶತಮಾನದಲ್ಲಿ ಏನಾಗಿರುವುದು ಅದನ್ನು ಆಲೋಚಿಸಿದರೆ ವಿಸ್ಮಯಾನ್ವಿತರಾಗುವೆವು. ಹತ್ತೊಂಬತ್ತನೆಯ ಶತಮಾನದಲ್ಲಿ ಒಂದು ಹೊಸ ಚೇತನ ವಂಗದೇಶದಲ್ಲಿ ಸಂಚರಿಸಿತು. ಅದರ ಮಹಿಮೆಯನ್ನು ಘೋಷಿಸುತ್ತ ವಂಗಸಾಹಿತ್ಯವು ಜನಿಸಿತು. ಇಂದು ದುಃಖದ ವಿಷಯ. ಹಲವು ಕಾರಣಗಳಿಂದ ಈ ಚೇತನವು ಮಂದಗತಿಯಾಗಿ, ಸಾಹಿತ್ಯಸಾಧನವೂ ಕೂಡ ನಿಧಾನವಾಗಿರುವುದು. ಭಾರತಭಾಗ್ಯವಿಧಾತನು ಜನಾಂಗದ ಜೀವನವನ್ನು ಉತ್ತಮಸ್ಥಿತಿಗೆ ಏರಿಸಿದರೆ ಆಗ ನವನವ ಕೃತಿಗಳು ವಂಗಸಾಹಿತ್ಯದಲ್ಲಿ ಸುಂದರ ಮನೋಹರ ರೂಪನ್ನು ತಾಳಿಸುವುದೆಂದು ನಾವು ಆಶಿಸುವೆವು.

ಸ್ವಾಮಿ ಹಿರಣ್ಮಯಾನಂದ.

ಕನ್ನಡಿಸಿದವರು : ಸೋಮನಾಥಾನಂದ.

೧. ಕಳೆದ ೨೫ ವರ್ಷಗಳಲ್ಲಿ ಭೌತವಿಜ್ಞಾನ

ಪೀಠಿಕೆ—ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ಘನ, ದ್ರವ, ವಾಯು ರೂಪ ಪದಾರ್ಥಗಳು, ಶಬ್ದ, ಬೆಳಕು, ಉಷ್ಣ, ಇತ್ಯಾದಿ ಶಕ್ತಿ ವಿಶೇಷಗಳು, ಇವುಗಳ ಸ್ವರೂಪವನ್ನು ತಿಳಿಯುವುದೇ ಭೌತವಿಜ್ಞಾನದ ಧ್ಯೇಯ. ಹಿಂದಿನಿಂದ ಸಂತತವಾಗಿ ನಡೆದುಬಂದಿರುವ ಶೋಧನೆಗಳಿಂದ ಕಳೆದ ಮಹಾ ಯುದ್ಧದ ಅಂತ್ಯದವೇಳೆಗೆ ಈ ವಿಷಯ ದಲ್ಲಿ ತಿಳಿದುಬಂದಿದ್ದ ಸಂಗತಿಗಳನ್ನು ಈ ರೀತಿಯಲ್ಲಿ ತಿಳಿಸಬಹುದು: "ಘನ, ದ್ರವ, ವಾಯುರೂಪದಲ್ಲಿರುವ ಎಲ್ಲಾ ವಸ್ತುಗಳೂ ತೊಂಬತ್ತೆರಡು ಬೇರೆ ಬೇರೆ ಮೂಲ ವಸ್ತುಗಳ ಸಂಯೋಗದಿಂದ ಆದುವು. ಈ ಮೂಲವಸ್ತುಗಳೆಲ್ಲವೂ ಅತ್ಯಂತ ಸಣ್ಣ ಪರಮಾಣುಗಳೆಂಬ ಕಣಗಳಿಂದ ಕೂಡಿವೆ. ಒಂದೊಂದು ಮೂಲವಸ್ತು ವಿನ ಪರಮಾಣುವೂ ಒಂದು ಗೊತ್ತಾದ ಭಾರವನ್ನು ಹೊಂದಿರುವುದಲ್ಲದೆ ಅದರ ರಾಸಾಯನಿಕ ಗುಣಗಳಿಗನುಸಾರವಾಗಿ ಒಂದು ನಿರ್ದಿಷ್ಟ ಸ್ಥಾನವನ್ನಲಂಕರಿಸಿರು ತ್ತದೆ. ಬೇರೆ ಬೇರೆ ಪರಮಾಣುಗಳನ್ನು ಅವುಗಳ ಭಾರ ಮತ್ತು ರಾಸಾಯನಿಕ ಗುಣ ಗಳಿಗನುಸಾರವಾಗಿ ವಿಂಗಡಿಸಿ ತೋರಿಸುವ ಪದಕಕ್ಕೆ (Table) ಆವರ್ತಪದಕವೆಂದು (Periodic Table) ಹೆಸರು. ಇದರಲ್ಲಿ, ಮೇಲಿಂದ ಕೆಳಕ್ಕೆ ಒಂಬತ್ತು ಕೋಷ್ಠಗಳೂ (columns), ಅಡ್ಡಲಾಗಿ ಏಳು ಸಾಲುಗಳೂ ಇರುತ್ತವೆ. ಒಂದೊಂದು ಕೋಷ್ಠದಲ್ಲಿ ಕಂಡುಬರುವ ಪರಮಾಣುಗಳೂ ರಾಸಾಯನಿಕ ಗುಣಗಳಲ್ಲಿ ಕೆಲಕೆಲವು ಸಾದೃಶ್ಯ ಗಳನ್ನು ತೋರಿಸುವುದರಿಂದ ಇದಕ್ಕೆ ಆವರ್ತಪದಕವೆಂದು ಹೆಸರಾಯಿತು. ಈ ಪದಕ ದಲ್ಲಿ ಪರಮಾಣುವಿನ ಸ್ಥಾನವನ್ನು ತೋರಿಸುವ ಸಂಖ್ಯೆಗೆ ಪರಮಾಣು ಸಂಖ್ಯೆ (Atomic Number) ಎಂದೂ, ಆಮ್ಲಜನಕದ ಪರಮಾಣುವಿನ ಭಾರವನ್ನು ೧೬ ಎಂದಿಟ್ಟುಕೊಂಡರೆ ಇತರ ಪರಮಾಣುಗಳ ಭಾರವನ್ನು ಸೂಚಿಸುವ ಸಂಖ್ಯೆಗೆ ಪರಮಾಣು ಭಾರವೆಂದೂ (Atomic Weight) ಹೆಸರು. ಇಂತಹ ಪರಮಾಣುಗಳು ಒಂದಾಗಿ, ಎರಡಾಗಿ, ಮೂರಾಗಿ ಅಥವಾ ಅನೇಕವಾಗಿ ಒಟ್ಟುಸೇರಿ ಅಣುಗಳು (Molecules) ಉಂಟಾಗಿವೆ. ಈ ಅಣುಗಳ ಸ್ಥಾನ, ಜೋಡಣೆ, ಚಲನೆ ಇವುಗಳಿಂದ ಪದಾರ್ಥದ ಘನ ದ್ರವ ಮೊದಲಾದ ಸ್ಥಿತಿಗಳೂ, ಸಾಂದ್ರತೆ, ದೃಢತ್ವ, ಇತ್ಯಾದಿ ಗುಣಗಳೂ ಏರ್ಪಡುತ್ತವೆ. ಅಲ್ಲದೆ ಪರಮಾಣುಗಳು ಒಂದೊಂದೂ ಒಂದು ಸೌರ ವ್ಯೂಹದಂತೆ ಮಧ್ಯೆ ಒಂದು ಬೀಜವನ್ನೂ (Nucleus) ಅದರ ಸುತ್ತಲೂ ಬೇರೆ ಬೇರೆ

ಪಥಗಳಲ್ಲಿ ಸುತ್ತುತ್ತಿರುವ ಎಲೆಕ್ಟ್ರಾನ್‌ಗಳೆಂಬ ಋಣವಿದ್ಯುತ್ಕಣಗಳನ್ನೂ ಹೊಂದಿರುತ್ತವೆ. ಈ ಪರಮಾಣು ಬೀಜವು ಧನವಿದ್ಯುತ್ತಿನಿಂದ ಕೂಡಿದೆ. ಒಂದು ಎಲೆಕ್ಟ್ರಾನಿನಲ್ಲಿರುವ ವಿದ್ಯುತ್ತನ್ನು ಏಕಮಾನವಾಗಿಟ್ಟುಕೊಂಡು ಈ ಬೀಜದಲ್ಲಿರುವ ವಿದ್ಯುತ್ತನ್ನು ಅಳೆದರೆ ಪೂರ್ಣ ಸಂಖ್ಯೆಗಳೇ ಬರುತ್ತವೆಯಲ್ಲದೆ ಈ ಸಂಖ್ಯೆಯು ಪರಮಾಣು ಸಂಖ್ಯೆಗೆ ಸಮನಾಗಿರುತ್ತದೆ. ಪರಮಾಣುವಿನ ಭಾರದಲ್ಲಿ ಅತ್ಯಧಿಕ ಭಾಗವು ಬೀಜದಲ್ಲಿ ನೆಲೆಸಿರುತ್ತದೆ. ಒಂದು ಜಲಜನಕದ ಪರಮಾಣುವಿನ ಭಾರದಲ್ಲಿ $\frac{೧}{೧೮೪೫}$ ಭಾಗವೇ ಎಲೆಕ್ಟ್ರಾನಿನ ಭಾರ. ಬೀಜದ ಹೊರಗೆ ಪಥಗಳಲ್ಲಿ ಸಂಚರಿಸುವ ಎಲೆಕ್ಟ್ರಾನುಗಳ ಸಂಖ್ಯೆಯು ಪರಮಾಣು ಸಂಖ್ಯೆಗೆ ಸಮನಾಗಿರುತ್ತದೆ. ಈ ಎಲೆಕ್ಟ್ರಾನುಗಳಿಗೆ ಒಂದೊಂದು ಪಥದಲ್ಲೂ ಒಂದು ನಿರ್ದಿಷ್ಟವಾದ ಶಕ್ತಿ (Energy) ಇರುತ್ತದೆ. ಅವು ಒಂದು ಪಥದಿಂದ ಇನ್ನೊಂದಕ್ಕೆ ಜಾರುವಾಗ ಈ ಪಥಗಳಿಗೆ ನಿಯತವಾದ ಶಕ್ತಿಗಳ ಅಂತರದಷ್ಟು ಶಕ್ತಿಯನ್ನು ಒಂದು ಶಕಲ ಅಥವಾ ಕ್ವಾಂಟಂ (Quantum) ರೂಪದಲ್ಲಿ ಹೊರಗೆಡವುತ್ತವೆ ಇಲ್ಲವೆ ಹೀರಿಕೊಳ್ಳುತ್ತವೆ. ಇಂತಹ ಶಕಲಗಳೇ ಬೆಳಕು. ಆದರೆ ಈ ಬೆಳಕು ಒಂದೆಡೆಯಿಂದ ಇನ್ನೊಂದೆಡೆಗೆ ಸಂಚರಿಸುವಾಗ ಅಲೆಗಳ ರೂಪದಲ್ಲಿರುತ್ತದೆ. ಒಂದು ಸೆಕಂಡಿನಲ್ಲಿ ಹೊರಡುವ ಅಲೆಗಳ ಸಂಖ್ಯೆ (=ಆವರ್ತಸಂಖ್ಯೆ)ಯನ್ನು ಪ್ಲಾಂಕನ ಅಭೇದ್ಯ ಸಂಖ್ಯೆಯಿಂದ (=Planck's constant $h=೬.೫೫\times೧೦^{-೨೭}$ erg. sec.) ಗುಣಿಸಿದರೆ ಬರುವ ಲಬ್ಧವೇ ಈ ಬೆಳಕಿನ ಶಕಲದ ಶಕ್ತಿಗೆ ಸಮವಾಗಿರುತ್ತದೆ. ಉಷ್ಣವೆಂಬುದೂ ಶಕ್ತಿಯೇ. ಆದರೆ ಇದು ಅಣುಗಳಿಗಿರುವ ಚಲನ ಶಕ್ತಿ. ಶಬ್ದವೂ ಶಕ್ತಿಯೇ. ಇದು ಪದಾರ್ಥಗಳು ಅದುರುವುದರಿಂದ ಹುಟ್ಟುವ ಅಲೆಗಳ ರೂಪದಲ್ಲಿರುತ್ತದೆ. ಹೀಗೆ ಜಗತ್ತಿನಲ್ಲಿ ವಸ್ತು ಮತ್ತು ಶಕ್ತಿಎಂಬ ಎರಡು ಪದಾರ್ಥಗಳು ಮುಖ್ಯವಾಗಿವೆ. ಅಲ್ಲದೆ ವಸ್ತುವೆಂಬುದು ಧನ ಮತ್ತು ಋಣವಿದ್ಯುತ್ಕಣಗಳಿಂದ ಕೂಡಿದೆ. ಋಣವಿದ್ಯುತ್ಕಣವಾದ ಎಲೆಕ್ಟ್ರಾನ್ ಎಂಬುದೇ ಅತ್ಯಂತ ಕಡಮೆ ಭಾರವುಳ್ಳ ಕಣ. ಜಲಜನಕದ ಪರಮಾಣುವಿನ ಬೀಜವಾದ ಪ್ರೋಟಾನ್ ಎಂಬುದೇ ಅತಿ ಸಣ್ಣ ಧನ ವಿದ್ಯುತ್ಕಣ. ಪ್ರೋಟಾನಿನ ಭಾರವು ಎಲೆಕ್ಟ್ರಾನಿನ ಭಾರದ ೧೮೪೫ರಷ್ಟು. ಇದೇ ೧೯೧೯ನೆಯ ಇಸವಿಯವರೆಗೆ ತಿಳಿದಿದ್ದ ಸಂಗತಿಗಳ ಸಾರಾಂಶ. ಇದರಿಂದ ಹೊಸ ಶೋಧನೆಗಳು ಯಾವ ಗುರಿಯನ್ನಿಟ್ಟುಕೊಂಡು ಮುಂದುವರಿದುವೆಂಬುದನ್ನು ಸುಲಭವಾಗಿ ತಿಳಿಯಬಹುದು. ಪರಮಾಣುವಿನಲ್ಲಿ ಎಲೆಕ್ಟ್ರಾನುಗಳು ಹೇಗೆ ಜೋಡಿಸಲ್ಪಟ್ಟಿವೆ. ಪರಮಾಣು ಬೀಜದ ರಚನೆಯೆಂತಹುದು, ವಸ್ತು, ವಿದ್ಯುತ್ತು, ಶಕ್ತಿ ಇವುಗಳಿಗಿರುವ ಸಂಬಂಧವೇನು, ಬೆಳಕಿನ ಸ್ವರೂಪವಾವುದು, ಅಣುಗಳ ಆಕಾರ, ಅವುಗಳ ಜೋಡಣೆ, ಇತ್ಯಾದಿ ವಿವರಗಳು ಹೇಗಿವೆ, ಈ ಎಲ್ಲ ಸಂಗತಿಗಳಿಂದ ಘನ ದ್ರವ,

ಮತ್ತು ವಾಯುರೂಪ ಪದಾರ್ಥಗಳ ವಿವಿಧ ಗುಣಗಳನ್ನು ಹೇಗೆ ಅರಿಯಬಹುದು, ಇವೇ ವೈಜ್ಞಾನಿಕರ ಮುಂದಿದ್ದ ಮುಖ್ಯಪ್ರಶ್ನೆಗಳು. ಇವುಗಳ ವಿಷಯದಲ್ಲಿ ಕಳೆದ ಇಪ್ಪತ್ತೈದು ವರ್ಷಗಳ ಶೋಧನೆಯಿಂದ ತಿಳಿದು ಬಂದಿರುವ ವಿಷಯಗಳನ್ನು ಸಂಕ್ಷೇಪವಾಗಿ ತಿಳಿಸುವುದೇ ಈ ಲೇಖನದ ಉದ್ದೇಶ.

೧. **ಪರಮಾಣುವಿನಲ್ಲಿ ಎಲೆಕ್ಟ್ರಾನ್‌ಗಳ ಜೋಡಣೆ**—ಬೋರ್ (Bohr) ಎಂಬ ಪಂಡಿತನ ಶೋಧನೆಗಳಿಂದಲೂ ಸಾಮರ್‌ಫೆಲ್ಡ್ (Sommerfeld) ಎಂಬಾತನ ಗಣಿತದಿಂದಲೂ ಪರಮಾಣು ಬೀಜದ ಸುತ್ತಲೂ ತಿರುಗುತ್ತಿರುವ ಎಲೆಕ್ಟ್ರಾನ್‌ಗಳ ಪಥಗಳಿಗೆ ಮೂರು ಲಕ್ಷಣಗಳುಂಟೆಂದು ತಿಳಿದುಬಂದಿತ್ತು. ಪಥದ ಪರಿಮಾಣ, ಆಕಾರ ಮತ್ತು ಸ್ಥಾನ ಇವೇ ಈ ಮೂರು ಲಕ್ಷಣಗಳು. ಗೊತ್ತಾದ ಕೆಲವು ಪರಿಮಾಣಗಳು, ನಿರ್ದಿಷ್ಟವಾದ ಕೆಲವು ಆಕಾರಗಳು, ನಿಯತವಾದ ಕೆಲವು ಸ್ಥಾನಗಳು ಹೊರತು ಈ ಪಥಗಳಿಗೆ ಬೇರೆ ಪರಿಮಾಣಾದಿಗಳು ಇರುವುದು ಅಸಾಧ್ಯವೆಂದೂ ತಿಳಿದಿತ್ತು. ೧೯೨೬ರಲ್ಲಿ ಗೌಡ್‌ಸ್ಮಿಟ್ ಮತ್ತು ಊಲೆನ್‌ಬೆಕ್ (Goudsmit and Uhlenbeck) ಎಂಬಿಬ್ಬರು ಯುವಕರು ಎಲೆಕ್ಟ್ರಾನುಗಳಿಗೆ ಮೇಲಿನ ಮೂರು ಲಕ್ಷಣಗಳಿರುವುದಲ್ಲದೆ ಅವು ತಮ್ಮ ಅಕ್ಷದ ಮೇಲೆ ಬುಗುರಿಗಳಂತೆ ತಿರುಗತ್ತಿರುವುವೆಂದೂ ಈ ಅಕ್ಷಕ್ಕೂ ಎರಡು ಗೊತ್ತಾದ ದಿಕ್ಕುಗಳಲ್ಲದೆ ಉಳಿದ ಸ್ಥಾನಗಳನ್ನು ಹೊಂದಿರುವುದು ಅಸಾಧ್ಯವೆಂದೂ ಇವರು ತಿಳಿಸಿದರು. ಆ ವೇಳೆಗೆ ಪೌಲಿ (Pauli) ಎಂಬ ವೈಜ್ಞಾನಿಕನು ನಿಷೇಧ ನಿಯಮವೆಂಬ (Exclusion Principle) ತತ್ವವನ್ನು ಕಂಡುಹಿಡಿದಿದ್ದನು. ಇದರ ಪ್ರಕಾರ ಒಂದೇ ಪರಿಮಾಣ, ಆಕಾರ ಮತ್ತು ಸ್ಥಾನವುಳ್ಳ ಪಥದಲ್ಲಿ ಒಂದೇ ನೇರವುಳ್ಳ ಅಕ್ಷದ ಸುತ್ತಲೂ ತಿರುಗುವ ಎರಡು ಎಲೆಕ್ಟ್ರಾನ್‌ಗಳು ಇರಲಾರವು. ಈ ನಿಯಮದ ಆಧಾರದಿಂದ ಆವರ್ತಪದಕದ ಮೊದಲನೆಯ ಆವರ್ತದಲ್ಲಿ ಎರಡು, ಎರಡನೆಯ ಆವರ್ತದಲ್ಲಿ ಎಂಟು, ಮೂರನೆಯ ಆವರ್ತದಲ್ಲಿಯೂ ಎಂಟು, ನಾಲ್ಕನೆಯದರಲ್ಲಿಯೂ ಐದನೆಯದರಲ್ಲಿಯೂ ಹದಿನೆಂಟು, ಹದಿನೆಂಟು, ಆರನೆಯದರಲ್ಲಿ ಮೂವತ್ತೆರಡು—ಮೂಲವಸ್ತುಗಳು ಅಡಕವಾಗಿರುವುದೇತಕ್ಕೆಂಬುದು ಅರ್ಥವಾಗುವುದಲ್ಲದೆ ಒಂದೇ ಕೋಷ್ಠದಲ್ಲಿರುವ ಮೂಲವಸ್ತುಗಳ ರಾಸಾಯನಿಕ ಗುಣಗಳು ಏಕೆ ಸದೃಶವಾಗಿವೆಯೆಂಬುದೂ ತಿಳಿಯುತ್ತದೆ. ಒಂದೇ ಕೋಷ್ಠದಲ್ಲಿರುವ ಪರಮಾಣುಗಳಲ್ಲಿ ಬೀಜದಿಂದ ಅತ್ಯಂತ ಹೆಚ್ಚು ದೂರದಲ್ಲಿರುವ ಕೊನೆಯ ಎಲೆಕ್ಟ್ರಾನ್‌ಗಳು ಒಂದೇ ಲಕ್ಷಣವುಳ್ಳ ಪಥಗಳಲ್ಲಿ ತಿರುಗುವುದೇ ಅವುಗಳ ರಾಸಾಯನಿಕ ಗುಣಗಳು ಸದೃಶವಾಗಿರುವುದಕ್ಕೆ ಕಾರಣ. ಈ ಅಭಿಪ್ರಾಯಕ್ಕೆ ಮತ್ತು ಕೆಲವು ಆಧಾರಗಳಿವೆ. ಈ ಪರಮಾಣುಗಳಿಂದ ಹೊರಡುವ ವಿವಿಧ ವರ್ಣದ ಬೆಳಕಿನ ರಶ್ಮಿಗಳನ್ನು ಪರೀಕ್ಷಿ

ಸಿದರೆ ಅವುಗಳ ವಿನ್ಯಾಸದಲ್ಲಿ ಸಾದೃಶ್ಯಗಳಿರುತ್ತವೆ. ಅವುಗಳು ಇತರ ಪರಮಾಣುಗಳೊಡನೆ ಸಂಯೋಗ ಹೊಂದುವ ಸಾಮರ್ಥ್ಯದಲ್ಲಿಯೂ ಹೋಲಿಕೆಗಳಿವೆ. ಈ ಅನೇಕ ಕಾರಣಗಳಿಂದ ಪರಮಾಣುಗಳಲ್ಲಿ ಎಲೆಕ್ಟ್ರಾನ್‌ಗಳ ವ್ಯವಸ್ಥೆಯ ವಿಷಯದಲ್ಲಿ ಮೇಲೆ ಹೇಳಿದ ಸಂಗತಿಗಳು ಸರಿಯೆಂದು ತಿಳಿದುಬಂದಿದೆ. ಆದರೆ ಕ್ವಾಂಟಂ ಮೆಕಾನಿಕ್ಸ್ ಎಂಬ ಹೊಸರೀತಿಯ ಗಣಿತದಿಂದ ಈ ಅಭಿಪ್ರಾಯಗಳು ಸ್ವಲ್ಪ ಮಾರ್ಪಟ್ಟಿವೆ. ಈ ವಿಷಯವನ್ನು ಮುಂದೆ ತಿಳಿಸುತ್ತೇವೆ.

೨. **ಬೆಳಕಿನ ಸ್ವರೂಪ**—ಬೆಳಕು ಶಕಲಗಳಾಗಿ ಹೊರಹೊರಡುವುದೆಂದೂ ಆದರೆ ಪ್ರಸರಿಸುವಾಗ ಅಲೆಗಳ ರೂಪದಲ್ಲಿದೆಯೆಂದೂ ಮೇಲೆ ಹೇಳಿದೆಯಷ್ಟೆ? ಬೆಳಕು ಶಕಲ ಅಥವಾ ಕಣದ ರೂಪದಲ್ಲಿದೆಯೆಂಬುದಕ್ಕೆ ೧೯೨೩ರಲ್ಲಿ ಕಾಂಪ್ಟನ್ ಎಂಬಾತನು ಮಾಡಿದ ಪ್ರಯೋಗವು ಹೆಚ್ಚು ಬೆಂಬಲವನ್ನು ಕೊಟ್ಟಿತು. X-ಕಿರಣಗಳು ಪದಾರ್ಥಗಳ ಮೇಲೆ ಬಿದ್ದು ಬೇರೆ ಬೇರೆ ದಿಕ್ಕಿಗೆ ಚೆದರಿಸಲ್ಪಡುವಾಗ ಅವುಗಳ ಶಕ್ತಿಯಲ್ಲಿ ಸ್ವಲ್ಪ ಭಾಗವು ಆ ಪದಾರ್ಥದಲ್ಲಿರುವ ಎಲೆಕ್ಟ್ರಾನ್‌ಗಳಿಗೆ ಕೊಡಲ್ಪಟ್ಟು ಆ ಎಲೆಕ್ಟ್ರಾನ್‌ಗಳು ಹೊರದೂಡಲ್ಪಡುತ್ತವೆ. ಅಲ್ಲದೆ X-ಕಿರಣದ ಶಕ್ತಿಯು ಕಡಮೆಯಾಗುವುದರಿಂದ ಅದರ ಆವರ್ತಸಂಖ್ಯೆಯೂ ಕಡಮೆಯಾಗುವುದು. ಇದಕ್ಕೆ ಕಾಂಪ್ಟನ್ ಕಾರ್ಯವೆಂದು (Compton Effect) ಹೆಸರು. X-ಕಿರಣವು ಚೆದರುವ ನೇರ, ಅದರ ಆವರ್ತ ಸಂಖ್ಯೆಯಲ್ಲಾಗುವ ಮಾರ್ಪಾಟು, ಮತ್ತು ಎಲೆಕ್ಟ್ರಾನು ಹೊರದೂಡಲ್ಪಡುವನೇರ ಇವುಗಳನ್ನು ಲೆಕ್ಕ ಮಾಡಬೇಕಾದರೆ X-ಕಿರಣದ ಒಂದು ಕಣವು ಎಲೆಕ್ಟ್ರಾನಿನೊಡನೆ ಸಂಘಾತ ಹೊಂದಿತೆಂದು ಇಟ್ಟುಕೊಂಡು ಚಲನ ಶಾಸ್ತ್ರದ ನಿಯಮಗಳನ್ನು ಉಪಯೋಗಿಸಬಹುದೆಂದು ಕಾಂಪ್ಟನನು ತೋರಿಸಿದನು. ಇದೇ ರೀತಿಯಲ್ಲಿ ೧೯೨೮ರಲ್ಲಿ ನಮ್ಮ ದೇಶದ ಸಿ. ವಿ. ರಾಮನ್ ಅವರು ಕಂಡುಹಿಡಿದ ರಾಮನ್ ಕಾರ್ಯವೆಂಬುದೂ (Raman Effect) ಬೆಳಕು ಶಕಲದ ರೂಪದಲ್ಲಿರುವುದೆಂಬುದಕ್ಕೆ ಬೆಂಬಲ ಕೊಟ್ಟಿತು. ಪಾರದರ್ಶಕವಾದ ಘನ ಅಥವಾ ದ್ರವ ಪದಾರ್ಥದ ಮೇಲೆ ಒಂದು ಗೊತ್ತಾದ ಆವರ್ತ ಸಂಖ್ಯೆಯುಳ್ಳ ಬೆಳಕನ್ನು ಬಿಟ್ಟರೆ ಆ ಪದಾರ್ಥವು ಬೆಳಕನ್ನು ಎಲ್ಲಾ ಕಡೆಗೂ ಚೆದರಿಸುತ್ತದೆ. ಇಂತಹ ಚೆದರಿದ ಬೆಳಕನ್ನು ಪರೀಕ್ಷಿಸಿದರೆ ಅದರಲ್ಲಿ ಮೊದಲಿನ ಆವರ್ತ ಸಂಖ್ಯೆಯ ರಶ್ಮಿಗಳಲ್ಲದೆ ಅದಕ್ಕಿಂತ ಹೆಚ್ಚು ಮತ್ತು ಕಡಮೆ ಆವರ್ತ ಸಂಖ್ಯೆಯುಳ್ಳ ವಿಕೃತರಶ್ಮಿಗಳು (Modified light) ಇರುತ್ತವೆ. ಮೊದಲು ಪದಾರ್ಥದ ಮೇಲೆ ಬಿದ್ದ ಬೆಳಕಿನ ಶಕಲಕ್ಕೆ ಪದಾರ್ಥದ ಅಣುಗಳ ಸ್ಪಂದನದಿಂದ ಉಂಟಾದ ಶಕ್ತಿಯು ಸೇರುವುದರಿಂದ ಅದರ ಶಕ್ತಿಯು ಹೆಚ್ಚಿ ಅದರ ಆವರ್ತ ಸಂಖ್ಯೆಯು ಹೆಚ್ಚುವುದು. ಬೆಳಕಿನ ಶಕ್ತಿಯ ಒಂದು ಭಾಗವು ಅಣುವಿಗೆ

ಕೊಡಲ್ಪಟ್ಟರೆ ವಿಕೃತರಶ್ಮಿಯ ಆವರ್ತ ಸಂಖ್ಯೆಯು ಕಡಮೆಯಾಗುವುದು. ಹೀಗೆ ಬೆಳಕು ಶಕಲ ರೂಪದಲ್ಲಿರುವುದೆಂಬ ವಿಷಯವು ರಾಮನ್ ಕ್ರಿಯೆಯಿಂದ ತಿಳಿಯುವುದಲ್ಲದೆ ಅಣುವು ಎಷ್ಟು ಶಕ್ತಿಯನ್ನು ಗ್ರಹಿಸಬಲ್ಲುದು ಅಥವಾ ಕೊಡಬಲ್ಲುದು ಎಂಬುದು ಗೊತ್ತಾಗುವುದರಿಂದ ಅದರ ಸ್ಪಂದನವು ಯಾವರೀತಿಯಿರುವುದೆಂಬುದೂ ಇದರಿಂದ ಅಣುವಿನ ಆಕಾರ, ಪರಿಮಾಣಗಳ ವಿಷಯವೂ ತಿಳಿದು ಬರುವುದು. ಹೀಗೆ ಬೆಳಕು ಶಕಲ ರೂಪದಲ್ಲಿರುವುದೆಂಬುದಕ್ಕೆ ನಿದರ್ಶನಗಳು ದೊರೆತರೂ ಪ್ರತಿಯೋಗ (Interference), ನಮನ (Diffraction) ಮತ್ತು ಸಪಾರ್ಶ್ವತೆ (Polarization) ಇವುಗಳ ಆಧಾರದಿಂದ ಬೆಳಕು ಅಲೆಗಳ ರೂಪದಲ್ಲಿ ಪ್ರಸರಿಸುವುದೆಂದು ತಿಳಿದುಬಂದ ವಿಷಯವು ಮಾತ್ರ ಇದರಿಂದ ಬದಲಾವಣೆ ಹೊಂದಲಿಲ್ಲ. ಇದಕ್ಕೆ ಪ್ರತಿಯಾಗಿ ದ್ ಬ್ರಾಗ್ಲಿ (De Broglie) ಎಂಬಾತನು ೧೯೨೪ರಲ್ಲಿ ಹೊಸ ತರ್ಕವನ್ನು ಹೂಡಿ ಎಲೆಕ್ಟ್ರಾನ್, ಪ್ರೋಟಾನ್, ಪರಮಾಣು ಮುಂತಾದ ಕಣಗಳಿಗೂ ಅಲೆಗಳ ಗುಣಗಳಿರಬೇಕೆಂದು ಸಾಧಿಸಿದನು. ಶ್ರೋಡಿಂಗರ್ (Schrödinger) ಎಂಬಾತನು ಈ ಮತವನ್ನು ಗಣಿತರೂಪಕ್ಕೆತಂದು ೧೯೨೬ರಲ್ಲಿ ಹೊಸರೀತಿಯ ಚಲನ ಶಾಸ್ತ್ರವನ್ನು ಆರಂಭಿಸಿದನು. ೧೯೨೫ರಲ್ಲಿ ಹೈಸೆನ್‌ಬರ್ಗ್ (Heisenberg) ಎಂಬಾತನು ಸ್ಥಾಪಿಸಿದ ಗಣಿತಮಾರ್ಗವು ಬಾರ್ನ್ ಮತ್ತು ಯಾರ್ಡ್ಡನ್ ಎಂಬ (Born, Jordan) ವರಿಂದ ಮುಂದುವರಿಸಲ್ಪಟ್ಟು ಅದೇ ಕಾಲದಲ್ಲಿ ಡಿರಾಕ್ (Dirac) ಎಂಬ ವೈಜ್ಞಾನಿಕನ ಶೋಧನೆಗಳಿಂದ ಈ ಎರಡು ಮಾರ್ಗಗಳೂ ಮಾರ್ಪಟ್ಟು ಒಂದಾಗಿ ಕ್ವಾಂಟಂ ಮೆಕಾನಿಕ್ಸ್ (ಶಕಲ ಚಲನ ಶಾಸ್ತ್ರ = Quantum Mechanics) ಎಂಬ ಹೊಸ ಶಾಸ್ತ್ರವು ಹುಟ್ಟಿತು. ೧೯೨೭ರಲ್ಲಿ ಡೇವಿಸನ್ ಮತ್ತು ಜರ್ಮರ್ (Davisson and Germer) ಎಂಬವರೂ, ೧೯೨೮ರಲ್ಲಿ ಜಿ. ಪಿ. ಥಾಮ್ಸನ್ (G. P. Thomson) ಎಂಬಾತನೂ ಮಾಡಿದ ಪ್ರಯೋಗಗಳಿಂದ ಎಲೆಕ್ಟ್ರಾನ್‌ಗಳೂ ಬೆಳಕಿನಂತೆಯೇ ನಮನವನ್ನು ಹೊಂದುವುವೆಂದೂ ಆದುದರಿಂದ ಅವುಗಳಿಗೂ ಅಲೆಗಳ ಸ್ವರೂಪವುಂಟೆಂದೂ ಸ್ಥಿರಪಟ್ಟಿತು. ಈ ದ್ವೈವಿಧ್ಯಕ್ಕೆ ಯಾವರೀತಿಯ ಅರ್ಥ ಕೊಡಬೇಕೆಂಬ ವಿಷಯದಲ್ಲಿ ಬಹಳ ಚರ್ಚೆಯಾಗಿ ಕೊನೆಗೆ ಬಾರ್ನ್ (Born) ಎಂಬಾತನ ಮತವು ಪ್ರಚುರಗೊಂಡಿತು. ೧೯೨೭ರಲ್ಲಿಯೇ ಹೈಸೆನ್‌ಬರ್ಗನು ಅನಿಶ್ಚಿತತ್ವನಿಯಮ (Uncertainty Principle) ವನ್ನು ಸಾರಿದ್ದನು. ಈ ಮತದ ಪ್ರಕಾರ ನಾವು ಒಂದು ಪದಾರ್ಥವನ್ನು ಪರಿಶೀಲಿಸುವುದರ ಫಲವಾಗಿ ಅದರ ಸ್ಥಿತಿಯೇ ಮಾರ್ಪಡುವುದರಿಂದ ಮುಂದೆ ಆಗುವ ಕಾರ್ಯವನ್ನು ನಿಶ್ಚಿತವಾಗಿ ಗಣನೆ ಮಾಡಲಾಗುವುದಿಲ್ಲವೆಂದು ತಿಳಿದು ಬರುತ್ತದೆ. ಆದುದರಿಂದ ವಿಜ್ಞಾನದ ನಿಯಮಗಳು ಇಂತಹ ಸಂದರ್ಭದಲ್ಲಿ ಇಂತಹ ಪರಿಣಾಮವೇ

ಉಂಟಾಗುತ್ತದೆಯೆಂದು ತಿಳಿಸುವುದರ ಬದಲು ಇಂತಹ ಪರಿಣಾಮದ ಸಂಭವನೀಯತೆಯು (Probability) ಎಷ್ಟೆಂಬುದನ್ನು ಮಾತ್ರ ತಿಳಿಸುವುವೆಂದು ನಾವು ಅರಿಯಬೇಕು. ಎಲೆಕ್ಟ್ರಾನ್ ಮುಂತಾದ ಕಣಗಳಿಗೆ ಸಂಬಂಧಪಟ್ಟ ಅಲೆಯು ಆ ಕಣಗಳಿಗೆ ಆ ಸ್ಥಾನವಿರುವ ಸಂಭವನೀಯತೆ ಎಷ್ಟೆಂಬುದನ್ನು ತಿಳಿಸುವುದೆಂಬುದೇ ಬಾರ್ನ್ ಎಂಬಾತನ ಮತ. ಹೀಗೆ ಪ್ರಕೃತಿಯಲ್ಲಿ ಒಂದು ರೀತಿಯ ಅನಿಶ್ಚಿತತ್ವವು ಇರುವುದೆಂದು ಹೇಳಿದಹಾಗಾಯಿತು. ಈ ಮತದ ಪ್ರಕಾರ ಎಲೆಕ್ಟ್ರಾನ್‌ಗಳು ಪರಮಾಣು ಬೀಜದ ಸುತ್ತಲೂ ಗೊತ್ತಾದ ಪಥಗಳಲ್ಲಿ ಸುತ್ತುವುವೆಂಬುದಕ್ಕೆ ಬದಲಾಗಿ ಆ ಪಥದ ಬಳಿ ಎಲೆಕ್ಟ್ರಾನ್ ಇರುವ ಸಂಭವವು ಇತರ ಸ್ಥಳಗಳಲ್ಲಿರುವುದಕ್ಕಿಂತ ಹೆಚ್ಚೆಂದು ಮಾತ್ರ ತಿಳಿಯಬೇಕು. ಭೌತ ಶಾಸ್ತ್ರದಲ್ಲಿ ಈ ಹೊಸ ಅಭಿಪ್ರಾಯ ಹುಟ್ಟಿದಂದಿನಿಂದ ತತ್ವಶಾಸ್ತ್ರಜ್ಞರು (Philosophers) ಈ ವಿಷಯವನ್ನು ಚರ್ಚಿಸಿ ಪ್ರಕೃತಿಯಲ್ಲಿ ಅನಿಶ್ಚಿತತ್ವವಿರುವುದಾದರೆ ಮನುಷ್ಯನು ಪರತಂತ್ರನಾಗಿರದೆ ಸ್ವತಂತ್ರನಾಗಿರಬೇಕೆಂದು ವಾದಿಸುತ್ತಿದ್ದಾರೆ. ಆದರೆ ಭೌತಶಾಸ್ತ್ರದಲ್ಲಿ ಅನಿಶ್ಚಿತತ್ವವು ತಲೆದೋರುವುದು ಎಲೆಕ್ಟ್ರಾನ್, ಕ್ವಾಂಟಂ ಇಂತಹ ಅತಿಸೂಕ್ಷ್ಮ ಪದಾರ್ಥಗಳ ವಿಷಯದಲ್ಲಿ ಮಾತ್ರವೇ ಆಗಿರುವುದರಿಂದ ಈ ವಿಷಯವನ್ನು ತತ್ವಶಾಸ್ತ್ರಕ್ಕೆ ಅನ್ವಯಿಸುವವರು ಬಹು ಜಾಗರೂಕರಾಗಿರಬೇಕಾಗಿದೆ. ಅಲ್ಲದೆ ಭೌತಶಾಸ್ತ್ರದಲ್ಲಿ ಕಂಡುಹಿಡಿಯಲ್ಪಟ್ಟ ನಿಯಮವನ್ನು ಇತರ ಶಾಸ್ತ್ರಗಳಲ್ಲಿ ಎಷ್ಟರ ಮಟ್ಟಿಗೆ ಮಾರ್ಪಾಡಿಲ್ಲದೆ ಉಪಯೋಗಿಸಬಹುದೆಂಬುದನ್ನೂ ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದೆ.

೩. **ಪರಮಾಣು ಬೀಜರಚನೆ**—ರೇಡಿಯಂ, ಥೋರಿಯಂ ಮುಂತಾದ ಮೂಲವಸ್ತುಗಳು ತಾವಾಗಿ ಕೆಲವು ವಿಧವಾದ ರಶ್ಮಿಗಳನ್ನು ಹೊರಸೂಸಿ ಬೇರೆ ಮೂಲವಸ್ತುಗಳಾಗಿ ಮಾರ್ಪಡುತ್ತವೆ. ಇದಕ್ಕೆ ರಶ್ಮಿವಿಕ್ಷೇಪವೆಂದು (Radioactivity) ಹೆಸರು. ಇಂತಹ ರಶ್ಮಿಗಳಲ್ಲಿ ಮೂರು ವಿಧವುಂಟು. ಆಲ್ಫ ರಶ್ಮಿಗಳೆಂಬುವು ಹೀಲಿಯಂ ಎಂಬ ಮೂಲವಸ್ತುವಿನ ಪರಮಾಣು ಬೀಜಗಳು. ಬೀಟ ರಶ್ಮಿಗಳೆಂಬುವು ಅತಿವೇಗವುಳ್ಳ ಎಲೆಕ್ಟ್ರಾನ್‌ಗಳು. ಗಾಮ ರಶ್ಮಿಗಳೆಂಬುವು X-ಕಿರಣಗಳಿಗಿಂತ ಹೆಚ್ಚು ಆವರ್ತಸಂಖ್ಯೆಯುಳ್ಳ ಅಲೆಗಳು. ಈ ಆಲ್ಫ ರಶ್ಮಿಗಳು ಪರಮಾಣುಗಳಿಂದ ಚೆದರಿಸಲ್ಪಡುವ ನಿಯಮವನ್ನು ಪರಿಶೀಲಿಸಿದುದರಿಂದಲೇ ರುದರ್‌ಫರ್ಡನು ಪರಮಾಣುಗಳಲ್ಲಿ ಬೀಜವೆಂಬುದಿದೆಯೆಂದು ಕಂಡುಹಿಡಿದುದು. ಈತನೇ ೧೯೧೯ರಲ್ಲಿ ಸಾರಜನಕದ ಪರಮಾಣು ಬೀಜಕ್ಕೂ ಆಲ್ಫಕಣಕ್ಕೂ ಸಂಘಾತವಾದರೆ ಸಾರಜನಕವು ಆಮ್ಲಜನಕವಾಗಿ ಪರಿವರ್ತಿತವಾಗುವುದೆಂದು ಕಂಡುಹಿಡಿದನು. ಒಂದು ಮೂಲವಸ್ತುವನ್ನು ಕೃತಕವಾಗಿ ಮಾರ್ಪಡಿಸಿ ಇನ್ನೊಂದು ಮೂಲವಸ್ತುವನ್ನು ಮಾಡಿದುದು ಇದೇ ಮೊದಲು.

ಅಲ್ಲಿಂದೀಚೆಗೆ ಪರಮಾಣು ಬೀಜದ ರಚನೆಯ ವಿಷಯದಲ್ಲಿಯೂ ಮೂಲವಸ್ತುಗಳನ್ನು ಮಾರ್ಪಡಿಸುವ ವಿಷಯದಲ್ಲಿಯೂ ಅನೇಕ ಶೋಧನೆಗಳು ನಡೆದಿವೆ. ಈ ಬೀಜದ ಭಾರವು ಪರಮಾಣು ಭಾರ. ಅದರ ಮೇಲಿರುವ ಧನವಿದ್ಯುತ್ತಿನ ಅಳತೆಯೇ ಪರಮಾಣು ಸಂಖ್ಯೆ. ಈ ಬೀಜದ ಭಾರಗಳು ಸಾಮಾನ್ಯವಾಗಿ ಪೂರ್ಣಾಂಕಗಳಾಗಿದ್ದರೂ ಪರಮಾಣು ಭಾರವು ಕೆಲವುವೇಳೆ ಭಿನ್ನರಾಶಿಯಿಂದ ಕೂಡಿರುತ್ತದೆ. ಆಸ್ಟನ್ (Aston) ಎಂಬಾತನು ಜಡತ್ವರೋಹಿತಲೇಖಕ (Mass Spectrograph) ವೆಂಬ ಉಪಕರಣವನ್ನು ನಿರ್ಮಿಸಿ ಒಂದು ಮೂಲವಸ್ತುವಿನ ಪರಮಾಣುಗಳಲ್ಲಿ ಕೆಲವುಗಳ ಬೀಜಗಳ ಭಾರವು ಹೆಚ್ಚಾಗಿಯೂ, ಕೆಲವುಗಳಿಗೆ ಕಡಮೆಯಾಗಿಯೂ ಇರುವುದೆಂದೂ, ಅವೆಲ್ಲವುಗಳಲ್ಲಿಯೂ ಇರುವ ಧನವಿದ್ಯುತ್ತು ಮಾತ್ರ ಒಂದೇ ಸಮನಾಗಿರುವುದೆಂದೂ, ಎಲ್ಲಾ ಬೀಜಗಳ ಭಾರಗಳೂ ಪೂರ್ಣ ಸಂಖ್ಯೆಗಳಾಗಿಯೇ ಇರುವುವೆಂದೂ ಕಂಡುಹಿಡಿದನು. ಹೀಗೆ ಒಂದೇ ಸಮನಾದ ಧನವಿದ್ಯುತ್ತಿರುವ ಪರಮಾಣುಗಳಲ್ಲೆಲ್ಲಾ ಒಂದೇ ಸಂಖ್ಯೆಯ ಎಲೆಕ್ಟ್ರಾನ್‌ಗಳಿರುವುದರಿಂದ ಅವುಗಳ ರಾಸಾಯನಿಕಗುಣಗಳೂ ಒಂದೇ ಸಮನಾಗಿರುತ್ತವೆ. ಆದುದರಿಂದ ಆವರ್ತ ಪದಕದಲ್ಲಿ ಅವುಗಳ ಸ್ಥಾನವೂ ಒಂದೇ. ಹೀಗೆ ಒಂದೇ ಸಮನಾದ ಪರಮಾಣು ಸಂಖ್ಯೆಯನ್ನು ಹೊಂದಿ ಭಾರದಲ್ಲಿ ಮಾತ್ರ ವ್ಯತ್ಯಾಸವುಳ್ಳ ಪರಮಾಣುಗಳಿಗೆ ಸಮಾನಸ್ಥಾನಿಗಳೆಂದು (Isotopes) ಹೆಸರು. ಪರಮಾಣು ಬೀಜಗಳ ಭಾರಗಳೆಲ್ಲಾ ಪೂರ್ಣಸಂಖ್ಯೆಯವುಗಳಾಗಿರುವುದರಿಂದ ಆ ಬೀಜಗಳು ಬೇರೆ ಮೂಲಕಣಗಳಿಂದ ಮಾಡಲ್ಪಟ್ಟಿರಬೇಕೆಂದು ಊಹಿಸಬಹುದು. ಹಿಂದೆ ರುದರ್‌ಫರ್ಡ್ ಮಾಡಿದ ಊಹೆಯ ಪ್ರಕಾರ ಈ ಬೀಜಗಳೆಲ್ಲಾ ಪ್ರೋಟಾನ್‌ಗಳಿಂದ ಕೂಡಿವೆಯೆಂದೂ, ಪ್ರೋಟಾನ್‌ಗಳ ಸಂಖ್ಯೆಯು ಪರಮಾಣು ಭಾರಕ್ಕೆ ಸಮನಾಗಿರುವುದೆಂದೂ, ಆದರೆ ಪರಮಾಣುಭಾರ ಮತ್ತು ಪರಮಾಣುಸಂಖ್ಯೆ ಇವುಗಳ ಅಂತರಕ್ಕೆ ಸಮನಾದಷ್ಟು ಎಲೆಕ್ಟ್ರಾನ್‌ಗಳೂ ಈ ಬೀಜದೊಳಗೇ ಇರುವುವೆಂದೂ ತಿಳಿದುಬಂದಿತ್ತು. ಈ ಅಭಿಪ್ರಾಯಕ್ಕೆ ವಿರುದ್ಧವಾದ ಕೆಲವು ಸಂಗತಿಗಳು ತಿಳಿದುಬಂದುದರಿಂದ ಸಂದಿಗ್ಧಸ್ಥಿತಿಯೇರ್ಪಟ್ಟಿತ್ತು. ಪರಮಾಣು ಬೀಜವೂ ಎಲೆಕ್ಟ್ರಾನ್‌ಗಳಂತೆಯೇ ತನ್ನ ಅಕ್ಷದ ಮೇಲೆ ತಿರುಗುವುದೆಂದು ಪೌಲಿಯು ಊಹಿಸಿದ್ದುದನ್ನು ಗೌಡ್‌ಸ್ಮಿಟ್ ಮತ್ತು ಬಾಕ್ (Goudsmit and Back) ಎಂಬವರು ೧೯೨೭ರಲ್ಲಿ ಪ್ರಯೋಗದಿಂದ ಸ್ಥಿರಪಡಿಸಿದರು. ಷೂಲರ್ (Schüler) ಮತ್ತು ಆತನ ಶಿಷ್ಯರ ಶೋಧನಗಳಿಂದ ಸಮಸಂಖ್ಯೆಯ ಪರಮಾಣು ಭಾರವುಳ್ಳ ಬೀಜಗಳಿಗೆ ಭ್ರಮಣವು ಸೊನ್ನೆಯಾಗಿರಬಹುದೆಂದೂ ವಿಷಮಸಂಖ್ಯೆಯ ಪರಮಾಣು ಭಾರವುಳ್ಳ ಬೀಜಗಳಿಗೆ ($\frac{1}{2}\frac{h}{2\pi}$) ಎಂಬ ಏಕಮಾನವನ್ನು ವಿಷಮ ಸಂಖ್ಯೆಗಳಿಂದ ಗುಣಿಸಿದಷ್ಟು

ಭ್ರಮಣವಿರಬೇಕೆಂದೂ ತಿಳಿದುಬಂದಿತು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಶ್ರೀ ವೆಂಕಟೇಶಾಚಾರ್ಯರ ನೇತೃತ್ವದಲ್ಲಿ ನಡೆದ ಶೋಧನೆಗಳೂ ಈ ಅಭಿಪ್ರಾಯಕ್ಕೆ ಬೆಂಬಲಕೊಟ್ಟುವು. ಆದರೆ ರುದರ್‌ಫರ್ಡನ ಊಹೆಗೆ ಮಾತ್ರ ಇದು ವಿರೋಧವಾಗಿತ್ತು. ಇಷ್ಟರಲ್ಲಿ ೧೯೩೧ರಲ್ಲಿ ಹೊಸದೊಂದು ಶೋಧನವು ಈ ವಿರೋಧವನ್ನು ಹೋಗಲಾಡಿಸಲು ಸಹಾಯಮಾಡಿತು. ಕೂರಿ ಮತ್ತು ಜೋಲಿಯೋ (Curie and Joliot) ಮತ್ತು ಬೋತೆ ಮತ್ತು ಬೆಕರ್ (Bothe and Becker) ಇವರ ಪ್ರಯೋಗಗಳನ್ನನುಸರಿಸಿ ಚಾಡ್ವಿಕ್ (Chadwick) ಎಂಬಾತನು ಪ್ರಯೋಗಗಳನ್ನು ಮಾಡಿ ಬೆರಿಲಿಯಂ ಎಂಬ ಮೂಲವಸ್ತುವಿನ ಮೇಲೆ ಆಲ್ಫಕಣಗಳು ಹೊಡೆಯಲ್ಪಟ್ಟಾಗ ಹೊಸದೊಂದು ರಶ್ಮಿಯು ಹೊರಡುವುದೆಂದೂ, ಈ ರಶ್ಮಿಯಲ್ಲಿ ವಿದ್ಯುತ್ತಿಲ್ಲದ ಮತ್ತು ಜಲಜನಕದ ಪರಮಾಣುವಿನಷ್ಟೇ ಭಾರವುಳ್ಳ ಕಣಗಳಿರುವುವೆಂದೂ ತೋರಿಸಿದನು. ಈ ಹೊಸಕಣಗಳಿಗೆ ನ್ಯೂಟ್ರಾನ್‌ಗಳೆಂದು (Neutron) ಹೆಸರು. ಪ್ರತಿಯೊಂದು ಬೀಜದಲ್ಲೂ ಪರಮಾಣುಸಂಖ್ಯೆಗೆ ಸಮನಾದ ಸಂಖ್ಯೆಯ ಪ್ರೋಟಾನ್‌ಗಳೂ, ಪರಮಾಣು ಭಾರಕ್ಕೂ ಪರಮಾಣು ಸಂಖ್ಯೆಗೂ ಇರುವ ಅಂತರಕ್ಕೆ ಸಮನಾದ ಸಂಖ್ಯೆಯ ನ್ಯೂಟ್ರಾನ್‌ಗಳೂ ಇರುವುವೆಂಬ ಅಭಿಪ್ರಾಯವು ಅಲ್ಲಿಂದ ಮುಂದೆ ಬೇರೂರಿತು. ಇದೇ ಸಮಯದಲ್ಲಿ ಒಂದು ಪ್ರೋಟಾನ್ ಮತ್ತು ಒಂದು ನ್ಯೂಟ್ರಾನ್ ಸೇರಿದ ಬೀಜವನ್ನು ಹೊಂದಿದ ಭಾರಜಲಜನಕವನ್ನು (Heavy Hydrogen) ಯೂರೆ (Urey) ಎಂಬಾತನು ಕಂಡುಹಿಡಿದನು. ಇದರಿಂದ ಅಣುಗಳಲ್ಲಿ ಜಲಜನಕ ಪರಮಾಣುವು ಯಾವ ಸ್ಥಾನಗಳಲ್ಲಿರುವುದೆಂಬುದನ್ನು ತಿಳಿಯಲು ಬಹಳ ಸಹಾಯವಾಯಿತು. ೧೯೩೨ರಲ್ಲಿ ಆಂಡರ್‌ಸನ್ ಎಂಬಾತನು ಎಲೆಕ್ಟ್ರಾನ್‌ಗಳಷ್ಟೇ ಭಾರವುಳ್ಳ ಧನವಿದ್ಯುತ್ಕಣಗಳನ್ನು ಕಂಡುಹಿಡಿದು ಅವುಗಳಿಗೆ ಪಾಸಿಟ್ರಾನ್‌ಗಳೆಂಬ (Positron) ಹೆಸರನ್ನು ಕೊಟ್ಟನು. ೧೯೩೩ರಲ್ಲಿ ಕೂರಿ ಮತ್ತು ಜೋಲಿಯೋ ಇವರು ಗಾಮಾರಶ್ಮಿಗಳಲ್ಲಿರುವ ಶಕಲಗಳಿಂದ (Quanta), ಎಲೆಕ್ಟ್ರಾನ್ ಮತ್ತು ಪಾಸಿಟ್ರಾನ್ ಇವೆರಡೂ ಉತ್ಪನ್ನವಾಗುವುವೆಂದೂ, ಇವು ಪುನಃ ಸಂಯೋಗ ಹೊಂದಿದರೆ ಮತ್ತೆ ಗಾಮಾರಶ್ಮಿಗಳೇ ಉಂಟಾಗುವುವೆಂದೂ ತೋರಿಸಿ ವಸ್ತುವನ್ನು ಶಕ್ತಿಯನ್ನಾಗಿಯೂ ಶಕ್ತಿಯನ್ನು ವಸ್ತುವನ್ನಾಗಿಯೂ ಮಾರ್ಪಡಿಸಬಹುದೆಂದು ತೋರಿಸಿದರು. ಈ ದಂಪತಿಗಳು ೧೯೩೪ರಲ್ಲಿ ಕೃತಕ ರಶ್ಮಿವಿಕ್ಷೇಪವನ್ನು (Induced or Artificial Radioactivity) ಕಂಡು ಹಿಡಿದರು. ೧೯೩೫ರಲ್ಲಿ ಫರ್ಮಿ (Fermi) ಎಂಬಾತನು ಬೇರೆ ಬೇರೆ ಪರಮಾಣುಗಳನ್ನು ನ್ಯೂಟ್ರಾನ್‌ಗಳಿಂದ ಹೊಡೆದು ರಶ್ಮಿವಿಕ್ಷೇಪಕಗುಣವುಳ್ಳ ಬೇರೆಬೇರೆ ಮೂಲವಸ್ತುಗಳಾಗಿ ಹೇಗೆ ಮಾರ್ಪಡಿಸಬಹುದೆಂದು ತೋರಿಸಿದನು.

ಇಷ್ಟರಲ್ಲಿ ವಾನ್ ಡಿ ಗ್ರಾಫ್ (Van de Graaf), ಲಾರೆನ್ಸ್ (Lawrence), ಕಾಕ್ ಕ್ರಾಫ್ಟ್ ಮತ್ತು ವಾಲ್ಟನ್ (Cockcroft and Walton) ಎಂಬವರು ಬೇರೆಬೇರೆ ವಿಧದ ಯಂತ್ರಗಳನ್ನು ರಚಿಸಿ ಪ್ರೋಟಾನ್ ಅಥವಾ ಇತರ ವಿದ್ಯುತ್ಸಹಿತಕಣಗಳಿಗೆ ಅತಿ ಹೆಚ್ಚಿನ ವೇಗವನ್ನುಕೊಡುವ ವ್ಯವಸ್ಥೆಗಳನ್ನು ಮಾಡಿದರು. ಈ ಅತಿ ವೇಗವುಳ್ಳ ಕಣಗಳು ಪರಮಾಣುಗಳ ಮೇಲೆ ಹೊಡೆಯಲ್ಪಟ್ಟರೆ ಅವುಗಳ ಬೀಜಗಳಲ್ಲಿ ಬದಲಾವಣೆಗಳನ್ನುಂಟುಮಾಡಿ ಹೊಸ ಮೂಲವಸ್ತುಗಳನ್ನು ಸೃಜಿಸುತ್ತವೆ. ಈ ವಿಧದಲ್ಲಿ ರಶ್ಮಿವಿಕ್ಷೇಪಕಗಳಾದ ರಂಜಕವೇ ಮೊದಲಾದ ವಸ್ತುಗಳನ್ನು ಮಾಡಿ ಅವುಗಳನ್ನು ಪ್ರಾಣಿಗಳಿಗೆ ತಿನ್ನಿಸಿ ಅವುಗಳ ದೇಹದ ವಿವಿಧಭಾಗಗಳ ರಶ್ಮಿವಿಕ್ಷೇಪಕಗುಣವನ್ನು ಪರೀಕ್ಷಿಸುವುದರಿಂದ ಈ ವಸ್ತುಗಳು ದೇಹದಲ್ಲಿ ಹೇಗೆ ಹರಡುವುವೆಂಬುದನ್ನು ಕಂಡು ಹಿಡಿದಿರುವರು. ಈಗಿನ ಯುದ್ಧವು ಮೊದಲಾಗುವುದಕ್ಕೆ ಸ್ವಲ್ಪ ಮುಂಚೆ, ಎಂದರೆ ೧೯೩೮ರಲ್ಲಿ ಸ್ಟ್ರೈಸ್‌ಮಾನ್ ಎಂಬಾತನ ಶೋಧನೆಗಳಿಂದ ಯುರೇನಿಯಂ ಪರಮಾಣು ಬೀಜವನ್ನು ನ್ಯೂಟ್ರಾನ್, ಪ್ರೋಟಾನ್ ಮುಂತಾದುವುಗಳಿಂದ ಹೊಡೆದರೆ ಅದು ಎರಡು ಭಾಗಗಳಾಗಿ ಒಡೆದು ಎರಡು ಬೇರೆ ಮೂಲವಸ್ತುಗಳುಂಟಾಗುವುದಲ್ಲದೆ ಅದರ ಸ್ವಲ್ಪಭಾಗವು ಶಕ್ತಿಯಾಗಿ ಮಾರ್ಪಡುವುದೆಂದು ತಿಳಿದುಬಂದಿತ್ತು. ಇಂತಹ ಶೋಧನೆಗಳು ಈ ಯುದ್ಧದ ಕಾಲದಲ್ಲಿ ನಡೆಯುತ್ತಿವೆಯೋ ಇಲ್ಲವೋ ತಿಳಿಯಲಾಗುವುದಿಲ್ಲ. ಯುದ್ಧವು ಮುಗಿದು ಇಂತಹ ವಿಷಯಗಳನ್ನು ಗುಟ್ಟಾಗಿಡಬೇಕಾದ ಆವಶ್ಯಕತೆಯು ತಪ್ಪಿದಮೇಲೆ ಅನೇಕ ಹೊಸ ಸಂಗತಿಗಳು ಹೊರಕ್ಕೆ ಬರುವುದರಲ್ಲಿ ಸಂದೇಹವಿಲ್ಲ.

೪. **ಅಣುಗಳ ರಚನೆ ಮತ್ತು ಇತರ ಶೋಧಗಳು**:—ಅಣುಗಳ ರಚನೆಯ ವಿಷಯದಲ್ಲಿ ಕೂಡ ಅವುಗಳು ಹೊರಸೂಸುವ ಬೆಳಕನ್ನು ಪರಿಶೀಲಿಸುವುದರಿಂದಲೂ ರಾಮನ್ ಕಾರ್ಯದ ಸಹಾಯದಿಂದಲೂ, ಎಲೆಕ್ಟ್ರಾನ್‌ಗಳು ನಮನಹೊಂದುವುದನ್ನು ಪರೀಕ್ಷಿಸುವುದರಿಂದಲೂ, ಭಾರಜಲಜನಕವನ್ನು ಸಾಮಾನ್ಯ ಜಲಜನಕದ ಸ್ಥಾನಕ್ಕೆ ಸೇರಿಸುವುದರಿಂದಲೂ, ಮತ್ತು ಇತರ ಮಾರ್ಗಗಳಿಂದಲೂ ಅನೇಕ ಶೋಧನೆಗಳು ನಡೆಯುತ್ತಾ ಬಂದಿವೆ. ಇದರಿಂದ ಅಣುಗಳಲ್ಲಿ ಪರಮಾಣುಗಳು ಎಷ್ಟೆಷ್ಟು ದೂರದಲ್ಲಿ ಯಾವ ಯಾವ ಸ್ಥಾನಗಳಲ್ಲಿ ಜೋಡಿಸಲ್ಪಟ್ಟಿವೆ ಮತ್ತು ಅವು ಹೇಗೆ ಸ್ಪಂದಿಸುತ್ತವೆ ಎಂಬುದು ತಿಳಿದುಬಂದಿದೆ. ಅಲ್ಲದೆ ಘನ ಮತ್ತು ದ್ರವಪದಾರ್ಥಗಳಲ್ಲಿ ಅಣು ಅಥವಾ ಪರಮಾಣುಗಳ ಜೋಡಣೆಯು ಯಾವ ರೀತಿಯಲ್ಲಿರುವುದೆಂಬುದನ್ನು X-ಕಿರಣ ಮತ್ತು ಎಲೆಕ್ಟ್ರಾನ್‌ಗಳ ನಮನದಿಂದ ಕಂಡುಹಿಡಿದಿದ್ದಾರೆ. ಹತ್ತಿ, ರೇಷ್ಮೆ ಮುಂತಾದುವುಗಳಲ್ಲಿ ಅಣುಗಳ ಜೋಡಣೆಯು ಹೇಗಿದೆಯೆಂಬುದೇ ಮುಂತಾದ ವಿಷಯಗಳೂ ಪರೀಕ್ಷಿಸಲ್ಪಟ್ಟಿವೆ. ಶ್ರೀ ಎಂ. ಎನ್. ಸಹ, ಆರ್.

ಎಸ್. ಚಂದ್ರಶೇಖರ್. ಮುಂತಾದವರು ಖಗೋಳದಲ್ಲಿರುವ ವಸ್ತುಗಳ ರಚನೆಯ ವಿಷಯದಲ್ಲಿಯೂ, ಶ್ರೀ ಎಚ್. ಜೆ. ಭಾಭಾ ಮುಂತಾದವರು ಪೃಥ್ವಿಯ ಹೊರಗಿನಿಂದ ಬರುತ್ತಿರುವ ವಿಶ್ವಕಿರಣಗಳ (Cosmic Rays) ವಿಷಯದಲ್ಲಿಯೂ, ಶ್ರೀ ಕೆ. ಎಸ್. ಕೃಷ್ಣನ್. ಎಸ್. ಎಸ್. ಭಟ್ನಗರ್ ಮುಂತಾದವರು ಪದಾರ್ಥಗಳ ಕಾಂತತ್ವದ ವಿಷಯದಲ್ಲಿಯೂ ನಡೆಸಿರುವ ಶೋಧಗಳು ಕುತೂಹಲವನ್ನು ಹುಟ್ಟಿಸುವಂತಹವಾದರೂ ಅವುಗಳ ವಿವರಗಳನ್ನು ಚರ್ಚಿಸಲು ಇಲ್ಲಿ ಅವಕಾಶವಿಲ್ಲದೆ ಬಿಡಬೇಕಾಗಿದೆ.

ಸಮಾಪ್ತಿ—ಶುದ್ಧವಿಜ್ಞಾನದ (Pure Science) ಬೆಳವಣಿಗೆಯನ್ನು ಮಾತ್ರ ಮೇಲೆ ಚರ್ಚಿಸಲಾಗಿದೆ. ಆದರೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಪ್ರಯುಕ್ತ ವಿಜ್ಞಾನದಲ್ಲಿಯೂ (Applied Science) ಅತ್ಯಂತ ಮುಖ್ಯವಾದ ಶೋಧನೆಗಳು ನಡೆದು ಮನುಷ್ಯಜೀವನವೇ ಮಾರ್ಪಟ್ಟಿದೆ. ಮಾತನಾಡುವ ಚಿತ್ರಗಳು (Talkies) ಆಕಾಶವಾಣಿ (Radio Broadcasting), ವಿಧವಿಧವಾದ ವಿಮಾನಗಳು (Aeroplanes), ದೂರದೃಷ್ಟಿ (Television) ಮುಂತಾದ ಹೊಸ ಕಲ್ಪನೆಗಳು ಎಲ್ಲರ ಗಮನಕ್ಕೂ ಬಂದಿವೆ. ಇವುಗಳಲ್ಲದೆ ಈ ಯುದ್ಧದ ಅವಶ್ಯಕತೆಗಳನ್ನು ಪೂರೈಸಲು ಎಂತಹ ಹೊಸ ಸೃಷ್ಟಿಗಳಾಗಿವೆಯೋ ಅವುಗಳು ಈಗಲೇ ತಿಳಿಯುವಂತಿಲ್ಲ. ಈ ಕಲ್ಪನೆಗಳಲ್ಲಿ ಅಡಗಿರುವ ವೈಜ್ಞಾನಿಕ ತತ್ವಗಳು ಮಾತ್ರ ಶುದ್ಧವಿಜ್ಞಾನದ ಉಪಾಸಕರು ಕಂಡುಹಿಡಿದಂತಹವೇ. ಆದರೂ ಕೆಲವು ವೇಳೆ ಈ ಕಲ್ಪನೆಗಳು ಸಿದ್ಧಿಸಿದುದನ್ನು ನೋಡಿ ವಿಜ್ಞಾನದ ತತ್ವಗಳನ್ನೂ ಪುನಃ ಪರಿಶೀಲಿಸಬೇಕಾಗಬಹುದು. ಮಾರ್ಕೋನಿಯು ವಿದ್ಯುತ್ತಿನ ಅಲೆಗಳನ್ನು ಇಂಗ್ಲೆಂಡಿನಿಂದ ಅಮೇರಿಕಕ್ಕೆ ಕಳುಹಿಸುವುದರಲ್ಲಿ ಕಾರ್ಯಸಿದ್ಧಿಯನ್ನು ಪಡೆದಮೇಲೆಯೇ ವೈಜ್ಞಾನಿಕರು ಇಂತಹ ಅಲೆಗಳು ಹೇಗೆ ಭೂಮಿಯನ್ನು ಸುತ್ತಿಕೊಂಡು ಬರಬಲ್ಲುವೆಂದು ಪರೀಕ್ಷಿಸಿದರು. ಈ ವಿವರಗಳನ್ನೆಲ್ಲಾ ಹೆಚ್ಚಾಗಿ ವರ್ಣಿಸಲು ಇಲ್ಲಿ ಸ್ಥಳವಿಲ್ಲ. ಆದುದರಿಂದ ಈ ಯುದ್ಧವು ಬೇಗನೆ ಲೋಕಕಲ್ಯಾಣವಾಗುವ ರೀತಿಯಲ್ಲಿ ಕೊನೆಗಂಡು, ಮನುಷ್ಯರು ಪರಸ್ಪರ ವಿನಾಶವನ್ನುಂಟುಮಾಡಲು ತಮ್ಮ ಬುದ್ಧಿಯನ್ನು ವೆಚ್ಚಮಾಡಿ ನಿರ್ಮಿಸಿದ ಉಪಕರಣಗಳು ಜಗತ್ತಿನ ಮೈತ್ರಿಯನ್ನು ಸಾಧಿಸಲು ಉಪಯೋಗವಾಗಿ, ಅದರಿಂದ ಉಂಟಾಗುವ ಪ್ರಗತಿಯನ್ನು ಕಾಣುವ ಹೊತ್ತು ಬರಲೆಂದು ಹಾರೈಸಿ ಈ ಲೇಖನವನ್ನು ಮುಗಿಸುತ್ತೇನೆ.

ಟಿ. ಎಸ್. ಸುಬ್ಬರಾಯ.

೨. ಮತಧರ್ಮ

ಇಂದಿನ ದಾರ್ಶನಿಕರ ದೃಷ್ಟಿ

ಮತ ಮಾನವನಿಗೆ ಸಹಜವಾದದ್ದು. ಹುಟ್ಟುವಾಗಲೇ ಒಂದು ಮತದ ಆವರಣದಲ್ಲಿ ಹುಟ್ಟುತ್ತಾನೆ. ಬೆಳೆಯುವುದೂ ಒಂದು ಮತದ ನೆರಳಿನಲ್ಲಿ. ಹುಟ್ಟಿದಂದಿನಿಂದ ಸಾಯುವವರೆಗೆ ತನ್ನ ಮತ ಸಂಪ್ರದಾಯದಂತೆ ಜಾತಕರ್ಮದಿಂದ ಮೊದಲಾಗಿ ಅಂತ್ಯ ಸಂಸ್ಕಾರದವರೆಗೆ ಅನೇಕ ಸಂಸ್ಕಾರಗಳಿಂದ ಮತದ ಕಟ್ಟಿಗೆ ಒಳಪಡುತ್ತಾನೆ. ಹೀಗೆ ಹೆಜ್ಜೆಹೆಜ್ಜೆಗೂ ಮತ ಮಾನವನ ಬೆನ್ನು ಹತ್ತಿ ಬರುತ್ತದೆ. ಬಿನ್ನೆಲೆಯೂ ಆವರಣವೂ ಆಗುತ್ತದೆ. ಬಹು ಮಂದಿ ಮತದ ವಿಷಯವಾಗಿ ನಿಂತು ಆಲೋಚಿಸುವವರಲ್ಲ. ಮತವನ್ನು ಆರೀತಿ ಆಲೋಚನೆಗೆ ಈಡುಮಾಡುವುದು ಮತದ ವಿನಾಶಕ್ಕೆ ಕಾರಣವಾಗುವುದೆಂದು ಅನೇಕರು ಹೆದರುವರು. ಬಹು ಜನ ತಾವು ಸೇವಿಸುವ ಗಾಳಿಯಂತೆ ಪ್ರಯತ್ನವಿಲ್ಲದೆ ಮತದ ನಂಬಿಕೆಗಳನ್ನು ಒಳಕೊಳ್ಳುತ್ತಾರೆ. ಕೆಲವರು ಮಾತ್ರ ಮತದ ವಿಷಯವಾಗಿ ಜಿಜ್ಞಾಸೆಗೆ ತೊಡಗುತ್ತಾರೆ. ಮತದ ಹುಟ್ಟು, ಸ್ವರೂಪ, ಪ್ರಯೋಜನಗಳ ವಿಷಯವಾಗಿ ವಿಚಾರಮಾಡುತ್ತಾರೆ. ಈ ರೀತಿಯ ಜಿಜ್ಞಾಸೆಯನ್ನು ಎಲ್ಲ ಕಾಲದ ಮತ್ತು ಎಲ್ಲ ದೇಶದ ದಾರ್ಶನಿಕರು ಮಾಡಿರುತ್ತಾರೆ. ಪ್ರಾಚೀನಕಾಲದ ಗ್ರೀಕ್ ದಾರ್ಶನಿಕರು ಮತ ವಿಚಾರದಲ್ಲಿ ನಡೆಸಿದ ವಿಮರ್ಶೆಯನ್ನು ಪ್ರೊ. ಗಿಲ್ಬರ್ಟ್ ಮರ್ರೆ ಅವರು ತಮ್ಮ 'ಗ್ರೀಕ್ ಮತದ ಐದು ಹಂತಗಳು'[1] ಎನ್ನುವ ಗ್ರಂಥದಲ್ಲಿ ವಿವರಿಸಿದ್ದಾರೆ. ಆಧುನಿಕ ವಿದ್ವಾಂಸರು ಪ್ರಾಚೀನ ಮತ ವಿಮರ್ಶೆಮಾಡಲು ಅವಲಂಬಿಸುವ ಪದ್ಧತಿಗೆ ಈ ಗ್ರಂಥ ಮಾದರಿಯಾಗಿದೆ. ಇದೇ ರೀತಿಯ ಪದ್ಧತಿಯನ್ನು ಪೌರಸ್ತ್ಯ ಮತಗಳ ವಿಮರ್ಶೆಗೆ ಪ್ರೊ. ರಾಧಾಕೃಷ್ಣನ್ ಅವರು ತಮ್ಮ 'ಪೌರಸ್ತ್ಯ ಮತಗಳು ಮತ್ತು ಪಾಶ್ಚಾತ್ಯ ಜಿಜ್ಞಾಸೆ'[2] ಎಂಬ ಗ್ರಂಥದಲ್ಲಿ ಅನ್ವಯಿಸಿರುವರು.

ಇಂದಿನ ದಾರ್ಶನಿಕರ ದೃಷ್ಟಿಯಲ್ಲಿ ವೈಜ್ಞಾನಿಕ ದೃಷ್ಟಿ ಬೆರೆತಿದೆ. ವೈಜ್ಞಾನಿಕರು ಮತದ ವಿಷಯದಲ್ಲಿ ಉದಾಸೀನರೆಂದು ಸಾಮಾನ್ಯವಾದ ನಂಬಿಕೆ. ಆದರೆ ಇಂದಿನ ವೈಜ್ಞಾನಿಕರನೇಕರು ಮತದ ವಿಷಯದಲ್ಲಿ ಆಸಕ್ತಿ ತೋರಿಸುವುದನ್ನು ಅವರ ಬರವಣಿಗೆಯಿಂದ ತಿಳಿಯಬಹುದು. ಇಂಗ್ಲೆಂಡಿನ ಪ್ರಸಿದ್ಧ ವೈಜ್ಞಾನಿಕರಾದ ಜೀನ್ಸ್, ಎಡ್ಡಿಂಗ್

---

[1] G. Murray, *Five Stages of Greek Religion.*

[2] S. Radhakrishnan, *Eastern Religions and Western Thought.*

ಟನ್, ಹಾಲ್ಡೇನ್, ಜೂಲಿಯನ್ ಹಕ್ಸ್ಲಿ, ಮಾಲಿನೌಸ್ಕಿ, ಆರ್ಥರ್ ಥಾಮ್‌ಸನ್ ಮೊದಲಾದವರು ಮತದ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಿರುತ್ತಾರೆ. ಮತಕ್ಕೂ ವಿಜ್ಞಾನಕ್ಕೂ ಇರುವ ಸಾಮರಸ್ಯವನ್ನು 'ವಿಜ್ಞಾನ ಮತ್ತು ಮತ'[3] ಎಂಬ ಉಪನ್ಯಾಸ ಮಾಲೆಯ ಗ್ರಂಥದಲ್ಲಿ ತೋರಿಸಿರುತ್ತಾರೆ. ಮಾನವನು ವಿಜ್ಞಾನದಲ್ಲಿ ಒಂದು ವಿಧವಾದ ಸತ್ಯವನ್ನು ಕಂಡರೆ ಮತದಲ್ಲಿ ಇನ್ನೊಂದು ವಿಧವಾದ ಸತ್ಯವನ್ನು ಕಾಣಬಲ್ಲನೆಂಬುದು ಇವರೆಲ್ಲರ ಅಭಿಪ್ರಾಯ. ವಿಜ್ಞಾನಕ್ಕೂ ಮತಕ್ಕೂ ವಿರೋಧವೆಂಬ ನಂಬಿಕೆಗೆ ಆಧಾರವಿಲ್ಲವೆಂದು ಇವರು ವಾದಿಸಿರುವರು.[4] ಮಾನವನ ಪ್ರಗತಿಗೆ ಮತ ವಿಜ್ಞಾನಗಳು ಒಂದನ್ನೊಂದು ಹೊಂದಿಕೊಂಡು ಬೆಳೆಯುವುದು ಅತ್ಯಾವಶ್ಯಕವೆಂದೂ ಇದನ್ನು ನಾವು ಗ್ರಹಿಸಿದರೆ ಬೇಗನೆ ಮುಂದುವರಿಯುವೆವೆಂದೂ ಇವರ ನಂಬಿಕೆ. ಈ ವಾದಕ್ಕೆ ದಾರ್ಶನಿಕರು ವಿರೋಧಿಗಳಲ್ಲ. ಇಂದಿನ ದಾರ್ಶನಿಕರೂ ವೈಜ್ಞಾನಿಕರ ವಿಷಯದಲ್ಲಿ ಒಮ್ಮನಸ್ಸಿನಿಂದಿರುವುದನ್ನು ಪ್ರೊ. ವೈಟ್‌ಹೆಡ್ ಎಂಬ ದಾರ್ಶನಿಕರ 'ವಿಜ್ಞಾನ ಮತ್ತು ಆಧುನಿಕ ಪ್ರಪಂಚ'[5] ಅನ್ನುವ ಗ್ರಂಥದಲ್ಲಿ ನೋಡಬಹುದು. "ವಿಜ್ಞಾನದಂತೆ ಮತವೂ ಮಾರ್ಪಾಟನ್ನು ಒಪ್ಪಿಕೊಂಡ ಹೊರತು ಹಿಂದಿದ್ದ ತನ್ನ ಶಕ್ತಿಯನ್ನು ಪುನಃ ಗಳಿಸಲು ಶಕ್ಯವಲ್ಲ"[6] ವೆಂದೂ "ಉನ್ನತ ಆಶಾಯುತವಾದ ಸಾಹಸ ಮನೋಭಾವವನ್ನು ಮತ ಅಡಗಿಸಿದ ದಿನವೇ ಮತಕ್ಕೆ ಮೃತ್ಯು ಸಿದ್ಧ"[7]ವೆಂದೂ, ಮತವೆಂದರೆ "ಸಂತತ ಪರಿಣಾಮವನ್ನು ಪಡೆಯುತ್ತಿರುವ ಆಸನ್ನ ವಸ್ತುಗಳಿಗಾಚೆ, ಹಿಂದೆ, ಒಳಗೆ ನೆಲೆಸಿರುವ ಯಾವುದೋ ಒಂದು ವಸ್ತುವಿನ ದರ್ಶನ. ಇದು ಸತ್ಯವಾದರೂ ಇದರ ಸಿದ್ಧಿಗಾಗಿ ಕಾದಿರುತ್ತೇವೆ! ಮುಂದೆಂದೋ ಸಾಧಿಸಬೇಕಾದುದು ಹೀಗಿದ್ದರೂ ಇಂದಿನ ಸಿದ್ಧ ವಸ್ತುಗಳೆಲ್ಲಕ್ಕಿಂತಲೂ ಹಿರಿದಾದುದು; ಆಗು ಹೋಗುಗಳೆಲ್ಲಕ್ಕೂ ಅರ್ಥ ಕೊಡುವುದು; ಆದರೂ ನಮ್ಮ ಅರಿವಿನ ಮೇರೆ ಮೀರಿರುವುದು; ಇದನ್ನು ಗಳಿಸುವುದೇ ಪರಮ ಶ್ರೇಯಸ್ಸು; ಆದರೂ ನಮ್ಮ ಚಾಚಿದ ಕೈಗಳಿಗೆ ನಿಲುಕದಾಗಿದೆ; ನಮ್ಮ ಅಂತಿಮಧ್ಯೇಯವೇ ಇದು; ಆದರೂ ಇದರ ಅನ್ವೇಷಣೆ ಕೈಗೂಡದ

---

[3] *Science and Religion*—A Symposium.

[4] Malinowski—"Speaking as an anthropologist, I have, therefore, to associate myself with the affirmation repeated by all my collaborators in this series—that religion and science need not be in open conflict, since their respective aims and provinces are distinct and independent."

[5] Whitehead—*Science and The Modern World*.

[6] 'Religion will not regain its old power until it can face Change in the same spirit as does Science.'

[7] 'The death of religion comes with the repression of the high hope of adventure.'

ಆಸೆಯಾಗಿದೆ."[8] ಹೀಗೆಂದು ಪ್ರೊ. ವೈಟ್‌ಹೆಡ್ ಅವರು ಮತದ ವಿವರಣೆಯನ್ನು ಮಾಡಿ ಇಂತಹ ರಹಸ್ಯದ ವಿಷಯದಲ್ಲಿ ನಾವು ಸಹಜವಾಗಿ ತಾಳುವ ನಮ್ರಭಾವ, ಆರಾಧನೆಯ ಭಾವ ಅಥವಾ ಭಕ್ತಿ ಭಾವವೇ ಮತವೆನಿಸಿಕೊಳ್ಳುವುದೆಂದು ತೀರ್ಮಾನಕ್ಕೆ ಬಂದಿದ್ದಾರೆ. ವಿಶ್ವದ ವಿಶಾಲತೆ ಗಭೀರತೆಗಳನ್ನು ಕಂಡು ಅಚ್ಚರಿಗೊಂಡ ಮಾನವನ ಮನಸ್ಸು ಈ ರಹಸ್ಯಕ್ಕೆ ನಮೋನಮೋ ಎಂದು ಎರಗುವುದೇ ಮತದ ಉಗಮಕ್ಕೆ ಕಾರಣವೆಂದು ಪ್ರೊ. ರುಡಾಲ್ಫ್ ಓಟ್ಟೊ ಎಂಬ ವಿದ್ವಾಂಸರು ತಮ್ಮ 'ಪವಿತ್ರತೆಯ ಕಲ್ಪನೆ'[9] ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ. ಮತ ಮನೋಭಾವದಲ್ಲಿ ಆಶ್ಚರ್ಯ ಅಥವಾ ಅದ್ಭುತಭಾವನೆ, ನಾವು ಉಪಾಸಿಸುವ ವಸ್ತು ಪವಿತ್ರವಾದುದೆಂಬ ಭಾವನೆ ಇವೆರಡೂ ಸೇರಿರುವುವೆಂಬ ಓಟ್ಟೋರವರ ಅಭಿಪ್ರಾಯವನ್ನು ಅನೇಕ ಆಧುನಿಕ ದಾರ್ಶನಿಕರು ಮತ್ತು ಮನಶ್ಶಾಸ್ತ್ರಜ್ಞರು ಒಪ್ಪಿರುವರು. ಮತಮನೋಭಾವದ ವೈಶಿಷ್ಟ್ಯವನ್ನು, ಓಟ್ಟೋರವರು 'ನ್ಯೂಮಿನಸ್' ಎಂಬ ಒಂದು ಮಾತಿನಲ್ಲಿ ಅಡಗಿಸಿರುವರು. 'ನ್ಯೂಮಿನಸ್' ಎಂದರೆ ಆಶ್ಚರ್ಯದ್ಯೋತಕವಾದ ಪವಿತ್ರತೆ, ಇದು ಮತದ ತಿರುಳೆಂದು ಓಟ್ಟೋರವರ ಅಭಿಪ್ರಾಯ. ಎಲ್ಲಿ ಪವಿತ್ರತೆಯ ಭಾವನೆ ಇಲ್ಲವೋ ಅಲ್ಲಿ ಮತವಿಲ್ಲ, ಪವಿತ್ರತೆಯ ಭಾವನೆ ಎಲ್ಲಿದ್ದರೂ ಅಲ್ಲಿ ಮತದ ಅಂಶವಿದ್ದೇ ಇದೆ ಎನ್ನುವುದು ಇವರ ವಾದದ ಸಾರಾಂಶ.

ಅನೇಕ ವೈಜ್ಞಾನಿಕರೂ ದಾರ್ಶನಿಕರೂ ಮತದ ವಿಷಯದಲ್ಲಿ ತೆರೆದ ಮನಸ್ಸುಳ್ಳವರಾಗಿರುವರು. ಎಂದರೆ ಇನ್ನೂ ಯಾವ ಕಡೆಯ ತೀರ್ಮಾನಕ್ಕೂ ಬಾರದೆ ತಿಳಿವಿನ ಹೊಸ ಬೆಳಕಿಗೆ ಮನಸ್ಸಿನಲ್ಲಿ ಸ್ಥಾನಕೊಡಲು ಸಂತತ ಸಿದ್ಧರಾಗಿದ್ದಾರೆ. ಮತವೆಲ್ಲಾ ಭ್ರಾಂತಿ, ಮರುಳುತನವೆಂದು ಹಿಂದಿನ ವೈಜ್ಞಾನಿಕರ ಭಾವನೆ. ಈ ಭಾವನೆ ವೈಜ್ಞಾನಿಕನಲ್ಲಿರಬೇಕಾದ ನಿಷ್ಪಕ್ಷಪಾತ ದೃಷ್ಟಿಗೆ ತಕ್ಕುದಲ್ಲವೆಂದು ಇಂದಿನ ವೈಜ್ಞಾನಿಕರೇ ಹೇಳುತ್ತಿರುವರು. ಮತ ನಿಜವೆಂದಾಗಲಿ ಸುಳ್ಳೆಂದಾಗಲಿ ಹೇಳುವ ಅಧಿಕಾರ ತಮಗೆ ಸೇರಿದುದಲ್ಲವೆಂದೂ ಇದು ದಾರ್ಶನಿಕರ ಪ್ರಶ್ನೆ ಎಂದೂ ಭಾವಿಸಿ ಅನೇಕ ವೈಜ್ಞಾನಿಕರು ಮತದ ವಿಷಯದಲ್ಲಿ ತಾಟಸ್ಥ್ಯ ವಹಿಸಿದ್ದಾರೆ. ದಾರ್ಶನಿಕರಿಗೆ ಈ ತಟಸ್ಥಭಾವ ಕಟ್ಟಕಡೆಯ ನೆಲೆಯಲ್ಲ. ಮತತತ್ವ ನಿಷ್ಕರ್ಷೆ ಮಾಡಲೇಬೇಕಾದುದು ದಾರ್ಶನಿಕರ ಕೆಲಸ. ಈ ಕೆಲಸದಲ್ಲಿ ವೈಜ್ಞಾನಿಕರು ಮತದ ವಿಷಯ

[8] 'Religion is the vision of something which stands beyond, behind and within the passing flux of immediate things; something which is real and yet waiting to be realized; something which is a remote possibility and yet the greatest of present facts; something that gives meaning to all that passes and yet eludes apprehension; something whose possession is the final good and yet is beyond all reach; something which is the ultimate ideal, and the hopeless quest.'

[9] Rudolf Otto, *The Idea of The Holy*.

ದಲ್ಲಿ ಮಾಡಿರುವ ಸಂಶೋಧನೆಗಳೆಲ್ಲವೂ ಸಹಾಯಕವಾಗುವುವು. ಮನಶ್ಶಾಸ್ತ್ರಜ್ಞರು ಮತಾನುಭವವನ್ನು ವಿಮರ್ಶೆಗೆ ಈಡುಮಾಡಿರುವರು. ಮತಕ್ಷೇತ್ರದಲ್ಲಿ ಮಾನವನ ಮನಸ್ಸು ಎಷ್ಟು ವಿಧವಾಗಿ ಸುಳಿದಿರುವುದೆಂಬುದನ್ನು ವಿಶದಪಡಿಸಿರುವರು. ಮತದ ವಿಮರ್ಶೆಗೆ ಕೈಹಾಕಿದ ಮನಶ್ಶಾಸ್ತ್ರಜ್ಞರಲ್ಲಿ ಲ್ಯೂಬಾ, ಫ್ರಾಯ್ಡ್, ಯೂಂಗ್, ವಿಲಿಯಮ್ ಜೇಮ್ಸ್ ಮೊದಲಾದವರು ಮುಖ್ಯ. ಮತದ ಭಾವನೆಗಳಿಂದ ಮನುಷ್ಯನ ಸ್ವಭಾವದ ಮೇಲೆ ಆಗುವ ಅದ್ಭುತ ಪರಿಣಾಮಗಳನ್ನು ಕುರಿತು ಸಂಶೋಧನೆ ನಡೆಸಿರುವರು. ಮತದಲ್ಲಿ ವಾಸ್ತವಿಕ ಸತ್ಯವಿರಲಿ ಇಲ್ಲದಿರಲಿ ಮತಾವೇಶಕ್ಕೆ ಒಳಗಾದ ಮಾನವನ ಜೀವನ ಉತ್ತಮಗೊಳ್ಳಲು ಸಂದೇಹವಿಲ್ಲವೆಂದು ವಿಲಿಯಮ್ ಜೇಮ್ಸರು ತಮ್ಮ "ಮತಾನುಭವದ ವಿವಿಧ ರೂಪಗಳು"[10] ಎಂಬ ಗ್ರಂಥದಲ್ಲಿ ಹೇಳಿದ್ದಾರೆ.

ಸಾಂಪ್ರದಾಯಿಕವಾದ ಮತಗಳಲ್ಲಿ ಆಧುನಿಕರನೇಕರಿಗೆ ಶ್ರದ್ಧೆ ಸಹಜವಾಗಿ ತಪ್ಪಿದೆ. ಇದರಿಂದ ಅವರೆಲ್ಲರೂ ನಾಸ್ತಿಕರೆಂದಾಗಲಿ, ಚಾರ್ವಾಕರೆಂದಾಗಲಿ, ಮತದಲ್ಲೇ ಅವರಿಗೆ ನಂಬಿಕೆ ಇಲ್ಲವೆಂದಾಗಲಿ ಭಾವಿಸುವುದು ತಪ್ಪು. ಅನೇಕರು ತಾವು ಹುಟ್ಟಿ ಬೆಳೆದು ಬಂದ ಮತ ಶಾಖೆಯನ್ನು ಬಿಟ್ಟು ಮತಾಂತರವನ್ನು ಅವಲಂಬಿಸದೆ ಸ್ವತಂತ್ರವಾಗಿ ಮತತತ್ವ ನಿಷ್ಕರ್ಷೆ ಮಾಡಿಕೊಂಡಿರುವರು. ಇವರ ಭಾವನೆಗಳು ಆಳವಾದವುಗಳಾಗಿ ಪರಿಶುದ್ಧವಾದವುಗಳಾಗಿದ್ದು ನಮ್ಮ ಗೌರವಕ್ಕೆ ಪಾತ್ರವಾಗುವಂತಹವು. ತಾವು ಬಿಟ್ಟ ಮತದ ಅನುಯಾಯಿಗಳು ಇವರನ್ನು ಪತಿತರೆಂದು ಬಗೆದರೂ ನಿಜವಾಗಿ ನೋಡಿದರೆ ಮತದ ಪರಿಶುದ್ಧಿಗೆ ಇವರು ಮಾಡಿರುವ ಉಪಕಾರವನ್ನು ಸಂಪ್ರದಾಯನಿಷ್ಠರು ಮಾಡಿಲ್ಲವೆಂದೇ ಹೇಳಬಹುದು. ಪ್ರಪಂಚದ ಎಲ್ಲ ಮತದಲ್ಲಿಯೂ ಇಂತಹವರನ್ನು ಇಂದು ಕಾಣುತ್ತೇವೆ. ಮತಗಳಲ್ಲಿ ಜಳ್ಳನ್ನು ತೂರಿ ಕಾಳನ್ನು ಆರಿಸುವ ಕೆಲಸ ಇವರದು. ಮಿಡಲ್‌ಟನ್ ಮರ್ರಿ ಅವರ 'ಈಶ್ವರ'[11] ಅನ್ನುವ ಗ್ರಂಥವೂ ಹೆಚ್. ಜಿ. ವೆಲ್ಸ್ ಅವರ 'ಈಶ್ವರ—ಅಗೋಚರ ಪ್ರಭು'[12] ಅನ್ನುವ ಗ್ರಂಥವೂ ಇಂತಹ ಉದ್ಯಮಗಳ ಮಾದರಿಗಳು. ಮತವೆಂದರೆ ಸತ್ಯ, ಸಾತ್ವಿಕತೆ, ಸೌಂದರ್ಯಗಳ ಉಪಾಸನೆ ಎಂಬ ಅಭಿಪ್ರಾಯ ಈ ಆಧುನಿಕ ಲೇಖಕರಲ್ಲಿ ಎದ್ದು ಕಾಣುವುದು. ಮರುನಿಮಿಷದಲ್ಲಿ ಲೋಕ ಅಳಿಯುವುದೆಂದು ತಿಳಿದರೂ ಈ ಪುರುಷಾರ್ಥಗಳಿಗೆ ಬೆಲೆ ಕಡಮೆಯಾಗುವುದಿಲ್ಲವೆಂಬ ಮತನಿಷ್ಠೆಯನ್ನು ನಾಸ್ತಿಕವಾದಿಗಳೆಂದು ಹೆಸರುಪಡೆದ ಬರ್ಟ್ರೆಂಡ್ ರಸ್ಸೆಲ್ಲರಲ್ಲಿ ಕಾಣುತ್ತೇವೆ. ಈ ಭಾವವನ್ನು ಅವರ "ಮುಕ್ತ ಮಾನವನ ಆರಾಧನೆ"[13] ಎಂಬ ಪ್ರಬಂಧದಲ್ಲಿ ನೋಡಬಹುದು.

---

[10] W. James, *The Varieties of Religious Experience.*

[11] Middleton Murry, *God.* [12] H. G. Wells, *God: The Invisible King.*

[13] B. Russell, *The Free Man's Worship.*

ಭರತಖಂಡದಲ್ಲಿಯೂ ಮತದ ವಿಷಯವಾಗಿ ಹೊಸ ದೃಷ್ಟಿ ಮೂಡುತ್ತಿದೆ. ಭರತಖಂಡದ ಸಂಸ್ಕೃತಿಗೂ ಪಾಶ್ಚಾತ್ಯ ಸಂಸ್ಕೃತಿಗೂ ಆದ ಘರ್ಷಣದ ಫಲವಾಗಿ ಮತಧರ್ಮವಿಮರ್ಶೆ ಭರದಿಂದ ಸಾಗುತ್ತಿದೆ. ನಮ್ಮ ಮತಗಳ ನಿಜವಾದ ಸ್ವರೂಪವೇನು, ಅವುಗಳಲ್ಲಿ ಯಾವ ತತ್ವಗಳು ನಮ್ಮ ರಾಷ್ಟ್ರದ ಉನ್ನತಿಗೆ ನೆರವಾಗಬಲ್ಲವು, ಯಾವವು ಏಳಿಗೆಗೆ ಅಡ್ಡ ನಿಂತಾವು ಎನ್ನುವ ವಿಮರ್ಶೆಗೆ ತೊಡಗಿದವರಲ್ಲಿ ಇಂದು ಪ್ರಮುಖರಾದವರು ರಬೀಂದ್ರನಾಥ ಠಾಕೂರರು, ಮಹಾತ್ಮ ಗಾಂಧಿಯವರು, ರಾಧಾಕೃಷ್ಣನ್ ಅವರು ಮತ್ತು ಅರವಿಂದ ಘೋಷರು.

ರಬೀಂದ್ರರು ಈಗ ಕಣ್ಮರೆಯಾದರೂ ಅವರ ಮಧುರವಾಣಿ ಈಚಿನವರೆಗೂ ಕೇಳಿಬರುತ್ತಿತ್ತು. ಆದ್ದರಿಂದ ಅವರನ್ನು ಸಮಕಾಲೀನರೆಂದೇ ಭಾವಿಸಬೇಕು. ೧೯೩೦ನೆಯ ವರ್ಷ ಮೇ ತಿಂಗಳು ಆಕ್ಸ್‌ಫರ್ಡಿನಲ್ಲಿ 'ಮಾನವಧರ್ಮ'[14] ಎಂಬ ವಿಷಯದ ಮೇಲೆ ಹಿಬ್ಬರ್ಟ್ ಉಪನ್ಯಾಸಗಳನ್ನು ಕೊಟ್ಟರು. ೧೯೩೧ ರಲ್ಲಿ ಅವು ಪುಸ್ತಕ ರೂಪವಾಗಿ ಪ್ರಕಟವಾದವು. ಈ ಗ್ರಂಥದಲ್ಲಿ ಮನುಷ್ಯನ ಉತ್ಕರ್ಷವೇ ಮತದ ಗುರಿಯೆಂದೂ, ಸತ್ಯ, ಸಾತ್ವಿಕತೆ, ಸೌಂದರ್ಯಗಳ ಉಪಾಸನೆಯೇ ಪರಮ ಪುರುಷನ ಅರ್ಚನೆ, ಆರಾಧನೆ ಎಂದೂ, ಜಗತ್ತಿಗೆಲ್ಲಾ ಒಡೆಯನಾದ ಈಶ್ವರನು ನಮ್ಮ ಹೃದಯೇಶ್ವರನಾದ್ದರಿಂದ ಪ್ರೇಮ ಮಾರ್ಗದಿಂದ ಅವನನ್ನು ಒಲಿಸಿಕೊಳ್ಳಬೇಕೆಂದೂ, ಈ ಪ್ರೇಮವೇ ವಿಶ್ವಪ್ರೇಮವಾಗಿ ಬೆಳೆದು ಪ್ರಪಂಚದ ಎಲ್ಲ ಮಾನವರನ್ನು ತನ್ನ ಕುಟುಂಬದವರೆಂದು ಬಗೆಯುವ ಔದಾರ್ಯ ನಮ್ಮಲ್ಲಿ ಮೂಡಿದಾಗಲೇ ವಿಶ್ವಶಾಂತಿ ನೆಲಸುವುದೆಂದೂ ಈ ಕವಿ-ದಾರ್ಶನಿಕರು ಸಾರಿರುವರು. ಇವರು ಸಾರಿರುವ ಮತ ವಿಶ್ವಮತ. ಆದರೆ ಆ ವಿಶ್ವಮತದ ಅಡಿಗಲ್ಲು ಭಾರತದ ಉಪನಿಷತ್ತುಗಳು ಮತ್ತು ಇಲ್ಲಿಯ ಭಕ್ತಕವಿಗಳ ಅನುಭವಗೀತೆಗಳು. ಇದಲ್ಲದೆ ವಂಗದೇಶದ ಹಳ್ಳಿಗಳಲ್ಲಿ ಊರಿಂದ ಊರಿಗೆ ಭಕ್ತಿಗೀತೆಗಳನ್ನು ಹಾಡಿಕೊಂಡು ಪರಿವ್ರಾಜಕರಂತೆ ತಿರುಗುತ್ತಿದ್ದ ಬಾಯೂಲರ ಗೀತೆಗಳು ತಮ್ಮ ಹೊಸ ಮಾನವಮತಕ್ಕೆ ಸ್ಫೂರ್ತಿಯನ್ನು ಕೊಟ್ಟವೆಂದು ರಬೀಂದ್ರರು ಹೇಳಿಕೊಂಡಿದ್ದಾರೆ. ಅವರ ಉಪಾಸನೆಯ 'ಹೃದಯೇಶ್ವರ'ನೇ ಉಪನಿಷತ್ತಿನ ಪರಮಪುರುಷನೆಂದೂ ಮನುಷ್ಯನ ಹೃದಯವೇ ಇವನ ಮಂದಿರವೆಂದೂ, ಈ ತತ್ವದ ಸಾಕ್ಷಾತ್ಕಾರವೇ ಎಲ್ಲಾ ಮತಗಳ ಗುರಿ ಎಂದೂ ಉಪದೇಶಿಸಿರುವರು. ಈ ಮತದಲ್ಲಿ ಎಲ್ಲರಿಗೂ ಮುಕ್ತಿ ಉಂಟು. ಇದರ ದೃಷ್ಟಿಯಲ್ಲಿ ಗಂಡು ಹೆಣ್ಣು ಎಂಬ ಭೇದವಿಲ್ಲ; ಉತ್ಕೃಷ್ಟ ನಿಕೃಷ್ಟರಿಲ್ಲ; ಕಪ್ಪು, ಬಿಳುಪು ಎಂಬ ವ್ಯತ್ಯಾಸವಿಲ್ಲ; ಮನುಷ್ಯನ ಮನುಷ್ಯತ್ವ ಒಂದೇ ಬೆಲೆಬಾಳುವ ವಸ್ತು. 'ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾ ಗತಿಃ' ಅನ್ನುವುದು ರಬೀಂದ್ರರ ದರ್ಶನದ ಪಲ್ಲವಿಯಾಗಿದೆ.[15]

---

[14] R. Tagore, *The Religion of Man.*

[15] R. Tagore, ಅದೇ ಗ್ರಂಥ, p. 193.

ಸರ್ ಎಸ್. ರಾಧಾಕೃಷ್ಣನ್ ಅವರು ರಬೀಂದ್ರರ ದರ್ಶನವನ್ನು ಒಂದು ಗ್ರಂಥದಲ್ಲಿ ವಿವರಿಸಿರುವರು.[16] ಸ್ವತಃ ದೊಡ್ಡ ದಾರ್ಶನಿಕರೆಂದು ಕೀರ್ತಿ ಗಳಿಸಿದ್ದಾರೆ. ಮತದ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು 'ನಮಗೆ ಅಗತ್ಯವಾಗಿರುವ ಮತ'[17] ಎಂಬ ಪುಸ್ತಕದಲ್ಲಿ ಸಂಗ್ರಹವಾಗಿ ವಿಶದಪಡಿಸಿದ್ದಾರೆ. ಮತವಿಲ್ಲದೆ ಮಾನವನು ಬದುಕುವುದು ಸಾಧ್ಯವಿಲ್ಲ; ಆದರೆ ಮತಗಳ ಇಂದಿನ ರೂಪರಚನೆಗಳು ಆಧುನಿಕರಿಗೆ ಒಪ್ಪುತ್ತಿಲ್ಲ; ಆಧುನಿಕ ವಿಜ್ಞಾನ ತತ್ವಶಾಸ್ತ್ರಗಳ ಸಹಾಯದಿಂದ ಮತ ಬದಲಾವಣೆ ಹೊಂದಬೇಕು; ಆಧುನಿಕರ ಜೀವನದಲ್ಲಿ ಶುದ್ಧಿಗೊಂಡ ಮತ ಪುನಃ ನೆಲಸಿ ಆಧ್ಯಾತ್ಮಿಕ ದೃಷ್ಟಿಯನ್ನು ಜನರಲ್ಲಿ ಹರಡಿದ ಹೊರತು ಜಗತ್ತಿನಲ್ಲಿ ಶಾಂತಿ ಸುಖ ನೆಲಸುವುದಿಲ್ಲ; ಬರಿಯ ಆರ್ಥಿಕ, ರಾಜಕೀಯ, ವ್ಯಾವಹಾರಿಕ ಜೀವನದಲ್ಲಿಯೇ ಮಾನವನು ಆತ್ಮತೃಪ್ತಿಯನ್ನು ಪಡೆಯಲಾರ; ಸತ್ಯ, ಸಾತ್ವಿಕತೆ, ಸೌಂದರ್ಯವೆಂಬ ಪರಮ ಪುರುಷಾರ್ಥಗಳನ್ನು ಅವಲಂಬಿಸಿದ ಜೀವನವೇ ಉತ್ತಮಜೀವನ—ಎಂದು ರಾಧಾಕೃಷ್ಣನ್ ಅವರು ವಾದಿಸಿರುತ್ತಾರೆ.

ವ್ಯವಹಾರದಲ್ಲಿ ಪರಮಾರ್ಥ ಹೇಗೆ ಬೆರೆಯಬಹುದೆಂಬುದನ್ನು ತಮ್ಮ ಆದರ್ಶ ಜೀವನದಲ್ಲಿ ತೋರಿಸಿ ಮತನಿಷ್ಠೆ ಏನೆಂಬುದನ್ನು ವ್ಯಕ್ತಪಡಿಸಿರುವ ಆಧುನಿಕರಲ್ಲಿ ಮಹಾತ್ಮ ಗಾಂಧಿಯವರು ಅಸದೃಶರು. ಇವರಿಗೆ ಮತವೇ ಜೀವನದ ಸಾರ. ಮತವಿಷಯದಲ್ಲಿ ಇವರ ಭಾವನೆಗಳನ್ನು ಅನೇಕ ವೇಳೆ ತಮ್ಮ ಬರವಣಿಗೆಯಲ್ಲಿಯೂ ಭಾಷಣಗಳಲ್ಲಿಯೂ ವ್ಯಕ್ತಪಡಿಸಿದ್ದಾರೆ. 'ಸಮಕಾಲೀನ ಭಾರತೀಯ ದರ್ಶನ'[18]ವೆಂಬ ಗ್ರಂಥದ ಸಂಪಾದಕರು ಮತತತ್ವದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸಬೇಕೆಂದು ಅವರನ್ನು ಕೇಳಿದಾಗ ಅವರು ಕೆಳಗೆ ಕಂಡಂತೆ ತಮ್ಮ ಮತವನ್ನು ವಿವರಿಸಿದರು:

"ನನ್ನ ಮತ ಹಿಂದೂ ಮತ. ಇದು ಮಾನವನ ಉತ್ಕರ್ಷದ ಮತ. ನನಗೆ ಪರಿಚಯವಾದ ಮತಗಳ ಸಾರವನ್ನೆಲ್ಲ ಇದು ಒಳಗೊಂಡಿದೆ. ಈ ಮತದ ಸಾಧನಗಳು ಸತ್ಯ ಮತ್ತು ಅಹಿಂಸೆ. ನನ್ನ ಮಾರ್ಗ, ಪ್ರೀತಿಯ ಮಾರ್ಗ. ಈಶ್ವರನು ಸತ್ಯಸ್ವರೂಪನೆಂದು ವರ್ಣಿಸುವ ಬದಲು ಸತ್ಯವೇ ಈಶ್ವರನೆಂದು ಹೇಳುವುದು ನನ್ನ ಮತವನ್ನು ಸ್ಪಷ್ಟವಾಗಿ ವಿವರಿಸುವುದು. ಹಿಂದೆ ಈಶ್ವರನ ಸಹಸ್ರ ನಾಮಗಳನ್ನು ಜಪಿಸುತ್ತಿದ್ದೆ. ಆ ನಾಮಗಳಲ್ಲೆಲ್ಲಾ 'ಸತ್ಯಂ' ಎಂಬ ನಾಮ ನನ್ನ ಈಶ್ವರನನ್ನು ವರ್ಣಿಸುವಷ್ಟು ಸಮರ್ಪಕವಾಗಿ ಇನ್ನಾವ ನಾಮವೂ ವರ್ಣಿಸಲಾರದೆಂದು ನನಗೆ

---

[16] S. Radhakrishnan, *The Philosophy of Rabindranath Tagore.*

[17] S. Radhakrishnan, *The Religion We Need.*

[18] *Contemporary Indian Philosophy:* Edited by Muirhead and Radhakrishnan.

ತೋರಿದೆ. ದೇವರಿಲ್ಲವೆನ್ನುವುದನ್ನು ನಾವು ಕೇಳಿದ್ದೇವೆ. ಸತ್ಯವಿಲ್ಲವೆನ್ನುವುದನ್ನು ನಾವು ಕಂಡಿಲ್ಲ. ಮಾನವರಲ್ಲಿ ಮೂಢರೆನಿಸಿಕೊಂಡವರಲ್ಲಿಯೂ ಕೊಂಚ ಸತ್ಯವಿದೆ. ನಾವೆಲ್ಲರೂ ಸತ್ಯದ ಕಿಡಿಗಳು. ಈ ಕಿಡಿಗಳ ಆಕರವಾದ ಸರ್ವಸ್ವವು ಅವರ್ಣನೀಯ, ಅಗೋಚರ. ಇದೇ ಈಶ್ವರ ಎನ್ನುವುದು. ಅನುದಿನವೂ ಸಂತತವಾದ ಪ್ರಾರ್ಥನೆಯಿಂದ ಅದರ ಸಮೀಪವನ್ನೈದುತ್ತಿರುವೆನು. ಈ ಮತನಿಷ್ಠೆ ಅನುದಿನದ ಆಚರಣೆಯಲ್ಲಿ ಹೊರಹೊಮ್ಮಬೇಕು. ಜೀವಾವಧಿ ಸರ್ವಭೂತಹಿತಕ್ಕಾಗಿ ದುಡಿಯುವುದು ಈ ಮತವನ್ನು ಅವಲಂಬಿಸಿದುದಕ್ಕೆ ಗುರುತು. ಅನಂತವಾದ ಜೀವನ ಸಾಗರದಲ್ಲಿ ಮುಳುಗಿದ ಹೊರತು ಸತ್ಯದ ಸಾಕ್ಷಾತ್ಕಾರ ಸಾಧ್ಯವಿಲ್ಲ. ಆದ್ದರಿಂದ ನನಗೆ ಸಮಾಜ ಸೇವೆಯ ಹೊರತು ಬೇರೊಂದು ಮುಕ್ತಿಯ ದಾರಿ ತೋರದು. ಸಮಾಜ ಸೇವೆಗಿಂತಲೂ ಬೇರೆ ಸುಖ ಈ ಜಗತ್ತಿನಲ್ಲಿಲ್ಲ. ಸಮಾಜ ಸೇವೆ ಎಂದರೆ ಎಲ್ಲ ಜೀವಿಗಳ ಸೇವೆ. ಇದರಲ್ಲಿ ಕಿರಿದಿಲ್ಲ, ಹಿರಿದಿಲ್ಲ. ತೋರಿಕೆಗೆ ವಿವಿಧವಾದರೂ ನಿಜವಾಗಿ ಎಲ್ಲವೂ ಒಂದೇ."

ಮಹಾತ್ಮ ಗಾಂಧಿಯವರ ಮತದಲ್ಲಿ ಮತಾಂಧತೆ ಇಲ್ಲ. ಮಾನವ ಪ್ರೇಮತುಂಬಿದೆ. ವೈಜ್ಞಾನಿಕರ ಮತ್ತು ದಾರ್ಶನಿಕರ ತತ್ವವಿವೇಚನೆ ಇದೆ. ಸಮಾಜ ಸುಧಾರಕನ ಆಶಾವಾದವಿದೆ. ಯೋಗಿಯ ಅಧ್ಯಾತ್ಮ ಸಾಧನೆ ಇದೆ. ಭಕ್ತನ ನಮ್ರತೆ ಇದೆ. ಜ್ಞಾನಿಯ ಸ್ಪಷ್ಟ ತಿಳಿವಳಿಕೆ ಇದೆ. ರಬೀಂದ್ರರ ಮತದಂತೆ ಇದೂ ವಿಶ್ವ ಮತವಾಗಬಲ್ಲದಾಗಿದೆ.

ಮತಧರ್ಮದ ಬೆಲೆಯನ್ನರಿತು ಮಾನವನ ಉದ್ಧಾರಕ್ಕೆ ಇದು ಹೇಗೆ ನೆರವಾಗಬಲ್ಲದೆಂದು ವಿವರಿಸುತ್ತಿರುವ ದಾರ್ಶನಿಕರಲ್ಲಿ ಅರವಿಂದ ಘೋಷರು ಹೆಚ್ಚು ಪ್ರಭಾವಯುತರು. ಅನೇಕ ಆಧುನಿಕರು ಇವರ ಬರವಣಿಗೆಯನ್ನು ಓದಿ ಕೃತಾರ್ಥರಾಗಿರುವರು. ಮತ ಹಲಕೆಲವು ನಂಬಿಕೆಗಳ ಮೂಟೆಯಲ್ಲ, ಜೀವನದ ಒಂದು ಉತ್ತಮವಾದ ರೀತಿ ಎಂಬ ಅರವಿಂದರ ಉಪದೇಶ ಅನೇಕ ವಿದ್ಯಾವಂತರನ್ನು ಮತದ ದಾರಿಗೆ ಸೆಳೆದಿದೆ. ಇವರ ಮತ ಒಂದು ಸಂಪ್ರದಾಯಕ್ಕೆ ಕಟ್ಟುಬಿದ್ದಿಲ್ಲ; ತಮ್ಮ ಅಧ್ಯಾತ್ಮ ಜೀವನದ ಪ್ರಯೋಗಗಳಿಂದ ಹೊರಹೊಮ್ಮಿದ ಸ್ವತಂತ್ರ ಜೀವನ ತತ್ವ ಅದು. ಮತ ಮುಕ್ತಿಯ ದಾರಿ. ಮುಕ್ತಿ ಎಂದರೆ ಆತ್ಮವಿಕಾಸ. ಮಾನವನ ಶರೀರ, ಮನಸ್ಸು, ಹೃದಯಗಳಲ್ಲಿ ಗೂಢವಾದ ಶಕ್ತಿಗಳ ಸಂಪೂರ್ಣ ಆವಿಷ್ಕಾರವೇ ಮತ ಎನಿಸಿಕೊಳ್ಳುವುದು. ದೇಹ ಆತ್ಮನ ವಿಕಾಸ ಕ್ಷೇತ್ರ. ಇದರ ತಾತ್ಸಾರ ಆತ್ಮನ ತಿರಸ್ಕಾರ. ದೇಹಾತ್ಮ ಸಾಮರಸ್ಯ ಅಧ್ಯಾತ್ಮ ಜೀವನದ ಅಡಿಗಲ್ಲು. ಈ ಸಾಮರಸ್ಯವನ್ನು ವ್ಯಾಯಾಮದಿಂದ, ಯೋಗದಿಂದ ಸಾಧಿಸಬಲ್ಲೆವು. ಮುಂದಿನ ಸಂಸ್ಕೃತಿ ಸಮನ್ವಯ ಸಂಸ್ಕೃತಿಯಾಗಬೇಕು. ದೇಹಾತ್ಮ ಸಮನ್ವಯ, ಬುದ್ಧಿ ಹೃದಯಗಳ ಸಮನ್ವಯ, ಪರಮಾರ್ಥ ವ್ಯವಹಾರಗಳ ಸಮನ್ವಯ, ಪ್ರಾಚ್ಯ ಪ್ರತೀಚ್ಯ

ಸಂಸ್ಕೃತಿಗಳ ಸಮನ್ವಯ ಇವೆಲ್ಲವೂ ಅರವಿಂದರ ಸಮನ್ವಯ ಮಂಟಪದ ಸ್ತಂಭಗಳು. ಇವರು ಹೊಸ ದೃಷ್ಟಿಯಿಂದ ಹಿಂದಿನ ಸಂಸ್ಕೃತಿಗಳನ್ನು ಟೀಕೆಗೆ ಒಳಪಡಿಸಿರುವರು. ಪ್ರಾಚ್ಯಸಂಸ್ಕೃತಿ ಆತ್ಮಸಾಕ್ಷಾತ್ಕಾರ ಪ್ರಯತ್ನದಲ್ಲಿ ದೇಹವನ್ನು ಮರೆತು ದಾರಿ ತಪ್ಪಿತು. ಪ್ರತೀಚ್ಯ ಸಂಸ್ಕೃತಿ ದೈಹಿಕ ಸುಖದ ಅನ್ವೇಷಣದಲ್ಲಿ ಆತ್ಮಹಿತವನ್ನು ಬದಿಗಿಟ್ಟು ದಿಕ್ಕುಕೆಟ್ಟಿತು. ಇಂದಿನ ಸಂಸ್ಕೃತಿ ಮುಂದಿನ ಸಂಸ್ಕೃತಿ ಇವೆರಡರ ಸಮನ್ವಯಕ್ಕೆ ತೊಡಗಬೇಕು. ಭಾರತೀಯರು ಈ ಜಗತ್ತನ್ನು ಮಾಯೆ, ಮಿಥ್ಯೆ ಎಂದು ಭಾವಿಸಿ ಕೆಟ್ಟರು. ಈ ಜಗತ್ತು ಸತ್ಯ. ಇದು ನನ್ನ ಕ್ರೀಡಾರಂಗ, ಕಾರ್ಯಕ್ಷೇತ್ರ. ನಮ್ಮ ಆತ್ಮಗಳನ್ನು ಹದಗೊಳಿಸುವ ಕಾರ್ಖಾನೆ ಈ ಪ್ರಪಂಚ. ಈ ಜಗತ್ತು ಕರ್ತಾರನ ಕಮ್ಮಟ. ಇದರಿಂದ ಸಿಡಿದ ಕಿಡಿಗಳು ನಾವು. ನಮ್ಮಲ್ಲಿ ಅಂತರ್ಹಿತನಾದ ಸಚ್ಚಿದಾನಂದ ಸ್ವರೂಪನು ನಮ್ಮ ಮೂಲಕವೇ ವಿಕಸಿಸಬೇಕು ಮತ್ತು ಪ್ರಕಾಶಿಸಬೇಕು. ನಮ್ಮ ಜೀವನ ಹೂವಿನಂತೆ ಅರಳಬೇಕಾದರೆ ಸಾಧನ ಆವಶ್ಯಕ. ಈ ಸಾಧನವೇ ಮತವೆನಿಸಿಕೊಳ್ಳುವುದು. ಜಗತ್ತಿನ ಎಲ್ಲ ಮತಗಳೂ ಈ ಸಾಧನಾನುಷ್ಠಾನದ ವಿಷಯದಲ್ಲಿ ತಿಳಿವಳಿಕೆ ಕೊಡುವುವು. ಈ ತಿಳಿವಳಿಕೆಯನ್ನು ಗ್ರಂಥಗಳಿಂದ ಪಡೆಯುವುದಕ್ಕಿಂತಲೂ ಜ್ಞಾನಿಗಳಿಂದಲೂ ತತ್ವದರ್ಶಿಗಳಿಂದಲೂ ಪಡೆಯುವುದು ಮೇಲು. ಇಂಥವರು ವಿರಳರು. ಹುಡುಕಿದರೆ ಸಿಕ್ಕುವರು. ಇಂಥವರ ಸಹಾಯದಿಂದ ನಮ್ಮ ಬಾಳನ್ನು ತಿದ್ದಿಕೊಳ್ಳಬೇಕು, ಸಿದ್ಧಿಯನ್ನು ಸಾಧಿಸಬೇಕು.

ತಮ್ಮ ಮತದ ಈ ಭಾವನೆಗಳನ್ನು ಅರವಿಂದ ಘೋಷರು ತಮ್ಮ ಗೀತಾಪ್ರಬಂಧಗಳಲ್ಲಿಯೂ ಮತ್ತು "ದಿವ್ಯಜೀವನ" ಎಂಬ ಗ್ರಂಥದಲ್ಲಿಯೂ ಪ್ರತಿಪಾದಿಸಿರುತ್ತಾರೆ.

ರಬೀಂದ್ರರು, ರಾಧಾಕೃಷ್ಣನ್, ಮಹಾತ್ಮಗಾಂಧಿ, ಅರವಿಂದ ಘೋಷರು ನವೀನ ಹಿಂದೂಧರ್ಮದ (Neo-Hinduism) ಮುಂದಾಳುಗಳು. ಹಿಂದೂಧರ್ಮದ ಉತ್ಕೃಷ್ಟ ತತ್ವಗಳನ್ನು ಜನಜೀವನದಲ್ಲಿ ಹರಡಲು ಅವರು ಶ್ರಮಿಸಿರುತ್ತಾರೆ. ಇದರ ಫಲವಾಗಿ ಭಾರತೀಯ ಸಂಸ್ಕೃತಿಯು ಹೊಸ ಚೈತನ್ಯವನ್ನು ತಾಳಿ ಭಾರತೀಯರ ಜೀವನವನ್ನು ಘನತೆಗೆ ತರುವುದೆಂದು ಆಶಿಸಬಹುದಾಗಿದೆ.

"ಈಶಾವಾಸ್ಯಂ ಇದಂ ಸರ್ವಂ
ಯತ್ ಕಿಂಚ ಜಗತ್ಯಾಮ್ ಜಗತ್
ತೇನ ತ್ಯಕ್ತೇನ ಭುಂಜೀಥಾಃ
ಮಾ ಗೃಧಃ ಕಸ್ಯಸ್ವಿದ್ಧನಮ್"

ಎಂಬ ಈಶೋಪನಿಷತ್ತಿನ ಮೊದಲ ವಾಕ್ಯವು ಹೊಸ ಹಿಂದೂ ಧರ್ಮದ ಬೀಜಮಂತ್ರವಾಗಿದೆ.

ಎಂ. ಯಾಮುನಾಚಾರ್ಯ

೩. ಜನಪದ ಸಾಹಿತ್ಯ*

ಮಾನವ ಸಂಸ್ಕೃತಿಯ ಇತಿಹಾಸವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಆಯಾ ದೇಶದ ಸಂಸ್ಕೃತಿಗಳಿಗೂ ಅವು ಹುಟ್ಟಿ ಬೆಳೆದ ಭೂಭಾಗಗಳ ಪ್ರಾಕೃತಿಕ ಸ್ವರೂಪಕ್ಕೂ ನಿಕಟವಾದ ಸಂಬಂಧವಿರುವಂತೆ ತಿಳಿದುಬರುತ್ತದೆ. ಜನಪದ ಸಾಹಿತ್ಯವು ಸಂಸ್ಕೃತಿಯ ಫಲವಾಗಿದ್ದು ಕನ್ನಡ ಜನಪದ ಸಾಹಿತ್ಯದ ಬೇರುಗಳಾದರೂ ಬಹು ಆಳಕ್ಕಿಳಿದವೆ. ಇದರ ನೆಲೆಯನ್ನು ಕನ್ನಡಿಗರಿಗೆ ಕಣ್ಣಾಗಿಣಿಸಬೇಕೆಂಬುದೇ ಈ ಭಾಷಣದ ಮುಖ್ಯ ಉದ್ದೇಶವಾಗಿದೆ. ಪ್ರಕೃತಿಯಿಂದ ಸಂಸ್ಕೃತಿಗಳ ಮೇಲೆ ಸ್ವಾಭಾವಿಕವಾಗಿ ಉಂಟಾಗುವ ಪರಿಣಾಮವನ್ನು ಮೊದಲು ಹೇಳಿ ಆ ಬಳಿಕ ಜನಪದ ಸಾಹಿತ್ಯದ ವಿಷಯವನ್ನು ಕೈಕೊಳ್ಳುತ್ತೇನೆ.

ಜಗತ್ತಿನ ಸಂಸ್ಕೃತಿಗಳ ಮೇಲೆ ಪ್ರಕೃತಿಯ ಪ್ರಭಾವ

ಜಗತ್ತಿನ ಸಕಲ ಸಂಸ್ಕೃತಿಗಳನ್ನು ಸೇಮತಿಕ (Semitic), ಆರ್ಯ, ದ್ರಾವಿಡ ಎಂದು ಮೂರು ಗುಂಪುಗಳಾಗಿ ವಿಭಾಗಿಸಬಹುದು. ಸೇಮತಿಕ ಸಂಸ್ಕೃತಿಗೆ ಕೇಂದ್ರವಾದ ಅರಬಸ್ತಾನವು ವಿಸ್ತಾರವಾದ ಮರುಭೂಮಿಗಳಿಂದ ಯುಕ್ತವಾಗಿದ್ದು ಅಲ್ಲಿಯ ಸೃಷ್ಟಿಯು ಸ್ವಾಭಾವಿಕವಾದ ತನ್ನ ಸೌಂದರ್ಯವನ್ನು ಕಳೆದುಕೊಂಡಿರುವುದರಿಂದ ನಿಸರ್ಗವು ಅಲ್ಲಿ ರಣರಣವೆಂದು ರಣಗುಟ್ಟುತ್ತಿದೆ. ಆದುದರಿಂದ ಜಗನ್ನಿರ್ಮಾಣಕರ್ತನಾದ ಪರಮೇಶ್ವರನು ಜಗತ್ತಿನೊಳಗಿರದೆ ಅದರ ಹೊರಗಿರುವನೆಂದೇ ಭಾವಿಸಲ್ಪಟ್ಟನು. ಸೃಷ್ಟಿಯಲ್ಲಿರುವ ಯಾವ ವಸ್ತುವೂ ಸೃಷ್ಟಿಕರ್ತನನ್ನು ಸರಿಗಟ್ಟಲಾರದೆಂಬ ಸುವರ್ಣಸೂತ್ರವನ್ನು ಬಹು ಬಿಗಿಯಾಗಿ ಹಿಡಿದುದರಿಂದಲೇ ಯೆಹೂದಿ, ಇಸ್ಲಾಮಿ ಜನಾಂಗಗಳು ಕಠೋರ ಮೂರ್ತಿಭೇದಕರಾದರು. ಇವರ ಧರ್ಮಗ್ರಂಥಗಳಲ್ಲಿ ಸಾಕಾರೋಪಾಸನೆ, ಪ್ರತಿಮಾಪೂಜೆ, ಅವತಾರ ಮುಂತಾದ ಕಲ್ಪನೆಗಳಿಗೆ ಎಳ್ಳಷ್ಟಾದರು ಎಡೆ ಇಲ್ಲ. ಅವರ ವೇದಗಳಲ್ಲಿ ದೊರೆಯುವ ದಶಾಜ್ಞೆಗಳಲ್ಲಿ ಉತ್ತಮವಾದ ಪ್ರಥಮಮಂತ್ರವು ಹೀಗಿದೆ: "ಮೇಲಣ ಆಕಾಶದಲ್ಲಾಗಲಿ ಕೆಳಗಣ ಭೂಮಿಯಲ್ಲಾಗಲಿ ಭೂಮಿಯ ಕೆಳಗಣ ನೀರುಗಳಲ್ಲಾಗಲಿ ಯಾವದೊಂದು ಪ್ರತಿಮೆಯನ್ನು ಮಾಡಿಕೊಳ್ಳಬೇಡ ಅದಕ್ಕೆ ಅಡ್ಡಬಿದ್ದು ಪೂಜಿಸಬೇಡ" ಇದು

---

* ರಬಕವಿಯಲ್ಲಿ ಜರುಗಿದ ೨೮ನೆಯ ಸಾಹಿತ್ಯಸಮ್ಮೇಳನದ ಜನಪದ ಸಾಹಿತ್ಯಗೋಷ್ಠಿಯಲ್ಲಿ ಮಾಡಿದ **ಉದ್ಘಾಟನ ಭಾಷಣ.**

ಈಶ್ವರನ ಕಟ್ಟಪ್ಪಣೆ ಎಂದು ಅವರ ನಂಬಿಕೆ. ಹೀಗಾಗಿ ಹಿಂದು ಮುಸಲ್ಮಾನ ಜನಾಂಗಗಳಲ್ಲಿರುವ ಪರಸ್ಪರ ವಿರೋಧವಾದ ಮನೋಭಾವನೆಗಳಿಗೆ ಆಯಾ ಸಂಸ್ಕೃತಿಗಳಲ್ಲಿರುವ ಭೇದವೇ ಮುಖ್ಯಕಾರಣವೆಂದು ಹೇಳಬೇಕು. ಇಂತಹ ಸಂಸ್ಕೃತಿಯ ಫಲವಾದ ಅವರ ಧರ್ಮತತ್ವಕ್ಕೆ (Monotheism) ಏಕದೇವತ್ವವೆಂದು ಹೆಸರು.

ಭರತಭೂಮಿಯ ಪ್ರಾಕೃತಿಕ ಸ್ವರೂಪವಾದರೋ ಸೇಮತಿಕರಿಂದ ತೀರ ಭಿನ್ನವಾಗಿದೆ. ಉತ್ತರದಲ್ಲಿರುವ ಅತ್ಯುನ್ನತವಾದ ಹಿಮಾಚಲಶ್ರೇಣಿಗಳೂ ಅವುಗಳ ಮಧ್ಯದಲ್ಲಿ ಸಿಹಿನೀರಿನ ಸಾಗರವೇ ಗಟ್ಟಿಗೊಂಡು ಅಂತರಿಕ್ಷದಲ್ಲಿ ತೂಗುತ್ತಿದ್ದೆಯೋ ಭೂದೇವಿಯು ಪರಮಾತ್ಮನಿಗಾಗಿ ಎತ್ತಿದ ಆರತಿಯ ಕುಡಿಗಳೋ ಎಂಬಂತೆ ಕಂಗೊಳಿಸುವ ಹಿಮಶಿಖರಗಳೂ ಅವುಗಳ ನೆರೆಯಲ್ಲಿ ದೊರೆಯುವ ರಮಣೀಯವಾದ ದೃಶ್ಯಗಳೂ ಹಿಮದಿಂದ ಹೊರಟು ಬಹುದೂರದ ವರೆಗೆ ಹರಿಯುತ್ತಿರುವ ವಿಶಾಲವಾದ ಹೊಳೆಗಳೂ ಭರತಭೂಮಿಯನ್ನು ಉನ್ನತ ಹಾಗೂ ಆಳವಾದ ತತ್ವವಿಚಾರಗಳಿಗೆ ತವರುಮನೆಯನ್ನಾಗಿ ಮಾಡಿವೆ. ಷಡ್ದರ್ಶನ ಪೀಠಗಳಿಂದ ಅಲಂಕೃತವಾಗಿ ಅಖಿಲ ಭರತಖಂಡಕ್ಕೆ ಕೇಂದ್ರವಾಗಿ ಒಪ್ಪುತ್ತಿರುವ ಕಾಶಿಯು ಇನ್ನೂ ಉತ್ತರದಲ್ಲಿ ಸಜೀವಿಯಾಗಿ ಶೋಭಿಸುತ್ತಿರುವದು ಇದಕ್ಕೆ ಉತ್ತಮವಾದ ನಿದರ್ಶನವಾಗಿದೆ.

ಇದಲ್ಲದೆ ವಿಂಧ್ಯಾದ್ರಿಯ ಕೆಳಗೆ ದಕ್ಷಿಣದಲ್ಲಿ ಅಪಾರವಾದ ಸಮುದ್ರಗಳೂ ವಿಸ್ತೀರ್ಣವಾದ ತಪ್ಪಲುಭೂಮಿಗಳೂ ಪರಮಾತ್ಮನು ಜಗದ್ವ್ಯಾಪಕನೂ ಜಗದ್ಭರಿತನೂ ಆಗಿರುವನೆಂಬ ಕಲ್ಪನೆಯನ್ನು ಉದ್ದೀಪನಗೊಳಿಸಿದಂತೆ ಭಾಸವಾಗುತ್ತದೆ. ಆದುದರಿಂದ ಕನ್ನಡದಲ್ಲಿ "ಮಣ್ಣು ಬಿಟ್ಟು ಮಡಿಕೆ ಇಲ್ಲ. ತನ್ನ ಬಿಟ್ಟು ದೇವರಿಲ್ಲ' ಎಂಬ ನಾಣ್ಣುಡಿಯುಂಟಾಯಿತು. ಇದು ಅಖಿಲ ಭಾರತೀಯ ಸಂಸ್ಕೃತಿಗೂ ಅನ್ವಯಿಸುತ್ತದೆ ಎಂದು ಹೇಳಬೇಕು. ಇದಲ್ಲದೆ ದಕ್ಷಿಣ ಹಿಂದುಸ್ಥಾನದ ಮೇರೆಗಳ ನೀರುಗಳನ್ನು ತಡೆದು ನಿಲ್ಲಿಸುವದಕ್ಕಾಗಿ ಕಟ್ಟಿದ ಕೋಟೆಯ ಗೋಡೆಗಳೆಂಬಂತೆ ಕಂಗೊಳಿಸುವ ಪೂರ್ವ ಪಶ್ಚಿಮಘಟ್ಟಗಳಲ್ಲಿ ನಿಸರ್ಗದ ಸೊಬಗು ಸುರಿಯುತ್ತಿದೆ. ಇವುಗಳ ಮಧ್ಯದಲ್ಲಿ ಒಂದು ಬಯಲು ಕಂಗೊಳಿಸುತ್ತದೆ. ಇದೇ ಇಲ್ಲಿಯ ನಿಸರ್ಗದ ಸೌಂದರ್ಯ. ಬಸವಣ್ಣನವರ ಅನುಭವಮಂಟಪಕ್ಕೂ ದಕ್ಷಿಣದ ಉಪನಿಷತ್ತುಗಳೆಂದು ಕರೆಯಿಸಿಕೊಳ್ಳುವ ಕನ್ನಡ ವಚನವಾಙ್ಮಯಕ್ಕೂ ಜನ್ಮಕೊಟ್ಟ ಭೂಮಿಯು ಇದೇ. ಆದುದರಿಂದ ವಚನಸಾಹಿತ್ಯದಲ್ಲಿ ಅನುಭಾವದ ಅಂತಿಮಸ್ಥಿತಿಯನ್ನು ವರ್ಣಿಸುವದಕ್ಕಾಗಿ ಬಯಲು, ನಿರ್ಬಯಲು, ಶೂನ್ಯ, ನಿಶ್ಶೂನ್ಯ, ಸಕಲ, ನಿಷ್ಕಲ, ಅಖಂಡ, ಘನ ಮುಂತಾದ ಪದಗಳು ಧಾರಾಳವಾಗಿ ಪ್ರಯೋಗಿಸಲ್ಪಟ್ಟಿವೆ. ಅಚ್ಚಗನ್ನಡದ ಅಕ್ಷರಮಾಲೆಯಾದರೂ ಶೂನ್ಯ ಇಲ್ಲವೆ ಸೊನ್ನೆಯಿಂದ ಹೊರಹೊಮ್ಮಿದ್ದಾಗಿದೆ.

ಭರತಖಂಡದ ಪ್ರಾಕೃತಿಕ ಸ್ವರೂಪವನ್ನು ಬೇರೊಂದು ದೃಷ್ಟಿಯಿಂದ ನೋಡಿದರೆ ಸ್ವಿತ್ಸರ್ಲಂಡವು ಜಗತ್ತಿನ ನಂದನವನವೆಂದು ಕರೆಯಿಸಿಕೊಂಡರೆ ಹಿಂದೂ ದೇಶವು ಜಗತ್ತಿನ ದೇವಾಲಯವೆಂದು ಕರೆಯಿಸಿಕೊಳ್ಳಲು ಯೋಗ್ಯವಾಗಿದೆ. ಅದನ್ನು ಜಗತ್ತಿನ ದೇವಾಲಯವೆಂದೇ ಕರೆಯಬೇಕಾಗುತ್ತದೆ. ಮೂರುಕಡೆಗೆ ನೀರು, ಒಂದು ಕಡೆಗೆ ಉನ್ನತವಾದ ಬೆಟ್ಟಗಳಿಂದ ಸುತ್ತಿಕೊಂಡಿರುವ ಅಗಮ್ಯ ಮೇರೆಗಳೇ ಈ ದೇವಾಲಯದ ಪ್ರಾಕಾರ. ಖೈಬರ್, ಬೋಲನ್ ಕಣಿವಿಗಳೇ ಅದರ ಮಹಾ ದ್ವಾರ. ರಜಪುತಸ್ಥಾನದ ಕ್ಷತ್ರಿಯ ರಾಜಪುತ್ರರೇ ಈ ಮಹಾದ್ವಾರದ ಬಳಿಯಲ್ಲಿರುವ ದ್ವಾರಪಾಲಕರು. ಮಧ್ಯದೇಶವಾದ ಆರ್ಯಾವರ್ತವೇ ರಂಗಮಂಟಪ. ದಕ್ಷಿಣ ಹಿಂದುಸ್ತಾನವೇ ಗರ್ಭಗುಡಿ. ಆರ್ಯದ್ರಾವಿಡ ಸಂಸ್ಕೃತಿಗಳ ಭಕ್ತಿರೂಪವಾದ ಸಾಮರಸ್ಯವೇ ಈ ಗರ್ಭಗುಡಿಯಲ್ಲಿ ಶೋಭಿಸುವ ಕಲಾಮೂರ್ತಿ. ಅಂತು ಉತ್ತರದಲ್ಲಿ ಹುಟ್ಟಿ ಬೆಳೆದ ತತ್ವಕ್ಕೆ (Pantheism) ವಿಶ್ವದೇವಮತವೆಂದೂ ದಕ್ಷಿಣದಲ್ಲಿ ಉಳಿದಿರುವ ತತ್ವಕ್ಕೆ (Mysticism) ಅನುಭಾವ ಸಿದ್ಧಾಂತವೆಂದೂ ಹೆಸರು. ಆರ್ಯ ದ್ರಾವಿಡ ಸಂಸ್ಕೃತಿಗಳು ಸಾವಿರಾರು ವರ್ಷಗಳಿಂದ ಸ್ವತಂತ್ರವಾಗಿ ಬೆಳೆದು ಬಂದಿರುವುದರಿಂದ ಪ್ರತಿಯೊಂದಕ್ಕೂ ಒಂದು ವೈಶಿಷ್ಟ್ಯವಿದ್ದಂತೆ ತಿಳಿದುಬರುತ್ತದೆ. ಕನ್ನಡ ಜನಪದ ಸಾಹಿತ್ಯವಾದರೋ ಭಾವಪ್ರಧಾನವಾದ ದ್ರಾವಿಡ ಸಂಸ್ಕೃತಿಯಲ್ಲಿಯೇ ಜನ್ಮವೆತ್ತಿರುವುದರಿಂದ ಆ ಬಗೆಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಆರ್ಯ ದ್ರಾವಿಡ ಸಂಸ್ಕೃತಿಗಳ ವೈಶಿಷ್ಟ್ಯಗಳು

ಆರ್ಯ ದ್ರಾವಿಡ ಸಂಸ್ಕೃತಿಗಳು ಸಂಗಮವಾದ ಹೊಳೆಯ ನೀರಿನಂತೆ ಒಂದರೊಳಗೊಂದು ಬೆರೆತುಹೋಗಿವೆ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಆದರೆ ಈ ಸಂಸ್ಕೃತಿಗಳು ಎಣ್ಣೆ ನೀರುಗಳಂತೆ ಕೂಡಿಕೊಂಡಿವೆ ಎಂದು ನನ್ನ ಮತ. ಯಾಕಂದರೆ ವೇದಗಳು ಆರ್ಯ ಸಂಸ್ಕೃತಿಯನ್ನೂ ಆಗಮ ಇಲ್ಲವೆ ತಾಂತ್ರಿಕ ಸಾಹಿತ್ಯವು ದ್ರಾವಿಡ ಸಂಸ್ಕೃತಿಯನ್ನೂ ಪ್ರಾಧಾನ್ಯವಾಗಿ ನಿರ್ದೇಶಿಸುತ್ತವೆ. ಹೀಗಾಗಿ ವೇದಗಳಲ್ಲಿ ಮಂತ್ರವೂ ಆಗಮಗಳಲ್ಲಿ ತಂತ್ರವೂ ಪ್ರಾಮುಖ್ಯವಾಗಿವೆ. ಅಲ್ಲಿ ಜ್ಞಾನ, ಇಲ್ಲಿ ಭಕ್ತಿ. ಅಲ್ಲಿ ಗಂಡು ದೇವತೆಗಳ ಆಧಿತ್ಯ, ಇಲ್ಲಿ ಹೆಣ್ಣು ದೇವತೆಗಳ ಆಧಿತ್ಯ. ಅಲ್ಲಿ ಬುದ್ಧಿ, ಇಲ್ಲಿ ಭಾವನೆ. ಅಲ್ಲಿ ತಲೆ, ಇಲ್ಲಿ ಹೃದಯ. ಅಲ್ಲಿ ಯುಕ್ತಿ, ಇಲ್ಲಿ ಅನುಭಾವ. ಅಲ್ಲಿ ಅಪೌರುಷ ಗ್ರಂಥಗಳಿಗೆ ಮಾನ್ಯತೆ, ಇಲ್ಲಿ ಭಕ್ತರು, ಶರಣರು. ಆದ್ಯರು, ಪ್ರಮಥರು, ಪುರಾತನರು ಮುಂತಾದ ವ್ಯಕ್ತಿಗಳಿಗೆ ಪುರಸ್ಕಾರ. ಅದು ಕಿವಿಯಿಂದ ಕೇಳಿದ್ದು, ಇದು ಕಣ್ಣಾರೆ ಕಂಡದ್ದು. ಅದು ಶ್ರುತಿ, ಇದು ಕೃತಿ.

ಅದು ವೇದಾಂತ, ಇದು ಸಿದ್ಧಾಂತ. ಅಲ್ಲಿ ಪ್ರಾಧಾನವಾದುದು ಇಲ್ಲಿ ಗೌಣ. ಇಲ್ಲಿ ಪ್ರಾಧಾನವಾದುದು ಅಲ್ಲಿ ಗೌಣ. ಹೀಗೆ ಬೆರೆತುಕೊಂಡಿವೆ ಉಭಯ ಸಂಸ್ಕೃತಿಗಳು. ಆರ್ಯ ದ್ರಾವಿಡ ಸಂಸ್ಕೃತಿಗಳು ಸ್ವತಂತ್ರವಾಗಿವೆ ಎಂಬುದಕ್ಕೆ ಉತ್ತರ ದಕ್ಷಿಣ ದೇಶಗಳಲ್ಲಿ ಇನ್ನೂ ಜೀವದಿಂದುಳಿದಿರುವ ಗೌಡದ್ರಾವಿಡ ಭಾಷೆಗಳೇ ಉತ್ತಮ ನಿದರ್ಶನವಾಗಿವೆ.

ಸಂಸ್ಕೃತ ಕನ್ನಡ ಸಂಬಂಧ

ಆರ್ಯರು ದ್ರಾವಿಡರೊಡನೆ ಆರಂಭದಲ್ಲಿ ಹೂಡಿದ ಯುದ್ಧಗಳಿಂದ ಉಭಯ ಸಂಸ್ಕೃತಿಳಲ್ಲಿ ಭಯಂತರ ವೈಷಮ್ಯವಿತ್ತೆಂದು ವ್ಯಕ್ತವಾಗುತ್ತದೆ. ದ್ರಾವಿಡರನ್ನು ಆರ್ಯರು ಸಂಪೂರ್ಣವಾಗಿ ಪರಾಜಯಪಡಿಸಿದ ಬಳಿಕ ದ್ರಾವಿಡ ಸಂಸ್ಕೃತಿಗೆ ಅವನತಿಯುಂಟಾಯಿತು. ಸಬಲ ರಾಷ್ಟ್ರದ ಭಾಷೆಯಾದ ಸಂಸ್ಕೃತದ ಮಟ್ಟಕ್ಕೆ ಅಬಲರಾಷ್ಟ್ರದ ಭಾಷೆಯಾದ ಕನ್ನಡವು ಬರಬೇಕಾಯಿತಲ್ಲದೆ ಸಂಸ್ಕೃತವು ಕನ್ನಡದ ಮಟ್ಟಕ್ಕೆ ಬರಲೊಪ್ಪಲಿಲ್ಲ. ಹೀಗೆ ಉಭಯ ಸಂಸ್ಕೃತಿಗಳಲ್ಲಿ ಉಂಟಾದ ಶ್ರೇಷ್ಠ ಕನಿಷ್ಠ ಭಾವನೆಗಳಿಂದ ಬೆಳೆದು ಬಂದ ವೈಷಮ್ಯವು ಒಂದು ಕಾಲದಲ್ಲಿ ಪರಮಾವಧಿಗೆ ಮುಟ್ಟಿತು. ಸಂಸ್ಕೃತವು ಗೀರ್ವಾಣ ಭಾಷೆಯಾಯಿತು. ದ್ರಾವಿಡರದು ಪೈಶಾಚಿಕ ಭಾಷೆಯಾಯಿತು. ಅವರು ದೇವತೆಗಳು, ಇವರು ದಾನವರು. ಅವರು ಸುರರು, ಇವರು ಅಸುರರು. ಅವರು ಸುಸಂಸ್ಕೃತರು, ಇವರು ಅಸಂಸ್ಕೃತರು. ಅವರು ಆರ್ಯರು, ಇವರು ಅನಾರ್ಯರು. ಅವರದು ದೇವಲೋಕ, ಇವರದು ಪಾತಾಳ ಲೋಕ. ಅವರು ಅಕ್ಕರಿಗರು, ಇವರು ಬೆಳ್ಳಕ್ಕರಿಗರು. ಬೆಳ್ನುಡಿಯನಾಡುವವರಾದರು. ಹೇಗೆಯೇ ಇರಲಿ ಸಂಸ್ಕೃತ ಕನ್ನಡಗಳ ತಿಕ್ಕಾಟ ತಾಕಲಾಟಗಳಲ್ಲಿ ಕನ್ನಡಕ್ಕೆ ಸಂಸ್ಕೃತದಿಂದ ಉಪಕಾರವಾಗಿರುವಂತೆ ಅಪಕಾರವೂ ಆಗಿದೆ ಎಂಬ ಸಂಗತಿಯು ಸತ್ಯವೇ. ದಕ್ಷಿಣದಲ್ಲಿ ವಿಂಧ್ಯಾದ್ರಿಯ ಕೆಳಗೆ ಮೊಟ್ಟಮೊದಲು ಆರ್ಯರ ದಾಳಿಗೆ ಈಡಾದ ನಾಡೆಂದರೆ ಗೋದಾವರಿ ತೀರದಿಂದ ಕಾವೇರಿಯವರೆಗೆ ಹಬ್ಬಿಕೊಂಡಿದ್ದ ಕನ್ನಡ ನಾಡೇ. ಕನ್ನಡಿಗರೇ ಈ ಸಮರದಲ್ಲಿ ಹಂಗುದೊರೆದು ಹೋರಾಡಿದವರು. ಅವರು ಇನ್ನೂ ಹೋರಾಡಬೇಕಾಗಿದೆ. ಕನ್ನಡದ ಮೇಲೆ ಬಂದ ಇಂತಹ ಕಠಿಣ ಪ್ರಸಂಗದಲ್ಲಿ ಅದನ್ನು ಜೀವದಿಂದ ಕಾದುಳಿಸಿದ ಶ್ರೇಯಸ್ಸು ವಿಶೇಷವಾಗಿ ಜನಪದ ಸಾಹಿತ್ಯಕ್ಕೆ ಸಲ್ಲುತ್ತದೆಂದು ಹೇಳಿದರೆ ಅತ್ಯುಕ್ತಿಯಾಗದು.

ಜನಪದ ಸಾಹಿತ್ಯ

ಜನರಿಗಾಗಿ, ಜನ ಜೀವನವನ್ನು, ಜನಸಾಮಾನ್ಯರು ತಿರುಳುಗನ್ನಡದಲ್ಲಿ ರಸವತ್ತಾಗಿ ಚಿತ್ರಿಸಿದ್ದೇ ಜನಪದ ಸಾಹಿತ್ಯ. ಈ ಸಾಹಿತ್ಯವು ಬಹು ಪ್ರಾಚೀನವಾದುದು.

ಇದು ೯ ನೆಯ ಶತಮಾನದಲ್ಲಿತ್ತೆಂದು ನೃಪತುಂಗನ ಕವಿರಾಜ ಮಾರ್ಗದಿಂದ ತಿಳಿದು ಬರುತ್ತದೆ. ಇದಕ್ಕಿಂತ ಕೆಲವು ಶತಮಾನಗಳ ಹಿಂದೆಯೇ ಇದು ಇದ್ದಿರಬೇಕೆಂದು ಶಾಸನಗಳಿಂದ ಊಹಿಸಬಹುದಾಗಿದೆ. ಏಳನೆಯ ಶತಮಾನದಲ್ಲಿ ಬಾದಾಮಿಯ ಒಂದು ಶಾಸನದಲ್ಲಿ ಜನಪದ ಸಾಹಿತ್ಯದ ಛಂದಸ್ಸಾದ ತ್ರಿಪದಿಯು ಮೊದಲುಬಾರಿ ದೊರೆಯುತ್ತದೆ. ಇದರಿಂದ ಜನಪದ ಸಾಹಿತ್ಯವು ಆ ಕಾಲದಲ್ಲಿ ಅಸ್ತಿತ್ವದಲ್ಲಿತ್ತೆಂದು ವಿಶದವಾಗುತ್ತದೆ.

ಸರ್ವಾಂಗ ಪುಷ್ಟವಾಗಿ ಬೆಳೆಯಬಹುದಾಗಿದ್ದ ಜನಪದ ಸಾಹಿತ್ಯಕ್ಕೆ ಸಂಸ್ಕೃತದಿಂದ ತಡೆ ಉಂಟಾಯಿತೆಂದು ಹಿಂದೆ ಸೂಚಿಸಿದ್ದೇವೆ. ಸಂಸ್ಕೃತದ ಮಾರ್ಗೀಯವು ಮೊದಲು ಪ್ರಾಕೃತ ಭಾಷೆಯನ್ನಾಡುತ್ತಿದ್ದ ಜೈನರ ಮೂಲಕವಾಗಿ ಕನ್ನಡ ನಾಡಿನಲ್ಲಿ ಕಾಲಿಟ್ಟಿತು. ಜನಪದ ಸಾಹಿತ್ಯವು ಪ್ರಾಣಬಿಟ್ಟಿತು. ಅದು ಆಸ್ಥಾನದಲ್ಲಿ ಸತ್ತು ಹೋದರೂ ಈ ಸ್ಥಾನದಲ್ಲಿ ಚಿರಂಜೀವಿಯಾಯಿತು. ಕನ್ನಡದ ಹಡೆದ ತಾಯಿಯು ಅಕಾಲ ಮೃತ್ಯುವನ್ನು ಹೊಂದಿದ್ದರಿಂದಲೇ ಕನ್ನಡವು, ಸಾಕುತಾಯಿಯಾದ ಸಂಸ್ಕೃತದಿಂದಲೂ ಅದರ ತಂಗಿಯಾದ ಪ್ರಾಕೃತದಿಂದಲೂ ಲಾಲನೆ ಪಾಲನೆಗಳನ್ನು ಹೊಂದಬೇಕಾಯಿತು. ಕನ್ನಡದ ಹುಟ್ಟುಚೆಲುವು ಕನ್ನಡಕ್ಕೆ ಕಣ್ಮರೆಯಾಯಿತು. ಸಂಸ್ಕೃತದ ಊಟ, ಉಡಿಗೆ, ಆಟ, ನೋಟ, ನಡೆನುಡಿಗಳು ಈಕೆಗೆ ಹೆಚ್ಚು ಹೆಚ್ಚಾಗಿ ರುಚಿಸಹತ್ತಿದವು. ಕನ್ನಡ ಮಹಾ ಕವಿಗಳು ಈ ಹುಟ್ಟು ಚೆಲುವನ್ನರಿಯದೆ ತಮ್ಮ ಕಾವ್ಯ ಕನ್ಯೆಯ ಲಾವಣ್ಯವನ್ನು ಕೃತ್ರಿಮವಾಗಿ ಇಮ್ಮಡಿಗೊಳಿಸುವ ಭರದಲ್ಲಿ ಸಂಸ್ಕೃತ ಕಾವ್ಯಗಳನ್ನೇ ಆದರ್ಶವಾಗಿಟ್ಟುಕೊಂಡು ಆಕೆಯ ಮೈಗೆ ಚಂಪೂರೂಪವೆಂಬ ಜರದ ಪೀತಾಂಬರವನ್ನುಡಿಸಿ ಕಾಲಿಗೆ ಸಂಸ್ಕೃತ ಪ್ರಾಕೃತಗಳೆಂಬ ಭಾರವಾದ ಚಿನ್ನ ರನ್ನದ ತೊಡವುಗಳನ್ನು ತೊಡಿಸಿ ತಾರುಣ್ಯದ ಸುಖಸಂತೋಷ ಸಲ್ಲಾಪಗಳಿಗೆ ಎಷ್ಟು ಮಾತ್ರವೂ ಇಂಬುಗೊಡದೆ ಆಕೆಯನ್ನು ಸಜೀವ ಬೊಂಬೆಯಾಗಿ ನಿಲ್ಲಿಸಿದರು. ಸಾಹಿತ್ಯವು ಪಂಡಿತರ ಸೊತ್ತಾಯಿತು. ಜನಪದ ಸಾಹಿತ್ಯವು ಅದಕ್ಕೆ ತೊತ್ತಾಯಿತು. ಈ ಕುತ್ತದ ತೊತ್ತಿನ ಸೊಲ್ಲು ಮಾರ್ಗೀಯದಿಂದ ಮತ್ತರಾದ ಮಹಾ ಕವಿಗಳಿಗೆ ಗೊತ್ತಾಗದೆ ಹೋಯಿತು. ಮಧುರನಂತಹ ಮಾರ್ಗೀಯ ಕವಿಯು—

ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ |
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೇ ? ಬೀದಿವರೆಯೆ ಬೀರನ ಕತೆಯೇ ||

ಎಂದು ಗರ್ಜಿಸಿದನು. ಮಾತ್ರವಲ್ಲದೆ ಕನ್ನಡ ಜನಪದ ಸಾಹಿತ್ಯವನ್ನು ಆಸ್ಥಾನದಿಂದ ಹೊರಗಟ್ಟಿದನು. ಕನ್ನಡ ಜನಪದ ನುಡಿಯು ಪಂಡಿತರಿಂದ ಬಹಿಷ್ಕರಿಸಲ್ಪಟ್ಟಿತು.

ಜನಪದವನ್ನು ಕಡೆಗಣಿಸಿ ಮಹಾಕಾವ್ಯಗಳ ಕನ್ನಡವು ಜೀವದಿಂದ ಉಳಿಯಬಹುದೇ ಎಂಬ ಪ್ರಶ್ನೆಯು ಪಂಡಿತರಲ್ಲಿಯೂ ಹುಟ್ಟಿತು. ಈ ಗಂಡಾಂತರವನ್ನು ಮುನ್ನೋಡಿದ ಆದಿ ಮಹಾಕವಿ ಪಂಪನು ಕನ್ನಡದ ಗಾಡಿ ಮೋಡಿಗಳನ್ನರಿತು ಪಿರಿಯಕ್ಕರಗಳೆ ಮುಂತಾದ ಅಚ್ಚಗನ್ನಡದ ವೃತ್ತಗಳನ್ನು ತಿರುಳುಗನ್ನಡದ ನುಡಿಗಟ್ಟುಗಳನ್ನೂ ಹೇರಳವಾಗಿ ತನ್ನ ಕಾವ್ಯಗಳಲ್ಲಿ ಬಳಸಿಕೊಂಡನು. ತರುವಾಯದ ಮಹಾ ಕವಿಗಳು ತನ್ನಿಷ್ಟ ಪಕ್ಷಕ್ಕೆ ಪಂಪನ ಹಾದಿಯನ್ನಾದರೂ ಹಿಡಿದಿದ್ದರೆ ದೇಶೀಯ ಮಾರ್ಗೀಯ ವೆಂಬ ಭೇದಗಳು ಮುಳುಗಿಹೋದರೂ ಹೋಗುತ್ತಿದ್ದುವು. ಆದರೆ ಹೆಚ್ಚಿನವರು ಪಂಪನ ಮಾರ್ಗವನ್ನು ತುಳಿಯದೆ ಹೋದರು. ಆದುದರಿಂದ ನಯಸೇನನು—

> ಪೊಸಗನ್ನಡದಿಂ ವ್ಯಾವ
> ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ |
> ತಿಸಿ, ಕೂಡಲಾರದಕ್ಕಟ
> ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೆ ||
>
> ಸಕ್ಕದಮಂ ಪೇಳ್ವೊಡೆ ನೆರೆ
> ಸಕ್ಕದಮಂ ಪೇಳ್ಗೆ ಶುದ್ಧ ಕನ್ನಡದೊಳ್ ತಂ |
> ದಿಕ್ಕುವದೇ ಸಕ್ಕದಂಗಳ
> ತಕ್ಕುದೇ ಬೆರಸಲ್ಕೆ ಘೃತಮುಮಂ ತೈಲಮುಮಂ ||

ಎಂದು ಪ್ರಶ್ನಿಸುವ ಪ್ರಸಂಗವೂ ಒದಗಿತು. ಹನ್ನೊಂದನೆಯ ಶತಮಾನದಲ್ಲಿ ದುರ್ಗಸಿಂಹನು ಸಂಸ್ಕೃತದ ಬೆರಕೆಯನ್ನು ವಿರೋಧಿಸಿದನು. ಆಂಡಯ್ಯನು ಅದಕ್ಕೆ ವಿರೋಧವಾಗಿ ಯುದ್ಧವನ್ನೇ ಸಾರಿದನು. ದೇಶಿಗೆ ಮಾರ್ಗದ ಸಂಸ್ಕಾರ ಕೊಟ್ಟು ಕಾವ್ಯಗಳನ್ನೇಕೆ ಬರೆಯಬಾರದು? ಸಂಪ್ರದಾಯದಲ್ಲಿ ಸ್ವಲ್ಪ ಶಿಥಿಲವಾದರೂ ದೋಷವಿಲ್ಲ. ಕಾವ್ಯವು ರಸವತ್ತಾಗಿದ್ದರೆ ಸಾಕಲ್ಲವೆ? ಎಂಬ ವಿಚಾರ ತರಂಗ ಗಳೆದ್ದುವು. ಹರಿಹರ, ರಾಘವಾಂಕ, ಲಕ್ಷ್ಮೀಶ, ಕುಮಾರ ವ್ಯಾಸ, ರತ್ನಾಕರವರ್ಣಿ, ಹೊನ್ನಮ್ಮ ಮೊದಲಾದ ಮಹಾ ಕವಿಗಳು ತೊತ್ತಾಗಿ ಬಳಲುತ್ತಿದ್ದ ಆ ಜನಪದ ಸಾಹಿತ್ಯಕ್ಕೆ ಮಹಾ ಕಾವ್ಯದ ಪಟ್ಟಗಟ್ಟಿದರು. ಆ ರಾಣಿಗೆ ಸರ್ವಜ್ಞನು ಕಿರೀಟ ವನ್ನಿಟ್ಟು ಕೈವಾರಿಸಿದನು. ಆದರೆ ಇಷ್ಟರಿಂದ ಜನಪದ ಸಾಹಿತ್ಯಕ್ಕೆ ತೃಪ್ತಿಯಾಗ ಲಿಲ್ಲ. ಅದಕ್ಕೆ ಜನಪದ ಹೃದಯವು ಬೇಕಾಗಿತ್ತಲ್ಲದೆ ಮಹಾ ಕಾವ್ಯದ ಪಟ್ಟವು ಬೇಕಿರಲಿಲ್ಲ. ಈ ಸಾಹಿತ್ಯದ ಗುಟ್ಟು ಮೊಟ್ಟಮೊದಲು ರಟ್ಟಾದುದು ಅನುಭವ ಮಂಟಪದ ಸ್ಥಾಪಕರಾದ ಬಸವಣ್ಣನವರಿಗೆ. ಉಚ್ಚನೀಚ ಕುಲದೇವರೆಂದೆನಿಸಿ ಕೊಳ್ಳುವವರನ್ನು ಒಂದೇ ಸ್ಥಾನದಲ್ಲಿಟ್ಟು ಅವರೆಲ್ಲರು ತನ್ನವರೆಂದು ಭಾವಿಸುವ

ವಿಶಾಲ ಹೃದಯ ಬಸವಣ್ಣನವರದು. ಈ ಮಹಾ ಕವಿಯ ಕಾಲದಲ್ಲಿ ಬುದ್ಧಿ ಪ್ರಧಾನವಾದ ಸಂಸ್ಕೃತಕ್ಕಿಂತ ಹೃದಯ ಪ್ರಧಾನವಾದ ಕನ್ನಡವೇ ಆ ಅನುಭವ ಮಂಟಪದ ಸೇವೆಗಾಗಿ ನಡುಕಟ್ಟಿ ನಿಂತಿತು. ಕನ್ನಡಿಯಂತಿರುವ ಕನ್ನಡವು ಬಸವಣ್ಣನವರಿಂದ ಕನ್ನಡಿಗರಿಗಾಗಿ ಕನ್ನಡಿಸಲ್ಪಟ್ಟಿತು. ಅವರ ಹೃದಯ ವೀಣೆಯು ನೂತನ ಭಾಷೆಯನ್ನು ನುಡಿಯಿತು. ಅದರಿಂದ ಹೊರ ಹೊರಟ ನುಡಿಗಳೇ ಅಮೃತಪ್ರಾಯವಾದ ವಚನಗಳು. ಮುತ್ತಿನ ಹಾರದಂತಹ ನುಡಿಗಳು. ಇಂತಹ ನೂರಾರು ವೀಣೆಗಳಿಂದ ಹೊರಸೂಸಿದ್ದೇ ವಚನ ವಾಙ್ಮಯ. ಘನಲಿಂಗಿಯ ವೀಣೆಯಿಂದ ಹೊರಟ ವಚನವೊಂದನ್ನು ಇಲ್ಲಿ ಉದ್ಧರಿಸುತ್ತೇವೆ.

"ಶರಣ ಸತಿ, ಲಿಂಗ ಪತಿ ಎಂಬ ಜ್ಞಾನವು ತಲೆದೋರಿ ಶರಣುವೆಣ್ಣಾಗಿ ಹುಟ್ಟಿದೆ. ಎನಗೆ ನಿನ್ನ ಬಯಕೆ ಎಂಬ ಸಿಂಗರದ ಸಿರಿಯು ಮುಡಿಯಾಯಿತ್ತು. ಎನಗೆ ನಿನ್ನ ನೋಡಬೇಕೆಂಬ ಮುಗುಳ್ಮೊಲೆಗಳೆರಡು ಮೂಡಿದುವು. ಎನಗೆ ನಿನ್ನೊಳು ನುಡಿಯಬೇಕೆಂಬ ಜವ್ವನವು ಕುಡಿವರಿಯಿತ್ತು. ನಿನ್ನ ನೊಲಿಸಬೇಕೆಂಬ ವಸ್ತ್ರಂಗಳೆನಗೆ ಅಲಂಕಾರವಾಯಿತ್ತು. ಭಕ್ತಿ ಎಂಬ ವಿರಹಾಗ್ನಿ ಎನ್ನ ಹೃದಯದಲ್ಲಿ ಬೀಗಿ ಬೇರ್ವರಿದು ನಿಂದಲ್ಲಿ ನಿಲ್ಲಲೀಸದಯ್ಯಾ! ಕುಳಿತಲ್ಲಿ ಕುಳ್ಳಿರಲೀಸದಯ್ಯಾ! ನಾನು ಧರೆಯೊಳು ಉಳಿವುದರಿದು. ಪ್ರೇಮದಿಂ ಬಂದು ಕೈವಿಡಿದು ಅಕ್ಕರಿಂದಾಲಿಂಗಿಸಿ ನಾ ನೀನೆಂಬ ಉಭಯವಿಲ್ಲದಂತೆ ಕೂಡೆನ್ನ ಪ್ರಾಣನಾಥನೇ! ಕೂಡದಿರ್ದಡೆ ಗಲ್ಲವಪಿಡಿ. ಗಲ್ಲವ ಪಿಡಿಯದಿರ್ದಡೆ ಕೈವಿಡಿ. ಕೈವಿಡಿಯದಿರ್ದಡೆ ಮಾತಾಡು. ಮಾತಾಡದಿರ್ದಡೆ ನೋಡು. ನೋಡದಿರ್ದಡೆ ಬಾ. ಬಾರದಿರ್ದಡೆ ಪ್ರಮಥ ಗಣಂಗಳೊಡನೆ ನಿನ್ನವಳೆಂದು ನುಡಿ. ನುಡಿಯದಿರ್ದಡೆ ನಿನ್ನ ಮನದಲ್ಲಿ ನನ್ನನ್ನು ನಿನ್ನವಳೆಂದು ಭಾವಿಸು. ನಿನಗೊಲಿದವರ ನಿನ್ನಂತೆ ಮಾಡುವ ಸರ್ವೇಶನೇ! ನಿನ್ನ ಮೆಚ್ಚಿಸಿಕೊಳ್ಳಲರಿಯದ ಈ ಮುಗ್ಧವೆಣ್ಣಿನ ಪತಿಭಕ್ತಿಯಂ ಸಾಧಿಸುವ ಎನ್ನವಸ್ಥೆಯಂ ಲಾಲಿಸು. ಎನ್ನ ಬಿನ್ನಪವಂ ಪಾಲಿಸು. ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ."

ವಚನವಾಙ್ಮಯದಲ್ಲಿ ಕಂಡುಬರುವ ಭಕ್ತಿಯು ಬೇರೊಂದು ರೀತಿಯಿಂದ ದಾಸರ ಪದಗಳಲ್ಲಿಯೂ ಹರಿದಿದೆ. ದಾಸರು, ಹಾಡು, ಸುಳಾದಿ—ಉಗಾಭೋಗ—ಸೀಸಪದ್ಯ ಮುಂತಾದ ಅಚ್ಚಗನ್ನಡದ ಪಡಿಯಚ್ಚುಗಳಲ್ಲಿ ತಮ್ಮ ಕೀರ್ತನೆಗಳನ್ನು ಹಾಡಿದ್ದಾರೆ. ಇವುಗಳಲ್ಲಿ "ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರು ಕಲ್ಲುಸಕ್ಕರೆ ಕೊಳ್ಳಿರೋ"— "ಆವ ರೋಗವೋ ಎನಗೆ ದೇವಧನ್ವಂತರಿಯೇ"—"ಮಾಧವ ನಿನ್ನ ಮೂರುತಿಯನೇ ನಿಲ್ಲಿಸೋ"—"ನಾ ಮಾಡಿದ ಕರ್ಮ ಬಲವಂತವಾದರೆ ನೀಮಾಡುವದೇನು ಹರಿಯೇ?" "ಬಕುತಿ ಸುಖವೋ ಮುಕುತಿ ಸುಖವೋ ಯುಕುತಿವಂತರೆಲ್ಲ ಹೇಳಿ"—

"ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲವೊಂದಿದ್ದರೆ ಸಾಕೋ"— ಇವೇ ಮುಂತಾದ ಅನುಭಾವದ ಪದಗಳು ಜನಪದ ಹೃದಯವನ್ನು ಸೂರೆಗೊಂಡು ಕುಣಿಯುತ್ತಿವೆ ಅವರ ನಾಲಿಗೆಗಳ ಮೇಲೆ. ಇವುಗಳಲ್ಲಿ ಪುರಂದರದಾಸರ ಸುಲಭತೆ, ಕನಕದಾಸರ ಸುಭಗತೆ, ವಿಜಯದಾಸರ ಸರಲತೆ, ಜಗನ್ನಾಥರ ನಿಪುಣತೆಗಳನ್ನು ನೋಡ ಬಹುದು. ಇವರು ಒಮ್ಮೆ ಹುಚ್ಚರಾಗಿ ಕುಣಿಯುವರು. ಇನ್ನೊಮ್ಮೆ ಬಿನ್ನಾಣಿಗಳಾಗಿ ಬೆಚ್ಚಿ ಬೆರಗುವರು. ಮತ್ತೊಮ್ಮೆ ದಾಸರಾಗಿ ಸೆರಗೊಡ್ಡಿ ಬೇಡುವರು. ತಾಯಿಯಂತೆ ಸಂತೈಸುವರು. ಸಖಿಯಂತೆ ಸರಸವಾಡುವರು. ಇದಲ್ಲದೆ ಜನಪದ ಸಾಹಿತ್ಯದಲ್ಲಿ ನಿಜಗುಣ ಶಿವಯೋಗಿಗಳು, ಮುಪ್ಪಿನ ಷಡಕ್ಷರಿಗಳು, ಶಿಶುನಾಳ ಸರೀಪ ಸಾಹೇಬರು ಮೊದಲಾದವರು ಮಾಡಿದ ಸೇವೆಯು ಚಿರಸ್ಮರಣೀಯವಾಗಿದೆ.

ವಚನ ಕೀರ್ತನೆಗಳಲ್ಲದೆ ಜನಪದ ಸಾಹಿತ್ಯದಲ್ಲಿ ನವರಸಭರಿತವಾದ ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ತಾತ್ವಿಕ ಸಂಬಂಧವಾದ ವಿಧವಿಧದ ಲಾವಣಿಯ ಪದಗಳು, ಯಕ್ಷಗಾನಗಳು, ತುಂಡು ಪದಗಳು, "ತಂದನಾನಾ ಪದಗಳು, ತೋಟದ ಪದ, ಜಾತ್ರೆಯ ಪದ, ಹೋಳಿಯ ಪದ, ಹೆಜ್ಜೆಯ ಪದ, ಹಂಕಿಯ ಪದ ಮುಂತಾದ ಗಂಡಸರ ಹಾಡುಗಳೂ ದೇವರ ಹಾಡು, ಪೂಜೆಯ ಹಾಡು, ಜೋಗುಳ ಹಾಡು, ಒನಕೆವಾಡು, ಬೀಸುವ ಪದ, ಸುವ್ವಿಯ ಹಾಡು, ಆರತಿಯ ಹಾಡು, ಗರತಿಯ ಹಾಡು, ಗೌರಿಯ ಹಾಡು, ಬೀಗರ ಹಾಡು, ಒಗಟು ಮುಂತಾದ ಹೆಂಗಸರ ಹಾಡುಗಳೂ ಸಮಾವೇಶವಾಗುತ್ತವೆ. ಇವುಗಳಲ್ಲಿ ಸಂಸಾರದ ಸಕಲ ತರದ ವಿಚಾರಗಳು ಮನೋ ಹರವಾಗಿ ಚಿತ್ರಿಸಲ್ಪಟ್ಟಿವೆ. ಜನಪದ ಸಾಹಿತ್ಯವೆಲ್ಲವೂ ಹಾಡುಗಬ್ಬವೇ. ಇದರಲ್ಲಿ ಹಿಂದೆ ಹೇಳಿದ ಸುಳಾದಿ ಛಂದಸ್ಸುಗಳಲ್ಲದೆ ಸಾಂಗತ್ಯ, ಚೌಪದಿ, ರಗಳೆ ಮೊದಲಾದ ಅನೇಕ ಅಚ್ಚಗನ್ನಡ ವೃತ್ತಗಳು ಬರುತ್ತವೆ. ಈ ಎಲ್ಲತರದ ವೃತ್ತಗಳಿಗೆ ತ್ರಿಪದಿಯೇ ಮೂಲತಾಯಿ. ತ್ರಿಪದಿಯ ನಡುವಿನ ಗೆರೆಯನ್ನು ತಿರುಗೊಮ್ಮೆ ಹಾಡಿದರೆ ಅದು ಹಿಗ್ಗಿ ಚೌಪದಿಯಾಗುತ್ತದೆ ಅದರ ಮೂರು ಪಾದಗಳನ್ನು ಇಮ್ಮಡಿಮಾಡಿದರೆ ಆರು ಗೆರೆಯ ಷಟ್ಪದಿಯಾಗುತ್ತದೆ. ಇವೆಲ್ಲ ಹಾಡಲಿಕ್ಕೆ ಬರುತ್ತಿದ್ದು ತಾಳ, ಲಯ, ಯತಿಗಳನ್ನು ಅನುಸರಿಸುವವುಗಳು. ಬೀಸುವದು, ಕುಟ್ಟುವದು, ತೊಟ್ಟಿಲ ತೂಗು ವದು ಮುಂತಾದ ಅನೇಕ ಮನೆ ಕೆಲಸಗಳು ತಾಳಬದ್ಧವಾಗಿ ನಡೆಯುವದರಿಂದ ಜನಪದ ಸಾಹಿತ್ಯವು ಹಾಡುಗಳಿಂದ ಕೂಡಿದ್ದಾಯಿತು. ಶಾರೀರಕ ಶ್ರಮಜೀವಿ ಗಳೆಲ್ಲರು ಆಯಾಸವಿಲ್ಲದೆ ಆನಂದದಿಂದ ತಮ್ಮ ಹೋರೆಗಳನ್ನು ಮಾಡುವದಕ್ಕೆ ಅನುಕೂಲವೂ ಆಯಿತು. ರಗಳೆಯು ಸಹ ಅರಘಟವೆಂಬ ನೀರೆತ್ತುವ ಯಂತ್ರದ ಮೂಲಕವಾಗಿ ಗಡಿಗೆಗಳಿಂದ ನೀರು ಸುರಿಯುವಾಗ ಉಂಟಾಗುವ ತಾಳವನ್ನನುಸರಿ

ಸಿಯೇ ಹುಟ್ಟಿದ್ದೆಂದು ಕೆಲವರ ಅಭಿಪ್ರಾಯ. ಇಲ್ಲಿ ಮೂಲರೂಪದ ತ್ರಿಪದಿಯೊಂದನ್ನು ಉದ್ಧರಿಸುತ್ತೇವೆ. ಇದರಲ್ಲಿರುವ ಕಥಾ ಸಂದರ್ಭವು ಹೀಗಿದೆ—ಚೆನ್ನಿಗನಾದ ಒಬ್ಬ ಹುಡುಗನು ಚೆಲುವೆಯೊಬ್ಬಳನ್ನು ಲಗ್ನವಾಗುತ್ತಾನೆ. ಹುಡುಗ ಬಡವ. ಅವನ ಹೆಂಡತಿ ಶ್ರೀಮಂತ ಮನೆತನದವಳು. ಇವಳು ಯಾವಾಗಲೂ ತವರುಮನೆಯನ್ನು ಹೆಚ್ಚಿಸಿ ಗಂಡನ ಮನೆಯವರನ್ನು ಹೀನೈಸಿ ಮಾತಾಡುವವಳು. ಇದನ್ನು ಕೇಳಿ ಸಾಕಾಗಿ ಗಂಡನು ಒಂದುದಿನ ಸಿಟ್ಟಿಗೆದ್ದು ಅವಳಿಗೆ ಒಂದು ಪೆಟ್ಟು ಹಾಕಿದ. ಅವಳು ಅಳಹತ್ತಿದಳು. ಅದರಿಂದ ಇವನಿಗೂ ಅಳುವು. ಆದರೆ ತವರು ಹೆಚ್ಚು ಎಂಬ ಆಕೆಯ ಸೊಲ್ಲನ್ನು ನಿಲ್ಲಿಸಬೇಕೆಂಬದೊಂದು ಹವ್ಯಾಸ ಇವನಿಗೆ. ಇದನ್ನು ವರ್ಣಿಸುವ ತ್ರಿಪದಿಯು ಹೀಗಿದೆ—

" ಮಡದೀನ ಬಡಿದಾನ—ಮನದಾಗ ಮರುಗ್ಯಾನ
ಒಳಗ್ಹೋಗಿ ಸೆರಗಹಿಡಿದು ತಾ ಕೇಳ್ಯಾನ
ನಾ ಹೆಚ್ಚೊ ನಿನ್ನ ತವರ್ಹೆಚ್ಚೊ.

ಹೆಂಡತಿ ಬಲುಜಾಣೆ. ಅವಳು ತವರ್ಹೆಚ್ಚು ಎಂಬುದನ್ನು ಬಿಡುವದಿಲ್ಲ. ಗಂಡ ಹೆಚ್ಚು ಎಂಬುದನ್ನು ಒಪ್ಪುವದಿಲ್ಲ. ತಿರುಗಿ ಪೆಟ್ಟು ತಿನ್ನುವದಿಲ್ಲ. ಹೇಗಂದರೆ—

" ತಾಯಿದ್ರೆ ತವರ್ಹೆಚ್ಚು—ತಂದಿದ್ರೆ ಬಳಗ್ಹೆಚ್ಚು
ಸಾವಿರಕೆ ಹೆಚ್ಚು ಪತಿ ಪುರುಷ—ಅವಗಿಂದ
ಮಾಣಿಕದ ಹರಳು ಮಗ ಹೆಚ್ಚು.

ಎಂದು ಹೇಳುತ್ತಾಳೆ. ಅದಕ್ಕೆ ಗಂಡನು ನಿರುತ್ತರನಾಗುತ್ತಾನೆ. ಇದು ಲೌಕಿಕ ಜಾಣ್ಮೆ. ಇದಕ್ಕಿಂತ ಮಿಗಿಲಾದ ಜಾಣ್ಮೆಯನ್ನು ವಚನಕಾರರ ಬೆಡಗು, ದಾಸರ ಮುಂಡಿಗೆ, ಒಗಟು, ತತ್ವ, ಲಾವಣಿ ಮೊದಲಾದವುಗಳಲ್ಲಿ ಧಾರಾಳವಾಗಿ ನೋಡಬಹುದು. ಇವುಗಳನ್ನು ರಚಿಸುವದರಲ್ಲಿ ಕನ್ನಡಿಗರಿಗಿರುವ ತಿಳಿವಿನ ಶಕ್ತಿ ಅವುಗಳನ್ನು ಬಿಚ್ಚಿ ತೋರಿಸುವಲ್ಲಿ ಅವರಿಗಿರುವ ಯುಕ್ತಿ ಸಾಮಾನ್ಯವಾದುದಲ್ಲ. ಇದು ಮುಂದೆ ಬರುವ ಸುವ್ವಿಯ ಹಾಡಿನಿಂದ ತಿಳಿದುಬರುವುದು. ಇದರಲ್ಲಿ ಅಕ್ಕಿಯನ್ನು ತಳಿಸಿ ಎಸರಿಟ್ಟು ಬೋನವನ್ನು ಬಸಿದು ಉಂಡು ಎಲೆ ಹಾಕಿಕೊಂಡು ರಸವನ್ನು ನುಂಗಿ ಆನಂದಪಡುವವರೆಗೂ ಅನುಭಾವರಸವು ತುಂಬಿ ತುಳುಕುತ್ತಿದೆ.

ಸುವಯ್ಯ ಬೀಸಿದೆ ! ಸುವಯ್ಯ ಕುಟ್ಟಿದೆ ! ಅವ್ವಯ್ಯ ಅಕ್ಕಿ ನಾ ತಳಿಸಿದೆನೆ ! || ಪ ||

೧ ಅಂಗೆಂಬ ಗಡಿಗೆಯ ಅಡಿಬಾರಿಸಿ ನೋಡಿ ನಿರ್ಮಲ ನೀರೆಸರಿಟ್ಟದೆನೆ
ನೆಪ್ಪೆಂಬ ಉಪ್ಪಾಕಿ ಬುದ್ಧೆಂಬ ಹುಟ್ಟು ತಿರುವಿ ಜ್ಞಾನೆಂಬ ಬಾನವ ಬಸಿದಿದೆನೆ
ನಾನುತಾನೆಂಬ ತಾಬಂಡಿ ಬೆಳಗಿದೆನೆ
ನಾನು ನಂಬಿಗೆ ತಂಬಿಗೆ ತುಂಬಿದೆನೆ || ಸುವಯ್ಯ ||

೨ ಮನವನ್ನು ಮಡಿಮಾಡಿ ಅನುಭಾವದೆಡೆಮಾಡಿ ಅದ್ವೈತದೂಟವ ನೀಡಿದೆನೆ
ವೇದೆಂಬ ಎಲೆತಂದು ಭೇದೆಂಬ ತುಂಬರಿದು ಬೋಧೆಂಬ ಸುಸುಣ್ಣ ಒರಸಿದೆನೆ
ಸಕಲೆಂಬ ಅಡಿಕೆಯ ನಿಃಕಲೆಂಬ ತಾಟ್ಹಿಕಿ ಕಕಲಾತಿ ಕೈಯೊಳಗ್ಹಿಡಿದಿಹೆನೆ
ನಾನು ಮುತ್ತೆಂಬ ವೀಳ್ಯವ ಮಡಿಚಿದೆನೆ
ಭಕ್ತಿಭಾವೆಂಬ ಬಾಯೊಳಗ್ಹಿಡಿದಿಹೆನೆ || ಸುವಯ್ಯ ||

೩ ರಸನುಂಗಿ ನವುತಂಗಿ ಜನುಮುಂಗಿ ಕಳೆಯಂಗಿ ಜನನ ಮರಣ ಭಯ ನೀಗಿದೆನೆ
ಸದ್ಗುರು ಸರ್ವೇಶ ಸರ್ವರೊಳಿರುವನು ಗುರುಗುಪ್ತದಿರು ಜಾಪ್ತಿ ತಿಳಿದಿಹೆನೆ
ತಿಳಿದಿಂದ ತೀರಿತು ಪ್ರಕಾಶ ತೋರಿತು ಜ್ಯೋತಿಗೆ ಜ್ಯೋತಿ ನಾ ಕೂಡಿದೆನೆ
ಇದನು ಮಾತೀಲಿ ನುಡಿಯಲು ನೋಡಿದೆನೆ
ಮಾತು ಬಾರದೆ ಬೆರಗಿ ನಾ ಕೂತಿಹೆನೆ || ಸುವಯ್ಯ ||

ಇಂತಹ ಅನುಭಾವ ಭಕ್ತಿಯಿಂದ ಹೊರಸೂಸುವ ಹಾಡುಗಬ್ಬಗಳು ಸಂಸ್ಕೃತದ ನೆರಳಿನಲ್ಲಿ ಬೆಳೆದ ಓದುಗಬ್ಬಗಳಿಗಿಂತ ವಸ್ತುಕಗಳಿಗಿಂತ ಹೃದ್ಯವಾಗಿರುವವಲ್ಲವೆ? ಇವುಗಳನ್ನು ಅಭ್ಯಸಿಸಿದ ವಿಲಾಯತಿಯ ವಿದ್ವಾಂಸನೊಬ್ಬನು It is a sin to call Kanarese an intellectual language ಎಂದು ಹೇಳಿದ್ದಾನೆ.

ಆಧ್ಯಾತ್ಮಿಕ ಅನುಭವಗಳನ್ನು ಹೇಳುವದರಲ್ಲಿ ಹೇಗೋ ಹಾಗೆಯೇ ಲೌಕಿಕ ಅನುಭಾವಗಳನ್ನು ಹೇಳುವದರಲ್ಲಿಯೂ ಕನ್ನಡಿಗರು ಜಾಣರು. ಇದನ್ನು ವಿಶೇಷವಾಗಿ ಗಾದೆಗಳಲ್ಲಿ ಕಾಣಬಹುದು. ಗಾದೆ ಎಂಬ ಶಬ್ದವು ವೇದದಲ್ಲಿ ದೊರೆಯುವ ಗಾಥಾ ಎಂಬ ವೃತ್ತದಿಂದ ಬಂದುದೆಂದೂ ಹೀಗಾಗಿ ಇದು ಸಂಸ್ಕೃತದ ತದ್ಭವವೆಂದೂ ಕೆಲವರ ಅಭಿಪ್ರಾಯ. ನಾವು ಈ ವ್ಯುತ್ಪತ್ತಿಯನ್ನು ಸ್ವೀಕರಿಸಿದರೆ ಕನ್ನಡಿಗರಿಗೆ ಸಂಸ್ಕೃತದ ಜ್ಞಾನವಾಗುವ ಮುಂಚೆ ಕನ್ನಡಭಾಷೆಯಲ್ಲಿ ಇಲ್ಲವೆ ದ್ರಾವಿಡ ನುಡಿಗಳಲ್ಲಿ ಗಾದೆಗಳೇ ಇದ್ದಿಲ್ಲವೆಂದು ಒಪ್ಪಿಕೊಳ್ಳಬೇಕಾದೀತು. ಕನ್ನಡ ಗಾದೆಗಳ ಧ್ವನಿ, ನಾದ, ಪ್ರಾಸ, ಬಿಗಿ, ಮೈಕಟ್ಟು, ತೂಕ, ಶೈಲಿ, ಅಲಂಕಾರ, ರೀತಿ ಮೊದಲಾದವುಗಳನ್ನು ನೋಡಿದರೆ ಇವು ವೇದದ ಗಾಥಾ ಛಂದಸ್ಸಿಗಿಂತ ಅಚ್ಚಗನ್ನಡದ ತ್ರಿಪದಿಯ ಛಂದಸ್ಸಿಗೆ ತೀರ ಸಮೀಪವಾಗಿವೆ ಎಂದು ತಿಳಿದುಬರುತ್ತದೆ. ಗಾದೆಗಳು ತ್ರಿಪದಿಗಳಿಂದ ಒಡೆದುಬಂದಂತೆ ತೋರುತ್ತವೆ. ತ್ರಿಪದಿಗಳಿಂದ ಗಾದೆಗಳುಂಟಾದವೋ ಗಾದೆಗಳಿಂದ ತ್ರಿಪದಿಗಳುಂಟಾದವೋ ಎಂದು ಸಂದೇಹ ಉಂಟಾಗುವಷ್ಟು ಇವು ಸರ್ವಜ್ಞನ ತ್ರಿಪದಿಗಳಲ್ಲಿ ಬೆರೆತುಹೋಗಿವೆ. ಲೋಕಾನುಭವವನ್ನು ಕಿರಿದರಲ್ಲಿ ಪಿರಿದರ್ಥವನ್ನಿಟ್ಟು ಹೇಳುವ ರೀತಿ, ನೀತಿಬೋಧೆ, ನಿರೀಕ್ಷಣಶಕ್ತಿ, ಹಿತೋಪದೇಶ ಮಾನವಸ್ವಭಾವ ಪರಿಚಯ, ಶಿಕ್ಷಣದ ಬಗೆ, ಮಾತಿನ ಚತುರತೆ, ಜ್ಞಾನದ ಬುಗ್ಗೆಗಳನ್ನು ಕನ್ನಡ ಗಾದೆಗಳಲ್ಲಿ ನೋಡಬಹುದು. ಇವುಗಳಿಗೆ ಕನ್ನಡ ಸಂಸ್ಕೃತಿಯ

ಶಿಲಾಶಾಸನಗಳೆಂದರೂ ಸಲ್ಲುವದು. ಕನ್ನಡ ಗಾದೆಗಳನ್ನು ಇತರ ಜನಾಂಗಗಳ ಗಾದೆಗಳೊಂದಿಗೆ ಹೋಲಿಸಿ ತುಲನಾತ್ಮಕ ದೃಷ್ಟಿಯಿಂದ ಅವುಗಳನ್ನು ಅಭ್ಯಸಿಸಿದರೆ ಅಖಂಡ ಮಾನವಕುಲವು ಒಂದೇ ವಿಚಾರದ ತಳಹದಿಯ ಮೇಲೆ ನಿಂತಿರುವಂತೆ ಭಾಸವಾಗುತ್ತದೆ.

ಗಾದೆಯು, ದೇಶ, ಕಾಲ, ಪರಿಸ್ಥಿತಿಗನುಸಾರವಾಗಿ ಯಾವನೊಬ್ಬನಿಂದ ರಚಿತ ವಾಗಿ—ಬಹು ಜನರ ಒಪ್ಪಿಗೆಯನ್ನು ಪಡೆದರೆ ಮಾತ್ರ ಮುದ್ರೆಹೊಂದಿದ ನಾಣ್ಯದಂತೆ ಚಲಾವಣೆಯಲ್ಲಿ ಬರುವದು. ಇವುಗಳ ವಿಷಯವಾಗಿ ಹೇಳತಕ್ಕ ಸಂಗತಿಗಳು ಇನ್ನೂ ಅನೇಕ ಇವೆ. ಅವೆಲ್ಲವುಗಳನ್ನು ಬಿಟ್ಟು ಗಾದೆಗಳನ್ನು ಅಭ್ಯಸಿಸತಕ್ಕ ರೀತಿ, ಅವು ಗಳನ್ನು ವರ್ಗೀಕರಿಸತಕ್ಕ ವಿಧಾನ ಇವೆರಡು ವಿಷಯಗಳನ್ನು ಕುರಿತು ಮಾತ್ರವೇ ಇಲ್ಲಿ ತಿಳಿಸುತ್ತೇವೆ. ದೃಷ್ಟಾಂತಕ್ಕಾಗಿ—

"ಹಸಿದಹಾರುವನನ್ನು ಉಂಡ ಮುಸಲನನ್ನು ತಡವಬೇಡ"—ಎಂಬುದೊಂದು ಗಾದೆ. ಇದನ್ನು ಮನಃಶಾಸ್ತ್ರ ದೃಷ್ಟಿಯಿಂದ ನೋಡಿದರೆ ಬೇರೆ ಬೇರೆಯಾದ ಎರಡು ರೀತಿಯಿಂದ ಶ್ರಮ ಮಾಡುವ ಎರಡು ತರದ ಸಮಾಜಗಳ ಮೇಲೆ ಆಹಾರದಿಂದ ಪರಸ್ಪರ ವಿರೋಧವಾದ ಪರಿಣಾಮಗಳುಂಟಾಗುತ್ತವೆಂದು ತಿಳಿದು ಬರುತ್ತದೆ. ಗಾದೆಗಳನ್ನು ಸಂಗ್ರಹಿಸಿ ಅವುಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳನ್ನು ಗುರುತಿಸಿ ಅದಕ್ಕನುಸಾರವಾಗಿ ಅವುಗಳನ್ನು ವರ್ಗೀಕರಿಸಿದರೆ ಸುಮಾರು ಆರು ಪ್ರಕಾರಗಳಿರುವಂತೆ ತಿಳಿದುಬರುತ್ತದೆ. ಉದಾಹರಣೆಗಳ ಸಹಿತವಾಗಿ ಅವುಗಳನ್ನು ಇಲ್ಲಿ ಕೊಡುತ್ತೇವೆ.

೧. ಪ್ರಶ್ನಾ ರೂಪದ ಗಾದೆಗಳು.

ಕೋಣ ಬೆಳೆದರೆ ಆನೆಯಾದೀತೇ ? ಕುಂಡೆ ಬೆಳೆದರೆ ಗೌಡನಾದಾನೇ :
ತೊಂಡೆ ಬೆಳೆದರೆ ತೊಡೆಗಾತ್ರವಾದೀತೆ ? ಬೊಟ್ಟು ಸೀಪಿದರೆ ಹೊಟ್ಟೆ ತುಂಬೀತೇ
ಇದ್ದವರೊಳಗೆ ಕದ್ದವರಾರು ? ಇತ್ಯಾದಿ.

೨. ಸ್ಥಾಪನಾರೂಪದ ಗಾದೆಗಳು.

ಆನೆಮೆಟ್ಟಿದ್ದೆ ಸಂದು, ಸೆಟ್ಟಿಕಟ್ಟಿದ್ದೇ ಪಟ್ಟಣ. ಹೆಡ್ಡನಾದರೂ ದೊಡ್ಡವನೇ ಲೇಸು.
ಇಬ್ಬರ ನ್ಯಾಯ ಒಬ್ಬರಿಗಾಯ. ನಾಣ್ಯವಿಲ್ಲದವ ನೊಣಕ್ಕಿಂತ ಕಡೆ.

೩. ನಿಷೇಧ ರೂಪದ ಗಾದೆಗಳು. (ಇವು ದ್ವಿಪದಿಗಳಂತಿವೆ)

ಕಜ್ಜಿ ಇದ್ದವಗೆ ಲಜ್ಜೆ ಇಲ್ಲ, ಅಜ್ಜಿ ಇದ್ದವಗೆ ಬುದ್ಧಿ ಇಲ್ಲ.
ದಂಡಿನಲ್ಲಿ ಕೆಟ್ಟದ್ದು ಹಾದರವಲ್ಲ, ಬರದಲ್ಲಿ ಕದ್ದದ್ದು ಕಳವಲ್ಲ.
ದೊಡ್ಡವನ ಮನೆ ಸುಡಬಾರದು, ಬಡವನ ಹೆಂಡತಿ ಸಾಯಬಾರದು.

೪. ವಿಧ್ಯರ್ಥಕ ಗಾದೆಗಳು (ಇವು ಸಹ ದ್ವಿಪದಿಗಳಂತಿವೆ)

ಕಾಕುಮಾತು ಆಡಬೇಡ, ಘೋರವಿದ್ಯೆಗೆ ಹೋಗಬೇಡ.
ದನದ ಮುಂದೆ ಹೋಗಬೇಡ, ಕುದುರೆಯ ಹಿಂದೆ ಹೋಗಬೇಡ.
ಸಿಂಪಿಗನ ಬಲಕ್ಕೆ ನಿಲಬೇಡ, ಅಳುವವನ ಎಡಕ್ಕೆ ನಿಲ್ಲಬೇಡ.

೫. ಉಪಮಾನ ರೂಪದ ಗಾದೆಗಳು.

ಇವುಗಳಲ್ಲಿ ಯಾವದೊಂದರ ಹೋಲಿಕೆಯು ಹೇಳೋಣವಾಗುತ್ತಿದ್ದು ಕಡೆಯಲ್ಲಿ ಅಂತ, ಹಾಗೆ, ಶಾಸ್ತ್ರದಂತೆ ಎಂಬ ಪದಗಳು ಪ್ರಯೋಗವಾಗುವುವು.

ಉದಾ :—ಸಾನೂ ನಾಗಪ್ಪನೂ ಕೂಡಿ ಕಚ್ಚಿದೆವೆಂದು ಓತಿ ಹೇಳಿದಂತೆ.
ಬೆಟ್ಟ ಬೇಯುತ್ತದೆಂದು ಸೆಟ್ಟಿ ಅತ್ತಹಾಗೆ.
ಉಪ್ಪಿನವ ನರಳುತ್ತಾನೆಂದು ಟೆಂಗಿನಕಾಯವ ನರಳಿದನಂತೆ.
ಗಂಧದ ಕೊರಡು ಸಮುಗಾರನಲ್ಲಿ ಬಿದ್ದ ಹಾಗೆ.

೬. ಸಂವಾದ ರೂಪದ ಗಾದೆಗಳು.

ಉಪಾಧ್ಯಾಯರೇ ! ನಿಮ್ಮ ಮಗ ಬೇವು ತಿನ್ನುತ್ತಾನೆ ಅಂದರೆ ಕಹಿ ಹತ್ತಿದರೆ ಬಿಟ್ಟಾನು ಅಂದ.
ಗೌಡರೇ ಎತ್ತು ಈಯಿತು ಅಂದರೆ ಕೊಟ್ಟಿಗೆಯಲ್ಲಿ ಕಟ್ಟೆಂದ.
ತೋಳಾ, ಕುರಿ ಕಾಯು ಅಂದರೆ ಸಂಬಳವಿಲ್ಲದೆ ಅಂದ.

ಹೀಗೆ ವಿವಿಧ ರೀತಿಯಿಂದ ಸಕಲ ಗಾದೆಗಳನ್ನು ವರ್ಗೀಕರಿಸಬಹುದಾಗಿದೆ. ಆದುದರಿಂದ ಆಧುನಿಕ ವಿದ್ಯಾವಂತರು ಗಾದೆಗಳ ಅಭ್ಯಾಸದಕಡೆಗೆ ಗಮನಕೊಡುವುದು ಆವಶ್ಯಕ.

ನಮ್ಮ ಮುಂದಿನ ಕೆಲಸ.

ಜನಪದ ಸಾಹಿತ್ಯವು ಹಿಂದಿನಂತೆ ಹೊಸಹೊಸದಾಗಿ ಈ ಹೊಸ ಮನ್ವಂತರದಲ್ಲಿ ನಿರ್ಮಾಣವಾಗುತ್ತಿಲ್ಲ. ಇದರ ಕಾರಣವೇನೋ ತಿಳಿಯದು. ಪಾಶ್ಚಾತ್ಯ ನಾಗರಿಕತೆಯ ಫಲವಾಗಿ ಹಳ್ಳಿಗಳಲ್ಲಿ ಸಹ ನಮ್ಮ ಒನಕೆ ಬೀಸುವ ಕಲ್ಲುಗಳು ಮೂಲೆಗೆ ಬಿದ್ದಿರುವದೆಂದೊಂದು ಕಾರಣವಿರಬಹುದು. ಇದರಲ್ಲಿ ನಿಜಾಂಶವಿದ್ದರೂ ಈಗಿನ ಜನಪದಕ್ಕೆ ಹಳೆಯ ಸಾಹಿತ್ಯವು ಕಣ್ಮರೆಯಾಗಿ ಅದರ ಬಗೆಗೆ ಮರವೆಯುಂಟಾಗಿರುವದೇ ಮುಖ್ಯ ಕಾರಣವೆಂದು ಹೇಳಬೇಕು. ಆದುದರಿಂದ ಕನ್ನಡಾಭಿಮಾನಿಗಳಾದ ಆಧುನಿಕ ವಿದ್ಯಾವಂತರು ಈ ಕಡೆಗೆ ವಿಶೇಷವಾಗಿ ಲಕ್ಷ್ಯಕೊಟ್ಟು ಜನಪದ ಸಾಹಿತ್ಯವನ್ನೆಲ್ಲ ಸಂಶೋಧಿಸಿ ಸಂಸ್ಕರಿಸಿ ಜನತೆಯ ಮುಂದಿಟ್ಟರೆ ಈ ಕೊರತೆಯು ನೀಗುವದರಲ್ಲಿ ಸಂದೇಹವಿಲ್ಲ. ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಕಾರ್ಯವು ಕೆಲವು ವರ್ಷಗಳಿಂದೀಚೆ ಪ್ರಾರಂಭವಾಗಿದ್ದು ಅದರಲ್ಲಿ ಸ್ವಲ್ಪಮಟ್ಟಿಗೆ ಮಾತ್ರವೇ ಕೆಲಸವಾಗಿದೆ ಎಂದು ಹೇಳಬೇಕು. ಇದರಲ್ಲಿ ನಮ್ಮ ಹಲಸಂಗಿಯ ಬಳಗದವರು, ಬೇಂದ್ರೆಯವರು, ಮಾಸ್ತಿ

ಯವರು, ಹಳಕಟ್ಟಿಯವರು, ಗೋರೂರರವರು, ಬೆಟಗೇರಿಯವರು, ಅ. ನ. ಕೃಷ್ಣರಾಯರು, ಬಿ. ಎನ್. ರಂಗಸ್ವಾಮಿಯವರು, ದೇವುಡು ಅವರು, ಬೆಳಗಾವಕರ ದಂಪತಿಗಳು ಮುಂತಾದ ಅನೇಕ ವಿದ್ಯಾವಂತರಿರುವರು ಇವರು ಕೈಕೊಂಡು ಮಾಡಿದ ಕಾರ್ಯವು ತುಂಬಾ ಹೊಗಳತಕ್ಕದ್ದಾಗಿದ್ದರೂ ಇನ್ನೂ ಆಗಬೇಕಾದ ಕೆಲಸವು ಬಹಳ ಉಳಿದಿದೆ. ನಮ್ಮ ಜನಪದ ಕಥಾಸಾಹಿತ್ಯವಂತೂ ಬೆಳಕಿನ ಕಿರಣವನ್ನೇ ಕಂಡಿಲ್ಲ. ಪೌರಾಣಿಕ, ಐತಿಹಾಸಿಕ, ತಾತ್ವಿಕ, ಮುಂತಾದ ಮನೋಹರವಾದ ವಿನೋದಕರವಾದ ಸಾವಿರಾರು ಕತೆಗಳು ಇನ್ನೂ ಜನತೆಯ ಬಾಯಲ್ಲಿ ಉಳಿದಿವೆ. ಗೊಂದಲಿಗರು ಬೆಳಗಿನವರೆಗೂ ಹೇಳುವ ಚಮತ್ಕಾರವಾದ ಅದ್ಭುತ ಕತೆಗಳನ್ನು ನಮ್ಮ ನಾಗರಿಕರು ಸಹ ಕುತೂಹಲದಿಂದ ಕೇಳಬಹುದಾಗಿದೆ. ಈ ಕಥಾ ಸಾಹಿತ್ಯದಲ್ಲಿ ಅಜ್ಜಿಯ ಕತೆ, ಸಣ್ಣ ತಲೆ, ದೊಡ್ಡ ತಲೆ, ಉದ್ದ ತಲೆ, ಅಡ್ಡ ತಲೆ ಮುಂತಾದ ಬೃಹತ್ಕಥಾ ಸಾಹಿತ್ಯವೆಲ್ಲವು ಸೇರುತ್ತದೆ. ಇದನ್ನು ಕಲೆ ಹಾಕಿ ಹೊಸದಾಗಿ ಬರೆದು ವ್ಯವಸ್ಥಿತ ರೀತಿಯಿಂದ ಅಚ್ಚು ಹಾಕಿಸುವದು ಹೊಸ ಕತೆಗಳನ್ನು ಬರೆಯುವುದಕ್ಕಿಂತ ಹೆಚ್ಚು ಅಗತ್ಯವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕನ್ನಡ ಗಾದೆಗಳನ್ನು ಸಹ ಇದೇ ರೀತಿಯಲ್ಲಿ ಸಂಗ್ರಹಿಸಿ ಅವುಗಳನ್ನು ವಿಷಯಾನುಸಾರ ವರ್ಗೀಕರಿಸಿ ಅವುಗಳಲ್ಲಿ ದೊರೆಯುವ ಕನ್ನಡ ಸಂಸ್ಕೃತಿಯನ್ನು ಬಯಲಿಗೆಳೆದು ಹೊಸ ರೀತಿಯಲ್ಲಿ ಅವುಗಳನ್ನು ಪ್ರಸಿದ್ಧಿಸುವುದು ಅವಶ್ಯವಾಗಿದೆ. ಈ ವಿಷಯದಲ್ಲಿ ಬಿಶಪ್ ಟ್ರೆಂಚರಿಂದ ರಚಿತವಾದ (*Proverbs and their lessons*) ಎಂಬ ಗ್ರಂಥವನ್ನು ಆದರ್ಶವಾಗಿ ಇಟ್ಟುಕೊಳ್ಳಬಹುದು. ಕನ್ನಡ ಜನಪದ ಸಾಹಿತ್ಯವನ್ನು ಭಾಷಾ ದೃಷ್ಟಿಯಿಂದಲೂ ಹೊಸದಾಗಿ ಅಭ್ಯಸಿಸುವುದು ಅಗತ್ಯ. ಅಚ್ಚಗನ್ನಡದ ಕೆಚ್ಚು, ಜನಪದ ಸಾಹಿತ್ಯದಲ್ಲಿ ಹೇರಳವಾಗಿರುವುದರಿಂದ ಈತರದ ಕನ್ನಡವೆ ಇನ್ನು ಮುಂದೆ ಬಳಕೆಯಲ್ಲಿ ಬರಬೇಕಾಗಿದೆ. ಅಚ್ಚಗನ್ನಡದ ಪ್ರತಿಯೊಂದು ನುಡಿಗೂ ಅದರದೊಂದು ಆತ್ಮಕತೆ ಇದೆ ಎಂಬುವದನ್ನು ನಾವು ಮರೆಯಬಾರದು. ಇರುವೆ, ಬಾಳೆ, ಅಳಿಯ ಮುಂತಾದಶಬ್ದಗಳು ಇದಕ್ಕೆ ಉತ್ತಮವಾದ ದೃಷ್ಟಾಂತಗಳಾಗಿವೆ. ಹೀಗೆ ನುಡಿಗಳ ಮೂಲ, ಅವುಗಳ ಭಾವ, ವಿಶಾಲ ಅರ್ಥ ಇವುಗಳನ್ನು ತಿಳಿದು ಬಳಸುವವರು ವಿರಳ. ಇವುಗಳ ಮೂಲದಲ್ಲಿ ಅಡಗಿರುವ ಅರ್ಥ-ಮಾಧುರ್ಯವನ್ನರಿತುಕೊಂಡರೆ ನಮ್ಮ ಕವನಗಾರರು ಇಂತಹ ಒಂದೊಂದು ಶಬ್ದಕ್ಕೂ ಒಂದೊಂದು ಕವನವನ್ನು ಕಟ್ಟುವರು. ಇದಲ್ಲದೆ ಪರ್ಯಾಯ ಶಬ್ದಗಳಲ್ಲಿರುವ ಸೂಕ್ಷ್ಮವಾದ ಅರ್ಥಭೇದಗಳನ್ನು ವಿಂಗಡ ವಿಂಗಡವಾಗಿ ಬಿಡಿಸಿ ಪ್ರಮಾಣಗಳೊಡನೆ ಅವುಗಳನ್ನು ವಿವರಿಸುವದೊಂದು ಗ್ರಂಥವು ಅವಶ್ಯವಾಗಿ ಬೇಕಾಗಿದೆ. ಇಂತಹ ಗ್ರಂಥವು ಇದ್ದರೆ ಯಾವ ಶಬ್ದವನ್ನು ಯಾವ ಸ್ಥಳದಲ್ಲಿ ಯಾವ ಅರ್ಥದಲ್ಲಿ ಬಳಸಬೇಕೆಂದು

ಗೊತ್ತಾಗುವದು. ಇದರಿಂದ ಕನ್ನಡ ಸೌಂದರ್ಯಸೂಕ್ಷ್ಮತೆಗಳು ಬೆಳೆಯುವುವು. ಉದಾಹರಣೆಗಾಗಿ ಕೆಲವು ಪರ್ಯಾಯ ಶಬ್ದಗಳು—ಉಡು, ತೊಡು, ಗಿಡ, ಮರ, ಕೀಳು, ಹರಿ, ಆಡು, ಹೇಳು, ಅನ್ನು ಮುಂತಾದವುಗಳು ಪರ್ಯಾಯ ಕೋಶದ ಈ ಕಾರ್ಯವನ್ನು (*Crab's Synonyms*) ಎಂಬ ಇಂಗ್ಲಿಷ್ ಗ್ರಂಥದ ಮಾದರಿಯನ್ನನು ಸರಿಸಿ ಮಾಡಬಹುದು. ಇದರಂತೆಯೇ ಜನಪದ ಸಾಹಿತ್ಯ ಸರೋವರದಲ್ಲಿ ನಾನಾ ವರ್ಣದ ಕಮಲಪುಷ್ಪಗಳಂತೆ ನುಡಿಗಟ್ಟುಗಳು ಬೆಳೆದಿವೆ. ಇವುಗಳನ್ನು ಎತ್ತಿಕೊಂಡು ನಾವು ಇಂದಿನ ಜನಪದವನ್ನು ಸಿಂಗರಿಸಬೇಕಾಗಿದೆ. ಹಾಸುಹೊಕ್ಕಾಗಿ ಹೆಣೆದ ಈತರದ ನುಡಿಗಟ್ಟುಗಳು (Idioms) ಜನಪದ ಸಾಹಿತ್ಯದಲ್ಲಿ ತಕ್ಕಷ್ಟು ದೊರೆಯುತ್ತಿದ್ದಾಗ್ಯೂ ಇನ್ನೂ ಗ್ರಂಥಸ್ಥವಾಗದೆ ಇರುವ ಸಾವಿರಾರು ನುಡಿಗಳು ಜನರ ಬಾಯಲ್ಲಿವೆ. ಉದಾ :—ಸಾರು ಇಳಿಯಿತು. ನೀರು ಸಾಯುತ್ತದೆ. ಮಾತು ಉಗುಳು ಹಾಕಿ ದಾಟು. ಮೂಗು ಮೇಲೆಮಾಡಿಕೊಂಡು ನಡೆ. ಕಣ್ಣಿಗೆ ಮಣ್ಣು ಹಾಕು. ಉಂಡ ಮನೆಗೆರಡು ಬಗೆ. ತಲೆ ಸೆರಗು ತೆಗೆದು ನಿಲ್ಲು. ತಪ್ಪು ಹೊಟ್ಟೆಯೊಳಗೆ ಹಾಕಿಕೊ. ನನ್ನ ಕೈಯಿಂದ ನಡೆಯುವದಾಗದು. ಬಾಯಿ ಕಟ್ಟು. ಮೂಗು ಮುರಿ. ಕೈ ತೋರಿಸು. ಬೆನ್ನು ಕೊಡು. ಇಕ್ಕರಿಸು. ಕುಕ್ಕರಿಸು. ಮುಂತಾದ ನಾನಾ ತರದ ನುಡಿಗಟ್ಟುಗಳಲ್ಲಿ ಕನ್ನಡತನವು ತುಂಬಿ ತುಳುಕುವದಿಲ್ಲವೇ ? ಇಂದಿನ ಕಾದಂಬರಿಕಾರರು, ಕವನಕಾರರು, ಕತೆಗಾರರು ತಿರುಳುಗನ್ನಡದ ನುಡಿಗಳನ್ನು ಹೆಚ್ಚು ಹೆಚ್ಚಾಗಿ ಬಳಕೆಯಲ್ಲಿ ತರುವದಕ್ಕೆ ಧಾವತಿಪಡುತ್ತಿದ್ದರೂ ನುಡಿಗಟ್ಟುಗಳನ್ನು ಮಾತ್ರ ಅಷ್ಟು ವಿಪುಲವಾಗಿ ಬಳಸಿಕೊಳ್ಳುತ್ತಿಲ್ಲ. ಆದುದರಿಂದ ಇನ್ನು ಮುಂದಿನ ಸಾಹಿತ್ಯದ ನಡುವು ನುಡಿಗಟ್ಟುಗಳಿಂದ ಕಟ್ಟಲ್ಪಟ್ಟರೆ ಅದಕ್ಕೆ ಹೊಸ ಜೀವಕಳೆಯುಂಟಾಗುವದರಲ್ಲಿ ಸಂದೇಹವಿಲ್ಲ. ಹಿಂದೆ ಆಲೂರ ವೆಂಕಟರಾಯರು, ಗಳಗನಾಥರು ಪ್ರಾರಂಭಮಾಡಿದ ನುಡಿಗಟ್ಟುಗಳ ಶೈಲಿಯು ಅಲ್ಲಿಗೆ ನಿಂತಂತೆ ಕಾಣುತ್ತದೆ. ನುಡಿಗಟ್ಟುಗಳ ಸಾಹಿತ್ಯವನ್ನು ಸಿದ್ಧಗೊಳಿಸುವದರಲ್ಲಿ ಆಂಗ್ಲದಲ್ಲಿರುವ (*Macmordie's Idioms*) ಎಂಬ ಗ್ರಂಥವನ್ನು ಆದರ್ಶವಾಗಿಟ್ಟುಕೊಳ್ಳುವದೊಳಿತು.

ಭಾಷಾ ಶಾಸ್ತ್ರದಲ್ಲಿ ಕನ್ನಡನಾಡ ನಿರುಕ್ತ ದೃಷ್ಟಿಯಿಂದ ಶ್ರೀ ಶಂ. ಬಾ. ಜೋಶಿಯವರು ಮಾಡುತ್ತಿರುವ ಕಾರ್ಯವು ವಿಚಾರಾರ್ಹವಾಗಿದೆ. ಈ ದೃಷ್ಟಿಯಿಂದ ಕನ್ನಡದ ಜೀವಾಳವನ್ನು ಅರಿತುಕೊಂಡರೆ ಈಗಿನ ವ್ಯಾಕರಣದಲ್ಲಿರುವ ತತ್ಸಮ, ತದ್ಭವಗಳ ಪಟ್ಟಿಯನ್ನೇ ಬದಲುಮಾಡಬೇಕಾಗುತ್ತದೆ. ಹಿಂದಿನ ವೈಯಾಕರಣಿಗಳು ಸ್ವರ ನಿರುಕ್ತ ದ್ರಾವಿಡ ಭಾಷಾ ಶಬ್ದಶಾಸ್ತ್ರ ಮುಂತಾದವುಗಳ ಕಡೆಗೆ ವಿಶೇಷ ಲಕ್ಷ್ಯ ಕೊಡದೆ ಸಕಲ ಕನ್ನಡ ಶಬ್ದಗಳು ಸಂಸ್ಕೃತದಿಂದಲೇ ಬಂದವುಗಳೆಂದು ತೋರಿಸಲು

ಯತ್ನಿಸಿದ್ದರಿಂದ ಈ ತರದ ದೋಷವು ಉಂಟಾಯಿತು. ಇನ್ನು ಮುಂದೆ ಕನ್ನಡ ಶಬ್ದ ಶಾಸ್ತ್ರವು ಶಾಸ್ತ್ರೀಯವಾದ ಹೊಸ ಪದ್ಧತಿಯಿಂದ ತನ್ನ ಶಬ್ದ ಸಿದ್ಧಿಯನ್ನುಂಟು ಮಾಡಿಕೊಳ್ಳಬೇಕಾಗಿದೆ.

ಇದುವರೆಗೆ ವಿವಿಧ ದೃಷ್ಟಿಗಳಿಂದ ಸಂಕ್ಷೇಪವಾಗಿ ಹೇಳಿದ ಕನ್ನಡ ಜನಪದ ಸಾಹಿತ್ಯದ ಕಾರ್ಯವನ್ನು ನಾಲ್ಕಾರು ಜನ ಕೂಡಿ ಒಂದೊಂದು ಕಾರ್ಯವನ್ನು ಕೈಕೊಂಡರೆ ಸಂಸ್ಕೃತದಿಂದ ಭಿನ್ನವಾದ ಒಂದು ವಿಶಿಷ್ಟ ಸಂಸ್ಕೃತಿಯು ಕನ್ನಡಕ್ಕಿದೆ ಎಂಬ ಮಾತು ಸರ್ವರಿಗೆ ಕೈಯೊಳಗಿನ ಕನ್ನಡಿಯಂತಾಗುವದು. ಕನ್ನಡದಲ್ಲಿ ಮಹಾ ಪ್ರಾಣಗಳಿಲ್ಲ. ಇದು ಹೆಣ್ಣಕ್ಕರಗಳ ಭಾಷೆ. ಆದುದರಿಂದ ಇದು ಮೃದುವೂ ಕೋಮಲವೂ ಆಗಿದೆ. ಭಾವ ಪ್ರಧಾನವಾದ ದ್ರಾವಿಡ ಸಂಸ್ಕೃತಿಯಲ್ಲಿ ಇದು ಜನ್ಮವೆತ್ತಿರುವುದರಿಂದ ಇದರ ಭಾವವು ಕಾವ್ಯವಾಯಿತು. ಇದರ ಭಾಷೆಯೂ ಕಾವ್ಯವಾಯಿತು. ಕನ್ನಡ ಜನಪದ ಸಾಹಿತ್ಯವೆಲ್ಲ ಹಾಡುಗಬ್ಬವಾಯಿತು. ಕನ್ನಡವನ್ನು ಚೆನ್ನಾಗಿ ಅಭ್ಯಸಿಸಿದ (E. P. Rice) ಎಂಬ ವಿಲಾಯಿತಿಯ ವಿದ್ವಾಂಸರು ಕನ್ನಡ ಸರಸ್ವತಿಯ ವೀಣೆಯ ವಾಣಿಗೆ ಕಾವ್ಯವಾಣಿ ಎಂದೇ ಕರೆದಿದ್ದಾರೆ.

ಕನ್ನಡಕ್ಕೆ ಆರ್ಯ ಸಂಸ್ಕೃತಿಯನ್ನುಳಿದು ಬೇರೆ ಸಂಸ್ಕೃತಿ ಇಲ್ಲವೆಂಬ ಕೂಗು ಇಂದು ಅಲ್ಲಲ್ಲಿ ಕೇಳಬರುತ್ತದೆ. ನಾನು ಈ ಮೊದಲೇ ಹೇಳಿದಂತೆ ಆರ್ಯದ್ರಾವಿಡ ಸಂಸ್ಕೃತಿಗಳು ನೀರು ಎಣ್ಣೆಗಳಂತೆ ಬೆರೆತುಕೊಂಡಿವೆ ಎಂದೂ ಸಾಕಷ್ಟು ಶ್ರಮಪಟ್ಟರೆ ಅವುಗಳನ್ನು ವಿವೇಕಿಸಿ ತಿಳಿಯಬಹುದೆಂದೂ ಮತ್ತೊಮ್ಮೆ ಕಂಠೋಕ್ತವಾಗಿ ಹೇಳುತ್ತೇನೆ. ಭರತಖಂಡವೆಂಬ ದೇವಾಲಯದ ಶಾಂತ ವಾತಾವರಣದಲ್ಲಿ ದ್ರಾವಿಡ ಆರ್ಯ ಸಂಸ್ಕೃತಿಗಳು ಹುಟ್ಟಿ ಬೆಳೆದಿವೆ. ಭಕ್ತಿ, ಮೌನ, ಧ್ಯಾನ, ಯೋಗ, ಆಸ್ತಿಕ ಭಾವ, ತತ್ವ ವಿಚಾರ ಮೊದಲಾದುವುಗಳೇ ಇದರ ಫಲಗಳು. ಹೀಗಿದ್ದರೂ ಬುದ್ಧಿಯ ಬೇರುಗಳು ವಿಶೇಷವಾಗಿ ಆರ್ಯಭೂಮಿಯನ್ನು ಭಕ್ತಿಯ ಬೇರುಗಳು ದ್ರಾವಿಡ ಭೂಮಿಯನ್ನು ಆಶ್ರಯಿಸಿಕೊಂಡಿವೆ. ಕನ್ನಡ ಸಂಸ್ಕೃತಿ ಎಂಬ ವೃಕ್ಷದ ಕೊಂಬೆಗಳು ಆರ್ಯ ಸಂಸ್ಕೃತಿಯ ಬೆಳಕು, ಹವೆಗಳನ್ನುಂಡು ಆರ್ಯಾಕಾಶದಲ್ಲಿ ವಿಸ್ತಾರವಾಗಿ ಬೆಳೆದಿದ್ದರೂ ಅದರ ಬೇರುಗಳು ಭಕ್ತಿ ವಿಶಿಷ್ಟವಾದ ದ್ರಾವಿಡ ಸಂಸ್ಕೃತಿಯಲ್ಲಿಯೇ ನೆಲೆಗೊಂಡಿವೆ. ಇಲ್ಲಿಂದಲೇ ಅದರ ಜೀವಾಳದ ರಸವು ಹರಿಯುತ್ತದೆ. ಹಿಂದೆ ಹೇಳಿದ ಜನಪದ ಸಾಹಿತ್ಯದ ಹಾಡುಗಬ್ಬಗಳೆಲ್ಲವೂ ಕನ್ನಡ ಸಂಸ್ಕೃತಿಯ ತನಿವಣ್ಣುಗಳೇ. ಕನ್ನಡಿಗರೆಲ್ಲರೂ ಇವುಗಳನ್ನು ಹೊಟ್ಟೆತುಂಬ ತಿಂದು ತೇಗಿ ತೃಪ್ತರಾಗಬೇಕೆಂಬುದೇ ನನ್ನ ಹೆಬ್ಬಯಕೆ.

ಚೆ. ಉತ್ತಂಗಿ.

---

೪. ಸಮಾಜದಲ್ಲಿ ಸ್ತ್ರೀಯರ ಸ್ಥಾನ

ಈಗ ಕಾಲು ಶತಮಾನದಲ್ಲಿ, ಕನ್ನಡ ನಾಡಿನ, ಅದರಲ್ಲೂ ಉತ್ತಮ ಮಧ್ಯಮ ತರಗತಿಯ, ಸ್ತ್ರೀ ಬಹಳ ಬದಲಾವಣೆ ಹೊಂದಿದಾಳೆ. ಹೊಂದುತಲಿದಾಳೆ. ಪ್ರಬುದ್ಧ ಕರ್ಣಾಟಕದ ಮೊದಲ ಸಂಚಿಕೆಗಳಲ್ಲಿ ಚಿತ್ರಿತವಾಗಿರುವ ಧರ್ಮಾವರಂ ದೊಡ್ಡಂಚಿನ ಸೀರೆಯ, ಹಾರ್ಮೋನಿಯಂ ನುಡಿಸುವ, ಮದುವೆಯ ಮಾತು ಕಿವಿಗೆ ತಗುಲಿದರೆ ಸಾಕು ನಾಚಿಕೆಗೆ ಕೆನ್ನೆ ಕೆಂಪಾಗುವ, ಹಾಗೂ ಅದು ಒಂದೆರಡು ದಿನ ತಡವಾದರೆ ಕಣ್ಣೀರು ಮಿಡಿದು ಕಾತರಿಸುವ, ವರನೆದುರು ಕಾಲ್ಬೆರಳಿನಿಂದ ನೆಲ ಕೆರೆದು ನಿಲ್ಲುವ ಶಾರದ ಕಮಲ ಮೀನಾಕ್ಷಿಯರೆಲ್ಲಿ? ಈಗಿನವರೆಲ್ಲಿ? ಹಿಂದಿನ ಹುಡುಗಿಯರು ಲೋಯರ್ ಸೆಕೆಂಡರಿಯವರೆಗೆ ಓದುವುದು ಸಾಕುಬೇಕಾಗುತ್ತಿತ್ತು. ಅದಕ್ಕೆ ತಂದೆ ತಾಯಿಗಳ ಅಕ್ಕರೆ, ಸರ್ಕಾರದವರ ಪ್ರೋತ್ಸಾಹ, ಮದುವೆಯಾಗಿದ್ದರೆ ಅತ್ತೆ ಮನೆ ಯವರ ಸಮ್ಮತಿ, ಇಷ್ಟರ ಹವಣಿಕೆಯ ಅಗತ್ಯವಿತ್ತು. ಮುಂದೆ ತನ್ನ ಮನೆಯ ಅಧಿಕಾರ ಸೂತ್ರವನ್ನು ವಹಿಸಿಕೊಂಡರೆ ತನ್ನ ಗಂಡ, ಅತ್ತೆಮಾವಂದಿರು, ಮಕ್ಕಳು, ಆಳು ಕಾಳು, ವಾರ ಭಿಕ್ಷಾನ್ನದ ಹುಡುಗರು, ಸಂಸಾರದ ಆಗು ಹೋಗು ಇಷ್ಟನ್ನು ನೋಡಿಕೊಂಡರೆ ಕರ್ತವ್ಯ ಪೂರ್ತಿ ನೆರವೇರಿಸಿದಂತಾಯ್ತು. ಇದು ಸುಖಮಯ ದಾಂಪತ್ಯದ ಮಾತು. ಎಡವಟ್ಟು ಕೂಟದಲ್ಲಿ ಇಷ್ಟವಿಲ್ಲದವನ ಕೈ ಹಿಡಿದು ಕೊನೆಯುಸಿರಿನ ತನಕ ಬಾಳನ್ನು ನೀಗಿಸಿಕೊಂಡು ಕಾಲ ಕಳೆಯುತ್ತಿದ್ದ ಚಿರದುಃಖಿನಿ; ಇಲ್ಲವಾದರೆ ಸಾಧು ಪುರುಷನ ಜೀವನವನ್ನೊಡೆದು ಹಾಳುಮಾಡುತ್ತಿದ್ದ ವಿದ್ಯಾವಂತನ ಗೋರ್ಕಲ್ಲು ಪತ್ನಿ. ಹೆಂಗಸರ ಕಚ್ಚಾಟದಲ್ಲಿ ಮನೆ ಯಜಮಾನನನ್ನು ಬಲಿಕೊಟ್ಟ ಅಜ್ಞಾನಿ; ಇಷ್ಟರಲ್ಲೇ ಅವಳ ಜೀವನ ವಿವಿಧತೆ ಮುಗಿದುಹೋಗುತ್ತಿತ್ತು.

ಈಗ! ಅಡಿಗೆ ಮನೆಯಲ್ಲಿ ಅವಿತುಕೊಂಡೋ, ನಡುಮನೆಯಲ್ಲಿ ಆಳಿಕೊಂಡೋ ಇದ್ದ ನಾರಿ ಹೊರಗೆ ಬಂದು ಬದುಕಿನ ಸೆಳವಿನಲ್ಲಿ ಸಿಕ್ಕಿಬಿದ್ದಿದಾಳೆ. ಹೊಸ ಪರಿಸ್ಥಿತಿಯ ಪರಿಣಾಮವಾಗಿ ಬದುಕಿನ ಸೆಳವೇ ಅವಳ ಮನೆಯೊಳಕ್ಕೂ ನುಗ್ಗಿಬಿಟ್ಟದೆ ಅಂದರೂ ಸಮನೇ. ಓದದಿದ್ದರೆ ವರನು ಸಿಕ್ಕುವಂತಿಲ್ಲ. ಓದಿಗೆ ತಕ್ಕಮಟ್ಟಿನ ರೂಪ, ರೂಪಕ್ಕಿಂತ ಮಿಗಿಲಾಗಿ ಅಂದಚೆಂದಗಳು, ಅಂತಸ್ತು ಇಷ್ಟೂ ಕೂಡಿದರೇ ಒಳ್ಳೆಯ ಸಂಬಂಧ ಸಿಕ್ಕುವ ಸಂಭವ ಹೆಚ್ಚಾಗಿದೆ ಅಂದಮೇಲೆ—ಹೈ ಸ್ಕೂಲು ದಾಟದ ಹುಡುಗಿಯರು ವಿರಳ. ಅಲ್ಲಿಯವರೆಗೆ ಮದುವೆಯಾಗದಿರುವವರೇ ಬಹಳ

ಮಂದಿ. ತಮ್ಮ ಸ್ವಾಭಾವಿಕ ಚೆಲುವನ್ನು ಆದಷ್ಟು ಆಕರ್ಷಣೀಯವಾಗಿ ಮಾಡಿಕೊಳ್ಳುವುದು ಅವರ ಗುರಿ. ಕಾದಂಬರಿಗಳನ್ನೋದಿ ಚಲನಚಿತ್ರಗಳನ್ನು ನೋಡಿ ತಿಳಿದ ಅವರಿಗೆ ತಮ್ಮ ಚೆಲುವು, ಅದರ ಮಹತ್ವ ಎರಡೂ ಮಂದಟ್ಟಾಗಿವೆ; ಅವರು ಹಿಂದಿನ ಮುಗ್ಧೆಯರೇನಲ್ಲ. ಮದುವೆ ನಾಲ್ಕು ಕಾಲ ತಡವಾಯಿತೆಂದರೆ ಕೊರಗುವರೂ ಅಲ್ಲ. ಆದರೆ ಸರಿಯಾದವನನ್ನು—ತಮ್ಮ ಯೋಗ್ಯತೆಗೆ ಸರಿಯಾದವನನ್ನು ಆಗಬೇಕು. ಇಲ್ಲವಾದರೆ ಒಳಿತು. ಹಾಗೆಯೇ ಇರಬಲ್ಲೆ ಎಂಬ ಸ್ಥೈರ್ಯ ಅವರಲ್ಲಿ ಮೂಡಿ ಬರುತ್ತಿದೆ. ಹಾಗೆಯೇ ಉಳಿಯುವವರೂ ಉಂಟು. ಆದರೂ ಸದ್ಯದಲ್ಲಿ ತಡವಾಗಿಯಾದರೂ ಮದುವೆಯಾಗುವವರೇ ಹೆಚ್ಚಿನ ಸಂಖ್ಯೆತಾನೆ. ಅವರ ದಾಂಪತ್ಯಜೀವನದಲ್ಲಿ ಸಹ ಅನೇಕ ಬದಲಾವಣೆಗಳಾಗಿವೆ. ಒಟ್ಟು ಸಂಸಾರ ಅವರಿಗೆ ಹೆಚ್ಚು ಹೆಚ್ಚು ಸಹನಾತೀತವಾಗಿ ತೋರಹತ್ತಿದೆ. ಮುನ್ನಿನ ಪಾತಿವ್ರತ್ಯದ ಅರ್ಥ ಈಗ ಸಹಜವಾಗಿ ತೋರುತ್ತಿಲ್ಲ. ಸ್ವಾರ್ಥತ್ಯಾಗ ತುತ್ತತುದಿಯವರೆಗೆ ಮಾಡಿ, ಅವನು ಹೊಡೆದರೂ ಸರಿ ಬಡಿದರೂ ಸರಿ ಮರುಮಾತೆತ್ತದೆ ದುಡಿದು ಎಂಜಲು ತಿಂದುಕೊಂಡಿದ್ದು, ಹತ್ತೆಂಟು ಮಕ್ಕಳನ್ನು ಗೊಣಗದೆ ಸಾಕಿಕೊಂಡು ಹೋಗುತ್ತಿದ್ದ ಆ ಬಗೆಯ ಹೆಂಗಸರು ಅಪರೂಪವಾಗುತ್ತಿದಾರೆ. ಸಾಧ್ಯವಾದಷ್ಟು ಅವನ ಅನುಕೂಲ ನೋಡಿಕೊಳ್ಳುತ್ತಾಳೆ. ಮಧ್ಯೆಮಧ್ಯೆ ಒಂದೊಂದುವೇಳೆ 'ಲಲಿತ'ಳಂತೆ ಚೆರುಪನ್ನು ತಾನೇ ಮುಕ್ಕಾಲುವೀಸೆ ತಿಂದು ಗಂಡನಿಗೆ ಉಳಿದುದನ್ನು ತಿಗೆದಿಡಲೋ ಬೇಡವೋ ಎಂದು ಅನುಮಾನಿಸುವುದೂ ಉಂಟು. ಗಂಡನಮೇಲೆ ಗೃಹಿಣಿ ಹೆಚ್ಚು ಹತೋಟಿಯನ್ನಿಡಲು ಹವಣಿಸುತ್ತಾಳೆ. ಒಂದೊಂದುವೇಳೆ 'ಅಮ್ಮಾವ್ರ ಗಂಡ'ದಲ್ಲಿದ್ದಂತೆ ಅವನನ್ನೇ ತೊಟ್ಟಿಲ ತೂಗಲು ಬಿಡುವುದೂ ಉಂಟು. ರೋಸಿದರೆ ಬಿರುನುಡಿಗಳನ್ನಾಡಲು, ತೌರಿಗೆ ಹೋಗುವೆನೆಂದು ಹೆದರಿಸಲು ಹಿಂದೆಗೆಯುವುದಿಲ್ಲ. ಈ ಬಗೆಯ ಚರ್ಯೆಯು "ಇಂದಿನ ಸ್ತ್ರೀ ಸ್ವಾರ್ಥಪರಳು, ಅವಳಿಂದ ಅವಳ ಮನೆ ಮಂದಿ ಮಕ್ಕಳಿಗೆ ಪ್ರಯೋಜನವೂ ಇಲ್ಲ, ಸುಖವೂ ಇಲ್ಲ" ಎಂಬ ಅಪವಾದ ಹಣೆಗಂಟುತ್ತಿದೆ. "ಗಂಡಸರಿಗಿಂತ ನಾವೇನು ಕಡಮೆ, ಇದುವರೆಗೆ ಅವರ ತೊತ್ತಾಗಿದ್ದೆವು, ಇನ್ನು ಮುಂದೆ ಕಟ್ಟುಗಳನ್ನು ಕಳಚಿ ರಾಣಿಯರಾಗೋಣ ಎಂದು ಸ್ತ್ರೀ ಕಂಠದಿಂದ ಕೂಗೇಳುತ್ತಿದೆ—ಬೇರೆ ಬೇರೆ ಕ್ಷೇತ್ರಗಳಲ್ಲಿ ಹೊಸದಾದ ಈ ತತ್ವದ ಪ್ರಭಾವವನ್ನೂ, ಪರಿಣಾಮವನ್ನೂ ಪರಿಶೀಲಿಸಿದರೆ ಯಾವುದು ಸರಿ, ಯಾವುದು ತಪ್ಪಿರಬಹುದು ಎಂಬುದರ ಅರಿವು ನಮಗಾದೀತು.

ವಿದ್ಯಾಕ್ಷೇತ್ರದಲ್ಲಿ

ನಮ್ಮ ಹೆಂಗಸರಲ್ಲಿ ಕಾರಣಾಂತರದಿಂದ ವಿದ್ಯೆ ಹಿಂದುಳಿಯಿತು; (ಅಂದರೆ ಸಂಸ್ಕೃತಿಯಳಿಸಿಹೋಗಿರಲಿಲ್ಲ). ಕಾಲಕ್ಕೆ ತಕ್ಕಂತೆ ಈಗ ವಿದ್ಯೆಯ ಆವಶ್ಯಕತೆಯು

ಅತ್ಯಗತ್ಯವಾಗಿದೆ. ಆದರೆ ಯಾವ ಬಗೆಯ ಶಿಕ್ಷಣ ಯಾವ ರೀತಿಯಲ್ಲಿ ಕೊಡಿಸಬೇಕು? ಎಂಬುದೊಂದು ಸಮಸ್ಯೆ—ಬಗೆ ಹರಿಯದ ಸಮಸ್ಯೆ. ಒತ್ತಾಯದ ಶಿಕ್ಷಣ ಆವಶ್ಯಕ. ಆದರೆ ಅದು ಬರುವ ಸುದಿನ ಇನ್ನೂ ದೂರದಲ್ಲಿದೆ; ಕೊಡುತ್ತಿರುವ ಶಿಕ್ಷಣವೂ ವರ್ಧಾ ಯೋಜನೆಯ ಮಾದರಿಯಂತೆ ಕೈಕೆಲಸದ ಮೂಲಕವಾಗಿದ್ದು ಜೀವನದ ಪಡಿನೆಳಲಾಗಿರಬೇಕೆ? ಅಥವಾ ಈಗಿನದರಂತೆ ಬಾಳಿನಿಂದ ದೂರವಿದ್ದು ಬರಿಯ ವಿದ್ಯಾಬೋಧಕವಾಗಿರಬೇಕೆ? ಮುಂದೆ ಮಾಧ್ಯಮಿಕ ತರಗತಿಗಳಲ್ಲಿ ಯಾವ ವಿಷಯಗಳನ್ನು ಸೇರಿಸಿ ಕೊಡಬೇಕು? ಈಚೆಗೆ ಅದು ಪಟ್ಟಣಗಳಲ್ಲಿ ತಮ್ಮ ಹುಡುಗಿಯರನ್ನು ಆದಷ್ಟು ಜಾಗ್ರತೆಯಾಗಿ, ಆದಷ್ಟು ವಿಷಯಗಳಲ್ಲಿ ತರಪೇತು ಮಾಡಬೇಕೆಂಬ ಆಕಾಂಕ್ಷೆ ತಂದೆ ತಾಯಿಯರಲ್ಲಿ ಹೆಚ್ಚುತ್ತಿದೆ. ಲಂಗವನ್ನುಡುವ ವಯಸ್ಸಿನಲ್ಲೇ ಹೈ ಸ್ಕೂಲಿನಲ್ಲಿರಬೇಕು ಎಂಬುದರ ಲವಲವಿಕೆ ಇಷ್ಟೇ ಅಲ್ಲ, ಹಲವಾರು ಹುಡುಗಿಯರು ಮಾಧ್ಯಮಿಕಾವಸ್ಥೆಯಲ್ಲಿ ಆರೋಗ್ಯದ ಬದಲು ಹಿಂದಿಯನ್ನೂ, ಹೈಸ್ಕೂಲಾರಂಭದಿಂದ ಸಂಸ್ಕೃತವನ್ನೂ ತೆಗೆದುಕೊಂಡು ಕಾಲೇಜಿಗೆ ಬರುವ ಹೊತ್ತಿಗೆ ನಾಲ್ಕು ಭಾಷೆಯಲ್ಲಿ ವಿಶಾರದೆ(!)ಯರಾಗಿರುತ್ತಾರೆ. ಇದರಮೇಲೆ ಮನೆಯಲ್ಲಿ ಸಂಗೀತ ಪಾಠವೂ ಹೊಂದಿಕೊಳ್ಳುತ್ತದೆ. ಇನ್ನು ಅವರ ದೇಹದಾರ್ಢ್ಯದ ಬಗ್ಗೆ ಹೇಳುವದೇನು? ಯಾವ ಕಾಲದಲ್ಲಿ ಅವರ ರಕ್ತಪುಷ್ಟಿ ಕಡಮೆಯಿದ್ದು ಕೆಲವಾರು ತಿಂಗಳುಗಳ ವಿಶ್ರಾಂತಿಯು ಅಗತ್ಯವೋ, ಯಾವ ಮೂರು ದಿನಗಳಲ್ಲಿ ಅವರು ಮಲಗಿದ್ದು ಕಾಲ ಕಳೆಯಬೇಕೋ ಅದೇ ಕಾಲದಲ್ಲೂ ಸಹ ಅವರ ಚಟುವಟಿಕೆಗಳನ್ನು ಒತ್ತಾಯವಾಗಿ ದಿನದಂತೆ ನಡೆಸಬೇಕಾಗಿ ಬಂದಲ್ಲಿ, ಆ ನಿರ್ಬಂಧ ಅವರ ದೇಹದಾರ್ಢ್ಯ ಮಾನಸಿಕ ಹಿತ ಎರಡರ ಮೇಲೂ ಕೆಟ್ಟ ಪರಿಣಾಮ ಮಾಡಬಹುದಲ್ಲವೆ? ಇದರಿಂದಲೇ ಇರಬಹುದು, ಹೈಸ್ಕೂಲಿನ ಮುಕ್ಕಾಲುಪಾಲು ಹುಡುಗಿಯರು ಉದ್ದ ಗಾತ್ರ ಎರಡರಲ್ಲೂ ಕುಗ್ಗಿರುವುದು; ಸಾಕಷ್ಟು ತೇಜಸ್ವಿನಿಯರಾಗಿಲ್ಲದಿರುವುದು.

ಕಾಲೇಜು ವಿದ್ಯಾಭ್ಯಾಸದ ವಿಷಯವಾಗಿಯೂ ಬಹುಮುಖವಾದ ಅಭಿಪ್ರಾಯವಿದೆ. ಸಹವಿದ್ಯಾಭ್ಯಾಸವು ಕೂಡದೆಂದೂ, ಅದರ ಪರಿಣಾಮವಾಗಿ ಹುಡುಗಿಯರು ತಮ್ಮ ನೈಸರ್ಗಿಕ ಸೌಂದರ್ಯ ಮತ್ತು ಆಕರ್ಷಣ ಶಕ್ತಿ ಎರಡನ್ನೂ ಕಳೆದುಕೊಳ್ಳುವರೆಂದೂ, ಮುಂದೆ (ಮದುವೆ ಮನೆಯೇ ಸದ್ಯದಲ್ಲಿ ಅವರಿಗೆ ಗುರಿಯಾಗಿರುವುದರಿಂದ) ಮನೆಯನ್ನು ಅನುಕೂಲ, ಹಿತ, ಸೌಖ್ಯ ಸೊಬಗಿನ ನೆಲೆಯಾಗಿಡಲು ಅಸಮರ್ಥರಾಗುವರೆಂದೂ, ಪತ್ನೀತ್ವ ಮತ್ತು ತಾಯ್ತನದ ಹೊರೆಯನ್ನು ಸರಿಯಾಗಿ ನಿರ್ವಹಿಸಲಾರರೆಂದೂ ಕೆಲವು ಶಾಸ್ತ್ರಜ್ಞರು ಮನಶ್ಶಾಸ್ತ್ರತತ್ವಗಳ ಆಧಾರದ ಮೇಲೆ ಪ್ರತಿಪಾದಿಸಿ, ಅಂಕಿ ಅಂಶಗಳ ಮೂಲಕ ಸಮರ್ಥಿಸಿರುವರು. ಇವರ ಪ್ರಕಾರ Lady

Willingdon College ಮಾದರಿಯಲ್ಲಿ ಹೆಣ್ಣಿನ ಸ್ವಭಾವ ಅಭಿರುಚಿಗಳ ಬುನಾದಿಯ ಮೇಲೆ ಯೋಜಿಸಿರುವ ವಿದ್ಯಾಭ್ಯಾಸ ಕ್ರಮವು ಉಚಿತ; ಅಂದರೆ, ಲಲಿತಕಲೆಗಳು, ವಿವಿಧ ಮತಸಾರ ಸಂಗ್ರಹ, ತಾಯ್ತನದ ಕಲೆ, ಗೃಹಾಲಂಕಾರ ವಿಧಾನ, ಮನೆ ಯಾಡಳಿತ ಶಾಸ್ತ್ರ—Domestic Economy,—ಸಾಹಿತ್ಯ, ಚರಿತ್ರೆ ಇವುಗಳಿಗೆ ಹೆಚ್ಚಾದ ಪ್ರಾಮುಖ್ಯತೆ ಕೊಡಬೇಕು; ಅವುಗಳಲ್ಲೇ ಪ್ರಶಸ್ತಿ ದೊರಕಿಸಿಕೊಳ್ಳಬೇಕು. ವಿಶೇಷ ಸಂದರ್ಭ ಒದಗಿದ ಪಕ್ಷದಲ್ಲಿ ಅವರು ಇನ್ನೆರಡು ವರ್ಷಗಳ ಕಾಲ ಹೆಚ್ಚಿನ ವ್ಯಾಸಂಗ ನಡೆಸಿ ಗಂಡಸರ ಸರಿಸಮಾನತೆಯ ಪದವಿಯನ್ನು ಪಡೆಯಲು ಅವಕಾಶ ಕಲ್ಪಿಸಿಕೊಡಬೇಕು. ವಿಜ್ಞಾನ, ಗಣಿತ, ವೈದ್ಯಕೀಯ ಮೊದಲಾದ ಶಾಖೆಗಳ ಬಗ್ಗೆ ತೀವ್ರಾಸಕ್ತಿಯುಳ್ಳವರನ್ನು ಅದೇ ಮಾರ್ಗಕ್ಕೆ ಬಿಟ್ಟುಕೊಡಬೇಕು. ಇದು ಒಂದು ಪಂಗಡದ, ಮತ್ತು ನನ್ನ ಬುದ್ಧಿಗೆ ಬಹುಮಟ್ಟಿಗೆ ಉಚಿತವಾಗಿ ತೋರುವ ಅಭಿಪ್ರಾಯ.

ಸಹವಿದ್ಯಾಭ್ಯಾಸವೇ ಉಚಿತವೆಂದೂ ಅದರಿಂದ ಒಬ್ಬರನ್ನೊಬ್ಬರರಿಯಲು ಸಹ ಕಾರಿಯಾಗುವುದೆಂದೂ ಪ್ರತ್ಯೇಕ ವಿದ್ಯಾಭ್ಯಾಸವು ವಿಪರೀತದ ಖರ್ಚಿನ ಮೂಲವೂ ಹೌದೆಂದೂ ಇನ್ನು ಕೆಲವರ ಅಭಿಪ್ರಾಯ. ಈ ಘರ್ಷಣೆಯ ಸುಳಿಯ ಕೆಳಗೆ ವಿದ್ಯಾ ಭ್ಯಾಸವಂತೂ ಮುಂದುವರಿಯುತ್ತಿದೆ. ಇದೊಂದು ಶುಭ ಚಿಹ್ನೆಯೇ ಸರಿ. ಆದರೆ ವಿದ್ಯಾವತಿಯರಾದವರು ತಮ್ಮ ಅನಕ್ಷರಸ್ಥ ಸೋದರಿಯರ ಕಡೆ ಗಮನ ಕೊಡದಿರು ವುದು ಶೋಚನೀಯವಾದ ಸಂಗತಿ. ಸಂಬಳಕ್ಕೆ ತಕ್ಕಷ್ಟು ಹೊರತು ತಾವು ಕಲಿತು ದನ್ನು ಜನರಲ್ಲಿ ಪ್ರಸಾರ ಮಾಡದಿದ್ದರೆ, ಕಲಿತುದರ ಸಾರ್ಥಕತೆಯೇನಾಯ್ತು!

ಆರ್ಥಿಕ ಪ್ರಪಂಚದಲ್ಲಿ

ದಿನಕ್ಕೊಬ್ಬನ ಸರಾಸರಿ ಸಂಪಾದನೆ ಒಂದಾಣೆಯಷ್ಟಿರುವ ನಮ್ಮ ದೇಶದಲ್ಲಿ ಅನ್ನದ ಸಮಸ್ಯೆಯು ಅತ್ಯಂತ ಗುರುತರವಾದುದು. ನಾಡಿನ ಅನ್ನಕ್ಕೆ ಸಂಪತ್ತಿಗೆ ಕೊರತೆಯಿಲ್ಲ. ಆದರೆ ಆ ಅನ್ನದ, ಸಂಪತ್ತಿನ ಹಂಚಿಕೆ ಸಮನಾಗಿಲ್ಲ. ಈ ಅನ್ಯಾಯದ ಪರಿಣಾಮ ಅಷ್ಟಿಷ್ಟಲ್ಲ. ಏಕೆಂದರೆ ಪ್ರಜೆಗಳ ಆರೋಗ್ಯ, ನೈರ್ಮಲ್ಯ, ಮಾನಸಿಕ ನೆಮ್ಮದಿ, ಶೀಲ, ವಿದ್ಯೆ, ಸಂಸ್ಕೃತಿ ಎಲ್ಲವೂ ಬಹು ಮಟ್ಟಿಗೆ ಅವರಂತಸ್ತನ್ನು ಅವ ಲಂಬಿಸಿರುತ್ತದೆ. ಸಂಪತ್ತಿನಿಂದಲೇ ಶ್ರೇಯಸ್ಸು!

ಇದನ್ನು ಗಮನಿಸಿದರೆ ಸ್ತ್ರೀಯನ್ನು ದುಡಿಮೆಗೆ ಬಿಡಬೇಕೇ ಇಲ್ಲವೇ ಎಂಬ ಪ್ರಶ್ನೆಗೆ ಉತ್ತರ ಸಿಗುತ್ತದೆ—ದುಡಿಮೆಗಾಗಿ ಅಕ್ಕತಂಗಿಯರನ್ನು ಹೊರಗೆ ಕಳಿಸ ಬಾರದೆಂದು ಕೆಲವರ ಮತ.—ಹಾಗೆಯೇ ನಡೆವುದಾದರೆ, ವೈದ್ಯವೃತ್ತಿ, ಮಕ್ಕಳ

ಶಿಕ್ಷಣ ಶಾಖೆ ಮೊದಲಾದುವುಗಳಲ್ಲಿ ಕೆಲಸಮಾಡುವರು ಯಾರು? ಅವಿಭಕ್ತ ಕುಟುಂಬವು ಅಳಿಸಿಹೋಗುತ್ತಿರುವ ಈ ಕಾಲದಲ್ಲಿ ಅನಾಥೆಯರನ್ನೂ ಅವರ ಮಕ್ಕಳನ್ನೂ ಸಲಹುವರು ಯಾರು? ಪದಾರ್ಥಗಳ ಅಭಾವವಿರುವ ಈ ಸಮಯದಲ್ಲಿ ಅವಕಾಶವಾದರೂ ಎಲ್ಲಿಯದು? ಆದುದರಿಂದ ಹೆಂಗಸು ಸಂಪಾದಿಸಹೊರಡುವುದು ಆಕ್ಷೇಪಣೀಯವಾದುದಲ್ಲ. ಏಕೆ, ಮಲೆನಾಡಿನ ಹೆಣ್ಣು ಗಂಡಸಿಗಿಂತ ಎರಡು ಪಟ್ಟು ದುಡಿಯುವುದನ್ನು, ಹಳ್ಳಿಗಾಡಿನ ಹೆಂಗಸು ಹೊಲಗೆಲಸ ಮಾಡುವುದನ್ನು, ಗೋಷಾ ಹೆಂಗಸು ಹೊಲಿಗೆ ಕೆಲಸ, ರೇಷ್ಮೆ ಹುಳು ಸಾಕುವ ಕೆಲಸ, ಬೀಡಿ ಕಟ್ಟುವ ಕೆಲಸ ಇವೇ ಮೊದಲಾದುವನ್ನು ಮಾಡುವುದು ನೋಡಿದರೆ ಅದು ಅತ್ಯಂತ ಸಹಜವೇ ಆಗಿದೆ. ಆದರೆ ಅವಳು ಗಂಡಸಿನ ಪೈಪೋಟಿಯ ಮೇಲೆ ಅಥವಾ ಅವನಿಗೆ ಬದಲಾಗಿ ಎಂಬ ಹಟವಿಲ್ಲದೆ, ಆತನಿಗೆ ಸಹಾಯವಾಗಿ ಎಂಬ ಧ್ಯೈರ್ಯವನ್ನನುಸರಿಸುವುದುತ್ತಮ. ಆರ್ಥಿಕಸಮಾನತೆ ಎಂದು ಎಲ್ಲ ದಾರಿಗಳನ್ನೂ ತನಗೂ ತೆರದಿಟ್ಟಿರಬೇಕು ಎಂಬ ಕೇವಲ ಹಟದಿಂದ ಮಂತ್ರಿ ಪದವಿಯಿಂದ ಡ್ರೈವರತನದ ವರೆಗೂ, ಬಡಗಿಯದರಿಂದ ಇಂಜಿನಿಯರ ವೃತ್ತಿಯವರೆಗೂ ಸ್ಪರ್ಧಿಸುವುದು ತಿಳಿಗೇಡಿತನವಲ್ಲವೆ? ಅವಳು ಮಾಡತಕ್ಕ ಕೆಲಸ ಯಾಂತ್ರಿಕವಾಗಿರಕೂಡದು. ಮಿದುಳನ್ನು ತುಂಬಾ ಅಲಸಿಕೆಗೆ ಗುರಿಮಾಡಕೂಡದು. ವಿಶೇಷ ಸಂದರ್ಭಗಳಲ್ಲಿ, ಅಂದರೆ ಗರ್ಭಿಣಿಯಾಗಿದ್ದಾಗ, ಮತ್ತೆ ಹೆರಿಗೆಯಾದ ಕೆಲಕಾಲ ಒತ್ತಾಯಪಡಿಸಕೂಡದು. ಅವಳ ಕಲಾಸಕ್ತಿ, ಅಭಿರುಚಿ, ಚಟುವಟಿಕೆಗೆ ಅನುಗುಣವಾಗಿರಬೇಕು. ಈ ಬಗೆಯ ಕೆಲಸಕಾರ್ಯಗಳ ಒಂದು ಬಲು ಉಪಯುಕ್ತವಾದ ಪಟ್ಟಿಯನ್ನು ಬರೋಡಾ ಮಹಾರಾಣಿಯವರು ತಮ್ಮ ಪುಸ್ತಕದಲ್ಲಿ ತಯಾರಿಸಿ ವಿವೇಚಿಸಿಕೊಟ್ಟಿದ್ದಾರೆ. ಆ ಪಟ್ಟಿಯಲ್ಲಿ ಕೆಲವು ವ್ಯವಸಾಯಕ್ಕೆ, ಕೆಲವು ಗೃಹ ಕೈಗಾರಿಕೆಗೆ, ಕೆಲವು ಹೊಲಿಗೆ ಮೊದಲಾದ ಕುಶಲ ಕಲೆಗೆ, ಕೆಲವು ಆಹಾರ ಪದಾರ್ಥ ಸಂಗ್ರಹಕ್ಕೆ, ಕೆಲವು ವಿದ್ಯಾಶಾಖೆಗೆ ಸಂಬಂಧಪಟ್ಟ ವಿವಿಧ ಮಾದರಿಯವಾಗಿದೆ. ಇವುಗಳನ್ನು ತಮ್ಮ ಅರ್ಹತೆ, ಅಂತಸ್ತು, ಅಭಿರುಚಿ, ಮತ್ತು ಆಯಾ ಸನ್ನಿವೇಶಕ್ಕನುಕೂಲಿಸುವಂತೆ ಅವಲಂಬಿಸಲು ಮತ್ತು ಅವುಗಳಲ್ಲಿ ತರಪೇತು ಮಾಡಲು ಸರಕಾರದವರು ಸಹಾಯ ದೊರಕಿಸಿಕೊಡಬೇಕು. ಗಿರಣಿ, ಗಣಿ, ಕಾಮಗಾರಿ, ಕಾರ್ಖಾನೆ ಉದ್ಯಮಗಳಲ್ಲಿನ ಕೂಲಿಕಾರ ಹೆಂಗಸರು ಈಗಿನಂತೆ ತಮ್ಮ ಗಂಡಂದಿರ ಸಮಕ್ಕೂ ಅದೇ ಸ್ಥಳಗಳಲ್ಲಿ ಅಹಿತವಾದ ಆ ವಾತಾವರಣದಲ್ಲಿ ಕೆಲಸ ಮಾಡುವ ಬದಲು, ಈ ಬಗೆಯ ಉಪವೃತ್ತಿಗಳ ಮೂಲಕ ಸಂಪಾದಿಸುವುದು ಪ್ರಿಯ. ಆ ಯೋಜನೆ ಸಿದ್ಧಿಸುವವರೆಗೆ ಅವರಿಗೆ ಅನುಕೂಲವಾದ ವಸತಿಯನ್ನೊದಗಿಸಿಕೊಟ್ಟು ಕೂಲಿ ಹೆಂಗಸರ ಎಳೆಯ ಮಕ್ಕಳನ್ನು ನೋಡಿಕೊಳ್ಳಲು ಕೇಂದ್ರ

ಗಳನ್ನು ಏರ್ಪಡಿಸಿ, ಅವರ ದಿನಗೂಲಿಯು ಗಂಡಸಿನದಕ್ಕಿಂತ ಕಡಮೆಯಾಗದಂತೆ ಮತ್ತು ಪ್ರಸವ ಕಾಲಕ್ಕೆ ಅವರಿಗೆ ಸರಿಯಾದ ಬಿಡುವು ದೊರೆಯುವಂತೆ ನೋಡಿ ಕೊಳ್ಳುವುದು ಅವರ ಹಿತೈಷಿಗಳ ಕರ್ತವ್ಯವಾಗಿದೆ.

ಇದಲ್ಲದೆ ತಮ್ಮ ಸಂಸಾರಕ್ಕೆ ಸಂಬಳದ ಕೊಂಚಪಾಲನ್ನೂ ಕೊಡದೆ ಸ್ವೇಚ್ಛೆ ಯಿಂದ ವ್ಯವಹರಿಸುವ ಗಂಡಸರು ಎಲ್ಲ ಅಂತಸ್ತುಗಳಲ್ಲೂ ಕಾಣಬರುವುದುಂಟು. ಇಂತಹ ಅವ್ಯವಸ್ಥೆಯನ್ನು ನಿವಾರಿಸಲು ಸರ್ಕಾರದವರು ಮತ್ತಿತರ ಸಂಸ್ಥೆಗಳು ತಮ್ಮ ನೌಕರರ ಸಂಬಳದ ಒಂದು ಭಾಗವನ್ನು ಅವರ ಸಂಸಾರದ ವಶಕ್ಕೆ ಕೊಡುವುದು ಉತ್ತಮವೆಂಬ ಒಂದು ಸಲಹೆ ಇದೆ.

ಇನ್ನೊಂದು ವಿಷಯ. ಈಗಿನ ಪದ್ಧತಿಯ ಪ್ರಕಾರ ಶಿಕ್ಷಣ ಮೊದಲಾದ ಶಾಖೆಗಳಲ್ಲಿ ಹೆಂಗಸು ದಿನಕ್ಕೆ ೫-೬ ಗಂಟೆಗಳ ಕಾಲ ನಿಯಂತ್ರಿತವಾಗಿ ಕೆಲಸಮಾಡ ಬೇಕಾಗುತ್ತದೆ. ಇದು ಜೀವನವನ್ನು ಮಾರಿಕೊಂಡಂತೆಯೇ ಸರಿ; ಅಲ್ಲದೆ ಅವರ ಮನೆ ಮಕ್ಕಳ ಹಿತದೃಷ್ಟಿಯಿಂದ ಅದು ಅನುಚಿತ. ಆದುದರಿಂದ ಮನೆಯ ಗೃಹಿಣಿಯರಾಗಲಿ, ತಾಯಿಯರಾಗಲಿ ಅರ್ಧಕಾಲ ಮಾತ್ರವೇ ಕೆಲಸ ಮಾಡಲು ಅವಕಾಶಕೊಟ್ಟು, ಅರ್ಧ ಕ್ಕಿಂತ ಕೊಂಚ ಹೆಚ್ಚಾಗಿ ವೇತನ ಕೊಡಿಸಿದರೆ ಹೆಚ್ಚು ನೆಮ್ಮದಿವಂತರಲ್ಲದವರಿಗೂ ಮಧ್ಯಮ ತರಗತಿಯವರಿಗೂ ಸಹಾಯ ಮಾಡಿದಂತಾಗುವುದು.

ಒಟ್ಟಿನಲ್ಲಿ ಈ ಆರ್ಥಿಕ ಸುವ್ಯವಸ್ಥೆಯು ಸರ್ಕಾರದವರಿಗೆ ಸೇರಿದ, ಅವರ ಮೂಲಕ ನಡೆಯಬೇಕಾದ ಕೆಲಸ. ಅವರೊಂದಿಗೆ ಮಹಿಳಾ ಸಮ್ಮೇಳನದವರು ವರ್ತಕಮಂಡಲಿ ಮೊದಲಾದ ಖಾಸಗೀ ಜನರೂ ಸಹಕರಿಸಿದರೆ ಮುಖ್ಯವಾದ ಈ ಸಮಸ್ಯೆಯು ಬಗೆಹರಿದೀತು.

ಸಾಮಾಜಿಕ ಜೀವನದಲ್ಲಿ

ಹೊಸ ಕಾಲಸ್ಥಿತಿಗೆ ಕ್ರಮಕ್ರಮವಾಗಿ ಹೊಂದಿಕೊಳ್ಳುತ್ತಿರುವ ಸಮಯದಲ್ಲಿ ಲೋಪದೋಷಗಳಿದ್ದೇ ಇರುತ್ತವೆ. ಇವನ್ನು ಬಹುತೇಕ ಸಂಘ ಸಂಸ್ಥೆಗಳ ಒತ್ತಾಯ, ಪಂಡಿತರ ಪ್ರಚಾರ, ಜನೋಪಕಾರಿಗಳ ಬೋಧನೆ ಈ ಮೂಲಕ ತಿದ್ದಿ ಕೊಳ್ಳುವುದುಚಿತವೇ ಹೊರತು ಎಲ್ಲಕ್ಕೂ ಕಾನೂನು ಕಟ್ಟುಪಾಡು ತಂದುಕೊಳ್ಳುವುದು ಸರಿಯಾದ ಮಾರ್ಗವಾಗಿ ಕಂಡುಬರುವುದಿಲ್ಲ. ಅಂತಹ ಕೆಲ ಸಮಸ್ಯೆಗಳಿವು :

ಬಾಲ್ಯವಿವಾಹ—ನಮ್ಮ ನಾಡಿನಲ್ಲಿ ಶಾರದಾ ಬಿಲ್ಲು ಬರದೆಯೇ ಈ ಪದ್ಧತಿ ಕಾಣೆಯಾಗುತ್ತಿದೆ. ಹೋದ ಜನಗಣತಿಯ ಪ್ರಕಾರ ೫ ವರ್ಷದ ಕೆಳಗಿನ ಹುಡುಗಿ ಯರ ವಿವಾಹವೆಂಬುದು ಒಂದು ಸಹ ನಡೆದಿಲ್ಲ. ೫-೧೦ ವಯಸ್ಸಿನ ಅಂತರದ ವಯಸ್ಸಿನಲ್ಲಿ ೨,೦೩೯ ಹುಡುಗಿಯರು ಮದುವೆಯಾಗಿದಾರೆ. ಆದರಲ್ಲಿ ೧೧ ಮಂದಿ

ವಿತಂತುಗಳಾಗಿದ್ದಾರೆ. ಈ ಅಂಕಿ ಅಂಶವು ೧೯೩೩ನೆಯ ಬ್ರಿಟಿಷ್ ಭಾರತದ ಜನ ಗಣತಿಯೊಂದಿಗೆ ಹೋಲಿಸಿದರೆ ಎಷ್ಟೋ ತೃಪ್ತಿಕರವಾಗಿದೆ. ಸಂಪ್ರದಾಯ ಶರಣರೆನಿಸಿದ್ದ ಬ್ರಾಹ್ಮಣರಲ್ಲಿ ೧೪ ವರ್ಷದ ಒಳಗೆ ವಿವಾಹ ಜರುಗುವುದೇ ಅಪೂರ್ವ. ಇನ್ನೂ ಬ್ರಾಹ್ಮಣೇತರ ಮತ್ತು ಹರಿಜನರ ಕೆಲ ಪಂಗಡಗಳಲ್ಲಿ ಹೆಣ್ಣನ್ನು ಕೇಳಲು ಬಂದಿದ್ದರೆಂದು ಹೇಳಿ ಹತ್ತು ಹನ್ನೊಂದಕ್ಕೇ ತಾಲಿ ಕಟ್ಟಿಸಿ ಬಿಡುತ್ತಿದಾರೆ. ಕಾಲಕ್ರಮೇಣ ಇದೂ ಸರಿಪಡುವುದರಲ್ಲಿ ಸಂದೇಹವಿಲ್ಲ.

ಬಾಲ್ಯ ವಿವಾಹಕ್ಕಿಂತ ಘೋರತರವಾದುದೆಂದರೆ ಅಸಮ ವಿವಾಹ. ೪೦-೪೫ ವರ್ಷದಾಚೆಯ ವಿಧುರರು ಚಿಕ್ಕ ವಯಸ್ಸಿನ ಬಾಲಿಕೆಯರನ್ನು ಮದುವೆಯಾಗುವುದು ಭಯಾನಕ ಇಜ್ಜೋಡಿ ದಾಂಪತ್ಯವೇ ಸರಿ. ಅವರು ಉಚಿತ ವಯಸ್ಕರಾದ ಹುಡುಗಿಯರನ್ನೊ ಇಲ್ಲ ವಿತಂತುಗಳನ್ನೊ ಮದುವೆಯಾಗುವಂತೆ ಸಮಾಜವು ಒತ್ತಾಯ ಪಡಿಸಬೇಕು.

ವರದಕ್ಷಿಣೆ, ಕನ್ಯಾಶುಲ್ಕ, ಆಡಂಬರದ ಮದುವೆ ಮೊದಲಾದುವನ್ನೂ ಕಾನೂನಿನಿಂದ ಕ್ರಮಪಡಿಸಲಾಗುವುದಿಲ್ಲ. ಸಾರ್ವಜನಿಕರೇ ಎಚ್ಚತ್ತು ವಿಹಿತ ಮಾರ್ಗದಲ್ಲಿ ನಡೆಯುವಂತಾಗಬೇಕು.

ವಿಧವಾ ವಿವಾಹ ಪ್ರಶ್ನೆ—ಕಳೆದ ಜನಗಣತಿಯ ಪ್ರಕಾರ,

೧— ೫	ವಯಸ್ಸಿನಲ್ಲಿ	೦	ವಿತಂತುಗಳು,
೫—೧೦	,,	೧೧	,,
೧೦—೧೫	,,	೯೯೫	,,
೧೫—೨೦	,,	೯,೦೪೪	—ವಿತಂತುಗಳು ಇದಾರೆ.

ಇವರುಗಳಲ್ಲಿ ಬ್ರಾಹ್ಮಣ ಜಾತಿಗೆ ಸೇರಿದವರು ೪೧೦—ನಿಮ್ನ ವರ್ಗದವರು ೨,೧೨೭ ಕ್ರಿಶ್ಚಿಯನ್ನರು ೭೭ ಮಾತ್ರ. ಈ ವಿಧವೆಯರಲ್ಲಿ ಅದೂ ಉತ್ತಮವರ್ಗದವರಲ್ಲಿ ಕೆಲವರಾದರೂ ಸಮಾಜದ ಕಟ್ಟಳೆಗೆ ಸಿಕ್ಕಿ ಪುನರ್ವಿವಾಹದಿಂದ ಹಿಂಜರಿದಿದಾರೆ. ಇವರು ವಿರಕ್ತೆಯರೂ ಆಗದೆ ಆಸಕ್ತೆಯರೂ ಆಗದೆ ಬಾಳನ್ನು ನೂಕುವುದಕ್ಕಿಂತ, ಮದುವೆಯಾಗುವುದು ಎಷ್ಟೋ ಮೇಲು. ಆದರೆ ೮—೧೦ ವರ್ಷ ಸಂಸಾರ ಮಾಡಿ, ಎರಡು ಮೂರು ಮಕ್ಕಳನ್ನು ಹೊಂದಿದಂತಹವರು ಮತ್ತೆ ಮದುವೆ ಮಾಡಿಕೊಂಡರೆ ಕೇವಲ ಪ್ರಾಪಂಚಿಕ ಸುಖಕ್ಕೆ ಮರೆ ಹೊಕ್ಕಂತಾಗುತ್ತದೆ. ಭಾರತ ಭೂಮಿಗೆ ಇದು ಲಕ್ಷಣವಲ್ಲ. ಆದುದರಿಂದ ೧೮—೨೦ ವರುಷದೊಳಗಾಗಿ ಶೋಭನವಾದ ತರುಣದಲ್ಲೇ ಅಥವಾ ಮುಂಚೆಯೇ ವಿತಂತುವಾದರೆ ಅಂತಹವರಿಗೆ ಮಾತ್ರ ಬಂಧುಗಳು ಮದುವೆ ಮಾಡುವುದೊಳ್ಳೆಯದು.

ಶೀಲ ಅಥವಾ ಪಾತಿವ್ರತ್ಯದ ಪ್ರಶ್ನೆ—ನಮ್ಮ ದೇಶದಲ್ಲಿ ಶೀಲಕ್ಕೊಂದು ವಿಶಿಷ್ಟ ಸ್ಥಾನವಿದೆ. ಈಚೆಗೆ ಕೆಲ ಪಾಶ್ಚಾತ್ಯ ಲೇಖಕರು, ಗಂಡಸಿಗೇ ಒಂದು ನ್ಯಾಯ, ಹೆಂಗಸಿಗೇ ಒಂದು ನ್ಯಾಯವಿರುವ ಈ ಜನಾಂಗದಲ್ಲಿ ಹೆಂಗಸರನ್ನು ಮೂಲೆಗೆಸೆಯಲು ಮಾಡಿರುವ ಒಂದು ಕೃತ್ರಿಮ ವಿಶೇಷವೇ ಪಾತಿವ್ರತ್ಯವೆಂದೂ, ಗಂಡಸಿಗಿರುವಂತೆಯೇ ಇಚ್ಛಾಪ್ರವೃತ್ತಿಗಳು ಹೆಂಗಸಿಗೂ ಇರುವುದರಿಂದ ಅವಳು ಒಬ್ಬನಿಗಿಂತ ಹೆಚ್ಚು ಜನರನ್ನು ಪ್ರೀತಿಸುವುದು ಅಸಂಭವವಲ್ಲವೆಂದೂ, ಹಾಗೆ ಪ್ರೀತಿಸಿದ ಸಂದರ್ಭದಲ್ಲಿ ಅವಳು ಮನಸ್ಸನ್ನು ಅದುಮಿ ಹಿಡಿಯುವುದು ಸಲ್ಲದೆಂತಲೂ ವಾದಿಸುತ್ತಿದಾರೆ. ಶ್ರೀಮಾನ್ ಅ. ನ. ಕೃ ಅವರ 'ಅನಾಮಧೇಯನ ಪತ್ನಿಯಾಗುವುದಕ್ಕಿಂತ ವಿಭೂತಿಯ ಸೂಳೆಯಾಗುವುದು ಮೇಲು' ಎಂಬ ಮಾತೂ ಈ ಸಿದ್ಧಾಂತಕ್ಕೆ ಅನ್ವಯಿಸಿದುದೇ. ಈ ಬಗೆಯ ವಾದ ಸಂಬಂಧವಾದ ಸಾಹಿತ್ಯವನ್ನೋದುವ ನಮ್ಮ ಸ್ತ್ರೀ ಸಂಗಡದಲ್ಲಿ ಅನೇಕ ಅಲ್ಲೋಲ ಕಲ್ಲೋಲಗಳಾಗುವುದು ಸಂಭವ. ಜೊತೆಗೆ ಪುರಾಣ ವೇದಗಳಲ್ಲಿ ಅಕ್ರಮ ಹುಡುಕಿ ತೋರಿಸುವುದರಿಂದ ಹಿಂದಿನ ನಂಬಿಕೆಯೂ ಬಿದ್ದುಹೋಗುತ್ತಿದೆ. ಕೆಳಗಿನ ಕಟ್ಟಡ ಕಳಚಿಹೋಗಿ ಹಿಡಿಯಲು ಊರೆಗೋಲು ಸಿಕ್ಕದೆ, ಈಗಿನ ಸ್ತ್ರೀ ದಿಗ್ಭ್ರಾಂತಳಾಗಿದಾಳೆ.

ಇಂತಹ ಪರಿಸ್ಥಿತಿಯಲ್ಲಿ ಅವಳಿಗೆ ಉಭಯಪಕ್ಷಗಳನ್ನು ಪರಿಶೀಲಿಸಿ ಉಚಿತ ಮಾರ್ಗವನ್ನು ತಿಳಿಸುವ ಶಿಕ್ಷಣವಿರಬೇಕು. ಹಿಂದೂ ಧರ್ಮದ ಕಸ ತೆಗೆದು ರಸವನ್ನುಣಿಸಬೇಕು. ಅದರ ಧ್ಯೇಯ "ಸ್ವಾರ್ಥಭೋಗವಲ್ಲ; ಸ್ವಾರ್ಥತ್ಯಾಗ". ಸ್ವಾರ್ಥಭೋಗದ ಮಾರ್ಗ ಹಿಡಿದಿರುವ ಅಮೇರಿಕಾದೇಶದಲ್ಲಿ ಸೈತಾನನೂ "ಬದುಕಿದ್ದರೆ ಇನ್ನೂ ಕಲಿಯಬಹುದು" ಎನ್ನುವಂತಿದೆ. ಇಂಗ್ಲೆಂಡಿಗೆ ಹೋಗಿರುವ Lord Linlithgow ಅವರು ಅಲ್ಲಿನ ದಾಂಪತ್ಯ ಜೀವನವನ್ನು "Dull, drab, lifeless" ಆಗಿರುವುದೆಂದು ಹೇಳಿರುವ ಬಗೆಯೂ, ರಷ್ಯಾದಲ್ಲಿ ಪ್ರಯೋಗಗಳು ಒಂದಾದ ಮೇಲೊಂದು ನಡೆಯುತ್ತಿರುವ ಬಗೆಯೂ, ನಾವು ಕಣ್ಣು ಮುಚ್ಚಿಕೊಂಡು ಅವರನ್ನನುಸರಿಸಬಾರದು, ನಮ್ಮ ಸಂಸ್ಕೃತಿಧ್ಯೇಯಗಳನ್ನು ಒಮ್ಮೆಗೇ ಬಿಟ್ಟುಕೊಡಬಾರದು ಎಂಬುದನ್ನು ಮನವರಿಕೆ ಮಾಡುತ್ತಿವೆ. ಇದು ವಿಜ್ಞಾನಯುಗ ನಿಜ. ಆದರೆ ವಿಜ್ಞಾನವೇ ತನ್ನ ಅಪೂರ್ಣತೆಯನ್ನೂ ಅರಕೆಯನ್ನೂ ಅರಿತು ತತ್ವಧ್ಯೇಯಗಳೆಡೆಗೆ ಕೈಚಾಚುತ್ತಿದೆ. ಭಗವಂತನೇ ಇಲ್ಲವೆಂದು ನಿಶ್ಚಿತವಾಗಿದ್ದ ಮನೋಭಾವವು Sir James Jeans ಮೊದಲಾದವರ ಕೂಗಿನಿಂದ ಎಚ್ಚರವಾಗುತ್ತಿದೆ. ಶ್ರೀ ರಾಧಾಕೃಷ್ಣನ್ ಮೊದಲಾದ ಜ್ಞಾನಿಗಳು ಕಡೆಗೆ ಪ್ರಪಂಚದ ಕಾಯಿಲೆಯನ್ನು ಹಿಂದೂ ತತ್ವಜ್ಞನೇ ವಾಸಿಮಾಡಬಹುದೆಂದು ಹೇಳುವ ಪ್ರಮೇಯವೂ ಬಂದಿದೆ. ಹೀಗಿರುವಲ್ಲಿ ನಾವು ಪಾಶ್ಚಾತ್ಯರು

ಹೇಳಿದುದನ್ನೆಲ್ಲ ನಂಬಕೂಡದು; ಮನಮುಟ್ಟಿ ಪ್ರೀತಿಸುವ ಪ್ರಸಂಗ ಬರಬಹುದು; ಆದರೆ ದೇಹವನ್ನು ಬಲಿಗೊಡಬಾರದು. ಹಾಗೆಂದು ಪತಿತೆಯರನ್ನು ಅವಹೇಳನ ಮಾಡಲೂ ಬಾರದು. ಅವರ ಅಧಃಪತನಕ್ಕೆ ಕಾರಣವು ಮುಖ್ಯವಾಗಿ ಬಡತನ, ಪಟ್ಟಣವಾಸದ ಜನಸಾಂದ್ರತೆ, ಅಜ್ಞಾನ ಇವುಗಳೇ. ಆದುದರಿಂದ ಪತಿತೆಯರ ಕಷ್ಟ ಪರಿಹರಿಸಿ ಅವರನ್ನು ಕೈಹಿಡಿದೆತ್ತುವ ಜವಾಬ್ದಾರಿಯನ್ನು ಸದ್ಗೃಹಿಣಿಯರು ವಹಿಸಿಕೊಳ್ಳಬೇಕು. ಅಪ್ಪಿ ತಪ್ಪಿ ಹೆಂಗಸು ಎಡತಾಕಿದರೆ ಅವಳನ್ನು ಸಮಾಜದಿಂದ ಹೊರಹಾಕದೆ ಅವಳ ಉದ್ಧಾರ ಕ್ರಮ ಕೈಗೊಳ್ಳಬೇಕು. ಹಿಂದೂ ಧರ್ಮದ ಧ್ಯೇಯ "ಆತ್ಮ ಸಂಯಮನ" (Restraint) ಈ ಧ್ಯೇಯವನ್ನು ಲೋಕ ಬಗೆಗೊಳ್ಳುವಂತೆ ನಮ್ಮ ಹೆಂಗಸರು ಆಚರಿಸಿದಾರೆ. ಒಂದು ಉದಾಹರಣೆಗೆ ಕಾರಂತರ 'ನಾಗವೇಣಿ' ಯನ್ನು ಹೇಳಬಹುದು. ಆದರೆ ಅದನ್ನು ಸರಿಯಾದ ಮಾರ್ಗದಲ್ಲಿ, ಯೋಗ್ಯವಾದ ರೀತಿಯಲ್ಲಿ ಆಚರಿಸುವುದು ಮುಖ್ಯಾಂಶ.

ವಿವಾಹವಿಚ್ಛೇದನ— ಇದರ ಬಗ್ಗೆ ಪಾಶ್ಚಾತ್ಯರಲ್ಲೇ ಭಿನ್ನಾಭಿಪ್ರಾಯಗಳಿವೆ. ಮಕ್ಕಳ ಹಿತಕ್ಕೆ ಕುಠಾರ ಪ್ರಾಯದಂತಿದೆ. ಅದರಿಂದ ಇದು Inhuman ಎಂದು ಎಚ್. ಜಿ. ವೆಲ್ಸ್ ಹೇಳಿದಾನೆ. ನಾಗರಿಕತೆಗೆ ಸಂಯಮ ತಳಹದಿ. ವಿವಾಹ ವಿಚ್ಛೇದವು ಇದನ್ನು ನಿರೋಧಿಸುವುದರಿಂದ ಖಂಡನೀಯವಾದುದು. ಅಲ್ಲದೆ ಇದರಿಂದ ಹೆಂಗಸಿಗೆ ನಷ್ಟವೇ ಹೊರತು ಲಾಭವಿಲ್ಲ. ಗಂಡಸು ಹೆಂಗಸಿನ ವಿಷಯದಲ್ಲಿ ಕಠೋರನಾಗುತ್ತಾನೆ ಎಂದು ಇನ್ನು ಕೆಲವರ ವಾದ. ತೀರ ಕಠಿಣ ಪ್ರಸಂಗಗಳಲ್ಲಿ ಮಾತ್ರ ಕಾನೂನಿನ ಪ್ರಕಾರ ವಿಚ್ಛೇದಕ್ಕವಕಾಶ ಕೊಡಬಹುದೆಂದು ಮತ್ತೆ ಕೆಲವರ ಮತ. ಸರಕಾರವನ್ನೇಕೆ ಇಂತಹ ವಿಷಯಗಳಲ್ಲಿ ಕೈ ಹಾಕಕೊಡಬೇಕು? ಆಯಾ ಪಂಗಡಗಳಲ್ಲೇ ಪಂಚಾಯಿತಿದಾರರನ್ನು ಗೊತ್ತುಮಾಡಿಕೊಂಡು ವೈಮನಸ್ಯವನ್ನು ಪರಿಹರಿಸಿಕೊಳ್ಳುವುದೊಳ್ಳೆಯದೆಂದು ವೆಲ್ಸರ ಸಲಹೆ.

ಮದುವೆಯೆಂಬ ಸೂತ್ರವನ್ನು ಹರಿಯಲೇ ಕೂಡದು. ಅದು ಹಿಂದೂ ಧರ್ಮಕ್ಕೆ ವಿರುದ್ಧವೆಂದು ಸಂಪ್ರದಾಯಶರಣರ ಮತ. ರಷ್ಯಾದಲ್ಲಿರುವಂತೆ ಮದುವೆ ಯಾವ ಕಟ್ಟುಪಾಡಿಗೂ ಒಳಗಾಗಕೂಡದು. ವಿಚ್ಛೇದಕ್ಕವಕಾಶವಿದ್ದು ಯಾವ ದಾಂಪತ್ಯ ನಿಲ್ಲುವುದೋ ಅಂತಹದೇ ನಿಜವಾದ ದಾಂಪತ್ಯ. ಮಿಕ್ಕುಳಿದ ಕಪಟ ನಾಟಕವಿದ್ದು ಪ್ರಯೋಜನಕಾರಿಯಲ್ಲ. ಮಕ್ಕಳನ್ನು ಅನಾಥಾಲಯದಲ್ಲಿ ಬಿಡಬಹುದು, ಇಲ್ಲ ತಾಯ ವಶಕ್ಕೆ ಬಿಟ್ಟುಕೊಡಬಹುದು, ಹೀಗೆಂದು ಇನ್ನು ಕೆಲವರ ವಾದ. ನಮ್ಮ ಸಂಸ್ಥಾನದಲ್ಲಿ ದಾಂಪತ್ಯವಿಚ್ಛೇದಕ್ಕೆ ಕಾನೂನಿನ ಪ್ರಕಾರ ಅವಕಾಶವಿಲ್ಲ. ಬ್ರಿಟಿಷ್ ಭಾರತದಲ್ಲಿ ಕೆಲವು ಸಂದರ್ಭಗಳಲ್ಲಿ ಮಾತ್ರ ಅವಕಾಶವೀಯುವಂತೆ ರಾವ್ ಕಮಿಟಿಯು ಪ್ರಯತ್ನಿಸುತ್ತಿದೆ.

ಒಟ್ಟಿನಲ್ಲಿ ಕಾನೂನಿಗವಕಾಶ ಕೊಡುವುದರ ಬದಲು, ಸಮಾಜದ ಮುಖಂಡರೇ (ಈಗ ಕೆಲವು ಪಂಗಡಗಳಲ್ಲಿರುವಂತೆ) ಸೇರಿ ತೀರ್ಮಾನ ಮಾಡಿ ಕಠಿಣ ಪ್ರಸಂಗಗಳಲ್ಲಿ ಹೆಂಗಸಿಗೆ ಬೇರೆ ವಾಸಿಸಲು, ಮತ್ತು ಜೀವನಾಂಶ ಪಡೆಯಲು ಸಹಾಯ ಮಾಡುವುದುತ್ತಮವೆಂದು ತೋರುತ್ತದೆ.

ಸಂತಾನ ನಿರೋಧ— ಬಡತನ, ನಿಶ್ಶಕ್ತಿ, ಬಿಡುವಿಗವಕಾಶವಿಲ್ಲದಿರುವುದು ಈ ಹಲಬಗೆಯ ಕಾರಣಗಳ ಸಲುವಾಗಿ ಇಂದಿನ ಸ್ತ್ರೀಯು ಬಹು ಸಂತಾನವೆಂದರೆ ತುಂಬಾ ಹೆದರುತ್ತಾಳೆ. ಅಷ್ಟೇ ಅಲ್ಲ. ಹಳ್ಳಿಗಾಡ ಪ್ರತಿನಿಧಿಯು ನಾರುಬೇರುಗಳ ಮೂಲಕವೂ, ಪಟ್ಟಣವಾಸದ ಸ್ತ್ರೀ ಪೇಟೆಯಲ್ಲಿ ಮಾರುವ ಪೇಪರುಗಳಲ್ಲಿ ಕಾಣಿಸಿರುವ ನಾನಾಬಗೆಯ ಮದ್ದುಗಳ ಮೂಲಕವೂ ಸಂತಾನ ನಿರೋಧಕ್ಕೆ, ಗರ್ಭನಾಶಕ್ಕೆ ಪ್ರಯತ್ನಿಸುತ್ತಿದ್ದಾಳೆ. ಸಿಕ್ಕಾಪಟ್ಟೆಯ ಪ್ರಯೋಗದಿಂದ ಹಾನಿಯೂ ಬಹಳವಾಗಿ ನಡೆದಿದೆ. ಸಾಫಲ್ಯವೂ ಅನೇಕ ವೇಳೆ ತೋರಿಬಂದಿಲ್ಲ. ಪಾಶ್ಚಾತ್ಯರಲ್ಲಿಯೂ ಇದರ ವಿಷಯವಾಗಿ ಬೇಕಾದಷ್ಟು ಪ್ರಯೋಗಗಳು ನಡೆದು, ಕೊನೆಗೆ ಸದ್ಯದ ಪರಿಸ್ಥಿತಿಯಲ್ಲಿ ಶಸ್ತ್ರಕ್ರಿಯೆಯೊಂದೇ ಶೇಕಡ ನೂರರಷ್ಟು ಪರಿಣಾಮಕಾರಿಯೆಂದೂ, ಅದನ್ನು ಬಿಟ್ಟರೆ ತಕ್ಕಮಟ್ಟಿಗೆ ಯಶಸ್ವಿಯೆನಿಸುವ ಸಾಧನಗಳು ಇವೆಯಂದೂ ಕಂಡು ಹಿಡಿದಿದ್ದಾರೆ. ಆ ಬಗೆಯ ಸಾಧನಗಳು ನಮ್ಮ ಜನರಲ್ಲಿಯೂ ಹೆಚ್ಚು ಹೆಚ್ಚಾಗಿ ಪ್ರಚಾರಕ್ಕೆ ಬರುತ್ತಿವೆ. ಈ ಮಧ್ಯೆ ಥರ್ಸ್ಟನ್ ಎಂಬಾತನು ಈ ಸಾಧನಗಳ ಉಪಯೋಗದಿಂದ ಭೋಗಲೋಲುಪತೆಯು ಹೆಚ್ಚಿ ಮಾನಸಿಕ ಶಾರೀರಕ ಹಾನಿಯುಂಟಾಗುವುದೆಂದೂ, ಜಿತೇಂದ್ರಿಯತ್ವವೇ ಅತ್ಯುತ್ತಮವೆಂದೂ ಸಾರಿದ್ದಾನೆ. ಇಂದ್ರಿಯ ನಿಗ್ರಹವು ಮನುಷ್ಯ ಮಾತ್ರದವನಿಗೆ, ಅದರಲ್ಲೂ ಗಂಡಸಾದವನಿಗೆ ಸಾಧ್ಯವಿಲ್ಲ, ಒಳ್ಳೆಯದೂ ಅಲ್ಲ ಎಂದು ಪ್ರತಿವಾದಿಗಳ ಮತ. ಹೆಂಗಸಾದವಳಿಗೆ ಹೆಚ್ಚು ಸಾಧ್ಯವೆಂದು ನಿಶ್ಚಿತವಾದ ಅಂಶ. ಅವಳೇ ತನ್ನ ಗಂಡನನ್ನು ಹತೋಟಿಯಲ್ಲಿಡಲಿ ಎಂದು ಮಹಾತ್ಮಾ ಗಾಂಧೀಜಿಯಂಥವರ ಉತ್ತರ. ಹೀಗೆ ವಾದವಿವಾದಗಳು ನಡೆಯುತ್ತಿವೆ. ಈ ಮಧ್ಯೆ ಸಮಸ್ಯೆಯು ಹೆಂಗಸಿನ ಬಾಳಿನಲ್ಲಿ ಕಟುತರವಾಗುತ್ತಿದೆ. ಅವನ್ನು ಸಾಧ್ಯವಾದಷ್ಟು ಬೇಗನೆ, ಮತ್ತು ಸಾಧ್ಯವಾದಷ್ಟು ಪ್ರಮಾಣದಲ್ಲಿ ಪರಿಹರಿಸಲೇ ಬೇಕಾದ ಆವಶ್ಯಕತೆಯುಂಟಾಗಿದೆ. ಆಯುರ್ವೇದ ಪಂಡಿತರೂ, ಡಾಕ್ಟರುಗಳೂ ಮನಶ್ಶಾಸ್ತ್ರಜ್ಞರೂ ಒಟ್ಟುಗೂಡಿ ಪರಾಪರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವಿಹಿತವಾದುದನ್ನು ಸ್ತ್ರೀ ಜನತೆಗೆ ತಿಳಿಯಪಡಿಸುವುದು ಉತ್ತಮ.

ಇಂದ್ರಿಯ ನಿಗ್ರಹ— ಹೆಂಗಸಿಗೆ ಬಹು ಸಂತಾನದಿಂದ ರಕ್ಷಣೆಯ ಜೊತೆಗೆ ಸ್ವೇಚ್ಛೆಯಾದ ಮತ್ತು ನಿರಂತರವಾದ ಭೋಗದಿಂದಲೂ ರಕ್ಷಣೆಯು ಬೇಕಾಗಿದೆ.

ನಮ್ಮ ನಾಡಿನಲ್ಲಿ ವರ್ಷಕ್ಕೆರಡುಬಾರಿ ಹಲವಿಳಿಯುವರು, ಮೂರು ವರ್ಷಗಳಿಗೆರಡು ಮಕ್ಕಳನ್ನು ಪಡೆಯುವರು, ೮ ತಿಂಗಳ ಕೈ ಮಗುವಿನ ಜೊತೆಗೆ ೬ ತಿಂಗಳು ಗರ್ಭಿಣಿಯಾಗಿರುವವರು, ಡಾಕ್ಟರರು ಎಚ್ಚರಿಕೆ ಕೊಟ್ಟಿದ್ದರೂ ಅದಕ್ಕೆ ವಿರೋಧವಾಗಿ ಗರ್ಭವನ್ನು ಧರಿಸಿ ಪ್ರಾಣವನ್ನೇ ಬಲಿಕೊಟ್ಟವರು ಹಲವರಿದಾರೆ. ಅದೂ ಅಜ್ಞಾನಿಗಳ ಕುಟುಂಬದಲ್ಲಲ್ಲ. ಪೂರ್ಣ ವಿದ್ಯಾವಂತರ ಸಂಸಾರದಲ್ಲಿ, ಗಂಡಸರ ಬೇನೆಯು ತಮಗಂಟಿದುದರ ಪರಿಣಾಮವಾಗಿ, ದೃಢಕಾಯರಾದ ಹೆಂಗಸರು ನವೆದು ಅಕಾಲಮರಣಕ್ಕೆ ತುತ್ತಾದವರೂ ಉಂಟು. ಇದಕ್ಕೆ ರಕ್ಷಣಾ ಸಾಧನವು ಮಹಾತ್ಮಾಜಿಯವರು ಹೇಳಿದಂತೆ ಹೆಂಗಸಿನ ಕೈಯಲ್ಲೇ ಇದೆ. ಪಾತಿವ್ರತ್ಯವೆಂದರೆ ಪತಿಯ ಗುಲಾಮಳಂತೆ ನಡೆಯುವುದಲ್ಲ; ಅವನು ಅಧರ್ಮದಲ್ಲಿ ಕಾಲಿಡದಂತೆ ತಡೆಯುವುದೂ, ಕೈಮಿಾರಿದರೆ ದೂರವಿರುವುದೂ ನಿಜವಾದ ಪಾತಿವ್ರತ್ಯವೆಂಬುದನ್ನು ಅವಳರಿಯಬೇಕು. ತಾಯಿತಂದೆಯರು ತಮ್ಮ ಹೆಣ್ಣು ಮಕ್ಕಳಿಗೆ ಈ ಸೂಕ್ಷ್ಮವನ್ನು ಬೋಧಿಸಬೇಕು; ಗಂಡುಮಕ್ಕಳಿಗೆ ಸಹ ದಾಂಪತ್ಯದ ಬಗ್ಗೆ ಸೂಕ್ಷ್ಮವಿಚಾರಗಳನ್ನೂ, ನಿಯಮದಿಂದ ಏಳಿಗೆ ಅತಿಯಿಂದ ಕೇಡು ಹೇಗೆ ಉಂಟಾಗುತ್ತದೆಂಬುದನ್ನೂ ಹೆಣ್ಣು ಮಕ್ಕಳ ವಿಷಯದಲ್ಲಿ ಅವರಿಗಿರಬೇಕಾದ ದಯೆಯ, ಸಹಾನುಭೂತಿಯ ಆವಶ್ಯಕತೆಯನ್ನೂ ತಿಳಿಯಪಡಿಸಬೇಕು. ಈ ವಿಷಯದಲ್ಲಿ ಸಹ ಸಮಾಜದ ಹಿತೈಷಿಗಳಿಂದ ಪ್ರಚಾರವು ನಡೆಯಬೇಕಾಗಿದೆ.

ಮಕ್ಕಳ ಪೋಷಣೆ—ಮನೆಯ ವ್ಯವಸ್ಥೆ—ಸಂಸಾರದ ಯೋಗಕ್ಷೇಮ.

ಮಕ್ಕಳೇ ನಮ್ಮ ಜನಾಂಗದ ಆಸ್ತಿ. ಅವರ ಯೋಗಕ್ಷೇಮವೇ ನಮ್ಮ ಹೆಗ್ಗುರಿ. ಸರ್ಕಾರದವರೂ, ಸಂಸ್ಥೆಗಳೂ, ಸಂಸಾರಗಳೂ ಇದರ ವಿಷಯದಲ್ಲಿ ಎಷ್ಟು ಆಸಕ್ತಿ ವಹಿಸಿದರೂ, ಎಷ್ಟು ವೆಚ್ಚ ಮಾಡಿದರೂ, ಅಲ್ಪವೇ. ಸಣ್ಣ ಮಕ್ಕಳಿಗೆ ಅದರಲ್ಲೂ ಪಟ್ಟಣವಾಸಿಗಳಿಗೆ ಶುದ್ಧವಾದ ಆಹಾರದ ಸರಬರಾಯನ್ನೊದಗಿಸಬೇಕು. ಶಿಶುವಿಹಾರಗಳನ್ನು ಹೆಚ್ಚಿಸಬೇಕು. ತಾಯ್ತನದ ಕಲೆಯನ್ನು ಮಾತೆಯರಿಗೆ ತಿಳಿಸಬೇಕು ; ಏಕೆ, ಕೆಲವು ಕಾಲ ಆ ಬಗ್ಗೆ ಶಿಕ್ಷಣವನ್ನೇ ಕೊಡಿಸಬೇಕು. ವಿದ್ಯಾವತಿಯರಾದವರಿಗೂ ಇದು ಆವಶ್ಯಕ. ಏಕೆಂದರೆ ಪುಸ್ತಕದಲ್ಲಿ ಹೇಳಿರುವಂತೆ ನಡೆದುಕೊಳ್ಳುವುದು ನಿಲ್ಲತಕ್ಕ ಅಭ್ಯಾಸವಲ್ಲ; ಮತ್ತೆ ಮೊದಲಿನ ದಾರಿಯಲ್ಲೇ ಹೊರಳುವುದು ಸ್ವಾಭಾವಿಕವಾದುದು. ಅದನ್ನು ತಡೆಯಲು ಸರಿಯಾದ ಶಿಕ್ಷಣವು ಆವಶ್ಯಕ. ಪ್ರತಿಯೊಬ್ಬ ಗೃಹಿಣಿಯೂ ತನ್ನ ಯಜಮಾನನ, ತನ್ನ, ಮತ್ತು ತಮಗೆ ಸೇರಿದ ಬಂಧು ಬಳಗದವರ, ಸ್ನೇಹಿತರ ಹಿತಕ್ಕಿಂತ ಮುಂದೆ ಬಾಳನ್ನು ಬೆಳಗಿಸಲಿರುವ ಮಕ್ಕಳ ಹಿತವೇ ನೂರ್ಮಡಿಯಷ್ಟು ಮಿಗಿಲಾದುದೆಂಬುದನ್ನು ಮುಂದಿಟ್ಟು ಮಾಡಿಕೊಳ್ಳಬೇಕು.

ರಾಜಕೀಯರಂಗದಲ್ಲಿ

೧೯೨೦ ರಿಂದ ನಮ್ಮ ಸಂಸ್ಥಾನದಲ್ಲಿ ಹೆಂಗಸಿಗೂ ಅಧಿಕಾರವಿಷಯದಲ್ಲಿ ಗಂಡಸಿನಂತೆ ಸ್ಥಾನಮಾನಗಳು ದೊರೆತುವು. ವಿದ್ಯಾವತಿಯಾದ ಸ್ತ್ರೀ, ನೆಮ್ಮದಿವಂತರ ಮನೆಗೆ ಸೇರಿದ ಸ್ತ್ರೀ ವೋಟನ್ನು ಚಲಾಯಿಸುವ ಹಕ್ಕು ಪಡೆದಿದಾಳೆ. ಆದರೆ ಬರಿಯ ವೋಟು ಪಡೆದ ಮಾತ್ರಕ್ಕೆ ಸ್ತ್ರೀಯರ ಸ್ಥಿತಿ ಉತ್ತಮಗೊಂಡಿತೆಂದು ಭಾವಿಸಲಾಗದು. ಫ್ರಾನ್ಸ್ ದೇಶದ ಸ್ತ್ರೀಯರಿಗೆ ಈ ಬಗೆಯ ಹಕ್ಕು ದೊರೆತಿಲ್ಲದಿದ್ದರೂ ಅವರಿರುವ ಅಂತಸ್ತು ಇಂಗ್ಲೆಂಡಿನ ಸ್ತ್ರೀಯರದಕ್ಕಿಂತ ಮೇಲಾಗಿದೆಯೆಂದು ಪ್ರಾಜ್ಞರು ಹೇಳುತ್ತಾರೆ. ಭಾರತದಲ್ಲಿ Delimitation Committeeಯ ಸಲಹೆಯು ಜಾರಿಗೆ ಬಂದಾಗ ಸಹ ೫ರಲ್ಲಿ ಒಬ್ಬಾಕೆಗೆ ಅರ್ಹತೆ ದೊರೆವಂತಾಗುವುದು. ಆ ಹಕ್ಕನ್ನು ಎಲ್ಲ ಸ್ತ್ರೀಯರೂ ಸರಿಯಾಗಿ ಉಪಯೋಗಿಸಿಕೊಳ್ಳುವುದನ್ನು ಅರಿತಿಲ್ಲ.—ಪ್ರತಿನಿಧಿ ಸಭೆಗಳಲ್ಲಿ ಪ್ರತ್ಯೇಕ ಸ್ಥಾನಗಳನ್ನು ಮಿಾಸಲಿಡುವುದನ್ನು ಅಖಿಲಭಾರತ ಸ್ತ್ರೀ ಸಮ್ಮೇಳನವು ಖಂಡಿಸಿದೆ. ನಮ್ಮಲ್ಲಿ ಸಹ ನಾಮಕರಣ ಪದ್ಧತಿಯ ಮೇರೆಗೆ ಮುಂದೆ ಬರುವುದಕ್ಕಿಂತ ಸ್ಪರ್ಧಿಸಿ ಆರಿಸಿ ಸ್ಥಳಗಳಿಗೆ ಬರುವುದೇ ಪ್ರಶಂಸನೀಯವಾದುದು. ಇತ್ತೀಚೆಗೆ ಹೆಂಗಸರು ನಿಜವಾದ ಉತ್ಸಾಹದಿಂದ ಮುನಿಸಿಪಾಲಿಟಿ ಮತ್ತು ಜಿಲ್ಲಾ ಬೋರ್ಡುಗಳಲ್ಲಿ ಕೆಲಸಮಾಡಲು ಸ್ಪರ್ಧಿಸಿ ಜಯಶೀಲರಾಗಿ ಕೆಲಸಮಾಡುತ್ತಿರುವುದು ಶುಭಚಿಹ್ನೆಯಾಗಿದೆ. ಆದರೂ ನಿಜವಾದ ದೇಶಾಭಿಮಾನ ನಮ್ಮಲ್ಲಿರುವುದು ಕಡಮೆಯೆ ಎಂದು ಹೇಳಬೇಕು. ಸ್ವದೇಶಿ ವಸ್ತುಗಳನ್ನು ಮನಃಪೂರ್ವಕವಾಗಿ ಪುರಸ್ಕರಿಸುವ ದೃಢಮನಸ್ಸಿನ್ನೂ ಇಲ್ಲ. ಪರದೇಶಿ ವಸ್ತುಗಳನ್ನು ಕಂಡರೆ ಚಪಲತೆ ತಪ್ಪಿಲ್ಲ. ಒಗ್ಗಟ್ಟಿನಿಂದ ಕೆಲಸಮಾಡುವ ಮನೋಭಾವನೆಯೂ ಇನ್ನೂ ಬಂದಿಲ್ಲ. ಸಮಾಜಗಳು ಒಂದೊಂದೂ ಒಂದೊಂದು ದಿಕ್ಕಿಗೆ ಮುಖತಿರುಗಿಸಿರುತ್ತವೆ. ಕೇಂದ್ರಸಂಸ್ಥೆಯಾದ ಮಹಿಳಾ ಸಮ್ಮೇಲನದೊಂದಿಗೆ ಸರಿಯಾದ ಸೌಹಾರ್ದವೇರ್ಪಟ್ಟಿಲ್ಲ. ಇನ್ನು ಬಡಮಹಿಳೆಯರಿಗೂ ಈ ಸಮ್ಮೇಲನದವರಿಗೂ ಸ್ನೇಹ ಹೊಂದಿಲ್ಲವೆಂದು ಹೇಳಬೇಕಾಗಿಯೇ ಇಲ್ಲ. ಅಂತೂ ಈ ವಿಷಯದಲ್ಲಿ ಮಾಡತಕ್ಕುದು ಬಹಳವಾಗಿದೆ.

ಕಾನೂನಿನ ದೃಷ್ಟಿಯಲ್ಲಿ

೧೯೩೩ರ ಸುಧಾರಣೆಯ ಪ್ರಕಾರ ನಮ್ಮ ಹೆಂಗಸರ ಸ್ಥಿತಿಯು ಉತ್ತಮಗೊಂಡಿತು. ಮಕ್ಕಳಿಲ್ಲದಿದ್ದರೆ ಗಂಡನ ಆಸ್ತಿಗೆ ಹೆಂಡತಿಯೇ ಹಕ್ಕುದಾರಳೆಂದೂ ಆಕೆ ಆ ಆಸ್ತಿಯನ್ನು ಮಾರಬಹುದು ; ಇಲ್ಲವೇ ಆಧಾರ ಭೋಗ್ಯ ಮಾಡಬಹುದು ; ತನ್ನ ಇಷ್ಟಬಂದವರಿಗೆ ಆಸ್ತಿಯನ್ನು ಕೊಡಬಹುದು ಎಂದಾಯಿತು. ಇದೇನೋ ಒಂದು ರೀತಿಯಲ್ಲಿ ಅನುಕೂಲವಾದರೂ ಹೆಂಡತಿಯೇ ಮಕ್ಕಳಿರಲಿ ಇಲ್ಲದಿರಲಿ

ಮೊದಲ ಹಕ್ಕು ಪಡೆಯಬೇಕು; ಮಕ್ಕಳಿಗೆ ಬಂದರೇನು ತಾಯಿಗೆ ಬಂದರೇನು ಎನ್ನುವುದಾದರೆ ಎಷ್ಟು ಜನ ಮಕ್ಕಳು ತಮ್ಮ ತಾಯನ್ನು ಹೀನಾಯವಾಗಿ ಕಂಡಿಲ್ಲ? "ಹೆಂಗಸು ಆಸ್ತಿಪಾಸ್ತಿಯನ್ನು ತಿಳಿವಳಿಕೆಯಿಲ್ಲದೆ ಕಳೆದುಕೊಳ್ಳಬಹುದು" ಎಂಬ ಆಕ್ಷೇಪಣೆಯು ತಕ್ಕಮಟ್ಟಿಗೆ ಸಾಧುವಾದುದೇ. ಇದಕ್ಕೆ ಸಮಾಧಾನವಾಗಿ ವಿದ್ಯಾವತಿಯರಾದ ಹೆಂಗಸರಿಗೆ ಮೊದಲು ಹಕ್ಕನ್ನು ಕೊಟ್ಟು ಪ್ರಾರಂಭಿಸಬಹುದು.

ಇನ್ನೊಂದು ಕೊರತೆಯೆಂದರೆ ಅವಿಭಕ್ತಕುಟುಂಬದ ಗಂಡಸುಹಕ್ಕುದಾರರು ಹಂಚಿಕೊಂಡಾಗಲೇ ಈ ಹೆಂಗಸರಿಗೆ ಪಾಲು ಬರುವುದು. ಅವರು ವಿಭಾಗಮಾಡದೆ ಒಟ್ಟಿಗಿದ್ದರೆ ಇಷ್ಟವಿರಲಿ, ಇಲ್ಲದಿರಲಿ ಅವರೊಂದಿಗೇ ಇರಬೇಕು. ಆಸ್ತಿಯಲ್ಲಿ ಪಾಲನ್ನು ಕೇಳುವ ಹಕ್ಕಿಲ್ಲ.

ಮೂರನೆಯದಾಗಿ ಗಂಡನ ವೇತನದಲ್ಲಿ ಅಥವಾ ಸಂಪಾದನೆಯಲ್ಲಿ ಒಂದು ಭಾಗ ಅವಳ ಸ್ತ್ರೀಧನಕ್ಕೆಂದು ಕಾನೂನಿನ ಪ್ರಕಾರ ಕೊಡಿಸುವುದುತ್ತಮ.

ಪರಿಸಮಾಪ್ತಿ—ಒಟ್ಟಿನಲ್ಲಿ, ಕುಟುಂಬವೇ ಸದ್ಯದ ನಮ್ಮ ಸಮಾಜದ ಅಡಿಗಲ್ಲು. ಜನಾಂಗದ ಏಳಿಗೆಯೇ ನಮ್ಮ ಧ್ಯೇಯ. ಕುಟುಂಬವೆಂಬ ಕಟ್ಟೇ ಸರಿಯಾದುದಲ್ಲವೆಂದು ಕೆಲವರ ಅಭಿಪ್ರಾಯ. ಆದರೆ ಬೇರೆ ಬಗೆಯ ಇನ್ನೊಂದು ವ್ಯವಸ್ಥೆ ಸದ್ಯದಲ್ಲಂತೂ ನಮ್ಮ ದೇಶಕ್ಕೆ ಬರುವಹಾಗಿಲ್ಲ. ಅಲ್ಲಿಯವರೆಗೆ ಕುಟುಂಬದಲ್ಲಿ ವಿರಸ ಹುಟ್ಟದಂತೆ ನೋಡಿಕೊಳ್ಳುವುದು ನಮ್ಮ ಹೆಂಗಸರ ಕರ್ತವ್ಯ. ಅವಶ್ಯವಾದೆಡೆಯಲ್ಲಿ ಅವರು ಸಂಪ್ರದಾಯವನ್ನು ಸಡಿಲಿಸಬೇಕು. ಅವಶ್ಯವಾದೆಡೆಯಲ್ಲಿ ಬೇರೆ ವಿಹಿತವಾದ ಕಟ್ಟುಗಳನ್ನು ಹೊಂದಿಸಿಕೊಳ್ಳಬೇಕು. ಕಟ್ಟುಪಾಡಿಲ್ಲದೆ ಸ್ವೇಚ್ಛೆಯಾಗಿ ನಡೆಯುವುದು ಎಂದಿಗೂ ಶುಭದಾಯಕವಲ್ಲ.

ಗಾಂಧೀಜಿಯವರ ಹಿತವಾಣಿ

ಭಗವಂತನ ಸೃಷ್ಟಿಯಲ್ಲಿ ಹೆಂಗಸೇ ಉತ್ತಮಳು. . . . ನಮ್ಮ ಸಂಸ್ಕೃತಿಯು ಅವಳನ್ನು ಗಂಡಸಿನ ತೀರ ಅಧೀನಳನ್ನಾಗಿ ಮಾಡಿಬಿಟ್ಟಿದೆ; ಇದು ತಿದ್ದಿಕೊಳ್ಳಬೇಕಾದ ಅಂಶ; . . ಹಕ್ಕುಬಾಧ್ಯತೆಗಳ ವಿಷಯದಲ್ಲಿ ಅವಳಿಗೆ ಯಾವ ಬಗೆಯ ಕೊರತೆಗಳೂ ಇರಬಾರದು. . . ಮದುವೆ, ಮನೆ, ಮಕ್ಕಳು ಅವಳ ಪ್ರಪಂಚವಾದುದರಿಂದ ಅವಳಿಗೆ ಕೊಡಿಸುವ ವಿದ್ಯಾಭ್ಯಾಸವು ಇದಕ್ಕನುಗುಣವಾಗಿರಬೇಕು; . . ಮದುವೆಯ ಆದರ್ಶ ಆತ್ಮೋನ್ನತಿ . . . ಮದುವೆಯೆಂಬ ಕಟ್ಟುಪಾಡು ನಮ್ಮ ಮತವನ್ನು ರಕ್ಷಿಸಲಿರುವ ಆವರಣ; ಆ ಮತದ ತಳಹದಿಯು ಆತ್ಮಸಂಯಮನ . . . ಮನೆಯ ಕೆಲಸದಲ್ಲೇ ಹೆಂಗಸು ತನ್ನ ಎಲ್ಲಕಾಲ ಕಳೆದುಬಿಡಬಾರದು; . . ತನ್ನ ದೇಹವನ್ನು ಆಭರಣಗಳಿಂದಲಾಗಲಿ, ಬೆಲೆಯ ಉಡುಪಿನಿಂದಾಗಲಿ ಸಿಂಗರಿಸುವುದು

ತಪ್ಪು . . . ಕಾಮವು ನಿಜವಾದ ಪ್ರೇಮವಲ್ಲ; ಕಾಮವು ಸತ್ತು ಪ್ರೇಮವು ಅದರ ಸ್ಥಾನವನ್ನಾಕ್ರಮಿಸಬೇಕು; ಹೆಂಗಸು ಕೇವಲ ಕಾಮದಿಂದ ತನ್ನನ್ನು ಅಪೇಕ್ಷಿಸುವ ಗಂಡಸನ್ನು ವಿರೋಧಿಸಲು ಕಲಿಯಬೇಕು . . . ಇಚ್ಛೆಯಿಂದ ಮತ್ತೆ ಮದುವೆ ಯಾಗದಿರುವ ವಿಧವೆ ಹಿಂದೂಧರ್ಮವು ಪ್ರಪಂಚಕ್ಕೆ ಇತ್ತಿರುವ ಬಳುವಳಿಗಳಲ್ಲೊಂದು; ಬಲಾತ್ಕಾರದಿಂದ ಮದುವೆಯಾಗದೆ ನಿಲ್ಲುವ ವಿಧವೆ ಅದರ ಶಾಪಸ್ವರೂಪಿಣಿ . . . ದಿನಕ್ಕೆ ಒಂದಾಣೆಯೂ ಗತಿಯಿಲ್ಲದ ಹಿಂದೂ ಸ್ತ್ರೀಸಮುದಾಯಕ್ಕೆ ಚರಕವೇ ಶರಣು. ಯಾವಾಗ ಹೆಂಗಸರು ತಮ್ಮ ಸ್ವಂತ ಸುಖಕ್ಕಿಂತ ದೀನೆಯರ ಬಡವೆಯರ ಯೋಗಕ್ಷೇಮಕ್ಕೆ ಗಮನಕೊಡುವರೋ ಆಗಲೇ ಅವರಿಗೆ ದಯಾಮಯಿಯರೆಂಬ ಹೆಸರು ಸಲ್ಲುವುದು.

ಎಂ. ಆರ್. ಲಕ್ಷಮ್ಮ.

೫. ಇಂದಿನ ನಾಗರಿಕತೆಯಲ್ಲಿ ಗಣಿತದ ಪಾತ್ರ

"ಇಂದಿನ ನಾಗರಿಕತೆ" ಎಂಬ ಪದಗಳನ್ನು ಸತ್ವರಜಸ್ತಮೋಗುಣವರ್ತಿಗಳಾದ ಮೂರುವಿಧಗಳಲ್ಲಿಯೂ ಉಪಯೋಗಿಸಬೇಕಾಗುತ್ತದೆ. ಉಗ್ರವಾದ ವ್ಯಾಧಿಗಳ ಚಿಕಿತ್ಸೆ ಮತ್ತು ಅವುಗಳ ಮೂಲೋತ್ಪಾಟನ, ಭೂಮಿಯು ಫಲವತ್ತರವಾಗುವಂತೆ ಮಾಡಿ ಕೃಷಿಯೇ ಮುಂತಾದ ಕಸಬುಗಳನ್ನು ಉತ್ತಮಗೊಳಿಸಿ ಜನಗಳಿಗೂ ಪಶ್ವಾದಿಗಳಿಗೂ ಆವಶ್ಯಕವಾದ ಆಹಾರವಸ್ತುಗಳನ್ನು ಹೆಚ್ಚಿಸುವುದು, ಇವೇ ಮುಂತಾದುವು ಒಂದು ಕಡೆ; ಇನ್ನೊಂದು ಕಡೆ, ಶೀಘ್ರ ಪ್ರಯಾಣದ ಸೌಕರ್ಯಗಳು, ರೇಡಿಯೋ ಚಲಚ್ಚಿತ್ರ ಮುಂತಾಗಿ ಜನಗಳ ಸುಖ ಲೋಲುಪತೆಗಳನ್ನು ಹೆಚ್ಚಿಸತಕ್ಕ ವಿವಿಧೋಪಾಯಗಳು; ಮತ್ತೊಂದು ಕಡೆ, ರಾಕ್ಷಸರ ಯುದ್ಧವನ್ನು ಅಲ್ಲಗಳೆಯುವಂತೆ, ನಾನಾವಿಧದಲ್ಲಿ ಅರ್ಥಹಾನಿ ಪ್ರಾಣಹಾನಿಗಳನ್ನು ವಿಚಕ್ಷಣೆಯಿಲ್ಲದೆ ಮಾಡತಕ್ಕ ಬಾಂಬುಗಳು, ಸಬ್ ಮೆರಿನುಗಳು, ವೈಸುಗಳು ಮುಂತಾದ ಆಧುನಿಕ ಯುದ್ಧ ಸಲಕರಣೆಗಳು. ಇಂತಹ ನಾಗರಿಕತೆಯ ಯಾವ ಮುಖವನ್ನೇ ತೆಗೆದುಕೊಂಡರೂ, ಅದರ ಸೃಷ್ಟಿಕಾರಣವೂ ಜೀವಾಧಾರವೂ ಆಗಿರುವುದು ವಿಜ್ಞಾನದ ಹಲವಾರು ವಿಷಯಗಳು. ವಿಜ್ಞಾನಗಳಿಗೆಲ್ಲಾ ವಿಜ್ಞಾನವೆನ್ನಿಸಿಕೊಂಡಿರುವ ಗಣಿತದ ಹಿನ್ನೆಲೆಯು ಪ್ರತಿಯೊಂದು ನಾಗರಿಕತೆಯ ಬಾಬಿನಲ್ಲೂ ಅಡಗಿದೆ ಎಂಬುದನ್ನು ಎಲ್ಲರೂ ಒಪ್ಪುವರು. ಆದರೆ ಎಷ್ಟರ ಮಟ್ಟಿಗೆ ಮತ್ತು ಯಾವ ಮಟ್ಟದ ಗಣಿತ, ಯಾವ ರೂಪದ ಗಣಿತ ಎಂಬ ವಿಚಾರದಲ್ಲಿ ಸಾಮಾನ್ಯವಾಗಿ ತಪ್ಪು ಅಭಿಪ್ರಾಯಗಳಿರಬಹುದು. ಪ್ರಾಯಶಃ ಅನೇಕರಲ್ಲಿ, ನಾಗರಿಕತೆಯ ತಮೋಗುಣವು ಹೆಚ್ಚಿದಹಾಗೆಲ್ಲಾ ಗಣಿತದ ಮಟ್ಟವೂ ಹೆಚ್ಚುಹೆಚ್ಚಾಗಿ ಬೇಕಾಗುತ್ತದೆ ಎಂಬ ತಪ್ಪು ಭಾವನೆಯೂ, ಇಂದಿನ ಯುದ್ಧದ ಫಲವಾಗಿ ಉಂಟಾಗಿರಬಹುದು. ಉದಾಹರಣೆಯಾಗಿ ನೀರಿನ ಕೆಳಗೆ ಹಡಗು ಓಡಬೇಕಾದರೆ, ಅಥವಾ ಬೆಲ್ಜಿಯಂಇಂದ ಹೊಡೆದ ರಾಕೆಟ್ ಬಾಂಬು ಲಂಡನ್ ನಗರದ ಮೇಲೆ ಸರಿಯಾಗಿ ಬೀಳಬೇಕಾದರೆ, ಅದೆಂಥ ಅದ್ಭುತವಾದ ಲೆಕ್ಕಾಚಾರಗಳಿರಬಹುದು ಎಂದು ಆಶ್ಚರ್ಯಪಡುತ್ತಾರೆಯೇ ಹೊರತು, ಒಂದು ಹೊಸ ಔಷಧಿಯ ಗುಣವನ್ನೂ ಶಕ್ತಿಯನ್ನೂ ನಿರ್ಧರಿಸುವಂತಹ ವಿಷಯದಲ್ಲಿ ಕೂಡ ಉನ್ನತವಾದ ಗಣಿತ ವಿಚಾರಗಳು ಆವಶ್ಯಕವೆಂದು ಸಾಮಾನ್ಯವಾಗಿ ತಿಳಿದಿರುವುದಿಲ್ಲ. ನಾಗರಿಕತೆಯ ಯಾವ ವಿಷಯವೇ ಆಗಲಿ, ವಿಜ್ಞಾನವು ಮುಂದೆ ನುಗ್ಗತಕ್ಕ ಯೋಧ; ಔಷಧಿಯ ವಿಚಾರದಲ್ಲಿ

ರಸಾಯನ ಶಾಸ್ತ್ರವಾಗಿರಬಹುದು, ರೇಡಿಯೋ ಚಲಚ್ಚಿತ್ರಗಳಲ್ಲಿ ಭೌತಶಾಸ್ತ್ರ, ಶಿಲ್ಪ ಶಾಸ್ತ್ರಗಳಾಗಿರಬಹುದು. ಮತ್ತೊಂದರಲ್ಲಿ ವ್ಯವಸಾಯ ಶಾಸ್ತ್ರವೋ ಭೂಗರ್ಭ ಶಾಸ್ತ್ರವೋ ಆಗಿರಬಹುದು. ಈ ಶಾಸ್ತ್ರಗಳೇ ಸೇನೆ. ಈ ಶಾಸ್ತ್ರಗಳನ್ನೆಲ್ಲಾ ಒಟ್ಟು ಗೂಡಿಸಿ, ನಿಯತ ಪರಿಮಾಣಗಳನ್ನು ಕೊಟ್ಟು, ಬಂದ ಮಿಶ್ರವಸ್ತುವಿನ ಮೇಲೆ ಪರೀಕ್ಷೆಗಳನ್ನೆಸಗಿ, ಯುದ್ಧರಂಗಕ್ಕೆ—ಪ್ರಪಂಚದ ಮುಂದೆ—ಕರೆತರುವ ಸೇನಾ ನಾಯಕನು ಗಣಿತಶಾಸ್ತ್ರ. ಫೀಲ್ಡ್ ಮಾರ್ಷಲ್‌ಗಳಾದ ಐಸೆನ್‌ಹೌವರ್, ಝೂಕೌವ್, ಮಾಂಟ್ಗಾಮರಿ ಇವರು ಇಂದು ಪ್ರಸಿದ್ಧ ಸೇನಾನಾಯಕರು. ಅವರು ಬಂದೂಕ ಗಳನ್ನೂ ಮಾರ್ಟರ್ ಗನ್ನುಗಳನ್ನೂ ಇಟ್ಟುಕೊಂಡು ಸೇನೆಯ ಅಗ್ರದಲ್ಲಿ ವಿಜಯನಗರದ ರಾಮರಾಜನಂತೆ ಹೋರಾಡಲಿಲ್ಲ. ಸೇನೆಯ ಹಿಂಬದಿಯಲ್ಲಿ, ಎಲ್ಲಿಯೋ ಯಾರಿಗೂ ತಿಳಿಯದಂತೆ ಇದ್ದು, ಉಭಯಪಕ್ಷದವರ ಸೇನೆಗಳ ಸ್ಥಾನಗಳ ಭೂಪಟಗಳು, ಸೇನೆಗಳ ಚಲನೆಗಳನ್ನು ತೋರಿಸತಕ್ಕ ನಕ್ಷೆಗಳು ಇವುಗಳನ್ನಿಟ್ಟುಕೊಂಡು, ತನ್ನ ಸೇನೆಯು ಮುಂದೆ ಹೀಗೆ ಚಲಿಸಬೇಕು, ಹಾಗೆ ಚಲಿಸದರೆ ಶತ್ರುವು ಈ ರೀತಿ ತನ್ನ ಸ್ಥಾನಗಳನ್ನು ಬದಲಾಯಿಸಿಕೊಳ್ಳಬಹುದು ಎಂದು ಮುಂತಾದ ಲೆಕ್ಕಾಚಾರಗಳನ್ನು ಮಾಡಿ, ಯುದ್ಧಕ್ರಮವನ್ನು ಏರ್ಪಡಿಸುವುದೇ ಸೇನಾನಾಯಕನ ಪಾತ್ರ. ಕೇವಲ ಸೇನಾ ಸಂಖ್ಯೆ, ಯುದ್ಧ ಸಲಕರಣೆಗಳ ಸ್ಥಿತಿ ಮತ್ತು ಬಾಹುಳ್ಯ ಇವು ಮಾತ್ರವೇ ಸಾಲದೆ, ಇಂತಹ ಲೆಕ್ಕಾಚಾರಗಳ ಬುದ್ಧಿಶಕ್ತಿಯಮೇಲೆ ಯುದ್ಧದ ಫಲವೂ ನಿಲ್ಲಬಹುದು. ಇಂದಿನ ವೈಜ್ಞಾನಿಕ ನಾಗರಿಕತೆಯಲ್ಲಿ ಗಣಿತದ ಪಾತ್ರವು ಯುದ್ಧರಂಗದ ಫೀಲ್ಡ್ ಮಾರ್ಷಲ್‌ಗಳ ಪಾತ್ರಕ್ಕೆ ಬಹು ಮಟ್ಟಿಗೆ ಸಾಮ್ಯತೆಯನ್ನು ಪಡೆದಿದೆ.

ಇಂದಿನ ನಾಗರಿಕತೆಯ ಕೆಲವು ಉದಾಹರಣೆಗಳನ್ನು ತೆಗೆದುಕೊಂಡು, ಅವು ಗಳಲ್ಲಿ ಗಣಿತದ ಆವಶ್ಯಕತೆಯು ಹೇಗೆ, ಎಷ್ಟರ ಮಟ್ಟಿಗೆ ಉಂಟಾಗುತ್ತದೆ ಎಂಬುದನ್ನು ನಾಲ್ಕು ಮಾತುಗಳಲ್ಲಿ ವಿವರಿಸುವುದೇ ಈ ಲೇಖನದ ಉದ್ದೇಶ. ಒದಗುವ ಲೆಕ್ಕಗಳ ಹೇಳಿಕೆಯನ್ನು ಕೊಡುವುದು (ಅದೂ ಅಪೂರ್ಣವಾಗಿ) ಮಾತ್ರ ಪ್ರಕೃತ ಲೇಖನದ ಉದ್ದೇಶ; ಅವುಗಳ ಪೂರ್ಣ ವಿವರಣೆ ಮತ್ತು ಸಾಧನೆಗಳು ವಿಶದಪಡಬೇಕಾದರೆ ಒಂದು ದೊಡ್ಡ ಪುಸ್ತಕವೇ ಬೇಕಾಗುತ್ತದೆ. ಸಾಮಾನ್ಯ ವಾಚಕರಿಗೆ ಆ ಪುಸ್ತಕದ ಅತ್ಯಲ್ಪ ಭಾಗ ವಿನಾ, ಉಳಿದುದೆಲ್ಲಾ ಯಾವುದೋ ಪರಭಾಷೆಯಂತಿರುವುದು. ವಿವರಗಳೆಲ್ಲಾ ಈ ಲೇಖಕನಿಗೆ ತಿಳಿದಿಲ್ಲವೆಂದು ನಿಸ್ಸಂಕೋಚವಾಗಿ ಒಪ್ಪಿಕೊಳ್ಳಬಹುದು. ಇಂದಿನ ಯುದ್ಧ ಸಲಕರಣೆಗಳ ಗಣಿತವು ಯುದ್ಧರಹಸ್ಯವಾಗಿದ್ದು, ಎದುರುಪಕ್ಷದ ಯುದ್ಧವೈಜ್ಞಾನಿಕ ಪಟುಗಳಿಗೆ ಕೂಡ ಅನೇಕ ಭಾಗಗಳು ತಿಳಿದಿರಲಾರವು. ಪ್ರತಿಭಾ ರೇಖಾಗಣಿತದ (*Projective Geometry*) ಮೂಲ ತತ್ವಗಳು ಫ್ರಾನ್ಸ್ ದೇಶದ ಮಾನ್ಜೆ

(Monge, ೧೭೪೬-೧೮೧೮) ಎಂಬಾತನಿಂದ ಕಂಡುಹಿಡಿಯಲ್ಪಟ್ಟವು. ಆತನು ಫ್ರಾನ್ಸಿನ ಮಿಲಿಟರಿ ಕಾಲೇಜಿಗೆ ಸೇರಲು ಪ್ರಯತ್ನಿಸಿದಾಗ, ದೊಡ್ಡ ಮನೆತನದವನಲ್ಲ ವೆಂದು ಆತನಿಗೆ ಪ್ರವೇಶವನ್ನು ನಿರಾಕರಿಸಿದರು. ಆದರೆ ತನ್ನ ಗಣಿತ ಸಂಶೋಧನಗಳ ಸಹಾಯದಿಂದ, ದುರ್ಗಮವಾದ ಒಂದು ದುರ್ಗದ ನಕ್ಷೆಯನ್ನು ತಯಾರಿಸಿ ಕೊಟ್ಟ ಮೇಲೆ, ಆತನಿಗೆ ಮಿಲಿಟರಿ ಕಾಲೇಜಿನಲ್ಲಿ ಒಂದು ಅಧ್ಯಾಪಕ ಸ್ಥಾನವನ್ನು ಕೊಟ್ಟರು. ಆದರೆ ತನ್ನ ಗಣಿತ ಸಂಶೋಧನೆಗಳನ್ನು ಯುದ್ಧರಹಸ್ಯಗಳನ್ನಾಗಿಡಬೇಕೆಂದೂ ಅವನ್ನು ಪ್ರಕಟಿಸಲಾಗದೆಂದೂ ಕಟ್ಟಪ್ಪಣೆಮಾಡಿದರು. ಕಡೆಗೆ ಅವು ೧೭೯೯ ರಲ್ಲಿ ಪ್ರಕಟಿತವಾದುವು. ಇಂದು ಶಿಲ್ಪಶಾಸ್ತ್ರವೇ ಮೊದಲಾದುವುಗಳಲ್ಲೆಲ್ಲಾ ಅತ್ಯಂತ ಆವಶ್ಯಕ ವಿಷಯಗಳಾಗಿ, ಆ ಸಂಶೋಧನೆಗಳ ತತ್ವಗಳು ಆಧುನಿಕ ರೇಖಾಗಣಿತದಲ್ಲಿ ಸಾಮಾನ್ಯ ವಿಷಯಗಳಾಗಿವೆ.

ಮೊದಲು ಯುದ್ಧ ಸಲಕರಣೆಗಳ ವಿಚಾರವನ್ನೇ ತೆಗೆದುಕೊಳ್ಳೋಣ. ಒಂದು ಸ್ಥಳ ದಿಂದ ಮತ್ತೊಂದು ಸ್ಥಳದಲ್ಲಿರುವವನಿಗೆ ಒಂದು ಗುಂಡನ್ನೋ ಬಾಂಬನ್ನೋ ಹೇಗೆ ಸರಿಯಾಗಿ ತಲಪಿಸುವುದು ಎಂಬುದೇ ಪ್ರಶ್ನೆ. ಒಂದು ಕಲ್ಲನ್ನು ಮೇಲಕ್ಕೆ ಸೊಟ್ಟಾಗಿ ಎಸೆದರೆ, ಅದು ಪ್ಯಾರಾಬೊಲ (Parabola) ಎಂಬ ಒಂದು ವಕ್ರರೇಖೆಯನ್ನನುಸರಿಸಿ ಮತ್ತೊಂದು ಕಡೆ ನೆಲಕ್ಕೆ ಬೀಳುತ್ತದೆ. ಹೀಗೆ ಬೀಳತಕ್ಕ ಸ್ಥಳದ ದೂರವು ಎಸೆಯ ತಕ್ಕ ದಿಕ್ಕು ಮತ್ತು ವೇಗ ಇವುಗಳನ್ನು ಅನ್ವಯಿಸುತ್ತದೆ. ಬೀಳಬೇಕಾದ ಸ್ಥಳವನ್ನು ಗೊತ್ತುಮಾಡಿಕೊಂಡು (ಬಹಳ ದೂರದಲ್ಲಿರದಂತೆ) ಎಸೆಯತಕ್ಕ ವೇಗ ಅಥವಾ ದಿಕ್ಕನ್ನು ನಿಷ್ಕರ್ಷಿಸಬಹುದು. ವಿದ್ಯಾರ್ಥಿಗಳಿಗೆ ಈಗಿನ ಆಟಪಾಟಗಳಲ್ಲಿ ಸಾಮಾನ್ಯ ವಾದ ಒಂದು ಅನುಭವವಿದೆ. ಒಂದು ಕಬ್ಬಿಣದ ಗುಂಡನ್ನೋ ತಟ್ಟೆಯನ್ನೋ ಸಾಧ್ಯ ವಾದಷ್ಟು ದೂರಕ್ಕೆ ಹೋಗುವಂತೆ ಎಸೆಯಬೇಕಾದರೆ (putting the shot ; discus throw) ಅದನ್ನು ಊರ್ಧ್ವದ ದಿಕ್ಕಿಗೆ ೪೫ ಡಿಗ್ರಿಗಳಷ್ಟು ಕೆಳಗೆ ಇರುವ ದಿಕ್ಕಿನಲ್ಲಿ (ಅಥವಾ ಕ್ಷಿತಿಜದ ತಳಕ್ಕೆ ೪೫ ಡಿಗ್ರಿಗಳಷ್ಟು ಮೇಲಕ್ಕೆ) ಎಸೆದರೆ, ಅತ್ಯಂತ ಫಲ ಕಾರಿಯಾಗುತ್ತದೆ. ಇಲ್ಲಿ ಗುಂಡಿಗೆ ಅಥವಾ ತಟ್ಟೆಗೆ ಕೊಡತಕ್ಕ ವೇಗವು ಮನುಷ್ಯನ ಬಾಹುಬಲವನ್ನು ಅನ್ವಯಿಸುತ್ತದೆ. ದಿಕ್ಕನ್ನು ಸರಿಯಾಗಿ ನಿಷ್ಕರ್ಷಿಸಿಕೊಂಡು, ಇರ ತಕ್ಕ ಬಾಹುಬಲಕ್ಕೆ ಅತ್ಯಂತ ಉತ್ತಮ ಫಲವನ್ನು ಪಡೆಯಬಹುದು. ಹೀಗೆಯೇ ಒಂದು ಕುರಿತ ಸ್ಥಳದಿಂದ ಒಂದು ಗುಡ್ಡದ ಮೇಲಕ್ಕೆ ಹೊಡೆಯುವುದು, ಅಥವಾ ಗುಡ್ಡದ ಮೇಲಣ ಸ್ಥಳದಿಂದ ಕೆಳಗೆ ಇರುವ ಒಂದು ವಸ್ತುವನ್ನು ಹೊಡೆಯುವುದು, ಮುಂತಾದ ಪ್ರಶ್ನೆಗಳನ್ನು, ದೂರ, ವೇಗ, ಹೊಡೆಯುವ ದಿಕ್ಕು ಇವುಗಳ ಪರಸ್ಪರ ಸಂಬಂಧದ ಪ್ರಕಾರ ತಿರ್ಮಾನಿಸಿಕೊಳ್ಳಬಹುದು.

ಇವೆಲ್ಲಾ ಕೇವಲ ಸಾಮಾನ್ಯ ವಿಷಯಗಳು. ವೇಗವು ಹೆಚ್ಚಾದರೆ ಅಥವಾ ಹೆಚ್ಚಾಗಬೇಕಾದರೆ, ಗಣಿತವು ಸ್ವಲ್ಪ ಜಟಿಲವಾಗುತ್ತದೆ. ಪಥವು ಪ್ಯರಾಬೊಲ ಆಗುವುದಕ್ಕೆ ಬದಲಾಗಿ ದೀರ್ಘವೃತ್ತ (Ellipse) ವಾಗುತ್ತದೆ. ವೇಗವು ಹೆಚ್ಚುವುದ ರಿಂದ, ಪ್ರಯೋಗಿಸಲ್ಪಟ್ಟ ವಸ್ತುವು ಅಂತರಿಕ್ಷದಲ್ಲಿ ಬಹಳ ಮೇಲಕ್ಕೆ ಹೋಗುತ್ತದೆ. ಈ ಚಲನೆಗಳಿಗೆಲ್ಲಾ ಮೂಲ ಕಾರಣವಾದ ಭೂಮಿಯ ಗುರುತ್ವಾಕರ್ಷಣ ಶಕ್ತಿಯು (Force of Gravity) ದೂರ ಹೆಚ್ಚಿದಂತೆಲ್ಲಾ ಕಡಮೆಯಾಗುತ್ತದೆ. ಒಂದು ವಸ್ತುವು **ನೇರವಾಗಿ** ಭೂಮಿಗೆ ಬೀಳುತ್ತಾ ಇದ್ದರೆ, ಅದರ ವೇಗವು ಪ್ರತಿ ಸೆಕೆಂಡಿನಲ್ಲೂ g ಎಂಬ ಸಂಖ್ಯೆಯ ಪರಿಣಾಮದಷ್ಟು ಹೆಚ್ಚುತ್ತಾ ಹೋಗುತ್ತದೆ. ಈ ಸಂಖ್ಯೆಯ ಬೆಲೆ ಭೂಮಿಯ ಮೇಲ್ಮೈಯ ಹತ್ತಿರ ಸುಮಾರು ೩೨ ಅಡಿಗಳು. ಭೂಮಿಯ ಆಕರ್ಷಣ ಶಕ್ತಿಯನ್ನು ಅವಲಂಬಿಸಿರತಕ್ಕ, ಆ ಶಕ್ತಿಯನ್ನು ಸೂಚಿಸತಕ್ಕ ಸಂಖ್ಯೆಯಿದು. ಅಂತರಿಕ್ಷದಲ್ಲಿ ಬಹಳ ಮೇಲೆ ಹೋದ ಹಾಗೆಲ್ಲಾ g ಯ ಬೆಲೆ ಕಡಮೆಯಾಗುತ್ತಾ ಹೋಗುತ್ತದೆ. ಈ ಬದಲಾವಣೆಯನ್ನು ನಿಖರವಾಗಿ ಅಳೆಯತಕ್ಕ ನಿಯಮವು ನ್ಯೂಟನ್ನಿನ ಗುರುತ್ವಾಕರ್ಷಣ ಸಿದ್ಧಾಂತದಿಂದ ಏರ್ಪಡುತ್ತದೆ. ಇದರ ಪ್ರಕಾರ ಗಣಿತವನ್ನು ಸಾಧಿಸಿ, ಬಹಳ ವೇಗವಾಗಿ ಅಥವಾ ಬಹಳ ದೂರಕ್ಕೆ ಎಸೆಯಲ್ಪಟ್ಟ ವಸ್ತುವು ದೀರ್ಘ ವೃತ್ತದ ಆಕೃತಿಯುಳ್ಳ ಪಥದಲ್ಲಿ ಚಲಿಸುತ್ತದೆ ಎಂಬುದನ್ನು ತಿಳಿಯ ಬಹುದು. ಇದರ ಗಣಿತವೂ, ಗ್ರಹಗಳು ಸೂರ್ಯನ ಸುತ್ತಲೂ ದೀರ್ಘವೃತ್ತಾಕೃತಿ ಗಳುಳ್ಳ ಪಥಗಳಲ್ಲಿ ಚಲಿಸುತ್ತವೆ ಎಂಬುದರ ಗಣಿತವೂ ಎರಡೂ ತತ್ವಶಃ ಒಂದೇ. ಆದರೆ ನಮ್ಮ ಪ್ರಕೃತ ವಿಷಯಕ್ಕೆ ಇದು ಕೂಡ ಸ್ಥೂಲವಾದ ಗಣಿತ. ವಸ್ತುವು ಅಂತರಿಕ್ಷದಲ್ಲಿ ಹೋಗುತ್ತಿರುವಾಗ, ಅಂತರಿಕ್ಷವು ಸ್ವಲ್ಪಮಟ್ಟಿಗೆ ಪ್ರತಿಭಟನೆಯನ್ನು (air resistance) ತೋರಿಸುತ್ತದೆ. ಈ ಪ್ರತಿಭಟನೆಯು ವಸ್ತುವಿನ ವೇಗವು ಹೆಚ್ಚಿದ ಹಾಗೆಲ್ಲಾ ಹೆಚ್ಚಬಹುದು. ಅದರ ಪರಿಮಾಣವು ಅಂತರಿಕ್ಷದ ಸ್ಥಿತಿ, ಗಾಳಿಯ ಒತ್ತಡ, ವೇಗ ಮುಂತಾದ ಅನೇಕ ಸಂದರ್ಭಗಳಿಗನುಸಾರವಾಗಿ ಬದಲಾಯಿಸುತ್ತದೆ. ಇದಕ್ಕೆ ಕ್ಲಿಪ್ತವಾದ ಯಾವುದೊಂದು ನಿಯಮವೂ ದೊರಕುವುದಿಲ್ಲ. ಸಂದರ್ಭಾನು ಸಾರವಾಗಿ ತಾತ್ಕಾಲಿಕಗಳಾದ ಮತ್ತು ಹೆಚ್ಚು ಕಡಮೆ ಸ್ಥೂಲವಾದ ನಿಯಮಗಳನ್ನು ಪ್ರಯೋಗಗಳ ಮೂಲಕ ಪಡೆಯಬೇಕಾಗುತ್ತದೆ. ಈ ನಿಯಮಗಳನ್ನೂ ಗಮನಕ್ಕೆ ತೆಗೆದುಕೊಂಡು, ಸೂಕ್ತವಾದ ಗಣಿತ ಕ್ರಿಯೆಗಳಿಂದ, ದೂರ, ವೇಗ, ದಿಕ್ಕು, ಕಾಲ ಇವುಗಳಿರುವ ಪರಸ್ಪರ ಸಂಬಂಧವನ್ನು ಪಡೆಯಬೇಕಾಗುತ್ತದೆ.

ಇದಕ್ಕೆ ಆವಶ್ಯಕವಾದ ಗಣಿತದ ಮಟ್ಟವು ತಕ್ಕಮಟ್ಟಿಗೆ ಹೆಚ್ಚಿನದು. ಆದರೆ ಒಟ್ಟಿನಲ್ಲಿ ಇದೆಲ್ಲಾ ಹಳೆಯ ಗಣಿತ,—ನ್ಯೂಟನ್, ಬರ್‌ನೌಲಿ ಮುಂತಾದವರ ಕಾಲದ

ಗಣಿತ. ರಿವಾಲ್ವರಿನಿಂದ ಹೊಡೆದ ಗುಂಡು, ಚೆಂಡು ಗೋಡೆಗೆ ತಗಲುವಂತೆ ಹೋಗಿ ಹೊಡೆಯುವುದಿಲ್ಲ. ವಸ್ತುವನ್ನು ಕೊರೆದುಕೊಂಡು ಹೋಗುತ್ತದೆ. ಎಂದರೆ ಗುಂಡಿಗೆ ಲಾಂಬಿಕವಾದ ಒಂದು ವೇಗದ ಜತೆಗೆ ಭ್ರಮಣ ಸಂಯೋಜನಿತವಾದ ಒಂದು ವೇಗವೂ ಶಕ್ತಿಯೂ ಇರುತ್ತದೆ. (It has a linear velocity as well as an angular velocity). ಇದನ್ನೂ ಲೆಕ್ಕಕ್ಕೆ ತೆಗೆದುಕೊಂಡು ಗುಂಡಿನ ಚಲನೆಯನ್ನು ನಿಷ್ಕರ್ಷಿಸಬೇಕಾಗುತ್ತದೆ. ಬಹಳ ದೂರ ಹೋಗಬೇಕಾದ ವಸ್ತುಗಳ ವಿಷಯದಲ್ಲಿ,—ಉದಾಹರಣೆ, ಜರ್ಮನರು ಪ್ರಯೋಗಿಸುತ್ತಿದ್ದ ವಿ-ಬಾಂಬುಗಳು.—ಮತ್ತೂ ಒಂದು ವಿಷಯವನ್ನು ಗಮನಿಸಬೇಕು. ಪ್ರಯೋಗಿಸಿದ ಸ್ಥಳವೂ ಬೀಳುವ ಸ್ಥಳವೂ ಭೂಗೋಳದ ಮೇಲೆ ಎರಡು ಬೇರೆ ಬೇರೆ ಸ್ಥಳಗಳಾಗಿ, ಅವುಗಳ ಅಕ್ಷಾಂಶ ರೇಖಾಂಶಗಳನ್ನೂ ಭೂಗೋಳದ ನಿಖರವಾದ ರೂಪವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಏರೋಪ್ಲೇನ್ ಅಥವಾ ಬಾಂಬರ್ ವಿಮಾನದಲ್ಲಿ ಕುಳಿತು ಒಂದು ನಿರ್ದಿಷ್ಟವಾದ ಗುರಿಗೆ ಬಾಂಬು ಹಾಕಬೇಕಾದರೆ, ವಿಮಾನವು ಚಲಿಸುತ್ತಿರುವ ವೇಗ ಮತ್ತು ದಿಕ್ಕು, ಅದರ ಎತ್ತರ, ಗಾಳಿಯ ಪ್ರತಿಭಟನೆ ಇವುಗಳಿಂದ ಬಾಂಬು ಚಲಿಸಲಿತಕ್ಕ ಪಥವನ್ನು ನಿಷ್ಕರ್ಷಿಸಿ, ಅದಕ್ಕನುಸಾರವಾಗಿ ಕ್ಲಿಪ್ತವಾದ ಕಾಲಕ್ಕೆ ಸರಿಯಾಗಿ ಬಾಂಬನ್ನು ಬೀಳಿಸಬೇಕು. ಸ್ವಲ್ಪ ವ್ಯತ್ಯಾಸವಾದರೂ ಅದು ಗುರಿ ತಪ್ಪಿ ಎಷ್ಟೋ ದೂರದಾಚೆ ಬೀಳುವುದು. ಬಾಂಬು ಹಾಕುವವನು ಈ ಲೆಕ್ಕಗಳನ್ನು ಮಾಡಿಕೊಂಡು ಕೂರುವುದಿಲ್ಲ. ಎಲ್ಲವನ್ನೂ ಮಾಡಿ ಖಚಿತವಾಗಿ ಬರೆದಿಟ್ಟಿರುವ ನಕ್ಷೆಗಳೂ ಕೋಷ್ಟಕಗಳೂ ಅವನ ಮುಂದೆ ಸಿದ್ಧವಾಗಿರುತ್ತವೆ. ಅವನ್ನು ನೋಡಿಕೊಂಡು, ಅವನು ತನ್ನ ಕಾರ್ಯವನ್ನು ಮಾಡುತ್ತಾನೆ. ಈ ನಕ್ಷೆಗಳೂ ಕೋಷ್ಟಕಗಳೂ ಕೆಲವು ಗಣಿತ ವಿಷಯಗಳು ಕೂಡ ಅತ್ಯಂತ ರಹಸ್ಯಗಳಾಗಿ ಕಾಪಾಡಲ್ಪಡುತ್ತವೆ.

ಗಣಿತಶಾಸ್ತ್ರದ ಚರಿತ್ರೆಯಲ್ಲಿ ವಿಸ್ಮಯಕರವಾದ ಸಂಗತಿಯೊಂದು ಏರೋಪ್ಲೇನುಗಳ ಚಲನೆಗೆ ಸಂಬಂಧಪಟ್ಟುದು. ಈ ಚಲನೆಯನ್ನು ವಿವರಿಸತಕ್ಕ ಶಾಸ್ತ್ರಕ್ಕೆ ವಾಯು ಚಲನ ಸಾಸ್ತ್ರ (Aero-Dynamics) ಎಂದು ಹೆಸರು. ಇದರ ಅನೇಕ ಮುಖ್ಯವಾದ ಸಿದ್ಧಾಂತಗಳು ಊಹಾ ಜನಕ ಸಂಖ್ಯೆಯ (Imaginary Number) ಆಧಾರದ ಮೇಲೆ ನಿಂತಿವೆ. ಋಣ ಸಂಖ್ಯೆಗೆ (Negative Number) ವರ್ಗ ಮೂಲವಾಗತಕ್ಕಂಥ ವಾಸ್ತವವಾದ ಸಂಖ್ಯೆ ಇಲ್ಲದ್ದರಿಂದ, ಊಹಾ ಜನಕ ಸಂಖ್ಯೆಗಳು ಸೃಷ್ಟಿಸಲ್ಪಟ್ಟವು. ಇದನ್ನು ಮೊದಲು ಪ್ರತಿಪಾದಿಸಿದವನು ಇಟಲಿ ದೇಶದ ಕಾರ್ಡಾನ್ (Cardan, ೧೫೦೧-೧೫೭೬) ಎಂಬಾತನು. ಅನೇಕ ಶತಮಾನಗಳ ಕಾಲ, ಇದೊಂದು ವಿನೋದವಾಗಿದ್ದು, ವರ್ಗಸಮೀಕರಣಗಳ ಸಾಧನೆಗೆ (solution of quadratic equations)

ಒಂದು ಪೂರ್ಣತ್ವವನ್ನು ಕೊಡುವುದೂ ಘನ ಸಮೀಕರಣ ಸಾಧನೆಗೆ ಸಹಾಯಕ ವಾಗುವುದೂ ಇದರ ಉಪಯೋಗವಾಗಿದ್ದಿತು. ಹದಿನೆಂಟನೆಯ ಹತ್ತೊಂಬತ್ತನೆಯ ಶತಮಾನಗಳಲ್ಲಿ, ಊಹಾ ಜನಕ ಸಂಖ್ಯೆಯು $x+iy$ ಎಂಬ ರೂಪತಾಳಿ, ಅದರ ಗಣಿತವನ್ನು ವಿವರಿಸುವ ದೊಡ್ಡದೊಂದು ಶಾಖೆಯು ಮಹತ್ತರವಾಗಿ ಬೆಳೆಯಿತು. ಈ ಶಾಖೆಯು ಕೇವಲ ನಿಷ್ಪ್ರಯೋಜನವಾದ, ಗಣಿತಶಾಸ್ತ್ರಜ್ಞನ ಒಂದು ಗಾಳಿ ಗೋಪುರವಾಗಿರದೆ, ಅದರ ಫಲಿತಾಂಶಗಳು ಪ್ರಾಪಂಚಿಕ ವಿಚಾರಗಳಿಗೆ ಎಷ್ಟೋ ಸಂದರ್ಭಗಳಲ್ಲಿ ಉಪಯೋಗವುಳ್ಳುವಾಗಿ ಕಂಡುಬಂದಿವೆ. ಏರೋಪ್ಲೇನಿನ ಚಲನೆಯೂ ಅದರ ರೆಕ್ಕೆಗಳ ಆಕಾರವೂ ಅರ್ಥವಿಲ್ಲದ, ಅಸ್ತಿತ್ವವಿಲ್ಲದ $\sqrt{-1}$ ಎಂಬ ಕಲ್ಪಿತವಾದ ಒಂದು ಸಂಖ್ಯೆಯ ಸಹಾಯದಿಂದ ಮಾತ್ರವೇ ನಿರ್ಧರಿಸಲ್ಪಡಬೇಕಾಗಿದೆ ಎಂದರೆ ಆಶ್ಚರ್ಯವಲ್ಲವೆ! ಮಿಥ್ಯವಲ್ಲದ್ದು ಮಿಥ್ಯೆಯಿಂದ ಸೃಷ್ಟಿಯಾದಹಾಗಾಯಿತು! ಗಣಿತ ಸಂಶೋಧಕನು ತನ್ನ ಸಂಶೋಧನೆಗಳನ್ನು ನಡೆಸುವಾಗ, ಅವುಗಳಿಂದ ಏನಾದರೂ ಪ್ರಯೋಜನವುಂಟೆ ಎಂದು ಯೋಚಿಸುವುದೇ ಇಲ್ಲ. ತನ್ನ ಭಾವನೆಗಳು, ತನ್ನ ತರ್ಕಸರಣಿಗೆ ಇವುಗಳ ಪ್ರಕಾರ ಬರುವ ಸಿದ್ಧಾಂತವೊಂದನ್ನು ವಿಶದೀಕರಿಸುವುದು ಮಾತ್ರ ಆತನ ಕೆಲಸ. ಆ ಕೆಲಸದ ಸಂಪೂರ್ಣತೆಯೇ ಅವನಿಗೆ ಪ್ರತಿಫಲ. ಮುಂದೆ ಯಾವಾಗಲೋ ಯಾರಿಂದಲೋ ಆತನ ಸಿದ್ಧಾಂತದ ಕೆಲವು ಭಾಗಗಳು ಯಾವುದೋ ಬೇರೊಂದು ವಿಜ್ಞಾನ ಶಾಸ್ತ್ರಕ್ಕೆ ಅಥವಾ ಬೇರೊಂದು ಗಣಿತ ಶಾಖೆಗೆ ಅನಿರೀಕ್ಷಿತ ವಾದ ರೀತಿಯಲ್ಲಿ ಉಪಯೋಗಕ್ಕೆ ಬರಬಹುದು. ಹೀಗೆ ಉಪಯೋಗಕ್ಕೆ ಬಂದರೆ, ಗಣಿತ ಸಂಶೋಧಕನ ಕೃತಿಗೆ ದ್ವಿಗುಣಿತವಾದ ಕೀರ್ತಿ ಸಲ್ಲುತ್ತದೆ, ಉಪಯೋಗಕ್ಕೆ ಬಾರದಿದ್ದರೆ ಅವನ ಕೃತಿಗೆ ಅವಮರ್ಯಾದೆ ಏನೂ ಇಲ್ಲ. ಹೀಗೆ ಅನಿರೀಕ್ಷಿತವಾದ ಉಪಯೋಗಕ್ಕೆ ಬಂದಿರುವ ದೃಷ್ಟಾಂತಗಳು ಇನ್ನೂ ಅನೇಕ ಇವೆ. ರೇಖಾಗಣಿತದ ಒಂದು ಕಾಲ್ಪನಿಕ ವಿಸ್ತರಣೆಯಾಗಿರುವ ರೀಮಾನಿಯನ್ ಜಾಮೆಟ್ರಿ (*Riemannian Geometry*) ಎಂಬುದು ಐನ್‌ಸ್ಟೈನರ ಸಾಪೇಕ್ಷಕ ಸಿದ್ಧಾಂತಕ್ಕೆ (*Theory of Relativity*) ಮೂಲಾಧಾರವಾದ ಗಣಿತ. ಐನ್‌ಸ್ಟೈನರ ಸಿದ್ಧಾಂತದಿಂದ ಖಗೋಳ ಶಾಸ್ತ್ರದ ಅನೇಕ ಸಮಸ್ಯೆಗಳು ನಿವಾರಿತವಾಗಿವೆ.

ರೈಲ್ವೆ ಕಂಬಿಗಳನ್ನು ಹಾಕುವಾಗ ಎಷ್ಟು ಬಗೆಯ ಲೆಕ್ಕಾಚಾರಗಳು ಬರುತ್ತವೆ? ಹಾದಿಯ ಮಟ್ಟದ ಏರಿಳಿತಗಳನ್ನು ಅಳತೆ ಮಾಡಿಕೊಳ್ಳಬೇಕು. ತಿರುಗಣೆಗಳ (Curves) ವ್ಯಾಸವನ್ನು ಅಳೆಯಬೇಕು. ಒಂದು ಸೇತುವೆಯನ್ನು ನಿರ್ಮಿಸಬೇಕಾದರೆ, ಸೇತು ವೆಯಮೇಲೆ ಬೀಳುವ ಭಾರವನ್ನೂ ನದಿಯ ಪ್ರವಾಹದ ಭರವನ್ನೂ ತಡೆದುಕೊಳ್ಳತಕ್ಕ ಶಕ್ತಿಯುಳ್ಳ ಅಸ್ತಿಭಾರವನ್ನು ಹಾಕಬೇಕು, ಇತ್ಯಾದಿ. ಒಂದು ಸಣ್ಣ ಉದಾಹರಣೆ

ಯಾಗಿ, ತಿರುಗಣೆಯಲ್ಲಿ ರೈಲು ಹೋಗಬೇಕಾದರೆ, ಒಂದು ಕಡೆ ಕಂಬಿಗಿಂತ ಮತ್ತೊಂದು ಕಡೆಯ ಕಂಬಿಯು ಎತ್ತರವಾಗಿರುವಂತೆ ನಿರ್ಮಿಸುತ್ತಾರೆ. ತಿರುಗಣೆಯಲ್ಲಿ ಚಕ್ರಗಳು ತಿರುಗುವಾಗ, ಅವುಗಳ ಅಂಚುಗಳ ಮೇಲೆ ಭಾರ ಬೀಳದಂತೆ ಇರುವುದಕ್ಕಾಗಿ ಹೀಗೆ ಮಾಡಬೇಕಾಗುತ್ತದೆ. ರೈಲು ಹೋಗಬೇಕಾದ ವೇಗ, ತಿರುಗಣೆಯ ವ್ಯಾಸ ಇವುಗಳಿಂದ ಕಂಬಿಗಳಿಗೆ ಎತ್ತರದಲ್ಲಿರುವ ವ್ಯತ್ಯಾಸವನ್ನು ನಿಷ್ಕರ್ಷಿಸಬೇಕು.

ಇಂದಿನ ಕಟ್ಟಡಗಳ ನಿರ್ಮಾಣಗಳು, ಯಂತ್ರೋಪಕರಣನಿರ್ಮಾಣಗಳು, ಇವುಗಳಲ್ಲೆಲ್ಲಾ ಹೆಜ್ಜೆಹೆಜ್ಜೆಗೂ ಗಣಿತದ ಸಹಾಯವು ಬೇಕು. ಒಂದು ತಿರುಪಿನ ಮೊಳೆ (screw) ಯನ್ನು ಮಾಡುವಾಗ ಮೊಳೆಯ "ದಾರ"ವನ್ನು ನಿಖರವಾಗಿ ಎಳೆಯಬೇಕು. ಒಂದು ದಂತ ಚಕ್ರವನ್ನು (toothed wheel) ರಚಿಸುವಾಗ, ಹಲ್ಲುಗಳಿಗೆ ಒಂದಕ್ಕೊಂದರ ನಡುವೆ ಇರುವ ಸ್ಥಳವನ್ನು ನಿಖರವಾಗಿ ಇಡಬೇಕು. ಇಂಥ ಚಕ್ರದ ರಚನೆಯಿಂದ ಮೊದಲುಗೊಂಡು, ಭೂಮಿಯು ಸೂರ್ಯನ ಸುತ್ತಲೂ ಸುತ್ತುವ ಚಲನೆಯನ್ನು ನಿಖರವಾಗಿ ನಿರ್ಧರಿಸಿದ ಹೊರತು, ಗಡಿಯಾರವನ್ನು ತಯಾರಿಸುವುದು ಹೇಗೆ ಸಾಧ್ಯ? ವಿಜ್ಞಾನಿಯು ಕೈಮೈಗಳನ್ನು ಪೆಟ್ಟುಮಾಡಿಕೊಂಡು, ಖಗೋಳಶಾಸ್ತ್ರದ ಅರಿವಿಗಾಗಿ ರಾತ್ರಿಗಳಲ್ಲಿ ನಿದ್ರೆಗೆಟ್ಟು, ಈ ಸಂಶೋಧನೆಗಳನ್ನೆಲ್ಲಾ ಮಾಡಿದುದರ ಫಲವಾಗಿ, ಇಂದು ಅಂದವಾದ ಗಡಿಯಾರಗಳು ಎಲ್ಲರ ಕೈಗಳನ್ನೂ ಅಲಂಕರಿಸಬಲ್ಲುವು. ಶಿವನಸಮುದ್ರದಲ್ಲಿ ಕಾವೇರಿಯ ನೀರು ಕೆಲವು ಚಕ್ರಗಳ ಮೇಲೆ ಬಿದ್ದು ವಿದ್ಯುಚ್ಛಕ್ತಿಯನ್ನು ಉಂಟುಮಾಡುತ್ತದೆ. ಆ ವಿದ್ಯುಚ್ಛಕ್ತಿಯನ್ನು ಶೇಖರಿಸಿ ಊರಿಂದೂರಿಗೆ ಕಳುಹಿಸಲು, ಮತ್ತು ೭೮,೦೦೦ ವೋಲ್ಟುಗಳ ಶಕ್ತಿಯನ್ನು ೨೨೦ ವೋಲ್ಟುಗಳ ಶಕ್ತಿಗೆ ಪರಿವರ್ತಿಸಿ ನಿಮ್ಮ ಮನೆಯ ದೀಪಗಳು ಉರಿಯುವಂತೆ ಮಾಡಬೇಕಾದರೆ, ಯಾವಯಾವ ಗಣಿತ ಶಾಖೆಗಳು—ಬೀಜ ಗಣಿತ, ತ್ರಿಕೋಣಮಿತಿ, ಚಲನಶಾಸ್ತ್ರ, ಇತರ ಪ್ರೌಢ ಶಾಖೆಗಳು—ಆವಶ್ಯಕವಾಗುತ್ತವೆಂದು ಊಹಿಸಬಲ್ಲಿರಾ?

ಇವೆಲ್ಲಾ ಸರಿ. ಆದರೆ ವೈದ್ಯಶಾಸ್ತ್ರ, ವ್ಯವಸಾಯಶಾಸ್ತ್ರ ಮುಂತಾದುವುಗಳ ಸಂಶೋಧನೆಗಳಲ್ಲಿ ಗಣಿತಕ್ಕೆ "ನಿಮಗೆ ಇಲ್ಲಿ ಪ್ರವೇಶವಿಲ್ಲ, ದೂರ ಇರಿ" ಎಂದು ಹೇಳಬಹುದಷ್ಟೆ. ಇದಕ್ಕೆ ಉತ್ತರವಾಗಿ "ನಾನಿಲ್ಲದೆ, ನೀವು ಸ್ವಲ್ಪ ಮಟ್ಟಿಗೆ ಕುರುಡನಂತೆ ಸಂಚರಿಸಬಲ್ಲಿರಿ ಎಂಬುದೇನೋ ದಿಟ. ಆದರೆ ನಾನು ದಾರಿ ತೋರಿಸಿದ ಹೊರತು ನೀವು ಹಳ್ಳಕ್ಕೆ ಬಿದ್ದೀರಿ, ಅನರ್ಥಗಳಾದಾವು" ಎಂದು ಗಣಿತವು ಎಚ್ಚರಕೊಡುತ್ತದೆ. ಒಂದು ಹೊಸ ಮಾದರಿಯ ಗೊಬ್ಬರವನ್ನು ಉಪಯೋಗಿಸುವುದರಿಂದ, ಹೆಚ್ಚು ಬೆಳೆ ಬರಬಹುದು. ಆದರೆ ಗೊಬ್ಬರಕ್ಕೆ ಹಾಕುವ ಹಣಕ್ಕೆ ಆದಾಯಕರವಾಗುವಷ್ಟು ಬೆಳೆ

ಬರುತ್ತದೆಯೆ ? ಗೊಬ್ಬರವನ್ನು ಯಾವ ಪ್ರಮಾಣದಲ್ಲಿ ಉಪಯೋಗಿಸಿದರೆ, ಬೆಳೆಯು ಯಾವ ರೀತಿಯಲ್ಲಿ ಆಗುವುದು ? ಹೊಸ ಮಾದರಿಯ ಗೊಬ್ಬರವನ್ನು ಹಳೆಯ ಗೊಬ್ಬರದೊಂದಿಗೆ ಯಾವ ಪ್ರಮಾಣದಲ್ಲಿ ಬೆರಸಿದರೆ, ಫಲವು ಅತ್ಯಂತ ಉತ್ತಮವಾಗುವುದು ? ಇದರ ಪರಿಣಾಯವಾಗಿ, ಭೂಮಿಯ ಸಾರವು ಹೇಗೆ ಬದಲಾಯಿಸುವುದು? ಸಂಖ್ಯಾಶಾಸ್ತ್ರ (Statistics) ವೆಂಬ ಗಣಿತದ ಒಂದು ಶಾಖೆಯು ಇತ್ತೀಚೆಗೆ ಅದ್ಭುತವಾಗಿ ಬೆಳೆದಿದೆ ಮತ್ತು ಬೆಳೆಯುತ್ತಿದೆ. ಶುದ್ಧ ಗಣಿತದ ಎಷ್ಟೋ ಪ್ರೌಢಭಾಗಗಳು (ನಿರುಪಯುಕ್ತವೆಂದು ನಂಬಲ್ಪಟ್ಟಿದ್ದ ಕೆಲವು ಶಾಖೆಗಳು ಸಹ) ಸಂಖ್ಯಾಶಾಸ್ತ್ರದ ಬೆಳವಣಿಗೆಗೆ ಆವಶ್ಯಕವಾಗಿವೆ. ಇಂದಿನ ಪ್ರಾಯೋಗಿಕ ವಿಜ್ಞಾನ ಶಾಸ್ತ್ರಗಳಲ್ಲಿ ಸಂಖ್ಯಾಶಾಸ್ತ್ರದ ಕೈವಾಡವು ಬಹು ಮುಖ್ಯವಾಗಿದೆ.

ವೈದ್ಯನು ಒಂದು ಹೊಸ ಔಷಧವನ್ನು ತಯಾರಿಸುತ್ತಾನೆ. ಅದನ್ನು ನಾಲ್ಕಾರು ಇಲಿಗಳ ಮೇಲೋ ಮೊಲಗಳ ಮೇಲೋ ಬಡಪಾಯಿಗಳಾದ ರೋಗಿಗಳ ಮೇಲೋ ಪ್ರಯೋಗಿಸಿ, ಹೊಸ ಔಷಧದ ಗುಣವನ್ನು ನಿರ್ಧರಿಸಿ ಬಿಟ್ಟು ಅಂಗಡಿಗಳಲ್ಲಿ ತುಂಬುವುದಿಲ್ಲ. ಪರೀಕ್ಷಾರ್ಥವಾಗಿ ಔಷಧವನ್ನು ತಯಾರಿಸಿದ ರೀತಿ, ಅಥವಾ ಔಷಧದ "ಸ್ಯಾಂಪಲ್ಲು"ಗಳನ್ನು ತೆಗೆದುಕೊಂಡ ಬಗೆ, ಪ್ರಾಣಿಗಳನ್ನು ಅಥವಾ ರೋಗಿಗಳನ್ನು ಚುನಾಯಿಸಿದ ರೀತಿ ಮುಂತಾದುವನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಪರೀಕ್ಷೆಯ ಫಲಿತಾಂಶಗಳಿಂದ ಸೂಕ್ತವಾದ ಅರ್ಥವನ್ನು ಗ್ರಹಿಸಬೇಕು. ಔಷಧವನ್ನು ತಯಾರಿಸುವಾಗ ದ್ರಾವಕಗಳೇ ಮುಂತಾದುವನ್ನು ಯಾವಯಾವ ಪ್ರಮಾಣಗಳಲ್ಲಿ ತೆಗೆದುಕೊಂಡರೆ ಅತ್ಯುತ್ತಮ ಫಲವು ದೊರೆಯುತ್ತದೆಂಬುದು ಮತ್ತೊಂದು ವಿಚಾರ. ಹೀಗೆ, ಅನೇಕ ನಕ್ಷೆಗಳನ್ನು (Graphs) ಬರೆದು, ಸಂಖ್ಯಾಶಾಸ್ತ್ರದ ಪರೀಕ್ಷೆಗಳನ್ನು (Statistical examinations) ನಡೆಸಿದ ಮೇಲೆ, ಔಷಧವು ಸಮರ್ಪಕವಾದುದೆಂದು ನಿರ್ಧರಿಸಲ್ಪಟ್ಟ ಮೇಲೆ, ಸಾರ್ವಜನಿಕರಿಗೆ ಬೇಕಾಗುವಷ್ಟು ಪ್ರಮಾಣದಲ್ಲಿ ತಯಾರಿಸುವ ಪ್ರಶ್ನೆಯು ಏರ್ಪಡುತ್ತದೆ. ಔಷಧಗಳನ್ನು ತಯಾರಿಸುವ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಈ ರೀತಿಯಾದ ಪರೀಕ್ಷೆಗಳನ್ನು ನಡೆಸಿದ ಹೊರತು, ಯಾವ ಔಷಧವೂ ಹೊರಬೀಳುವುದಿಲ್ಲ. ಇಂತಹ ಪರೀಕ್ಷೆಗಳಿಗೆ ತನ್ನದೇ ಒಂದು ವೈಶಿಷ್ಟ್ಯವನ್ನು ಹೊಂದಿರುವ ಗಣಿತವು ಆವಶ್ಯಕ.

ಒಟ್ಟಿನಲ್ಲಿ ಇಂದಿನ ನಾಗರಿಕತೆಯ ಜೀವನದಲ್ಲಿ ಗಣಿತಶಾಸ್ತ್ರಕಾರನ ಪಾತ್ರವು ಮೂಲಾಧಾರವಾದುದು. ವಿಜ್ಞಾನಿಯು (ಇದರಂತೆಯೇ) ಕೆಲವುವೇಳೆ ಸಮಾಜ ಸೇವಕನು, ರಾಜನೀತಿಜ್ಞನು) ಅಡಿಗೆಯ ಸಾಮಾಗ್ರಿಗಳನ್ನು ಒದಗಿಸುತ್ತಾನೆ. ಅಡಿಗೆಯನ್ನು ಪೂರ್ತಿಗೊಳಿಸಿ ಬಡಿಸುವವನು ಗಣಿತಶಾಸ್ತ್ರಜ್ಞ. ದುರದೃಷ್ಟವಶಾತ್

ಪ್ರಾಪಂಚಿಕ ಫಲದಲ್ಲಿಯೂ ಈ ಉಪಮೇಯವೇ ಸ್ವಲ್ಪಮಟ್ಟಿಗೆ, ಅದರಲ್ಲೂ ಇಂಡಿಯದಲ್ಲಿ, ಕಂಡುಬರುತ್ತದೆ. ವಿಜ್ಞಾನಿಯು ಯಜಮಾನನಾಗುತ್ತಾನೆ. ಗಣಿತದವನು ಎಷ್ಟೋ ಬಾರಿ ಯಾರಿಗೂ ಬೇಡದ ವಿಚಿತ್ರ ಮನೋರಚನೆಯುಳ್ಳ ಒಂದು ವ್ಯಕ್ತಿಯೆಂದೆಣಿಸಲ್ಪಡುತ್ತಾನೆ. ಪ್ರಾಯೋಗಿಕ ವಿಜ್ಞಾನಕ್ಕೆ ಸರ್ಕಾರದವರು ಕೊಡುವ ಉತ್ತೇಜನವು ಗಣಿತಶಾಸ್ತ್ರಸಂಶೋಧನೆಗಳಿಗೆ ದೊರೆಯುತ್ತಿಲ್ಲ. ಆದರೆ ಇದು ತಾತ್ಕಾಲಿಕ. ಗಣಿತದ ಪ್ರಾಮುಖ್ಯತೆಯು ಜನಗಳಿಗೆ ಕಣ್ಣಿಗೆ ಬೀಳುತ್ತಿದೆ. ಪುನರ್ರಚನೆಯಾಗುತ್ತಲಿರುವ ನೂತನ ಪ್ರಪಂಚದಲ್ಲಿ ಗಣಿತಶಾಸ್ತ್ರಜ್ಞನಿಗೆ ಗೌರವ ಸ್ಥಾನವು ದೊರಕುವುದರಲ್ಲಿ ಸಂಶಯವಿಲ್ಲ.

ಸಿ. ಎನ್. ಶ್ರೀನಿವಾಸಯ್ಯಂಗಾರ್ಯ.

೬. ಇಂದಿನ ಮನಶ್ಶಾಸ್ತ್ರ

ಇಪ್ಪತ್ತೈದು ವರ್ಷಗಳ ಹಿಂದೆ ಮನಶ್ಶಾಸ್ತ್ರದಲ್ಲಿ ಅನೇಕ ಮತಗಳಿದ್ದುವು. ಮನಶ್ಶಾಸ್ತ್ರಜ್ಞರು ಪ್ರಾಯೋಗಿಕ ಮಾರ್ಗವನ್ನು ಅವಲಂಬಿಸಿದರೂ ತತ್ವಶಾಸ್ತ್ರದ ಹಿನ್ನೆಲೆಯನ್ನು ಬಿಡಲು ಅಸಮರ್ಥರಾದರು. ಆದುದರಿಂದ ಕೆಲವು ದೊಡ್ಡ ಮನಶ್ಶಾಸ್ತ್ರಜ್ಞರು ತಮ್ಮ ತತ್ವಶಾಸ್ತ್ರಕ್ಕೆ ಅನುಸರಿಸಿ ತಮ್ಮ ಮನಶ್ಶಾಸ್ತ್ರವನ್ನು ರಚಿಸಲು ಪ್ರಯತ್ನಿಸಿದರು. ಇದರಿಂದ ಆ ಕಾಲದಲ್ಲಿ ಬೇರೆ ಜನರಿಗೆ ಇತರ ಶಾಸ್ತ್ರಗಳಂತೆ ಮನಶ್ಶಾಸ್ತ್ರವು ನಿಜವಾಗಿಯೂ ಒಂದು ಶಾಸ್ತ್ರವಾಗುವುದೆ? ಎಂಬ ಒಂದು ಸಂಶಯವಿತ್ತು. ಇದಕ್ಕೆ ಮೂಲಕಾರಣ—ವಸ್ತುಸ್ಥಿತಿಯ ಅರಿವಿನ ಅಭಾವ. ಮನಶ್ಶಾಸ್ತ್ರದಲ್ಲಿ ಪ್ರಾಯೋಗಿಕ ಮಾರ್ಗವು ಕೇವಲ ಇಪ್ಪತ್ತೈದು ವರ್ಷಗಳಿಂದ ಆಚರಣೆಗೆ ಬಂದಿದೆ. ಯಾವ ಶಾಸ್ತ್ರದಲ್ಲಿಯೇ ಆಗಲಿ ಸತ್ಯಾನ್ವೇಷಣವು ಸ್ವಲ್ಪ ಕಾಲದಲ್ಲಿಯೇ ಆಗಲಾರದು. ಆದರೆ ಕಳೆದ ಈ ಎಪ್ಪತ್ತೈದು ವರ್ಷಗಳಲ್ಲಿ ನಮ್ಮ ಜ್ಞಾನವು ಬಹಳಮಟ್ಟಿಗೆ ಮುಂದುವರಿದಿದೆ. ಮನಶ್ಶಾಸ್ತ್ರದ ಭಿನ್ನ ಭಿನ್ನ ಮತಾವಲಂಬಿಗಳ ಮಧ್ಯೆ ನಡೆಯುತ್ತಿದ್ದ ತೀವ್ರವಾದ ಚರ್ಚೆಗಳು ಕ್ರಮೇಣ ಕಡಮೆಯಾಗುತ್ತಾ ಬಂದಿದೆ. ಇದಕ್ಕೆ ಉದಾಹರಣೆಯಾಗಿ—೧೯೩೦ರ ಸಮಯದಲ್ಲಿ ಅಮೆರಿಕಾ ದೇಶದ ಕ್ಲಾರ್ಕ್ ಯೂನಿವರ್ಸಿಟಿಯ ಮನಶ್ಶಾಸ್ತ್ರದ ವಿಭಾಗದ ಅಧ್ಯಕ್ಷರು ಐದು ವರ್ಷಗಳಿಗೊಮ್ಮೆ ಮನಶ್ಶಾಸ್ತ್ರದಲ್ಲಿರುವ ಭಿನ್ನ ಭಿನ್ನ ಮತಗಳನ್ನು ವ್ಯಕ್ತಗೊಳಿಸಲು ಒಂದು ಗ್ರಂಥವನ್ನು ಪ್ರಕಟಿಸುವ ಏರ್ಪಾಡುಮಾಡಿದ್ದರು. ಪ್ರಪಂಚದ ಎಲ್ಲಾ ದೊಡ್ಡ ದೊಡ್ಡ ಮನಶ್ಶಾಸ್ತ್ರಜ್ಞರಿಗೆ ಕಾಗದಗಳನ್ನು ಬರೆದು ಅವರವರ ಮತಗಳನ್ನು ಸಂಕ್ಷೇಪವಾಗಿ ಲೇಖನಗಳ ಮೂಲಕ ವ್ಯಕ್ತಪಡಿಸಬೇಕೆಂದು ಪ್ರಾರ್ಥಿಸಿದರು. ಇದರ ಪರಿಣಾಮವಾಗಿ '೧೯೩೦ ರ ಮನಶ್ಶಾಸ್ತ್ರಗಳು' ಎಂಬ ಗ್ರಂಥವು ಹೊರಬಿದ್ದಿತು. ಇದರಲ್ಲಿ ಪ್ರಾಯೋಗಿಕ ಮನಶ್ಶಾಸ್ತ್ರದ ಅಡಿಗಲ್ಲನ್ನು ಹಾಕಿದ ವೂನ್‌ಟ್‌ರ ಶಿಷ್ಯರಾದ ಟಿಚಿನರ್ ಮೊದಲಾದವರು ರಾಚನಿಕ (Structural) ಮನಶ್ಶಾಸ್ತ್ರವನ್ನು ಕುರಿತು ಬರೆದರು. ಮೆಗ್ಡೂಗಲ್ ಮುಂತಾದವರು ಪ್ರೇರಕ (Hormic) ಮನಶ್ಶಾಸ್ತ್ರವನ್ನು ಕುರಿತು ಬರೆದರು. ಪ್ರಾಣಿಗಳು ಪ್ರೇರಣೆಯಿಂದ ವರ್ತಿಸುವುದಿಲ್ಲವೆಂದೂ ವರ್ತನೆಗೆ ಮೂಲಕಾರಣ ಜ್ಞಾನತಂತುಗಳೇ ಎಂದೂ, ಚೇತನ, ಮನಸ್ಸು ಇತ್ಯಾದಿ ವಸ್ತುಗಳು ಕಾಲ್ಪನಿಕವೆಂದೂ ವಾಟ್ಸನ್ ಮುಂತಾದ ವರ್ತನವಾದಿಗಳು (Behaviourists) ಬರೆದರು. ಇವರ ತತ್ವವು ನಮ್ಮ

ದೇಶದ ಪುರಾತನ ಕಾಲದ ಚಾರ್ವಾಕರ ಮತಕ್ಕೆ ಬಹು ಸಮೀಪವಾಗಿರುವುದು. ಇನ್ನೊಂದು ಮತದವರು, ಮನೋವಿಜ್ಞಾನವು ಮುಂದುವರಿಯಬೇಕಾದರೆ ಚೇತನ ವ್ಯಾಪಾರದ ವಿಶ್ಲೇಷಣವು ಸಾಕಾಗುವುದಿಲ್ಲವೆಂದೂ ನಮ್ಮ ವೇದನಕ್ಕೆ ಅಗೋಚರ ವಾದ ಸುಪ್ತ ಚೇತನವನ್ನು (Unconscious) ನಾವು ತಿಳಿಯುವುದು ಅತ್ಯಗತ್ಯ ವೆಂದೂ ಫ್ರಾಯಿಡ್ ಮುಂತಾದ ಮನೋವಿಶ್ಲೇಷಣಕಾರರು (Psycho-analysts) ವಾದಿಸಿದರು. ಮನೋವಿಜ್ಞಾನದಲ್ಲಿ ವಿಶ್ಲೇಷಣೆಗೆ ಸ್ಥಾನವೇ ಇಲ್ಲವೆಂದೂ ವಿಶ್ಲೇಷಣಾ ಮಾರ್ಗವು ಸತ್ಯವನ್ನು ಕಾಣಲಾರದೆಂದೂ, ನಮ್ಮ ಅನುಭವವು ಯಾವಾಗಲೂ ಅವಿಚ್ಛಿನ್ನವಾದುದೆಂದೂ ಕಾಯಿಲರ್, ಕಾಫ್ಕಾ ಮುಂತಾದ ಸಮಷ್ಟಿವಾದಿಗಳು (Gestaltists) ಬರೆದರು. ಈ ರೀತಿ ಒಂದು ಮತಕ್ಕೂ ಮತ್ತೊಂದು ಮತಕ್ಕೂ ಅಂತರವೂ ವಿರೋಧವೂ ಆ ಕಾಲದಲ್ಲಿ ಬಹಳವಾಗಿತ್ತು. ಈ ವ್ಯತ್ಯಾಸಗಳು ಹೊಸ ಹೊಸ ಪ್ರಯೋಗಗಳನ್ನು ಪ್ರಾರಂಭಿಸುವುದಕ್ಕೆ ಕಾರಣವಾದುವು. ಒಂದೊಂದು ಮತದವರೂ ತಮ್ಮ ತಮ್ಮ ಮತಗಳನ್ನು ಸ್ಥಾಪಿಸಲು ಪ್ರಯೋಗಗಳನ್ನು ನಡಸಿ ವಸ್ತುಸ್ಥಿತಿಯ ಜ್ಞಾನವನ್ನು ಹೆಚ್ಚಿಸಿದರು. ಇದರ ಪರಿಣಾಮವು ಇಪ್ಪೈದು ವರ್ಷ ಗಳಲ್ಲಿಯೇ ಹೊರಬಿದ್ದಿತು. ಕ್ಲಾರ್ಕ್ ಯೂನಿವರ್ಸಿಟಿಯವರು “೧೯೩೦ ರ ಮನ ಶ್ಶಾಸ್ತ್ರಗಳು” ಎಂಬ ಗ್ರಂಥವನ್ನು ಪ್ರಕಟಿಸಿದಾಗ ಅದರಲ್ಲಿ ಭಿನ್ನ ಭಿನ್ನ ಮತಗಳಿಗಿದ್ದ ಅಂತರವೂ ವಿರೋಧವೂ ಬಹಳ ಮಟ್ಟಿಗೆ ಕಡಮೆಯಾಗಿದ್ದುದು ಕಂಡುಬಂದಿತು. ‘೧೯೩೫ ರ ಮನಶ್ಶಾಸ್ತ್ರಗಳು’ ಇನ್ನೂ ಪ್ರಕಟವಾಗುವುದರಲ್ಲಿಯೇ ಇದೆ! ೧೯೨೫ ರಲ್ಲಿದ್ದ ಮತಗಳು ತಮ್ಮ ಸತ್ಯವನ್ನು ಸ್ಥಾಪಿಸಲು ನಡಸಿದ ಪ್ರಯೋಗಗಳು ಮನ ಶ್ಶಾಸ್ತ್ರವನ್ನು ಮುಂದುವರಿಸಿದುವು. ಈ ಪ್ರಯೋಗಗಳ ಮೂಲಕ ಬಂದ ಜ್ಞಾನವು ಒಂದು ಮತಕ್ಕೂ ಮತ್ತೊಂದು ಮತಕ್ಕೂ ಇದ್ದ ಅಂತರವನ್ನು ಕಡಮೆಮಾಡಿತು. ತೀವ್ರ ಚರ್ಚೆಗೆ ಕಾರಣವಾದ ಅಭಿಪ್ರಾಯಗಳು ವಸ್ತುಸ್ಥಿತಿಯ ಜ್ಞಾನದ ಮುಂದೆ ಮಂಜಿನಂತೆ ಮಾಯವಾದುವು. ಜೊತೆಯಲ್ಲಿಯೇ ಭಿನ್ನ ಭಿನ್ನ ಮತಗಳೂ ಅಗೋಚರ ವಾದುವು. ಇತ್ತೀಚೆಗೆ ಹೊರಬೀಳುತ್ತಿರುವ ಗ್ರಂಥಗಳು ಈ ಮತವನ್ನೇ ಆಗಲಿ ಆ ಮತವನ್ನೇ ಆಗಲಿ ಪುಷ್ಟೀಕರಿಸದೆ, ಪ್ರಾಯೋಗಿಕ ಮಾರ್ಗದಿಂದ ನಮಗೆ ಲಭಿಸಿದ ಜ್ಞಾನವನ್ನು ಪ್ರಕಟಿಸುತ್ತಿವೆ.

ಇಂದಿನ ಮನಶ್ಶಾಸ್ತ್ರದ ಮತ್ತೊಂದು ಲಕ್ಷಣ.—ಪೂರ್ವಿಕರು ಮನಶ್ಶಾಸ್ತ್ರವು ಬೆಳೆಯಬೇಕಾದರೆ ವಯಸ್ಕರ ವರ್ತನೆಯನ್ನು ಪರಿಶೀಲಿಸಿ ಅವರ ಮನೋವೇದನೆ ಗಳನ್ನು ಅವರ ಅಂತರಾವಲೋಕನದಿಂದ (Introspection) ತಿಳಿದುಕೊಳ್ಳಬೇಕೆಂದು ಅರಿತಿದ್ದರು. ಆದರೆ ಈಚೆಗೆ, ಮನೋವಿಜ್ಞಾನವು ಮುಂದುವರಿಯಬೇಕಾದರೆ, ಸಸ್ಯ

ಶಾಸ್ತ್ರ, ಪ್ರಾಣಿಶಾಸ್ತ್ರಗಳು ಸಸ್ಯ ಮತ್ತು ಪ್ರಾಣಿಗಳ ವಿಕಾಸವನ್ನರಿಯಲು ಪ್ರಯತ್ನ ಪಡುವಂತೆ, ಮನಶ್ಶಾಸ್ತ್ರವೂ ಮನೋವಿಕಾಸವನ್ನು ಮೃಗಗಳಲ್ಲಿಯೂ, ಮಕ್ಕಳ ಲ್ಲಿಯೂ ಪರಿಶೀಲಿಸಬೇಕೆಂಬ ಅಭಿಪ್ರಾಯವು ಬಲಗೊಂಡಿದೆ. ಈ ವೈಕಾಸಿಕ (Genetic) ಮಾರ್ಗದ ಮೂಲಕ ಮನೋಬೆಳವಣಿಗೆಯ ಜ್ಞಾನವು ಇತ್ತೀಚೆಗೆ ನಮಗೆ ಹೆಚ್ಚಾಗಿ ದೊರೆಯುತ್ತಿದೆ. ಅರ್ಥಗ್ರಹಣ, ಭಾಷಾ ಬೆಳವಣಿಗೆ, ಬುದ್ಧಿಯ ಬೆಳವಣಿಗೆ, ಕಲಿಯುವ ಕ್ರಮ ಮುಂತಾದ ಈ ವಿಷಯಗಳಲ್ಲಿ ನಮ್ಮ ಜ್ಞಾನವು—ಪ್ರಾಣಿಮನಶ್ಶಾಸ್ತ್ರ, ಶಿಶುಮನಶ್ಶಾಸ್ತ್ರ ಮತ್ತು ಕಾಡುಜನರ ವರ್ತನ ಪರಿಶೀಲನ—ಈ ಮೂಲಕ ಹೆಚ್ಚುತ್ತಿದೆ. ವಯಸ್ಕರಲ್ಲಿ ಪ್ರಾಯೋಗಿಕ ಮಾರ್ಗಕ್ಕೆ ಸಿಕ್ಕದಂತಿರುವ ಮನೋವ್ಯಾಪಾರಗಳು ಮೃಗಗಳಲ್ಲಿ ಅತಿ ಸುಲಭವಾಗಿ ಸಿಕ್ಕುವುದರಿಂದ ಮನಶ್ಶಾಸ್ತ್ರದ ಬೆಳವಣಿಗೆಗೆ ಪ್ರಾಣಿಮನಶ್ಶಾಸ್ತ್ರವು ಕಾರಣವಾಯಿತು. ಈಗ ಒಂದೊಂದು ವಿಶ್ವವಿದ್ಯಾನಿಲಯದಲ್ಲಿಯೂ ಪ್ರಾಣಿಮನಶ್ಶಾಸ್ತ್ರ ಮತ್ತು ಶಿಶುಮನಶ್ಶಾಸ್ತ್ರಗಳಿಗೆ ಸಂಬಂಧಪಟ್ಟ ಪ್ರಯೋಗಶಾಲೆಗಳು ಏರ್ಪಟ್ಟಿವೆ.

ಮೂರನೆಯದಾಗಿ, ಮನಶ್ಶಾಸ್ತ್ರವು ನಮ್ಮ ಸಮಾಜದ ಸಮಸ್ಯೆಗಳನ್ನು ಬಿಡಿಸಲು ಹೇಗೆ ಸಹಕಾರಿಯಾಗಿದೆ ಎಂಬುದನ್ನು ನೋಡೋಣ. ಬುದ್ಧಿಶಕ್ತಿಯ ಅಳತೆ, ಬೆಳವಣಿಗೆಯ ಕ್ರಮ, ಮುಂತಾದ ವಿಷಯಗಳ ಜ್ಞಾನವು ಶಿಕ್ಷಣಶಾಸ್ತ್ರಕ್ಕೆ ಬಹಳ ಮಟ್ಟಿಗೆ ಸಹಕಾರಿಯಾಗಿದೆ. ಅಭ್ಯಾಸಕ್ರಮದ ಜ್ಞಾನವನ್ನು ಕೊಟ್ಟ ಪ್ರಯೋಗಗಳು ಶಿಕ್ಷಣಶಾಸ್ತ್ರಕ್ಕೆ ಅನುಕೂಲಿಸಿವೆ. ಅಭ್ಯಾಸಕ್ರಮದ ತಿಳಿವಳಿಕೆಯೂ ಮತ್ತು ಪರಿಶ್ರಮದ ನಿಯಮಗಳ ಅರಿವೂ ಶಾಲೆಯ ವ್ಯವಸ್ಥೆಯಲ್ಲಿ ಹೊಸ ಪದ್ಧತಿಗಳನ್ನು ಜಾರಿಗೆ ತರಲು ಕಾರಣವಾಗಿವೆ.

ಶಿಶುಮನಶ್ಶಾಸ್ತ್ರದ ಪ್ರಯೋಗಗಳ ಪರಿಣಾಮವಾಗಿ, ಮಕ್ಕಳನ್ನು ಯಾವ ರೀತಿ ಬೆಳಸಬೇಕೆಂಬ ವಿಧಾನವು ನಮಗೆ ಗೊತ್ತಾಗಿದೆ. ಪ್ರಾಚೀನರು ಶೈಶವಾವಸ್ಥೆಯು ಮನುಷ್ಯನ ಜೀವಮಾನದಲ್ಲಿ ಬಹು ಮುಖ್ಯವಾದುದೆಂದು ಅರಿತಿದ್ದರೂ ಆಧುನಿಕ ಮನಶ್ಶಾಸ್ತ್ರದ ಪ್ರಯೋಗಗಳು ಇದರ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತವೆ. ಇಷ್ಟೇ ಅಲ್ಲದೆ ಶಿಶುವು ಚೆನ್ನಾಗಿ ಬೆಳೆಯಬೇಕಾದರೆ ನಾವು ಅನುಸರಿಸಬೇಕಾದ ಮಾರ್ಗಗಳನ್ನೂ ಸಹ ಮನಶ್ಶಾಸ್ತ್ರವು ನಮಗೆ ತೋರಿಸಿ ಕೊಡುತ್ತದೆ. ಇದರಿಂದಲೇ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಮನಶ್ಶಾಸ್ತ್ರದ ನಿಯಮಗಳಿಗನುಸಾರವಾಗಿ ಶಿಶುವಿಹಾರಗಳು ಏರ್ಪಟ್ಟಿರುವುದು.

ಔದ್ಯೋಗಿಕ ಮನಶ್ಶಾಸ್ತ್ರ (Industrial Psychology) ಕೈಗಾರಿಕೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಲು ಹೊರಟಿದೆ. ಈ ಶಾಖೆಯು ಕಳೆದ ಮಹಾ

ಸಂಗ್ರಾಮದಲ್ಲಿ ಪ್ರಾರಂಭವಾಯಿತು. ಸಾಧಾರಣವಾಗಿ ಜನರು ತಿಳಿದುಕೊಂಡಿರುವುದೇನಂದರೆ ಒಬ್ಬ ಮನುಷ್ಯನು ಹೆಚ್ಚು ಕಾಲ ಕೆಲಸಮಾಡಿದರೆ ಅವನು ಹೆಚ್ಚು ಕೆಲಸವನ್ನು ಮಾಡುವನೆಂದು. ಆದರೆ ಪ್ರಯೋಗಗಳು ಇದರ ಅಸತ್ಯತೆಯನ್ನು ನಿರ್ವಿವಾದವಾಗಿ ಸ್ಥಾಪಿಸಿವೆ. ಒಬ್ಬ ಮನುಷ್ಯನು ದಿನಕ್ಕೆ ಏಳೆಂಟು ಗಂಟೆಗಳಿಗಿಂತ ಹೆಚ್ಚು ಕೆಲಸಮಾಡಿದರೆ ಪರಿಶ್ರಮವು ಹೆಚ್ಚಾಗಿ ಉತ್ಪತ್ತಿಯು ಕಡಮೆಯಾಗುವುದು. ಈಗ ನಡೆಯುತ್ತಿರುವ ಮಹಾಯುದ್ಧದಲ್ಲಿ ಕಾರ್ಖಾನೆಗಳಲ್ಲಿ ಹೆಚ್ಚು ಕೆಲಸ ನಡೆಯಬೇಕೆಂಬ ಉದ್ದೇಶದಿಂದ ದಿನಕ್ಕೆ ಹತ್ತು ಹನ್ನೆರಡು ಗಂಟೆಗಳ ಹೊತ್ತು ಕೆಲಸಮಾಡಬೇಕೆಂದು ಅಪ್ಪಣೆ ಮಾಡಲಾಯಿತು. ಲಂಡನ್ ಅಲ್ಲಿರುವ ಔದ್ಯೋಗಿಕ ಮನಶ್ಶಾಸ್ತ್ರದ ಸಂಸ್ಥೆಯವರು ಇದು ಬಹಳ ತಪ್ಪೆಂದು ಸರ್ಕಾರದವರಿಗೆ ತೋರಿಸಿಕೊಡಲು ಇಂಗ್ಲಿಷ್ ಸರ್ಕಾರವು ಕಾರ್ಖಾನೆಗಳಲ್ಲಿ ಯಾರೂ ಎಂಟು ಗಂಟೆಗಳಿಗಿಂತ ಹೆಚ್ಚಾಗಿ ಕೆಲಸ ಮಾಡಬಾರದೆಂದು ಒಂದು ಶ್ವೇತಪತ್ರವನ್ನು ಹೊರಡಿಸಿದರು. ಸಾಧಾರಣವಾಗಿ ಒಂದು ಆಳು ಕೆಲಸಮಾಡದೆ ಕುಳಿತಿದ್ದರೆ ಆತನು ಕೆಲಸಕ್ಕೆ ಕಳ್ಳತನ ಮಾಡುತ್ತಿರುವನೆಂದು ಯಜಮಾನನು ಆಕ್ಷೇಪಣೆ ಮಾಡುವನು. ಆದರೆ ಈ ಪ್ರಯೋಗಗಳು ಕೆಲಸಗಾರರು ಕೆಲಸದ ಮಧ್ಯೆ ಐದು ಹತ್ತು ನಿಮಿಷದ ವಿರಾಮವನ್ನು ತೆಗೆದುಕೊಂಡರೆ ಉತ್ಪತ್ತಿಯು ಹೆಚ್ಚುವುದೆಂದು ತೋರಿಸಿಕೊಟ್ಟಿವೆ. ಈ ಪ್ರಯೋಗಗಳ ಆಧಾರದ ಮೇಲೆಯೇ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ, ವಿರಾಮವನ್ನು ನಿಯಮಗಳ ಪ್ರಕಾರ ಏರ್ಪಡಿಸಿ, ಕೆಲಸಗಾರರಿಗೆ ಆ ಸಮಯದಲ್ಲಿ ಉಚಿತವಾಗಿ ಪಾನೀಯಗಳನ್ನು ಒದಗಿಸಿಕೊಡುವರು. ಒಂದು ಕೆಲಸಕ್ಕೆ ಕೆಲವು ವಿಶೇಷ ಸಾಮರ್ಥ್ಯಗಳು ಆವಶ್ಯಕವೆಂದು ಈ ಪ್ರಯೋಗಗಳಿಂದ ಕಂಡುಬಂದಿದೆ. ಈ ಸಾಮರ್ಥ್ಯಗಳನ್ನು ಅಳೆಯಲು ಕೆಲವು ಸಾಧನಗಳೂ ಇವೆ. ಈ ಸಾಧನಗಳ ಸಹಾಯದಿಂದ ಒಂದು ಕೆಲಸಕ್ಕೆ ಸರಿಯಾದ ಮನುಷ್ಯನನ್ನು ಆರಿಸಿಕೊಳ್ಳಬಹುದು. ನಡೆಯುತ್ತಿರುವ ಈ ಮಹಾ ಸಂಗ್ರಾಮದಲ್ಲಿ ಇಂತಹ ಸಾಧನಗಳ ಸಹಾಯದಿಂದಲೇ ವೈಮಾನಿಕರನ್ನು ಆರಿಸಿಕೊಳ್ಳುತ್ತಿರುವರು. ಮೇಲೆ ಹೇಳಿರುವ ಉದಾಹರಣೆಗಳಿಂದ, ಔದ್ಯೋಗಿಕ ಮನಶ್ಶಾಸ್ತ್ರವು ಈ ಔದ್ಯೋಗಿಕ ಯುಗದಲ್ಲಿ ಎಷ್ಟು ಮುಖ್ಯಸ್ಥಾನವನ್ನು ಪಡೆದಿದೆ ಎಂಬುದು ಸ್ಪಷ್ಟವಾಗಿದೆ.

ಮನಶ್ಶಾಸ್ತ್ರವು ಈ ಯುದ್ಧದ ಸಮಸ್ಯೆಗಳನ್ನು ಪರಿಹಾರಮಾಡಲು ಎಷ್ಟು ಸಹಕಾರಿಯಾಯಿತೆಂಬುದಕ್ಕೆ ಮತ್ತೊಂದು ಉದಾಹರಣೆಯನ್ನು ಕೊಡಬಹುದು. ನಲವತ್ತು ವರುಷಗಳ ಹಿಂದೆ ಬುದ್ಧಿಶಕ್ತಿ ಮತ್ತು ಇತರ ಶಕ್ತಿಗಳನ್ನು ಅಳೆಯಲು ಪ್ರಾರಂಭವಾಯಿತು. ಈ ಯುದ್ಧದಲ್ಲಿ ೧೯೪೩ ನೆಯ ಇಸವಿಯವರೆಗೂ ಇಂಗ್ಲೆಂಡು

ದೇಶದಲ್ಲಿಯೂ ಹಿಂದುಸ್ತಾನದಲ್ಲಿಯೂ ಸೇನಾಧಿಕಾರಿಗಳನ್ನು ಕುಟುಂಬದ ಘನತೆ, ಸ್ಥಾನ ಮುಂತಾದ ಕಾರಣಗಳ ಆಧಾರದಿಂದ ಚುನಾಯಿಸಿಕೊಳ್ಳುತ್ತಿದ್ದರು. ಆದರೆ ೧೯೩೩ಳ ರಿಂದಲೇ ಜರ್ಮನಿ ಜಪಾನ್ ದೇಶಗಳಲ್ಲಿ ಮನಶ್ಶಾಸ್ತ್ರದ ಪರೀಕ್ಷೆಗಳ ಮೂಲಕ ಸೇನಾಧಿಕಾರಿಗಳನ್ನು ಆರಿಸಿಕೊಳ್ಳುತ್ತಿದ್ದರು. ಈ ಕ್ರಮವನ್ನು ಮಿತ್ರಸೇನೆ ಗಳು ೧೯೪೩ ರಿಂದ ಜಾರಿಗೆ ತಂದರು. ಇದರಿಂದ ಸೇನಾಖಾತೆಯ ಕೆಲಸಕಾರ್ಯ ಗಳು ಸುಗಮವಾದುವು. ಸಾವಿರಾರು ಸೈನಿಕರನ್ನು ಯುದ್ಧರಂಗದಲ್ಲಿ ಮುಂದಕ್ಕೆ ಕರೆದೊಯ್ಯುವ ಸಾಮರ್ಥ್ಯವುಳ್ಳ ನಾಯಕರನ್ನು ಎರಡು ದಿವಸದ ಪರೀಕ್ಷೆಯಲ್ಲಿ ಆರಿಸಿಕೊಳ್ಳಲು ಸಾಧ್ಯವಾಯಿತು. ಶಾಂತಿ ಸಮಯದಲ್ಲಿ ಒಬ್ಬ ಮನುಷ್ಯನನ್ನು ನಾಯಕ ನನ್ನಾಗಿ ಮಾಡಿ ಎರಡು ಮೂರು ವರುಷಗಳ ಅವಧಿಯಲ್ಲಿ ಅವನ ಸಾಮರ್ಥ್ಯಗಳನ್ನು ಪರೀಕ್ಷಿಸಿ, ಅವನು ದೊಡ್ಡ ಕೆಲಸಗಳನ್ನು ಮಾಡಲು ಅರ್ಹನೋ ಅಲ್ಲವೋ ಎಂಬು ದನ್ನು ತೀರ್ಮಾನಿಸಲು ಸಾಕಾದಷ್ಟು ಸಮಯವಿರುವುದು. ಆದರೆ ಯುದ್ಧಕಾಲದಲ್ಲಿ ಈ ಪರೀಕ್ಷೆಯು ಅತಿ ಶೀಘ್ರವಾಗಿಯೇ ಆಗಬೇಕು. ಇದಕ್ಕೆ ಮನಶ್ಶಾಸ್ತ್ರವು ಸಹಕಾರಿಯಾಯಿತು.

ಇದೇ ರೀತಿ ಇನ್ನೂ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಮನಶ್ಶಾಸ್ತ್ರದ ನಿಯಮಗಳ ಸಹಾಯದಿಂದ ಬಗೆಹರಿಸಬಹುದು. ರೋಗನಿವಾರಣೆಯ ಕ್ರಮದಲ್ಲಿಯೂ ಸಹ ಮನಶ್ಶಾಸ್ತ್ರವು ಬಹಳ ಉಪಯೋಗಕರವಾಗಿದೆ. ಮನೋಜಾಡ್ಯಗಳ ಪರಿಹಾರ ಮತ್ತು ನಿವಾರಣೆಗೆ ಮನಶ್ಶಾಸ್ತ್ರವು ಸಹಕಾರಿಯಾಗಿದೆ. ಮಾನಸಿಕ ರೋಗ, ಕಳ್ಳತನ, ದರೋಡೆ, ದೊಂಬಿ, ಮುಷ್ಕರ ಮುಂತಾದುವುಗಳನ್ನು ಪರಿಶೀಲಿಸಿ, ಇವುಗಳ ಮೂಲ ಕಾರಣಗಳನ್ನು ಕಂಡುಹಿಡಿದು ಪರಿಹಾರ ಮಾಡಲು ಸಾಧನೆಗಳನ್ನು ಕಂಡುಹಿಡಿಯು ತ್ತಿರುವುದು ಮನಶ್ಶಾಸ್ತ್ರದ ನಿಯಮಗಳಿಂದಲೇ ಎಂದು ಧಾರಾಳವಾಗಿ ಹೇಳಬಹುದು. ಸಮಾಜವು ಮುಂದುವರಿಯಬೇಕಾದರೆ ಮನಶ್ಶಾಸ್ತ್ರವು ಅಭಿವೃದ್ಧಿಯನ್ನು ಹೊಂದಲು ಇನ್ನೂ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿಕೊಟ್ಟು, ಮನಶ್ಶಾಸ್ತ್ರದ ಜ್ಞಾನವನ್ನು ಹೆಚ್ಚುಹೆಚ್ಚಾಗಿ, ಸಮಾಜದ ಸಮಸ್ಯೆಗಳನ್ನು ಪರಿಹಾರಮಾಡಲು ಉಪಯೋಗಿಸು ವುದು ಆವಶ್ಯಕ. ಮನಶ್ಶಾಸ್ತ್ರವು ಪ್ರಾಯೋಗಿಕ ಮಾರ್ಗವನ್ನವಲಂಬಿಸಿ ಸತ್ಯಾ ನ್ವೇಷಣದಲ್ಲಿ ಮುಂದುವರಿದಿರುವುದೆಂದೂ, ಈ ಜ್ಞಾನವು ವ್ಯಕ್ತಿಯ ಮತ್ತು ಸಮಾ ಜದ ವಿವಿಧ ಸಮಸ್ಯೆಗಳನ್ನು ಬಗೆಹರಿಸಲು ಸಹಾಯಕಾರಿಯಾಗಿರುವುದೆಂದೂ ಕಳೆದ ಇಪ್ಪತ್ತೈದು ವರ್ಷಗಳು ನಿರ್ಧರವಾಗಿ ತೋರಿಸಿಕೊಟ್ಟಿವೆ.

ಬಿ. ಕುಪ್ಪುಸ್ವಾಮಿ.

೭. ನವೀನ ಶಾಸನಪ್ರಪಂಚ

ಕಾಯಿದೆ, ಕಟ್ಟಳೆ, ವಿಧಿ, ನಿಯಮ, ನಿಬಂಧನೆ, ಕಾನೂನು, ವ್ಯವಹಾರಧರ್ಮ ಮೊದಲಾದ ಹೆಸರುಗಳಿಂದ ಜನರ ಪ್ರವೃತ್ತಿ ನಿವೃತ್ತಿಗಳನ್ನೆಲ್ಲಾ ರೂಪಗೊಳಿಸುತ್ತ ಸಮಾಜವನ್ನು ಆಳುತ್ತಿರುವ ಶಾಸನವು (Law) ಕಳೆದ ಕಾಲು ಶತಮಾನಾವಧಿ ಯಲ್ಲಿ—ಸುಮಾರಾಗಿ ಗತ ಐರೋಪ್ಯ ಮಹಾಯುದ್ಧವು ಮುಗಿದ ೧೯೧೯ರಿಂದ ಇಲ್ಲಿನ ವರೆಗೆ—ಹೇಗೆ ನಡೆದು ಬೆಳೆದುಬಂದಿದೆ?

ಶಾಸನ ಕಲ್ಪನೆಯಲ್ಲಿ ಈ ಯುಗವು ಜಗತ್ತಿನ ಇತಿಹಾಸದಲ್ಲಿ ಅನ್ಯಾದೃಶ ವಾಗಿದೆ. ಈ ಇಪ್ಪತ್ತೈದು ವರ್ಷಗಳಲ್ಲಿ ಹುಟ್ಟಿರುವ ಶಾಸನವು, ಪರಿಮಾಣದಲ್ಲಿ, ಅದುವರೆಗೆ ಲೋಕದಲ್ಲಿ ಹುಟ್ಟಿ ಪ್ರಚಾರದಲ್ಲಿದ್ದ ಶಾಸನರಾಶಿಗಿಂತಲೂ ಅಧಿಕವಾಗಿದೆ. ಏಕೆ? **(೧) ಸ್ವತಂತ್ರ ರಾಷ್ಟ್ರಗಳ ಆವಿರ್ಭಾವ.** ದಕ್ಷಿಣ ಐರ್ಲೆಂಡು, ಉತ್ತರ ಐರ್ಲೆಂಡು, ಲುಕ್ಸೆಂಬರ್ಗ್, ಯುಗೋಸ್ಲಾವಿಯಾ, ಅಲ್ಬೇನಿಯಾ, ಹಂಗೆರಿ, ಜೆಕೋಸ್ಲೊವಾಕಿಯಾ, ಪೋಲೆಂಡು, ಉಕ್ರೇಯಿನ್, ಡಾನ್ಸಿಗ್, ಲಿಥ್ವೇನಿಯಾ, ಲಾಟ್ವಿಯಾ, ಎಸ್ಥೋನಿಯಾ, ಫಿನ್‌ಲೆಂಡು, ಕಕೇಷಿಯಾ, ಜಾರ್ಜಿಯಾ, ಅಜರ ಬೈಸಾನ್, ಆರ್ಮೀನಿಯಾ, ಪಂಚ ಸಿರಿಯಾ ರಾಜ್ಯಗಳು, ಪುಲೆಸ್ತರಾಜ್ಯ, ಇರಾಕ, ಐಗುಪ್ತ, ಉತ್ತರ ಅರಬ, ದಕ್ಷಿಣ ಅರಬ, ಬೋಟಕ (ತಿಬೆಟ), ದಕ್ಷಿಣ ಚೀಣಾ, ಮಂಗೋಲಿಯಾ, ಮಂಚೂಕುಯೋ, ಇತ್ಯಾದಿ ನೂತನ ಶಾಸನ ಕಲ್ಪನಾಕೇಂದ್ರ ಗಳು ಈ ಕಾಲದಲ್ಲಿ ಹುಟ್ಟಿ ಬಲು ಚುರುಕಿನಿಂದ ಕೆಲಸ ಮಾಡಲಾರಂಭಿಸಿದವು. ಇವುಗಳಿಗೆ ಪ್ರಾಚೀನ ಶಾಸನರಾಶಿಯ ಮೂಲಧನವು ತೀರ ಕಡಮೆಯಾಗಿತ್ತು. ಇದ್ದುದರಲ್ಲಿ ಬಹುಭಾಗವು ಈ ರಾಜ್ಯಗಳನ್ನು ಇದುವರೆಗೂ ಅಡಗಿಸಿ ಆಳುತ್ತಿದ್ದ "ಶತ್ರು"ಗಳ ಎಂಜಲಾದುದರಿಂದ ಇವು ಎಲ್ಲವನ್ನೂ ಹೊಸದಾಗಿಯೇ ರಚಿಸಿಕೊಳ್ಳಲು ಪ್ರವರ್ತಿಸಿದವು. **(೨) ನೂತನ ಸಮಸ್ಯಾ ಪರಿಹಾರ.** ಜನತೆಯ ಸಾಮಾಜಿಕ, ಆರ್ಥಿಕ, ರಾಜಕೀಯ, ಬೌದ್ಧಿಕ ಜೀವನ ಸ್ವರೂಪವು ತೀರಾ ಪರಿವರ್ತಿತವಾಗುತ್ತ ಬಂದಿರುವುದರಿಂದ ವಿವಾಹ, ಕುಟುಂಬ, ಕೃಷಿ, ವ್ಯಾಪಾರ, ಕೈಗಾರಿಕೆ, ಲೇವಾದೇವಿ, ಕಂದಾಯ, ರಾಜ್ಯಾಂಗಕ್ರಮ, ವಿದ್ಯಾಭ್ಯಾಸ, ಪತ್ರಿಕೆ ಮೊದಲಾದ ಕ್ಷೇತ್ರಗಳಲ್ಲಿ ಎಷ್ಟೋ ಹೊಸ ಸಮಸ್ಯೆಗಳು ಹುಟ್ಟಿ ಅವುಗಳನ್ನು ಕುರಿತು ಶಾಸನಕಲ್ಪನೆ ನಡೆದಿದೆ. ನಾಗರಿಕತೆಯ ಅಭಿವೃದ್ಧಿಯಿಂದ ಶಾಸನ ವ್ಯವಸ್ಥಾಕಾರ್ಯಕ್ಕೆ ಎಷ್ಟೋ ಹೊಸ

ಕ್ಷೇತ್ರಗಳು ಒದಗಿವೆ. ಉದಾಹರಣೆ—ವಿಮಾನ, ಚಲಚ್ಚಿತ್ರ, ಆಕಾಶಸಂಧಾನ (Wireless Communication), ಮಾರ್ಗಸಂಚಾರ (Traffic), ಸಾಮುದಾಯಿಕ ನ್ಯಾಯ (Social Justice), ಆರ್ಥಿಕ ನಿಯೋಜನೆಯ ಕಾರ್ಯ (Economic Planning), ಪ್ರಚಾರ(Propaganda) ಇತ್ಯಾದಿ. **(೩) ಪ್ರಾಚೀನಶಾಸನ ಸಂಸ್ಕರಣ.** ಕಾಲಭೇದವನ್ನನುಸರಿಸಿ ಹಳೆಯ ಶಾಸನರಾಶಿಯನ್ನು ಸುಧಾರಿಸತಕ್ಕ ಕಾರ್ಯವು ಎಲ್ಲಾ ಯುಗಗಳಿಗೂ ಕರ್ತವ್ಯವಾಗಿದ್ದರೂ ಈ ಯುಗದಲ್ಲಿ ಅದು ಅತ್ಯಧಿಕವಾಗಿ ನಡೆದಿದೆ. ಉದಾ.—೧೯೨೬ರಲ್ಲಿ ಇಂಗ್ಲೆಂಡಿನಲ್ಲಿ ನಡೆದ ಆಸ್ತಿ ಸಂಬಂಧವಾದ ಸುಧಾರಣೆಯು ಹತ್ತಿಪ್ಪತ್ತು ಶತಮಾನಗಳ ಅವಶೇಷಗಳನ್ನೆಲ್ಲ ತೊಡೆದುಹಾಕಿ ಪ್ರಳಯದಂಥ ಬದಲಾವಣೆಗಳನ್ನು ಕಲ್ಪಿಸಿತು. ವಿಮೆ, ರಥಸಂಚಾರ, ದೀನಸಹಾಯ ಮೊದಲಾದ ವಿಚಾರಗಳಲ್ಲಿ ಶಾಸನಗಳು ಈಗ ಶತಾಧಿಕವಾಗಿ ಬೆಳೆದಿವೆ. **(೪) ಆಡಳಿತದ ಅಪರಿಮಿತಾಭಿವೃದ್ಧಿ.** ಸರ್ಕಾರ ಸಂಸ್ಥೆಯಲ್ಲಿ ಈಗ ಇಲಾಖೆಗಳು ಅಸಂಖ್ಯಾತವಾಗಿ ಹೆಚ್ಚುತ್ತಿವೆ. ಪ್ರತಿ ಇಲಾಖೆಯ ಕೆಲಸವೂ ಗುರಿಯೂ ಗತಿಯೂ ಅದ್ಭುತಾಕಾರವಾಗಿ ಬೆಳೆಯುತ್ತಿವೆ. ಇವುಗಳ ಈ ಅಪರಿಮಿತವಾದ ಕೆಲಸವೆಲ್ಲವೂ ಲಕ್ಷಗಟ್ಟಳೆಯ ನಿಯಮಾವಳಿಗಳಿಂದ ನಿರ್ವಹಿಸಲ್ಪಡಬೇಕಾಗಿದೆ. **(೫) ಕುಶಲ ರಾಜ್ಯಭಾರ ಸಂಪ್ರದಾಯ.** ಸರ್ಕಾರದ ಆಡಳಿತಕಾರ್ಯವು ಶಾಸ್ತ್ರೀಯವಾಗಿ ದಕ್ಷತೆಯಿಂದ 'ಘಟಕ'ರಾದ ನಿಪುಣರಿಂದ ನಡೆಯತಕ್ಕ ಕುಶಲಕಲೆಯಾಗಿ ಪರಿಣಮಿಸಿದೆ. ದೇಶಹಿತಕ್ಕಾಗಿ ಸರ್ಕಾರವು ಕೈಕೊಳ್ಳಬೇಕಾದ ಸಮಸ್ತಕಾರ್ಯವನ್ನೂ ಸಾವಕಾಶಮಾಡದೆ ಸಕಾಲದಲ್ಲಿ ಕೈಕೊಳ್ಳುವುದು, ಪ್ರತಿ ಕಾರ್ಯವನ್ನೂ ಸಾಂಗೋಪಾಂಗವಾಗಿ ಸೂಕ್ಷ್ಮವಾಗಿ ಸವಿಸ್ತಾರವಾಗಿ ವಿಧಾಯಕಪಡಿಸುವುದು, ತಾತ್ಕಾಲಿಕ ಪ್ರಗತಿಗೆ ಹಿಂದು ಬೀಳದೆ ಜೀವನದ ಸಕಲ ಭಾಗಗಳಲ್ಲೂ ನೂತನ ವ್ಯವಸ್ಥೆಗಳನ್ನು ಕಲ್ಪಿಸುವುದು, ಇತ್ಯಾದಿ ಆಧುನಿಕ ಪ್ರವೃತ್ತಿಗಳಿಂದ ಶಾಸನಕಲ್ಪನೆಯು ಬಹಳವಾಗಿ ಹೆಚ್ಚುವುದು. **(೬) ಸರ್ವಜನಾಂಗಮಂಡಲಿ ಸಂಸ್ಥೆಯ ಪ್ರೋತ್ಸಾಹ.** ೧೯೧೯ರಲ್ಲಿ ಸ್ಥಾಪಿತವಾಗಿ ಜಿನೀವಾ ನಗರದಲ್ಲಿ ನೆಲೆಸಿದ್ದ ಈ ಸಂಸ್ಥೆಯು ವಿವಿಧ ಜನಾಂಗಗಳ ಶಾಸನ ವ್ಯವಸ್ಥೆಗಳನ್ನು ತುಲನಾತ್ಮಕವಾಗಿ ಸಮಗ್ರವಾಗಿ ವಿಮರ್ಶೆಮಾಡುತ್ತ ಹೊಸ ಹೊಸ ಶಾಸನಗಳನ್ನು ಕಲ್ಪಿಸಲು ಪ್ರೋತ್ಸಾಹಿಸುತ್ತ ಬಂದಿತು. ಈ ದ್ವಾರಾ ಎಷ್ಟೋ ಶಾಸನಗಳು ಸಕಲ ದೇಶಗಳಲ್ಲೂ—ಮೈಸೂರಲ್ಲಿ ಸಹ—ಹುಟ್ಟಿವೆ. **(೭) ವಿಪತ್ಪರಂಪರೆಯ ಪರಿಹಾರ.** ಜಗತ್ತನ್ನು, ಈ ಯುಗದಲ್ಲಿ, ಹಲವಾರು ಭಯಂಕರ ವಿಪತ್ತುಗಳು (ಉದಾ.—ಗತಮಹಾಯುದ್ಧೋತ್ತರ ಪರಿಣಾಮ ಪರಂಪರೆ, ಅನ್ನಾಭಾವ, ಇನ್‌ಫ್ಲೂಯನ್ಸ ಮೊದಲಾದ ರೋಗಗಳ ಹಾವಳಿ, ಸರ್ವತ್ರ ವ್ಯಾಪಿಯಾದ

ರಾಜ್ಯಕ್ರಾಂತಿಯ ಅಂದೋಳನಗಳು, ಸರ್ವಾಧಿಕಾರ ಪ್ರಭುತ್ವಗಳ ದಾಂಧಲೆ, ಸಕಲ ರಾಜ್ಯಗಳ ಆರ್ಥಿಕ ಯುದ್ಧ, ಅತಿದಾರುಣವಾದ ಆರ್ಥಿಕ ಮುಗ್ಗಟ್ಟು, ಕೋಟ್ಯವಧಿ ಜನತೆಯ ನಿರಂತರ ನಿರುದ್ಯೋಗ, ದಿನಚರಿಯ ಯುದ್ಧಭೀತಿ, ಈಗಿನ ಮಹಾಯುದ್ಧ ಇತ್ಯಾದಿಗಳು) ಆಕ್ರಮಿಸಿದವು. ಇವುಗಳನ್ನೆದುರಿಸಲು ಬೆಟ್ಟದಾಕಾರವಾಗಿ ಶಾಸನಕಲ್ಪನೆ ಬೆಳೆಯಿತು. **(೮) ನೂತನ ಕ್ರಮದ ಅಂತರ್ರಾಷ್ಟ್ರೀಯ ಆರ್ಥಿಕ ಸಂಬಂಧ ವ್ಯವಸ್ಥೆ.** ಹಿಂದೆ ಒಂದು ರಾಷ್ಟ್ರಕ್ಕೂ ಪರರಾಷ್ಟ್ರಕ್ಕೂ ನಡೆಯುತ್ತಿದ್ದ ವ್ಯಾಪಾರ ಕ್ರಮದಲ್ಲಿ ಮೂರು ಮುಖ್ಯಲಕ್ಷಣಗಳು ಇದ್ದವು. ಈ ದೇಶಾಂತರ ವ್ಯಾಪಾರವೆಲ್ಲವೂ ಉಭಯ ರಾಜ್ಯಗಳ ಪ್ರಜೆಗಳ ಕೈಯಲ್ಲೇ ನಡೆಯುತ್ತಿತ್ತು; ಇಂಥಾ ವ್ಯಾಪಾರವು ರಕ್ಷಣಾತೆರಿಗೆಯ ಪ್ರತಿಬಂಧಕಕ್ಕೊಳಪಟ್ಟು ನಿರ್ಬಂಧ ಕ್ರಮದಿಂದಾಗಲಿ ಅಥವಾ ಅಪ್ರತಿಬಂಧಕವಾದ ಸ್ವತಂತ್ರಕ್ರಮದಿಂದಾಗಲಿ ನಡೆಯುತ್ತಿತ್ತು; ತೆರಿಗೆಯೇ ಮುಂತಾದ ಈ ವ್ಯಾಪಾರ ಪ್ರತಿಬಂಧಕಗಳಿಗೆ ಸ್ವದೇಶೀ ಕೈಗಾರಿಕೆಯ ಸಂರಕ್ಷಣ ಒಂದು ಮಾತ್ರವೇ ಕಾರಣವಾಗಿದ್ದಿತು. ಆದರೆ ಈ ಯುಗದಲ್ಲಿ ಇಂಥಾ ವ್ಯಾಪಾರಸ್ಥಿತಿಯು ಮಾಯವಾಗುತ್ತ ಬಂದಿದೆ. ಈಗ ಅಂತರ್ರಾಷ್ಟ್ರೀಯವಾಗಿ ಕೊಳ್ಳುವುದೂ ಮಾರುವುದೂ ಬಹುದೂರ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪ್ರಜೆಗಳ ಕೈಯಿಂದ ಆಯಾ ದೇಶಗಳ ಸರ್ಕಾರಗಳ ಕೈವಶವಾಗಿದೆ. ಇದರಿಂದ ಅಪ್ರತಿಬಂಧಕ ದೇಶಾಂತರ ವ್ಯಾಪಾರವು ಸರ್ವತ್ರ ಖಿಲವಾಗಿದೆ. ಈಗಿನ ಸಪ್ರತಿಬಂಧಕ ತೆರಿಗೆಯೇ ಮುಂತಾದ ಏರ್ಪಾಡುಗಳಿಗೆ ಸ್ವದೇಶೀ ಕೈಗಾರಿಕೆಯ ಪ್ರೋತ್ಸಾಹವು ಮಾತ್ರ ಉದ್ದೇಶವಾಗಿಲ್ಲ. ಅಂತರ್ರಾಷ್ಟ್ರೀಯ ಆರ್ಥಿಕ ಯುದ್ಧವು ಆದರೆ ನಿಜವಾದ ಉದ್ದೇಶವು. ಈ ಆರ್ಥಿಕ ಯುದ್ಧನಿರ್ವಾಹಕ್ಕಾಗಿ ಈಗಿನ ಸರ್ಕಾರಗಳು ಸ್ವಂತ ಕೈಗಾರಿಕೆ, ಸ್ವಂತ ವ್ಯಾಪಾರ, ದೇಶದ ಕೃಷಿವಾಣಿಜ್ಯ ಕೈಗಾರಿಕೆ ಲೇವಾದೇವಿ ಉದ್ಯೋಗಗಳೆಲ್ಲದರ ಮೇಲೂ ಹತೋಟಿ, ಮಾರಾಟದ ಧಾರಣೆಯ ನಿರ್ಧಾರ, ಕೊಂಡುಕೊಳ್ಳಬಹುದಾದ ಪದಾರ್ಥಗಳ ಪಡಿತರ ನಿರ್ಣಯ, ಹಣದ ವಿನಿಮಯದರದ ಗೊತ್ತುವಳಿ ಮೊದಲಾದ ಅಸಂಖ್ಯಾತ ಕಾರ್ಯಗಳನ್ನು ಹೊಸದಾಗಿ ಕೈಕೊಂಡಿವೆ. ಈ ದೆಸೆಯಿಂದ ಅಗಣಿತ ಶಾಸನಗಳು ಪರಂಪರೆಯಾಗಿ ಹುಟ್ಟಿ ಹಬ್ಬುತ್ತಿವೆ. **(೯) ಪೂರ್ಣ ಜೀವನಾಧಿಪತ್ಯ ಪದ್ಧತಿ** (Totalitarianism) ಸರ್ಕಾರ ಸಂಸ್ಥೆಯು ಜನರ ಕಾಯ, ವಾಕ್ಕು, ಮನಸ್ಸು, ಇಂದ್ರಿಯ, ಬುದ್ಧಿ, ಆತ್ಮ ಇವೆಲ್ಲವುಗಳ ಎಲ್ಲಾ ಭಾಗಗಳನ್ನೂ ಆಕ್ರಮಿಸಿ ಸರ್ವಾಧಿಕಾರ ಮಾಡಬೇಕು ಎಂಬ ಪದ್ಧತಿಯನ್ನು ಮುಸ್ಸೋಲಿನಿ, ಸ್ಟಾಲಿನ್, ಹಿಟ್ಲರ್ ಇವರು ಪ್ರಚಾರಕ್ಕೆ ತಂದರು. ಇದರಿಂದ ಸರ್ಕಾರದ ಶಾಸನಕಲ್ಪನೆಯು ಹೆಚ್ಚಲು ಆಸ್ಪದವಾಯಿತು. (೧೦)

ಶಾಸನಾ ವಿಧೇಯತೆಯ ಪ್ರತಿಕ್ರಿಯೆ. ಶಾಸನವನ್ನು ಶಾಂತಿಯಿಂದ ವಿಧೇಯಿಸುತ್ತಾ ಬರಬೇಕೆಂಬ ಪ್ರವೃತ್ತಿಯು ಈ ಯುಗದಲ್ಲಿ ತುಂಬಾ ಕ್ಷೀಣಿಸಿತು. ಮುಷ್ಕರ, ಸಾಕ್ಷಾತ್ಕಾರ್ಯ (Direct Action), ವಿಧ್ವಂಸನ (Sabotage), ಕ್ರಾಂತಿಕಾರಕ ಚಳವಳಿಗಳು, ಸತ್ಯಾಗ್ರಹ, ದಂಗೆ, ರಾಜದ್ರೋಹದ ಪಿತೂರಿಗಳು, ಸಿಡಿಗುಂಡಿನ ಪ್ರಯೋಗ, ಶಸ್ತ್ರಸಜ್ಜಿತ ಸೇನಾಪರಿವಾರಗಳನ್ನು ಕಟ್ಟಿಕೊಂಡು ನಡೆಯುವ ರಾಜಕೀಯ ಕಕ್ಷಿಯುದ್ಧ ಇತ್ಯಾದಿಗಳು ಈ ಯುಗದಲ್ಲಿ ಸರ್ವತ್ರ ತಲೆಯೆತ್ತಿದುವು. ಇದಕ್ಕೆ ಪ್ರತಿಕ್ರಿಯೆಯಾಗಿ ಸರ್ಕಾರಗಳು ಲೋಕವನ್ನು ಲೆಕ್ಕವಿಲ್ಲದಷ್ಟು ಶಾಸನಗಳಿಂದ ತುಂಬಿದವು.

ವ್ಯವಹಾರ ಧರ್ಮಶಾಸ್ತ್ರದಲ್ಲಿ (Jurisprudence) ಈ ಯುಗದಲ್ಲಿ ಅನೇಕ ಹೊಸ ಅಭಿಪ್ರಾಯಗಳೂ ತತ್ವವಾದಗಳೂ ಗೋಚರಿಸಿದವು. (೧) ಮನಶ್ಶಾಸ್ತ್ರದ ಪ್ರಾಬಲ್ಯ; (೨) ತುಲನಾತ್ಮಕ ವಿಮರ್ಶೆಯ ಪ್ರಾಬಲ್ಯ (೩); ಸಮಾಜಶಾಸ್ತ್ರದ ಪ್ರಾಬಲ್ಯ; (೪) ಪರೇಟೋ, ಕಾರ್ಡೋಜೊ, ಲೆನಿನ್, ಗಾಂಧಿ ಮೊದಲಾದವರ ಪ್ರಾಬಲ್ಯ; (೫) ಕ್ರಾಂತಿವಾದದ ಪ್ರಾಬಲ್ಯ; (೬) ನಾಜಿ-ವ್ಯವಹಾರ ಧರ್ಮ. ಜೀವನದ ಸಕಲ ಕೆಲಸವೂ ಮುಖಂಡನೊಬ್ಬನ ಸರ್ವಾಧಿಕಾರದಿಂದ ನಡೆಯಬೇಕು ಎಂಬುದು ನಾಜಿಗಳ ಒಂದು ಮಹಾತತ್ವವು. ಈ ನೇತಾರ-ನಿಯಮದಂತೆ (Furor Prinzep=Leadership Principle) ನ್ಯಾಯವಿಚಾರಣೆಯು ಒಬ್ಬನೇ ಒಬ್ಬ ನೇತಾರ-ನ್ಯಾಯಾಧಿಪತಿಯ ಅಧಿಕಾರ ವಾಣಿಯಿಂದ ನಡೆಯಬೇಕಲ್ಲದೆ ಅನಂತಾನಂತ ಸೂತ್ರ ಬಂಧನದಿಂದ ಅಸ್ವತಂತ್ರರಾಗಿಯೂ ಅಗಣಿತ ವಕೀಲರ ದುರಾಕ್ರಮಣದಿಂದ ಸತ್ವಹೀನರಾಗಿಯೂ ಇರುವ ಹಲವು ನ್ಯಾಯಾಧೀಶರ ಬಹುಮತದಿಂದ ನಡೆಯಕೂಡದು. ಅಪರಾಧಿಗಳಿಗೆ ಕಟ್ಟುಗ್ರ ದಂಡನೆ ಕೊಡಬೇಕು. ಶಾಸನವು ದೇಶದ ಸರ್ವಾಧಿಕಾರಿಯ ವಾಣಿಯಾಗಿರಬೇಕು. ಸತ್ಯಪರೀಕ್ಷೆಗೆ ಹಿಂದಲ ಟ್ಯುಟಾನಿಕ ಜನರಲ್ಲಿ ಪ್ರಚಾರದಲ್ಲಿದ್ದ ಅಗ್ನ್ಯಾದಿಪರೀಕ್ಷೆ, ಯುದ್ಧಪರೀಕ್ಷೆ ಮುಂತಾದ ಕ್ರಮಗಳು ಅವಲಂಬಿಸಲ್ಪಡಬೇಕು, ಇತ್ಯಾದಿ ವಿಧವಾಗಿ ನಾಜಿಗಳು ವಿಚಿತ್ರಜಿಜ್ಞಾಸೆಯನ್ನು ಬೆಳೆಸಿರುವರು. (೭) ನೌಕರ ವ್ಯವಹಾರದ ಧರ್ಮದ (Administrative Law) ಪ್ರಾಬಲ್ಯ. ಲೋಕದಲ್ಲಿ ಸ್ವೇಚ್ಛಾಧಿಕಾರ ಪ್ರವರ್ತನೆಯು ಕೊನೆಗಂಡು ಪ್ರಜಾಸ್ವಾತಂತ್ರ್ಯವೂ ಪ್ರಜಾಪ್ರಭುತ್ವವೂ ಸಿದ್ಧಿಸಬೇಕಾದರೆ, ರಾಜನೂ ಸರ್ಕಾರಾದಿಗಳೂ ಸಕಲರೂ ಏನುಮಾಡಬೇಕಾದರೂ ಶಾಸನಿಕವಾಗಿ—ಯಾವುದಾದರೂ ಒಂದು ಶಾಸನದತ್ತವಾದ ಅಧಿಕಾರಬಲದಿಂದ ಮಾತ್ರವೇ ಕೆಲಸ ಮಾಡಬೇಕೆಂಬ ಮಹಾ ಸಂಕೇತವು ರೂಢಮೂಲವಾಗಬೇಕು. ಇದಕ್ಕೆ ಶಾಸನ—

ಪ್ರಭುತ್ವ (Rule of Law) ಎಂದು ಹೆಸರು. ಇಂಥಾ ಶಾಸನಪ್ರಭುತ್ವವು ಸಿದ್ಧಿಸಬೇಕಾದರೆ ಇಂಗ್ಲೆಂಡಿನಲ್ಲಿರುವಂತೆ ಶಾಸನ ಸಭೆಗೆ ಮಾತ್ರ ಶಾಸನ ಕಲ್ಪನೆಗೆ ಸರ್ವಾಧಿಕಾರವಿರಬೇಕೆಂದೂ ಅದು ಕಲ್ಪಿಸತಕ್ಕ ಶಾಸಗಳನ್ನು ಅಸಿದ್ಧವೆಂದು ಮತ್ತಾವ ಸಂಸ್ಥೆಯೂ ಹೇಳಲು ಅಧಿಕಾರವಿರಕೂಡದೆಂದೂ, ಸರ್ಕಾರದ ಅಧಿಕಾರಿಗಳ ಆಧಿಪತ್ಯದಿಂದ ಸ್ವತಂತ್ರರಾಗಿರುವ ನ್ಯಾಯಾಧಿಪತಿಗಳನ್ನುಳ್ಳ ಸಾಧರಣ ನ್ಯಾಯಶಾಲೆಗಳು ಮಾತ್ರವೇ ದೇಶದ ಸಕಲವಿವಾದಗಳನ್ನೂ ಶಾಸನೋಲ್ಲಂಘನವನ್ನೂ ವಿಚಾರಿಸಬೇಕೆಂದೂ, ಹಾಗಿಲ್ಲದೆ ಫ್ರಾನ್ಸಿನಲ್ಲಿರುವಂತೆ ಶಾಸನ ಕಲ್ಪನೆ ಮತ್ತು ನ್ಯಾಯ ವಿಚಾರಣೆಗಳಲ್ಲಿ ಎಷ್ಟೋ ಭಾಗವನ್ನೂ ಸರ್ಕಾರದ ನೌಕರರಿಗೆ ವಹಿಸಿದ್ದೇ ಆದರೆ ಶಾಸನ-ಪ್ರಭುತ್ವವು ನಷ್ಟವಾಗುವುದೆಂದೂ ಡೈಸಿ ಎಂಬ ಪಂಡಿತನು ಒಂದು ವಾದವನ್ನು ಇಂಗ್ಲಿಷು ಪ್ರಪಂಚದಲ್ಲಿ ಸ್ಥಾಪಿಸಿದ್ದನು. ಇದು ಈ ಯುಗದಲ್ಲಿ ಹಿಮ್ಮೆಟ್ಟಿ ನೌಕರ ಶಾಸನ ಕಲ್ಪನೆಯೂ ನೌಕರ ನ್ಯಾಯಶಾಲೆಗಳೂ ಶಾಸನಪ್ರಭುತ್ವಕ್ಕೆ ಸಹಕಾರಿಗಳೇ ಹೊರತು ವಿರೋಧಿಗಳಲ್ಲವೆಂಬ ಭಾವನೆಯು ಹರಡುತ್ತಿದೆ.

ಇನ್ನೂ ಈ ಯುಗದ ನೂತನ ಶಾಸನಗಳ ವಿವಿಧ ವಿಭಾಗಗಳನ್ನು ಸಿಂಹಾವಲೋಕನದಿಂದವಿಮರ್ಶೆ ಮಾಡಬಹುದು. ಸಪ್ತಸಾಗರಗಳಿಗಿಂತಲೂ ದೊಡ್ಡದಾಗಿರುವ ಆಧುನಿಕ ಶಾಸನವಾರಾಶಿಯನ್ನು ನಾಲ್ಕಾರು ಪುಟಗಳೊಳಗೆ ಅಡಗಿಸಿ ತೋರಿಸಲು ನಡೆಯಬೇಕಾದ ಇಂದ್ರಜಾಲ ಸಾಹಸಕ್ಕೆ ನಮ್ಮ ಅದೃಷ್ಟ ವಿಶೇಷದಿಂದ ಶಾಸನ ನಿಷೇಧವಾವುದೂ ಇಲ್ಲ. [ಕ್ಷಮಿಸಬೇಕು—ಸಂ.] ಆದುದರಿಂದ ಪಾರಿಭಾಷಿಕ ಪ್ರೌಢಿಮೆಯನ್ನೂ ವಿವರಗಳ ಗೊಂದಲವನ್ನೂ ಬಿಟ್ಟು ಎಲ್ಲರಿಗೂ ಬಳಕೆಯಾಗಿರುವ ಕೆಲ ವಿಭಾಗಗಳ ಸ್ವರೂಪವನ್ನು ಮಾತ್ರ ನೋಡಬಹುದು.

ಪದವೀಶಾಸನ (Law of Status)ಎಂಬ ವಿಭಾಗವು ವ್ಯಕ್ತಿಗಳ ಸಣ್ಣ ವಿಚಾರಗಳಲ್ಲಿ ಪರಸ್ಪರ ಸಂಬಂಧಗಳಿಂದ ಹುಟ್ಟತಕ್ಕ ಸತಿಪತಿ ಪದವಿ, ಪಿತಾಪುತ್ರ ಪದವಿ. ಸ್ವಾಮಿ ಭೃತ್ಯ ಪದವಿ, ವಿವಿಧ ಸಂಘಸಂಸ್ಥೆಗಳಲ್ಲಿ ವ್ಯಕ್ತಿಗಳ ಪದವಿ, ಸಹಾಯಾರ್ಥಿಗಳಾದ ದೀನಜನರ ಪದವಿ, ಇತ್ಯಾದಿ ಅಂಶಗಳನ್ನು ಒಳಕೊಂಡಿದೆ. ಈ ವಿಚಾರಗಳಲ್ಲಿ ಈ ಯುಗದಲ್ಲಿ ಅದ್ಭುತವಾದ ಬೆಳವಣಿಗೆಗಳು ಹುಟ್ಟಿವೆಯಾದರೂ ರಸ್ಸಿಯಾ ರಾಜಕೂಟವನ್ನು ಬಿಟ್ಟರೆ ಇತರ ದೇಶಗಳಲ್ಲಿ ವಿವಿಧ ಪದವಿಗಳ ಚಿರಪರಿಚಿತವಾದ ಮೂಲ ಸ್ವರೂಪವೇ ರೂಪಾಂತರವನ್ನು ಪಡೆದಿಲ್ಲ. (೧) ನಾವು **ವಿವಾಹ ಮತ್ತು ಕುಟುಂಬ** ಎಂದು ಸಂಕೇತಮಾಡಿಕೊಂಡಿರುವ ಸಂಸ್ಥೆಗಳು ಈಗ ರಸಿಯಾದಲ್ಲಿ ಮಾಯವಾಗಿವೆ, ಅಲ್ಲಿ ವಿವಾಹ ಸಂಘಟನೆಗಾಗಲಿ ವಿಚ್ಛೇದಕ್ಕಾಗಲಿ ಯಾವ ನಿಯಮ ನಿರ್ಬಂಧಗಳೂ ಇಲ್ಲ. ಉದಾಹರಣೆಗಾಗಿ ಸ್ವಂತ ತಂದೆಯಾದವನು ತನ್ನ ಮಗಳೊಡನೆ ಸಂಬಂಧ

ಬೆಳೆಸಿ ಮಕ್ಕಳಾಗಿದ್ದ ಸಂಗತಿಯ ಮೇಲೆ ವಿವಾದವು ನ್ಯಾಯಶಾಲೆಯ ಗೋಚರಕ್ಕೆ ೧೯೨೭ರ ರಲ್ಲಿ ಬಂದು, ಇಂಥಾ ಸಂಬಂಧವು ಅಪೇಕ್ಷಣೀಯವಲ್ಲವಾದರೂ ನಿಷಿದ್ಧ ವಾದುದಲ್ಲ ಎಂದು ತೀರ್ಮಾನವಾಯಿತು. ಔರಸರಿಗೂ ಜಾರಜರಿಗೂ ಇರುವ ಭೇದ ಗಳೆಲ್ಲವೂ ಶಾಸನ ನಿರ್ಮಿತವಾದ ಕೃತಕ ಏರ್ಪಾಡುಗಳೆಂಬ ಭಾವನೆಯು ಈಗ ಪ್ರಬಲಿಸಿ ಈ ಭೇದಗಳನ್ನು ನಿರ್ಮೂಲಿಸಲು ಸಕಲ ದೇಶಗಳಲ್ಲೂ ಬಹಳ ಪ್ರಯತ್ನ ಗಳು ನಡೆದಿವೆ. ರಸ್ಸಿಯಾದಲ್ಲಿ ಅವು ನಿಶ್ಶೇಷವಾಗಿ ಧ್ವಂಸವಾಗಿವೆ. ವಿವಾಹ ವಿಚ್ಛೇದವು ಸರಳವಾಗಿಯೂ ಸುಲಭವಾಗಿಯೂ ಧಾರಾಳವಾಗಿಯೂ ನಡೆಯುವ ಏರ್ಪಾಡುಗಳು ಎಲ್ಲಾ ದೇಶಗಳಲ್ಲೂ ಹುಟ್ಟಿವೆ. ದೇವ ಮಾತೃಕವೆಂದು ಹೇಳಿಕೊಳ್ಳ ತಕ್ಕ ಹಿಂದೂ ವ್ಯವಹಾರ ಧರ್ಮದಲ್ಲಿ ಸಹ ಸುಧಾರಣೆಗಳು ಸಂತತವಾಗಿ ತಲೆಯಿಕ್ಕ ಲಾರಂಭಿಸಿವೆ. ಶಾರದಾಶಾಸನವು ಇನ್ನು ಮುಂದೆ ಹದಿನಾಲ್ಕು ವಯಸ್ಸಿನೊಳಗಿನ ಹೆಣ್ಣುಮಕ್ಕಳಾರೂ ವಿಧವೆಯಾಗುವಂತೆ ಹಣೆಬರಹವನ್ನು ವಿಧಿಸತಕ್ಕ ಅಧಿಕಾರವನ್ನು ಬ್ರಹ್ಮನಿಗೆ ತಪ್ಪಿಸಿಬಿಟ್ಟಿವೆ. ಅಂತರ್ವರ್ಣವಿವಾಹವು ಈಗ ಶಾಸನ ಸಮ್ಮತವಾಗಿ ನಡೆಯಬಹುದು. ಹಿಂದೂ ಸ್ತ್ರೀಯರಿಗೆ ವಿವಾಹವಿಚ್ಛೇದಾಧಿಕಾರವನ್ನು ಒದಗಿಸಲು ಈಗ ಪ್ರಯತ್ನ ನಡೆಯುತ್ತಿದೆ. ಮೈಸೂರಲ್ಲಿ ಹಿಂದೂ ಸ್ತ್ರೀಯರ ಪದವಿಯ ಹಕ್ಕು ಗಳನ್ನೂ ಆಸ್ತಿಯ ಹಕ್ಕುಗಳನ್ನೂ ಹೆಚ್ಚಿಸಿರುವ ಸಂಗತಿಯೂ ಅವುಗಳನ್ನು ಉತ್ತ ರೋತ್ತರವಾಗಿ ಹೆಚ್ಚಿಸಲು ಈಗ ನಡೆಯುತ್ತಿರುವ ಯೋಚನೆಯೂ ಸರ್ವವೇದ್ಯ ವಾಗಿದೆ. ಭಾರತದಲ್ಲಿ ಆರ್ಯಸಮಾಜದವರ ವಿವಾಹಕ್ರಮವು ಶಾಸನಿಕಾಂಗೀಕಾರ ವನ್ನು ಈಚೆಗೆ ಪಡೆದಿದೆ. (೨) **ಬಾಲಕರ ಯೋಗಕ್ಷೇಮ** ವನ್ನು ನೋಡಿಕೊಳ್ಳಲು ಸಕಲ ದೇಶಗಳಲ್ಲೂ ವಿಶೇಷ ಶಾಸನಗಳೂ ವಿಶೇಷ ಸಂಸ್ಥೆಗಳೂ ವಿಶೇಷ ನ್ಯಾಯಶಾಲೆ ಗಳೂ ವಿಸ್ತಾರವಾಗಿ ಹುಟ್ಟಿವೆ. (೩) **ಸಂಘಸಂಸ್ಥೆಗಳ ಸಂಬಂಧವಾದ ಶಾಸನವು** ಈಗ ಬಹಳವಾಗಿ ಬದಲಾಯಿಸುತ್ತ ಬಂದಿದೆ. ಮೈಸೂರು ದೇಶದಲ್ಲಿ ಸಹ ಈ ಯುಗದಲ್ಲಿ ಪಾಲುದಾರಿ ಅಂಗಡಿಗಳು, ಕಂಪೆನಿಗಳು, ಸಹಕಾರ ಸಂಘಗಳು, ವಿಮಾ ಸಂಘಗಳು, ಮುಜರಾಯಿ ಸಂಸ್ಥೆಗಳು, ಗಿರಣಿಗಳು, ಇತ್ಯಾದಿಗಳನ್ನು ಕುರಿತು ಹೊಸ ಶಾಸನಗಳು ಹುಟ್ಟಿವೆ. (೪) ದರಿದ್ರರು (Destitutes) ದೋಷಿಗಳು (Delinquents), ಆಶ್ರಿತರು (Dependents), (ಉದಾ.—ಮಕ್ಕಳು, ಹೆಂಗಸರು, ಅನಾಥರು, ಇತ್ಯಾದಿ) ದುರ್ಬಲಾಂಗರು (Defectives) (ಉದಾ.—ಮೂಢೋನ್ಮತ್ತ ಜಡಮೂಕಾದಿಗಳು) ಅಶಕ್ತರು (Disabled) ಉದಾ.—ರೋಗಿಗಳು, ಗರ್ಭಿಣಿಯರು, ಬಾಣಂತಿಯರು, ಮುದುಕರು, ನಿರುದ್ಯೋಗಿಗಳು, ಇತ್ಯಾದಿ) ಎಂಬ ಐದು ಜಾತಿಯ **ದೀನ ಜನ ಸಮೂಹಗಳ ಸಾಮುದಾಯಿಕ ಸಂರಕ್ಷಣೆ**ಗಾಗಿ (Social Security) ಈ ಯುಗ

ದಲ್ಲಿ ಎಲ್ಲಾ ದೇಶಗಳಲ್ಲೂ ಅಗಣಿತ ಶಾಸನಗಳೂ ಸಂಸ್ಥೆಗಳೂ ಏರ್ಪಾಡುಗಳೂ ಕಲ್ಪಿತವಾಗಿವೆ. ಮುಂದಲ ಯುಗದಲ್ಲಿ ಇವು ಸುಸ್ಥಿರಗೊಳ್ಳಬೇಕಾಗಿವೆ. (೫) **ಜನಾಂಗದ ಪ್ರಜಾಪದವಿಯ ಶಾಸನಗಳು** (Nationality Laws) ಈ ಯುಗದಲ್ಲಿ ಎಲ್ಲಾ ಕಡೆಯೂ ಗೊಂದಲಗಳನ್ನು ಹುಟ್ಟಿಸಿವೆ. ಅಮೆರಿಕದ ಸಂಯುಕ್ತಸಂಸ್ಥಾನವು ಬಿಳಿಯ ಕುಲಕ್ಕೆ ಸೇರದ ಇತರರೆಲ್ಲರನ್ನು ತನ್ನ ದೇಶದಿಂದ ಹೊರಗು ಮಾಡಿ ಮಾತ್ರ ನಿಲ್ಲದೆ, ಬಿಳಿಯ ಕುಲದವರಲ್ಲಿ ಟುಟಾನಿಕ ಮೊದಲಾದ ಔತ್ತಾರೇಯ ಶಾಖೆಗಳವರನ್ನು ಮಾತ್ರ ಪುರಸ್ಕರಿಸಿ, ಸ್ಲಾವರು ಕೆಲ್ಟರು ಲಾಟಿನರು ಮುಂತಾದ ಶಾಖೆಗಳವರಿಗೆ ತನ್ನ ಜನಾಂಗದ ಪ್ರಜಾಪದವಿಯನ್ನು ಕೊಡಲು ಪ್ರತಿಬಂಧಿಸಿತು. ಗತ ಐರೋಪ್ಯ ಯುದ್ಧದ ಫಲವಾಗಿ ಹುಟ್ಟಿದ ಯೂರೋಪಿನ ಹೊಸ ರಾಜ್ಯಗಳಲ್ಲಿ ಭಿನ್ನಭಿನ್ನ ಕುಲಗಳವರು ಬಲಾತ್ಕಾರದಿಂದ ಜೋಡಿಸಲ್ಪಟ್ಟಿದ್ದರು. ಪ್ರತಿ ರಾಜ್ಯದಲ್ಲೂ ಬಹು ಮತದ ಕುಲವು ಅಲ್ಪ ಮತದ ಕುಲಗಳನ್ನು ಚಿತ್ರ ಹಿಂಸೆ ಮಾಡಲು ಶಾಸನಗಳನ್ನು ಕಲ್ಪಿಸಿದರು. ಜರ್ಮನಿಯಲ್ಲಿ ಜೂದ ಜನರಿಗೆ ಜನಾಂಗದ ಪ್ರಜಾಪದವಿಯನ್ನು ನಾಜಿಗಳು ಕಿತ್ತುಹಾಕಿ ಶುದ್ಧ ಆರ್ಯರಾಗಿ ಮೆರೆಯಲು ಹವಣಿಸಿದರು. ಪ್ರಜಾ ಪದವಿಯ ಶಾಸಗನಗಳ ಪರಸ್ಪರ ವಿರೋಧಗಳೂ ವಿವಾದಗಳೂ ಈ ಯುಗದಲ್ಲಿ ತಲೆ ಮೀರಿ ಹೆಚ್ಚಿದವು.

ಸ್ವತ್ವಶಾಸನ (Law of Property) ಎಂಬ ವಿಭಾಗದಲ್ಲಿ ಅನೇಕ ಕಡೆ ಪ್ರಳಯ ಸದೃಶವಾದ ಪರಿವರ್ತನೆಗಳು ಗೋಚರಿಸಿವೆ. (೧) ರಸ್ಸಿಯಾದಲ್ಲಿ **ವೈಯಕ್ತಿಕ ಸ್ವಾಮ್ಯವೇ** ಹೋಗಿಬಿಟ್ಟಿದೆ. ಇಂಥಾ ಕ್ರಾಂತಿಯನ್ನು ಕುರಿತು ಸರ್ವತ್ರ ಚಳವಳಿ ನಡೆಯುತ್ತಿದೆ. ಸರ್ಕಾರದವರು ವ್ಯಾಪಾರ ಕೈಗಾರಿಕೆ ಮೊದಲಾದ ಉದ್ಯೋಗಗಳಲ್ಲಿ ಸ್ವಲ್ಪವೂ ಕೈಹಾಕಬಾರದು ಎಂಬ ಹಿಂದಲ ಯುಗಗಳ ಮೂಲಮಂತ್ರವು ಈಗ ಅಂತರ್ಧಾನವಾಗಿದೆ. ಸ್ವಾಮ್ಯದಲ್ಲೂ ಉದ್ಯೋಗದಲ್ಲೂ ಈಗ ಪ್ರತಿಯೊಂದು ಸರ್ಕಾರವೂ ತನ್ನ ತನ್ನ ಪ್ರಜಾಕೋಟಿಯನ್ನು ಬಿಡಿಯಾಗಿಯೂ ಮೊತ್ತವಾಗಿಯೂ ಮೀರಿಸಿಬಿಟ್ಟಿದೆ. ವ್ಯಕ್ತಿಗಳ ಸ್ವತ್ತಿನಮೇಲೆ ಸಹ ಸರ್ಕಾರದ ಹತೋಟಿಯು ವಿಪರೀತ ವಾಗಿ ಹೆಚ್ಚಿದೆ. ಈಗಿನ ಯುದ್ಧಕ್ಕೆ ಹಿಂದೆ ಸಹ ವರ್ತಕ ಸ್ವಂತನಾವೆಯನ್ನು (Private Mercantile Marine) ಸರ್ಕಾರದವರು ತಮ್ಮ ಸ್ವಂತ ಆಸ್ತಿಯಂತೆ ದೇಶ ಹಿತಾರ್ಥ ಉಪಯೋಗಿಸುವ ಹಕ್ಕನ್ನು ಸಂಗ್ರಹಿಸಿದ್ದರು. (೨) ೧೯೨೬ರಲ್ಲಿ ಇಂಗ್ಲೆಂಡಿನಲ್ಲಿ ನಡೆದ **ಆಸ್ತಿ ಕಾನೂನಿನ ಸುಧಾರಣೆಯನ್ನು** ಆಗಲೇ ಸೂಚಿಸಿದೆ. ದಾಯಕ್ರಮವನ್ನು ಸಕಲ ದೇಶಗಳವರೂ ಈ ಯುಗದಲ್ಲಿ ಕೈಯಾಡಿಸಲು ಕೈಕೊಂಡರು. ಮೈಸೂರು ದೇಶದಲ್ಲಿ ಹಿಂದೂ ಸ್ತ್ರೀಯರಿಗೆ ದಾಯಾಧಿಕಾರದಲ್ಲಿ ಪ್ರಬಲವಾದ

ಹಕ್ಕುಗಳು ಹುಟ್ಟಿರುವ ಅಂಶವನ್ನು ಹಿಂದೆಯೇ ಪ್ರಸ್ತಾಪಿಸಿದೆ. (೩) **ಕೃಷಿಕ್ಷೇತ್ರ** ದಲ್ಲಿ ರೈತರ ಹಕ್ಕುಗಳ ಸಂರಕ್ಷಣೆ, ರೈತರ ಋಣವಿಮೋಚನ, ರೈತರ ಭೂಸ್ವಾಮಿತ್ವ ಪರಿಪಾಲನೆ, ಅವರ ಬೆಳೆಯ ಮಾರಾಟ ಮೊದಲಾದಂಶಗಳಲ್ಲಿ ಸರ್ವತ್ರ ನೂತನ ಶಾಸನಗಳು ವಿಪರೀತವಾಗಿ ಹುಟ್ಟಿವೆ. ಜಮೀನ್ದಾರ ಸ್ವಾಮ್ಯಕ್ರಮವನ್ನು ಮುರಿದು ಹಾಕಿ ಭೂಮಿಯನ್ನು ಸಾಧ್ಯವಾದಷ್ಟು ದೂರ ಕೃಷಿಕರ ಸ್ವಾಮ್ಯದಲ್ಲಿ ನಿಲ್ಲಿಸಬೇಕೆಂದು ನಾನಾ ಪ್ರಯತ್ನಗಳು ನಡೆದಿವೆ. (೪) **ವ್ಯಾಪಾರಕ್ಷೇತ್ರ**ದಲ್ಲಿ ಬ್ಯಾಂಕುಗಳ ವ್ಯವಸ್ಥೆ, ನಾಣ್ಯಗಳ ಬೆಲೆ, ವಿಮೆ, ದಿವಾಳಿತನ, ಅಳತೆಯ ಕ್ಲುಪ್ತವ್ಯವಸ್ಥೆ, ಮಾರಾಟ (Marketing), ಬೆರಕೆಯ (Adulteration) ನಿವಾರಣೆ ಮೊದಲಾದ ವಿಚಾರಗಳನ್ನು ಕುರಿತು ಅಸಂಖ್ಯಾತ ಶಾಸನಗಳೂ ಸಂಸ್ಥೆಗಳೂ ಉದಯಿಸಿವೆ. (೫) **ಕೈಗಾರಿಕೆಯ ಕ್ಷೇತ್ರ**ದಲ್ಲಿ ಗಿರಣಿ ಕೆಲಸಗಾರರ ಹಿತರಕ್ಷಣೆ, ನೊಂದ ಕೆಲಸಗಾರರ ಪರಿಹಾರ, ದುರ್ಬಲ ಕೆಲಸಗಾರರ ಸಂರಕ್ಷಣೆ, ನಿರುದ್ಯೋಗ ನಿವಾರಣೆ, ಮುಷ್ಕರಗಳು, ಕೆಲಸಗಾರರ ಉದ್ಯೋಗ ಸಂಘಗಳು, ನಿಯೋಜಿತ ಕ್ರಮಬದ್ಧವಾದ ಕೈಗಾರಿಕೆಯ ಅಭಿವೃದ್ಧಿ, ಸರ್ಕಾರ ವಶವರ್ತಿಯಾದ ಕೈಗಾರಿಕೆ, ಕೈಗಾರಿಕೆಗೆ ಸರ್ಕಾರದ ಸಹಾಯ ಮೊದಲಾದ ವಿಷಯಗಳು ಪರ್ವತಪ್ರಾಯವಾಗಿ ಶಾಸನಗಳನ್ನು ಎಬ್ಬಿಸಿವೆ. ನೂತನ ಅಂತರ್ರಾಷ್ಟ್ರೀಯ ಆರ್ಥಿಕ ಸಂಬಂಧ ವ್ಯವಸ್ಥೆಯ ಫಲವಾಗಿ ಕೈಗಾರಿಕೆಯ ಮೇಲೆ ಸರ್ಕಾರದ ಹತೋಟಿಯು ಸರ್ವತೋಮುಖವಾಗಿ ಸ್ಥಾಪಿಸಲ್ಪಟ್ಟಿದೆ. ಪ್ರತಿರಾಜ್ಯದಲ್ಲೂ ಈಗ ಸರ್ಕಾರವು ದಿನದಿನವೂ ಹೊಸ ಸುಂಕ ತೆರಿಗೆಗಳು, ಹೊಸ ನಾಣ್ಯ ವಿನಿಮಯ ದರಗಳು, ಹೊಸ ಧಾರಣೆಗಳು, ಹೊಸ ಮಾರಾಟದ ಕ್ರಮಗಳು, ಹೊಸ ಪಡಿತರ ಕ್ರಮಗಳು, ಇತ್ಯಾದಿಗಳನ್ನು ಶಾಸನಮುಖೇನ ರಚಿಸುತ್ತಾ ಬಳಲಿ ತೊಳಲುತ್ತಿದೆ. ಅಮೆರಿಕದ ಸಂಯುಕ್ತ ರಾಜ್ಯದಲ್ಲಿ ಆರ್ಥಿಕ ಮುಗ್ಗಟ್ಟನ್ನೆದುರಿಸಲು ಅಧ್ಯಕ್ಷ ರೂಸವೆಲ್ಟರು ಸ್ಥಾಪಿಸಿದ್ದ ನವೋದ್ಯಮ (New Deal) ಎಂಬ ಅದ್ಭುತ ಆರ್ಥಿಕ ವ್ಯವಸ್ಥೆಯು ಸರ್ವವೇದ್ಯವಾಗಿದೆ.

ಕೇವಲ ಪ್ರಗತಿಪರ ಶಾಸನಗಳ ಕಲ್ಪನೆ ಸಹ ಈ ಯುಗದಲ್ಲಿ ಹೇರಳವಾಗಿ ಸಂಭವಿಸಿದೆ. ನಗರಾಭಿವೃದ್ಧಿ, ಗೃಹನಿರ್ಮಾಣ, ಆರೋಗ್ಯರಕ್ಷೆ, ಸುಸಂತಾನಾಭಿವೃದ್ಧಿ, ಬಾಲಯೋಗಕ್ಷೇಮ, ಪಾನನಿರೋಧ, ವ್ಯಭಿಚಾರ ನಿರ್ಮೂಲನ, ಕಾರಾಗೃಹ ಸುಧಾರಣೆ, ನೂತನ ವಿದ್ಯಾಭ್ಯಾಸ ಮೊದಲಾದ ವಿಚಾರಗಳಲ್ಲಿ ಮೈಸೂರಲ್ಲಿ ಸಹ ಈ ಯುಗದಲ್ಲಿ ಬೇಕಾದಷ್ಟು ಹೊಸ ಶಾಸನಗಳು ಗೋಚರಿಸಿವೆ.

ಸಾರ್ವಜನಿಕ ಶಾಸನ (Public Law) ವಿಭಾಗದಲ್ಲಿ ಈ ಪ್ರಚಂಡ ಪ್ರಳಯಗಳೇ ಸಂಭವಿಸಿವೆ ಎಂದು ಎಲ್ಲರಿಗೂ ಗೊತ್ತಾಗಿದೆ. (೧) ಸಕಲ ದೇಶಗಳ **ರಾಜ್ಯಾಂಗ**

ಶಾಸನಗಳೂ ಸರ್ಕಾರ ವ್ಯವಸ್ಥೆಗಳೂ ಸರ್ಕಾರದ ಅಂಗಗಳಾದ ನಿರ್ವಾಹಶಾಖೆ, ಶಾಸನ ಕಲ್ಪನಾಶಾಖೆ, ನ್ಯಾಯಶಾಖೆ, ರಾಜ್ಯಭಾರ ಶಾಖೆಗಳೂ ಈ ಯುಗದಲ್ಲಿ ತುಂಬಾ ಮಾರ್ಪಟ್ಟಿವೆ. ಯೂರೋಪಿನಲ್ಲೂ ದಕ್ಷಿಣ ಅಮೆರಿಕದಲ್ಲೂ ಏಷಿಯದಲ್ಲೂ ವಿಪ್ಲವಮಾರ್ಗದಿಂದ ಬಹುರಾಜ್ಯಗಳಲ್ಲಿ ಸರ್ವಾಧಿಕಾರ ಪ್ರಭುತ್ವವು ಸ್ಥಾಪಿತವಾಗಿ ಅಲ್ಲೋಲಕಲ್ಲೋಲವುಂಟಾಯಿತು. ಇಂಗ್ಲೆಂಡು ಅಮೆರಿಕಾ ರಾಜ್ಯಗಳಲ್ಲಿ ಸಹ ಈ ಕ್ರಮದ ಪದ್ಧತಿಗಳು ರೂಢಮೂಲವಾದವು. ಶಾಂತಿಮಾರ್ಗದಿಂದ ಹುಟ್ಟಿದ ಬದಲಾವಣೆಗಳು ಸಹ ಪ್ರಳಯಸದೃಶವೇ ಆಗಿದ್ದವು. ೧೯೩೦ರ ವೆಸ್ಟ್‌ಮಿನಿಸ್ಟರ್ ಶಾಸನದಿಂದ ಬ್ರಿಟಿಷು ಸಾಮ್ರಾಜ್ಯದ ಇಡಿ ಸ್ವರೂಪವೇ ಬದಲಾಯಿಸಿತು. ೧೯೩೭ರಲ್ಲಿ ದಕ್ಷಿಣ ಐರ್ಲೆಂಡು ತನ್ನ ರಾಜ್ಯಾಂಗವನ್ನು ಸ್ವತಂತ್ರಾಧಿಕಾರದಿಂದ ರಚಿಸಿಕೊಂಡಿತು. ಅದೇ ವರ್ಷ ರಸ್ಸಿಯಾ ರಾಜ್ಯಕೂಟದಲ್ಲಿ ಸಹ ಪ್ರಜಾಪ್ರಭುತ್ವ ಚಿಹ್ನೆಯುಳ್ಳ ಹೊಸ ರಾಜ್ಯಾಂಗವು ಹುಟ್ಟಿತು. ೧೯೨೫ರಲ್ಲಿ ಜಪಾನಿನ ರಾಜ್ಯಾಂಗ ದಲ್ಲಿ ಪ್ರಬಲ ಪರಿವರ್ತನೆಯುಂಟಾಯಿತು. ೧೯೨೮ರಲ್ಲಿ ಇಂಗ್ಲೆಂಡು ತನ್ನ ಅಶೇಷ ಸ್ತ್ರೀ ಪ್ರಜೆಗಳಿಗೂ ಪುರುಷರಿಗೆ ಸಮಾನವಾಗಿ ಸಮ್ಮತಾಧಿಕಾರವನ್ನು ಕೊಟ್ಟಿತು. ಭಾರತದ ರಾಜ್ಯಾಂಗವು ೧೯೧೯ರಲ್ಲೂ ೧೯೩೫ರಲ್ಲೂ ತೀರ ಹೊಸ ರೂಪವನ್ನು ತಾಳಿತು. ಮೈಸೂರಲ್ಲಿ ೧೯೪೦ರಲ್ಲಿ ರಾಜ್ಯಾಂಗವು ಸಾಕ್ಷಾತ್ತಾಗಿ ಮಹಾರಾಜ ರಿಂದ ಸ್ಪಷ್ಟವಾದ ಶಾಸನಮುಖೇನ ನೂತನಾವಸ್ಥೆಯನ್ನು ಪಡೆಯಿತು. ಇಂಗ್ಲಿಷರೂ ಫ್ರೆಂಚರೂ ಡಚ್ಚರೂ ತಂತಮ್ಮ ಅಧೀನ ರಾಜ್ಯಗಳಲ್ಲೆಲ್ಲಾ ಈ ಯುಗದಲ್ಲಿ ಹಲವಾರು ರಾಜ್ಯಾಂಗಸುಧಾರಣೆಗಳನ್ನು ಸ್ಥಾಪಿಸಿದರು. ಬರ್ಮಾ ಮತ್ತು ಸಿಂಹಳದ್ವೀಪಗಳ ಸಂಗತಿಯು ಎಲ್ಲರಿಗೂ ಗೊತ್ತಿದೆ. (೨) **ನೌಕರಶಾಸನ** ಕಲ್ಪನೆಯು ಈ ಯುಗದ ಮುಖ್ಯವಾದ ಬೆಳವಣಿಗೆಯೆನ್ನಬಹುದು. ಶಾಸನಸಭೆಗಳು ಶಾಸನಕಲ್ಪನೆಯೆಲ್ಲವನ್ನೂ ತಾವೇ ಮಾಡಲು ತೀರಾ ಅಸಮರ್ಥವಾಗಿ ಅದನ್ನು ಬಹುವಾಗಿ ಪರಿಣತನೌಕರರ ಇಲಾಖೆಗಳಿಗೆ ವಹಿಸಿಬಿಡುತ್ತಾ ಬಂದಿವೆ. ಆದುದರಿಂದ ಈಗಿನ ಶಾಸನಕಲ್ಪನೆಯಲ್ಲಿ ಶತಾಂಶವನ್ನುಳಿದ ಮಿಕ್ಕ ಭಾಗವೆಲ್ಲವೂ ನೌಕರರ ವಶವಾಗಿದೆ. ಇದರ ಪರಿಣಾಮ ಗಳನ್ನು ಕುರಿತು ವಿಸ್ತಾರವಾದ ಚರ್ಚೆ ನಡೆಯುತ್ತಾ ಇದೆ. (೩) **ಅಪರಾಧಶಾಸನ** ಭಾಗದಲ್ಲೂ ಎಲ್ಲಾ ರಾಜ್ಯಗಳಲ್ಲೂ ಬದಲಾವಣೆಗಳು ಹುಟ್ಟಿವೆ. ಮರಣದಂಡನೆಯು ಮೈಸೂರಲ್ಲಿ ಸಹ ಸದ್ಯದಲ್ಲೇ ವಜಾ ಆಗುವ ಸೂಚನೆ ಇದೆ. (೪) **ಪ್ರಜಾಸ್ವಾತಂತ್ರ್ಯ**ವು ಈ ಯುಗದಲ್ಲಿ ಕುಗ್ಗುತ್ತಾ ಬಂದಿತು. ಇದು ಎಲ್ಲರ ಅನುಭವಕ್ಕೂ ಬಂದ ಮಾತು. ಇದರ ವಿವರಗಳನ್ನು ಇಲ್ಲಿ ನಿರೂಪಿಸಲು ಸಾಧ್ಯವಿಲ್ಲ. ರಾಜನ ಮೇಲೆ ನ್ಯಾಯಶಾಲೆಯಲ್ಲಿ ವಿವಾದಮಾಡಲು ಇಂಗ್ಲೆಂಡಿನಲ್ಲಿ ಹಲವು ಶತಮಾನಗಳಿಂದಲೂ

ನಡೆದುಬರುತ್ತಿದ್ದ ಪ್ರತಿಬಂಧಕದಲ್ಲಿ ಅರ್ಧಭಾಗವು ಈ ಯುಗದಲ್ಲಿ ನಿವಾರಿಸಲ್ಪಟ್ಟಿತು. ಮೈಸೂರಲ್ಲಿ ಸರ್ಕಾರದವರ ಮೇಲೆ ವಿವಾದ ಹೂಡತಕ್ಕ ಹಕ್ಕು ಅತ್ಯಲ್ಪವಾಗಿ ೧೯೩೩ರಲ್ಲಿ ಕೊಡಲ್ಪಟ್ಟಿದೆ. ಅನಂತಶಯನದಲ್ಲಿ ಈಚೆಗೆ ಇಂಥಾ ಹಕ್ಕನ್ನು ಸಂಪೂರ್ಣ ವಾಗಿ ಕೊಟ್ಟಿದ್ದಾರೆ.

ಈಗಿನ **ಯುದ್ಧಕಾಲದ ಶಾಸನ** ಕಲ್ಪನೆಯನ್ನು ಕುರಿತು ಹೆಚ್ಚೇನೂ ಹೇಳಬೇಕಾಗಿಲ್ಲ. ಸಾರ್ವಜನಿಕ ಶಾಂತಿಶಿಸ್ತು (Public Security) ಕಂದಾಯ, ಕೃಷಿ, ಕೈಗಾರಿಕೆ, ವ್ಯಾಪಾರಾದಿ ಉದ್ಯೋಗಗಳ ವ್ಯವಸ್ಥೆ, ಯುದ್ಧಕ್ಕೆ ಅಶೇಷ ಜನರ ತನುಮನಧನಗಳನ್ನು ಸಂಗ್ರಹಿಸತಕ್ಕ ವಿಧಾನ, ಶಸ್ತ್ರನಿರ್ಮಾಣ, ಪಡಿತರ ವ್ಯವಸ್ಥೆ (Rationing) ಇತ್ಯಾದಿ ಕೆಲಸಗಳಿಗಾಗಿ ಅನಂತಾನಂತ ಶಾಸನವಿಧಿಗಳು ದಿನಂಪ್ರತಿ ಹುಟ್ಟುತ್ತಲೇ ಇವೆ. ಯುದ್ಧಕ್ಕೆ ಸೇರದಿರುವ ತಟಸ್ಥರಾಷ್ಟ್ರಗಳ ಹಕ್ಕುಗಳು ಈ ಯುದ್ಧಕಾಲದಲ್ಲಿ ತೀರ ಭಂಗಪಟ್ಟಿವೆ. ಅಮೆರಿಕದ ಗೇಣಿ ಮತ್ತು ಸಾಲ (Lease and Lend) ಎಂಬ ವ್ಯವಸ್ಥೆಯಿಂದ ಪ್ರಪಂಚದ ಆರ್ಥಿಕವ್ಯವಸ್ಥೆಯೇ ಬೇರೆಯಾಗಿದೆ.

ಶಾಸನದ ಭವಿಷ್ಯತ್ತು ಹೇಗಿದ್ದೀತು ? ಈಗ ಲೋಕದಲ್ಲಿ ನಡೆಯಬೇಕಾದ ಸಕಲ ಕಾರ್ಯಗಳೂ ರಚನೆಗಳೂ ಶಾಸನಿಕವಾಗಿಯೇ ನಡೆಯಬೇಕೆಂಬ ಸಂಪ್ರದಾಯವು ಸರ್ವತ್ರ ರೂಢಮೂಲವಾಗಿ ಬಿಟ್ಟಿರುವುದರಿಂದ ಶಾಸನಕಲ್ಪನೆಯು ಉತ್ತರೋತ್ತರ ಹೆಚ್ಚುತ್ತಾ ಹೋಗಬೇಕಲ್ಲದೆ ತಗ್ಗಲು ಸಾಧ್ಯವೇ ಇಲ್ಲ. ಯುದ್ಧೋಪಸಂಹಾರ, ಸಂಧಿವ್ಯವಸ್ಥೆ, ಯುದ್ಧೋತ್ತರ ಪರಿಣಾಮಗಳ ಪರಿಷ್ಕಾರ, ಜಗತ್ತಿನ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ಪುನರುದಯ ಮೊದಲಾದ ಕಾರ್ಯಗಳು ಶಾಸನಕಲ್ಪನೆಗೆ ಪರ್ವತಪ್ರಮಾಣದಲ್ಲಿ ಅವಕಾಶವನ್ನು ಒದಗಿಸುತ್ತವೆ. ಅಟ್ಲಾಂಟಿಕ ಸ್ವಾತಂತ್ರನಿರೂಪ, ರೂಸವೆಲ್ಟರ ಸ್ವಾತಂತ್ರ್ಯ ಚತುಷ್ಟಯ, ಸಾನ್‌ಫ್ರಾನ್ಸಿಸ್ಕೋ ಪರಿಷತ್ತಿನ ಶಾಂತಿರಕ್ಷಾ ಸಮಿತಿ (Security Council), ಸ್ಟಾಲಿನರ ನವೀನಲೋಕ ವ್ಯವಸ್ಥೆ (New World Order) ಮೊದಲಾದ ಉಗ್ಗಡಣೆಗಳು ಕೇವಲ ವಂಚನಾ ವ್ಯಾಪಾರವಾಗಿರದೆ ಸತ್ಯವಾಗಿ ಕಾರ್ಯರೂಪಕ್ಕೆ ಇಳಿಯಬೇಕಾದರೆ ಪ್ರಪಂಚದ ವ್ಯವಸ್ಥೆಯಲ್ಲಿ ಮಹಾಪ್ರಳಯೋಪಮ ಪರಿವರ್ತನೆ ಆದಲ್ಲದೆ ತೀರದು. ಈ ಕಾರ್ಯವೇನೋ ಶಾಸನಗಳ ದ್ವಾರಾ ನಡೆಯಬೇಕಾದರೂ ಅದನ್ನು ಸಾಧಿಸತಕ್ಕ ಸಾಮರ್ಥ್ಯವು ಮಾತ್ರ ಶಾಸನಕ್ಕೆ ಇಲ್ಲ. ಶಾಸನದ ಕೈಯಲ್ಲಿ ಅದನ್ನು ಮತ್ತೊಂದು ಶಕ್ತಿಯು ಮಾಡಿಸಬೇಕು. ಅದಾವುದು ?

ಮಂ. ಅ. ದೊರೆಸ್ವಾಮಿ ಅಯ್ಯಂಗಾರ್ಯ.

೮. ಭರತಖಂಡದ ಶಿಕ್ಷಣದ ಕೆಲವು ಸಮಸ್ಯೆಗಳು

ಇಪ್ಪತ್ತನೆಯ ಶತಮಾನವನ್ನು 'ವಿದ್ಯಾಭ್ಯಾಸದ ನವಯುಗ' ಎಂದು ಕರೆಯಬಹುದು. ಇಂಗ್ಲೆಂಡ್, ಜರ್ಮನಿ, ಅಮೇರಿಕ, ಫ್ರಾನ್ಸ್, ಜಪಾನ್, ರಷ್ಯಾ, ಇವು ವಿದ್ಯಾಭ್ಯಾಸದಲ್ಲಿ ಬಹಳ ಮುಂದುವರಿದಿರುವ ದೇಶಗಳು. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ವಿದ್ಯಾಭ್ಯಾಸದ ಬೆಲೆಯೇನು, ಸ್ಥಾನವೇನು ? ಎಂಬುದನ್ನು ಈ ದೇಶಗಳು ಚೆನ್ನಾಗಿ ಮನಗಂಡು ಅದಕ್ಕಾಗಿ ಹೇರಳವಾದ ಹಣ ಒದಗಿಸಿ ಬಲಾತ್ಕಾರ ವಿದ್ಯಾಭ್ಯಾಸ ಪದ್ಧತಿಯನ್ನು ೧೯ ನೆಯ ಶತಮಾನದ ಅಂತ್ಯದಲ್ಲಿಯೇ ಜಾರಿಗೆ ತಂದುವು. ಆದರೂ, ಈ ಶತಮಾನದಲ್ಲಿ, ಅದರಲ್ಲಿಯೂ ಯೂರೋಪಿನ ೧೯೧೪-೧೮ ನೆಯ ಮಹಾ ಯುದ್ಧವಾದಂದಿನಿಂದ ಈಚೆಗೆ ಅವು ತಮ್ಮ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಕೈಗಾರಿಕೆಯ ಸ್ಥಿತಿಗಳಿಗೆ ಅನುಗುಣವಾಗಿ ವಿದ್ಯಾಭ್ಯಾಸ ಪದ್ಧತಿಗಳನ್ನು ಮಾರ್ಪಡಿಸಿ ಉತ್ತಮಗೊಳಿಸುವುದರಲ್ಲಿ ನಿರಂತರವೂ ಪ್ರಯತ್ನಿಸುತ್ತಿವೆ. ಈಗ ನಡೆಯುತ್ತಿರುವ ಘೋರ ಯುದ್ಧವು ಪ್ರಾರಂಭವಾದ ಮೇಲಂತೂ ಶಿಕ್ಷಣ ವಿಷಯದ ಪರಿಶೀಲನೆ ವಿಶೇಷವಾಗಿ ನಡೆಯುತ್ತಿದೆ. 'ಯುದ್ಧವನ್ನು ಗೆದ್ದರೆ ಸಾಲದು, ಶಾಂತಿಯನ್ನೂ ಗೆಲ್ಲಬೇಕು' ಎಂಬ ಮಾತು ದೇಶ ದೇಶಗಳಲ್ಲೆಲ್ಲ ಕೇಳಿಬರುತ್ತಿದೆ. ಯುದ್ಧಮೂಲಗಳನ್ನು ಕಿತ್ತೊಗೆದು ರಾಷ್ಟ್ರ ರಾಷ್ಟ್ರಗಳಲ್ಲಿ ಸೌಹಾರ್ದವನ್ನುಂಟುಮಾಡುವ ಶಕ್ತಿ ಸುವ್ಯವಸ್ಥಿತವಾದ ಶಿಕ್ಷಣಕ್ಕೆ ಮಾತ್ರ ಉಂಟು ಎಂಬ ಭಾವನೆ ಬೇರೂರುತ್ತಿದೆ. ಇಷ್ಟು ತ್ಯಾಗಮಾಡಿ ಅಪಾರವಾದ ಬೆಲೆಯಿಂದ ಗಳಿಸಿರುವ ಶಾಂತಿ ಶಾಶ್ವತವಾಗಿರುವ ಹಾಗೆ ಮಾಡಲು ಯುದ್ಧಾನಂತರದ ಶಿಕ್ಷಣ ಪದ್ಧತಿಗಳಲ್ಲಿ ಯಾವ ಸುಧಾರಣೆಗಳು ಅಗತ್ಯ ಎಂಬುದನ್ನು ಪರಿಶೀಲಿಸಲು ಅನುಭವಶಾಲಿಗಳಾದ ಉಪಾಧ್ಯಾಯರ, ಅಧಿಕಾರಿಗಳ ಮತ್ತು ಸಾರ್ವಜನಿಕರ ಸಭೆಗಳೂ ಸಮ್ಮೇಳನಗಳೂ ಈಗಿನ ಕ್ರಮಗಳಲ್ಲಿರುವ ಹುಳುಕುಗಳನ್ನು ಎತ್ತಿ ತೋರಿಸಿ ಅವನ್ನು ನಿವಾರಿಸಲು ಅಗತ್ಯ ಬೇಕಾಗುವ ಯೋಜನೆಗಳನ್ನು ತಯಾರಿಸುತ್ತಿದ್ದಾರೆ.

ನಮ್ಮ ಸರ್ಕಾರದವರೂ ವಿದ್ಯಾಭ್ಯಾಸದ ಸ್ಥಿತಿಗತಿಗಳಲ್ಲಿ ಅಗತ್ಯ ಆಗಬೇಕಾಗಿರುವ ಸುಧಾರಣೆಗಳನ್ನು ಸೂಚಿಸಲು ಅನೇಕ ಸಮಿತಿಗಳನ್ನು ರಚಿಸಿದ್ದಾರೆ. ಯುದ್ಧಾನಂತರ ಸುಧಾರಣೆಗಳ ಯೋಜನೆಗಳು ತಯಾರಾಗುತ್ತಿರುವ ಈ ಕಾಲದಲ್ಲಿ ನಮ್ಮ ದೇಶದ ವಿದ್ಯೆಯ ಬೆಳವಣಿಗೆಗೆ ಬೇಕಾದ ಘಟನೆಗಳನ್ನೂ ಅಭಿಪ್ರಾಯಗಳನ್ನೂ ಸ್ಥೂಲವಾಗಿ ಚರ್ಚಿಸುವುದೇ ಈ ಲೇಖನದ ಉದ್ದೇಶ.

ಪ್ರಾಥಮಿಕ ವಿದ್ಯಾಭ್ಯಾಸ—ನಮ್ಮ ದೇಶದ ವಿದ್ಯಾಭ್ಯಾಸದ ಬೆಳವಣಿಗೆಯಲ್ಲಿ ಎದ್ದು ಕಾಣುತ್ತಿರುವ ಸಮಸ್ಯೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸೇರಿದುದು. ಒಂದು ದೃಷ್ಟಿಯಿಂದ ನೋಡಿದರೆ ನಮ್ಮಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವೇನೋ ಬಹುಮಟ್ಟಿಗೆ ಮುಂದುವರಿದಿದೆ. ಸಾವಿರಾರು ಶಾಲೆಗಳು ತೆರೆದಿವೆ. ಲಕ್ಷಾಂತರ ಮಕ್ಕಳು ಈ ಶಾಲೆಗಳಲ್ಲಿ ಓದುತ್ತಿದ್ದಾರೆ. ಆದರೂ ಎಲ್ಲರಿಗೂ ಅತ್ಯಾವಶ್ಯಕವಾದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯಮಾಡಲು ಇನ್ನೂ ಸಾಧ್ಯವಾಗಿಲ್ಲ. ಅದು ಇನ್ನೂ ದೂರದ ಕನಸೇ. 'ಜನಸಾಮಾನ್ಯರ ತಿಳಿವಳಿಕೆ ಹೆಚ್ಚಿ ಅವರು ಮುಂದುವರಿಯಬೇಕಾದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯತೆ ಬೇಕು. ಅದಕ್ಕೆ ಹೆಚ್ಚು ಹಣ ಒದಗಿಸಬೇಕು' ಎಂದು ೧೮೫೪ನೆಯ ಇಸವಿಯ ವಿದ್ಯಾಭ್ಯಾಸದ ವರದಿಯಲ್ಲಿಯೂ ಅನಂತರ ೧೮೮೨ನೆಯ ಇಸವಿಯ ಹಂಟರ್ ಕಮಿಷನ್ ವರದಿಯಲ್ಲಿಯೂ ಒತ್ತಿ ಹೇಳಲಾಗಿತ್ತು. ಆದರೆ ಇವು ಯಾವುವೂ ಕಾರ್ಯಕ್ಕೆ ತಿರುಗಲಿಲ್ಲ. ಹೀಗಿರುವಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಕಡ್ಡಾಯ ಆವಶ್ಯಕ ಎಂಬುದನ್ನು ಮೊದಲು ವಿಶದವಾಗಿ ಮನಗಂಡು ಅದಕ್ಕಾಗಿ ಪ್ರಚಾರ ನಡೆಸಿ ಹೋರಾಡಿದ ಮಹಾವ್ಯಕ್ತಿ ಗೋಪಾಲಕೃಷ್ಣ ಗೋಖಲೆ ಅವರು. ಇವರು ೧೯೧೧ನೆಯ ಇಸವಿಯಲ್ಲಿಯೇ ಇಂಡಿಯಾ ದೇಶದ ಕೇಂದ್ರಶಾಸನ ಸಭೆಯಲ್ಲಿ ಬಲಾತ್ಕಾರ ವಿದ್ಯಾಭ್ಯಾಸದ ಮಸೂದೆಯನ್ನು ಸೂಚಿಸಿದ್ದರು. ಇದು ಇಂಗ್ಲೆಂಡಿನ ೧೮೭೦ನೆಯ ಇಸವಿಯ ವಿದ್ಯಾಭ್ಯಾಸದ ಮಸೂದೆಯ ಮಾದರಿಯಲ್ಲಿತ್ತು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಾಧ್ಯವಾದ ಕಡೆಗಳಲ್ಲೆಲ್ಲ ಉಚಿತವಾಗಿಯೂ ಏರ್ಪಡಿಸಲು ಪ್ರಾರಂಭಿಸಬೇಕೆಂಬುದೇ ಈ ಮಸೂದೆಯ ಧ್ಯೇಯವಾಗಿತ್ತು. ಆದರೆ ಅಧಿಕಾರಿವರ್ಗದವರು ಈ ಇಂಥ ಅಲ್ಪ ಸುಧಾರಣೆಯ ಮಸೂದೆಯನ್ನೂ ಎದುರಿಸಿತಾಗಿ ಅದಕ್ಕೆ ಶಾಸನಸಭೆಯ ಅಂಗೀಕಾರ ದೊರೆಯಲಿಲ್ಲ. ಆ ಬಗೆ ಹಣಕಾಸಿನ ಮತ್ತು ಆಡಳಿತದ ಜವಾಬ್ದಾರಿಯನ್ನೂ ಕಷ್ಟಗಳನ್ನೂ ವಹಿಸಲು ಸರ್ಕಾರದವರು ತಯಾರಿರಲಿಲ್ಲ. ಈಗ ಸಹ ಅದೇ ಸಬುಬೇ; ಅದೇ ಕಥೆಯೇ.

ಅನಂತರ ೧೯೨೦ನೆಯ ವರ್ಷದಲ್ಲಿ ನಡೆದ ಮಾಂಟೆಗೂ ಚೆಮ್ಸ್‌ಫರ್ಡ್ ಸುಧಾರಣೆಗಳ ಪ್ರಕಾರ ಬ್ರಿಟಿಷ್ ಇಂಡಿಯದ ನಾನಾ ಪ್ರಾಂತಗಳಲ್ಲಿ ಜನರಿಂದ ಚುನಾಯಿತರಾದ ಮಂತ್ರಿಗಳು ವಿದ್ಯಾಭ್ಯಾಸದ ಬೆಳವಣಿಗೆಗೆ ಹೊಣೆಗಾರರಾದರು. ಅವರು ಬಲಾತ್ಕಾರ ಪ್ರಾಥಮಿಕ ವಿದ್ಯಾಭ್ಯಾಸದ ಆವಶ್ಯಕತೆಯನ್ನು ಅಂಗೀಕರಿಸಿ ಅದಕ್ಕೆ ಬೇಕಾದ ಕಾನೂನುಗಳನ್ನು ಏರ್ಪಡಿಸಿದರು. ಅಷ್ಟೇ ಅಲ್ಲ. ಕೆಲವು ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾಯೋಗಿಕವಾಗಿ ಆ ಪದ್ಧತಿಯನ್ನು ಜಾರಿಗೂ ತಂದರು. ಇಷ್ಟಾದರೂ

ಬಲಾತ್ಕಾರ ವಿದ್ಯಾಭ್ಯಾಸವನ್ನು ದೇಶದಲ್ಲೆಲ್ಲ ಆಚರಣೆಗೆ ತರಲು ಸಾಧ್ಯವಾಗಿಲ್ಲ. ಇತರ ದೇಶಗಳಲ್ಲೆಲ್ಲ ಬಲಾತ್ಕಾರ ಪ್ರಾಥಮಿಕ ವಿದ್ಯಾಭ್ಯಾಸ ಪದ್ಧತಿಯು ಬೇರೂರಿ, ಸೆಕೆಂಡರಿ ಮತ್ತು ಕೈಗಾರಿಕಾ ವಿದ್ಯಾಭ್ಯಾಸವನ್ನು ಹೆಚ್ಚಿಸಿ ಉತ್ತಮಪಡಿಸುತ್ತಿರುವಾಗ ನಮ್ಮಲ್ಲಿ ಸಾರ್ವಜನಿಕ ವಿದ್ಯಾಭ್ಯಾಸದ ಸಮಸ್ಯೆ ಮೊದಲಿನ ಪರಿಸ್ಥಿತಿಯಲ್ಲಿಯೇ ಇದೆ. ಇದಕ್ಕೆ ಕಾರಣ—ನಮ್ಮ ದೇಶದ ಸಾಮಾಜಿಕ ಪರಿಸ್ಥಿತಿ ; ರಾಜಕೀಯ ಪರಿಸ್ಥಿತಿ ; ಎಲ್ಲಕ್ಕಿಂತಲೂ ಹೆಚ್ಚಾಗಿ ಹಣಕಾಸಿನ ಪರಿಸ್ಥಿತಿ. ವಿದ್ಯಾಶಾಸ್ತ್ರಜ್ಞರು ತಯಾರಿಸಿ ಮುಂದಿಡುತ್ತಿರುವ ಉತ್ತಮವಾದ ಯೋಜನೆಗಳೆಲ್ಲಾ ದ್ರವ್ಯಾಭಾವದಿಂದ ಮೂಲೆಗೆ ಬೀಳುತ್ತಿರುವುದು ಶೋಚನೀಯವಾದ ವಿಷಯ ; ಸಮಾಜದ ಮುಂದಾಳುಗಳೂ, ವಿದ್ಯಾವಂತರೂ ಅಧಿಕಾರವರ್ಗದವರೂ ಅಗತ್ಯ ಯೋಚಿಸಬೇಕಾದ ವಿಷಯ. ಹಣಕಾಸಿನ ಯೋಜನೆ, ಸರ್ಕಾರದ ಕಾರ್ಯನೀತಿ ಕಾರ್ಯಪಟುತ್ವಗಳ ಸಾಧಕವಾಗಿರಬೇಕೇ ಹೊರತು ದೇಶದ ಮುಖ್ಯ ಆವಶ್ಯಕತೆಗಳನ್ನು ಅದುಮಿಬಿಡುವುದು ಉತ್ತಮರಾಜ್ಯಗಳ ಲಕ್ಷಣವಲ್ಲ.

ವಿದ್ಯಾಭ್ಯಾಸದಲ್ಲಿ ಅಪವ್ಯಯ—ನಮ್ಮ ದೇಶದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಒತ್ತಾಯಪಡಿಸಲು ಮತ್ತೊಂದು ಅತಿಮುಖ್ಯ ಕಾರಣವೂ ಇದೆ. ಪ್ರೈಮರಿ ಒಂದನೆಯ ತರಗತಿಗೆ ಒಂದುನೂರು ಮಕ್ಕಳು ಸೇರಿದರೆ ಅವರಲ್ಲಿ ಸುಮಾರು ಇಪ್ಪತ್ತು ಮಂದಿ ಮಾತ್ರ ಪ್ರೈಮರಿ ನಾಲ್ಕನೆಯ ತರಗತಿಯವರೆಗೆ ಓದುತ್ತಾರೆ. ಉಳಿದ ಎಂಬತ್ತು ಮಕ್ಕಳು ಮಧ್ಯದಲ್ಲಿಯೇ ಶಾಲೆಗೆ ಬರುವುದನ್ನು ಬಿಟ್ಟುಬಿಡುತ್ತಾರೆ.[1] ಹೀಗೆ ಬಿಟ್ಟವರು ಸ್ವಲ್ಪ ಕಾಲದಲ್ಲಿಯೇ ತಾವು ಕಲಿತ ಅಲ್ಪಸ್ವಲ್ಪವನ್ನೂ ಮರೆತುಬಿಡುವರು. ಅವರು ಶಾಲೆಗೆ ಸೇರಿ ಒಂದೆರಡು ವರ್ಷಗಳ ಕಾಲ ಇದ್ದುದರಿಂದ ಯಾವ ಪ್ರಯೋಜನವೂ ಆದ ಹಾಗಿಲ್ಲ. ಆದ್ದರಿಂದ ಪ್ರೈಮರಿ ವಿದ್ಯಾಭ್ಯಾಸದ ವ್ಯಯದಲ್ಲಿ ಶೇಕಡ ೮೦ ರಷ್ಟು ವ್ಯರ್ಥವಾಗುತ್ತಿದೆ. ಎಂದರೆ ಹಣಕ್ಕೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ. ಜೊತೆಗೆ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಶ್ರಮ ಮತ್ತು ಕಾಲ ವ್ಯರ್ಥವಾಗುತ್ತಿವೆ. ಆರ್ಥಿಕ ಮುಗ್ಗಟ್ಟಿನಲ್ಲಿ ಸಿಕ್ಕಿ ಬಡ ದೆಸೆಯಲ್ಲಿರುವ ನಮ್ಮ ದೇಶ ಇಷ್ಟು ಹಣವನ್ನು ಅಪವ್ಯಯ ಮಾಡಬಹುದೆ ? ಇದಕ್ಕೆ ಪರಿಹಾರಮಾರ್ಗವೇನು? ಒಂದೇ. ಬಲಾತ್ಕಾರ ವಿದ್ಯಾಭ್ಯಾಸವನ್ನು ಜಾರಿಗೆ ತರುವುದು.[2]

ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ತಯಾರಾದ ವರ್ಧಾಶಿಕ್ಷಣ ವರದಿ

---

[1] *Education Quinquennial Report on the Progress of Education in India*.

[2] *Page 8; Post-War Educational Development in India*. Report by the Central Advisory Board of Education, 1944. (Popularly known as the Sargent Report).

ಯಲ್ಲಿಯೂ, ಅನೇಕ ವಿದ್ಯಾಧಿಕಾರಿಗಳ, ವಿದ್ಯಾಶಾಸ್ತ್ರಜ್ಞರ ಮತ್ತು ಆಡಳಿತಾಧಿಕಾರಿಗಳ ಕೂಲಂಕಷ ಪರಿಶೀಲನೆಗೆ ಒಳಗಾಗಿ ಇತ್ತೀಚೆಗೆ ಪ್ರಕಟವಾಗಿರುವ ಸಾರ್ಜೆಂಟ್ ವರದಿಯಲ್ಲಿಯೂ ಬಲಾತ್ಕಾರ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಮೊದಲನೆಯ ಸ್ಥಾನ ದೊರೆತಿದೆ. ಒಟ್ಟಿನಲ್ಲಿ ಹೇಳಬಹುದಾದರೆ ಸಾರ್ವಜನಿಕವಾದ ಉಚಿತವಾದ ಕಡ್ಡಾಯವಾದ ಪ್ರಾಥಮಿಕ ವಿದ್ಯಾಭ್ಯಾಸವನ್ನು ದೇಶದಲ್ಲೆಲ್ಲ ಏರ್ಪಡಿಸಬೇಕೆಂಬ ತತ್ವವನ್ನು ಎಲ್ಲರೂ ಒಪ್ಪುವರು. ಇದು ದೇಶದ ಮುನ್ನಡೆಯ ಕಾರ್ಯಗಳಲ್ಲಿ ಮೊದಲನೆಯ ಮೆಟ್ಟಿಲು. ಸಾಮಾಜಿಕ ರಾಜಕೀಯ ಆರ್ಥಿಕ ಮುಂತಾದ ಯಾವ ಸುಧಾರಣೆಯಾಗಲಿ ಯಶಸ್ವಿಯಾಗಬೇಕಾದರೆ ಮೊದಲು ಸಾರ್ವಜನಿಕ ವಿದ್ಯಾಭ್ಯಾಸದ ಸುಧಾರಣೆ ಅಗತ್ಯ.

ಬಲಾತ್ಕಾರ ವಿದ್ಯಾಭ್ಯಾಸ ಪದ್ಧತಿ ಇಷ್ಟು ಮುಖ್ಯವಾದರೂ ಕಷ್ಟಸಾಧ್ಯವಾದದು. ಮೊದಲು ಈ ಪದ್ಧತಿಯನ್ನೂ ಪಟ್ಟಣಗಳಲ್ಲಿಯೂ, ಶಾಲೆಗಳ ಸಲಕರಣೆ, ಮೇಲ್ವಿಚಾರಣೆ, ಹಾಜರಿ, ಜನರ ಉತ್ಸಾಹ ಮುಂತಾದ ಸೌಕರ್ಯಗಳು ಹೆಚ್ಚಾಗಿರುವ ಸ್ಥಳಗಳಲ್ಲಿ ಪ್ರಾರಂಭಿಸಬೇಕು. ಕ್ರಮೇಣ ದೇಶದ ಎಲ್ಲಾ ಭಾಗಗಳಿಗೂ ಹರಡಬೇಕು. ಈ ಕೆಲಸ ಅಗಾಧವಾದುದು ಎಂದು ಪ್ರಾರಂಭಿಸದೆಯೇ ಇರುವುದು ಸಾಧುವಲ್ಲ. ಇದಕ್ಕಾಗಿ ಹತ್ತು ಅಥವಾ ಇಪ್ಪತ್ತು ವರ್ಷದ ಯೋಜನೆಯನ್ನು ತಯಾರಿಸಿ ನಿಜವಾದ ಉತ್ಸಾಹದಿಂದಲೂ, ನಂಬಿಕೆಯಿಂದಲೂ ಅದನ್ನು ಕಾರ್ಯರೂಪಕ್ಕೆ ತರಲು ಎಲ್ಲ ವಿಧವಾದ ಪ್ರಯತ್ನಗಳನ್ನೂ ಮಾಡಬೇಕು. ಆ ಯೋಜನೆಯಲ್ಲಿ ವಯಸ್ಕರ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನಕೊಡಬೇಕು. ಏಕೆಂದರೆ, ವಯಸ್ಕರ ತಿಳಿವಳಿಕೆ ಹೆಚ್ಚಿ ವಿದ್ಯಾಭ್ಯಾಸದ ಪ್ರಯೋಜನಗಳು ಅವರ ಮನಸ್ಸಿಗೆ ಬಂದರೆ ಅವರು ತಮ್ಮ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಮುತುವರ್ಜಿ ತೋರಿಸುವರು; ಮಕ್ಕಳನ್ನು ಶಾಲೆಗಳಿಗೆ ಸರಿಯಾಗಿ ಕಳುಹಿಸುವರು. ಇದರಿಂದ ಬಲಾತ್ಕಾರ ವಿದ್ಯಾಭ್ಯಾಸದ ಸಾಧನೆ ಸುಲಭವಾಗುವುದು.

ನಮ್ಮ ಶಾಲೆಗಳಲ್ಲಿ ನಡೆಯುವ ಕೆಲಸ—ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದ ಆಡಳಿತ ಮತ್ತು ಪ್ರಸರಣೆಯ ವಿಷಯದಲ್ಲಿ ಇಷ್ಟು ದೂರವ್ಯಾಪಿಯಾದ ಬದಲಾವಣೆಗಳನ್ನು ಚರ್ಚಿಸುವಾಗ ಮತ್ತೊಂದು ಮುಖ್ಯ ವಿಷಯವನ್ನೂ ಗಮನಿಸಬೇಕು. ಅದೇನೆಂದರೆ ಪ್ರಾಥಮಿಕ ಶಾಲೆಗಳಲ್ಲಿ ಈಗ ದೊರೆಯುತ್ತಿರುವ ವಿದ್ಯಾಭ್ಯಾಸ ನಮ್ಮ ಜನತೆಯ ಸಂಸ್ಕೃತಿ, ಧ್ಯೇಯ, ಆದರ್ಶಗಳು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳ ಆವಶ್ಯಕತೆಗಳಿಗೆ ಅನುಕೂಲವಾಗಿವೆಯೆ? ಇಲ್ಲ ಅನನುಕೂಲವೆ? ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿರುವ ಕುಂದುಕೊರತೆಗಳೇನು?

ಅವನ್ನು ನಿವಾರಿಸಿ ಉತ್ತಮಗೊಳಿಸಲು ಯಾವ ಯಾವ ಬದಲಾವಣೆಗಳಾಗಬೇಕು? ಈ ಪ್ರಶ್ನೆಗಳ ದೃಷ್ಟಿಯಿಂದ ಪರಿಶೀಲಿಸಿದರೆ ಈಗ ನಾವು ಕೊಡುತ್ತಿರುವ ವಿದ್ಯೆ ಪ್ರಯೋಜನವಿಲ್ಲದ ವಿದ್ಯೆ. ಅದು ನಮ್ಮ ಜನಾಂಗದ ಜೀವನಕ್ಕೆ ಅಗತ್ಯವೂ ಪ್ರಾಮುಖ್ಯವೂ ಆದ ವಿಷಯಗಳನ್ನು ಗಮನಿಸದೆ ನಿಜವಾದ ಜೀವನವಾಹಿನಿಯಿಂದ ವಿಮುಖವಾಗಿ ಪ್ರವಹಿಸುತ್ತಿದೆ. ಈಗಿನ ವಿದ್ಯಾಭ್ಯಾಸ ನಮ್ಮ ರಾಷ್ಟ್ರಜೀವನದ ಯಥಾರ್ಥವಾದ ಆವಶ್ಯಕತೆಗಳನ್ನೂ ಆಶೋತ್ತರಗಳನ್ನೂ ಜೀವನ ಸಮಸ್ಯೆಗಳನ್ನೂ ಗಮನಿಸಿಲ್ಲ. ಮಕ್ಕಳ ಮನೋವಿಲಾಸವನ್ನೂ ಗಮನಿಸಿಲ್ಲ. ವಿದ್ಯೆ ಕೇವಲ ಅಕ್ಷರ ಜ್ಞಾನವಲ್ಲ. ಕೆಲಸಕ್ಕೆ ಬಾರದ, ಕ್ರಿಯಾಶಕ್ತಿರಹಿತವಾದ, ಆದರ್ಶಪ್ರೇರಣೆಯಿಲ್ಲದ ವಿಷಯಜ್ಞಾನವೂ ಅಲ್ಲ. ಮಕ್ಕಳಿಗೆ ಓದುವುದು, ಬರೆಯುವುದು, ಲೆಕ್ಕಮಾಡುವುದು, ಚರಿತ್ರೆ, ಭೂಗೋಳ, ವಿಜ್ಞಾನಶಾಸ್ತ್ರ ಇವುಗಳ ಜೊತೆಗೆ ಅವರ ವ್ಯಕ್ತಿತ್ವವನ್ನೂ ಕ್ರಿಯಾಶಕ್ತಿಯನ್ನೂ ಬೆಳಸಿ ಅವರ ದಿನವಹಿ ಉದ್ಯೋಗವನ್ನು ಉತ್ತಮಗೊಳಿಸಿ ಲಾಭತರುವ ಹಾಗೆ ಮಾಡಲು ಪ್ರಯೋಜನಕಾರಿಯಾದ ವಿಷಯಗಳನ್ನು ತಿಳಿಸಿ ಅವರ ಚಟುವಟಿಕೆಯನ್ನು ಹೆಚ್ಚಿಸಬೇಕು. ಅವರು ವ್ಯವಸಾಯದ ಕೆಲಸದಲ್ಲಿಯಾಗಲಿ ಕೈಗಾರಿಕೆ ಕೆಲಸದಲ್ಲಿಯಾಗಲಿ ಹಳ್ಳಿಯ ಶುಚಿ, ಏಳಿಗೆ, ಆರೋಗ್ಯಪಾಲನೆ, ಸಹಕಾರ ಮುಂತಾದ ಸಾಮಾಜಿಕ ಕೆಲಸಗಳಲ್ಲಿಯಾಗಲಿ ಉತ್ಸಾಹವಹಿಸಿ ಸೌಹಾರ್ದದಿಂದಲೂ ಬುದ್ಧಿವಂತಿಕೆಯಿಂದಲೂ ಕೆಲಸಮಾಡುವಂತೆ ಆಗುವ ಸಾಮಾಜಿಕ ಶಿಸ್ತನ್ನು ಸೃಷ್ಟಿಸಲು ಶಿಕ್ಷಣವು ಸಹಕಾರಿಯಾಗಬೇಕು. ಅಂದರೆ ಸಮಾಜದ ಆವಶ್ಯಕತೆ ಮತ್ತು ಏಳಿಗೆಯ ದೃಷ್ಟಿಯಿಂದ ಮಕ್ಕಳ ಆಸಕ್ತಿ, ಶ್ರದ್ಧೆ, ಉತ್ಸಾಹ ಇವುಗಳಿಗೆ ಅನುಗುಣವಾಗಿ, ಅವರ ಸುತ್ತಮುತ್ತಲಿನ ಸನ್ನಿವೇಶಗಳಿಗೂ ಜೀವನಕ್ಕೂ ಹೊಂದಿಕೊಂಡಿರುವಂತೆ, ಪಠ್ಯವಿಷಯಗಳನ್ನೂ ಬೋಧನಾಕ್ರಮಗಳನ್ನೂ ಮಾರ್ಪಾಡು ಮಾಡಬೇಕು.

ಹೀಗೆ ಮಾರ್ಪಾಡು ಮಾಡುವಾಗ ವರ್ಧಾಶಿಕ್ಷಣ ಸಮಿತಿಯವರು ಸೂಚಿಸಿರುವ 'ಮೂಲಕಸಬು' ಕೇಂದ್ರವಾಗಿರುವ ವಿದ್ಯಾಭ್ಯಾಸ ಪದ್ಧತಿಯ ಸಾಧಕ ಬಾಧಕಗಳನ್ನು ಯೋಚಿಸುವುದು ಒಳ್ಳೆಯದು.

ಮಕ್ಕಳು ಸುತ್ತಮುತ್ತಲಿನ ಸನ್ನಿವೇಶಕ್ಕೆ ತಕ್ಕಹಾಗೆ ಯಾವುದಾದರೂ ಲಾಭತರುವ ಕಸಬಿಗೆ ಕೇಂದ್ರಸ್ಥಾನವನ್ನು ಕೊಟ್ಟು ಆ ಕಸಬನ್ನು ಮಕ್ಕಳಿಗೆ ಕಲಿಸುವುದರ ಮೂಲಕ ಅವರಿಗೆ ಎಲ್ಲಾ ವಿಷಯಗಳನ್ನೂ ಅಂದರೆ ಅವರ ಬುದ್ಧಿಶಕ್ತಿಯನ್ನೂ, ಹಸ್ತ ಕೌಶಲ್ಯವನ್ನೂ, ಚಟುವಟಿಕೆಯನ್ನೂ ಹೆಚ್ಚಿಸುವ ಹಾಗೆ ಗಣಿತ, ಚರಿತ್ರೆ, ಭೂವಿವರಣೆ, ಸಾಹಿತ್ಯ ವಿಜ್ಞಾನ, ಸಮಾಜಶಾಸ್ತ್ರ, ಧರ್ಮಶಾಸ್ತ್ರ ಇವುಗಳನ್ನು

ಹೇಳಿಕೊಡಬೇಕು,—ಎಂಬುದೇ ವರ್ಧಾ ಕ್ರಮದ ತಿರುಳು. ಪುಸ್ತಕವೇ ಪ್ರಧಾನ ವಾಗಿರುವ ಈಗಿನ ಶಾಲೆಗಳನ್ನು ಉತ್ತಮಗೊಳಿಸಿ ಕಸಬು ಪ್ರಧಾನವಾದ ಶಾಲೆ ಗಳಾಗಿ ಮಾರ್ಪಡಿಸಲು ಈ ಕ್ರಮ ಶ್ರೇಷ್ಠ ಮಾರ್ಗದರ್ಶಿಯಾಗಿದೆ. ವರ್ಧಾ ಶಿಕ್ಷಣ ಕ್ರಮದಲ್ಲಿರುವ ಮೂಲ ತತ್ವವನ್ನು ನಮ್ಮ ದೇಶದ ಮತ್ತು ಹೊರದೇಶಗಳ ವಿದ್ಯಾ ಶಾಸ್ತ್ರಜ್ಞರೆಲ್ಲರೂ ಒಪ್ಪುವರು. ಅಧಿಕಾರಿ ವರ್ಗದವರಿಂದ ಪ್ರಕಟವಾಗಿರುವ ಸಾರ್ಜೆಂಟ್ ವರದಿಯಲ್ಲಿಯೂ ಇದಕ್ಕೆ ಮುಖ್ಯ ಸ್ಥಾನ ದೊರೆತಿದೆ. ಕೆಲವರು ಇದನ್ನು ಅಥವಾ ಇದರಲ್ಲಿನ ಕೆಲವು ಭಾಗಗಳನ್ನು ಒಪ್ಪದೆ ಇರಬಹುದು. ಆದರೆ ಯಾವ ವಿದ್ಯಾಭ್ಯಾಸ ಪದ್ಧತಿಗೆ ತಾನೇ ಎಲ್ಲರ ಒಪ್ಪಿಗೆಯೂ ದೊರೆಯುತ್ತದೆ? ವರ್ಧಾ ಪದ್ಧತಿಯ ವಿವರಗಳ ಬಗ್ಗೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಒಟ್ಟಿನಲ್ಲಿ ಅದು ಉತ್ತಮ ವಿದ್ಯಾ ಸಾಧನಗಳಿಂದ ತುಂಬಿದೆ. ನಮ್ಮ ದೇಶದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಯೋಗ್ಯರೀತಿಯಲ್ಲಿ ರೂಪಾಂತರಗೊಳಿಸುವುದರಲ್ಲಿ ಇದರ ಪ್ರಭಾವ ಅತ್ಯಂತ ಮಹತ್ವಪೂರ್ಣವಾಗಿ ಇರಲೇ ಬೇಕಾಗುತ್ತದೆ.

ಶರೀರ ಶಿಕ್ಷಣ—ನಮ್ಮ ವಿದ್ಯಾಪದ್ಧತಿಯಲ್ಲಿ ಇತ್ತೀಚೆಗೆ ಅಲ್ಪಸ್ವಲ್ಪ ಪ್ರಾಮುಖ್ಯತೆಗೆ ಬರುತ್ತಿರುವ ಮತ್ತೊಂದು ಮುಖ್ಯ ವಿಷಯ ಮಕ್ಕಳ ದೇಹದ ಬೆಳವಣಿಗೆ. ಮಕ್ಕಳು ದೃಢಕಾಯರಾಗಿ, ಆರೋಗ್ಯವಂತರಾಗಿ ಸಂತೋಷಚಿತ್ತರಾಗಿ ರಲು ಬೇಕಾದ ಅವಕಾಶಗಳೂ, ಸಾಧನಗಳೂ, ಚಟುವಟಿಕೆಗಳೂ ಶಾಲೆಗಳಲ್ಲಿ ದೊರೆಯಬೇಕು. ನಿಜವಾದ ವಿದ್ಯಾಭ್ಯಾಸ ಮಕ್ಕಳ ಸರ್ವತೋಮುಖವಾದ ಬೆಳವಣಿ ಗೆಗೆ ಎಲ್ಲ ಅವಕಾಶಗಳನ್ನೂ ಕಲ್ಪಿಸಬೇಕು. ಇದೇನೂ ಹೊಸ ತತ್ವವಲ್ಲ. ಒಬ್ಬ ವ್ಯಕ್ತಿಯ ಜೀವನದಲ್ಲಿ ನಿಜವಾದ ಸೌಖ್ಯ ಅಥವಾ ಅಭಿವೃದ್ಧಿ ಎಂದರೆ ಆ ವ್ಯಕ್ತಿಯ ತನು, ಮನ, ಧನ ಇವುಗಳ ಅಭಿವೃದ್ಧಿ ಎಂಬ ಮಾತು ನಮ್ಮಲ್ಲಿ ಬಹುಕಾಲದಿಂದಲೂ ರೂಢಿಗೆ ಬಂದಿದೆ. ಅಲ್ಲದೆ ಮನಸ್ಸು ದೃಢವಾಗಬೇಕಾದರೆ ಒಡಲೂ ದೃಢವಾಗಬೇಕು ಎಂಬ ನುಡಿಯನ್ನು ಕೇಳುತ್ತಲೇ ಇದ್ದೇವೆ. ಆದರೂ ನಮ್ಮ ವಿದ್ಯಾ ಕ್ರಮದಲ್ಲಿ ಮಾತ್ರ ಮಕ್ಕಳ ದೇಹದ ಬೆಳವಣಿಗೆಗೆ ತಕ್ಕಷ್ಟು ಅವಕಾಶಗಳನ್ನು ಒದಗಿಸಿಲ್ಲ. ವಿದ್ಯಾಭ್ಯಾಸ ದಲ್ಲಿ ಮುಂದುವರಿದ ಇತರ ದೇಶಗಳಲ್ಲಿ ಈ ಅಂಶಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಮನೆ ಗಳಲ್ಲಿ ಮಕ್ಕಳಿಗೆ ತಕ್ಕ ಪೋಷಣೆ ದೊರೆಯುತ್ತಿದೆಯೆ? ಅವರ ಆಹಾರ ಹೇಗಿದೆ? ಅವರ ಆಟಕ್ಕೆ ಅನುಕೂಲಗಳಿವೆಯೆ? ದೇಹದ ಬೆಳವಣಿಗೆ ಸಮರ್ಪಕವಾಗಿದೆಯೆ? ಸರಿಯಾದ ವೈದ್ಯಸಹಾಯ ದೊರೆಯುತ್ತಿದೆಯೆ? ಶುಚಿಯಾದ ಅಭ್ಯಾಸಗಳನ್ನು ಕಲಿಯುತ್ತಿದ್ದಾರೆಯೆ? ಪಾಠಶಾಲೆಗಳು ಮಕ್ಕಳ ಆರೋಗ್ಯಕ್ಕೂ ದೇಹದಾರ್ಢ್ಯಕ್ಕೂ ಯಾವ ರೀತಿಯ ಅವಕಾಶಗಳನ್ನು ಒದಗಿಸಬೇಕು? ಈ ವಿಷಯಗಳನ್ನು ಪಾಶ್ಚಾತ್ಯರು

ಪುನಃ ಪುನಃ ಪರಿಶೀಲಿಸಿ ಅವಕ್ಕೆ ಹೆಚ್ಚು ಸೌಕರ್ಯಗಳನ್ನು ಒದಗಿಸಲು ಸುಧಾರಣಾ ಕ್ರಮಗಳನ್ನು ವಿಶೇಷ ರೀತಿಯಲ್ಲಿ ಕೈಕೊಳ್ಳುತ್ತಿದ್ದಾರೆ. ಹೀಗಿರುವಲ್ಲಿ ಮಕ್ಕಳ ದೈಹಿಕ ಬೆಳವಣಿಗೆಗೆ ಏನೇನೂ ಲಕ್ಷ್ಯಕೊಡದೆ ಇರುವ ನಮ್ಮ ದೇಶದಲ್ಲಿ ಇದಕ್ಕೆ ಜರೂರಾಗಿ ಗಮನಕೊಡಬೇಕಾದುದು ಅಗತ್ಯ.

ಸೆಕೆಂಡರಿ ವಿದ್ಯಾಭ್ಯಾಸ—ನಮ್ಮಲ್ಲಿ ಈಗ ಪ್ರಚಾರದಲ್ಲಿರುವ ಸೆಕೆಂಡರಿ ವಿದ್ಯಾಭ್ಯಾಸವನ್ನು ಖಂಡಿಸುವುದರಲ್ಲಿ ಸ್ವಲ್ಪ ಹೆಚ್ಚುಕಡಮೆ ಭಾರತೀಯರ ಮತ್ತು ಹೊರ ದೇಶದವರ ಅಭಿಪ್ರಾಯ ಒಂದೇ ಆಗಿದೆ. ಇದಕ್ಕೆ ಮೊದಲು ಕಾರಣ ಇಂಗ್ಲಿಷ್ ಭಾಷೆಗೆ ದೊರೆತಿರುವ ಅತಿಪ್ರಾಶಸ್ತ್ಯ; ಮತ್ತು ಅದೇ ಬೋಧನೆಯ ಭಾಷೆಯಾಗಿರುವುದು.

ಮಕ್ಕಳ ವ್ಯವಹಾರದಲ್ಲಿ ವಾಡಿಕೆಯಾಗಿ ಬಳಸುವ ಭಾಷೆಯನ್ನು ಬೋಧನೆಯ ಭಾಷೆಯಾಗಿ ಉಪಯೋಗಿಸುವುದು ಸಹಜ ಮತ್ತು ನ್ಯಾಯ. ಪರಭಾಷೆಯಾದ ಇಂಗ್ಲಿಷು ನಮ್ಮ ಶಾಲೆಗಳಲ್ಲಿ ಬೋಧನೆಯ ಭಾಷೆಯಾಗಿರುವುದು ಎಷ್ಟು ಹಾನಿಕರ ಎಂಬುದು ಎಲ್ಲರಿಗೂ ತಿಳಿದ ವಿಷಯ. ಇದರಿಂದ ಮಕ್ಕಳು ಕಲಿಯಬೇಕಾದ ವಿಷಯಗಳ ಪರಿಶೀಲನೆಗೆ ಪ್ರಾಮುಖ್ಯತೆ ಕೊಡದೆ ಆ ವಿಷಯಗಳನ್ನು ಹೇಗೆ ತಿಳಿಸಬಹುದು ಎಂಬ ಭಾಷೆಗೆ ಹೆಚ್ಚು ಗಮನಕೊಟ್ಟು ಎಲ್ಲ ವಿಷಯಗಳನ್ನೂ ಕಂಠಪಾಠ ಮಾಡುವ ಅಭ್ಯಾಸ ಸಾಧಾರಣವಾಗಿಬಿಟ್ಟಿದೆ. ಅವರು ವಿಷಯಗಳ ಪರಿಶೀಲನೆಯಲ್ಲಿ ಧಾರಾಳವಾಗಿಯೂ ಸಹಜವಾಗಿಯೂ ಧೈರ್ಯವಾಗಿಯೂ ಪ್ರಶ್ನೆಗಳನ್ನು ಕೇಳುವ, ಬರೆಯುವ ಅಥವಾ ಮಾತನಾಡುವ ಶಕ್ತಿಯನ್ನು ಪಡೆಯಲಿಲ್ಲ. ಜನಸಾಮಾನ್ಯರಲ್ಲಿ ಜ್ಞಾನವು ಹೊಗಲು ಇದರಿಂದ ಅಡ್ಡಿಯಾಗಿದೆ. ಜೊತೆಗೆ ಇದು ನಮ್ಮ ಜನಾಂಗದ ಆಲೋಚನಾಶಕ್ತಿಯನ್ನೂ ಸ್ವಂತರಚನಾಶಕ್ತಿಯನ್ನೂ ಊಹಾಶಕ್ತಿಯನ್ನೂ ಬುದ್ಧಿ

---

[1] ಸುಮಾರು ಒಂದುನೂರು ವರ್ಷಗಳಿಗಿಂತ ಹಿಂದೆ ಲಾರ್ಡ್ ಮೆಕಾಲೆ ಅವರು ನಾನಾ ಕಾರಣಗಳಿಂದ ಇಂಗ್ಲಿಷ್ ಭಾಷೆಯೇ ಬೋಧನೆಯ ಭಾಷೆಯಾಗಬೇಕೆಂದು ನಿರ್ಧರಿಸಿಬಿಟ್ಟರು. ಅಲ್ಲಿಂದೀಚೆಗೆ ವಿದ್ಯಾಭ್ಯಾಸದ ಗುರಿಯಲ್ಲಿಯೂ ಮನಶ್ಶಾಸ್ತ್ರದಲ್ಲಿಯೂ ದೇಶಭಾಷೆಗಳ ಬೆಳವಣಿಗೆಯಲ್ಲಿಯೂ ರಾಷ್ಟ್ರೀಯ ಜೀವನದಲ್ಲಿಯೂ ಬಹುಮಟ್ಟಿಗೆ ತ್ವರಿತವೂ ದೂರವ್ಯಾಪಿಯೂ ಆದ ಬದಲಾವಣೆ ಆಗಿವೆ. ಆದರೂ ಇಂಗ್ಲಿಷ್ ಭಾಷೆಗಿರುವ ಅತಿಪ್ರಾಶಸ್ತ್ಯವನ್ನು ತಪ್ಪಿಸಿ ತಾಯ್ನುಡಿಯನ್ನು ಬೋಧನೆಯ ಭಾಷೆಯಾಗಿ ಅನುಸರಿಸಲು ಸಾಧ್ಯವಾಗಿಲ್ಲ. (ಇಲ್ಲಿ ತಾಯ್ನುಡಿ ಎಂದರೆ ಮನೆಯಲ್ಲಿ ಮಾತನಾಡುವ ಭಾಷೆ ಎಂದರ್ಥವಲ್ಲ. ಮಕ್ಕಳು ತಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಪ್ರತಿದಿನವೂ ವ್ಯವಹಾರಕ್ಕೆ ವಿಶೇಷವಾಗಿ ಉಪಯೋಗಿಸುವ ಭಾಷೆ. ಆದುದರಿಂದ ಇದನ್ನು ತಾಯ್ನುಡಿ ಎನ್ನುವುದಕ್ಕೆ ಬದಲು ಪ್ರಾಂತ ಭಾಷೆ ಎನ್ನುವುದು ಮೇಲು.

ಶಕ್ತಿಯನ್ನೂ ಬಹುವಾಗಿ ಕುಗ್ಗಿಸಿದೆ. ಈ ವಿಷಯದಲ್ಲಿ ಆಬಟ್ ಮತ್ತು ವುಡ್ ಎಂಬ ಇಂಗ್ಲೆಂಡಿನ ಪ್ರಖ್ಯಾತ ವಿದ್ಯಾ ಶಾಸ್ತ್ರಜ್ಞರಿಬ್ಬರ ನಿಷ್ಪಕ್ಷಪಾತವಾದ ಅಭಿಪ್ರಾಯ ಹೀಗಿದೆ: "ಇಂಡಿಯಾದೇಶದ ವಿದ್ಯಾರ್ಥಿಗಳ ಪ್ರೌಢ ವಿದ್ಯಾಭ್ಯಾಸದಲ್ಲಿ ಇಂಗ್ಲಿಷ್ ಭಾಷೆ ಅಭ್ಯಾಸ ವಿಷಯವಾಗುವುದೊಂದೇ ಅಲ್ಲದೆ ಇತರ ವಿಷಯಗಳನ್ನು ಬೋಧಿಸುವಾಗಲೂ ಅದೇ ಬೋಧನೆಯ ಭಾಷೆಯೂ ಆಗುತ್ತದೆ. ಇದು ನಿಜವಾಗಿ ಒಂದು ದೊಡ್ಡ ಕೊರತೆ....... ಹದಿನಾರು ವಯಸ್ಸಿನ ಹುಡುಗರಲ್ಲಿ ಈ ಪದ್ಧತಿಯಿಂದ ಉಂಟಾಗುವ ಬುದ್ಧಿ ವೈಕಲ್ಯ[1]ವನ್ನೂ (Mental dislocation) ನಿರೋಧಗಳನ್ನೂ (Inhibitions) ಸರಿಯಾಗಿ ನಿರ್ಣಯಿಸಲು ಸಾಧ್ಯವಿಲ್ಲ. ಮನೆಯಲ್ಲಿಯೂ ಸಮಾಜದಲ್ಲಿಯೂ ಬಳಸದ ಬೇರೆ ಇನ್ನೊಂದು ಭಾಷೆಯಲ್ಲಿ ಅವರು ವಿದ್ಯಾಭ್ಯಾಸ ಹೊಂದುವುದೂ, ಯೋಚನಾಶಕ್ತಿಯನ್ನು ಕುದುರಿಸಿಕೊಳ್ಳುವುದೂ ತಮ್ಮ ಅನುಭವಗಳ ಬೆಲೆಯನ್ನು ಬರೆದಿಡುವುದೂ ಕಷ್ಟವಾಗಿ ಅವರ ಶಕ್ತಿಯೆಲ್ಲ ಕುಂಠಿತವಾಗಿದೆ. ಹೈ ಸ್ಕೂಲು ವಿದ್ಯಾಭ್ಯಾಸದ ತಮ್ಮ ಅನುಭವದಿಂದ ಇಂಗ್ಲಿಷನ್ನು ಬೋಧನೆಯ ಭಾಷೆಯಾಗಿ ಬಳಸುವುದು. ಆ ವಿದ್ಯಾಭ್ಯಾಸದ ಅಪ್ರಯೋಜಕತೆಗೆ ಮೂಲವಾಗಿದೆ ಎಂದು ಹೇಳದೆ ವಿಧಿಯಿಲ್ಲ. ಒಟ್ಟಿನಲ್ಲಿ ಹೈ ಸ್ಕೂಲಿನ ವಿದ್ಯಾರ್ಥಿಗಳು ಜಾಣರಾಗಿಯೂ ಪಠ್ಯವಿಷಯಗಳನ್ನು ಬೇಗ ಗ್ರಹಿಸಬಲ್ಲವರಾಗಿಯೂ ಇದ್ದರೂ ಮೇಲಿಂದ ಮೇಲೆ ಇಂಗ್ಲಿಷನ್ನೇ ಅವರು ಬಳಸಬೇಕಾಗಿರುವುದರಿಂದ ಅವರ ಸಹಜವಾದ ಶಕ್ತಿವಿಶೇಷಗಳು ಪ್ರಕಟವಾಗದೆ ಕುಗ್ಗಿಹೋಗುತ್ತವೆ."[2] ಈ ಮಾತುಗಳಿಗೆ ವ್ಯಾಖ್ಯಾನ ಬೇಕಾಗಿಲ್ಲ. ಸಮಾಜದಲ್ಲಿ ಮನೆಮನೆಯಲ್ಲಿ, ಜನಜನದ ನಡುವೆ ಎಷ್ಟು ಅಂತರಗಳು ಉಂಟಾಗಿ ಈ ತರದ ವಿದ್ಯೆ ಎಷ್ಟು ನಷ್ಟವುಂಟುಮಾಡುತ್ತಿದೆ ಎಂಬುದನ್ನು ನಮ್ಮ ಮುಂದಾಳುಗಳೂ ವಿದ್ಯಾಧಿಕಾರಿಗಳೂ ಅರಿತಹೊರತು ಮುಂದಿನ ಸಫಲಮಾರ್ಗಗಳಲ್ಲಿ ನಡೆಯುವುದು ಅಶಕ್ಯವಾದೀತು.

ನಮ್ಮ ವಿದ್ಯಾಭ್ಯಾಸಕ್ರಮದಲ್ಲಿ ಇಂಗ್ಲಿಷು ಬೋಧನೆಯ ಭಾಷೆಯಾಗಿರುವ ಈ ಕೊರತೆಯನ್ನು ಸುಮಾರು ಕಾಲುಶತಮಾನಕ್ಕಿಂತ ಹಿಂದೆಯೇ ಕಲ್ಕತ್ತ ವಿಶ್ವವಿದ್ಯಾನಿಲಯದ ಸಮಿತಿಯವರು (Calcutta University Commission, 1918) ತಮ್ಮ

---

[1] ಇಲ್ಲಿ ಬುದ್ಧಿ ವೈಕಲ್ಯವೆಂದರೆ ವಿಷಯಗಳನ್ನು ಧೈರ್ಯವಾಗಿ ಧಾರಾಳವಾಗಿ ಪರಿಶೀಲಿಸಿ, ಆಲೋಚಿಸಿ ಪ್ರಶ್ನೆಗಳನ್ನು ಕೇಳುವ ಶಕ್ತಿಯನ್ನು ಕಳೆದುಕೊಳ್ಳುವುದು ಎಂದರ್ಥ. ಇದು ಹೈಸ್ಕೂಲು ತರಗತಿಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಬೋಧಿಸುತ್ತಿರುವ ಉಪಾಧ್ಯಾಯರಿಗೆಲ್ಲ ಪೂರ್ಣ ಅನುಭವದಲ್ಲಿರುವ ಸಂಗತಿ.

[2] Page 18, *Report on Vocational Education in India*, by A. Abbott and S. H. Wood, 1937.

ವರದಿಯಲ್ಲಿ ಎತ್ತಿ ತೋರಿಸಿದ್ದರು. ಅಂದಿನಿಂದ ಇದುವರೆಗೆ ಸೆಕೆಂಡರಿ ವಿದ್ಯಾ ಸಮಸ್ಯೆಗಳನ್ನು ವಿಮರ್ಶಿಸಲು ನಿಯಮಿತವಾದ ಸಮಿತಿಗಳೆಲ್ಲವೂ ಒಮ್ಮತದಿಂದ ಪ್ರಾಂತಭಾಷೆಯನ್ನೇ ಬೋಧನೆಯ ಭಾಷೆಯಾಗಿ ಬೇಗನೆ ಅನುಸರಿಸುವ ಆವಶ್ಯಕತೆಯನ್ನು ಒತ್ತಿ ಒತ್ತಿ ಹೇಳಿವೆ. ಇದರ ಫಲವಾಗಿ ಇಂಡಿಯಾ ದೇಶದ ಅನೇಕ ಪ್ರಾಂತಗಳಲ್ಲಿ ಮಾಧ್ಯಮಿಕ ಶಾಲೆಗಳಲ್ಲಿಯೂ ಹೈಸ್ಕೂಲುಗಳಲ್ಲಿಯೂ ಆಯಾ ಪ್ರಾಂತ ಭಾಷೆಯನ್ನೇ ಬೋಧನೆಯ ಭಾಷೆಯಾಗಿ ಉಪಯೋಗಿಸುವ ಪ್ರಯತ್ನಗಳು ಈಗೀಗ ನಡೆಯುತ್ತಲಿವೆ. ಮೈಸೂರಲ್ಲಿಯೂ ಹೈಸ್ಕೂಲುಗಳಲ್ಲಿ ಕನ್ನಡವನ್ನು ಬೋಧನೆಯ ಭಾಷೆಯಾಗಿ ಉಪಯೋಗಿಸುತ್ತಿದ್ದಾರೆ. ಆದರೆ ಇದಕ್ಕೆ ದೊರೆತಿರುವ ಪುರಸ್ಕಾರವೂ ಉತ್ತೇಜನವೂ ಸಾಲದು. ಈಚೆಗೆ ಈ ಪ್ರಯೋಗ ಸಫಲವಾಗಿದೆಯೆ ಎಂಬುದನ್ನು ಕಂಡುಹಿಡಿಯಲು ಕೆಲವು ಅಂಕಿ ಅಂಶಗಳು ಸಂಗ್ರಹವಾಗಿವೆ. ಕೆಲವು ಫಲಿತಾಂಶಗಳು ಉತ್ತೇಜನಕರವಾಗಿವೆ ಮತ್ತೆ ಕೆಲವು ಅಷ್ಟು ಆಶಾದಾಯಕವಾಗಿಲ್ಲ. ಆದರೆ ಈ ಅಂಕಿ ಅಂಶಗಳಿಂದಲೇ ಕನ್ನಡ ಮಾಧ್ಯಮದ ಆವಶ್ಯಕತೆಯನ್ನಾಗಲಿ, ಫಲವನ್ನಾಗಲಿ ನಿರ್ಧರಿಸುವುದು ಸಾಧುವಲ್ಲ. ಈಗ ದೊರೆತಿರುವ ಅಂಕಿ ಅಂಶಗಳು ಸಂಪೂರ್ಣ ವೈಜ್ಞಾನಿಕ ದೃಷ್ಟಿಯಿಂದ ಸಂಗ್ರಹವಾದುವಲ್ಲ. ಅಲ್ಲದೆ ಕನ್ನಡ ಮಾಧ್ಯಮದ ಪ್ರಯೋಗ ಇತ್ತೀಚಿನದು. ಈ ಮಾಧ್ಯಮದ ವ್ಯಾಪನೆ ಇನ್ನೂ ಹೆಚ್ಚಿಲ್ಲ. ಪಠ್ಯ ಪುಸ್ತಕಗಳು ಅಷ್ಟಾಗಿ ಇಲ್ಲ. ಇರುವ ಒಂದೆರಡು ಪುಸ್ತಕಗಳು ಹೊಸವು. ಪೋಷಕರಿಗೂ ವಿದ್ಯಾರ್ಥಿಗಳಿಗೂ ಕೆಲವು ವಿದ್ಯಾಧಿಕಾರಿಗಳಿಗೂ, ಕೆಲವು ಉಪಾಧ್ಯಾಯರಿಗೂ ಕೆಲವು ವೇಳೆ ಶಿಕ್ಷಣತತ್ವಗಳಿಗೆ ದೂರವಾದ ಇತರ ಲೌಕಿಕ ಕಾರಣಗಳಿಂದ ಕೂಡ—ಕನ್ನಡ ಮಾಧ್ಯಮದಲ್ಲಿ ಪೂರ್ತಿ ನಂಬಿಕೆಯಿಲ್ಲ. ಆದುದರಿಂದ ಅಂಕಿ ಅಂಶಗಳನ್ನು ಹೋಲಿಸಿ ಫಲಾಫಲಗಳನ್ನು ನಿರ್ಧರಿಸಲು ಇನ್ನೂ ಕಾಲಾವಕಾಶಬೇಕು. ಇಷ್ಟು ಮಹತ್ತರವಾದ ಮತ್ತು ಅತ್ಯಗತ್ಯವಾದ ಸಮಸ್ಯೆಯನ್ನು ಈ ಅಲ್ಪ ಅಂಕಿ ಅಂಶಗಳಿಂದ, ಅದರಲ್ಲಿಯೂ ಸರಿಯಾದ ಪ್ರಯೋಗಗಳಿಲ್ಲದೆಯೇ ಸಂಗ್ರಹವಾದ ಈ ಅಂಕಿ ಅಂಶಗಳಿಂದ ಬಿಡಿಸಲು ಪ್ರಯತ್ನಿಸುವುದು ಸರಿಯಾಗದು. ಅಲ್ಲದೆ ನಾವು ಸಂಗ್ರಹಿಸಬಹುದಾದ ಅಂಕಿ ಅಂಶಗಳಿಗೆ ಸಿಲುಕದಿರುವ ಪ್ರಯೋಜನಗಳು ಅನೇಕವಾಗಿವೆ. ಇವು ನಮ್ಮ ಈಗಿನ ಅಳತೆಯ ಶಕ್ತಿಗೆ ಮೀರಿದ ವಿಷಯಗಳು. ಒಟ್ಟಿನಲ್ಲಿ ಕನ್ನಡ ಮಾಧ್ಯಮವನ್ನು ನಿಜವಾದ ಶ್ರದ್ಧೆಯಿಂದಲೂ, ನಂಬಿಕೆಯಿಂದಲೂ ಎಲ್ಲ ಶಾಲೆಗಳಲ್ಲಿಯೂ ತ್ರಿಕರಣ ಪೂರ್ವಕವಾಗಿ ಅನುಸರಿಸಬೇಕು. ಅದರೊಂದಿಗೆ ಕನ್ನಡಭಾಷೆಗೆ ಸರ್ಕಾರದ ಮತ್ತು ಸಮಾಜದ ವ್ಯವಹಾರಗಳಲ್ಲಿ ತಕ್ಕ ಪ್ರಾಶಸ್ತ್ಯ ದೊರಕಬೇಕು. ಇಷ್ಟಾದರೆ ಕನ್ನಡ ಮಾಧ್ಯಮದಿಂದ ಪೂರ್ಣಫಲ ದೊರೆಯುತ್ತದೆ.

ನಮ್ಮ ಸೆಕೆಂಡರಿ ವಿದ್ಯಾಭ್ಯಾಸದ ಎರಡನೆಯ ದೊಡ್ಡ ಕೊರತೆಯನ್ನು ಹಾರ್ಟ್ಯಾಗ್ ಕಮಿಟಿಯ ವರದಿಯಲ್ಲಿಯೂ (೧೯೨೯) ಆಬಟ್ ಮತ್ತು ವುಡ್ ವರದಿಯಲ್ಲಿಯೂ (೧೯೩೭) ಮತ್ತು ಸಾರ್ಜೆಂಟ್ ವರದಿಯಲ್ಲಿಯೂ (೧೯೪೪) ಒತ್ತಿ ಹೇಳಿದೆ. ನಮ್ಮ ಸೆಕೆಂಡರಿ ಶಾಲೆಗಳಲ್ಲಿ ಪುಸ್ತಕ ವಿದ್ಯೆಗೇ ಪ್ರಾಶಸ್ತ್ಯ ದೊರೆತು ಬಾಲಕ ಬಾಲಕಿಯರನ್ನು ವಿಶ್ವವಿದ್ಯಾಲಯಕ್ಕೆ ತರಪೇತು ಮಾಡುವುದೇ ಅವುಗಳ ಮುಖ್ಯ ಉದ್ದೇಶವಾಗಿದೆ. ನಮ್ಮ ಸಾಮಾಜಿಕ ಆರ್ಥಿಕ ಮತ್ತು ಕೈಗಾರಿಕಾ ಪರಿಸ್ಥಿತಿಗಳ ಅಭಿವೃದ್ಧಿಗೆ ಬೇಕಾದ ವಿದ್ಯಾಭ್ಯಾಸವಾಗಲಿ, ವಿವಿಧ ವಿದ್ಯಾರ್ಥಿಗಳ ಆಸಕ್ತಿ, ಅಭಿರುಚಿ, ಕ್ರಿಯಾಶಕ್ತಿ ಅಥವಾ ಬುದ್ಧಿಶಕ್ತಿಗಳಿಗೆ ಅನುಗುಣವಾದ ವಿದ್ಯಾಭ್ಯಾಸವಾಗಲಿ ಈಗಿನ ಸೆಕೆಂಡರಿ ಶಾಲೆಗಳಲ್ಲಿ ದೊರೆಯುತ್ತಿಲ್ಲ. ಹೈ ಸ್ಕೂಲಿಗೆ ಸೇರಿದ ವಿದ್ಯಾರ್ಥಿಯ ಅಭಿರುಚಿ, ಆಸಕ್ತಿ ಆವಶ್ಯಕತೆಗಳೇನೇ ಆಗಿರಲಿ ಅವನು ಒಂದೇ ಬಗೆಯ ಪಠ್ಯಪುಸ್ತಕಗಳನ್ನು ಕಂಠಪಾಠ ಮಾಡಿತೀರಬೇಕು. ರೋಗ ಯಾವುದೇ ಆಗಲಿ ಮೂಲಿಕೆ ಒಂದೇ ಪ್ರಯೋಗಿಸತಕ್ಕದ್ದು ಎಂಬುದು ವೈದ್ಯಕ್ಕೆ ಮಾತ್ರವೇ ಸಲ್ಲುವ ಟೀಕೆಯ ಸಂಗತಿಯಲ್ಲ. ಇಂಥ ಏಕಮೂಲಿಕಾ ಪ್ರಯೋಗದಂತೆ ಎಲ್ಲರಿಗೂ ಒಂದೇ ತರಹವಾದ ಪಾಠಪ್ರವಚನಗಳನ್ನು ಒಂದೇ ರೀತಿ ಮಾಡುವುದು ಸಾಧುವೆ ?

ನಮ್ಮ ದೇಶದ ವಿದ್ಯಾಭ್ಯಾಸದ ಬೆಳವಣಿಗೆಯ ಚರಿತ್ರೆಯೇ ನಮ್ಮ ಶಾಲೆಗಳ ಈಗಿನ ಪರಿಸ್ಥಿತಿಗೆ ಮುಖ್ಯಕಾರಣ. 'ಇಂಗ್ಲಿಷ್ ಕಲಿತರೆ ಸರ್ಕಾರಿ ಕೆಲಸಗಳಿಗೆ ಸೇರುವ ಅವಕಾಶ ದೊರೆಯುತ್ತೆ. ಆದ್ದರಿಂದ ಇಂಗ್ಲಿಷ್ ಕಲಿಯಬೇಕು; ಡಿಗ್ರಿಗಳನ್ನು ಪಡೆಯಲೇಬೇಕು' ಎಂಬ ಭಾವನೆ ನಮ್ಮಲ್ಲಿ ಬೇರೂರಿದೆ. ನಮ್ಮ ಜನರು ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಉತ್ಸಾಹದಿಂದ ಮುಂದಕ್ಕೆ ಬಂದುದು ಇದಕ್ಕಾಗಿಯೇ. ಆ ಕೆಲಸ ದೊರೆಯುವುದು ಕಷ್ಟವಾಗಿರುವ ಇಂದಿಗೂ ಅದೇ ಧ್ಯೇಯವೇ ಸ್ಥಿರವಾಗಿ ನಿಂತಿರುವುದು ಸೋಜಿಗ. ಹೈ ಸ್ಕೂಲಿಗೆ ಸೇರುವ ಪ್ರತಿ ವಿದ್ಯಾರ್ಥಿಯ ಗುರಿಯೂ ತಾನು ವಿಶ್ವವಿದ್ಯಾಲಯವನ್ನು ಸೇರಿ ಪದವೀಧರನಾಗಬೇಕು ಎಂಬುದೇ. ಆದರೆ ಇದು ಸಮಾಜದ ಏಳಿಗೆಗಾಗಲಿ, ವ್ಯಕ್ತಿಯ ಏಳಿಗೆಗಾಗಲಿ ಹಿತಕಾರಿಯಲ್ಲ. ಸೆಕೆಂಡರಿ ವಿದ್ಯಾಭ್ಯಾಸದ ಸಮಸ್ಯೆಯನ್ನು ಪಾಶ್ಚಾತ್ಯ ದೇಶಗಳ ವಿದ್ಯಾಶಾಸ್ತ್ರಜ್ಞರು ವಿವರವಾಗಿ ಪರಿಶೀಲಿಸಿದ್ದಾರೆ. ೧೯ನೆಯ ಶತಮಾನದ ಕೊನೆಯ ವರೆಗೂ ಆ ದೇಶಗಳಲ್ಲಿಯೂ ಸೆಕೆಂಡರಿ ವಿದ್ಯಾಭ್ಯಾಸವೆಂದರೆ ಪುಸ್ತಕ ವಿದ್ಯಾಭ್ಯಾಸ, ವಿಶ್ವವಿದ್ಯಾಲಯಕ್ಕೆ ತರಪೇತುಮಾಡುವ ವಿದ್ಯಾಭ್ಯಾಸ ಎಂಬ ಅಭಿಪ್ರಾಯವಿತ್ತು. ಇತ್ತೀಚಿನ ಮನಶ್ಶಾಸ್ತ್ರದ ಮತ್ತು ವಿದ್ಯಾಶಾಸ್ತ್ರದ ಸಂಶೋಧನೆಗಳಿಂದ ಈ ಅಭಿಪ್ರಾಯ ಬದಲಾವಣೆ

ಹೊಂದಲು ಬೇಕಾದ ವಿಷಯಗಳು ಹೊರಬಿದ್ದಿವೆ.[1] ಮನಸ್ಸು ಪರಿಪಕ್ವವಾಗಿ ಸಂಸ್ಕಾರಗೊಳ್ಳಬೇಕಾದರೆ ಪುಸ್ತಕ ಪ್ರಧಾನವಾದ ಪಾಠಗಳಿಂದಲೇ ಎಂಬ ಹಿಂದಿನ ಅಭಿಪ್ರಾಯ ಈಗ ಮಾಯವಾಗುತ್ತಿದೆ. ತತ್ವಶಾಸ್ತ್ರ, ವಿಜ್ಞಾನ, ಸಾಹಿತ್ಯ ಮುಂತಾದ ಪಾಠಪ್ರವಚನಗಳಿಂದ ಬುದ್ಧಿ ಎಷ್ಟು ಪಕ್ವವಾಗುವುದೋ, ಚುರುಕಾಗುವುದೋ, ಕೈಕೆಲಸದಿಂದಲೂ ವೃತ್ತಿಶಿಕ್ಷಣದಿಂದಲೂ ಅಷ್ಟೇ ಪಕ್ವವಾಗಬಲ್ಲದೆಂಬುದು ಮನಶ್ಶಾಸ್ತ್ರಜ್ಞರ ಅಭಿಪ್ರಾಯ. ಬುದ್ಧಿ ಸಂಸ್ಕೃತಿ ಹೊಂದವುದು ಅಭ್ಯಾಸಮಾಡುವ ಪಠ್ಯಪುಸ್ತಕಗಳಲ್ಲಾಗಲಿ ವಿಷಯಗಳಲ್ಲಾಗಲಿ ಅಡಗಿಲ್ಲ. ಅಭ್ಯಾಸಮಾಡುವ ರೀತಿ ಅಥವಾ ಕ್ರಮದಲ್ಲಿದೆ.[1] ಆದುದರಿಂದ ಪುಸ್ತಕಗಳನ್ನು ಓದಿ ಪ್ರೌಢ ವಿದ್ಯಾಭ್ಯಾಸ ಹೊಂದುವವರು ಕೈಗಾರಿಕೆ, ವಾಣಿಜ್ಯ ಮತ್ತು ವ್ಯವಸಾಯ ಸಂಬಂಧವಾದ ಕಸಬುಗಳ ಶಿಕ್ಷಣಹೊಂದುವವರಿಗಿಂತಲೂ ಯಾವ ವಿಧದಲ್ಲಿಯೂ ಶ್ರೇಷ್ಠರಲ್ಲ. ಒಬ್ಬ ವ್ಯಕ್ತಿಯ ಸ್ವಾಭಾವಿಕ ಶಕ್ತಿಗಳು ಪುಸ್ತಕ ಪ್ರಧಾನವಾದ ವಿದ್ಯೆಯಲ್ಲಿ ಅಭಿವೃದ್ಧಿ ಹೊಂದಲು ಸಹಾಯಕವಾಗಬಹುದು.[2] ಮತ್ತೊಬ್ಬನ ಶಕ್ತಿವಿಶೇಷಗಳು ಕೈಕೆಲಸ ಪ್ರಧಾನವಾದ ವಿಷಯಗಳಲ್ಲಿ ಅಭಿವೃದ್ಧಿ ಹೊಂದಲು ಸಹಾಯಕವಾಗಬಹುದು.[3] ಇಬ್ಬರೂ ಅವರವರ ಸಹಜವಾದ ಅಭಿರುಚಿ, ಆಸಕ್ತಿ, ಬುದ್ಧಿಶಕ್ತಿ ಅಥವಾ ಕ್ರಿಯಾಶಕ್ತಿಗಳಿಗೆಅನುಗುಣವಾದ ಶಿಕ್ಷಣ ಹೊಂದಿದರೆ ಮಾತ್ರ ಸಮಾಜದಏಳಿಗೆಯೂ ದೇಶದ ಏಳಿಗೆಯೂ ಸಾಧ್ಯ. ಆದುದರಿಂದ ಎಲ್ಲ ವಿದ್ಯಾರ್ಥಿಗಳನ್ನೂ ಒಂದೇ ಚೌಕಟ್ಟಿಗೆ ಒಳಪಡಿಸಿ ಅವರಿಗೆಲ್ಲಾ ಒಂದೇ ರೀತಿಯ ವಿದ್ಯಾಭ್ಯಾಸ ಕೊಡುವುದು ಸರ್ವಥಾ ಹಾನಿಕರ. ಈ ದೃಷ್ಟಿಯಿಂದ ನೋಡಿದರೆ ನಮ್ಮ ಹೈಸ್ಕೂಲುಗಳಲ್ಲಿ ಈಗ ದೊರೆಯುವ ಶಿಕ್ಷಣದ ಜೊತೆಗೆ ವೃತ್ತಿಶಿಕ್ಷಣ ಎಂದರೆ ಮುಂದೆ ಯಾವುದಾದರೂ ಸರಿಯಾದ ಕಸಬನ್ನು ಅನುಸರಿಸಲು ಸಹಾಯವಾಗುವ ಶಿಕ್ಷಣಕ್ಕೂ ಅವಕಾಶವಿರಬೇಕು. ಈಗಾಗಲೇ ಕೆಲವೆಡೆಗಳಲ್ಲಿ ಈ ಬಗೆಯ ಅವಕಾಶಗಳಿವೆ. ಆದರೆ ಅವು ಅಷ್ಟು ಫಲಕಾರಿಯಾಗಿ ಯಶಸ್ವಿಯಾಗಿಲ್ಲ; ವಿದ್ಯಾರ್ಥಿಗಳನ್ನು ಹೆಚ್ಚಾಗಿ ಆಕರ್ಷಿಸುತ್ತಿಲ್ಲ. ಏಕೆಂದರೆ ವೃತ್ತಿಶಿಕ್ಷಣವನ್ನು ಐಚ್ಛಿಕ ವಿಷಯವಾಗಿ ಆರಿಸಿಕೊಂಡ ವಿದ್ಯಾರ್ಥಿಗಳಿಗೆ

---

[1] ಈ ವಿಷಯಗಳು ಇಂಗ್ಲೆಂಡಿನ ಬೋರ್ಡ್ ಆಫ್ ಎಡ್ಯುಕೇಷನ್ ಇಂದ ಪ್ರಕಟವಾದ *The Education of the Adolescent* ಎಂಬ ವರದಿಯಲ್ಲಿ (known as the Hadow Report) ಚರ್ಚಿಸಲ್ಪಟ್ಟಿವೆ.

[1] Pages 129-133 and Appendix V of the Report of the Consultative Committee, "Secondary Education, with special reference to Grammar schools and Technical high schools" popularly known as the 'Spens' Report (1939).

[2] Pages 13-17, *The Educational needs of Democracy*, by W. P. Alexander.

ಸರಿಯಾದ ಕೆಲಸಗಳು ಸುಲಭವಾಗಿ ಸಿಗುತ್ತಿಲ್ಲ. ಅಲ್ಲದೆ ಅವರನ್ನು ಮುಂದೆ ವಿಶ್ವವಿದ್ಯಾಲಯಕ್ಕೆ ಸೇರಿಸುವುದಿಲ್ಲ. ಹಿಂದೆಯೇ ತಿಳಿಸಿದಂತೆ ವಿಶ್ವವಿದ್ಯಾಲಯದ ಪದವೀಧರರಾಗಲು ಎಲ್ಲರಿಗೂ ಆಸೆ. ಇದೇಕೆ ನೆರವೇರಕೂಡದು? ಕೈಗಾರಿಕೆ, ವಾಣಿಜ್ಯ, ವ್ಯವಸಾಯ, ಕಲೆ ಇವುಗಳಿಗೆ ವಿಶ್ವವಿದ್ಯಾಲಯದಲ್ಲಿ ಸ್ಥಾನ ದೊರೆಯಕೂಡದೇಕೆ? ಹೈ ಸ್ಕೂಲಿನಲ್ಲಿ ಏರ್ಪಡಬಹುದಾದ ಬಹುಮುಖ ವಿದ್ಯಾಭ್ಯಾಸದಲ್ಲಿ ಯಾವುದನ್ನು ಆರಿಸಿಕೊಂಡರೂ ಪದವೀಧರರಾಗಲು ಅವಕಾಶವಿರಬೇಕು. ಅಲ್ಲದೆ ಹಾಗೆ ಹೈ ಸ್ಕೂಲು ಶಿಕ್ಷಣಹೊಂದಿದವರಿಗೂ, ಪದವೀಧರರಾದವರಿಗೂ ನಮ್ಮ ದೇಶದ ನಾನಾ ಕೈಗಾರಿಕಾ ಶಾಖೆಗಳಲ್ಲಿ ಸರಿಯಾದ ಕೆಲಸಗಳು ದೊರೆಯುವಂತಾಗಬೇಕು.

ಉಪಾಧ್ಯಾಯರ ಸ್ಥಾನಮಾನಗಳು.—ಯಾವ ವಿದ್ಯಾಕ್ರಮವೇ ಆಗಲಿ ಶಿಕ್ಷಣಪದ್ಧತಿಯಾಗಲಿ, ಯಾವ ವಿದ್ಯಾತತ್ವವೇ ಆಗಲಿ, ಫಲಿಸಬೇಕಾದರೆ ಉಪಾಧ್ಯಾಯರಿಂದಲೇ ಎಂಬುದನ್ನು ಎಲ್ಲರೂ ಒಪ್ಪಬೇಕು. ಅಂದರೆ ಉಪಾಧ್ಯಾಯರ ಶಿಕ್ಷಣವೂ ಅವರ ಮುತುವರ್ಜಿಯೂ ಉತ್ಸಾಹವೂ ಕರ್ತವ್ಯಜ್ಞಾನವೂ ದೇಶದ ವಿದ್ಯಾಭಿವೃದ್ಧಿಗೆ ಮುಖ್ಯಕಾರಣ. ಇತ್ತೀಚಿನ ವಿದ್ಯಾಭ್ಯಾಸದ ವರದಿಗಳಲ್ಲಿ ಈ ವಿಷಯಕ್ಕೆ ಸ್ಥಾನ ದೊರೆತಿರುವುದು ಸಂತೋಷದ ಸಂಗತಿ. ವರ್ಧಾ ಶಿಕ್ಷಣ ವರದಿಯಲ್ಲಿಯೂ ಸಾರ್ಜೆಂಟ್ ವರದಿಯಲ್ಲಿಯೂ ಈ ವಿಷಯದಲ್ಲಿ ಬಹು ಶ್ಲಾಘ್ಯವಾದ ಸಲಹೆಗಳಿವೆ. ಅವುಗಳಲ್ಲಿ ಸೂಚಿಸಿರುವಂತೆ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರಾಗತಕ್ಕವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಎರಡು ಅಥವಾ ಮೂರು ವರ್ಷಗಳ ಕಾಲ ಟ್ರೈನಿಂಗ್ ಕಾಲೇಜುಗಳಲ್ಲಿ ಶಿಕ್ಷಣ ಹೊಂದಿರಬೇಕು. ಇಷ್ಟಾದರೆ ನಮ್ಮ ವಿದ್ಯಾಭ್ಯಾಸದಲ್ಲಿನ ಮೂಲ ನ್ಯೂನತೆಯನ್ನು—ದೊಡ್ಡ ಕೊರತೆಯನ್ನು—ಬೇರುಸಹಿತ ಕಿತ್ತು ಹಾಕಿದಹಾಗೆ ಆಗುತ್ತದೆ. ಹೀಗೆ ಉತ್ತಮ ಶಿಕ್ಷಣ ಹೊಂದಿ ಉತ್ಸಾಹಶಾಲಿಗಳಾದ ಉಪಾಧ್ಯಾಯರು ದೊರೆಯಬೇಕಾದರೆ ಅವರಿಗೆ ಕೊಡುತ್ತಿರುವ ಸಂಬಳವನ್ನು ಹೆಚ್ಚಿಸಬೇಕು. 'ಉಪಾಧ್ಯಾಯ ವೃತ್ತಿಯು ಎಲ್ಲಾ ವೃತ್ತಿಗಳಿಗಿಂತಲೂ ಪವಿತ್ರವಾದುದು; ಧನಾರ್ಜನೆ ಈ ಕಸಬಿನ ಧ್ಯೇಯವಲ್ಲ; ಸ್ವಾರ್ಥತ್ಯಾಗವೂ ಉತ್ಸಾಹವೂ ಸೇವಾಭಾವನೆಯೂ ಉಪಾಧ್ಯಾಯರ ಜೀವನದ ತಿರುಳಾಗಿರಬೇಕು ಎಂದು ಹೇಳುವುದು ಸರ್ವಸಾಮಾನ್ಯವಾಗಿದೆ. ಇವೆಲ್ಲಾ ನಿಜ. ಆದರೆ ಯಾವ ಕೆಲಸವೇ ಆಗಲಿ ಸಮರ್ಪಕವಾಗಿ ನಡೆಯಬೇಕಾದರೆ ಮೊದಲು ಜೀವನಾಧಾರ ಬೇಕು. ಮನಸ್ಸು ಸ್ವಲ್ಪಮಟ್ಟಿಗಾದರೂ ಕ್ಲೇಶರಹಿತವಾಗಿರಬೇಕು. ಈಗ ನಮ್ಮ ದೇಶದಲ್ಲಿ ಉಪಾಧ್ಯಾಯರಿಗೆ ಕೊಡುತ್ತಿರುವ ಸಂಬಳ ನಮ್ಮ ಸಮಾಜಕ್ಕೆ ಗೌರವ ತರತಕ್ಕುದಲ್ಲ. ಸಾರ್ಜೆಂಟ್ ವರದಿಯಲ್ಲಿ ಸೂಚಿಸಿರುವಂತೆ ಉಪಾಧ್ಯಾಯ

ರಿಗೆ ತಿಂಗಳಿಗೆ ಅತಿ ಕಡಮೆಯೆಂದರೆ ೩೦ ರೂ. ಆದರೂ ಸಂಬಳ ಕೊಡಬೇಕು. ಐದು ಜನದ ಒಂದು ಸಂಸಾರಕ್ಕೆ ಒಂದು ದಿನದ ವೆಚ್ಚಕ್ಕೆ ಒಂದು ರೂಪಾಯಿ ದೊರೆಯದೆ ಹೋದರೆ ಬದುಕುವುದು ಹೇಗೆ? ಸರ್ಕಾರಗಳೂ, ಖಾಸಗಿ ವಿದ್ಯಾಶಾಲೆಗಳ ಒಡೆಯರೂ, ಮಹಾಜನ ವರ್ಗದವರೂ ಒಂದು ಸಲವಾದರೂ ಈ ವಿಷಯದಲ್ಲಿ ಮುತುವರ್ಜಿಯಿಂದ ಯೋಚನೆಮಾಡಬೇಕೆನ್ನಿಸುತ್ತದೆ. ಈ ವಿಷಯದಲ್ಲಿ ಮಿತವ್ಯಯ ನ್ಯಾಯವೂ ಅಲ್ಲ, ವಿವೇಕವೂ ಅಲ್ಲ. ಫಲಕಾರಿಯಂತೂ ಸುತರಾಂ ಅಲ್ಲ. ಉಪಾಧ್ಯಾಯರ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಲು ಸರ್ವಪ್ರಯತ್ನಗಳನ್ನು ಮಾಡಬೇಕಾದ್ದು ಪ್ರತಿಯೊಬ್ಬ ವಿದ್ಯಾಧಿಕಾರಿಯ ಮತ್ತು ಸಮಾಜದ ಮುಖಂಡರ ಕರ್ತವ್ಯ.

ಉಪಸಂಹಾರ—ನಮ್ಮ ವಿದ್ಯಾಭ್ಯಾಸಕ್ರಮದ ಬೆಳವಣಿಗೆಯ ವಿಷಯದಲ್ಲಿಯೂ ಅದರ ಕುಂದುಕೊರತೆಗಳ ವಿಷಯದಲ್ಲಿಯೂ ಅಗತ್ಯವಾದ ಸುಧಾರಣೆಗಳನ್ನು ಕುರಿತು ಅನೇಕ ಲೇಖನಗಳೂ ವರದಿಗಳೂ ಕಾನೂನುಗಳೂ ಪ್ರಕಟವಾಗಿವೆ. ಇವುಗಳಲ್ಲೆಲ್ಲ ಸಾರ್ಜೆಂಟ್ ವರದಿ ಈಚಿನದೂ ಪೂರ್ಣವಾದುದೂ ಅಮೋಘವಾದುದೂ ಆಗಿದೆ. ಇದು ನಮ್ಮ ದೇಶದಲ್ಲಿ ಎಲ್ಲ ಮಟ್ಟದ ವಿದ್ಯಾಭ್ಯಾಸದಲ್ಲಿಯೂ ಅಗತ್ಯವಾಗಿರುವ ಮಾರ್ಪಾಡುಗಳನ್ನು ಚರ್ಚಿಸಿ ಅದಕ್ಕಾಗಿ ನಲವತ್ತು ವರ್ಷದ ಒಂದು ಯೋಜನೆಯನ್ನು ತಯಾರಿಸಿ ಸರ್ಕಾರದ ಮುಂದಿಟ್ಟಿದೆ. ಅಧಿಕಾರಿವರ್ಗದ ವರದಿಗಳಲ್ಲಿ ರಾಷ್ಟ್ರೀಯ ವಿದ್ಯಾಭ್ಯಾಸಪದ್ಧತಿ' ಎಂಬ ಪದವನ್ನು ಮೊಟ್ಟಮೊದಲು ಉಪಯೋಗಿಸಿರುವುದು ಇದು. ನಮ್ಮ ದೇಶದ ವಿದ್ಯಾಪ್ರಚಾರ ವಿಷಯದಲ್ಲಿ ಈ ಯೋಜನೆಯು ವಿಶೇಷ ಪ್ರಭಾವವನ್ನು ಬೀರುವುದರಲ್ಲಿ ಸಂದೇಹವಿಲ್ಲ. ಈ ವರದಿಯಲ್ಲಿ ಸೂಚಿತವಾಗಿರುವ ಕ್ರಮ ನಮ್ಮ ದೇಶಕ್ಕೆ ಹೊಸದು. ಆದರೂ ಪಾಶ್ಚಾತ್ಯ ದೇಶಗಳಲ್ಲಿ ಇದು ಪೂರ್ತಿಯಾಗಿ ಕಾರ್ಯರೂಪಕ್ಕೆ ಬಂದಿದೆ. ಇಷ್ಟಾದರೂ, 'ಸಾರ್ಜೆಂಟ್ ಯೋಜನೆ ಬರಿಯ ಭ್ರಾಂತಿ, ಅದು ಕ್ರಾಂತಿಕಾರಕ ಯೋಜನೆ, ನಮ್ಮ ಬಡದೇಶ ಇದಕ್ಕೆ ಬೇಕಾಗಿರುವ ಇಷ್ಟೊಂದು ಹಣವನ್ನು ಹೇಗೆ ಒದಗಿಸೀತು?' ಎಂಬ ಅಭಿಪ್ರಾಯವೇ ಹೊರಬೀಳುತ್ತಿದೆ. ಇದು ಸಾಧುವಲ್ಲ. ಯುದ್ಧವೆಚ್ಚಕ್ಕೆ ೯೭೦ ಕೋಟಿ ರೂ. ಒದಗಿಸಬಲ್ಲ ದೇಶ ಜನತೆಯ ಜೀವನದ ಮೇಲ್ಪಾಡಿಗಾಗಿ ಅಗತ್ಯಬೇಕಾಗಿರುವ ಹಣವನ್ನು ಒದಗಿಸಲಾರದೆಂಬ ಮಾತನ್ನು ಒಪ್ಪಬಹುದಾದರೂ ಹೇಗೆ? ಜನತೆಯ ವಿದ್ಯಾಭ್ಯಾಸ ಮತ್ತು ಸಂಸ್ಕೃತಿಗಳಿಗೆ ಸಂಬಂಧವಾದ ಕೆಲಸಕಾರ್ಯಗಳು ಸಿವಿಲ್ ಸರ್ವಿಸ್ ಅಥವಾ ಯುದ್ಧಕಾರ್ಯಗಳಷ್ಟೇ ಬೆಲೆಯುಳ್ಳವು. ಇವಕ್ಕೂ ತಕ್ಕ ಗಮನಕೊಡಬೇಕು ಎಂಬ ಭಾವನೆಯಿಂದ ಮುಂದುವರಿದರೆ ಈ ದೇಶಾಭ್ಯುದಯಕಾರ್ಯಕ್ಕೆ ಬೇಕಾದ ಹಣವನ್ನು ಒದಗಿಸಬಹುದು. ನಾವು

ಒಂದು ಜನಾಂಗವಾಗಿ ಬಾಳಬೇಕೆಂದರೆ ಈ ಹಣವನ್ನು, ಎಷ್ಟುಕಷ್ಟಸಾಧ್ಯವಾದರೂ ಒದಗಿಸಲೇಬೇಕು. ಅಮೆರಿಕಾ ದೇಶದವರು ಫಿಲಿಪ್ಪೈನ್ಸ್ ದ್ವೀಪಗಳಲ್ಲಿ ೪೦ ವರ್ಷಗಳ ಕಾಲದಲ್ಲಿ ಅಕ್ಷರಸ್ಥರ ಸಂಖ್ಯೆಯನ್ನು ಶೇಕಡ ೨ ರಿಂದ ೫೫ಕ್ಕೆ ಹೆಚ್ಚಿಸಿದ್ದಾರೆ. ರಷ್ಯಾ ದೇಶದವರು ಕೇವಲ ಇಪ್ಪತ್ತು ವರ್ಷಗಳಲ್ಲಿ ಆ ದೇಶದ ಮೂಲೆಮೂಲೆಗಳಲ್ಲಿ ಚೆದರಿಹೋಗಿರುವ ಮತ್ತು ಬಹಳ ಹಿಂದುಳಿದ ಜನರ ಅನಕ್ಷರತೆಯನ್ನು ಶೇಕಡ ೭೮ ರಿಂದ ಶೇಕಡ ೮ ಕ್ಕೆ ಇಳಿಸಿದ್ದಾರೆ. ಇಷ್ಟೇ ಅಲ್ಲ; ಚೀನಾ, ತುರ್ಕಿ ಮುಂತಾದ ದೇಶಗಳು ಅನೇಕ ಕಷ್ಟಗಳನ್ನೆದುರಿಸಿ ವಿದ್ಯಾಪ್ರಚಾರಕ್ಕಾಗಿ ಪ್ರಚಂಡ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಪ್ರತಿವರ್ಷವೂ ಹೆಚ್ಚು ಹೆಚ್ಚಾಗಿ ವೆಚ್ಚಮಾಡುತ್ತಿವೆ. ಹೀಗಿರುವಲ್ಲಿ ನಮ್ಮ ದೇಶದಲ್ಲಿ ಇದು ಅಸಾಧ್ಯವೆಂಬ ಮಾತು ಸುಳ್ಳು. ಆ ದೇಶಗಳಲ್ಲಿ ನಡೆದಿರುವ ಮತ್ತು ನಡೆಯುತ್ತಿರುವ ಕೆಲಸ ನಮ್ಮ ಅಧಿಕಾರಿಗಳ ಮತ್ತು ಸಾರ್ವಜನಿಕರ ಮನಸ್ಸುಗಳನ್ನೂ ಎದೆಗಳನ್ನೂ ಹುರಿದುಂಬಿಸಲಾರದೆ? ಹಣ ಒದಗಿಸುವುದು ಸುಲಭವಲ್ಲವಾದರೂ ಬಾಯಿಮಾತಿನಿಂದ ತೃಪ್ತರಾಗದೆ ರಾಷ್ಟ್ರದ ಆದ್ಯಂತದಲ್ಲೂ ವಿದ್ಯಾಭ್ಯಾಸದ ಚಳವಳಿ ನಡಸಬೇಕು. ಅಧಿಕಾರಿಗಳು ಸಂಪೂರ್ಣ ಮನಸ್ಸಿನಿಂದಲೂ ದೂರದೃಷ್ಟಿಯಿಂದಲೂ ಪ್ರಯತ್ನಿಸಿದರೆ ಇದಕ್ಕೆ ಬೇಕಾದ ಹಣವನ್ನು ಒದಗಿಸುವುದು ಅಸಾಧ್ಯವಲ್ಲ.

ಸಿ. ರಂಗಾಚಾರ್.

---

೯. ಕೆಲವು ಅಂಕಿ ಅಂಶಗಳು

ಪ್ರಪಂಚದ ಜನಸಂಖ್ಯೆ

(ಅ)

ಭೂಖಂಡಗಳು		೧೯೩೩ (ಕೋಟಿ)
ಯೂರೋಪ್	....	೫೧.೯
ಅಮೇರಿಕಾ	....	೧೩.೭ ೧೨.೫
ಆಫ್ರಿಕಾ	....	೧೪.೫
ಏಷ್ಯಾ	....	೧೧೨.೧
ಓಷನಿಯ	....	೧.೦
	ಒಟ್ಟು	೨೦೫.೭

(ಆ)

ದೇಶಗಳು		೧೯೩೮ (ಕೋಟಿ)
ಬ್ರಿಟನ್	....	೪.೭೫
ಅಮೇರಿಕಾ U.S.A.	....	೧೩.೧
ಇಂಡಿಯಾ	....	೩೮.೨
ರಷ್ಯಾ U.S.S.R.	....	೧೮.೫
ಚೀನಾ	....	೪೫.೦

(ಇ) ವಾರ್ಷಿಕ ವರಮಾನ

	೧೯೩೯ (ಕೋಟಿ)	೧೯೪೫
ಬ್ರಿಟನ್ £	೪೬೦.೪	೮೧೭.೨.
ಅಮೇರಿಕಾ U.S.A. $	೭೪೧೦	೧೫೭೦.
ಇಂಡಿಯಾ ರೂ.	೨೫೦೦	೩೦೦೦.
ತಲಾ ರೂ.	೬೫ (೧೯೩೧)	೬೯ (೧೯೪೩)

(ಈ) ಉತ್ಪತ್ತಿ ಸೂಚಿಕೆ

೧೯೩೯ಕ್ಕಿಂತ ೧೯೪೫ರಲ್ಲಿ ಎಷ್ಟು ಹೆಚ್ಚು		
ಬ್ರಿಟನ್	....	+ ೫೦ %
ಕೆನಡಾ	....	+ ೧೬೦ %
ಅಮೇರಿಕಾ U.S.A.	....	+ ೧೨೦ %
ಇಂಡಿಯಾ	....	+ ೧೫ %

ಸಂಗ್ರಹಿಸಿದವರು : ಕೆ. ರಾಮಸ್ವಾಮಿ.

೧. ಮುತ್ತು ಹವಳ

ಶ್ರೀ ಪಾರ್ಥಿವ ಪುರುಷನಿಗೆ

ಓಂ ! ಹಾಲು ಹಳ್ಳ ಹರಿಯಲಿ,
    ಬೆಣ್ಣೆ ಬೆಟ್ಟವಾಗಲಿ !
    ಜೇನುಮಳೆಯು ಸುರಿಯಲಿ,
    ತೊಟ್ಟಿಲೊಲಿದು ತೂಗಲಿ !

ಓಂ ! ಪೈರು ಪಚ್ಚೆ ಬೆಳೆಯಲಿ,
    ತೆನೆಯ ಚಿನ್ನ ಹೊಳೆಯಲಿ !
    ಹಕ್ಕಿ ಹೊಟ್ಟೆ ತಣಿಯಲಿ,
    ಮಿಗವು ಸೊಗಸಿ ಕುಣಿಯಲಿ !

ಓಂ ! ಮುಗಿದು ಸಮರ ನರಬಲಿ
    ಸರರು ನರರ ನಂಬಲಿ !
    ಸ್ವಾಮಿಯಮೃತ ಕೃಪೆಯಲಿ
    ಶಾಂತಿ ಜಗವ ತುಂಬಲಿ !

ಓಂ ! ತರಣಿಯಾಗೆ ತಾರಣಂ
    ದಡವ ಸೇರಲೀ ರಣಂ !
    ಸಾರ್ಥಮಾಗೆ ಪಾರ್ಥಿವಂ
    ಪೃಥ್ವಿಗಿಳಿಯಲಾ ದಿವಂ !
ಓಂ ! ಶಾಂತಿಃ ಶಾಂತಿಃ ಶಾಂತಿಃ.

ಕುವೆಂಪು.

ನಿನ್ನ ಪದಕಮಲದಲಿ

ನಿನ್ನ ಪದಕಮಲದಲಿ ಮನೆ ಮಾಡಿರುವ ನನಗೆ
    ಆ ಸ್ಥಾನ ಈ ಸ್ಥಾನ ಎಲ್ಲವಾಸ್ಥಾನ !
ಅಲ್ಲಿಲ್ಲಿ ಎನಲೇನು ? ನೀನೆ ಅಡಿಯಿಡುವಲ್ಲಿ
    ದಿವ್ಯ ಪದವಿಗಳಲ್ತೆ ಮಾನಾವಮಾನ ?

ಬೆಟ್ಟಗಳನೇರುವೆಯೊ ? ಕಣಿವೆಗಳನಿಳಿಯುವೆಯೊ ?
ಕೆಸರುಸುಬುಗಳೊಳಾಡಿ ವಿಹರಿಪೆಯೊ ನೀನು ?
ಇಲ್ಲಿ ಸಂಚರಿಸಲ್ಲಿ ಚರಿಸದಿರೆನಲು ನನಗೆ
ನಿನ್ನ ಲೀಲೆಗೆ ಗೆರೆಯನೆಳೆವ ಹಕ್ಕೇನು ?

ಎಲ್ಲಿ ನೀ ಪದವಿಡುವೆ ಅಲ್ಲೆ ಉತ್ತಮ ಪದವಿ ;
ನಿನ್ನ ಪದವಲ್ಲದಾ ಪದವಿಯೂ ಹೀನ.
ನಿನ್ನಡಿಯ ಪುಡಿಯ ಬಡತನವೆ ಕಡವರ ಕಣಾ :
ನಿನ್ನಡಿಗೆ ದೂರವಿರೆ ಧನಿಕನೂ ದೀನ !

ಕುವೆಂಪು.

ಈ ಮಹಾ ಯುದ್ಧದ ನಿಜವೀರರು

ಜಗದಗಲ ಧಗಧಗಿಸುವೀ ಸಮರದಲ್ಲಿ
ಲಕ್ಷಶಃ ಸಾಯೆ, ಲಕ್ಷಾಂತರಂ ಸೀಯೆ,
ಹಸಿವೆ ಬೇನೆಯಿನಿನ್ನೆನಿತೊ ಲಕ್ಷ ಬೀಯೆ,
ನಿಜವೀರರಾರಂತೆ ಈ ಅಮರರಲ್ಲಿ ?

ಗೆಲವೆ ವೀರತೆಯಲ್ಲ ; ಅನ್ಯರದನೆಲ್ಲಾ
ಕಸಿಯೆ ಕಾದಿಸುವ ಕಾದುವ ವೀರರಲ್ಲ.
ಒತ್ತಿಬರೆ ತನ್ನಿಳೆಗೆ ಕಾದಲಾರೊಲ್ಲ ?
ಪರರ ಬಿಡುಗಡೆಗೆ ಮಡಿದಾ ವೀರರಿಲ್ಲಾ ?

ತಮಗೆ ಬಿಡುಗಡೆ ಇಲ್ಲ, ಪರರದಂ ಕಾಯೆ
ತಮ್ಮದಲ್ಲದ ರಣದೊಳೆಲ್ಲೆಲ್ಲಿ ಕಾದಿ
ಮಡಿದ, ಮೇಣನ್ಯರಿಗೆ ತಮ್ಮ ತುತ್ತೀಯೆ
ಹಸಿದಿಲ್ಲಿ ಕೆಡೆದ ಹಿಂದೀಯರೋಪಾದಿ
ಯಾರಿಲ್ಲವಾ ಭಾರತರಗಣ್ಯ ಕೋಟಿ
ಈ ರಣದ ನಿಜವೀರತೆಯ ಪುಣ್ಯಕೋಟಿ.

ಗೋವಿಂದ ಪೈ.

ಅಗ್ರಪೂಜೆಯು ನಿನಗೆ

ಬೆಳ್ಳಿಹಬ್ಬದ ಬೆಳ್ಳಿ ಬೆಳುದಿಂಗಳುದಧಿಯಲಿ
ಪೆರೆನೊಸಲ ತೋರಿಬರುವೆನ್ನ ತಾಯೆ,
ಬೆಳ್ಳಿವಗೆಯಿಂದೆ ಬಲವಂದು ನಿನ್ನಡಿಗೆರಗಿ
ಅಂಜಲಿಯ ತಳೆದಿರುವೆ ನೆನ್ನ ಕಾಯೆ!

ನನ್ನೆದೆಯ ಕುಂಡದಲಿ ಕನ್ನಡದ ಒಲವೆಂಬ
ಕಿಡಿಯ ಹೊತ್ತಿಸಿ ವೃದ್ಧಿಗೊಳಿಸಿದವಳೇ;
ನಾನಿತ್ತ ಬಡ ಹವಿಯನಾರೋಗಣೆಯ ಮಾಡಿ
ಮಮತೆಯಲಿ ಮುಗುಳ್ನಗೆಯ ಬೀರಿದವಳೇ!

ಅಗ್ರಪೂಜೆಯು ನಿನಗೆ ಬೆಳ್ಳಿಯುಡುಗೆಯನುಡಿಯೆ,
ಕನ್ನಡದ ಲೇಖನೀ ದಂಡಧರರು—
ದಿಗ್ವಿಜಯವನು ಮಾಡಿ ಕಪ್ಪಕಾಣಿಕೆ ತಂದು
ಸ್ವರ್ಣವಜ್ರೋತ್ಸವಗಳೆಸಗದಿರರು!

ನಾನೋದುಗಲಿತ ಕಲೆಗುಡಿಯ ಮೂರುತಿ ನಿನ್ನ
ಮಾನೋನ್ನತಿಯ ಕಂಡು, ನನ್ನ ಹೃದಯ
ಏನೇನೊ ನೆನೆನೆನೆಸಿ ಹರ್ಷವರ್ಷಕೆ ಸಿಕ್ಕಿ
ಸ್ಪಂದಿಸುತ್ತಿದೆ ಹುರುಪಿಗಾಗಲುದಯ!

ಹರಸು ಹರಸಲೆ ತಾಯೆ ವೀರ ಕನ್ನಡ ದಳವ,
ಎರಗಿ ನಿಂದಿಹ ನಿನ್ನ ಭಕ್ತಕುಲವ;
ಸುರಿಸು ನನ್ನೆದೆಯಲ್ಲಿ ನಿನ್ನ ಸಾರಸ್ವತವ,
ಹರಿಸಜೇಯತೆವೆತ್ತ ಶಕ್ತಿಜಲವ!

—ಬಿ. ಎಚ್. ಶ್ರೀಧರ.

ಕವಿ ಬೇಂದ್ರೆಯವರನ್ನು ಕುರಿತು

ಕವೀಶ್ವರ, ಸುಹೃದ್ವರ, ನಿನ್ನ ಸಿರಿಗನ್ನಡದ
ಮಾತಿನೊಳು ಮೂಡುತಿಹ ಭವ್ಯಸುಂದರ ಕಾವ್ಯ-
ಕೋತು, ನುಡಿಯ ಬೆಡಗು, ಹಾಡಿನ ಗುಂಗು, ಊಹೆಯ
ನವೋನವ್ಯತೆ, ಭಾವನೆಯ ಉದಾರತೆ, ಇವಕೆ

ಮನಸೋತು, ರಸಾರ್ದ್ರಸ್ವಾಂತದಿಂ ಭಾವಿಪೆನು :
ಆವ ಬೀಳಾಸೆಯಿಂದಾದಾವ ಶಾಪಕ್ಕೊ
ಆವ ದುಷ್ಕೃತಿಯ ನಿಷ್ಕೃತಿಗೊ, ನಮ್ಮ ತಾಯ್ನುಡಿ
ತನಗಾದ ನಾಡಿನೊಳೆ ತಾನಮಂಗಳೆಯೆನಿಸಿ
ಹಿರಿಮೆಯ ನೀಗಿ, ಹೆಸರನಳಿದು, ರೂವಿಲಿಯಾಗಿ
ಬನ್ನ ಪಡುತಿರಲು, ತಪೋವಿಪಾಕವೊದವಿತೆನೆ,
ತನ್ನ ತೆಯ ಜತೆಗೆ ದಿವ್ಯತೆಯನಳವಡಿಸಿ
ತಿರೆಗೆ ಸೋಜಿಗವಿಾಕೆ ಎಂದು ಜನ ಬೆರಗಾಗೆ
ರೂಪವನಿತ್ತ ರಾಮನಾದೆಯ್ಯೆ ದತ್ತರಾಮ ;
ಗಾಳಿಗೂ ಬಾಳೀವ ರೂವಾರ್ತಿ, ಸಿದ್ಧಕಾಮ.

ಪು ತಿ ನ.

ಅನ್ನಪೂರ್ಣೆಗೆ

ಅನ್ನಪೂರ್ಣೆ, ಅನ್ನಪೂರ್ಣೆ
ತಾಯೇ, ಬಾ, ತಾಯೆ !
ಚಂದ್ರವರ್ಣೆ, ಸುಧಾಪೂರ್ಣೆ
ಬಾ ತಾಯೇ, ತಾಯೆ !

ಆ ದೇವರು, ಈ ದೇವರು
ಉಳಿವರೆ ಈಗಿಲ್ಲಿ ?
ಇಂದೆಲ್ಲರು ಕೈಮುಗಿವರು
ನಿನಗೊಬ್ಬಳಿಗಿಲ್ಲಿ.

ಕತ್ತಲೆಯಲಿ ಬತ್ತಲೆಯಲಿ
ತಲೆಗೆದರಿದೆ ಬದುಕು ;
ಕಣ್ಣೆಲ್ಲೋ ಎತ್ತರದಲಿ ;
ತುಟಿ ದುಃಖದ ಬಿರುಕು.

ಗಂಡಿಲ್ಲವೆ? ಇಹುದಿಹುದು,
ಹೆಣ್ಣಿಗೆ ಗಂಡಾಗಿ;
ಹೆಣ್ಣಿಲ್ಲವೆ? ಇಹುದಿಹುದು,
ಬೆಳ್ಳಗೆ ಬೆಂಡಾಗಿ.

ಪೇರೊಕ್ಕಲು! ಈ ಮಕ್ಕಳು
ಬಡವರ ಮೈಸಾಲ.
ನೆಲದೇವಿಯೆ ಉಸ್ಸೆನುವಳು;
ಕಂಗೆಟ್ಟಿತು ಕಾಲ.

ಹನಿಯಿಲ್ಲದ ಪಾಳ್ಮುಗಿಲಿನ
ಸುಡುಗಾಡದು ಬಾನು.
ನೀರಿಂಗಿದ ಕೆರೆಯಂಗಳ
ಉಸಿರಿಲ್ಲದ ನಾನು!

ನಿಡುಸುಯ್ಲಿನ ಗುಡಿಗೋಪುರ,
ಕಂಬನಿಯಭಿಷೇಕ
ಬೆಂದೊಡಲಿನ ಆರ್ತಸ್ವರ
ಬಾಳು-ಸಾವು ಏಕ.

ತುಟಿ-ತುತ್ತಿನ ಅಂತರದಲಿ
ಹೆಡೆಯೆತ್ತಿದೆ ಹಾವು,
ಇಂಪೊಗೆಯುವ ಸವಿಗೊರಲಲಿ
ಕುಡಿಯೊಡೆದಿದೆ ನೋವು.

ಬೆಳ್ದಿಂಗಳ ಸುರಿಮಳೆಯಲಿ
ಮೊಗವನು ಮೇಲೆತ್ತಿ,
ಕಾಮಾಕ್ಷಿಯ ಚೆಂದುಟಿಯಲಿ
ಸುಖಮುದ್ರೆಯನೊತ್ತಿ,

ಆನಂದದ ಸಂಭ್ರಮದಲಿ
ನಿನ್ನೊಬ್ಬಳ ಮರೆತು;
ಸೌಂದರ್ಯದ ಉತ್ಸವದಲಿ
ಒಳದೇವರ ತೊರೆದು;

ಹಿರಿದಾಯಿತು ನೋಟದ ಗುರಿ,
ಕಿರಿದಾಯಿತು ಕಣ್ಣು.
ಬರಿದಾಯಿತು ಹಾಡಿನ ಸಿರಿ,
ರಸವಿಲ್ಲದ ಹಣ್ಣು.

ಧೃತಿಗೆಟ್ಟೆನು ಇದೊ! ಮನ್ನಿಸು
ಕರುಣಿಸು, ಕಣ್ತೆರೆದು.
ನಿನ್ನೊಲುಮೆಗೆ ಕಾದಿರುವೆನು,
ಹೊಸ ದನಿಯನು ಕರೆದು.

ನೀನಿಲ್ಲದ ಮನೆಮನೆಯಲಿ
ಏನಿದ್ದೂ ವ್ಯರ್ಥ.
ಹಸಿದೊಡಲಿನ ಕಗ್ಗವಿಯಲಿ
ಹಾಡೆಲ್ಲ ಅನರ್ಥ.

ಅನ್ನಪೂರ್ಣೆ, ಅನ್ನಪೂರ್ಣೆ,
ತಾಯೇ, ಬಾ, ತಾಯೆ!
ಚಂದ್ರವರ್ಣೆ, ಸುಧಾಪೂರ್ಣೆ,
ಬಾ, ತಾಯೇ, ತಾಯೆ!

ಕೆ. ಎಸ್ ನ.

ಇದು ಬಾಳು

೧

ಅಳುವ ಕಡಲೊಳೂ ತೇಲಿಬರುತಲಿದೆ
ನಗೆಯ ಹಾಯಿದೋಣಿ;
ಬಾಳಗಂಗೆಯ ಮಹಾಪೂರದೊಳೂ
ಸಾವಿನೊಂದು ವೇಣಿ.
ನೆರೆತಿದೆ, ಬೆರೆತಿದೆ; ಕುಣಿವ ಮೊರೆವ
ತೆರೆತೆರೆಗಳೋಳಿಯಲ್ಲಿ,
ಜನನ ಮರಣಗಳ ಉಬ್ಬುತಗ್ಗು ಹೊರ
ಳುರುಳುವಾಟವಲ್ಲಿ!

೨

ಆಶೆಬೂದಿ ತಳದಲ್ಲು ಕೆರಳುತಿವೆ
ಕಿಡಿಗಳೆನಿತೊ ಮರಳಿ ;
ಮುರಿದುಬಿದ್ದ ಮನಮರದ ಕೊರಡೊಳೂ
ಹೂವು ಹೂವು ಅರಳಿ !
ಕೂಡಲಾರದೆದೆಯಾಳದಲ್ಲು ಕಂ
ಡೀತು ಏಕ ಸೂತ್ರ ;
ಕಂಡುದುಂಟು ಬೆಸೆದೆದೆಗಳಲ್ಲು ಭಿ
ನ್ನತೆಯ ವಿಕಟಹಾಸ್ಯ !

೩

ಎತ್ತರೆತ್ತರಕೆ ಏರುವ ಮನಕೂ
ಕೆಸರ ಲೇಪ, ಲೇಪ !
ಕೊಳೆಯ ಕೊಳಚೆಯಲಿ ಮುಳುಗಿ ಕಂಡನೋ
ಬಾನಿನೊಂದು ಪೆಂಪ.
ತುಂಬುಗತ್ತಲಿನ ಬಸಿರನಾಳುತಿದೆ
ಒಂದು ಅಗ್ನಿ ಪಿಂಡ ;
ತಮದಗಾಧ ಹೊನಲಲ್ಲು ಹೊಳೆಯುತಿದೆ
ಸತ್ವವೊಂದಖಂಡ !

೪

ಇದನರಿತೆನೆಂದೆ ; ಆ ಅರಿವುಕಿರಣವನೆ
ನುಂಗಿತೊಂದು ಮೇಘ !
ಆ ಮುಗಿಲ ಬಸಿರನೇ ಬಗೆದು ಬಂತು ನವ
ಕಿರಣವೊಂದಮೋಘ !
ಹಿಡಿದ ಹೊನ್ನೆ ಮಣ್ಣಹುದು ; ಮಣ್ಣೊಳೂ
ಹೊಳೆದುದುಂಟು ಹೊನ್ನು ;
ಇದು ಹೀಗೆಯೆಂಬ ನಂಬುಗೆಯ ಊರೆಗೋ
ಲಿಲ್ಲ, ಇನ್ನು ಮುನ್ನು !

೫

ಆಶೆಯೆಂಬ ತಳವೊಡೆದ ದೋಣಿಯಲಿ
ದೂರ ತೀರಯಾನ,
ಯಾರ ಲೀಲೆಗೋ ಯಾರೊ ಏನೊ ಗುರಿ
ಯಿರದೆ ಬಿಟ್ಟಬಾಣ !
ಇದು ಬಾಳುನೋಡು ; ಇದ ತಿಳಿದೆನೆಂದರೂ
ತಿಳಿದ ಧೀರನಿಲ್ಲ ;
ಹಲವುತನದ ಮೈಮರೆಸುವಾಟವಿದು
ನಿಜವು ತೋರದಲ್ಲ !
ಬೆಂಗಾಡು ನೋಡು ಇದು ; ಕಾಂಬ ಬಯಲು ದೊರೆ
ಗಿಲ್ಲ ಆದಿ ಅಂತ್ಯ ;
ಅದ ಕುಡಿದೆನೆಂದ ಹಲರುಂಟು ; ತಣಿದೆನೆಂ
ದವರ ಕಾಣೆನಯ್ಯ !
ಅರೆಬೆಳಕಿನಲ್ಲಿ ಬಾಳಲ್ಲಿ ಸುತ್ತಿ ನಾ
ವೇಕೊ ಮಲೆತು, ಮೆರೆದು,
ಕೊನೆಗೆ ಕರಗುವೆವು ಮರಣ ತೀರ
ಘನ ತಿಮಿರದಲ್ಲಿ ಬೆರೆದು !

—ಎಂ. ಗೋಪಾಲಕೃಷ್ಣ ಅಡಿಗ.

೨. ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ

೧

'ಸ ಪರ್ಯಗಾತ್ ಶುಕ್ರಂ ಅಕಾಯಂ ಅವ್ರಣಂ ಅಸ್ನಾವಿರಂ ಶುದ್ಧಂ ಅಪಾಪವಿದ್ಧಂ|
ಕವಿರ್ಮನೀಷೀ ಪರಿಭೂಃ ಸ್ವಯಂಭೂಃ ಯಾಥಾತಥ್ಯತೋಽರ್ಥಾನ್ ವ್ಯದಧಾತ್
ಶಾಶ್ವತೀಭ್ಯಃ ಸಮಾಭ್ಯಃ||

ಈಶೋಪನಿಷತ್ತಿನ ಋಷಿ ಸೃಷ್ಟಿಯನ್ನೂ ಸೃಷ್ಟಿಕರ್ತೃವನ್ನೂ ಸೃಷ್ಟಿಕ್ರಮವನ್ನೂ ಸೃಷ್ಟಿನಿಯತಿಯನ್ನೂ ಕುರಿತ ತನ್ನ 'ದರ್ಶನ'ವನ್ನು ಮೇಲಿನ ಮಂತ್ರದಲ್ಲಿ ಸಾರಿ, ತನ್ನ ಸಾಕ್ಷಾತ್ಕಾರದ ಸಮಷ್ಟಿದೃಷ್ಟಿಗೆ ಒಂದು ಸಮಗ್ರ ವಾಕ್‌ಪ್ರತಿಮೆಯನ್ನು ನಿರ್ಮಿಸಿದ್ದಾನೆ. ಇಲ್ಲಿ ನಮಗೆ ಪ್ರಕೃತವಾದ ಕಾವ್ಯವಿಮರ್ಶೆಯ ದೃಷ್ಟಿಯಿಂದ ನಾವು ಗಮನಿಸಬೇಕಾದುದು ವಿಶೇಷವಾಗಿ ಮಂತ್ರದ ಉತ್ತರಾರ್ಧದಲ್ಲಿದೆ.

ಪೂರ್ವಾರ್ಧದಲ್ಲಿ ಸ ಪರ್ಯಗಾತ್—ಅವನು ಮುಂಬರಿದನು—ಎಂದು ಸೃಷ್ಟಿಕಾವ್ಯದ ನಾಂದಿಯನ್ನು ಹಾಡಿದ್ದಾನೆ. ಕರ್ತೃ ಚೈತನ್ಯದ ಲಕ್ಷಣಗಳನ್ನು ಹೇಳುವಾಗ 'ಅನಿರ್ದೇಶ್ಯ' ವಿಶೇಷಣಗಳನ್ನೇ ಮಾಲೆ ಸೆಯ್ದಿದ್ದಾನೆ:

ಅವನು ಶುಕ್ರ: ಯಾವ ವರ್ಣವಿಭೇದವೂ ಇಲ್ಲ. ಶುದ್ಧ ಜ್ಯೋತಿಸ್ವರೂಪ.

ಅವನು ಅಕಾಯ: ಇಂದ್ರಿಯ ಗ್ರಾಹ್ಯವಾಗಬಹುದಾದ ಯಾವ ರೂಪವೂ ಇಲ್ಲದ ಸರ್ವವ್ಯಾಪಿ ಮತ್ತು ಸರ್ವತ್ರ ಸಮರೂಪಿ.

ಅವನು ಅವ್ರಣ: ಯಾವ ದೋಷಗಳೂ ಇಲ್ಲ; ಪರಿಪೂರ್ಣ. ಸೃಷ್ಟಿವ್ಯಾಪಾರದ ಚಲನೆ ಬದಲಾವಣೆಗಳಿಂದ ಕಲುಷಿತವಾಗಿಲ್ಲ.

ಅವನು ಅಸ್ನಾವಿರ: ಸೃಷ್ಟಿಗೆ ಅನಿವಾರ್ಯವಾದ ಶಕ್ತಿಸ್ನಾಯುಗಳು ಇನ್ನೂ ಪ್ರಭವಿಸಿಲ್ಲ.

ಅವನು ಶುದ್ಧ ಮತ್ತು ಅಪಾಪವಿದ್ಧ: ಕರ್ಮಾತೀತವಾದ ಸಮತ್ವದಿಂದ ಇನ್ನೂ ವಿದ್ಯೆ, ಅವಿದ್ಯೆ, ಜ್ಞಾನ, ಅಜ್ಞಾನ, ಇತ್ಯಾದಿ ದ್ವಂದ್ವಗಳಿಗೆ ಇಳಿದಿಲ್ಲ.

ಪೂರ್ವಾರ್ಧದಲ್ಲಿ ಸೃಷ್ಟಿಪೂರ್ವ ಕರ್ತೃವಿನ ಸ್ವಯಂಭುಸ್ಥಿತಿಯನ್ನು ವರ್ಣಿಸಿ, ಮಂತ್ರದ ಉತ್ತರಾರ್ಧದಲ್ಲಿ ಸೃಷ್ಟಿಕಾರಿಯಾದ ಅವನನ್ನು ಕವಿಯೆಂದೂ ಮನೀಷಿಯೆಂದೂ ಪರಿಭೂ ಎಂದೂ ಕರೆದಿದ್ದಾನೆ. ಯಾವನು ಸ್ವಯಂಭುವೋ ಅವನು ಕವಿಯಾಗಿ 'ಕಾಣು'ತ್ತಾನೆ. ಆ 'ದರ್ಶನ' ಗುಣದಿಂದಲೇ ಅವನು ಕವಿ ಎಂಬ ಹೆಸರಿಗೆ ಒಳಗಾಗುತ್ತಾನೆ. ಕಂಡು ಕವಿಯಾದ ಸ್ವಯಂಭು ಮನೀಷಿಯಾಗಿ 'ಆಲೋ

ಚಿಸು 'ತ್ತಾನೆ. ಆ ಚಿಂತನ ಲಕ್ಷಣದಿಂದಲೆ ಅವನು ಮನೀಷಿ ಎಂಬ ಬಿರುದಿಗೆ ಪಾತ್ರ. ಕಂಡು ಕವಿಯಾಗಿ, ಆಲೋಚಿಸಿ ಮನೀಷಿಯಾದವನು ಪರಿಭೂ ಆಗಿ ತಾನೇ ಆಗುತ್ತಾನೆ. ತಾನು ಕಂಡು ಆಲೋಚಿಸಿದನ್ನು ತಾನೇ ಆಗುತ್ತಾನೆ. ಹೀಗೆ, ತಾನೆ ಸೃಷ್ಟಿ ತಾನಾಗುವಿಕೆಯಿಂದ ಅವನು ಪರಿಭೂ ಮತ್ತು ವಿಭು. ಆ ಸ್ವಯಂಭು ಇಂತು ಕಂಡು, ಇಂತು ಆಲೋಚಿಸಿ, ಇಂತು ಆಗಿ ವಿಭುವಾಗುವುದೇ ಸೃಷ್ಟಿ.

ಮುಂದೆ 'ಯಾಥಾತಥ್ಯತಃ ಅರ್ಥಾನ್ ವ್ಯದಧಾತ್ ಶಾಶ್ವತೀಭ್ಯಃ ಸಮಾಭ್ಯಃ' ಎಂದು ಕವಿ ಕಂಡದ್ದನ್ನೂ ಮನೀಷಿ ಆಲೋಚಿಸಿದ್ದನ್ನೂ ಪರಿಭೂ ಆಗಿದ್ದನ್ನೂ ಸೃಷ್ಟಿನಿಯತಿಯ ದೃಷ್ಟಿಯಿಂದ ವಿವರಿಸುತ್ತಾನೆ.

ಈ ನಿಯತಿ ಅವನ ಇಚ್ಛೆ; ಅವನ ತಪಸ್ಸು; ಅವನ ಆನಂದ. ಯಾವುದು ಹೇಗಿರಬೇಕು? ಏನಾಗಬೇಕು? ಎಲ್ಲಿರಬೇಕು? ಯಾವುದರೊಡನೆ ಹೇಗೆ ವ್ಯವಹರಿಸಬೇಕು? ಎಂಬೆಲ್ಲ ಅರ್ಥಗಳನ್ನೂ ಅದಕ್ಕದಕ್ಕೆ ತಗುವಂತೆ ಸಾರ್ವಕಾಲಿಕವಾಗಿ ನಿರ್ಣಯಿಸಿದ್ದಾನೆ. ಮರ್ತ್ಯಬುದ್ಧಿ ತಿಳಿಯುವಂತೆ ಯಾಂತ್ರಿಕವಾಗಿ ಅಲ್ಲ, ಋತಚಿದ್ ಗೋಚರವಾಗುವಂತೆ ಮಾಂತ್ರಿಕವಾಗಿ. ಆ ಇಚ್ಛಾಪ್ರಕಾರವೇ ಈ ಸೃಷ್ಟಿಯಲ್ಲಿ ಅಲಂಘ್ಯವಾದ ನಿಯತಿಯಂತೆ ಪ್ರಕಾಶಗೊಂಡಿದೆ. ಸೃಷ್ಟಿಕೃತಿಗೆ ಸಚ್ಚಿದಾನಂದನೆ ಕವಿ. ಅವನ ಮನೀಷೆಯೆ ಅದಕ್ಕೆ ನಿಯತಿ. ಅವನ ಪ್ರಸರಣವೆ ಅದಕ್ಕೆ ಸತ್ಯ ಮತ್ತು ಅಸ್ತಿತ್ವ.

ಸೃಷ್ಟಿಕವಿಯ ವಿಶ್ವಕಾವ್ಯಕ್ಕೆ ಆನಂದವೇ ಕಾರಣ, ಉದ್ದೇಶ ಮತ್ತು ಪ್ರಯೋಜನ—ಎಂಬುದು ಪೂರ್ಣದೃಷ್ಟಿಗೆ ಮಾತ್ರ ಸ್ವಸಂವೇದ್ಯ. ಖಂಡ ಅಥವಾ ಅಂಶದೃಷ್ಟಿಗೆ ಅದು ಸ್ವಯಂಸಾಧ್ಯವಲ್ಲ. ಯಾವ ಪ್ರಜ್ಞೆ ಹಿಂದು ಮುಂದಿಂದುಗಳನ್ನು ಏಕಕಾಲದಲ್ಲಿ ಅಥವಾ ಕಾಲಾತೀತವಾದ ನಿತ್ಯದಲ್ಲಿ ಅಖಂಡವಾಗಿ ಗ್ರಹಿಸಬಲ್ಲುದೊ ಅದಕ್ಕೆ ಮಾತ್ರ ಗೋಚರ—ಎಲ್ಲದರ ಕಾರಣ, ಎಲ್ಲದರ ಉದ್ದೇಶ ಮತ್ತು ಎಲ್ಲದರ ಪ್ರಯೋಜನ. ಖಂಡದೃಷ್ಟಿಯಲ್ಲಿ ಮಾತ್ರ ಚರಿಸಲು ಸಮರ್ಥವಾಗಿರುವ ಅಯೋಗ ಬುದ್ಧಿಗೆ ನಿಷ್ಕಾರಣವೆಂದೂ ನಿರುದ್ದೇಶಕವೆಂದೂ ನಿಷ್ಪ್ರಯೋಜನವೆಂದೂ ತೋರುವ ಘಟನೆಗಳೂ ವ್ಯಾಪಾರಗಳೂ ಪೂರ್ಣದೃಷ್ಟಿಯ ದಿವ್ಯವಿಜ್ಞಾನಕ್ಕೆ ಸಕಾರಣವಾಗಿ ಸೋದ್ದೇಶವಾಗಿ ಸಪ್ರಯೋಜನವಾಗಿ ತೋರುತ್ತವೆ. ಸರ್ವಶಕ್ತಿಗೆ ಕೈಲಾಗದೆ ಅದರ ಸರ್ವಜ್ಞಾನಕ್ಕೆ ದುಃಸ್ಥಿತಿ ಒದಗಿಲ್ಲ. ಏಕೆಂದರೆ ಅದಕ್ಕೆ ತಿಳಿಯದುದಿಲ್ಲ; ಅದಕ್ಕೆ ಅಸಾಧ್ಯವಾದುದಿಲ್ಲ; ಅದು ಇಲ್ಲದುದಿಲ್ಲ; ಅದು ಅಲ್ಲದುದೂ ಇಲ್ಲ. ಅದು ಎಲ್ಲ.

ಒಂದೊಂದು ವ್ಯಾಪಾರವೂ ಅದರ ಸಾರಸತ್ವಾರ್ಥದಲ್ಲಿ ಮೂಲದಲ್ಲಿಯೆ ನಿಯಮಿತವಾಗಿದೆ. ಪೂರ್ಣದೃಷ್ಟಿ ಪ್ರಯೋಗಶರಣವಾಗಿ ಅದನ್ನು ಇತ್ಯರ್ಥಪಡಿಸ

ಬೇಕಾಗಿಲ್ಲ. ಇಲ್ಲಿ ಈ ವ್ಯಕ್ತಪ್ರಪಂಚದಲ್ಲಿ ಯಾವುದರ ಪೂರ್ಣವಾದ ಅರ್ಥವೂ ಅಲ್ಲಿಯೇ ಆದರಿಂದಲೇ ಸಂಪೂರ್ಣವಾಗಿ ವ್ಯಕ್ತವಾಗಲಾರದು. ಸಂಪೂರ್ಣಾರ್ಥವು ಪೂರ್ಣದೃಷ್ಟಿಯಿಂದಲೇ ಗೃಹೀತ. ಹೀಗೆ ನಡೆದುದು ತಪ್ಪು, ಹೀಗಿರಬಾರದಾಗಿತ್ತು, ಹಾಗೆ ನಡೆಯಬೇಕಿತ್ತು, ಹಾಗಿರಬೇಕಿತ್ತು—ಎಂಬ ಟೀಕೆಗಳಿಗೆ ಟೀಕಾವಕಾಶ ಹೊರತು ಬೇರೆಯ ಅವಕಾಶವಿಲ್ಲ.

ಎರಡು ಅನಿಲಗಳು ಸಂಯೋಜನಗೊಂಡು ಅವಕ್ಕೆ ಸಂಪೂರ್ಣ ಭಿನ್ನಗುಣಗಳುಳ್ಳ ನೀರು ಉಂಟಾಗುತ್ತದೆ ಎಂಬುದು ನಮಗೆ ಅಭ್ಯಾಸ ಬಲದಿಂದ ಅತ್ಯಂತ ಅವಶ್ಯಫಲವಾಗಿ ತೋರುತ್ತಿದೆ. ಆದರೆ ನೀರು ಎಂಬ ಪರಿಣಾಮಗುಣ ಅನುಭವಕ್ಕೆ ಬಾರದೆ, ಎರಡು ಅನಿಲಗಳಿಂದ ನೀರಿನಂತಹ ಅತ್ಯಂತ ಭಿನ್ನಗುಣವುಳ್ಳ ಮೂರನೆಯ ಪದಾರ್ಥವನ್ನು ಊಹಿಸುವುದು ಎಂತಹ ಆದಿಶೇಷಕಲ್ಪನೆಗೂ ಕಷ್ಟ. ಹಾಗಿದ್ದರೂ ಅಂತಹ ಎನಿತೋ ಅದ್ಭುತಘಟನಾ ಪರಂಪರೆಗಳು ನಮಗೆ ದಿನದಿನದ ಅನುಭವಗಳಾಗಿ ಜಡಸಾಧಾರಣವಾಗಿ ಅಲಕ್ಷಿತವಾಗಿವೆ!

ಆ ಎರಡು ಅನಿಲಗಳು ಸೇರಿ ನೀರಲ್ಲದೆ ಜೇರೆಯ ಪದಾರ್ಥ ಏಕಾಗಬಾರದಾಗಿತ್ತು ಎಂಬ ಪ್ರಶ್ನೆ ಸದ್ಯಕ್ಕೆ ಬಂಜೆ. ಈ ವಿಶ್ವದಲ್ಲಿ, ನಮ್ಮ ಲೋಕದಲ್ಲಿ, ಪ್ರಕೃತ ಸ್ಟಷ್ಟಿಯಲ್ಲಿ ಆ ಅನಿಲಗಳು ಅಂತಹ ಕ್ರಮದಲ್ಲಿ ಸೇರಿದರೆ ನೀರಲ್ಲದೆ ಬೇರೆ ಏನೂ ಉಂಟಾಗುವುದಿಲ್ಲ.* ಕವಿಯೂ ಮನೀಷಿಯೂ ಆದ ಆದಿಶಕ್ತಿ ಇಚ್ಛಿಸಿದರೆ ನೀರು ಮಾತ್ರವಲ್ಲ, ನೂರಾರು ಇತರ ಪದಾರ್ಥಗಳೂ ಮೂಡಬಹುದು. ಬೇರೆಯ ಸೃಷ್ಟಿಯಲ್ಲಿ ಅಥವಾ ಬೇರೆಯ ಲೋಕಗಳಲ್ಲಿ ಬೇರೆಬೇರೆಯ ರೀತಿಗಳೂ ಗುಣಗಳೂ ಪರಿಣಾಮಗಳೂ ತೋರಿದರೂ ತೋರಬಹುದು. ತೋರುತ್ತಿದ್ದರೂ ಆಶ್ಚರ್ಯಕ್ಕೆ ಅವಕಾಶವಿಲ್ಲ. ಆದರೆ ಈ ಸೃಷ್ಟಿಯಲ್ಲಿ, ಈ ಲೋಕದಲ್ಲಿ, ಈ ಪ್ರಕೃತಿಯಲ್ಲಿ 'ನಮಗೆ' ಆ ಎರಡು ಅನಿಲಸಂಯೋಗದಿಂದ ಈ ನೀರಿನ ಉತ್ಪತ್ತಿ ಅತ್ಯಂತ ನಿಶ್ಚಿತವೂ ದೃಢವೂ ಆದ ವಾಸ್ತವ ವಿಷಯವಾಗುತ್ತದೆ. ಅದನ್ನು ಯಕ್ಷಿಣಿ, ಕಣ್ಣುಕಟ್ಟು, ಕೀಲಣೆ, ಮಾಯೆ, ಮಿಥ್ಯೆ ಎಂದು ಕರೆದರೂ ವಿಷಯದ ಸತ್ಯಕ್ಕಾಗಲಿ, ಅದು ಹೊಮ್ಮುವ ರೀತಿಯ ಋತಕ್ಕಾಗಲಿ ಒಂದಿನಿತೂ ಚ್ಯುತಿ ಬರುವುದಿಲ್ಲ.

ನಿರ್ಗುಣಬ್ರಹ್ಮದ ಸಗುಣತತ್ತ್ವಗಳು ಋತಚಿತ್‌ಸತ್ಯದಲ್ಲಿ ಋತಕಲ್ಪನಾ ವ್ಯಕ್ತವಾಗಿ, ಋತಚಿತ್ತಿನ ಅಧಿಕಾರದಲ್ಲಿಯೆ ಅಭಿವ್ಯಕ್ತಿಯನ್ನು ಪಡೆಯುತ್ತವೆ. ಆ ಅಭಿವ್ಯಕ್ತಿಯೇ ಸೃಷ್ಟಿ. ಸೃಷ್ಟಿ ಒಂದು ಮಹಾಪ್ರತಿಮೆ: ತನಗೆ ಹಿನ್ನೆಲೆಯೂ

* ಸರ್ವಶಕ್ತಿಯ ಇಚ್ಛೆ ಮಾತ್ರ ಇದರಿಂದಲೂ ಬದ್ಧವಲ್ಲ. ನಿಯತಿಯಂತೆ ಅದರ ಇಚ್ಛೆಯಲ್ಲ; ಅದರ ಇಚ್ಛೆಯಂತೆ ನಿಯತಿ.

ಬೆಂಬಲವೂ ಮುನ್ನಡೆಯೂ ಕಡೆಗುರಿಯೂ ಆಗಿರುವ ಋತಚಿದ್ವಿಭೂತಿಯ ಶಾಶ್ವತ ಸತ್ಯಗಳು ಕಾಲದೇಶ ಪಂಜರದಲ್ಲಿ ಗೋಚರವಾಗುವ ಒಂದು ಬೃಹದ್ ಪ್ರತಿಮೆ.

೨

ಕವಿಕೃತಿಯಾದ ಕಾವ್ಯವೂ ಈಶ್ವರ ಕೃತಿಯಾದ ವಿಶ್ವಸೃಷ್ಟಿಗೆ ಸದೃಶವಾದ ಒಂದು ಪ್ರತಿಮೆ. ಸದೃಶವಾದುದು ಮಾತ್ರ, ಸಮವಾದುದಲ್ಲ. ಅದರಷ್ಟು ಸ್ವತಂತ್ರವೂ ಅಲ್ಲ; ಶಕ್ತಿಸಮನ್ವಿತವೂ ಅಲ್ಲ. ಏಕೆಂದರೆ ಕಾವ್ಯಕೃತಿಯನ್ನು ರಚಿಸುವ ಕವಿಯೂ ಈಶ್ವರಸೃಷ್ಟಿಯಲ್ಲಿ ಒಂದು ಕೃತಿಮಾತ್ರನಾಗಿದ್ದಾನೆ.

ಆದರೂ ಕವಿಕೃತಿಯಾದ ಕಾವ್ಯವು ತನ್ನದೇ ಆದ ಒಂದು ಸ್ವಾತಂತ್ರ್ಯವನ್ನೂ ಶಕ್ತಿಯನ್ನೂ ಪಡೆದಿದೆ. ಅದೂ ಒಂದು ಪ್ರತಿಮಾಲೋಕ. ವಿಶ್ವವು ಹೇಗೆ ಋತಚಿತ್ ಸತ್ಯಾರ್ಥಪ್ರಕಾಶನದ ಒಂದು ವಿರಾಟ್‌ಪ್ರತಿಮೆಯೋ ಹಾಗೆಯೇ ಮಹಾಕಾವ್ಯವೂ ಮಹಾಕವಿಯ 'ದರ್ಶನ' ಪ್ರಕಾಶನದ ಒಂದು ಮಹಾಪ್ರತಿಮೆ. ಆ 'ದರ್ಶನ'ದ ಉಜ್ವಲತೆಗೂ ಉದಾತ್ತತೆಗೂ ಅನುಗುಣವಾಗಿ, ಅನುರೂಪವಾಗಿ, ಪ್ರತಿಮೆ ಸಿದ್ಧವಾಗುತ್ತದೆ. ಆ 'ದರ್ಶನ'ದ ಶಕ್ತಿ, ಅಶಕ್ತಿ, ಶ್ರೀ, ಅಶ್ರೀ—ಇತ್ಯಾದಿಗಳೆಲ್ಲವೂ ಪ್ರತಿಮೆಯಲ್ಲಿ ಪ್ರತಿಫಲಿತವಾಗುತ್ತವೆ. ನಾವು ಪ್ರತಿಮೆಯಿಂದ ಅದಕ್ಕೆ ಮೂಲ ಕಾರಣವೂ ಉದ್ದೇಶವೂ ಪ್ರಯೋಜನವೂ ಆಗಿರುವ ಕವಿ'ದರ್ಶನ'ಕ್ಕೆ ಹೋಗಿ, ಅದನ್ನು ಒಪ್ಪಬಹುದು, ಬಿಡಬಹುದು; ಅದು ಹೀಗಿರಬಹುದಾಗಿತ್ತು, ಹಾಗಿರಬಹುದಾಗಿತ್ತು ಎಂದು ತಿದ್ದುಪಡಿ ಸೂಚಿಸಬಹುದು. ಅಥವಾ ಸಮಗ್ರಪ್ರತಿಮೆಯ ಆವಿರ್ಭಾವದ ವಿಚಾರವಾಗಿ, ಅದರ ಅಂಗೋಪಾಂಗಗಳ ರಚನೆಯ ಮತ್ತು ಜೋಡಣೆಯ ವಿಚಾರವಾಗಿ, ಅನ್ಯಪ್ರಕಾರಗಳನ್ನು ಸೂಚಿಸಬಹುದು. ಆದರೆ ಪ್ರತಿಮಾಲೋಕವನ್ನು ಪ್ರವೇಶಿಸಿದ ಮೇಲೆ ಅಲ್ಲಿ ಖಂಡದೃಷ್ಟಿಯನ್ನು ತಂದುಹಾಕುವುದರಿಂದ ಪ್ರಯೋಜನವಿಲ್ಲ. ಪೂರ್ಣಪ್ರತಿಮೆಯನ್ನು ಪೂರ್ಣದೃಷ್ಟಿಯಿಂದ ಪೂರ್ಣವಾಗಿಯೆ ಗ್ರಹಿಸಬೇಕು. ಇಲ್ಲದಿದ್ದರೆ ರಸಾನುಭವ ಅಸ್ರೋತವಾಗಿ, ಬರಿಯ ವಾದವಿವಾದದ ಬುದ್ಧಿಕಾರ್ಯದ ಕೆಸರುಸುಬು ಕಲ್ಲುಮಣ್ಣುಗಳಲ್ಲಿ ಕಾಲಾಡಬೇಕಾಗುತ್ತದೆ.

ಬ್ರಹ್ಮಸೃಷ್ಟಿಯ ಪೂರ್ಣಪ್ರತಿಮೆಯನ್ನು ಪೂರ್ಣವಾಗಿ ಗ್ರಹಿಸುವ 'ದರ್ಶನ' ಶಕ್ತಿ ಮಾನವಸಾಮಾನ್ಯರಿಗೆ ದುರ್ಲಭ ಮತ್ತು ದುಸ್ಸಾಧ್ಯ. ಬುದ್ಧಿ, ಊಹೆ, ಕಲ್ಪನೆ, ಪ್ರತಿಭೆ, ತರ್ಕ, ಜಿಜ್ಞಾಸೆ ಇವುಗಳಿಂದ ಆ ವಿರಾಟ್‌ಪ್ರತಿಮೆಯನ್ನು ಬಗೆಗೊಳ್ಳಲು ಎಷ್ಟು ಪ್ರಯತ್ನಿಸಿದರೂ ಅದು ಅಮೇಯ, ಅವೇದ್ಯ. ಅತಿ ಎಂದರೆ ಸ್ವಲ್ಪಮಾತ್ರ ಮತಿಗೋಚರ. ಸಾಮಾನ್ಯ ಮಾನವನು, ಅವನು ಎಂತಹ ಅಸಾಧಾರಣ ಮೇಧಾವಿಯಾಗಿರಲಿ, ಎಂತಹ ಪಾರದರ್ಶಿಯಾದ ಪ್ರತಿಭಾಶಾಲಿಯಾಗಿರಲಿ, ಮನೋಮಯ

ಮಾನವಮತಿಗೆ ಸಾಧ್ಯವಾದಷ್ಟರಿಂದಲೆ ತೃಪ್ತನಾಗಬೇಕು. ಸಿದ್ಧನೂ ಸ್ಥಿತಪ್ರಜ್ಞನೂ ಆಗಿ ವಿಜ್ಞಾನಮಯಕ್ಕೇರಿದ ಪೂರ್ಣಯೋಗಿಗೆ ಮಾತ್ರ ಪೂರ್ಣದೃಷ್ಟಿ ಸಾಧ್ಯ. ಅವನಿಗೆ ಅಂಶದೃಷ್ಟಿಯ ಮತ್ತು ಅವಿದ್ಯೆಯ ಕುಂದುಕೊರತೆಗಳಿರುವುದಿಲ್ಲ. ಒಂದೊಂದನ್ನೂ ಪೂರ್ಣದೃಷ್ಟಿಯಿಂದ ಗ್ರಹಿಸುವ ಸಂಜ್ಞಾನವೂ, ಸರ್ವವನ್ನು ಸಮಷ್ಟಿಯಾಗಿ ಸರ್ವಸಂಬಂಧಗಳಲ್ಲಿಯೂ ಗ್ರಹಿಸುವ ಪ್ರಜ್ಞಾನವೂ, ಸಂಜ್ಞಾನ ಪ್ರಜ್ಞಾನಗಳನ್ನು ಒಳಕೊಂಡೂ ಅವುಗಳನ್ನು ಮೀರುವ ವಿಜ್ಞಾನವೂ ಅವನದಾಗುತ್ತವೆ. ನಮಗೆ ಯಾವುದು ದುಃಖವೋ ಅದು ಅವನ ಪೂರ್ಣದೃಷ್ಟಿಗೆ ಆನಂದದ ಅಂಗವಾಗುತ್ತದೆ. ನಮಗೆ ಯಾವುದು ವಿಕಾರವೋ ಅದು ಅವನ 'ದರ್ಶನ'ದಲ್ಲಿ ವಿಕಾಸಲೀಲಾಶೀಲವಾದ ಕೇವಲ ಸೌಂದರ್ಯದ ಒಂದು ಅನಿವಾರ್ಯಾಂಗವಾಗಿ ಅರ್ಥಪೂರ್ಣವಾಗುತ್ತದೆ. ಇಲ್ಲಿಯ ಸಾವು ಸಾವಲ್ಲ; ಇಲ್ಲಿಯ ಅಮಂಗಳ ಅಮಂಗಳವಲ್ಲ. ಸಾವು ಅಮೃತತ್ವದ ಒಂದು ಮರ್ತ್ಯವಿನ್ಯಾಸ. ಅಮಂಗಳ ಎಂಬುದು ಅನ್ನಮಯದಲ್ಲಿ ಮೈದೋರಲೆಳಸುತ್ತಿರುವ ಪರಮಮಂಗಳದ ಒಂದು ಲೀಲಾಭಂಗಿ. ಏಕೆಂದರೆ ಕೇವಲವಾದ ಸಚ್ಚಿದಾನಂದದ ಶಿವಶಕ್ತಿ ಸಾವು, ದುಃಖ, ಪಾಪ ಇತ್ಯಾದಿಗಳ ಹಿಂದೆಯೂ ಮುಂದೆಯೂ ನಿಂತು ಪ್ರಚೋದಿಸುತ್ತಲೂ ಆಕರ್ಷಿಸುತ್ತಲೂ ಇರುವುದು ಅವನಿಗೆ ಸ್ವಯಂವೇದ್ಯ. ಅಂಶದೃಷ್ಟಿಗೆ ದುರಂತವಾದುದು ಪೂರ್ಣದೃಷ್ಟಿಗೆ ದುರಂತವಲ್ಲ. ಖಂಡದೃಷ್ಟಿಗೆ ಅನ್ಯಾಯವೆಂದೂ ಅಧರ್ಮವೆಂದೂ ವ್ಯರ್ಥವೆಂದೂ ನಷ್ಟವೆಂದೂ ತೋರುವ ವ್ಯಾಪಾರಗಳು ಪೂರ್ಣದೃಷ್ಟಿಗೆ ಅಲ್ಲಿಯೇ ಅಷ್ಟರಲ್ಲಿಯೇ ಕೊನೆಗಾಣದೆ, ಅನ್ಯಾಯವು ಪರಮನ್ಯಾಯದ ಕಡೆಗೂ ಅಧರ್ಮವು ಪರಮಧರ್ಮದ ಕಡೆಗೂ ವ್ಯರ್ಥವು ಪರಮ ಪ್ರಯೋಜನದ ಕಡೆಗೂ ನಷ್ಟವು ಪರಮಲಾಭದ ಕಡೆಗೂ ಚಲಿಸುತ್ತಿರುವುದು ಗೋಚರಿಸುತ್ತದೆ.

ಬ್ರಹ್ಮಕವಿ 'ದರ್ಶನ'ದ ವಿರಾಟ್ ಪ್ರತಿಮೆಯಾದ ವಿಶ್ವಸೃಷ್ಟಿಗೂ ಅದನ್ನು ಪೂರ್ಣದೃಷ್ಟಿಯಿಂದ ದರ್ಶಿಸಲರಿತ ಪೂರ್ಣಯೋಗಿಗೂ ಇರುವ ಸಂಬಂಧವನ್ನು ತುಸು ಮಟ್ಟಿಗೆ ಹೋಲುತ್ತದೆ,—ಮಹಾ ಕವಿಯ ಸೃಷ್ಟಿಗೂ ಸಮರ್ಥ ಸಹೃದಯ ದೃಷ್ಟಿಗೂ ಇರುವ ಸಂಬಂಧ.

ಕವಿಕೃತಿಯಾದ ಕಾವ್ಯವೂ ಒಂದು ಪ್ರತಿಮೆ. ಆ ಪ್ರತಿಮೆಗೆ ಕಾರಣವಾಗಿ ಅದನ್ನು ನಿರ್ಣಯಿಸಿ ನಡಸುವ ಮೂಲ ಸತ್ಯವು ಕವಿಯ 'ದರ್ಶನ'ದಲ್ಲಿದೆ. ಆ ಪ್ರತಿಮೆಗೆ ಪ್ರಾಣಸ್ಥಾನದಲ್ಲಿರುವ ಕವಿಯ ದರ್ಶನವು ಅದಕ್ಕೆ ಕಣ್ಣೂ ಉಸಿರೂ ಆಗಿದೆ. ಕವಿಯ ಸ್ವರೂಪದಲ್ಲಿ ಕಾವ್ಯಕ್ಕೆ ಅತೀತವಾಗಿ ಇರುವ 'ದರ್ಶನವೇ' ಕಾವ್ಯ ಪ್ರತಿಮೆಯಲ್ಲಿ ರೂಪುವೆತ್ತು, ಅದರಲ್ಲಿ ಅಂತರ್ಯಾಮಿಯಾಗುವ ದೇವತಾತ್ಮ.

ಆ ಆತ್ಮವು ಅಂತರ್ಯಾಮಿಯಾಗದ ಪ್ರತಿಮೆ ಎಂತಹ ನಿಪುಣ ಕೃತಿಯಾಗಿದ್ದರೂ ಅದು ಬರಿಯ ವಿಗ್ರಹ ಮಾತ್ರ. ತನಗೇ ಚಿರಚೇತನವಿಲ್ಲದಿರುವಾಗ ತನ್ನೆಡೆಗೆ ಬರುವವರಿಗೆ ಅದೆಂತು ಚೈತನ್ಯದಾನ ಮಾಡಬಲ್ಲುದು? ಶಾಶ್ವತ ದರ್ಶನದಿಂದ ದೀಪ್ತವಾಗದ ಕೃತಿ ಗೊಂಬೆಯಂತೆ ತಾತ್ಕಾಲಿಕ ಮನರಂಜನೆಗೆ ಕಾರಣವಾಗಬಹುದಾದರೂ ಅದರಿಂದ ಶಾಶ್ವತ ಫಲವಾಗಲಿ ಚಿರಸ್ಫೂರ್ತಿಯಾಗಲಿ ಲಭಿಸುವುದಿಲ್ಲ. ಅಂತಹ ಕೃತಿ ಅಮರಕಾವ್ಯವಾಗಲಾರದು.

೩

ಕವಿಯ 'ದರ್ಶನ' ಎಂದರೇನು? ಅದು ಹೇಗೆ ಸಿದ್ಧವಾಗುತ್ತದೆ? ಅದು ಏಕೆ ಮತ್ತು ಹೇಗೆ ಕಾವ್ಯಪ್ರತಿಮೆಯಾಗಿ ಅವತರಿಸುತ್ತದೆ? ಎಂಬ ಪ್ರಶ್ನೆಗಳಿಗೆ ಉತ್ತರ ಹೇಳುವುದು ಪ್ರಕೃತ ಲೇಖನದ ಉದ್ದೇಶವಲಯಕ್ಕೆ ಹೊರಗಾಗುತ್ತದೆ. ಆದರೂ ಅರ್ಥವ್ಯಕ್ತಿ ಸುಲಭವಾಗುವುದಕ್ಕಾಗಿ ಸೂತ್ರಪ್ರಾಯವಾಗಿ ಎರಡು ಮಾತು ಹೇಳಿದರೆ ಅಪ್ರಕೃತವಾಗಲಿಕ್ಕಿಲ್ಲ.

ದರ್ಶನ ಎಂಬ ಪದಕ್ಕೆ ಅಪರೋಕ್ಷವಾಗಿ ಅನುಭವಿಸಿ ಕಾಣುವುದು ಎಂದರ್ಥ. ಬುದ್ಧಿ, ಚಿಂತನ, ತರ್ಕ, ಅಥವಾ ಅವರಿವರ ಹೇಳಿಕೆ ಇವು ಯಾವ ಉಪಾಧಿಗಳೂ ಇಲ್ಲದೆ ನೇರವಾಗಿ ಗ್ರಹಿಸುವ ಶಕ್ತಿ 'ದರ್ಶನ'. 'ದರ್ಶನ'ದ ತರುವಾಯ 'ಚಿಂತನ'. 'ಚಿಂತನದ'ದ ತರುವಾಯ 'ವರ್ಣನ'. ಸಹೃದಯ ಚಿತ್ತವಿಕಾಸನ ಕ್ರಮವು ವರ್ಣನದಿಂದ ಚಿಂತನಕ್ಕೂ ಚಿಂತನದಿಂದ 'ದರ್ಶನ'ಕ್ಕೂ ಏರುತ್ತದೆ. ಕವಿಯ ಅವರೋಹಣ ಮುಖವಾದ ಚಿದ್‌ವಿಕಾಸನ ಕ್ರಮವು ದರ್ಶನದಿಂದ ಚಿಂತನಕ್ಕೂ ಚಿಂತನದಿಂದ ವರ್ಣನಕ್ಕೂ ಇಳಿಯುತ್ತದೆ: ಎಂದರೆ, ಅವತರಿಸುತ್ತದೆ.

ಕವಿಗೂ ಅವರೋಹಣಕ್ಕೆ ಮೊದಲು ಆರೋಹಣವುಂಟು. ಜನ್ಮವೆತ್ತಿದ ಮೊದಲುಗೊಂಡು ಸುತ್ತಣ ಜನರಿಂದ, ಸನ್ನಿವೇಶಗಳಿಂದ, ಘಟನಾ ಪರಂಪರೆಗಳಿಂದ, ಪ್ರಕೃತಿಯಿಂದ, ಪುಸ್ತಕಗಳಿಂದ, ತನ್ನಲ್ಲಿಯೇ ಅಂತರ್ಗತವಾಗಿದ್ದು ಹೊರಗಣ ಘರ್ಷಣ ನಿಮಿತ್ತ ಮಾತ್ರದಿಂದ ಬಿರಿದೊಡೆದು ಹೊಳೆಯುವ ಆತ್ಮಾನುಭವಗಳಿಂದ ಅವನು ಅಸಂಖ್ಯ ಸಂಸ್ಕಾರಗಳನ್ನು ಪಡೆಯುತ್ತಾನೆ. ಆ ಸಂಸ್ಕಾರ ಸಮಷ್ಟಿಯ ಫಲರೂಪವಾಗಿಯೆ ಅವನ 'ದರ್ಶನ' ಸಿದ್ಧವಾಗುತ್ತದೆ.*

---

* ಇಲ್ಲಿ ಅವನ ಪೂರ್ವಜನ್ಮ ಸಂಸ್ಕಾರಗಳ ಪ್ರಚೋದನೆಯನ್ನೂ ಪುನರ್‌ಜನ್ಮೋದ್ದೇಶಗಳ ಆಕರ್ಷಣೆಯನ್ನೂ ನಾವು ತತ್ವದ ಮಟ್ಟಿಗಾದರೂ ಗಮನಿಸಬೇಕಾಗುತ್ತದೆ. ಅಷ್ಟೆ. ಸಿದ್ಧಪುರುಷನ ಪ್ರತಿಬೋಧ ಜ್ಞಾನವಿಲ್ಲದ ಸಾಹಿತ್ಯ ಸಮಾಲೋಚಕನ ಶಕ್ತಿಗೆ ಅದು ಮೀರಿರುವುದರಿಂದ ಗಮನಿಸುವುದಕ್ಕಿಂತಲೂ ಹೆಚ್ಚಿನ ಪ್ರಯೋಜನ ಪಡೆಯುವುದು ಸಾಧ್ಯವಲ್ಲ.

ಕವಿ ತಾನು ಏರಿ ಮುಟ್ಟಿದ 'ದರ್ಶನ'ವನ್ನು ಇಳಿದು ಕಟ್ಟುತ್ತಾನೆ. ಉಪನಿಷತ್ತಿನ ಮಾತುಗಳನ್ನು ಉಪಯೋಗಿಸುವುದಾದರೆ, 'ಸ್ವಯಂಭು'ವಾದ ಕವಿ 'ಮನೀಷಿ'ಯಾಗಿ 'ಪರಿಭು'ವಾಗುತ್ತಾನೆ. ದರ್ಶನವು ಚಿಂತನದಿಂದ ವರ್ಣನಕ್ಕಿಳಿಯುತ್ತದೆ.* ಕಾವ್ಯವನ್ನು ಕಟ್ಟುವ ಕಾರ್ಯದಲ್ಲಿ ಚಿಂತನ ಮತ್ತು ವರ್ಣನಾಂಶಗಳಾದ ತನ್ನ ವಿದ್ಯೆ ಬುದ್ಧಿ ಅಧ್ಯಯನ ಅಭ್ಯಾಸ ಮತ ದೇಶ ಕಾಲ ಇತ್ಯಾದಿಗಳೆಲ್ಲವನ್ನೂ ವಿನಿಯೋಗಿಸುತ್ತಾನೆ. ಆದರೂ ಅವೆಲ್ಲವೂ ಅವನ 'ದರ್ಶನ'ದ ಅಧೀನವಾಗಿಯೇ ಇದ್ದುಕೊಂಡು ಅದರ ಅಭಿವ್ಯಕ್ತಿಗಾಗಿ ಅದಕ್ಕಾಗಿಯೆ ದುಡಿಯುತ್ತವೆ. ಅದರ ಚೇತನವೆ ಅವುಗಳಿಗೆ ಪ್ರಾಣ. ಅದರ ಕಾಂತಿಯೆ ಅವುಗಳಿಗೆ ಕಣ್ಣು. ಅವುಗಳ ನಾಡೀಸ್ಪಂದನವೂ ಕವಿಯ 'ದರ್ಶನ'ದ ಶ್ವಾಸೋಚ್ಛ್ವಾಸದ ಲಯಗತಿಯನ್ನೇ ಅನುಸರಿಸುತ್ತದೆ. ಕೃತಕವೆಂದು ನಮಗೆ ತೋರಬಹುದಾದ—ತಾನು ಪ್ರಯತ್ನಪೂರ್ವಕವಾಗಿ ಸಂಪಾದಿಸಿದ—ವಿದ್ಯೆ ಬುದ್ಧಿ ಆಲೋಚನೆ ಅಭಿರುಚಿಗಳನ್ನು ಅವನು ಇಚ್ಛಾಪೂರ್ವಕವಾಗಿ ಉಪಯೋಗಿಸಿದರೂ, ಅವುಗಳೂ ಮೊತ್ತದಲ್ಲಿ ಅವನ ಸಂಸ್ಕಾರ ಸಮಷ್ಟಿಯ ಮೇಲೆಯೆ ನಿಲ್ಲುವುದರಿಂದ ಅವನ ಆತ್ಮದ ಸಮಗ್ರ 'ದರ್ಶನ'ದ ವಿಧೇಯಕರಣಗಳಾಗುತ್ತವೆಯೇ ಹೊರತು ಅತಂತ್ರವಾಗಿ ನಿಲ್ಲುವುದಿಲ್ಲ. ಅವುಗಳ ಸಂಪೂರ್ಣ ಸ್ವಾತಂತ್ರ್ಯ ಎಂಬುದು ಭ್ರಾಂತಿಮೂಲವಾದ ಒಂದು ಭಾವ ವೈಖರಿಯೆ ಹೊರತು ವಾಸ್ತವಾಂಶವಾಗುವುದಿಲ್ಲ.

ಕವಿಯ ಕಾವ್ಯಕೃತಿಯನ್ನು ಪರಿಶೀಲಿಸುವಾಗ ಅವನು ತರ್ಕಪೂರ್ವಕವಾಗಿ ಒಪ್ಪಿರುವ ತತ್ತ್ವಗಳು ನಮಗೆ ಮಾನ್ಯವಾದರೂ ಗೌಣ. ಏಕೆಂದರೆ ಕಾವ್ಯವು ಮೂಲದಲ್ಲಿ ಬುದ್ಧಿಯ ಕರ್ಮವಲ್ಲ. ಬುದ್ಧಿಯನ್ನೂ ನಿರ್ಣಯಿಸಿ ನಡಸುವ 'ದರ್ಶನ'ದ ಕರ್ಮ. ಎಂದರೆ, ಕೃತಿಯಲ್ಲಿ ಅಭಿವ್ಯಕ್ತವಾಗುವ 'ದರ್ಶನ'ದ ಪೂರ್ಣಜ್ಞಾನ ಕವಿಗೆ ಬುದ್ಧಿಪೂರ್ವಕವಾಗಿರಬಹುದು ಅಥವಾ ಇರದಿರಬಹುದು. ಕವಿಯ ಜೀವನದ ಖಚಿತವಾದ ಮತ್ತು ಸಂಪೂರ್ಣವಾದ ಪರಿಚಯ ಇಲ್ಲದಿರುವಾಗ (ಅದು ಕವಿಗೇ

---

* ಕವಿಯ 'ದರ್ಶನ' ಒಂದು 'ನಿದರ್ಶನ'ದಿಂದಲೇ 'ಪ್ರದರ್ಶನ'ಗೊಳ್ಳುತ್ತದೆ. ಕವಿ ಆಯುವ 'ನಿದರ್ಶನ' ಕಾಲ ದೇಶ ಪರಿಸ್ಥಿತಿಯ ಮೇಲೆ ನಿಲ್ಲುತ್ತದೆ. ಮಿಲ್ಟನ್ ಬೈಬಲ್ ಕಥೆಯನ್ನು ಆರಿಸಿದರೆ ಕಾಳಿದಾಸ ರಘುವಂಶದ ಕಥೆಯನ್ನು ಆರಿಸುತ್ತಾನೆ; ನಾರಣಪ್ಪ ಭಾರತದ ಕಥೆಯನ್ನು ಆರಿಸುತ್ತಾನೆ. ಬೇರೆ ಬೇರೆ ಕವಿಗಳ ಮೂಲ 'ದರ್ಶನ'ಗಳು ತತ್ತ್ವತಃ ಕೊಂಚ ಹೆಚ್ಚು ಕಡಮೆ ಒಂದೇ ಆಗಿದ್ದರೂ 'ನಿದರ್ಶನ'ಗಳು ಅವರವರ ಕಾಲ, ದೇಶ, ಮತ, ಸಂಸ್ಕೃತಿ, ಇವುಗಳಿಗನುಸಾರವಾಗಿ ಬಹಳಮಟ್ಟಿಗೆ ಬೇರೆಯಾಗುತ್ತವೆ. ಕೃತಿರೂಪದಲ್ಲಿ ಮೈದೋರುವ 'ಪ್ರದರ್ಶನ'ಗಳೋ ಭಾಷೆ, ಲಿಪಿ, ವ್ಯಾಕರಣ, ಅಲಂಕಾರ, ಛಂದಸ್ಸು ಮುಂತಾದ ಗಣನೆಯಿಲ್ಲದ ಉಪಾಧಿಗಳಿಗೆ ಒಳಗಾಗಿ ಸಂಪೂರ್ಣವಾಗಿ ಭಿನ್ನವಾಗುತ್ತವೆ.

ಅಗಮ್ಯವಾಗಿರುವಾಗ ಇತರರಿಗೆ ಇನ್ನೂ ಅಗಮ್ಯ.) ನಾವು ಅವನ ಕೃತಿಯಿಂದಲೇ ಅವನ 'ದರ್ಶನ'ಕ್ಕೆ ಹೋಗಬೇಕಾಗುತ್ತದೆ. ಅವನ ಕೃತಿಪ್ರತಿಮೆ ಅವನ 'ದರ್ಶನ'ಕ್ಕೆ ಅನುರೂಪಿ. ಆದ್ದರಿಂದ ಅದಕ್ಕೆ ಸಾಕ್ಷಿ. ಅವನ 'ದರ್ಶನ'ಕ್ಕೆ ಅವನ ಆತ್ಮಸಿದ್ಧಿ ಅಧಾರ. ಆ ಆತ್ಮಸಿದ್ಧಿ ಅಥವಾ ಸಾಕ್ಷಾತ್ಕಾರ ಎಷ್ಟು ಹಿರಿದಾಗಿದ್ದರೆ ಅವನ ಕೃತಿ ಅಷ್ಟು ಮಹತ್ತಾಗುತ್ತದೆ. 'ದರ್ಶನ'ದ ಔನ್ನತ್ಯ ಕೃತಿಯಲ್ಲಿ ಶಿರವೆತ್ತಿ ಗಗನಚುಂಬಿಯಾಗುತ್ತದೆ. 'ದರ್ಶನ'ದ ವೈಶಾಲ್ಯ ಕೃತಿಯಲ್ಲಿ ಮೈದೋರಿ ವಿಶ್ವ ವ್ಯಾಪಿಯಾಗುತ್ತದೆ. ಕವಿಯ 'ದರ್ಶನ'ವು 'ವಿರಾಟ್' ಆದರೆ ಅವನ ಕೃತಿಯೂ 'ವಿರಾಟ್' ಆಗುತ್ತದೆ. ಕವಿಯ ವಿರಾಡ್ದರ್ಶನವು ಕೃತಿಯ ವಿರಾಡ್ ಪ್ರತಿಮೆಯಲ್ಲಿ ಅವತಾರ ತಾಳುತ್ತದೆ.

೪

ಮೇಲೆ ಪ್ರತಿಪಾದಿತವಾಗಿರುವ ಸಿದ್ಧಾಂತಕ್ಕೆ ಒಂದು ನಿದರ್ಶನವಾಗಿ ಕಾಳಿದಾಸನನ್ನು ಕವಿಯನ್ನಾಗಿಯೂ ಶಾಕುಂತಲವನ್ನು ಕವಿಕೃತಿಯನ್ನಾಗಿಯೂ ತೆಗೆದುಕೊಂಡು ಪರಿಶೀಲಿಸಿದರೆ ನಮ್ಮ ಆಶಯ ಇನ್ನೂ ವಿಶದವಾಗಿ ಸಾರ್ಥವಾಗುತ್ತದೆ.

ಶಾಕುಂತಲ ನಾಟಕ ಯಥಾರ್ಥವೆಂದೂ ವಾಸ್ತವವೆಂದೂ ಕರೆಯಿಸಿಕೊಳ್ಳುವ ಸ್ಥೂಲ ಲೋಕದ 'ಪ್ರತಿಕೃತಿ' ಅಲ್ಲ. ನಾಟಕದ ತುಂಬ ಅಲ್ಲಲ್ಲಿ ಬರುವ ಅಲೋಕ ವ್ಯಕ್ತಿಗಳನ್ನೂ ಅಲೌಕಿಕ ಘಟನೆಗಳನ್ನೂ ಬಿಟ್ಟು ಲೋಕಧರ್ಮಿಯಾದ ವ್ಯಾಪಾರಗಳನ್ನೇ ಪರಿಶೀಲಿಸಿದರೂ ಅದು ಸ್ಥೂಲಲೋಕದ ಪ್ರತಿಕೃತಿ ಅಲ್ಲವೆಂಬುದು ಭಾಸವಾಗುತ್ತದೆ. ಪಾಶ್ಚಾತ್ಯ ವಿಮರ್ಶಕರು 'ರಿಯಲಿಸ್ಟಂ' ಎಂದು ಕರೆಯುವ ಸಾಹಿತ್ಯ ಜಾತಿಗೆ ಅದು ಸೇರುವುದಿಲ್ಲ.

'ಪ್ರತಿಕೃತಿ'ಯ ದೃಷ್ಟಿಯಿಂದ ನೋಡಿದರೆ ದುಷ್ಯಂತನ ಬೇಟೆ ನಗೆಗೆ ಈಡಾಗುತ್ತದೆ. ಕುದುರೆದೇರಿನ ಮೇಲೆ ಕುಳಿತು ಕಾಡಿನಲ್ಲಿ ಮಿಗಗಳನ್ನು ಅಟ್ಟುವುದಾದರೂ ಹೇಗೆ? ಇಂದ್ರಸಾರಥಿಯಾದ ಮಾತಲಿ ನಡಸುವ ದೇವರಥಕ್ಕಾದರೆ ಸಾಧ್ಯ. ಆದರೆ ಪ್ರಥಮಾಂಕದಲ್ಲಿ ಬರುವುದು ದೇವರಥವಲ್ಲ; ಮನುಷ್ಯ ಸಾರಥಿ, ಮಾನುಷ ರಥ, ಮರ್ತ್ಯಾಶ್ವಗಳು.

ಓಡುತ್ತಿರುವ, ಅದರಲ್ಲಿಯೂ ಪ್ರಾಣಭಯದಿಂದ ಓಡುತ್ತಿರುವ ಜಿಂಕೆಯನ್ನು ಸಂಹರಿಸುವ ಒಂದೇ ಮನಸ್ಸಿನಿಂದ ಹೆದೆಗೆ ಬಾಣಹೂಡಿ ಕಣ್ಣುನಟ್ಟು ಅಟ್ಟುತ್ತಿರುವ ಬೇಟೆಗಾರನು ತತ್ಕಾಲದಲ್ಲಿಯೆ ಸೌಂದರ್ಯೋಪಾಸಕನಾಗಿ ಅದನ್ನು ಬಣ್ಣಿಸುವುದು ಅಸಂಭವ, ಅಸಾಧ್ಯ. ಶಾಂತವಾಗಿ ನಿಂತುನೋಡುವ ಮೂರನೆಯವನು ಬೇಕಾದರೆ ಆ ಕೆಲಸವನ್ನು ಅಚ್ಚುಕಟ್ಟಾಗಿ ನೆರವೇರಿಸಬಹುದು. 'ಪ್ರಯತ್ನ ಪ್ರೇಕ್ಷಣೀಯ

ಎಂದು ದುಷ್ಯಂತನೇ ಹೇಳುವುದನ್ನು ಗಮನಿಸಿದರೆ ಇಲ್ಲಿ ಸಾರಂಗವನ್ನು ಸಮೀಕ್ಷಿಸುತ್ತಿರುವುದು ಬೇಟೆಗಾರನ ಕಣ್ಣಲ್ಲ, ಕವಿಯ ಕಲ್ಪನಾಕ್ಷಿ ಎಂಬ ಇತ್ಯರ್ಥ ಅನಿವಾರ್ಯವಾಗುತ್ತದೆ. ತಪ್ಪಿದರೆ, ಆ ಸಮಯದಲ್ಲಿ ರಥದ ವೇಗವನ್ನು ಅತಿಮಂದ ಮಾಡಿದ್ದನೆಂದೋ ಅಥವಾ ನಿಲ್ಲಿಸಿದ್ದನೆಂದೋ ಕಷ್ಟಕಲ್ಪನೆಗೆ ಕೈಹಾಕಬೇಕಾಗುತ್ತದೆ.

ಮುಂದೆ ಸೂತನು ರಥಜವವನ್ನು ಬಣ್ಣಿಸುವಾಗಲೂ ಮೂರನೆಯ ಕಣ್ಣಿನ ಕೆಲಸವನ್ನೇ ಕಾಣುತ್ತೇವೆ. "ನಿಷ್ಕಂಪ ಚಾಮರಶಿಖಾ ನಿಭೃತೋರ್ಧ್ವ ಕರ್ಣಾಃ" ಎಂಬುದು ಮಾತ್ರ ಸಾರಥಿಯ ನೇತ್ರಮಾತ್ರ ದೃಷ್ಟಿಗೆ ಸಾಧ್ಯ. "ಆತ್ಮೋದ್ಧತೈರಪಿ ರಜೋಭಿರಲಂಘನೀಯಾ" ಎಂಬುದು ಕಲ್ಪನಾಕ್ಷಿಗೆ ಮಾತ್ರ ಸಾಧ್ಯ. ಅಥವಾ ದೂರದಲ್ಲಿ ನಿಂತು ನೋಡುವ ಅನ್ಯನಿಗೆ ಸಾಧ್ಯ.

ಹೀಗೆ 'ಪ್ರತಿಕೃತಿ'ಯ ದೃಷ್ಟಿಗೆ ಅಸಾಧ್ಯವೂ ಅಸಂಭವವೂ ಆಗಿ, ಪೂರ್ಣದೃಷ್ಟಿಯ ಪ್ರತಿನಿಧಿಯಾದ ಕವಿಯ ಕಲ್ಪನಾಕ್ಷಿಗೆ ಮಾತ್ರ ಸುಲಭಸಾಧ್ಯವಾದ ವ್ಯವಹಾರಗಳೂ ವ್ಯಾಪಾರಗಳೂ ವರ್ಣನೆಗಳೂ ನಾಟಕದಲ್ಲಿ ಮತ್ತೆ ಮತ್ತೆ ವ್ಯದೋರುತ್ತವೆ. 'ಪ್ರತಿಕೃತಿ'ಯ ದೃಷ್ಟಿಗೆ ದಾಸನಾದ ಕಲ್ಪನಾಕೃಪಣನ ಆಲೋಚನೆಗೆ ಅಸ್ವಾಭಾವಿಕವಾಗಿ ತೋರಿದರೂ ಅವು ತಮ್ಮ ಅಸಾಧಾರಣ ಸೌಂದರ್ಯದಿಂದಲೂ ಸಂಮೋಹಕ ಶಕ್ತಿಯಿಂದಲೂ ಶಬ್ದಮಾಧುರ್ಯದಿಂದಲೂ ಅವನ ಹೃದಯವನ್ನು ವಶಪಡಿಸಿಕೊಂಡು ರಸದಾನಮಾಡುವುದರಿಂದ ಅವನಿಗೆ ತಮ್ಮ 'ಕೃತಕತೆ' ತಲೆಯೊಳಗೆ ಸುಳಿಯುವುದಕ್ಕೂ ಅವಕಾಶ ಕೊಡುವುದಿಲ್ಲ. ಇದರಿಂದ ವಾಚಕನು ಮೋಸಹೋಗುತ್ತಾನೆ ಎಂದರ್ಥವಲ್ಲ. ಮೋಸಹೋಗುವುದರಿಂದ ಪಾರಾಗುತ್ತಾನೆ ಎಂದರ್ಥ. ಪ್ರತಿಮಾಪ್ರಪಂಚದ ರಸಸುಖದಿಂದ ತನ್ನನ್ನು ವಂಚಿತನನ್ನಾಗಿ ಮಾಡುವ, 'ಪ್ರತಿಕೃತಿ'ಯೇ ಸರ್ವಸ್ವ ಎಂಬ, ಕುಬ್ಜಮತಿಯಿಂದ ಪಾರಾಗುತ್ತಾನೆ ಎಂದರ್ಥ. ಕಲ್ಪನಾದಾರಿದ್ರ್ಯದಿಂದ ವಿಮುಕ್ತನಾಗುತ್ತಾನೆ ಎಂದರ್ಥ. ಪ್ರತಿಕೃತಿಯ ಜಡಲೋಕದಿಂದ ಮೇಲೇರಿ ಪ್ರತಿಮಾಲೋಕದ ಚೈತನ್ಯದಲ್ಲಿ ಕಣ್ದೆರೆಯುತ್ತಾನೆ ಎಂದರ್ಥ.

ಶಾಕುಂತಲ ನಾಟಕ 'ಪ್ರತಿಕೃತಿ'ಯಲ್ಲ; ಅದೊಂದು 'ಪ್ರತಿಮಾ' ಜಗತ್ತು. ಕವಿಯ 'ದರ್ಶನ' ಅಲ್ಲಿ ಆ ಪ್ರತಿಮಾ ರೀತಿಯಲ್ಲಿ ಅವತರಿಸಿದೆ. ಕಾಳಿದಾಸನೇ ಹಾಗೆಂದು ಬುದ್ಧಿಪೂರ್ವಕವಾಗಿ ಅರಿತಿದ್ದನೋ ಇಲ್ಲವೋ ಎಂಬುದು ಇಲ್ಲಿ ನಮಗೆ ಅಪ್ರಕೃತ. ಅವನು ಅರಿತಿರಲಿ, ಬಿಡಲಿ; ಅವನು ಅಸ್ವತಂತ್ರ.[1] ಎಲ್ಲ ಉತ್ತಮ ಕವಿಗಳ ಪ್ರತಿಭೆಯಂತೆ ಅವನ ಪ್ರತಿಭೆಯೂ ಪ್ರತಿಮಾ ರಚನೆಯಿಂದಲೇ ತನ್ನ ಗುರಿಯನ್ನು

[1] "ಪ್ರತಿಮಾ ಮತ್ತು ಪ್ರತಿಕೃತಿ" ಎಂಬ ಲೇಖನವನ್ನು ನೋಡಿ.

ಸಾಧಿಸುತ್ತದೆ. ಅವನಿಗೆ ಭೂಮಿ ಬೇಕಾಗುವುದೂ ಆಕಾಶವಿಹಾರಕ್ಕಾಗಿ. ಅವನ 'ದರ್ಶನ'ದಲ್ಲಿ ಮರ್ತ್ಯದ ಅಸ್ತಿತ್ವಕ್ಕೆ ಸಾರ್ಥಕತೆ ಲಭಿಸುವುದು ಅಮರ್ತ್ಯದಲ್ಲಿಯೆ. ಮರ್ತ್ಯವು ಅಮರ್ತ್ಯದ ಶಿಶು. ಮರ್ತ್ಯಕ್ಕೂ ಅಮರ್ತ್ಯಕ್ಕೂ ಇರುವ ಸಂಬಂಧ ಶಕುಂತಲೆಗೂ ಮೇನಕೆಗೂ ಇರುವ ಸಂಬಂಧದಂತೆ ಪ್ರೇಮಮಯವಾದುದು. ಉದಾಸೀನವಾಗಿಯೂ ತಟಸ್ಥವಾಗಿಯೂ ಒಮ್ಮೊಮ್ಮೆ ಕ್ರೂರವಾಗಿಯೂ ತೋರಿದರೂ ಅಮರ್ತ್ಯವು ಮರ್ತ್ಯವನ್ನು ನಿರ್ಲಕ್ಷಿಸುವುದಿಲ್ಲ. ಪರೀಕ್ಷಿಸಿದರೂ ಶಿಕ್ಷಿಸಿದರೂ ಮರ್ತ್ಯದ ರಕ್ಷಣೆಯ, ಪೋಷಣೆಯ ಮತ್ತು ಉದ್ಧಾರದ ಭಾರವನ್ನು ಅಮರ್ತ್ಯವು ತಾಯಿಯ ಔದಾರ್ಯದಿಂದ ಅವಶ್ಯವಾಗಿ ವಹಿಸುತ್ತದೆ. ಹಿಂದೆ ಮುಂದೆ ಮೇಲೆ ಕೆಳಗೆ ಸುತ್ತಲೂ ಮರ್ತ್ಯವನ್ನು ಆವರಿಸಿ, ಅದಕ್ಕೆ ಮಡಿಲೂ ತೊಟ್ಟಿಲೂ ಆಗಿದೆ ಅಮರ್ತ್ಯ. ಮರ್ತ್ಯವು ಸರ್ವದಾ ಅಮರ್ತ್ಯದ ಆಲಿಂಗನದಲ್ಲಿದೆ. ಮರ್ತ್ಯದ ಮೊಟ್ಟೆಯ ಮೇಲೆ ಅಮರ್ತ್ಯವು ಸದಾ ಕಾವುಕೂತಿದೆ, ತನ್ನ ಉದ್ದೇಶದ ಮರಿಯ ಮೈದೋರಿಕೆಗಾಗಿ. ಕಾವ ಕೂತಿರುವುದು ಮಾತ್ರವಲ್ಲ, ಕಾವಲೂ ಕೂತಿದೆ. ತಾಯಿಯ ರೂಪದಲ್ಲಿ ಕಾವು ಕೂತಿದ್ದರೆ ಧರ್ಮದ ರೂಪದಲ್ಲಿ ಶಿಕ್ಷೆಯ ರೂಪದಲ್ಲಿ ಕಾವಲೂ ಕೂತಿದೆ.

೫

ಕಾಳಿದಾಸನ ಪ್ರತಿಭೆ ದುಷ್ಯಂತನು ಬೆನ್ನಟ್ಟಿದ ಸಾರಂಗದಂತೆ 'ವಿಯತಿ ಬಹುತರಂ ಸ್ತೋಕಮುರ್ವ್ಯಾಂ ಪ್ರಯಾತಿ.' ಮರ್ತ್ಯದಲ್ಲಿ ಜನ್ಮವೆತ್ತಿ ಮೃತ್ ಭಾರದಿಂದ ಜಗ್ಗುತ್ತಿರುವ ಅದಕ್ಕೆ ಉರ್ವೀತಲವೇನೋ ಬೇಕು; ವಿಯತ್ತಲ ವಿಹಾರಕ್ಕಾಗಿ. ಬಹುಪಾಲಿನ ವಿಯತ್ ಸಂಚಾರಕ್ಕಾಗಿ ಇನಿತಿನಿತೆ ಮೃತ್‌ಸ್ಪರ್ಶ. ಅದು ಯಾವ ಒಂದು ಲೋಕದಲ್ಲಿಯೂ ಪಟ್ಟುಹಿಡಿದು ವ್ಯವಹರಿಸುವುದಿಲ್ಲ. ಸಾನುಮತಿಯಲ್ಲಿ, ಮಾರೀಚಾಶ್ರಮದಲ್ಲಿ, ದುರ್ವಾಸ ಶಾಪದಲ್ಲಿ, ಶಕುಂತಲೆಯನ್ನು ಎತ್ತಿಕೊಂಡು ಹೋಗುವ ಜ್ಯೋತಿಯಲ್ಲಿ—ನಾಕಟದ ತುಂಬ ಲೋಕಾಂತರಗಳ ಪ್ರತಿನಿಧಿಗಳಾಗಿ ಸಾಕ್ಷಿಗಳ ಸಾಲೆ ನಿಂತಿದೆ! ಕಾಳಿದಾಸನ ಪ್ರತಿಭೆ ಬಹುಲೋಕ ವ್ಯವಹಾರಿ; ಬಹು ಭೂಮಿಕಾ ಸಂಚಾರಿ; ವಿಧೇಯನಾದ ಪ್ರತೀಹಾರಿಯಂತೆಯೂ ಸಮರ್ಥನಾದ ರಾಯಭಾರಿಯಂತೆಯೂ ಕವಿಯ ವಿರಾಡ್‌ದರ್ಶನಕ್ಕೆ ಅದು ಸೇವೆ ಸಲ್ಲಿಸುತ್ತದೆ.

ಕಾವ್ಯವು ಪ್ರತಿಮೆ ಎಂದ ಮಾತ್ರಕ್ಕೆ ಕವಿಕೃತಿ ಹುಸಿಯಾಗುವುದಿಲ್ಲ. ಕವಿಯ 'ದರ್ಶನ'ದ ಸತ್ಯವೇ ಕೃತಿಪ್ರತಿಮೆಗೆ ಹೇತುವಾಗಿ ಮೂರ್ತಿಮತ್ತಾಗುವುದರಿಂದ ಆ 'ದರ್ಶನದ ಸತ್ಯ ಪ್ರತಿಮೆಯದೂ ಆಗುತ್ತದೆ. ಅದರ ಹೊರರೂಪವು ಒಳಗಣ ಸತ್ಯಕ್ಕಿಂತಲೂ ಅಶಾಶ್ವತವಾಗಿರಬಹುದು; ಆದರೆ ಅಸತ್ಯವಲ್ಲ. ಆ ಕಾವ್ಯಪ್ರತಿಮೆ

ಯನ್ನು ಏಕಾಖಂಡವಾಗಿ ಸ್ವೀಕರಿಸಿ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿಯ ಪ್ರಯೋಜನವೇನು ಎಂಬುದನ್ನು ಪರಿಶೀಲಿಸುವುದು ನಮ್ಮ ಮುಂದಿನ ಕೆಲಸ.

ಸಮಗ್ರ ಕಾವ್ಯವೇ ಪ್ರತಿಮೆಯಾಗಿರುವಾಗ ಅದರ ಒಂದೊಂದು ಅವಯವವೂ ಆ ಪ್ರತಿಮಾಲಕ್ಷಣದಿಂದ ಬದ್ಧ. ಒಂದೊಂದು ಅವಯವವನ್ನೂ ಸಮಗ್ರ ಪ್ರತಿಮಾ ದೃಷ್ಟಿಯಿಂದ ಪರಿಕಿಸಿದರೆ ಅದರದರ ಪೂರ್ಣಾರ್ಥವೂ ಪೂರ್ಣಪ್ರಯೋಜನವೂ ತಿಳಿಯುವುದಲ್ಲದೆ ಪರಸ್ಪರ ಸಾಪೇಕ್ಷತ್ವವೂ ಬೋಧವಾಗುತ್ತದೆ. ಒಂದಕ್ಕೊಂದು ಕಾರಣವಾಗಿ, ಒಂದಕ್ಕೊಂದು ಕಾರ್ಯವಾಗಿ, ಪೂರ್ಣದ ಪ್ರಯೋಜನವು ಒಂದೊಂದು ಅಂಶದಲ್ಲಿಯೂ ಪೂರ್ಣವಾಗಿರುವುದೂ, ಒಂದೊಂದು ಅಂಶದ ಪುರುಷಾರ್ಥದಲ್ಲಿ ಪೂರ್ಣದ ಪುರುಷಾರ್ಥವು ಸಾರತಃ ಪೂರ್ಣವಾಗಿಯೇ ಇರುವುದೂ ವೇದ್ಯವಾಗುತ್ತದೆ.

ಶಾಕುಂತಲ ನಾಟಕದಲ್ಲಿ ಪೂರ್ಣದೃಷ್ಟಿಗೆ ಪ್ರತಿಮಾ ಸ್ವರೂಪವಾಗಿರುವ ವ್ಯಕ್ತಿ ಕಣ್ವಮಹರ್ಷಿ. ಕವಿಗೂ ಈ ವಿಮರ್ಶಜ್ಞಾನದೃಷ್ಟಿ ಬುದ್ಧಿಪೂರ್ವಕವಾಗಿ ಇದ್ದಿರಬಹುದು. ಇತ್ತು ಎಂದು ಊಹಿಸುವುದಕ್ಕೆ ನಾಟಕದಲ್ಲಿ ಸಾಕಾದಷ್ಟು ಕಾರಣಗಳಿವೆ.* ಆದರೆ ಈ ಲೇಖನ ಪ್ರತಿಪಾದಿಸುತ್ತಿರುವ ಸಿದ್ಧಾಂತಕ್ಕೆ ಕವಿಗೆ ಆ ವಿಮರ್ಶದೃಷ್ಟಿ ಇರಲಿಲ್ಲ ಎಂಬ ಇತ್ಯರ್ಥದಿಂದಲೂ ವಿಘಾತಿಯೊದಗುವುದಿಲ್ಲ.

ಕಣ್ವಮಹರ್ಷಿ ತ್ರಿಕಾಲಜ್ಞಾನಿ. ತುಂಬಿಯೂ ತುಳುಕದ ಸಮುದ್ರದಂತೆ ಗಂಭೀರವ್ಯಕ್ತಿ. ಮನುಷ್ಯಪ್ರಕೃತಿ ಸಹಜವಾದ ಆತನ ಶೋಕತಾಪಗಳೂ ಗಂಭೀರವಾಗಿ ವಂದ್ಯವಾಗಿವೆ. ಆತನು ಮಹರ್ಷಿಯಾಗಿ ಪೂರ್ಣದೃಷ್ಟಿಯ 'ದರ್ಶನ'ದ ವಿಜ್ಞಾನಿಯಾಗಿದ್ದರೂ ಅಂಶದೃಷ್ಟಿಯ ಮತ್ತು ಖಂಡದೃಷ್ಟಿಯ ಅವಿದ್ಯಾ ಲೀಲಾ ಭೂಮಿಕೆಗಳಲ್ಲಿ ಅಜ್ಞಾನಿಗಳ ಸಂಗದಲ್ಲಿ ಆಯಾ ಭೂಮಿಕೆಯ ಮರ್ಯಾದೆಗನುಸಾರ

* ವಿವಿಧ ಲೋಕಗಳ ಕಲ್ಪನೆಯಂತೆಯೆ ಆಯಾ ಲೋಕಗಳಿಗೆ ಅನ್ವಯಿಸುವ ವಿವಿಧವಾದ ಜ್ಞಾನಸ್ಥಿತಿಯ ಕಲ್ಪನೆಯೂ ಕಂಡುಬರುತ್ತದೆ. ಅಭಿಜ್ಞಾನ ದರ್ಶನಾನಂತರದಲ್ಲಿ ದುಷ್ಯಂತನು ಶಕುಂತಲೆಗಾಗಿ ಪರಿತಪಿಸುತ್ತಿರುವಾಗ ಅದನ್ನು ನೋಡಿ ಅಪ್ಸರೆಯಾದ ಸಾನುಮತಿ 'ಸಂಮೋಹಃ ಖಲು ವಿಸ್ಮಯನೀಯೋ ನ ಪ್ರತಿಬೋಧಃ' ಎಂದುಕೊಳ್ಳುತ್ತಾಳೆ. ದೇವತೆಯಾದ ಅವಳಿಗೆ ಪ್ರತಿಬೋಧ ಜ್ಞಾನವು ಸಹಜ ಮತ್ತು ಸ್ವಾಭಾವಿಕ. ಆದ್ದರಿಂದ ಚಕ್ರವರ್ತಿಯಾದರೂ ಮನುಷ್ಯಮಾತ್ರನಾದ ದುಷ್ಯಂತನಿಗೆ ಅಸಾಧ್ಯವಾದುದು ಅವಳಿಗೆ ಬಹು ಸುಲಭಸಾಧ್ಯವಾಗಿ ತಿಳಿಯುತ್ತದೆ. ಅವಳು ಎಲ್ಲಿರುವ ಯಾವುದನ್ನು ಬೇಕಾದರೂ ಅರಿಯಬಲ್ಲಳು. ಆ ಪ್ರತಿಬೋಧ ಜ್ಞಾನವಿಲ್ಲದೆ ಶಕುಂತಲೆಗಾಗಿ ಶಂಕಿಸುವ ದುಷ್ಯಂತನನ್ನು ಕಂಡು ಆಕೆಗೆ ವಿಸ್ಮಯ. ನಮಗೆ ದೇವತೆಯ ಪ್ರತಿಬೋಧ ಜ್ಞಾನವು ಹೇಗೆ ವಿಸ್ಮಯಕರವೋ ಹಾಗೆಯೇ ದೇವತೆಗೂ ತಾನೆಂದೂ ಅನುಭವಿಸದ ಈ ಮರ್ತ್ಯ ಸಹಜವಾದ ಸಮ್ಮೋಹಜ್ಞಾನದ ಕುರುಡು ವಿಸ್ಮಯಕರವಾಗುತ್ತದೆ.

ವಾಗಿ ವರ್ತಿಸುತ್ತಾನೆ. ಅವನ ಪೂರ್ಣದೃಷ್ಟಿ ಅಂಶದೃಷ್ಟಿಗಳನ್ನು ಇಲ್ಲಗೈದಿಲ್ಲ; ಮತ್ತು ಅಲ್ಲಗಳೆಯುವುದೂ ಇಲ್ಲ. ನಾಟಕಸಮಸ್ತವನ್ನೂ ಓದಿ, ಎಲ್ಲ ಘಟನಾ ಪರಂಪರೆಗಳನ್ನೂ ಅವುಗಳ ಪ್ರಯೋಜನವನ್ನೂ ವಿವರವಾಗಿ ಅರಿತವನು ಏಕಕಾಲದಲ್ಲಿ ಪ್ರೇಕ್ಷಕನೂ ಪಾತ್ರವೂ ಆಗಿ, ಅದು ನಾಟಕವೆಂಬುದನ್ನೂ ತಾವು ಪಾತ್ರಗಳೆಂಬು ದನ್ನೂ ಸಂಪೂರ್ಣವಾಗಿ ಮರೆತ ಇತರ ಪಾತ್ರಗಳೊಡನೆ ನಾಟಕಾಭಿನಯದಲ್ಲಿ ತೊಡಗುವಂತೆ ವ್ಯವಹರಿಸುತ್ತಾನೆ.

ಮೇಲಣ ಹೋಲಿಕೆಯನ್ನು ಗ್ರಹಿಸುವಾಗ ಮಾತ್ರ ಎಚ್ಚರಿಕೆ ಬೇಕು. ಕಣ್ವನ ಕಣ್ಣೀರು ನಾಟಕದ ಕಣ್ಣೀರಲ್ಲ. ಸಕ್ಕರೆಯ ವಿಭಜನೆಯನ್ನು ತಿಳಿದ ಮೇಲೆಯೂ ಭೌತವಿಜ್ಞಾನಿ ಅದರ ಸಿಹಿಯನ್ನು ಅನುಭವಿಸಲು ಪ್ರಕೃತಿವಶನಾಗಿಯೆ ಸಮರ್ಥ ನಾಗುತ್ತಾನೆ. ನಿತ್ಯದಲ್ಲಿ ಪ್ರತಿಷ್ಠಿತನಾದ ದಿವ್ಯವಿಜ್ಞಾನಿ ಲೀಲೆಯಲ್ಲಿ ವ್ಯವಹರಿಸುವ ಮತ್ತು ಅದರ ರಸಾನುಭವವನ್ನು ಸವಿಯುವ ಅಧಿಕಾರವನ್ನೂ ಸಾಮರ್ಥ್ಯವನ್ನೂ ಪ್ರಕೃತಿವಶವಾಗದೆಯೂ ಸ್ವವಶದಲ್ಲಿಯೆ ಇಟ್ಟುಕೊಳ್ಳುತ್ತಾನೆ.

ಏಳನೆಯ ಅಂಕದ ಕೊನೆಯಲ್ಲಿ ದಾಕ್ಷಾಯಣಿ ಶಕುಂತಲೆಯ ಮನೋರಥ ಸಂಪತ್ತನ್ನು ಕಣ್ವರಿಗೆ ಪರಿಚಾರಕಮುಖದಿಂದ ತಿಳಿಸಲು ಸೂಚಿಸಿದಾಗ ಮಾರೀಚ ಮಹರ್ಷಿಗಳು "ತಪಃ ಪ್ರಭಾವತ್ ಪ್ರತ್ಯಕ್ಷಂ ಸರ್ವಮೇವ ತತ್ರಭವತಃ" ಎನ್ನು ತ್ತಾರೆ. ಆದರೂ ಕಣ್ವರಿಗೆ ತಪಃಪ್ರಭಾವದಿಂದ ಎಲ್ಲವೂ ಪ್ರತ್ಯಕ್ಷವಾದಂತಿದ್ದರೂ ಲೋಕಮರ್ಯಾದೆಯಂತೆ ಇವರು ತಮ್ಮ ಶಿಷ್ಯನ ಕೈಲಿ ವರ್ತಮಾನ ಹೇಳಿಕಳಿಸು ತ್ತಾರೆ. ಕಣ್ವ ಮಾರೀಚರಿಬ್ಬರೂ ಪೂರ್ಣದೃಷ್ಟಿಯನ್ನು ಪಡೆದವರಾಗಿದ್ದರೂ ಅಂಶ ದೃಷ್ಟಿಯ ಮಂಗಳಕರವಾದ ಮರ್ಯಾದೆಯನ್ನು ಎಲ್ಲಿಯೂ ತಿರಸ್ಕರಿಸುವುದಿಲ್ಲ.

೬

ಶಕುಂತಲೆಗೆ ದಾರುಣದುಃಖದ ಪ್ರತ್ಯಕ್ಷಾನುಭವವಾಗುವುದು ನಾಟಕದ ಐದ ನೆಯ ಅಂಕದಲ್ಲಾದರೂ ಅದರ ದೀರ್ಘ ಛಾಯೆಯ ಮಬ್ಬು ಮೊದಲನೆಯ ಅಂಕಕ್ಕೂ ಹಬ್ಬಿದೆ. ಉಳಿದವರಾರಿಗೂ ಅದು ಕಾಣಿಸದಿದ್ದರೂ ಕಣ್ವರ ಬಗೆಗಣ್ಣಿಗೆ ಗೋಚರವಾಗಿದೆ. ಯಾವ ವಿಧಿ ತನ್ನ ಲೀಲಾರ್ಥವಾಗಿ ತನ್ನನ್ನು ಅರಿಯದ ದುಷ್ಯಂತನನ್ನು ಬೇಟೆಯ ನೆವದಿಂದ ಕಣ್ವಾಶ್ರಮಕ್ಕೆ ಸೆಳೆದೊಯ್ದಿತೋ ಆ ವಿಧಿ ತನ್ನನ್ನರಿತ ಋಷಿಯನ್ನೂ ಸೋಮತೀರ್ಥಕ್ಕೆ ಕರೆದಿದೆ. ಕಣ್ವರ ಪೂರ್ಣದೃಷ್ಟಿ ಮಗಳಿಗೆ ಮುಂದೆ ಬರಲಿರುವ ಸಂಕಟವನ್ನು ಗ್ರಹಿಸಿದೆ. ಅದು ಅನಿವಾರ್ಯ ಮತ್ತು ಆವಶ್ಯಕವೆಂಬುದನ್ನು ಮನಗಂಡಿದೆ. ಅವಿದ್ಯೆಯಲ್ಲಿ ತೊಳಲುತ್ತಿರುವ ಜೀವರ ಪೂರ್ಣಪ್ರಜ್ಞೆಯ ವಿಕಾಸನಕ್ಕೆ ಅಂತಹ ಅನುಭವಗಳು ಆವಶ್ಯಕವೆಂಬುದು ಅದಕ್ಕೆ

ಗೊತ್ತು. ಆದ್ದರಿಂದ ನಿವಾರಣಾರ್ಥವಾಗಿ ಅಲ್ಲದಿದ್ದರೂ, ಶಮನಾರ್ಥವಾಗಿ ವೈಖಾನಸನು ಹೇಳುವಂತೆ ಪ್ರತಿಕೂಲ ದೈವ ಶಮನಾರ್ಥವಾಗಿ, ಸೋಮತೀರ್ಥಕ್ಕೆ ಹೋಗುತ್ತಾರೆ. ಅವರು ಹಾಗೆ ಹೋದದ್ದೇ ಮುಂದೆ ಒದಗಿದ ಎಲ್ಲಾ ಹಾನಿಗೂ ಬೀಜಕಾರಣವಾದಂತೆ ನಮಗೆ ತೋರಬಹುದು. ವಾಸ್ತವಪ್ರಪಂಚದಲ್ಲಿ ಹಾಗಾಗುವುದೂ ವಿಧಿಯ ಸಂವಿಧಾನವೆ. ನಿಜವಾಗಿ ನೋಡಿದರೆ ಅದು ಕಾರಣವಾಗುವುದಿಲ್ಲ. ಕಾರಣ ಕೋಟಿಗಳ ಒಂದು ಕೊಂಡಿ ಅಥವಾ ಸ್ಪಂದನ ಮಾತ್ರವಾಗುತ್ತದೆ. ನಾಟಕವನ್ನು ಪೂರ್ಣವಾಗಿ ಅರಿತ ಪೂರ್ಣದೃಷ್ಟಿಗೆ ಕಣ್ವಮುನಿ ಆಶ್ರಮವನ್ನು ಬಿಟ್ಟು ಹಾಗೆ ಹೋಗಬೇಕಾದುದು ಒಂದು ಅವಶ್ಯವಾದ ಅಂಗವಾಗಿ ತೋರುತ್ತದೆ. ಅದೂ ವಿಧಿಯ ಇಚ್ಛೆಯ ಒಂದು ಶಕ್ತಿಸ್ನಾಯು. ಹಾಗಿರುವಾಗ ಯಾವ ಒಂದು ಘಟನೆಯನ್ನೂ ಅದರ ' ಒಟ್ಟಿ 'ನಿಂದ ಅಥವಾ ' ಸಮಷ್ಟಿ 'ಯಿಂದ ಬೇರ್ಪಡಿಸಿ ಅದನ್ನೇ ಕಾರಣವನ್ನಾಗಿ ಒಡ್ಡುವುದು ಸರಿಯಲ್ಲ. ಅದು ಖಂಡದೃಷ್ಟಿಯ ಅರ್ಧಸತ್ಯವಾಗುತ್ತದೆ.

ಚತುರ್ಥಾಂಕದಲ್ಲಂತೂ ಕಣ್ವರ ಪೂರ್ಣದೃಷ್ಟಿ ಸಂದೇಹಕ್ಕೆ ಅವಕಾಶವಿಲ್ಲದಂತೆ ಪ್ರಕಾಶಿತವಾಗಿದೆ. ಕವಿ ಪ್ರತಿಮೆಗಳ ಮೇಲೆ ಪ್ರತಿಮೆಗಳನ್ನೊಡ್ಡಿ ಅದನ್ನು ಸೂಚಿಸುತ್ತಾನೆ. ಅಶರೀರಿಯಾದ ಛಂದೋಮಯ ವಾಣಿಯಿಂದ ನಡೆದುದೆಲ್ಲ ಅವರಿಗೆ ಗೊತ್ತಾಗುತ್ತದೆ. ದುರ್ವಾಸ ಶಾಪವೂ ಆ ಅರಿವಿಗೆ ಹೊರತಲ್ಲ. ಸಾಮಾನ್ಯ ಸಂಸಾರದ ಅಜ್ಞಪಿತೃವಿನಂತೆ ವರ್ತಿಸುವುದಕ್ಕೆ ಬದಲಾಗಿ, ಲಜ್ಜೆಯಿಂದ ತಲೆ ತಗ್ಗಿಸಿದ ಮಗಳನ್ನು ಅಪ್ಪಿ ಕೊಂಡಾಡುತ್ತಾರೆ. ನಡೆದುದರ ವಿಚಾರವಾಗಿ, ಆಳವಾದ ಆಲೋಚನೆಗೆ ಅರ್ಹವಾಗುವಂತೆ, ತಮ್ಮ ವಿಮರ್ಶೆಯನ್ನು ಒಂದೆರಡು ಉಪಮಾನಗಳಿಂದ ಸೂಚಿಸುತ್ತಾರೆ. ಧೂಮಾಕುಲಿತ ದೃಷ್ಟಿ, ಯಜಮಾನ, ಪಾವಕ, ಆಹುತಿ ಬೀಳುವಿಕೆ, ದೈವವಶಾತ್—ಈ ಮಾತುಗಳಿಗೆ ಎಷ್ಟು ಧ್ವನಿ ತುಂಬಿದರೂ ತಡೆಯುತ್ತದೆ. ಬೆಂಕಿಯನ್ನೂ ಬೀಳುವಿಕೆಯನ್ನೂ ಸೂಚಿಸಿದರೂ ತುದಿಯಲ್ಲಿ ಒದಗುವ ಶ್ರೇಯಸ್ಸನ್ನೂ ಗಮನಿಸದೆ ಇಲ್ಲ: "ಸುಶಿಷ್ಯ ಪರಿದತ್ತಾ ವಿದ್ಯೇವಾಶೋಚನೀಯಾ ಸಂವೃತ್ತಾ," ಶಕುಂತಲೆ ಬಿದ್ದು ಬೆಂಕಿಯಲ್ಲಿ ನಡೆಯಬೇಕಾದುದು ಅನಿವಾರ್ಯ. ವಾದರೂ ಕೊನೆಯ ಮಂಗಳವನ್ನರಿತ ಕಣ್ವರಿಗೆ ಅವಳು "ಅಶೋಚನೀಯಾ ಸಂವೃತ್ತಾ," ನಾಟಕದ ತುದಿಯಲ್ಲಿ ಮಾರೀಚ ಮುನಿ "ತಪಃ ಪ್ರಭಾವಾತ್ ಪ್ರತ್ಯಕ್ಷಂ ಸರ್ವಮೇವ ತತ್ರಭವತಃ" ಎಂದಾಗ ದುಷ್ಯಂತನಿಗೆ ಕಣ್ವರ ಈ ಕ್ಷಾಂತಿ ಕಾರಣವಾದ ಪೂರ್ಣದೃಷ್ಟಿ ಸ್ವಲ್ಪ ಮಟ್ಟಿಗೆ ಪರಿಚಿತವಾಗಿ "ಅತಃ ಖಲು ಮಮ ನಾತಿಕ್ರುದ್ಧೋ ಮುನಿಃ" ಎಂದು ಧೃತಿಗೊಳ್ಳುತ್ತಾನೆ.

ಶಕುಂತಲೆಯನ್ನು ಪತಿ ಗೃಹಕ್ಕೆ ಬೀಳ್ಕೊಳ್ಳುವಾಗ ಕಣ್ವರ ಪೂರ್ಣದೃಷ್ಟಿ ಹಜ್ಜೆ ಹಜ್ಜೆಗೂ ಇಣುಕುತ್ತದೆ. ಮಾತುಮಾತಿಗೂ ಮಿಂಚುತ್ತದೆ. "ಚಕ್ರವರ್ತಿ ಪುತ್ರನ ಪಡೆ ನೀಂ" ಎಂದು ಅವರು ಹರಸಿದಾಗ ಗೌತಮಿಯ ಬಾಯಲ್ಲಿ ಕವಿ "ಭಗವನ್, ವರಃ ಖಲ್ವೇಷಃ ನಾಶೀಃ" ಎಂದು ಹೇಳಿಸಿ ಕಣ್ವರ ಋತದರ್ಶಿತ್ವವನ್ನೂ ಚಿತ್ತಪಸ್ಸನ್ನೂ ಒಟ್ಟಿಗೆ ಸಾರಿದ್ದಾನೆ. ಮುಂದೆ "ಅಹಂ ತ್ವಯಿ ಸಂಪ್ರತಿ ವೀತ ಚಿಂತಃ" ಎಂದು ಕೊನೆಯಾಗುವ ವೃತ್ತದಲ್ಲಿ ಋಷಿಯ ಪೂರ್ಣದೃಷ್ಟಿ ಅಂತ್ಯದ ಅನಂತ ಕಲ್ಯಾಣದಲ್ಲಿರುವ ತನ್ನ 'ದರ್ಶನ' ಪೂರ್ವಕವಾದ ಶ್ರದ್ಧೆಯನ್ನು ಬಾಯಿ ಬಿಟ್ಟು ಹೇಳುವಂತಿದೆ. ವಿಧಿಯೇ ಕಣ್ವರೋ? ಕಣ್ವರೇ ವಿಧಿಯೋ? ಇಬ್ಬರೂ ಅದ್ವೈತವಾದ ಹಾಗೆ ತೋರುತ್ತದೆ:

ನಂದನೆ, ನಾಂ ಸಂಕಲ್ಪಿಸಿದಂದದೊಳ್
ಅನುರೂಪ ಪತಿಯ ಸೇರಿದೆ ನೀಂ.
ಸೈಪಿಂದೀ ಮಾಲತಿಯುಂ ಮಾಕಂದವನೊಂದಿತ್ತು:
ನಿಮ್ಮೊಳಾಂ ನಿಶ್ಚಿಂತಂ!

ನಿಶ್ಚಿಂತರಾದರೂ ಮುಂದೊದಗುವ ಕ್ಲೇಶಪಥವನ್ನು ನೆನೆದು, ಮಗಳಿಗೆ ಕಣ್ಣೀರೊರಸಿಕೋ ಎಂದು ಹೇಳುವ ನೆವದಲ್ಲಿ, ತಗ್ಗು ಉಬ್ಬುಗಳಿರುವ ಆ ಕಾಣದ ನೆಲದಲ್ಲಿ ನಡೆಯುವಾಗ ನಿನ್ನ ಪಾದಗಳು ಪಲ್ಲಟಿಸುತ್ತವಲ್ಲವೆ ಎಂದು ಮರುಕ ತೋರುತ್ತಾರೆ:

ಅಸ್ಮಿನ್ನಲಕ್ಷಿತ ನತೋನ್ನತ ಭೂಮಿಭಾಗೇ
ಮಾರ್ಗೇ ಪದಾನಿ ಖಲು ತೇ ವಿಷಮಿಾ ಭವಂತಿ

ಕಣ್ವರದು ಪೂರ್ಣದೃಷ್ಟಿ. ಶಾರ್ಙ್ಗರವನು ಹೇಳುವಂತೆ: 'ನ ಖಲು ಧೀಮತಾಂ ಕಶ್ಚಿದವಿಷಯೋ ನಾಮ!' ಶಕುಂತಲೆ ತಂದೆಯ ಪಾದಗಳಿಗೆ ನಮಸ್ಕರಿಸಿದಾಗ 'ಯದಿಚ್ಛಾಮಿ ತೇ ತದಸ್ತು' ಎನ್ನುತ್ತದೆ ತಪೋಬಲದ ಅನುಗ್ರಹವಾಣಿ.

ಕೊನೆಯದಾಗಿ ಮಹರ್ಷಿಯ ಪೂರ್ಣದೃಷ್ಟಿ ತನ್ನ ಪೂರ್ಣ ಜ್ಯೋತಿಯಿಂದ ಪ್ರಕಾಶಿಸುವುದನ್ನು ಕಾಣುತ್ತೇವೆ. "ತಾತ, ಕದಾ ನು ಭೂಯಸ್ತಪೋವನಂ ಪ್ರೇಕ್ಷಿಷ್ಯೇ" ಮಗಳು ತಾನು ಮತ್ತೆ ಆಶ್ರಮವನ್ನು ಕಾಣುವುದೆಂದು ಎಂದು ತಂದೆಯನ್ನು ಕೇಳಿದಾಗ:

ಕ್ಷಿತಿಸತಿಗೆ ಸವತಿಯಾಗಿ
ಅಪ್ರತಿರಥನಂ ಸುತನ ಪೆತ್ತು, ಸುತೆ, ನೀಂ
ತನಯಾರ್ಪಿತ ರಾಜ್ಯನಪ್ಪ ನಿನ್ನಯ ಪತಿಯೊಡನೆ
ಈಕ್ಷಿಸುವೆ ಮಗುಳ್ದಿಮಾ ಆಶ್ರಮಮಂ.

ತುದಿಯಲ್ಲಿ ಏನಾಗಬಹುದು, ಏನಾಗುತ್ತದೆ, ಏನಾಗಬೇಕು ಇವು ಮೂರೂ ಮುಪ್ಪುರಿಗೊಂಡು ವಿಧಿಗೂ ವಿಧಾಯಕವಾದಂತಿದೆ ಇಲ್ಲಿಯ ಋಷಿವಾಣಿ.

ನಾಲ್ಕನೆಯ ಅಂಕದ ತರುವಾಯ ಕಣ್ವರು ಕಣ್ಮರೆಯಾಗುತ್ತಾರೆ. ಮುಂದೆ ನಾಟಕದಲ್ಲಿ ಎಲ್ಲಿಯೂ ನಾವು ಅವರನ್ನು ಪ್ರತ್ಯಕ್ಷವಾಗಿ ಸಂದರ್ಶಿಸುವುದಿಲ್ಲ. ಆದರೂ ಅವರ ಪೂರ್ಣದೃಷ್ಟಿಯ ಸುನಿಶ್ಚಿತವಾದ ಆಶೀರ್ವಾಣಿ ತನ್ನ ರೆಕ್ಕೆಯ ಹದುಳತಕ್ಕೆಯ ಕ್ಷೇಮಸೀಮೆಯಲ್ಲಿ ಶಕುಂತಲೆಯ ಮತ್ತು ಅವಳ ಪ್ರಿಯಜನರ ಅದೃಷ್ಟವನ್ನು ಭದ್ರವಾಗಿ ಅಪ್ಪಿಕೊಂಡಿರುವುದನ್ನು ಅನುಭವಿಸುತ್ತೇವೆ. ಮಂದ ಪ್ರಜ್ಞನಾದ ವಾಚಕನಿಗೆ ದುರ್ವಾಸಶಾಪದ ಘೋರಾರ್ಭಟೆಯೆ ಕಿವಿತುಂಬುತ್ತದೆ ಯಾದರೂ ಉನ್ಮೀಲಿತಬೋಧನಾದ ಸಹೃದಯನ ಸೂಕ್ಷ್ಮಪ್ರಜ್ಞೆಗೆ ಸಾರ್ವಭೌಮಿಕ ವಾಗುವುದು ಕಣ್ವರ ಆಶೀರ್ವಾಣಿ. ಆಶ್ರಮ ಕಂಪನಕಾರಿಯಾದ ಆ ಶಾಪದ ಹೂಂಕಾರ ಭಯಂಕರ ಘೋಷವನ್ನೂ ಒಕ್ಕಿಮುಕ್ಕಿ ನೀರವಗಂಭೀರವಾಗಿ ಅನಾಹತ ವಾಗುತ್ತದೆ ಕಣ್ವರ ಕೃಪಾಮಯಿಯಾದ ಭಗವದ್‌ವಾಣಿ.

೭

ಕಣ್ವಪಾತ್ರದಲ್ಲಿ ಪ್ರಾತಿನಿಧ್ಯ ಪಡೆದ ಕವಿಯ 'ದರ್ಶನ'ದಿಂದ ದೀಪ್ತವಾದ ಶಾಕುಂತಲ ನಾಟಕದ ಪ್ರತಿಮಾಲೋಕಕ್ಕೆ ಅನ್ವಯಿಸುವ ನಮ್ಮ ಪೂರ್ಣದೃಷ್ಟಿ ದುರ್ವಾಸ ಶಾಪದ ಸಮಸ್ಯೆಯ ಮೇಲೆ ಏನು ಬೆಳಕು ಬೀರುತ್ತದೆ?

ದುಷ್ಯಂತ ಶಕುಂತಲೆಯರ ಬದುಕಿನಲ್ಲಿ ಬಂದೊದಗಿದ ದುರಂತಗಳಿಗೆ ದುರ್ವಾಸ ಶಾಪವೆ ಕಾರಣವೆಂದೂ, ಕಾಳಿದಾಸನು ಆ ಶಾಪದ ಒಂದು ಕೀಲಣೆಯಿಂದ ದುಷ್ಯಂತನ ಪುರುಷಕಾರವನ್ನು ಉನ್ನತಗೊಳಿಸಿರುವನೆಂದೂ, ಆ ಶಾಪ ನಾಟಕದ ಅಂತಃಕರಣಗಳಿಂದ ಅದಕ್ಕೆ ಆವಶ್ಯಕವಾಗಿ ಒಳಗಣಿಂದ ಉದ್ಭವಿಸಿದಂತಿರದೆ ಹೊರ ಗಣಿಂದ ಸಂಭವಿಸಿದಂತೆಯೂ ತಂದುಹಾಕಿದ ಉಪಾಯದಂತೆಯೂ ಇದೆಯೆಂದೂ ವ್ಯಾಖ್ಯಾನಮಾಡಿದರೆ ಅದೂ ಒಂದು ತರಹದ 'ತಿಳಿವಳಿಕೆ'ಯಾಗುವುದರಲ್ಲಿ ಸಂದೇಹ ವಿಲ್ಲ. ಆದರೆ ಅದು 'ಪೂರ್ಣದೃಷ್ಟಿ'ಯ ತಿಳಿವಾಗುವುದಿಲ್ಲ.

ಪೂರ್ಣದೃಷ್ಟಿಗೆ ನಾಟಕದ ಇತರ ಅಂಗಗಳಂತೆ ಶಾಪವೂ ಒಂದು ಅವಯವ. ಆ ಅವಯುವದ 'ಪ್ರಭವ'ಕ್ಕೆ ಮೂಲಹೇತುವಿರುವುದು ಕವಿಯ ದರ್ಶನದಲ್ಲಿ. ಅದರ 'ಉದ್ಭವ'ಕ್ಕೆ ಕಾರಣವಿರುವುದು ಕಾವ್ಯಶರೀರವಾದ 'ಪ್ರತಿಮಾ'ರಚನೆಯ ಸಮಯ ನಿಯಮಗಳಲ್ಲಿ. ಅದರ ಪ್ರಭಾವಕ್ಕೆ ಅವಕಾಶವಿರುವುದು ಅನೇಕರ, ಇಲ್ಲಿ ವಿಶೇಷವಾಗಿ ಶಕುಂತಲೆ ದುಷ್ಯಂತರ ಕರ್ಮಪರಿಪಾಕದಲ್ಲಿ. ಆ ಘಟನೆಯ ತ್ರಿಕೋನಕ್ಕೆ ಶಕುಂತಲೆಯ 'ಕರ್ಮ' ಒಂದು ಪಕ್ಕದ ರೇಖೆಯಾದರೆ ದುಷ್ಯಂತನ 'ಕರ್ಮ' ಮತ್ತೊಂದು

ಪಕ್ಕದ ರೇಖೆಯಾಗುತ್ತದೆ; ದುರ್ವಾಸ ಶಾಪ ಅಥವಾ ಆ ಶಾಪಪ್ರತಿಮೆಯಲ್ಲಿ ಅಡಕವಾಗಿರುವ ಋತದ ನಿಯತಿವಿನ್ಯಾಸದಲ್ಲಿದೆ ಮೂರನೆಯ ರೇಖೆ. ಒಂದನ್ನು ಳಿದು ಒಂದಿಲ್ಲ. ಒಂದರಿಂದ ಮತ್ತೊಂದು. ಅದಕ್ಕಿದು ಇದಕ್ಕದು ಕಾರಣ. ನೆಲದಮೇಲೆ (ಅವಿದ್ಯಾಭೂಮಿಕೆ) ಇಟ್ಟು ನೋಡಿದರೆ ತ್ರಿಕೋನವಾಗಿ ಕಾಣುತ್ತದೆ. ಆ ರೇಖಾ ತ್ರಯವಿನ್ಯಾಸ. ಸ್ವಲ್ಪ ಮೇಲಕ್ಕೆತ್ತಿ ಹೊರಳಿಸತೊಡಗಿದರೆ (ವಿದ್ಯಾಭೂಮಿಕೆ) ರೇಖೆಗಳ ಪರಸ್ಪರ ದೂರಾಂತರವು ಬರಬರುತ್ತಾ ಕಡಮೆಯಾಗುತ್ತದೆ. ಕಡೆಗೆ ಮೂರು ರೇಖೆಗಳೂ ಒಂದರಮೇಲೊಂದಾಗಿ, ಒಂದನೊಡನೊಂದು ಐಕ್ಯವಾಗಿ, ಏಕರೇಖೆಯಾಗುವುದು ಅನುಭವಕ್ಕೆ ಬರುತ್ತದೆ. ಪೂರ್ಣದೃಷ್ಟಿಯ ಪ್ರಚಂಡವೇಗದ ವಿಜ್ಞಾನಕ್ಕೆ ಆ ಸರಳರೇಖೆಯೆ ಅಸಂಖ್ಯ ಅರಮಯವಾದ ಜ್ಞಾನಚಕ್ರದ ನೇಮಿ ರೇಖೆಯೂ ಆಗುತ್ತದೆ. ಶಾಪವೇ ಕಾರಣವೆನ್ನುವುದೂ ದುಷ್ಯಂತನ ಚಪಲಪ್ರಣಯವೇ ಕಾರಣವೆನ್ನುವುದೂ ಅಥವಾ ಶಕುಂತಲೆಯ ಅಸಂಯಮವೇ ಕಾರಣವೆನ್ನುವುದೂ ಬೇರೆಬೇರೆಯ ಉಕ್ತಿರೀತಿಗಳಾಗುತ್ತವೆಯೇ ಹೊರತು ಮೊತ್ತದ ವಿಷಯದಲ್ಲಿ ವ್ಯತ್ಯಾಸವಾಗುವುದಿಲ್ಲ. ಅನೇಕರ ಕರ್ಮಸಂಸ್ಕಾರ ಪರಿಪಾಕದಲ್ಲಿ, ವಿಶೇಷವಾಗಿ ಶಕುಂತಲೆ ದುಷ್ಯಂತರ ಕರ್ಮಸಂಸ್ಕಾರ ಪರಿಪಾಕದಲ್ಲಿ, ಅವಕಾಶವಿಲ್ಲದಿದ್ದರೆ ದುರ್ವಾಸನ ಶಾಪದಿಂದ ಏನೂ ಆಗುತ್ತಿರಲಿಲ್ಲ.* ದುರ್ವಾಸನನ್ನು ಪೂರ್ಣದೃಷ್ಟಿಯುಳ್ಳವ ನೆಂದು ಭಾವಿಸಿದರೆ ಆಗ ಆ ಶಾಪದ ಘಟನೆ ಸಂಭವಿಸುತ್ತಲೂ ಇರಲಿಲ್ಲ. ಈಗ ಅದು ಒದಗಿದೆ. ಪಾತ್ರ ವಹಿಸಿ ಪರಿಣಾಮಕಾರಿಯಾಗಿ ಕೆಲಸಮಾಡಿದೆ. ಆದ್ದರಿಂದ ಕಣ್ವರು ಸೋಮತೀರ್ಥದಲ್ಲಿ ಮಗಳ ಅಮಂಗಳ ಪರಿಹಾರಕ್ಕಾಗಿ ಮಾಡಿದ ಪ್ರಾರ್ಥನೆಯಲ್ಲಿ ಎಷ್ಟು ಪುರುಷಾರ್ಥವಿದೆಯೋ ಅಷ್ಟು ಪುರುಷಾರ್ಥವೂ ಇದೆ ದುರ್ವಾಸರ ಶಾಪದಲ್ಲಿ. ಈ ಇತ್ಯರ್ಥ ಪೂರ್ಣದೃಷ್ಟಿಗೆ ಅನಿವಾರ್ಯ ಮತ್ತು ಸ್ವತಃ ಸಿದ್ಧ.

ಅಲ್ಲದೆ ಶಾಪವೂ ಸಮಗ್ರ ಕಾವ್ಯದ ಪ್ರತಿಮಾಲಕ್ಷಣದಿಂದ ಬದ್ಧವಾಗಿ ಅದೂ ಪ್ರತಿಮೆಯೇ ಆಗಿರುವುದರಿಂದ ಅದು ಯಾವುದನ್ನು ಪ್ರತಿಮಿಸುತ್ತದೆಯೋ ಆ ಭಾವಸತ್ಯವನ್ನು ನಾವು ಗ್ರಹಿಸಬೇಕಾಗುತ್ತದೆ. ಈಗಿರುವಂತೆ ಈ ನಾಟಕದಲ್ಲಿ

---

* ದುರ್ವಾಸರ ಶಾಪವೂ ತನಗೆ ತಾನೆ ಸಂಪೂರ್ಣ ಸ್ವತಂತ್ರವಲ್ಲ. ಆ ಶಾಪಪ್ರತಿಮೆಗೂ ಅನೇಕ ಅಂಗೋಪಾಂಗಗಳಿವೆ. ಶಾಪವು ತನ್ನ ವಿಮೋಚನೆಯನ್ನು ಆ ಪ್ರತಿಮೆಯಲ್ಲಿಯೇ ಮುಖ್ಯಾಂಗವಾಗಿರುವ ಅಭಿಜ್ಞಾನಾಂಗುಳೀಯಕದಲ್ಲಿ ಬೈತಿಟ್ಟುಕೊಂಡಿದೆ. ಉಂಗುರವನ್ನು ನುಂಗುವ ಶಚೀತೀರ್ಥದ ಮೀನಿನಂತೆಯೆ ಮೀನನ್ನು ಹಿಡಿಯುವ ಬೆಸ್ತನೂ ಅವನನ್ನು ಹಿಡಿಯುವ ರಾಜಭಟನೂ ಆ ಶಾಪಪ್ರತಿಮೆಗೆ ಉಪಾಂಗಗಳಾಗುತ್ತಾರೆ. ಹೀಗೆ ಬಹುಸಂಖ್ಯೆಯ ಅರಪಂಕ್ತಿಯ ಬಲದಿಂದಲೆ ಒಂದು ಘಟನಾಚಕ್ರ ಉರುಳಲು ಸಮರ್ಥವಾಗುತ್ತದೆ.

ಆ ಪ್ರತಿಮೆ ಅನಿವಾರ್ಯವೂ ಆವಶ್ಯಕವೂ ಆದರೂ ಅದು ಪ್ರತಿಮಿಸುತ್ತಿರುವ ಭಾವಸತ್ಯ ಅದಕ್ಕಿಂತಲೂ ಚಿರವೂ ಸ್ಥಿರವೂ ಆದದ್ದು. ಇತರ ಕವಿ 'ದರ್ಶನ'ಗಳು ಇತರ ನಾಟಕಗಳಲ್ಲಿ ಇತರ ರೀತಿಯ ಪ್ರತಿಮೆಗಳನ್ನು ರಚಿಸಬಹುದಾದರೂ ಈ ಕಥೆಯ ವಸ್ತುವಿನಲ್ಲಿರುವ ಶಾಶ್ವತವಾದ ಭಾವಸತ್ಯವನ್ನು ಮಾತ್ರ ಮರೆಯುವ ಹಾಗಿಲ್ಲ. ಶಾಕುಂತಲ ನಾಟಕವನ್ನು ಹತ್ತಾರು ಪ್ರಕಾರಗಳಿಂದ ರಚಿಸಬಹುದು. ಶಾಪದ ಸಂಗತಿಯನ್ನೇ ಕೈಬಿಟ್ಟರೂ ಅದು ಪ್ರತಿಮಿಸುವ ಭಾವಸತ್ಯದ ಸಂಗತಿಯನ್ನು ಕೈಬಿಟ್ಟರೆ ಕೃತಿ ಅನೃತವಾಗುತ್ತದೆ; ಅಥವಾ ಅಸ್ಯಖುತಕೃತಿಯಾಗುತ್ತದೆ. ಮೇಧಾವಿಯೂ ಪ್ರತಿಭಾಶಾಲಿಯೂ 'ಅವಿದ್ಯಾ'ವಶಮತಿಯೂ ಆದ ಒಥೆಲೋ ಮತ್ತು ಕಿಂಗ್ ಲಿಯರ್ ನಾಟಕಗಳ ಕರ್ತೃವಂತಹನಾಗಿದ್ದರೆ ದುಷ್ಯಂತ ಶಕುಂತಲೆಯರನ್ನು ರಂಗದ ಮೇಲೆ ಕೊಂದುಹಾಕಿ, ತನ್ನ ಅಂಶದೃಷ್ಟಿಯ 'ದರ್ಶನ'ದ ಅರ್ಧಸತ್ಯವನ್ನು ಪ್ರೇಕ್ಷಕರು ಪುಲಕಭೀತರಾಗುವಂತೆ ಪ್ರದರ್ಶಿಸುತ್ತಿದ್ದನು. ಆದರೆ ಶಾಕುಂತಲ ನಾಟಕವು ಪೂರ್ಣದರ್ಶನ ದ್ರಷ್ಟಾರರಿಗೆ ತವರು ಬೀಡಾಗಿರುವ ಭರತವರ್ಷದಲ್ಲಿ ಜನ್ಮವೆತ್ತಿದ ಭಾರತೀಯ ಕವಿಯ ಕೃತಿ.

ಅನಂತ ಮುಖವಾದ ಈಶ್ವರೀಶಕ್ತಿ ಈ ವಿಶ್ವವನ್ನು ನಮ್ಮ ಈಗಿನ ಅನುಭವಕ್ಕೆ ಸಂಪೂರ್ಣವಾಗಿ ವ್ಯತ್ಯಸ್ತವಾಗಬಹುದಾದ ಇನ್ನೂ ಎಷ್ಟೋ ಪ್ರಕಾರಗಳಲ್ಲಿ ರಚಿಸಬಹುದಾಗಿತ್ತು. ಆದರೆ ಸದ್ಯದ ಸೃಷ್ಟಿಗೆ ಒಪ್ಪಿ ಅದು ರಂಗಕ್ಕಿಳಿದ ಮೇಲೆ ಗೊಣಗಾಡಿದರೆ ಪ್ರಯೋಜನವಿಲ್ಲ, ಗೊಣಗುವುದರಿಂದಾಗುವ ಸಂಸ್ಕಾರ ಪ್ರಯೋಜನ ಒಂದು ವಿನಾ.

ಶಾಪದ ಪ್ರತಿಮೆಯನ್ನು ಸಮರ್ಥಿಸುತ್ತಾ ಠಾಕೂರರು ಹೀಗೆ ಬರೆದಿದ್ದಾರೆ: "ಪಂಚಮಾಂಕದ ಆರಂಭದಲ್ಲಿಯೇ ಸೂಚಿತವಾಗಿರುವ ರಾಜನ ಚಪಲಪ್ರಣಯದ ಈ ಪರಿಚಯವು ನಿರರ್ಥಕವಾದುದಲ್ಲ. ಇದರಿಂದ ಕವಿಯು ದುರ್ವಾಸರ ಶಾಪದಿಂದ ಯಾವುದು ಘಟಿಸಿತೋ ಅದರ ಬೀಜವು ರಾಜನ ಸ್ವಭಾವದಲ್ಲಿಯೇ ಇದೆ ಎಂದು ಅತ್ಯಂತ ಕುಶಲತೆಯಿಂದ ತಿಳಿಸಿರುತ್ತಾನೆ. ಕಾವ್ಯದ ಆವಶ್ಯಕತೆಯಿಂದ ಯಾವುದನ್ನು ಆಕಸ್ಮಿಕವೆಂದು ತೋರಿಸಬೇಕಾಯಿತೋ ಅದು ಸ್ವಾಭಾವಿಕವಾದುದು.[1]" ಮೇಲಿನ ವಿವರಣೆಯಲ್ಲಿ ರಾಜನ ಸ್ವಭಾವವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ. ಪೂರ್ಣದೃಷ್ಟಿ ಅಷ್ಟರಿಂದಲೇ ತೃಪ್ತಿಹೊಂದುವುದಿಲ್ಲ. ಉಳಿದ ಪಾತ್ರಗಳನ್ನು ನಿರ್ಲಕ್ಷಿಸಿದರೂ, ಕೊನೆಗೆ ಶಕುಂತಲೆಯ ಕರ್ಮಪರಿಪಾಕದ ಪರಿಣಾಮ ಮತ್ತು ಆತ್ಮಸಂಸ್ಕಾರದ ಆವಶ್ಯಕತೆ ಇವುಗಳನ್ನಾದರೂ ರಾಜನ ಸ್ವಭಾವದ ಜೊತೆಗೆ

[1] "ಪ್ರಾಚೀನ ಸಾಹಿತ್ಯ"—ಶ್ರೀ ವೆಂಕಣ್ಣಯ್ಯನವರ ಭಾಷಾಂತರ.

ಸೇರಿಸಿ ಗಮನಿಸಿದರೆ ಹೆಚ್ಚು ರಸಪುಷ್ಟಿ ದೊರೆಯುತ್ತದೆ. ಈ ಲೇಖನದಲ್ಲಿ ಪ್ರತಿಪಾದಿತವಾಗಿರುವ ಪೂರ್ಣದೃಷ್ಟಿಗೆ.

೮

ಅಂಶದೃಷ್ಟಿಯಿಂದ ಮಾಡಿದ ಎಲ್ಲ ವ್ಯಾಖ್ಯಾನಗಳಿಗೂ ಪೂರ್ಣದೃಷ್ಟಿಯಲ್ಲಿ ಅಲ್ಪಸ್ವಲ್ಪವಾದರೂ ಸತ್ಯವಿರುತ್ತದೆ. ದುರ್ವಾಸನ ಶಾಪನಿಮಿತ್ತವಾಗಿ ದುಷ್ಯಂತ ಶಕುಂತಲೆಯರು ಪಟ್ಟ ಪಾಡನ್ನು ಧರ್ಮದ ಶಿಕ್ಷೆ ಎಂದರೂ ಸರಿ; ವಿಧಿ ಕಲ್ಪಿತ ಪ್ರಾಯಶ್ಚಿತ್ತ ಎಂದರೂ ಸರಿ; ವ್ಯಕ್ತಿಗಳ ಅಂತಃಕರಣದ ಅಂತಃಕಾರಣಗಳಿಂದ ಮೂಡಿದ ಸ್ವಯಂಶುದ್ಧೀಕರಣದ ವಿಧಾನ ಎಂದರೂ ಸರಿ; ಅದಾವುದೂ ಅಲ್ಲ, ಕಥೆಯ ಮತ್ತು ನಾಟಕದ ಸ್ವಾರಸ್ಯವನ್ನೂ ರಸವನ್ನೂ ಹೆಚ್ಚಿಸಲು ಕವಿ ಕೈಕೊಂಡ ಕೀಲಣೆ ಎಂದರೂ ಸರಿ; ನೀತಿದೃಷ್ಟಿ ಇದೆ ಎಂದರೂ ಸರಿ; ಇಲ್ಲ, ಕಲೆಗಾಗಿ ಕಲೆ ಎಂದರೂ ಸರಿ. ಇವು ಯಾವೊಂದರಿಂದಲೂ ಒದ್ಧವಾಗದೆ, ಎಲ್ಲವನ್ನೂ ಒಳಕೊಂಡು, ಎಲ್ಲಕ್ಕೂ ಅತೀತವಾಗಿರುವ ಪೂರ್ಣದೃಷ್ಟಿ ಅಂಶದೃಷ್ಟಿಗಳೆಲ್ಲವನ್ನೂ ಬರಮಾಡಿಕೊಳ್ಳುತ್ತದೆ; ಅಪ್ಪುತ್ತದೆ; ಒಂದೊಂದಕ್ಕೂ ತನ್ನ ಕೇವಲ ಸತ್ಯದ ಪಂಚಪಾತ್ರೆಯಿಂದ ತೀರ್ಥವನ್ನು ಅಭಿಷೇಕಿಸುತ್ತದೆ. ಎಲ್ಲವನ್ನೂ ತನ್ನ ಬ್ರಹ್ಮೋದರದಲ್ಲಿ ಜೀರ್ಣಿಸಿಕೊಂಡು ತನ್ನ ರಸಾನಂದದಲ್ಲಿ ತಾನೆ ತಾನಾಗಿ ವಿರಾಜಿಸುತ್ತದೆ.

ಈ ಪೂರ್ಣದೃಷ್ಟಿ ಕಾವ್ಯಕ್ಕೆ ಮಾತ್ರವಲ್ಲದೆ ವಾಸ್ತವವೆನಿಸಿಕೊಳ್ಳುತ್ತಿರುವ ಲೋಕಕ್ಕೂ ಆ ಲೋಕದ ಜೀವನಕ್ಕೂ ಅನ್ವಯಿಸುತ್ತದೆ. 'ಅವಿದ್ಯೆ'ಯನ್ನು ಉತ್ತರಿಸಿದ ಲೋಕಾತೀತದಲ್ಲಿಯೂ ಅದು 'ವಿದ್ಯಾಶಕ್ತಿ'ಯಾಗುತ್ತದೆ ಎಂದು ಸತ್ಯ ಸಾಕ್ಷಾತ್ಕಾರ ಮಾಡಿಕೊಂಡ ಸಿದ್ಧವ್ಯಕ್ತಿಗಳು ಹೇಳುತ್ತಾರೆ. ಶಾಕುಂತಲದಲ್ಲಿ ಆ 'ವಿದ್ಯಾಶಕ್ತಿ'ಯೇ ಕಣ್ವರಲ್ಲಿ ಪ್ರತಿಮೆಗೊಂಡಿರುವ ಪ್ರಜ್ಞಾಪ್ರತಿಷ್ಠಿತವಾದ ಯೋಗಸ್ಥಿತಿ.*

ಆದರೆ ಆ ಕೇವಲ ಪೂರ್ಣದೃಷ್ಟಿ, ಆ ಬ್ರಾಹ್ಮೀಸ್ಥಿತಿ, ಸಾಮಾನ್ಯರಿಗೆ ಸಿದ್ಧವಲ್ಲ. ಆ ಪೂರ್ಣದೃಷ್ಟಿಯ ಒಂದು ಛಾಯಾಪ್ರತಿಮೆಯಾಗಿ ಸಾಹಿತ್ಯಲೋಕದಲ್ಲಿ ಕವಿಯ ಪೂರ್ಣದೃಷ್ಟಿಯನ್ನು ಅರಿಯುವುದು ಮಾತ್ರ ನಮಗೆ ಸಾಧ್ಯ. ಹಾಗೆ ಅರಿಯುವುದು ಸಾಧ್ಯವಾದಾಗಲೆ ಬ್ರಹ್ಮಾನಂದದ ಛಾಯಾ ಮಾತ್ರ ಪ್ರತಿಮೆಯಾದ ಕಾವ್ಯಾನಂದ ರಸಾನುಭವವು ಸಹೃದಯನಿಗೆ ಸಾಧ್ಯವಾಗುತ್ತದೆ. ಆಗ ಕವಿಕೃತಿಯ ಧ್ಯಾನವೂ ಛಾಯಾ ರೀತಿಯಿಂದಲಾದರೂ ಯೋಗಸಾಧನವಾಗುತ್ತದೆ. ಮಹಾ

* ಆದರೆ ಅನಂತದ ಸಾಧನೆಗೆ ಅಂತವೆಲ್ಲಿ? "ಉತ್ಸರ್ಪಿಣೀ ಖಲು ಮಹತಾಂ ಪ್ರಾರ್ಥನಾ'

ಕವಿಯ ಕೃತಿಪ್ರತಿಮೆಯಲ್ಲಿ ಮೈದೋರಿರುವ ವಿರಾಡ್‌ದರ್ಶನವು 'ಬರಿಯ ಕಲೆ' ಯಾಗದೆ ನಮ್ಮನ್ನು ಸಚ್ಚಿದಾನಂದದ ನೆಲೆಗೂ ಕೊಂಡೊಯ್ಯುತ್ತದೆ.

ಈ ಬುದ್ಧಿಯಿಂದ ಹೊಕ್ಕು ನೋಡಿದರೆ ಶಾಕುಂತಲ ನಾಟಕದಲ್ಲಿ, ಅದರಲ್ಲಿಯೂ ದುರ್ವಾಸ ಶಾಪದ ಪ್ರತಿಮೆಯಲ್ಲಿ, ಕವಿ ಹೃದ್ಯದ ಸೃಷ್ಟಿಯು ಮಾನವ ಜಗತ್ತಿಗೆ, ಕೇವಲವಲ್ಲದಿದ್ದರೂ ಸೋಪಾನ ಸದೃಶವಾಗಿ ಆವಶ್ಯಕವಾದ, ಒಂದು ನೀತಿ ದೃಷ್ಟಿಯ 'ದರ್ಶನ'ವನ್ನು ವ್ಯಕ್ತಗೊಳಿಸಿದ್ದಾನೆ ಎಂದು ತೋರುತ್ತದೆ. ಅದಾವು ದೆಂದರೆ: ತಪಸ್ಯೆಯಿಂದ ಪರಿಶುದ್ಧವಾಗಿ, ಐಂದ್ರಿಯ ಸ್ವಾರ್ಥದ ತಮಸ್ಸಿನಿಂದಲೂ ಪ್ರಾಣಮಯ ಸ್ವಾರ್ಥದ ರಜಸ್ಸಿನಿಂದಲೂ ವಿಮೋಚನಹೊಂದುವ ಸಾತ್ತ್ವಿಕ ಪ್ರೇಮದ 'ಔತ್ತಮ್ಯ.' ಎಲ್ಲವನ್ನೂ ಎಲ್ಲರನ್ನೂ ಕ್ಷಮಿಸುವ ಭಗವದೌದಾರ್ಯ ಸ್ವರೂಪಿ ಕಣ್ವರ ಬಾಯಲ್ಲಿಯೂ "**ಅಘಪರಿಹಾರಕ ವೈತಾನವಹ್ನಿ** ಸಲಹುಗೆ ನಿನ್ನಂ" ಎಂದು ಹೇಳಿಸಿರುವ 'ದರ್ಶನ'ಕ್ಕೆ ಕಾಳಿದಾಸನ ಇತರ ಕಾವ್ಯಪ್ರತಿಮೆಗಳೂ ಸಾಕ್ಷಿಗಳಾಗುತ್ತವೆ. ಮೇಘಸಂದೇಶ ಕುಮಾರಸಂಭವಾದಿ ಕೃತಿಗಳಲ್ಲಿಯೂ ಬೇರೆ ಬೇರೆಯ ಪ್ರಕಾರಗಳಿಂದ ಅದನ್ನೇ ಒತ್ತಿ ಸೂಚಿಸುತ್ತಾನೆ.

ಒಬ್ಬ ಕವಿಯ ಬೇರೆ ಬೇರೆ ತರಹದ ಕೃತಿಗಳಲ್ಲಿ ಒಂದು ತತ್ತ್ವ ಮತ್ತೆಮತ್ತೆ ತಲೆಯೆತ್ತುವಂತೆ ತೋರಿದರೆ ಕವಿಗೂ ಆ ತತ್ತ್ವವು ಪ್ರಜ್ಞಾಪೂರ್ವಕವಾಗಿಯೆ ಮಾನ್ಯವಾಗಿತ್ತು ಎಂದು ಊಹಿಸಿದರೆ ಅದು ಅತಂತ್ರವೂ ಆಗುವುದಿಲ್ಲ, ಅತರ್ಕವೂ ಆಗವುದಿಲ್ಲ.

ಒಂದುವೇಳೆ ಕವಿಯಲ್ಲಿ ಆ 'ದರ್ಶನ'ವು ಬುದ್ಧಿಪೂರ್ವಕವಾಗಿ ಇರದಿದ್ದರೂ, ನಾವು ನೆನಪಿನಲ್ಲಿಡಬೇಕು, ನಮ್ಮ ಸಿದ್ಧಾಂತಕ್ಕೆ ಚ್ಯುತಿ ಬರುವುದಿಲ್ಲ. ಏಕೆಂದರೆ 'ದರ್ಶನ'ವು ಬುದ್ಧಿಪೂರ್ವವಾದ ಸಿದ್ಧಿ.

ಕುವೆಂಪು

೩. ಪ್ರಾಚೀನರ ಸಾಹಿತ್ಯಾಭ್ಯಾಸ ಪದ್ಧತಿ

"ಇದಂ ಕವಿಭ್ಯಃ ಪೂರ್ವೇಭ್ಯೋ ನಮೋವಾಕಂ ಪ್ರಶಾಸ್ಮಹೇ |
ವನ್ದೇಮಹಿ ಚ ತಾಂ ವಾಣೀಮಮೃತಾಮಾತ್ಮನಃ ಕಲಾಮ್ ||"

ಇಂಗ್ಲಿಷರು ಬರುವುದಕ್ಕೆ ಮುಂಚೆ ಇಡಿಯ ಭಾರತಭೂಮಿಯಲ್ಲೇ ಸಂಸ್ಕೃತಕ್ಕೆ ಅಗ್ರಸ್ಥಾನವಿತ್ತು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಉಜ್ಜಯಿನಿಯಿಂದ ವಂಗದೇಶದವರೆಗೆ, ಅದರ ಅಭ್ಯಾಸಕ್ಕೆ ಪ್ರೋತ್ಸಾಹವೂ ಗೌರವವೂ ಇದ್ದುವು. ಅದರ ಫಲವಾಗಿ ವಿದ್ವಾಂಸರೆಂದರೆ ಸಂಸ್ಕೃತ ವಿದ್ವಾಂಸರೇ ಎನ್ನುವಮಟ್ಟಿಗೆ ಎಲ್ಲೆಲ್ಲೂ ಆಗಿತ್ತು. ಸಂಸ್ಕೃತ ಸಾಹಿತ್ಯವೂ ಅಪಾರವಾಗಿ, ಅಗಾಧವಾಗಿ ಬೆಳೆಯಿತು. ಸಾಹಿತ್ಯ ಬೆಳೆದಂತೆಯೇ ವಿಮರ್ಶೆಯು ಕೂಡ ತನ್ನ ಬಾಲ್ಯವನ್ನು ಬಿಟ್ಟು ದೊಡ್ಡದಾಗುತ್ತ ಬಂದಿತು. ಕಾವ್ಯಗಳಿಗೆ ವ್ಯಾಖ್ಯಾನ, ಟೀಕೆ, ಟಿಪ್ಪಣಿಗಳೂ ಅಲಂಕಾರ ಶಾಸ್ತ್ರದಲ್ಲಿ ಬೇರೆಬೇರೆ ಸ್ವತಂತ್ರ ಗ್ರಂಥಗಳೂ ನೂರಾರು ಬರೆಯಲಾದುವು. ಇವುಗಳ ಸ್ವರೂಪವನ್ನೂ ಸಾಹಿತ್ಯಾಭ್ಯಾಸಕ್ಕೆ ಇವುಗಳ ಪ್ರಯೋಜನವನ್ನೂ ವಿಮರ್ಶಿಸಲು ಈ ಲೇಖನದಲ್ಲಿ ಯತ್ನಿಸಲಾಗಿದೆ.

I

ಸಂಸ್ಕೃತದಲ್ಲಿ ಸಾಹಿತ್ಯವಿಮರ್ಶೆಯು ಸಾಮಾನ್ಯವಾಗಿ ಎರಡು ಹಾದಿಗಳಲ್ಲಿ ಹರಿದುದನ್ನು ನೋಡಬಹುದು: ಒಂದು ಕಾವ್ಯ ತತ್ವನಿರೂಪಣೆಗೆ ಸಂಬಂಧಿಸಿದ್ದು. ಸಾಹಿತ್ಯವೆಂದರೇನು? ಶಾಸ್ತ್ರಗಳಿಗೂ ಸಾಹಿತ್ಯಕ್ಕೂ ಏನು ವ್ಯತ್ಯಾಸ? ಸಾಹಿತ್ಯ ರಚನೆಯಿಂದ ಕವಿಗೂ ಅದರ ಅಭ್ಯಾಸದಿಂದ ಪಾಠಕನಿಗೂ ಇರುವ ಪ್ರಯೋಜನ ವೇನು? ಸಾಹಿತ್ಯದ ಸ್ವರೂಪ ಲಕ್ಷಣಗಳಾವುವು? ಅವುಗಳನ್ನು ಗುರುತಿಸುವು ದೆಂತು?—ಮುಂತಾದ ವಿಶಾಲಪ್ರಶ್ನೆಗಳಿಗೆ ಯುಕ್ತಿಯುಕ್ತವಾದ ಉತ್ತರಗಳನ್ನು ಆಧಾರದಮೇಲೆ ನಿಷ್ಕರ್ಷಿಸಲು ಹೊರಡುವ ಗ್ರಂಥಗಳನ್ನೆಲ್ಲಾ ಈ ಮೊದಲನೆಯ ಗುಂಪಿಗೆ ಸೇರಿಸಬಹುದು. ಇವು ಶಾಸ್ತ್ರಸರಣಿಯಲ್ಲೇ ಪ್ರಾಯಿಕವಾಗಿ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುವುದರಿಂದಲೂ, ಸಾಹಿತ್ಯದ ನಿಯಮಗಳನ್ನು ಕಂಡು ಹಿಡಿಯಲು ಹೊರಡುವುದರಿಂದಲೂ 'ಅಲಂಕಾರಶಾಸ್ತ್ರ'ವೆಂಬ ಹೆಸರಿನಿಂದ ಇವನ್ನು ಕರೆಯುವುದು ವಾಡಿಕೆ. ಎರಡನೆಯ ಗುಂಪಿಗೆ ಸೇರತಕ್ಕವೆಂದರೆ ಗೊತ್ತಾದ ಪುಸ್ತಕ ಗಳಿಗೆ ಬರೆದ ವ್ಯಾಖ್ಯಾನಗಳು. ಈ ಎರಡು ವಿಧದ ರಚನೆಗಳಲ್ಲೂ ಸಾಹಿತ್ಯವಿವೇಚ ನೆಯು ಸ್ವಲ್ಪ ಹೆಚ್ಚುಕಡಿಮೆ ಒಡಮೂಡುತ್ತದೆನ್ನಬಹುದು.

ಈ ಎರಡನೆಯದನ್ನೇ ಮೊದಲು ಪರಿಶೀಲಿಸೋಣ. ವ್ಯಾಖ್ಯಾನಸಂಪ್ರದಾಯವು ಮೊದಲು ಪ್ರಾರಂಭವಾದದ್ದು ವೇದಾರ್ಥವನ್ನು ಜನರಿಗೆ ವಿಶದಗೊಳಿಸುವ ಉದ್ದೇಶದಿಂದ. 'ವೇದ'ವೆಂಬ ರೂಢಿಯಾದ ಹೆಸರಿನ ಕೆಳಗೆ ಒಂದು ಗ್ರಂಥರಾಶಿಯೇ ಅಡಕವಾಗುತ್ತದೆ. ಶೈಲಿ, ಪ್ರಯೋಗ, ಛಂದಸ್ಸು ಮುಂತಾದ ಎಲ್ಲ ವಿಷಯಗಳಲ್ಲೂ ಅತಿ ಪ್ರಾಚೀನವಾದ ಈ ಗ್ರಂಥರಾಶಿಯು ಸಂಸ್ಕೃತಕ್ಕಿಂತ ತೀರ ಭಿನ್ನವಾಗಿದ್ದುದರಿಂದ ಕಾಲಕ್ರಮೇಣ ಇದು ಜನರಿಗೆ ಅರ್ಥವಾಗುವುದೇ ತಪ್ಪಿಹೋಯಿತು.[1] ಈ ತೊಂದರೆಯನ್ನು ನಿವಾರಿಸುವ ಸಲುವಾಗಿಯೇ 'ಶಿಕ್ಷೆ', ವ್ಯಾಕರಣ, ನಿರುಕ್ತ ಮುಂತಾದ ವೇದಾಂಗಗಳು ಹುಟ್ಟಿದುವು. ಆದರೆ ಇವೂ ಕೂಡ 'ಸೂತ್ರ' ರೂಪವಾಗಿದ್ದುದರಿಂದ ವಿವರಣೆಯಿಲ್ಲದೆ ಅರ್ಥವಾಗುವುದು ಸುಲಭವಾಗಿರಲಿಲ್ಲ. ಎಷ್ಟು ಸಾಧ್ಯವೋ ಅಷ್ಟುಮಟ್ಟಿಗೂ ಸಂಗ್ರಹವಾಗಿ ಸ್ವಲ್ಪದರಲ್ಲಿ ಹೆಚ್ಚು ಅರ್ಥವನ್ನಡಗಿಸಿ ಹೇಳುವುದು ಈ ಶೈಲಿಯ ಮುಖ್ಯ ವೈಶಿಷ್ಟ್ಯ.[2] ಹೀಗಾಗಿ ಸೂತ್ರಗಳಿಗೆಲ್ಲ ಭಾಷ್ಯಗಳು ಅನಿವಾರ್ಯವಾದುವು. ಹೀಗೆಯೇ 'ದರ್ಶನ'ಗಳೂ ಸೂತ್ರಶೈಲಿಯಲ್ಲೇ ಇದ್ದ ಕಾರಣ ಅವಕ್ಕೂ ಭಾಷ್ಯಗಳು, ಭಾಷ್ಯಗಳ ಮೇಲೆ ವ್ಯಾಖ್ಯಾನಗಳು, ವ್ಯಾಖ್ಯಾನಗಳ ಮೇಲೆ ಟೀಕೆ ಟಿಪ್ಪಣಿಗಳು ಒಂದರಮೇಲೊಂದು ಕಾಲಕ್ರಮೇಣ ಬರೆಯಲ್ಪಟ್ಟುವು. ಪಂಡಿತನು ತನ್ನ ಶಾಸ್ತ್ರಪಾಂಡಿತ್ಯವನ್ನು ಪ್ರದರ್ಶಿಸಲು ಅವನಿಗೆ ಇದ್ದುದು ಒಂದೇ ಮಾರ್ಗ —ಯಾವುದಾದರೊಂದು ಮೂಲಗ್ರಂಥಕ್ಕೋ ಇಲ್ಲವೇ ಭಾಷ್ಯಾದಿಗಳಿಗೋ ಒಂದು ಹೊಸ ಟೀಕೆಯನ್ನು ಬರೆಯುವುದು. ಈ ಪರಿಸ್ಥಿತಿಯಲ್ಲಿ ಉಳಿದವರು ಮೂಲದಲ್ಲಿ ಸಂದೇಹವೇನಿದ್ದರೂ ಆದರಲ್ಲಿ ತಪ್ಪೆಣಿಸದೆ ವ್ಯಾಖ್ಯಾನಕ್ಕೇ ಶರಣುಹೋಗಬೇಕೆಂದು ಭಾವಿಸಲಾರಂಭಿಸಿದರು.[3] ಇದರ ಪ್ರಭಾವವು ಸಾಹಿತ್ಯ ಪ್ರಪಂಚದ ಮೇಲೂ ಬೀಳದೆ ಹೋಗಲಿಲ್ಲ.

ಶಾಸ್ತ್ರಗಳಂತೆ ಸಾಹಿತ್ಯದಲ್ಲೂ ಬುದ್ಧಿಯಿಂದ ತಿಳಿದುಕೊಳ್ಳಬೇಕಾದ ಒಂದು ಅಂಶವಿದ್ದೇ ಇರುತ್ತದೆ. ಇಲ್ಲಿಯೂ ಪದಾರ್ಥ ಮತ್ತು ವಾಕ್ಯಾರ್ಥಜ್ಞಾನವು ಆಗಲೇ

---

1 ಹೋಲಿಸಿ—"ಸ್ಥಾಣುರಯಂ ಭಾರಹಾರಃ ಕಿಲಾಭೂತ್
ಅಧೀತ್ಯ ವೇದಂ ನ ವಿಜಾನಾತಿ ಯೋऽರ್ಥಮ್ |
ಯೋऽರ್ಥಜ್ಞ ಇತ್ಸಕಲಂ ಭದ್ರಮಶ್ನುತೇ
ನಾಕಮೇತಿ ಜ್ಞಾನ ವಿಧೂತಪಾಪ್ಮಾ ||"
—ಯಾಸ್ಕನ ನಿರುಕ್ತ, I.

2 ಹೋಲಿಸಿ—"ಅರ್ಧಮಾತ್ರಾಲಾಘವಂ ಪುತ್ರೋತ್ಸವಂ ಮನ್ಯಂತೇ ವೈಯಾಕರಣಾಃ."

3 ಹೋಲಿಸಿ—"ವ್ಯಾಖ್ಯಾನತೋ ವಿಶೇಷ ಪ್ರತಿಪತ್ತಿರ್ನ ಹಿ ಸಂದೇಹಾದಲಕ್ಷಣಂ."

ಬೇಕು. ಆದರೆ ಸಾಹಿತ್ಯಕ್ಕೆ ವೈಶಿಷ್ಟ್ಯವಿರುವುದು ಇದರಿಂದಲ್ಲ. ಇದು ಪಾಠಕನ ಕಲ್ಪನಾ ಪ್ರಚೋದನೆಗೆ ಒಂದು ಅಂಗ ಮಾತ್ರ. ಸಾಹಿತ್ಯದ ಮಹತ್ವವಿರುವುದು ಅದರ ಚಮತ್ಕಾರದಲ್ಲಿ; ಸಾಧಾರಣವಾದ ನಿತ್ಯಜೀವನದ ಸಂಗತಿಗಳಿಗಿಂತ ಎಷ್ಟೋ ದೂರದ ಒಂದು ಅಲೌಕಿಕ ಆನಂದಪ್ರಪಂಚದಲ್ಲಿ ಪಾಠಕನನ್ನು ತಲ್ಲೀನನಾಗುವಂತೆ ಮಾಡುವ ಅದರ ಶಕ್ತಿಯಲ್ಲಿ. ಈ ಎರಡನೆಯ ಅಂಶವನ್ನು ಇತರರಿಗೆ ಬಾಯಿಂದ ಬೋಧಿಸುವುದು ಕಷ್ಟ. ಆದರೆ ಬುದ್ಧಿಗ್ರಾಹ್ಯವಾದ ಮೊದಲನೆಯ ಅಂಶವನ್ನು 'ಬಾಲ' (=ವ್ಯುತ್ಪತ್ತಿಸು)ರಿಗೆ ಅನಾಯಾಸವಾಗಿ ತಿಳಿಸುವುದಕ್ಕೋಸ್ಕರ ಕಾವ್ಯಗಳಿಗೂ ವ್ಯಾಖ್ಯಾನಗಳು ರಚಿತವಾದುವು. ಸುಮಾರು ಕ್ರಿ.ಶ. ಹತ್ತನೆಯ ಶತಮಾನದ ವರೆಗೂ ಸಾಹಿತ್ಯಕ್ಕೆ ವ್ಯಾಖ್ಯಾನಗಳನ್ನು ಬರೆದವರು ವಿರಳ. ಸಹಜವಾಗಿಯೇ ಸಂಸ್ಕೃತವು ಅರ್ಥವಾಗುತ್ತಿದ್ದಾಗ ವ್ಯಾಖ್ಯಾನದ ಸಹಾಯವನ್ನು ಯಾರೂ—ಬಾಲರು ಸಹ—ಅಪೇಕ್ಷಿಸುತ್ತಿದ್ದಂತೆ ತೋರುವುದಿಲ್ಲ. ವೇದಗಳಂತೆ ಸಂಸ್ಕೃತವೂ ಸಾಮಾನ್ಯಜನರಿಗೆ ತಿಳಿಯುವುದು ದುಸ್ತರವಾದಾಗಲೇ ಮೇಲಿಂದ ಮೇಲೆ ವ್ಯಾಖ್ಯಾನಗಳು ಹುಟ್ಟಿರಬೇಕೆನ್ನಿಸುತ್ತದೆ.[4]

ಸಾಹಿತ್ಯಾಭ್ಯಾಸಕ್ಕೆ ಈ ವ್ಯಾಖ್ಯಾನಗಳಿಂದಾದ ಉಪಕಾರವನ್ನು ವಿಮರ್ಶಿಸುವುದಕ್ಕೆ ಮುಂಚೆ, ಸಂಸ್ಕೃತಸಾಹಿತ್ಯವು ಬರಬರುತ್ತಾ ತಿಳಿಯಲು ಏಕೆ ದುಸ್ತರವಾಯಿತೆಂಬುದನ್ನು ಪರೀಕ್ಷಿಸಬೇಕು. ಪಾಣಿನಿಯ ವ್ಯಾಕರಣದ ಕಟ್ಟು ಬಲವಾಗಿದ್ದುದರಿಂದ ವೇದಕಾಲದಲ್ಲಾದಂತೆ ಸಂಸ್ಕೃತ ಭಾಷೆಯು ತನ್ನ ಸ್ವರೂಪವನ್ನು ಕಳೆದುಕೊಳ್ಳುವುದು ಶಕ್ಯವಿರಲಿಲ್ಲ. ಆದರೆ ಕವಿಗಳ ದೃಷ್ಟಿಯಲ್ಲಿ ಬದಲಾವಣೆಯಾದುದರಿಂದಲೇ ಈ ಪರಿಸ್ಥಿತಿಯೊದಗಿತೆನ್ನಬೇಕು. ಸಾಹಿತ್ಯಕ್ಕೆ ತನ್ನದೇ ಆದ ಒಂದು ವಿಶಿಷ್ಟಸ್ಥಾನವಿದ್ದುದೇನೋ ನಿಜ; ಆದರೂ ಕವಿಗಳು ತಮ್ಮ ಪ್ರತಿಭೆಯು ನಡೆಸಿಕೊಂಡುಹೋದ ದಿಕ್ಕಿನಲ್ಲಿ ಬರೆದರೆ ಕೃತಾರ್ಥರಾದೆವೆಂದು ಭಾವಿಸಿದ್ದಂತೆ ತೋರುವುದಿಲ್ಲ. ತಮ್ಮ ಪ್ರತಿಭೆಯು ಅಪ್ರತಿಹತವಾದುದೆಂದು ತೋರಿಸುವುದರ ಜೊತೆಗೆ ತಮಗೆ ಇತರ ಶಾಸ್ತ್ರಗಳಲ್ಲಿದ್ದ ಪ್ರೌಢಿಮೆಯನ್ನು ಪ್ರದರ್ಶಿಸುವುದೂ ಅವಶ್ಯವೆಂದು ಅನೇಕರು ತಿಳಿದಿದ್ದರು. ಉದಾಹರಣೆಗೆ ಭಟ್ಟಿಯು ಪಾಣಿನಿಸೂತ್ರೋದಾಹರಣರೂಪವಾಗಿ ಒಂದು ಇಡಿಯ ಮಹಾಕಾವ್ಯವನ್ನೇ ಬರೆದನು. ಅದು ವ್ಯಾಖ್ಯಾನ

---

[4] ಹೋಲಿಸಿ—"ಕಾವ್ಯಾನ್ಯಪಿ ಯದೀಮಾನಿ ವ್ಯಾಖ್ಯಾಗಮ್ಯಾನಿ ಶಾಸ್ತ್ರವತ್ |
ಉತ್ಸವಃ ಸುಧಿಯಾಮೇವ ಹನ್ತ ದುರ್ಮೇಧಸೋ ಹತಾಃ ||"

—ಭಾಮಹನ ಕಾವ್ಯಾಲಂಕಾರ, II, ೨೦.

ದಿಂದ ಮಾತ್ರ ತಿಳಿಯಲು ಶಕ್ಯವೆಂದು ಅವನ ಹೆಮ್ಮೆ.[5] ಮಂದಬುದ್ಧಿಗಳ ತಲೆಗೆ ಹತ್ತದಿದ್ದರೆ ಚಿಂತೆಯಿಲ್ಲ; ಅಷ್ಟೇಕೆ, ಅವರಿಗೆ ಹತ್ತಲೂ ಕೂಡದು. ಪಂಡಿತರು ಸಂತೋಷಪಡುವುದೊಂದೇ ಬೇಕಾದದ್ದು. ಎಲ್ಲ ಕವಿಗಳೂ ಇಷ್ಟು ಅತಿಗೆ ಮುಟ್ಟ ದಿದ್ದರೂ, ಸಾಹಿತ್ಯವು ಸಾಮಾನ್ಯ ಜನವನ್ನು ಮೆಚ್ಚಿಸಿದರೆ ಸಾಲದು, 'ಜಾಣ ರನ್ನೂ ತಲೆದೂಗಿಸಬೇಕು' ಎಂಬ ಭಾವನೆಯುಳ್ಳವರಾಗಿಯೇ ಇದ್ದರು. ಎಷ್ಟೋ ವರ್ಷಗಳ ಕಾಲ ತರ್ಕ, ವೇದಾಂತ ಮುಂತಾದ ಶಾಸ್ತ್ರಗಳನ್ನು ಅಧ್ಯಯನಮಾಡಿ ನಿಶಿತಮತಿಗಳಾಗಿದ್ದ ವಿದ್ವಾಂಸರನ್ನು ರಂಜಿಸಬೇಕಾದರೆ ಅವರ ಶಾಸ್ತ್ರಪ್ರಕ್ರಿ ಯೆಯ ಪರಿಚಯವೂ ತನಗುಂಟೆಂಬುದನ್ನು ಕವಿಯು ಅಲ್ಲಲ್ಲಿ ತೋರಿಸಬೇಕಾಗಿತ್ತು. ಅತಿಪ್ರಾಚೀನರಾದ ವಾಲ್ಮೀಕಿ, ಭಾಸ ಮುಂತಾದ ಕವಿಗಳನ್ನು ಬಿಟ್ಟರೆ ಉಳಿದ ಮುಂದಿನ ಕವಿಗಳೆಲ್ಲ ಈ ಪ್ರಯತ್ನದಲ್ಲಿ ತೊಡಗಿರುವುದನ್ನು ನೋಡಬಹುದು. ಅಶ್ವಘೋಷನು ಸಹ ತಾನು ಮೋಕ್ಷಾಪೇಕ್ಷೆಯನ್ನು ಜನರಲ್ಲುಂಟುಮಾಡುವುದ ಕ್ಕೋಸ್ಕರ ಕಾವ್ಯನಿರ್ಮಾಣ ಮಾಡಿದೆನೆಂದು ಹೇಳುತ್ತಾನೆ.[6] ಆನಂದವನ್ನು ತರುವ ಸೋಗಿನಲ್ಲಿ ಉಪದೇಶಮಾಡುವುದೇ ಕಾವ್ಯದ ಧ್ಯೇಯವೆಂದು ನಂಬಲಾಗಿತ್ತು.[7] ಕವಿಯ 'ವ್ಯುತ್ಪತ್ತಿ'ಯು ಎಲ್ಲ ಶಾಸ್ತ್ರಗಳಲ್ಲೂ ಇರಬೇಕೆಂದೂ ಅವನ ಭಾರವು ಬಹಳ ಹೆಚ್ಚಿನದೆಂದೂ ಹೇಳಲು ಇವೇ ಕಾರಣಗಳು.[8] ಸಾಹಿತ್ಯಶಾಸ್ತ್ರವೇ ಆದ ಅಲಂಕಾರ ಶಾಸ್ತ್ರದಲ್ಲಂತೂ ಕವಿಯು ಅನಿವಾರ್ಯವಾಗಿ ಹೆಚ್ಚಿನ ಪ್ರಾವೀಣ್ಯವನ್ನು ಪಡೆದು ಅದನ್ನು ತನ್ನ ಕಾವ್ಯದಲ್ಲಿ ಬೆಳಗಬೇಕಾಗಿತ್ತು. ಕ್ರಿ.ಶ. ಎಂಟನೆಯ ಶತಮಾನದ ಉದ್ಭಟನು ಕೂಡ ಒಂದು ಇಡಿಯ 'ಕುಮಾರಸಂಭವ' ಕಾವ್ಯವನ್ನೇ ಬೇರೆ ಬೇರೆ ಅಲಂಕಾರಗಳ ಉದಾಹರಣರೂಪವಾಗಿ ಬರೆದನು. ಭಾರವಿ, ಮಾಘ, ಹರ್ಷ ಮುಂತಾದವರೆಲ್ಲರೂ ಇಂತಹ 'ವಿದ್ವತ್ಕವಿ'ಗಳೇ ಆಗಿದ್ದರೆಂಬುದು ಸ್ಪಷ್ಟ. ಈ ಪರಿಸ್ಥಿತಿಯು ಬಹಳಮಟ್ಟಿಗೆ ವ್ಯಾಖ್ಯಾನಗಳ ಸರಣಿ ಹೇಗಿರಬೇಕೆಂಬುದನ್ನು ನಿರ್ಧರಿಸಿ

[5] ಹೋಲಿಸಿ—"ವ್ಯಾಖ್ಯಾಗಮ್ಯಮಿದಂ ಕಾವ್ಯಮುತ್ಸವಃ ಸುಧಿಯಾಮಲಮ್ |
ಹತಾ ದುರ್ಮೇಧಸಶ್ಚಾಸ್ಮಿನ್ ವಿದ್ವತ್ಪ್ರಿಯತಯಾ ಮಯಾ ||"
—ಭಟ್ಟಿಕಾವ್ಯ, XXII, 34.

[6] ನೋಡಿ—"ಇತ್ಯೇಷಾ ವ್ಯುಪಶಾನ್ತಯೇ ನ ರತಯೇ ಮೋಕ್ಷಾರ್ಥಗರ್ಭಾ ಕೃತಿಃ . . ."
—ಅಶ್ವಘೋಷನ ಸೌಂದರನಂದ.

[7] ಹೋಲಿಸಿ—"ಕಟುಕೌಷಧವಚ್ಛಾಸ್ತ್ರಮವಿದ್ಯಾವ್ಯಾಧಿನಾಶಕಮ್ |
ಆಹ್ಲಾದ್ಯಾಮೃತವತ್ಕಾವ್ಯಮವಿವೇಕಗದಾಪಹಮ್ ||"

[8] ಹೋಲಿಸಿ—"ನ ತಚ್ಛಿಲ್ಪಂ ನ ತಚ್ಛಾಸ್ತ್ರಂ ನ ಸಾ ವಿದ್ಯಾ ನ ಸಾ ಕಲಾ |
. . . ಯನ್ನ ಭವತಿ ಕಾವ್ಯಾಂಗಂ ಅಹೋ ಭಾರೋ ಮಹಾನ್ಕವೇಃ ||"

ತೆನ್ನಬಹುದು. ಕಷ್ಟಪದಗಳಿಗೆ ಅರ್ಥ, ಶ್ಲೋಕದ ಅನ್ವಯಕ್ರಮ, ವ್ಯಾಕರಣಾಂಶಗಳು, ಛಂದಸ್ಸಿನ ಸ್ವರೂಪ, ಅನ್ಯಶಾಸ್ತ್ರಪ್ರಕ್ರಿಯೆಗಳು, ವಿಶೇಷವಾಗಿ ಅಲಂಕಾರಶಾಸ್ತ್ರದ ಅಂಶಗಳು—ಇವೆಲ್ಲವನ್ನೂ ಸಂಗ್ರಹವಾಗಿ ಒಂದೊಂದು ಪದ್ಯಕ್ಕೂ ಬರೆಯುವುದು ವ್ಯಾಖ್ಯಾನದ ಕ್ರಮ. ಬೇರೆ ಮಾತಿನಲ್ಲಿ ಹೇಳುವುದಾದರೆ, ಇತರ ಶಾಸ್ತ್ರಗಳಲ್ಲಿ ಮೂಲದ ಅರ್ಥ ಸ್ಪಷ್ಟವಾಗಬೇಕಾದರೆ ಯಾವ ರೀತಿಯಲ್ಲಿ ವ್ಯಾಖ್ಯಾನವನ್ನು ಬರೆಯುತ್ತಿದ್ದರೋ,[9] ಹೆಚ್ಚು ಕಡಿಮೆ ಅದೇ ಕ್ರಮವನ್ನು ಟೀಕಾಕಾರರು ಸಾಹಿತ್ಯದಲ್ಲೂ ಅನುಸರಿಸುತ್ತಿದ್ದರು.[10] ವಾಚ್ಯಾರ್ಥದ ತಿಳಿವಳಿಕೆಗೆ ಎಷ್ಟು ಆವಶ್ಯಕವೋ ಅಷ್ಟು ಅಂಶಗಳೂ ಈ ವ್ಯಾಖ್ಯಾನದಲ್ಲಿರುತ್ತಿದ್ದುವು. ಆದರೆ ಇದು ಕಾವ್ಯಾಭ್ಯಾಸದ ಮೊದಲನೆಯ ಮೆಟ್ಟಿಲು ಮಾತ್ರ; ತುದಿಯ ಧ್ಯೇಯವಲ್ಲ. ಸಾಹಿತ್ಯದಲ್ಲಿ ಆಗ ತಾನೆ ಪ್ರವೇಶಮಾಡುತ್ತಿರುವವರಿಗೆ ಅಗತ್ಯವಾದ ಅಂಗ; ಪ್ರೌಢರಿಗೆ ಅಷ್ಟು ಸಾಲದು. ಆದುದರಿಂದ ಮಲ್ಲಿನಾಥನೇ ಆದಿಯಾಗಿ ಅನೇಕ ವ್ಯಾಖ್ಯಾನಕಾರರು ತಮ್ಮ ವ್ಯಾಖ್ಯಾನವು 'ಮಂದಬುದ್ಧಿ'ಗಳ ಅನುಗ್ರಹಕ್ಕೋಸ್ಕರವೇ ಹೊರಟಿರುವುದೆಂದು ನಿಸ್ಸಂದೇಹವಾಗಿ ಹೇಳುತ್ತಾರೆ.[11]

---

9 "ಉಪಾದೇಯಸ್ಯ ಸಂಪಾಠಸ್ತದನ್ಯಸ್ಯ ಪ್ರತೀಕನಮ್ |
ಸ್ಫುಟವ್ಯಾಖ್ಯಾ ವಿರೋಧಾನಾಂ ಪರಿಹಾರಃ ಸುಪೂರ್ಣತಾ ||
ಲಕ್ಷ್ಯಾನುಸರಣಂ ಶ್ಲಿಷ್ಟವಕ್ತವ್ಯಾಂಶವಿವೇಚನಮ್ |
ಸಂಗತಿಃ ಪೌನರುಕ್ತ್ಯಾನಾಂ ಸಮಾಧಾನ ಸಮಾಕುಲಮ್ ||
ಸಂಗ್ರಹ ಶ್ಚೇತ್ಯಯಂ ವ್ಯಾಖ್ಯಾಪ್ರಕಾರೋಽತ್ರ ಸಮಾಶ್ರಿತಃ ||
—ಅಭಿನವಭಾರತೀ (ನಾಟ್ಯಶಾಸ್ತ್ರವ್ಯಾಖ್ಯಾ)

10 ಹೋಲಿಸಿ—"ಅರ್ಥಾನ್ವ್ಯಂಜಯಿತುಂ ಪ್ರಾಚಾಂ ಶಾಸ್ತ್ರೇಷು ವಿನಿವೇಶಿತಾನ್ |
ಸತಾಂ ಹೃದಂಬುಜೋಲ್ಲಾಸಮಾಧಾತುಂ ಚ ಸಮುದ್ಯತಾ ||
—ಉತ್ತರರಾಮಚರಿತೆಯ ಕುಮಾರತಾತಾರ್ಯವ್ಯಾಖ್ಯಾ.

ಮತ್ತು "ಪದಚ್ಛೇದಃ ಪದಾರ್ಥೋಕ್ತಿಃ ವಿಗ್ರಹೋ ವಾಕ್ಯಯೋಜನಾ |
ಆಕ್ಷೇಪಸ್ಯ ಸಮಾಧಾನಂ ವ್ಯಾಖ್ಯಾನಂ ಪಂಚಲಕ್ಷಣಂ ||"

11 ಹೋಲಿಸಿ—"ಮಲ್ಲಿನಾಥಕವಿಸ್ಸೋಽಯಂ ಮನ್ದಾತ್ಮಾನುಜಿಘೃಕ್ಷಯಾ |
ವ್ಯಾಚಷ್ಟೇ ಕಾಲಿದಾಸೀಯಂ ಕಾವ್ಯತ್ರಯಮನಾಕುಲಮ್ ||"
—ರಘುವಂಶವ್ಯಾಖ್ಯಾ ಸಂಜೀವಿನೀ.

ಮತ್ತು, "ಹಿತಾಯ ಮನ್ದಬುದ್ಧೀನಾಂ ಪ್ರೀತಯೇ ಕೃತಿನಾಂ ಕೃತಾ |
ವ್ಯಾಖ್ಯಾ ಮಿಶ್ರಾರ್ಜುನೇನೇಯಂ ಸುಖಂ ಧೀರೈರ್ವಿಲೋಕ್ಯತಾಮ್ ||"
—ಮಹಾಭಾರತದ ಅರ್ಜುನಮಿಶ್ರವ್ಯಾಖ್ಯಾ.

ಇದರ ಜತೆಗೆ ಇನ್ನೊಂದು ಪ್ರಬಲ ಕಾರಣವೆಂದರೆ ಆಗ ಪ್ರಚಾರದಲ್ಲಿದ್ದ ಸಾಹಿತ್ಯ ಪಾಠಕ್ರಮ. ಮೊದಲು ಅಕ್ಷರಾಭ್ಯಾಸ, ಅನಂತರ ಅಮರ, ಧಾತು, ಶಬ್ದಗಳ ಕಂಠಪಾಠ, ಆಮೇಲೆ ಸುಲಭವಾದ ಕಾಳಿದಾಸನ ಕಾವ್ಯಗಳು, ಅದಕ್ಕೂ ಮೇಲೆ ಮಾಘ, ಭಾರವಿ, ನೈಷಧ ಮುಂತಾದ ಪ್ರೌಢಗ್ರಂಥಗಳು, ಅಲ್ಲಿಂದ ಮುಂದೆ ಚಂಪೂ ಗ್ರಂಥಗಳು, ಕೊನೆಗೆ ನಾಟಕಾಭ್ಯಾಸ, ಈ ಕ್ರಮದಲ್ಲಿ ಸಾಹಿತ್ಯವನ್ನು ಓದಲಾಗುತ್ತಿತ್ತು. ಭಾಷಾಜ್ಞಾನ ಅಥವಾ ವ್ಯುತ್ಪತ್ತಿಯೇ ಈ ಪಾಠಕ್ರಮದ ಮೂಲತತ್ವವೆಂಬುದು ನೋಡಿದೊಡನೆಯೇ ತಿಳಿಯುತ್ತದೆ. ಕಾವ್ಯಾನಂದಕ್ಕೆ ಅಭ್ಯಾಸಕಾಲದಲ್ಲಿ ಹೆಚ್ಚು ಗಮನವಿರುತ್ತಿರಲಿಲ್ಲ. ವ್ಯುತ್ಪತ್ತಿಯನ್ನು ಸಂಪಾದಿಸಿದಮೇಲೆಯೇ ಆನಂದದ ಆಸ್ವಾದ ಪ್ರಶ್ನೆಯೇ ಹೊರತು ಮೊದಲಲ್ಲ. ಹೀಗೆ ಭಾಷಾಜ್ಞಾನ ಉತ್ತಮವಾಗಲು ಪೂರ್ತಿ ಗ್ರಂಥವನ್ನು ಓದುವ ಆವಶ್ಯಕತೆಯೂ ಅಷ್ಟೇನೂ ಇರಲಿಲ್ಲ. ಅದರಿಂದ ಕಾವ್ಯಪಾಠವೆಂದರೆ ಕಾವ್ಯದ ಕೆಲವು ಸರ್ಗಗಳ ಪಾಠವೇ ಆಗಿ ಪೂರ್ಣ ಗ್ರಂಥದ ವಿಮರ್ಶೆಯ ಗೋಜಿಗೇ ಹೋಗದೆ ಇರುತ್ತಿದ್ದವರ ಉದಾಹರಣೆಗಳೂ ಉಂಟು. ಓದಿದಷ್ಟನ್ನು ಮಾತ್ರ ಕೂಲಂಕಷವಾಗಿ ತಿಳಿದು, ಪ್ರತಿಯೊಂದು ಪದಕ್ಕೂ ರೂಪಾಂತರಗಳೇ ಮೊದಲಾದ ವ್ಯಾಕರಣ, ಛಂದಸ್ಸು, ಕೋಶಗಳ ನಿಯಮಗಳನ್ನು ಹಸ್ತಗತಮಾಡಿಕೊಳ್ಳುತ್ತಿದ್ದರು. ಭಾಷಾಭ್ಯಾಸಿಗಳ ಉಪಯೋಗಕ್ಕಾಗಿ ಕಾವ್ಯಾವಲೋಕನದಂತೆಯೇ ಶಬ್ದಾನುಶಾಸನವನ್ನೂ ಛಂದೋವಿಚಿತಿಯನ್ನೂ ಲೇಖಕರು ಬರೆಯುತ್ತಿದ್ದರು.[12] ಈ ವಿದ್ಯಾಭ್ಯಾಸ ಕ್ರಮದಲ್ಲಿ ವ್ಯಾಖ್ಯಾನಕಾರರ ಗಮನವೆಲ್ಲವೂ ಹೆಚ್ಚಾಗಿ ವ್ಯುತ್ಪತ್ತಿಗೆ ಸಹಕಾರಿಗಳಾದ ಅಂಶಗಳನ್ನು ಬರೆಯುವುದರಲ್ಲೇ ಇದ್ದಿತೆನ್ನುವುದು ವ್ಯಕ್ತವಾಗಿಯೇ ಇದೆ.

ಮೂರನೆಯದಾಗಿ, ವ್ಯಾಖ್ಯಾನಕಾರರು ತಾವು ಮಹಾ ವಿದ್ವಾಂಸರೆಂದೂ ತಿಳಿದವರೆಂದೂ ಕೀರ್ತಿಯನ್ನು ಪಡೆಯುವ ಉದ್ದೇಶದಿಂದ ವ್ಯಾಖ್ಯಾನಗಳನ್ನು ಬರೆಯುತ್ತಿದ್ದರು. ತಮ್ಮ ಪಾಂಡಿತ್ಯದ ಪ್ರಕರ್ಷವನ್ನು ಬೇಕಾದಂತೆ ಪ್ರಾರಂಭದಲ್ಲಿಯೇ ಹೊಗಳಿಕೊಳ್ಳುವುದೂ ಉಳಿದವರನ್ನು ಕುಚೋದ್ಯಮಾಡುವುದೂ ಕೆಲವು ವ್ಯಾಖ್ಯಾನಗಳ ಸಂಪ್ರದಾಯ. ಇಂತಹವರಲ್ಲಿ ಮಲ್ಲಿನಾಥನೂ ಒಬ್ಬನೆಂದೇ ಹೇಳಬೇಕಾಗುತ್ತದೆ.[13]

---

12 ಉದಾಹರಣೆಗೆ ಸಂಸ್ಕೃತದಲ್ಲಿ ಹೇಮಚಂದ್ರನನ್ನೂ ಕನ್ನಡದಲ್ಲಿ ನಾಗವರ್ಮನನ್ನೂ ಹೇಳಬಹುದು.

13 ನೋಡಿ—"ವಾಣೀಂ ಕಾಣಭುಜೀಮಜೀಗಣದವಾಶಾಸೀಚ್ಚ ವೈಯಾಸಿಕೀ—
ಮನ್ತಸ್ತನ್ತ್ರಮರಂಸ್ತ ಪನ್ನಗಗವೀಗುಂಫೇಷು ಚಾಜಾಗರೀತ್ !
ವಾಚಾಮಾಕಲಯದ್ರಹಸ್ಯಮಖಿಲಂ ಯಶ್ಚಾಕ್ಷಪಾದಸ್ಫುರಾಂ
ಲೋಕೇಽಭೂದ್ಯದುಪಜ್ಞಮೇವ ವಿದುಷಾಂ ಸೌಜನ್ಯಜನ್ಯಂ ಯಶಃ ||"

ಅವನಿಗಿಂತಲೂ ಮುಂದೆ ಹೋಗಿ ತಮ್ಮ ಪ್ರೌಢಿಮೆಯನ್ನು ಮೆರೆಯುವ ಒಂದೇ ಉದ್ದೇಶದಿಂದ ಹೊರಟ ವ್ಯಾಖ್ಯಾನಕಾರರು ಮೂಲಕ್ಕೆ ಒಂದು, ಎರಡು, ಮೂರು, ಎಷ್ಟೋ ಕಡೆ ಇನ್ನೂ ಹೆಚ್ಚು ಅರ್ಥಗಳನ್ನು ಹೇಳುವುದುಂಟು. ಶೃಂಗಾರರಸಪ್ರಧಾನ ವಾದ ಅಮರುಶತಕಕ್ಕೆ ಶಾಂತಪರವಾದ ವ್ಯಾಖ್ಯಾನಮಾಡಿ ತಮ್ಮ ಪ್ರತಿಷ್ಠೆಯನ್ನು ಪ್ರಕಟಿಸಿರುವವರೂ ಇದ್ದಾರೆ.[14] ಉದಾಹರಣೆಗೆ ರಾಮಾಯಣವೆಲ್ಲ ವಿಶಿಷ್ಟಾದ್ವೈತ ಮತಪ್ರಕ್ರಿಯೆಯನ್ನು ಸುಲಭವಾಗಿ ತಿಳಿಸುವ ಕಾವ್ಯವೆಂದು ವ್ಯಾಖ್ಯಾನ ಬರೆದವರೂ ಇದ್ದಾರೆ. ತಮಗೆ ಪ್ರಪಂಚದಲ್ಲಿ ಏನೇನು ಗ್ರಾಹ್ಯವೆಂದು ತೋರುತ್ತದೆಯೋ ಅದೆಲ್ಲ ಮೂಲದಲ್ಲಿ ಕವಿಯ ಆಶಯವೆಂದು ಹೇಳುವವರನ್ನೂ ನೋಡಬಹುದು.[15] ಆದರೆ ಇಂತಹ ಅತಿಯನ್ನು ಮುಟ್ಟಿದ ವ್ಯಾಖ್ಯಾನಗಳ ಸಂಖ್ಯೆಯು ಒಟ್ಟಿನಲ್ಲಿ ಕಡಿಮೆ ಯೆನ್ನುವುದು ಸಂತೋಷಕರವಾದ ಸಂಗತಿ.

ಇಂತಹ ವ್ಯಾಖ್ಯಾನಗಳೆಲ್ಲಾ ಒಂದು ಗುಂಪಿಗೆ ಸೇರತಕ್ಕುವು; ಪಂಡಿತರು ಮಂದಾತ್ಮರಿಗಾಗಿ ಬರೆದ ವ್ಯಾಖ್ಯಾನಗಳು. ಮಾತೆತ್ತಿದರೆ ಕೋಶಗಳ, ಪಾಣಿನಿಯ, ಇತರ ದರ್ಶನಗಳ ಆಧಾರಗಳ ಒಟ್ಟಿಲು; ಪೂರ್ವಕಥಾಸೂಚನೆ, ಪೂರ್ವಾಪರ ಸಮ ನ್ವಯ, ಪಾಠಭೇದವಿಮರ್ಶೆಗಳಿಗೂ ಅಲ್ಲಲ್ಲಿ ಅವಕಾಶವುಂಟು. 'ಅರ್ಥದ್ಯೋತನಿಕಾ', 'ಪದಾರ್ಥಚಂದ್ರಿಕಾ', 'ವಿಷಮಪದಪ್ರಕಾಶ' ಮುಂತಾದ ವ್ಯಾಖ್ಯಾನಗಳ ಹೆಸರನ್ನು ನೋಡಿದರೇ ಅವುಗಳ ಮುಖ್ಯ ಉದ್ದೇಶವು ತಿಳಿಯುತ್ತದೆ. ಈ ಬಗೆಯ ವ್ಯಾಖ್ಯಾನಗಳ ಮಾದರಿಯನ್ನು ಒಂದು ಉದಾಹರಣೆಯಲ್ಲಿ ನೋಡೋಣ:

"ಸಂಚಾರಿಣೀ ದೀಪಶಿಖೇವ ರಾತ್ರೌ ಯಂ ಯಂ ವ್ಯತೀಯಾಯ ಪತಿಂವರಾ ಸಾ |
ನರೇಂದ್ರಮಾರ್ಗಾಟ್ಟ ಇವ ಪ್ರಪೇದೇ ವಿವರ್ಣಭಾವಂ ಸ ಸ ಭೂಮಿಪಾಲಃ ||"

—ರಘುವಂಶ, VI, 67.

ಈ ಶ್ಲೋಕದಲ್ಲಿ ಇಂದುಮತೀ ಸ್ವಯಂವರಕ್ಕೆ ಬಂದಿದ್ದ ರಾಜರ ಆಶಾಭಂಗವನ್ನು ಕವಿಯು ವರ್ಣಿಸಿದ್ದಾನೆ. ರಾಜರು ಸಾಲಾಗಿ ಪೀಠಗಳಲ್ಲಿ ಕುಳಿತಿರುವಾಗ ಇಂದು

ಮತ್ತು "ಭಾರತೀ ಕಾಲಿದಾಸಸ್ಯ ದುರ್ವ್ಯಾಖ್ಯಾವಿಷಮೂರ್ಛಿತಾಂ |
ಏಷಾ ಸಂಜೀವಿನೀ ಟೀಕಾ ತಾಮದ್ಯೋಜ್ಜೀವಯಿಷ್ಯತಿ ||"

—ರಘುವಂಶವ್ಯಾಖ್ಯಾ.

14 ಹೋಲಿಸಿ—"ಕ್ವಚಾತಿಕರ್ಕಶಃ ಶಾನ್ತಃ ಕ್ವಚಾತಿಲಲಿತಃ ಶುಚಿಃ |
ಏಕತ್ರ ವಾಕ್ಯೇ ವ್ಯಾಖ್ಯಾತುಸ್ತಾವಹೋ ಕೌಶಲಂ ಕವೇಃ ||"

—ರವಿಚಂದ್ರನ ಅಮರುಶತಕವ್ಯಾಖ್ಯಾ

15 ಉದಾ.—ಅರುಣಗಿರಿನಾಥನ ರಘುವಂಶವ್ಯಾಖ್ಯಾನದ ಉಪಕ್ರಮಶ್ಲೋಕಗಳನ್ನು ನೋಡಿ.

ಮತಿಯು ಮುಂದೆ ಮುಂದೆ ಬರುತ್ತಾಳೆ. ಪ್ರತಿಯೊಬ್ಬ ರಾಜನೂ ತನ್ನವರೆಗೆ ಇಂದುಮತಿಯು ಬರುವವರೆಗೂ ಬಹಳ ಆಸೆಯನ್ನಿಟ್ಟುಕೊಂಡಿರುತ್ತಾನೆ. ಅವಳು ಬಂದು ಲಕ್ಷಿಸದೆ ತನ್ನನ್ನು ದಾಟಿಕೊಂಡು ಹೋದಕೂಡಲೆ ಅವನ ಮುಖವು ಕಳೆಗುಂದುತ್ತದೆ. ಉಳಿದವರ ತವಕವು ಇನ್ನೂ ಹೆಚ್ಚುತ್ತದೆ. ಈ ಅರ್ಥವನ್ನು ಕವಿಯು ಬಹಳ ಸುಂದರವಾದ ಉಪಮಾನದಿಂದ ವಿವರಿಸಿದ್ದಾನೆ. ರಾತ್ರಿಯವೇಳೆ ರಾಜಮಾರ್ಗದಲ್ಲಿ ದೀಪವನ್ನು ಹಿಡಿದು ಮುಂದುವರಿಯುತ್ತಿದ್ದರೆ ದಾಟಿ ಕಳೆದ ಉಪ್ಪರಿಗೆಗಳು ಕ್ರಮಕ್ರಮವಾಗಿ ಕತ್ತಲಲ್ಲಿ ಮಸಕಾಗುವಂತೆಯೂ ಮುಂದಿನ ಉಪ್ಪರಿಗೆಗಳು ತೇಜೋಮಯವಾಗುವಂತೆಯೂ ಈ ರಾಜರ ಮುಖಭಾವವಿತ್ತೆಂದು ವರ್ಣಿಸುತ್ತಾನೆ. ಇಂದುಮತಿಯನ್ನು ದೀಪಶಿಖೆಗೆ ಹೋಲಿಸುವುದರಿಂದ ಅವಳ ಸೌಂದರ್ಯರಾಶಿಯು ಎಷ್ಟು ಲೋಕೋತ್ತರವಾದುದೆನ್ನುವುದೂ ತೋರುತ್ತದೆ. ಈ ಶ್ಲೋಕಕ್ಕೆ ಮಲ್ಲಿನಾಥನು ಬರೆಯುವ ವ್ಯಾಖ್ಯಾನದಲ್ಲಿ ಭಾವಾರ್ಥಗಳ ವಿವರಣೆಯಾಗಲಿ ವಿಶೇಷಾಂಶಗಳಾಗಲಿ ಏನೂ ಇಲ್ಲ. ಅನ್ವಯಕ್ರಮವಾದ ವಾಚ್ಯಾರ್ಥವಷ್ಟೇ ಇರುವುದು.[16] ಈಗ ತಮ್ಮ ಶಾಸ್ತ್ರಪಾಂಡಿತ್ಯವನ್ನು ಬೆಳಗಲು ಬರೆದ ವ್ಯಾಖ್ಯಾನದ ಉದಾಹರಣೆಯೊಂದನ್ನು ಕೊಟ್ಟು ಈ ಚರ್ಚೆಯನ್ನು ಮುಗಿಸಬಹುದು :

> "ನಿಮೀಲಿತಾದಕ್ಷಿಯುಗಾಚ್ಚ ನಿದ್ರಯಾ
> ಹೃದೋಽಪಿ ಬಾಹ್ಯೇಂದ್ರಿಯ ಮೌನಮುದ್ರಿತಾತ್ |
> ಅದರ್ಶಿ ಸಂಗೋಪ್ಯ ಕದಾಪ್ಯವೀಕ್ಷಿತೋ
> ರಹಸ್ಯಮಸ್ಯಾಸ್ಸ ಮಹನ್ಮಹೀಪತಿಃ"—ನೈಷಧ, I, 40.

ಇದು ದಮಯಂತಿಗೆ ನಳನಲ್ಲಿದ್ದ ಅನನ್ಯವಾದ ಪ್ರೇಮದ ವರ್ಣನೆ. ನಿದ್ರಾದೇವಿಯು (ಚತುರಳಾದ ಸಖಿಯಂತೆ) ಗೋಪ್ಯವಾಗಿ ನಳನ ಸಮಾಗಮವನ್ನು ದಮಯಂತಿಗೆ ಮಾಡಿಸಿದಳೆಂದು ಕವಿಯು ಹೇಳುತ್ತಾನೆ. ರಹಸ್ಯವೆಂದರೆ ಅದೂ ಬಹಳ ರಹಸ್ಯವಾಗಿ ; ದಮಯಂತಿಯ ಕಣ್ಣಿಗೆ, ಅಷ್ಟೇಕೆ, ಮನಸ್ಸಿಗೂ ತಿಳಿಯದಂತೆ ಎಂದು ಕವಿಯ ಉತ್ಪ್ರೇಕ್ಷೆ. ನಿದ್ರಾವಸ್ಥೆಯಲ್ಲಿ ಕಣ್ಣುಮುಚ್ಚಿ ಮನಸ್ಸೂ ಸ್ತಬ್ಧವಾಗಿದ್ದಾಗ ಕೇವಲ ಅವಳ ಆತ್ಮಕ್ಕೆ ನಳನ ಸಮಾಗಮವಾಯಿತೆಂದು ಅಭಿಪ್ರಾಯ.

---

16 "ಸಂಚಾರಿಣೀತಿ || ಪತಿಂವರಾ ಸೇಂದುಮತೀ ರಾತ್ರೌ ಸಂಚಾರಿಣೀ ದೀಪಶಿಖೇವ ಯಂ ಯಂ ಭೂಮಿಪಾಲಂ ವ್ಯತೀಯಾಯಾತೀತ್ಯ ಗತಾ ಸ ಸ ಭೂಮಿಪಾಲಃ, ಸ ಸರ್ವ ಇತ್ಯರ್ಥಃ. 'ನಿತ್ಯವೀಪ್ಸಯೋಃ' ಇತಿ ವೀಪ್ಸಾಯಾಂ ದ್ವಿರ್ವಚನಮ್. ನರೇಂದ್ರಮಾರ್ಗೇ ರಾಜಪಥೇಽಟ್ಟಾಬ್ಯೋ ಗೃಹಭೇದ ಇವ. 'ಸ್ಯಾದಟ್ಟಃ ಕ್ಷೌಮಮಸ್ತ್ರಿಯಾಮ್' ಇತ್ಯಮರಃ. ವಿವರ್ಣಭಾವಂ ವಿಚ್ಛಾಯತ್ವಮ್. ಅಟ್ಟಸ್ತು ತಮೋವೃತತ್ವಂ ಪ್ರಪೇದೇ."—ಮಲ್ಲಿನಾಥನ ವ್ಯಾಖ್ಯಾನ.

ಮಲ್ಲಿನಾಥನು ಕೂಡ ದಮಯಂತಿಯು ನಳನನ್ನು ಕನಸಿನಲ್ಲಿ ಕಂಡಳೆಂದೇ ಇದರ ತಾತ್ಪರ್ಯವನ್ನು ಬರೆದಿದ್ದಾನೆ. ನಾರಾಯಣನಾದರೋ, ಈ ಶ್ಲೋಕಕ್ಕೆ ವ್ಯಾಖ್ಯಾನ ಮಾಡುತ್ತಾ ವೇದಾಂತಶಾಸ್ತ್ರದ ಸೂಕ್ಷ್ಮಪ್ರಕ್ರಿಯೆಗಳನ್ನು ತಂದು ಅನವಶ್ಯವಾಗಿ ಎರಡು ಮೂರು ಪುಟಗಳಷ್ಟು ವಿವರಿಸಿದ್ದಾನೆ. ವೇದಾಂತಶಾಸ್ತ್ರದ ರೀತಿಯಾಗಿ ಸುಷುಪ್ತಿಯಲ್ಲಿ ಆತ್ಮಾನಂದವುಂಟು. ಇಲ್ಲಿ ದಮಯಂತಿಯು ನಳನನ್ನೇ ಸಂತತವಾಗಿ ಧ್ಯಾನಿಸುತ್ತಾ ನಳಾತ್ಮಭಾವವನ್ನೇ ಪಡೆದಳೆಂದೂ, ಆದುದರಿಂದ ಅವಳು ಸುಷುಪ್ತಿಯಲ್ಲಿ ಸಹ ನಳಭಾವದಿಂದಲೇ ಆತ್ಮಾನಂದವನ್ನು ಅನುಭವಿಸುತ್ತಿದ್ದಳೆಂದೂ ಕವಿಯ ಆಶಯವನ್ನು ಸುದೀರ್ಘವಾಗಿ ವಿಸ್ತರಿಸಿದ್ದಾನೆ.[17]

ಇಷ್ಟೂ 'ಮಂದಾತ್ಮ'ರಿಗಾಗಿ ಬರೆದ ವ್ಯಾಖ್ಯಾನಗಳ ವಿಷಯವಾಯಿತು. ರಸಿಕರ ಮನೋಲ್ಲಾಸಕ್ಕೋಸ್ಕರವೆಂದೇ ಬರೆದ ವ್ಯಾಖ್ಯಾನಗಳೂ ಬೇಕಾದ ಹಾಗೆ ಸಿಕ್ಕುತ್ತವೆ. 'ರಸಿಕಸಂಜೀವಿನೀ', 'ರಸಮಂಜರೀ', 'ಸಹೃದಯಾನಂದಿನೀ', 'ಭಾವಪ್ರದ್ಯೋತಿನೀ', 'ತಲಸ್ಪರ್ಶಿನೀ' ಮುಂತಾದ ವ್ಯಾಖ್ಯಾನಗಳ ಹೆಸರುಗಳು ಈ ಅಂಶವನ್ನು ಸ್ಪಷ್ಟಪಡಿಸಲು ಸಾಕು. ಗಾಥಾಸಪ್ತಶತೀ, ಅಮರುಶತಕ, ಗೀತಗೋವಿಂದ ಮುಂತಾದ ಶೃಂಗಾರರಸಪ್ರಧಾನವಾದ ಕಾವ್ಯಗಳಿಗೆ ಸಾಧಾರಣವಾಗಿ ಇಂತಹ ವ್ಯಾಖ್ಯಾನಗಳು ಸಿಕ್ಕುತ್ತವೆ.[18] ಇವುಗಳಲ್ಲಿ ಸಹ ನಾವು ಮೊದಲು ನೋಡಿದ ಅಂಶಗಳು ಇದ್ದೇ ಇರುತ್ತವೆ. ಅಲ್ಲಲ್ಲಿ ವಾಚ್ಯವಲ್ಲದ ವ್ಯಂಗ್ಯಾರ್ಥಗಳನ್ನು ವಿವರಿಸುವುದು ಮಾತ್ರ ಅತಿಶಯ. ಮೇಘದೂತ, ಋತುಸಂಹಾರ ಮೊದಲಾದ ಖಂಡಕಾವ್ಯಗಳಿಗೂ ಈ ಮಾದರಿಯ ವ್ಯಾಖ್ಯಾನಗಳುಂಟು. ರಸದೃಷ್ಟಿಯನ್ನು ಬಿಟ್ಟು ಸುಮ್ಮನೆ ದೀರ್ಘವಾಗಿ ವ್ಯಾಖ್ಯಾನ ಬರೆಯುವವರನ್ನು ಪೂರ್ಣಸರಸ್ವತಿಯು ತನ್ನ

17 ನಾರಾಯಣನ 'ನೈಷಧೀಯಪ್ರಕಾಶ'ವನ್ನು ನೋಡಿ.

18 ಹೋಲಿಸಿ—"ತದುಭಯರಸಪರಿಪಾಟೀ ಪರಿಹೃತವಾಟೀಮಿಮಾಂ ರಮ್ಯಾಂ |
ಕುರುತೇಽಮರಶತಟೀಕಾಂ . . . ಜ್ಞಾನಾನಂದಕಲಾಧರಃ ||
ಯದಿ ಸ್ಯಾತ್ಪರಮಾನಂದೇ ಕಾಮಾನಂದೇ ಚ ವಾಸನಾ |
ತದಾ ಸಂಸೇವ್ಯತಾಂ ಧೀರಾಷ್ಟೀಕೇಯಂ ಕಾಮದಾ ಸದಾ ||
—ಅಮರುಶತಕಟೀಕಾ.

ಮತ್ತು ನೋಡಿ—

"ನಿಧೌ ರಸಾನಾಂ ನಿಲಯೇ ಗುಣಾನಾಂ ಅಲಂಕೃತೀನಾಮುದಧಾವದೋಷೇ
ಕಾವ್ಯೇ ಕವೀಂದ್ರಸ್ಯ ನವಾರ್ಥತೀರ್ಥೋ ಯಾ ವ್ಯಾಚಿಕೀರ್ಷಾ ಮಮ
ತಾಂ ನತೋಸ್ಮಿ ||
—ಮೇಘದೂತ ವ್ಯಾಖ್ಯಾವಿದ್ಯುಲ್ಲತಾ

ಮೇಘದೂತದ ವ್ಯಾಖ್ಯಾನದಲ್ಲಿ ಹಾಸ್ಯಮಾಡುತ್ತಾನೆ.[19] ಈ ಗುಂಪಿನ ವ್ಯಾಖ್ಯಾನಕಾರರು ಒಂದೊಂದುವೇಳೆ ಅಳತೆಮೀರಿ ವ್ಯಂಗ್ಯಾರ್ಥಪ್ರದರ್ಶನಕ್ಕೆ ಹೊರಡುವುದೂ ಕಾಮಸೂತ್ರಸೂಕ್ಷ್ಮಗಳನ್ನು ಸಮನ್ವಯಮಾಡಲಾರಂಭಿಸುವುದೂ ಉಂಟು.[20] ಅಪ್ಪಯ್ಯದೀಕ್ಷಿತರು ಕೂಡ 'ಯಾದವಾಭ್ಯುದಯ'ಕ್ಕೆ ತಾವು ಬರೆದ ವ್ಯಾಖ್ಯಾನದಲ್ಲಿ ಮೊದಲ ಒಂಬತ್ತು ಶ್ಲೋಕಗಳಿಗೆ ಬರೆದಂತಹ ವಿಸ್ತಾರವಾದ ಸರಣಿಯನ್ನು ಮುಂದು ವರಿಸದೆ—"ಹೀಗೆಯೇ ನೋಡಿಕೊಳ್ಳಿ; ಈ ಮಹಾಕವಿಯ ಲಲಿತವಾದ ಶ್ಲೋಕಗಳಲ್ಲೂ ವಿಪುಲವಾದ ಭಾವಗಳು ಅಡಗಿರುತ್ತವೆ"[21] ಎಂದು ಹೇಳಿ ಸುಮ್ಮನಾದರು.

ಕಾವ್ಯಗಳ ವ್ಯಾಖ್ಯಾನ ಸಂಪ್ರದಾಯದ ಸ್ವರೂಪವನ್ನು ನೋಡಿದ್ದಾಯಿತು. ಸಾಮಾನ್ಯವಾಗಿ ನಾಟಕಗಳನ್ನು, ರಾಮಾಯಣ, ಮಹಾಭಾರತಗಳನ್ನು ಕಾವ್ಯವೆಂಬ ಜಾತಿಗೇ ಸೇರಿಸುವುದು ರೂಢಿಯಾದರೂ ಅವುಗಳ ವ್ಯಾಖ್ಯಾನಕ್ರಮದಲ್ಲಿ ಸ್ವಲ್ಪ ವ್ಯತ್ಯಾಸ ತೋರುವುದುಂಟು. ನಾಟಕದ ಕಥಾವಸ್ತುವಿನ ಸಂವಿಧಾನ ದೃಷ್ಟಿಯಿಂದ 'ಸಂಧಿ' 'ಸಂಧ್ಯಂಗ'ಗಳ ಸಮನ್ವಯವನ್ನು ಮಾಡುವುದರಲ್ಲಿ ವ್ಯಾಖ್ಯಾನಕಾರರು ಹೆಚ್ಚು ಆಸಕ್ತಿಯನ್ನು ವಹಿಸುವುದು ಕಂಡುಬರುತ್ತದೆ.[22] ಉಳಿದ ಅಂಶಗಳಲ್ಲಿ ಅಂತಹ ವ್ಯತ್ಯಾಸವೇನೂ ಇಲ್ಲ.

---

19 "ಸುಕವಿವಚಸಿ ಪಾಠಾನನ್ಯಥಾಕೃತ್ಯ ಮೋಹಾ-
ದ್ರಸಗತಿಮವಧೂಯ ಪ್ರೌಢಮರ್ಥಂ ವಿಹಾಯ |
ವಿಬುಧವರಸಮಾಜೇ ವ್ಯಾಕ್ರಿಯಾಕಾಮುಕಾಣಾಂ
ಗುರುಕುಲವಿಮುಖಾನಾಂ ಧೃಷ್ಟತಾಯೈ ನಮೋಽಸ್ತು"—ಅದೇ.

20 ಓದಿ—"ಪಶ್ಯ ನಿಶ್ಚಲ ನಿಷ್ಪನ್ದಾ ಬಿಸಿನೀಪತ್ರೇ ರಾಜತೇ ಬಲಾಕಾ |
ನಿರ್ಮಲಮರಕತ ಭಾಜನಪರಿಸ್ಥಿತಾ ಶಂಖಶುಕ್ತಿರಿವ ||"

—ಗಾಥಾಸಪ್ತಶತೀ, I, i, 4.

ಇದರ ವ್ಯಾಖ್ಯಾನ—"ನಿಶ್ಚಲೋ ಅಚಲಃ, ತದ್ವನ್ನಿಷ್ಪನ್ದಾ. ವೇಗವಿಧಾರಣಪ್ರಯತ್ನವಶಾತ್, ನಿಶ್ಚಲೇತಿ ಪುರುಷಸಂಬೋಧನಂ ವಾ, ಶಂಖಘಟಿತಾ ಶುಕ್ತಿಃ ಶಂಖಶುಕ್ತಿಃ. ತಥಾ ಚ ಯದಿ ವೇಗವಿಧಾರಣಪರೋಽಸಿ ತದೈನಾಂ ಬಲಾಕಾಂ ಪಶ್ಯನ್ನನ್ಯಮನಸ್ಕತಯಾ ಚಿರಂ ರಮಸ್ವೇತಿ ಭಾವಃ. ಯದ್ವಾ ನಿಸ್ಪಂದತ್ವೇನಾಶ್ವಸ್ತತ್ವಮ್, ತೇನ ಚ ಜನರಹಿತತ್ವಂ, ತೇನ ಚ ಸಂಕೇತಸ್ಥಾನಮಿತಿ ಕಯಾಚಿತ್ಕಂಚಿತ್ಪ್ರತಿ ವ್ಯಜ್ಯತೇ; ಅಥವಾ ಮಿಥ್ಯಾ ವದಸಿ ನ ತ್ವಮತ್ರಾಗತೋ ಭೂರಿತಿ ವ್ಯಜ್ಯತೇ||—ಗಂಗಾಧರ.

21 "ಇಥಂ ವಿಚಿಂತ್ಯಾಃ ಸರ್ವತ್ರ ಭಾವಸ್ಸಂತಿ ಪದೇ ಪದೇ |
ಕವಿತಾರ್ಕಿಕಸಿಂಹಸ್ಯ ಕಾವ್ಯೇಷು ಲಲಿತೇಷ್ವಪಿ ||"

22 ಉದಾಹರಣೆಗೆ ಇದನ್ನು ನೋಡಿ—

"ವಿಚಿಂತಯಂತೀ ಯಮನನ್ಯಮಾನಸಾ ತಪೋನಿಧಿಂ ವೇತ್ಸಿ ನ ಮಾಮುಪಸ್ಥಿತಮ್ ||
ಸ್ಮರಿಷ್ಯತಿ ತ್ವಾಂ ನ ಸ ಬೋಧಿತೋಽಪಿ ಸನ್ ಕಥಾಂ ಪ್ರಮತ್ತಃ ಪ್ರಥಮಂ
ಕೃತಾಮಿವ ||"—ಅಭಿಜ್ಞಾನ ಶಾಕುಂತಲ, iv, 1.

ರಾಮಾಯಣ, ಮಹಾಭಾರತ, ಭಾಗವತ ಗದ್ಯ ಕಾವ್ಯಗಳು, ಪರಿಮಿತಿಯಲ್ಲಿ ದೊಡ್ಡವಾದುದರಿಂದ ವಿಸ್ತಾರವಾಗಿ ಎಲ್ಲ ಅಂಶಗಳನ್ನು ಬರೆಯುವುದು ಸುಲಭಸಾಧ್ಯವಾಗಿರಲಿಲ್ಲ. ಅದರಿಂದ ಇವುಗಳಿಗೆ ಬಹಳ ಸಂಗ್ರಹವಾದ ಟಿಪ್ಪಣಿಗಳನ್ನು ಉಪಯುಕ್ತವೆಂದು ತೋರಿದ ಕಡೆಗಳಲ್ಲಿ ಮಾತ್ರ ಬರೆಯುತ್ತಿದ್ದರು. ಇವುಗಳಿಗೆ 'ಗಚ್ಛದ್ವ್ಯಾಖ್ಯಾನ' ಗಳೆಂದೂ ಹೆಸರು. ಮಹಾಭಾರತಕ್ಕೆ ನೀಲಕಂಠೀಯ, ಭಾಗವತಕ್ಕೆ ಶ್ರೀಧರೀಯ, ರಾಮಾಯಣಕ್ಕೆ ಗೋವಿಂದರಾಜೀಯ ವ್ಯಾಖ್ಯಾನಗಳು ಪ್ರಸಿದ್ಧವಾದುವು.[23]

ನಾನಾ ಜಾತಿಗೆ ಸೇರತಕ್ಕ ವಾಖ್ಯಾನಗಳನ್ನು ಈಗ ನೋಡಿದ್ದಾಯಿತು. ವಿಶೇಷವಾಗಿ ಎಲ್ಲ ಬಗೆಯವೂ ಅಲಂಕಾರ ಶಾಸ್ತ್ರದ ತತ್ವಗಳನ್ನು ಪ್ರಕೃತಕ್ಕೆ ಸಮನ್ವಯ ಮಾಡಲು ಯತ್ನಿಸುತ್ತವೆ. ಆ ತತ್ವಗಳು ಕೂಡ ಬೇರೆಬೇರೆಯವರಿಂದ ಬೇರೆಬೇರೆ ರೀತಿ ಪ್ರತಿಪಾದಿಸಲ್ಪಟ್ಟಿದ್ದುವಾದ ಕಾರಣ ವ್ಯಾಖ್ಯಾನಕಾರರು ಸಾಧಾರಣವಾಗಿ ವಿಮರ್ಶೆಗೆ ಹೋಗದೆ ಎಲ್ಲ ಆಲಂಕಾರಿಕರ ದೃಷ್ಟಿಯಿಂದಲೂ ಒಂದೊಂದು

ಇದು ದುರ್ವಾಸರ ಶಾಪವಾಕ್ಯ. ಕೆಳಗಿನ ವ್ಯಾಖ್ಯಾನದಲ್ಲಿ ಯಾವ ವಿವರಣೆಯೂ ಇಲ್ಲ. ನೀರಸವಾದ ಸಂಧಿಸಮನ್ವಯವೊಂದೇ ಕಾಣುವುದು :

"ವಿಚಿಂತಯತೀತಿ. ಪ್ರಮತ್ತಃ=ಪ್ರಕರ್ಷೇಣ ಮತ್ತಃ; ವಿಚಿಂತಯಂತೀ ಯಮನನ್ಯಮಾನಸೇತ್ಯನೇನ ವಾಕ್ಯೇನ ಗಮ್ಯಮಾನಸ್ಯ ಶಕುಂತಲಾಭಿಭವರೂಪಸ್ಯ ಬೀಜಸ್ಯ ಪ್ರಾಪ್ತ್ಯಾಶಾಸಮನ್ವಯಾದ್ಗರ್ಭಸಂಧಿರಿತಿ ಮಂತವ್ಯಮ್. 'ಸ ಗರ್ಭೋ ದೃಷ್ಟನಷ್ಟಸ್ಯ ಯತ್ರ ಬೀಜಸ್ಯ ಮಾರ್ಗಣಂ" ಇತಿ. ನನು ಪತಾಕಾಪ್ರಾಪ್ತ್ಯಾಶಾಸಮನ್ವಯಾದ್ಗರ್ಭಸಂಧಿಃ; ಅತ್ರ ಬೀಜಪ್ರಾಪ್ತ್ಯಾಶಾಸಮನ್ವಯಾದ್ಗರ್ಭಸಂಧಿರಿತಿ ಕಥಮುಚ್ಯತೇ ? ಪತಾಕಾಸಾಪೇಕ್ಷತ್ವಾದಿತಿ ಚೇನ್ನ. ತದಭಾವೇ ಬೀಜಂ ವಾ ಭವತೀತಿ ವಿದ್ಯಮಾನತ್ವಾತ್. ತದುಕ್ತಂ-'ಪತಾಕಾಸಂಭವೇ ಬೀಜಂ ಬಿಂದುಂ ವಾ ವಿನ್ಯಸೇತ್ಸುಧೀಃ' ಇತಿ, ಅಸ್ಯಾಂಗಾನಿ-'ಅಭೂತಾಹರಣಂ ಮಾರ್ಗೋ ರೂಪೋದಾಹರಣಕ್ರಮಾಃ | ಸಂಗ್ರಹಶ್ಚಾನುಮಾನಂ ಚ ತೋಟಕಾಧಿಬಲೇ ಅಪಿ || ಉದ್ವೇಗ ಸಂಭ್ರಮಾಕ್ಷೇಪಾ ದ್ವಾದಶಾಂಗಾನಿ ತಸ್ಯ ಚ ||' ಅತ್ರ ಪೂರ್ವಮಾರಂಭಯತ್ನೌ ದುಷ್ಯಂತಸಂಬಂಧಿನೋ ವೃತ್ತಾಂತಾಃ. ಕಥಮಿದಾನೀಂ ಪ್ರಾಪ್ತ್ಯಾಶಾ ಶಕುಂತಲಾಸಂಬಂಧಿನೀತ್ಯುಚ್ಯತ ಇತಿ ನಾಶಂಕನೀಯಮ್. ಉಭಯೋರಪಿ ಶೃಂಗಾರಾಶ್ರಯತ್ವಾತ್ ನಾಯಿಕಾನಾಯಕಯೋರನ್ಯತರಸಂಬಂಧೇ ನಾಪಿ ಕಾರ್ಯಸಿದ್ಧೇಃ ||

ಕಾಟಯವೇಮನ ಕುಮಾರಗಿರಿರಾಜೀಯ,

(ಬಾಲಮನೋರಮಾ ಗ್ರಂಥಮಾಲೆ).

23 ನೋಡಿ—ಉತ್ತಾನೇಷ್ವಿಹ ಕೋಶವಿಗ್ರಹಬಲಂ ಪದ್ಯೇಷು ನೈವಾಶ್ರಿತಮ್,
ಗಂಭೀರೇಷು ನ ಸೇತವೋ ನ ವಿಹಿತಾಃ ಕೂಟಾ ನ ನ ಸ್ಫೋಟಿತಾಃ |
ನ ಚ್ಛಿನ್ನಾ ನ ತಮುಶ್ಚರಾ ನನತತಿರ್ಭಕ್ತಾ ನ ನಾಹ್ಲಾದಿತಾ
ನೋ ದೀನಾ ನ ವಿಭೀಷಣಾಶ್ಚ ವಿಹಿತಾಃ ಶ್ರೀಲಕ್ಷ್ಮಣಾರ್ಯಶ್ರಿತ್ಯೈಃ ||

ನೀಲಕಂಠೀಯವ್ಯಾಖ್ಯಾ,

ಮಾತನ್ನು ಬರೆಯುವುದೂ ಉಂಟು.[24] ಅಲಂಕಾರ ಶಾಸ್ತ್ರದ ಬೆಳೆವಣಿಗೆಯನ್ನು ಮುಂದೆ ಸೂಚಿಸುವಾಗ ಇದು ಹೆಚ್ಚು ಸ್ಪಷ್ಟವಾಗುವುದು.

ಒಟ್ಟಿನ ಮೇಲೆ ಈ ವ್ಯಾಖ್ಯಾನಗಳಲ್ಲೆಲ್ಲಾ ಸಾಮಾನ್ಯವಾಗಿ ಕಾಣಬರುವ ಎರಡು ದೋಷಗಳೆಂದರೆ ತ್ರಿಪುರಾರಿಯು ತನ್ನ ಮಾಲತೀಮಾಧವದ ವ್ಯಾಖ್ಯಾನದಲ್ಲಿ ಹೇಳುವಂತೆ 'ಅವಕ್ತವ್ಯೋಕ್ತಿ' ಮತ್ತು 'ವಕ್ತವ್ಯತ್ಯಾಗ.'[25] ಅನವಶ್ಯವಾದುದನ್ನಾದರೂ ತಮ್ಮ ಪ್ರೌಢಿಮೆಯನ್ನು ಪ್ರದರ್ಶಿಸುವ ಉದ್ದೇಶದಿಂದ ದೀರ್ಘವಾಗಿ ಚರ್ಚಿಸುವುದು; ಎಷ್ಟೋ ಸಂದೇಹಗಳ ತಂಟೆಗೇ ಹೋಗದೆ ಮೌನದಿಂದ ತೇಲಿಸಿಬಿಡುವುದು. ಅಂತೂ ವ್ಯಾಖ್ಯಾನಗಳು ಸಂಸ್ಕೃತಭಾಷಾವ್ಯುತ್ಪತ್ತಿ ಚೆನ್ನಾಗಲು ಸಹಾಯಕವಾದುವೆನ್ನಲೇಬೇಕು. ಅಚ್ಚಿನ ಸೌಲಭ್ಯಗಳಾವುವೂ ಇಲ್ಲದೆ, ಲಿಖಿತಪುಸ್ತಕಗಳ ಪ್ರತಿಗಳು ವಿರಳವಾಗಿದ್ದ ಆ ಕಾಲದಲ್ಲಿ ಕ್ಷಣಕ್ಷಣಕ್ಕೂ ನಿಘಂಟು, ವ್ಯಾಕರಣಗಳನ್ನು ತೆಗೆದುನೋಡಲು ಅವಕಾಶವಿಲ್ಲದೆ ಇರುತ್ತಿದ್ದಾಗ ವ್ಯಾಖ್ಯಾನಗಳು ಎಷ್ಟೋಮಟ್ಟಿಗೆ ಆ ತೊಂದರೆಯನ್ನು ನಿವಾರಣೆಮಾಡಲು ಸಹಕಾರಿಯಾದುವು. ಅಲ್ಲಲ್ಲಿ ಬಂದ ಸಂಶಯಗಳನ್ನು ಪರಿಹರಿಸುವುದಲ್ಲದೆ ಭಾವಾರ್ಥವನ್ನೂ ಸ್ಪಷ್ಟಪಡಿಸುತ್ತಿದ್ದುವು.

II

ಈಗ ಅಲಂಕಾರಶಾಸ್ತ್ರದ ಸರಣಿಯನ್ನು ಸಂಗ್ರಹವಾಗಿ ಗಮನಿಸೋಣ. ವ್ಯಾಖ್ಯಾನಗಳು ಮುಖ್ಯವಾಗಿ ಎರಡು ದಿಕ್ಕಿನಲ್ಲಿ ಬೆಳೆದಂತೆಯೇ ಅಲಂಕಾರಶಾಸ್ತ್ರದ ಬೆಳೆವಣಿಗೆಯಲ್ಲೂ ದ್ವಿಮುಖವಾದ ಪ್ರವೃತ್ತಿಯನ್ನು ಗುರುತಿಸಬಹುದು. 'ಆದಿಕಾವ್ಯ'ವಾದ ರಾಮಾಯಣ, ಅಲ್ಲಿಂದ ಮುಂದೆ ರಚಿತವಾದ ಮಹಾಕಾವ್ಯಗಳು, ಎಲ್ಲವೂ ಗಾತ್ರದಲ್ಲಿ ಬಹಳ ದೊಡ್ಡವು. ವರ್ಣನೆಯೇ ವಸ್ತುವಿಗಿಂತ ಹೆಚ್ಚಿನ ಮಹತ್ವದ್ದೆಂದು ತಿಳಿಯಲಾಗಿದ್ದುದರಿಂದ[26] ಪಾಠಕರಾರೂ ಒಂದೇ ಸಲ ಕುಳಿತು ಅವುಗಳನ್ನು ಓದಿ ಮುಗಿಸಿ ತಮ್ಮ ಮನಸ್ಸಿನಮೇಲಾದ ಅನುಭವವನ್ನು ಬರೆದಿಡಲು ಸಾಧ್ಯವಿರಲಿಲ್ಲ. ಸ್ವಲ್ಪಸ್ವಲ್ಪವಾಗಿ ಪ್ರತಿಯೊಂದು ಅಂಶದ 'ಸೌಂದರ್ಯಚರ್ವಣೆ'ಯಲ್ಲೇ ಅವರು ಹೆಚ್ಚಾಗಿ ಆಸಕ್ತಿಯನ್ನು ವಹಿಸುವುದು ಅನಿವಾರ್ಯವಾಗಿತ್ತು.

---

24 ಅರುಣಗಿರಿನಾಥನ ರಘುವಂಶವ್ಯಾಖ್ಯಾನದ ಉಪಕ್ರಮ ಶ್ಲೋಕಗಳನ್ನು ನೋಡಿ.

25 "ಸಂತಿ ಯದ್ಯಪಿ ಚೈತಸ್ಯ ವ್ಯಾಖ್ಯಾಃ ಪ್ರಾಚ್ಯಾಸ್ತಥಾಪಿ ತಾಃ |
ಅವಕ್ತವ್ಯೋಕ್ತಿವಕ್ತವ್ಯತ್ಯಾಗಾಭ್ಯಾಂ ನಾದತಾಂ ಬುಧೈಃ ||

26 ನೋಡಿ—"ಪ್ರಜ್ಞಾ ನವನವೋನ್ಮೇಷಶಾಲಿನೀ ಪ್ರತಿಭಾ ಮತಾ |
ತದನುಪ್ರಾಣನಾಜೀವದ್ವರ್ಣನಾನಿಪುಣಃ ಕವಿಃ ||"—ಭಟ್ಟತೌತ.

ಹೀಗಾಗಿ ಅವರು ಒಂದೊಂದು ಶ್ಲೋಕವೂ ಸುಂದರವಾಗಬೇಕಾದರೆ ಆ ಸೌಂದರ್ಯವನ್ನುಂಟುಮಾಡಿಕೊಡುವ ಧರ್ಮ ಸಾಹಿತ್ಯವೆನಿಸಿಕೊಳ್ಳುವ ಶಬ್ದಾರ್ಥಗಳಲ್ಲೇ ಅಡಗಿರಬೇಕೆಂದು ನಿರ್ಧರಿಸಿದರು. ಕಾವ್ಯವೆಂದರೇನು? ರಮಣೀಯವಾದ ಶಬ್ದಾರ್ಥಸಮೂಹ.[27] ಅರ್ಥದಲ್ಲಿ ಸ್ವಾರಸ್ಯವನ್ನು ತರುವ ಅಂಶಗಳಿಗೆ ಅರ್ಥಾಲಂಕಾರಗಳೆಂದೂ ಶಬ್ದಮಾಧುರ್ಯಕ್ಕೆ ಕಾರಣಗಳಾದ ಅಂಶಗಳಿಗೆ ಶಬ್ದಾಲಂಕಾರಗಳೆಂದೂ ಹೆಸರಿಟ್ಟರು. ಶಬ್ದಾರ್ಥಾಲಂಕಾರಗಳ ಸನ್ನಿಧಾನದಿಂದಲೇ ಸಾಧಾರಣವಾದ ಮಾತು ಕೂಡ ಸಾಹಿತ್ಯದ ಪದವಿಯನ್ನೇರುವುದೆನ್ನುವುದು ಪ್ರಾಚೀನಾಲಂಕಾರಿಕರೆಲ್ಲರ ಮತ.[28] ಅಲ್ಲದೆ ಅಲಂಕಾರಗಳೇನೂ ಇಲ್ಲದೆಯೇ ಹೋದರೆ ಅದು ಸಾಹಿತ್ಯವಾಗಲೇ ಆರದೆಂದೂ ಅವರ ಅಭಿಪ್ರಾಯ. "ಅಲಂಕಾರರಹಿತಾ ವಿಧವೇವ ಸರಸ್ವತೀ" ಎಂಬ ವಾಕ್ಯವೂ ಇದನ್ನೇ ಸಮರ್ಥಿಸುತ್ತದೆ. ಉಪಮಾ, ರೂಪಕ, ದೀಪಕ, ಯಮಕ ಮುಂತಾದ ನಾಲ್ಕೈದೇ ಅಲಂಕಾರಗಳು ಮೊದಮೊದಲು ಅಂಗೀಕೃತವಾಗಿದ್ದುವು. ಬರಬರುತ್ತಾ ಹೊಸ ಹೊಸ ಅಲಂಕಾರಗಳನ್ನು ಹುಡುಕಿ ಸೇರಿಸುತ್ತಾ ಬಂದುದರ ಫಲವಾಗಿ ಅವುಗಳ ಸಂಖ್ಯೆಯು ಕೊನೆಯ ಹೊತ್ತಿಗೆ ನೂರನ್ನು ಮೀರಿತು.

ಇನ್ನು ಕೆಲವರು ವಿಮರ್ಶೆಯನ್ನು ಹೀಗೆ ಮುಂದುವರಿಸಿದರು: ಶಬ್ದಾರ್ಥಗಳು ಕಾವ್ಯಕ್ಕೆ ಶರೀರವಿದ್ದಂತೆ; ಶರೀರಕ್ಕೆ ಭೂಷಣಗಳಿಂದ ಸೊಬಗುಂಟಾಗುವುದು ಸಹಜ, ಆದರೆ ಆ ಶರೀರಕ್ಕೆ ಜೀವಕಳೆಯನ್ನು ತುಂಬುವ ಆತ್ಮವಿರಲೇಬೇಕಲ್ಲವೆ? ಈ ಆತ್ಮವು 'ರೀತಿ' (=ವಿಶಿಷ್ಟಪದರಚನೆ) ಎಂದು ವಾಮನನ ಮತ. 'ಗುಣ'ಗಳಿಂದಲೇ ಈ ರೀತಿಗಳು ಹುಟ್ಟುವುದು; ಆದುದರಿಂದ ಅಲಂಕಾರಗಳಿಗಿಂತಲೂ ಗುಣಗಳಿಗೇ ಹೆಚ್ಚಿನ ಪ್ರಾಧಾನ್ಯವೆಂಬ ಸಿದ್ಧಾಂತವು ಪ್ರಚಾರಕ್ಕೆ ಬಂದಿತು.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕಾವ್ಯದಲ್ಲಿ ಸೌಂದರ್ಯಾತಿಶಯವಿರುವುದು ವಾಚ್ಯವಾದ ಅರ್ಥದಲ್ಲಲ್ಲ, ಅದರ ಧ್ವನಿ ಅಥವಾ ವ್ಯಂಗ್ಯಾರ್ಥದಲ್ಲಿ ಎಂದು ಆನಂದವರ್ಧನನು ಧ್ವನಿತತ್ವವನ್ನು ಸಾರಿದನು.

ಈ ಎಲ್ಲ ಆಲಂಕಾರಿಕರೂ ತಮ್ಮ ತಮ್ಮ ಸಿದ್ಧಾಂತಗಳಿಗೆ ಬೆಂಬಲವಾಗಿ ಸಾಹಿತ್ಯದಲ್ಲಿ ಅಲ್ಲೊಂದು ಇಲ್ಲೊಂದು ಲಕ್ಷ್ಯಗಳನ್ನಾರಿಸಿಕೊಂಡು ವಿವರಿಸುತ್ತ ಬಂದರೇ ಹೊರತು ಒಟ್ಟುಕಾವ್ಯಗಳ ಪೂರ್ಣಪರಾಮರ್ಶಕ್ಕೆ ಕೈಹಾಕಲಿಲ್ಲ. ಆನಂದ

---

27 "ಚಾರುತಾ ಶಾಲಿ ಶಬ್ದಾರ್ಥಯುಗಲಂ ಕಾವ್ಯಮಿತಿ ರೂಢೋಽರ್ಥಃ"

—ಕಾವ್ಯಾಲಂಕಾರ ಕಾಮಧೇನು.

28 "ತದೇವಮಲಂಕಾರಾ ಏವ ಕಾವ್ಯೇ ಪ್ರಧಾನಮಿತಿ ಪ್ರಾಚ್ಯಾನಾಂ ಮತಮ್."

—ಅಲಂಕಾರಸರ್ವಸ್ವ.

ವರ್ಧನನ ಬರೆವಣಿಗೆಯಲ್ಲೂ ಅವನಿಂದ ಈಚಿನ ಕೆಲವು ಲೇಖಕರಲ್ಲೂ ಪರಿಸ್ಥಿತಿ ಸ್ವಲ್ಪ ಬದಲಾಯಿಸುತ್ತದೆ.

ಸಾಧಾರಣವಾಗಿ ಕಾವ್ಯವಿಮರ್ಶೆಗೆ ಹೊರಟ ಆಲಂಕಾರಿಕರು ನಾಟಕವನ್ನು ಕಾವ್ಯವೆಂದೇ ಗಣಿಸಿದ್ದರೂ ಅದರ ಹೆಚ್ಚಿನ ವಿವರಣೆಗೆ ಹೊರಟಿರಲಿಲ್ಲ. 'ಸಂದರ್ಭೇಷು ದಶರೂಪಕಂ ಶ್ರೇಯಃ' ಎಂದು ಹೇಳಿದ ವಾಮನನೂ ತನ್ನ ಸಿದ್ಧಾಂತವನ್ನು ನಾಟಕದ ವಿಷಯದಲ್ಲಿ ಹೆಚ್ಚು ವಿಸ್ತರಿಸಲಿಲ್ಲ. ಭಾಮಹ, ದಂಡಿಗಳಂತೂ ಈ ವಿಷಯದಲ್ಲಿ ಹೆಚ್ಚು ತಿಳಿಯಲಪೇಕ್ಷಿಸುವವರು ಬೇರೆ ಗ್ರಂಥಗಳಿಗೆ ಹೋಗಬೇಕೆಂದು ಬಿಟ್ಟರು.[29] 'ದೃಶ್ಯ'ವಾದ ರೂಪಕಗಳಿಗೂ 'ಶ್ರವ್ಯ'ವಾದ ಕಾವ್ಯಗಳಿಗೂ ಒಂದು ಪ್ರಬಲವಾದ ಅಂತರವುಂಟು. ಕಾವ್ಯಗಳನ್ನು ಒಂದೇಬಾರಿ ಮೊದಲಿನಿಂದ ಕೊನೆಯವರೆಗೂ ಓದಿ ಮುಗಿಸಿ ವಿಮರ್ಶೆಮಾಡುವುದು ಬಹಳ ಕಷ್ಟಸಾಧ್ಯವಾಗಿತ್ತೆಂದು ನೋಡಿದೆವು. ಆದರೆ ನಾಟಕಗಳ ವಿಷಯ ಹಾಗಲ್ಲ. ಅಭಿನಯಕ್ಕೋಸ್ಕರವೇ ಬರೆದ ನಾಟಕಗಳನ್ನು ಪ್ರೇಕ್ಷಕರೆಲ್ಲರೂ ಒಂದೇ ಬಾರಿಗೆ ನೋಡಿ ಮುಗಿಸಬೇಕಾಗುತ್ತಿತ್ತು. ನಾಟಕದ ಉದ್ದಕ್ಕೂ ನೋಡುತ್ತಿರುವಾಗ ತಮ್ಮ ಮಾನಸಿಕ ಪ್ರಪಂಚದಲ್ಲಿ ಉಂಟಾಗುತ್ತಿದ್ದ ಭಾವಗಳ ಏರಿಳಿತಗಳನ್ನೂ ಕೊನೆಗೆ ಮನಸ್ಸಿನಲ್ಲಿ ಖಚಿತವಾಗಿ ನಿಲ್ಲುತ್ತಿದ್ದ ಪರಿಣಾಮವನ್ನೂ ಅವರು ಉಪೇಕ್ಷಿಸುವಂತಿರಲಿಲ್ಲ. ಕಾವ್ಯವಿಮರ್ಶೆಯ ಪ್ರಾರಂಭಕ್ಕಿಂತ ಮೊದಲೇ ಭರತನ ನಾಟ್ಯಶಾಸ್ತ್ರದಲ್ಲಿ ನಾಟಕ ವಿಮರ್ಶೆಯೂ ರಸಪ್ರಕ್ರಿಯೆಯೂ ವಿಶದಗೊಳಿಸಲ್ಪಟ್ಟಿದ್ದುವು. ನಾಟಕದಲ್ಲಿ ರಸನಿಷ್ಪತ್ತಿಯ ಪ್ರಕಾರವೆಂತು? ಕಾವ್ಯಾನಂದಕ್ಕೆ ರಸಾಸ್ವಾದವೇ ಹೇಗೆ ಕಾರಣ? ರಸದ ಭೇದಗಳಾವುವು? ಈ ಎಲ್ಲ ವಿಚಾರಗಳೂ ಆಗಲೇ ನಡೆದಿದ್ದುವು. ಪ್ರಾಚೀನಾಲಂಕಾರಿಕರು ಇದನ್ನು ಶ್ರವ್ಯಕಾವ್ಯಗಳ ವಿಷಯದಲ್ಲಿ ಗಮನಿಸಲೇ ಇಲ್ಲ. ಗಮನಿಸಿದರೂ ಗೌಣಸ್ಥಾನವನ್ನು ಕೊಟ್ಟಿದ್ದರು. ಅದರಿಂದಲೇ ಅವರ ಸಿದ್ಧಾಂತಗಳು ಏಕಮುಖವಾಗಿ ನ್ಯೂನತೆಯನ್ನು ಹೊಂದಿದುದು. ರಸಪ್ರಕ್ರಿಯೆಯು ಶ್ರವ್ಯಕಾವ್ಯವಿಮರ್ಶೆಯಲ್ಲಿಯೂ ಮುಖ್ಯವೆಂಬುದನ್ನು ಸರಿಯಾದ ಆಧಾರಗಳ ಮೇಲೆ ತೋರಿಸಿಕೊಟ್ಟ ಯಶಸ್ಸು ಧ್ವನ್ಯಾಲೋಕವನ್ನು ಬರೆದ ಆನಂದವರ್ಧನನಿಗೂ ಅವನ ವ್ಯಾಖ್ಯಾನಕಾರ ಅಭಿನವಗುಪ್ತನಿಗೂ ಸೇರಬೇಕು. ಯಾವುದೇ ಕಾವ್ಯದಲ್ಲೂ ರಸಕ್ಕೇ ಪ್ರಥಮಸ್ಥಾನ, ಅದರ ಆಸ್ವಾದಕ್ಕೆ

---

29 "ಉಕ್ತಂ ತದಭಿನೇಯಾರ್ಥಮುಕ್ತೋऽನ್ಯೈಸ್ತಸ್ಯ ವಿಸ್ತರಃ"—ಭಾಮಹನ ಕಾವ್ಯಾಲಂಕಾರ I, ೨೦.

"ಮಿಶ್ರಾಣಿ ನಾಟಕಾದೀನಿ ತೇಷಾಮನ್ಯತ್ರ ವಿಸ್ತರಃ"

—ದಂಡಿಯ ಕಾವ್ಯಾದರ್ಶ I ೩೧.

ಸಹೃದಯನು ಮಾತ್ರ ಅಧಿಕಾರಿ, ಶಾಸ್ತ್ರಪಂಡಿತರಲ್ಲ ಎಂಬುದನ್ನು ಸಂದೇಹಕ್ಕೆಡೆಯಿಲ್ಲದಂತೆ ಇವರು ತೋರಿಸಿಕೊಟ್ಟರು. ವಾಚ್ಯಾರ್ಥಕ್ಕೆ ಅದುವರೆಗೆ ದೊರೆತಿದ್ದ ಅನುಚಿತ ಪ್ರಾಧಾನ್ಯವು ತಪ್ಪಿತು. ರಾಮಾಯಣ, ಮಹಾಭಾರತಗಳಲ್ಲೂ ಸಹ ಒಂದು ಪ್ರಧಾನ ರಸವಿರುವ ಪ್ರಕಾರವನ್ನು ವಿವರಿಸಿದರು. ಹೀಗೆ ದೃಷ್ಟಿಕೋನವು ಬದಲಾಗಿ ಸಾಹಿತ್ಯಾಭ್ಯಾಸಕ್ಕೆ ಯೋಗ್ಯ ಬೆಲೆ ಸಿಕ್ಕಂತಾಯಿತು. ಈ ತತ್ವವನ್ನೊಪ್ಪಿ ವ್ಯಾಖ್ಯಾನಗಳನ್ನು ಬರೆದ ರಸಿಕರು ಮೊದಲಿನವರಿಗಿಂತ ಎಷ್ಟೋ ಹೆಚ್ಚಿನ ಸಾರವನ್ನು ಸಾಹಿತ್ಯದಲ್ಲಿ ಕಂಡರೆಂಬುದರಲ್ಲಿ ಸಂದೇಹವಿಲ್ಲ.

ಧ್ವನಿತತ್ವವನ್ನೇ ಸಂಪೂರ್ಣ ಸ್ವೀಕಾರಮಾಡದೆ ಇದ್ದರೂ ಮುಂದೆ ವಕ್ರೋಕ್ತಿ ಜೀವಿತವನ್ನು ಬರೆದ ಕುಂತಕನು ಕೂಡ ಉತ್ತಮ ಕಾವ್ಯಾಭಿರುಚಿಯನ್ನು ತೋರಿಸುತ್ತಾನೆ. ಈ ಸಂಗ್ರಹನಿರೂಪಣೆಯಲ್ಲೂ ಸಹ ಅವನನ್ನು ಮರೆಯುವಂತಿಲ್ಲ. ಇವನು ಸಾಹಿತ್ಯವನ್ನೋದಿ ಆನಂದಿಸಿದವನಷ್ಟೇ ಅಲ್ಲ; ಆ ಆನಂದವನ್ನು ಇತರರಿಗೂ ಹಂಚಿಕೊಡುವ ಕಷ್ಟಕರವಾದ ಕೆಲಸವನ್ನೂ ಬಹಳ ಶ್ಲಾಘ್ಯವಾಗಿ ನಿರ್ವಹಿಸಿದ್ದಾನೆನ್ನಬಹುದು.[30] ಒಂದೊಂದು ಶ್ಲೋಕದ ಅರ್ಥವಿವರಣೆಗೆ ಅವನು ಹೊರಟಾಗ ಅವನು ತೋರಿಸುವ 'ವಕ್ರೋಕ್ತಿ'ಪ್ರಕಾರವು ಏನೇ ಇರಲಿ, ಅವನ ಭಾಷೆಯು ಕೇವಲ ಶಾಸ್ತ್ರೀಯವಾಗಿ ಉಳಿಯದೆ ಸುಂದರವಾದ ಸಾಹಿತ್ಯಶೈಲಿಯ ಮಟ್ಟವನ್ನೇರುತ್ತದೆ. 'ಸಾಹಿತ್ಯಾರ್ಥಸುಧಾಸಿಂಧೋಃ ಸಾರಮುನ್ಮೀಲಯಾಮ್ಯಹಮ್' ಎನ್ನುವುದು ಅವನ ಒಣಹೆಮ್ಮೆಯಲ್ಲವೆಂದು ಸ್ಪಷ್ಟವಾಗುತ್ತದೆ. ಇಂತಹ ರಸಜ್ಞರು ಕಾವ್ಯಗಳಿಗೆ ಅಖಂಡವಾದ ವ್ಯಾಖ್ಯಾನಗಳನ್ನು ಬರೆಯಲಿಲ್ಲವಲ್ಲಾ ಎಂದು ಕೊರಗುವಂತಾಗುತ್ತದೆ.

III

ಪ್ರಾಚೀನರ ಸಾಹಿತ್ಯಾಭ್ಯಾಸದ ಸೂಕ್ಷ್ಮ ಪರಿಚಯವನ್ನು ಮೇಲೆ ಮಾಡಿಕೊಡಲಾಯಿತು. ಇದೇ ಸಾಹಿತ್ಯಾಭ್ಯಾಸದ ವಿಷಯದಲ್ಲಿ ಈಗೀಗ ಹೆಚ್ಚು ಗೌರವಕ್ಕೆ ಪಾತ್ರವಾಗಿರುವ ಭಾವನೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಈ ಲೇಖನವನ್ನು ಮುಗಿಸಬಹುದು.

ಸಾಹಿತ್ಯವೂ ಒಂದು ಕಲೆ. ಇತರ ಲಲಿತ ಕಲೆಗಳಂತೆಯೇ ಸಾಹಿತ್ಯವೂ ಸೌಂದರ್ಯ ಸೃಷ್ಟಿಯಲ್ಲಿ ಆಸಕ್ತವಾಗಿರುತ್ತದೆ. ಕವಿಯು ಸೌಂದರ್ಯೋಪಾಸಕ. ವಸ್ತುತಃ ಯಾವ ಪದಾರ್ಥದಲ್ಲಿಯೂ ಸೌಂದರ್ಯ ಇಲ್ಲವೆ ಕುರೂಪವು ಜನ್ಮಸಿದ್ಧ

[30] ಉದಾಹರಣೆಗೆ 'ಭರ್ತುರ್ಮಿತ್ರಂ ಪ್ರಿಯಮವಿಧವೇ . . .' ಎಂಬ ಮೇಘದೂತದ ಶ್ಲೋಕಕ್ಕೆ ಕುಂತಕನು ಬರೆದಿರುವ ವ್ಯಾಖ್ಯಾನವನ್ನು ನೋಡಿ.—ವಕ್ರೋಕ್ತಿಜೀವಿತ; ಪುಟ ೨೦-೨೧.

ವಾಗಿರುವುದಿಲ್ಲ. ಪ್ರೇಕ್ಷಕನ ಮನೋವೃತ್ತಿಗನುಸಾರವಾಗಿ ಪದಾರ್ಥ ಧರ್ಮಗಳು ಬೇರೆ ಬೇರೆಯಾಗಿ ತೋರುತ್ತವೆ. ಕವಿಯ ನೋಟ ಬಹಳ ತೀಕ್ಷ್ಣ, ತಲಸ್ಪರ್ಶಿ; ಅವನ ಅನುಭವ ಆಳ ಹಾಗು ವಿಶಾಲ. ಸಾಮಾನ್ಯರು ಸೌಂದರ್ಯವಿಲ್ಲಿರಬಹುದೆಂದು ಊಹಿಸಲೂ ಅಸಾಧ್ಯವಾದ ವಸ್ತುಗಳಲ್ಲಿ ಸಹ ಸೌಂದರ್ಯವನ್ನು ಕಾಣುತ್ತಾನೆ. ಕವಿಯ ನೈಜವಾದ ಅನುಭವಕ್ಕೂ ಉಳಿದವರ ಅನುಭವಕ್ಕೂ ಇಷ್ಟೇ ವ್ಯತ್ಯಾಸ: ಮೊದಲನೆಯದು ಕ್ರಿಯಾಪರ, ಎರಡನೆಯದು ಕ್ರಿಯಾಹೀನ. ಕವಿಯ ಅಮೂರ್ತ ಅನುಭವವು ಸ್ವಭಾವತಃ ಕ್ರಿಯೋನ್ಮುಖವಾಗಿಯೇ ಇರುವುದರಿಂದ ಅದು ಸಾಹಿತ್ಯದ ಮೂರ್ತರೂಪವನ್ನು ಪಡೆಯುವವರೆಗೆ ಅದಕ್ಕೆ ವಿರಾಮವಿಲ್ಲ. ಉಳಿದವರ ಅನುಭವವು ಯಾವ ರಚನಾತ್ಮಕ ಕಾರ್ಯಕ್ಕೂ ಕಾರಣವಾಗುವುದಿಲ್ಲ. ಸಾಹಿತ್ಯಸೃಷ್ಟಿಯಾದೊಡನೆಯೇ ಕವಿಯ ಕೆಲಸ ಮುಗಿದಂತೆ. ಅದರ ಪ್ರಯೋಜನವನ್ನು ಸವಿಯುವವರು ಪಾಠಕರು. ಕಾವ್ಯಾಭ್ಯಾಸದ ಉದ್ದೇಶವು ಆನಂದಾನುಭವವೇ ಹೊರತು ಭಾಷಾ ಜ್ಞಾನವಲ್ಲ. ಇದೂ ಗೌಣವಾಗಿ ಲಭಿಸಬಹುದು, ಅಷ್ಟೇ. ಎಲ್ಲ ಪಾಠಕರಿಗೂ ಎಲ್ಲ ಬಗೆಯ ಸಾಹಿತ್ಯದಲ್ಲೂ ಅಭಿರುಚಿಯಿರುವುದೆಂದಾಗಲಿ ಅವರು ಅದನ್ನು ಆಸ್ವಾದಿಸಬಲ್ಲರೆಂದಾಗಲಿ ಹೇಳುವುದು ಕಷ್ಟ. ಇಂತಹ ಅಭಿರುಚಿಯನ್ನು ಉಚಿತ ಅಭ್ಯಾಸ ಬಲದಿಂದ ಬೆಳೆಸಿಕೊಳ್ಳಲು ಬರುತ್ತದೆ. ಬೆಳೆಸಲು ಸುಮ್ಮನೆ ಸಾಹಿತ್ಯವನ್ನು ಓದಿದರೆ ಸಾಲದು; ನಿಘಂಟುಗಳನ್ನು ಕಂಠಪಾಠಮಾಡಿದರೂ ಸಾಲದು; ಸಹೃದಯರಾದ ವಿಮರ್ಶಕರು ಯಾವ ದೃಷ್ಟಿಯಿಂದ ಓದುತ್ತಾರೊ ಆ ದೃಷ್ಟಿಯಿಂದ ಓದಬೇಕು.

ಉತ್ತಮರಾದ ಸಹೃದಯರ ಸಂಖ್ಯೆಯೂ ಉತ್ತಮಕವಿಗಳ ಸಂಖ್ಯೆಯಂತೆಯೇ ಅಲ್ಪವಾಗಿರುತ್ತದೆ. ಸಾಹಿತ್ಯದಲ್ಲಿ ಅಖಂಡವಾದ ಆಸ್ವಾದವನ್ನು ಪಡೆಯುವ ವಿಮರ್ಶಕರು ಎಷ್ಟೋ ಅಂಶಗಳಲ್ಲಿ ಕವಿಯನ್ನೇ ಹೋಲುತ್ತಾರೆ. ಅವರ ಅನುಭವವೂ ಅಷ್ಟೇ ಆಳವೂ ವಿಶಾಲವೂ ಆಗಿರುತ್ತದೆ. ಮೇಲಾಗಿ ಇವರು ಸಂತತವಾಗಿ ಸಾಹಿತ್ಯವನ್ನು ಅನುಸಂಧಾನಮಾಡಿ ಅದರ ವಿಷಯವಾಗಿ ಚರ್ಚಿಸುವ ಶಕ್ತಿಯನ್ನೂ ಪಡೆದುಕೊಂಡಿರುತ್ತಾರೆ. ತಮ್ಮ ಅನುಭವವನ್ನು ಇವರು ವಿಭಜಿಸಿ ವಿವೇಚಿಸಲೂ ಶಕ್ತರಾಗಿರುತ್ತಾರೆ. ಒಂದೊಂದು ವೇಳೆ ಕವಿಗೇ ಇದು ಸಾಧ್ಯವಾಗದಿರಬಹುದು. ತಮ್ಮ ಆನಂದಕ್ಕೂ ಅದನ್ನುಂಟುಮಾಡಿದ ಸಾಹಿತ್ಯಕ್ಕೂ ಇರುವ ಸಂಬಂಧವನ್ನು ಇತರರಿಗೂ ತೋರುವಂತೆ ಇವರು ಯುಕ್ತಿಯುಕ್ತವಾಗಿ ತೋರಿಸಬಲ್ಲರು. ಎಷ್ಟೋವೇಳೆ ಇವರ ಶೈಲಿಯಲ್ಲೇ ಒಂದು ಅಪೂರ್ವವಾದ ಕಲಾಸೌಂದರ್ಯವು ಮೂಡುವುದೂ ಉಂಟು. ಇಂತಹವರೇ ಸಾಹಿತ್ಯಕ್ಷೇತ್ರದಲ್ಲಿ ನಿಜವಾದ ವಿಮರ್ಶಕರು, ಇತರರಿಗೆ ದಿಗ್ದರ್ಶಕರು, ಕವಿಯು ಬರೆದುದನ್ನು ಇತರರೂ ಸವಿಯುವಂತೆ ಸಹಾಯಮಾಡು

ವವರು. ಯಾವುದೇ ಆಗಲಿ ಕವಿಯು ಬರೆದುದನ್ನು ಒಂದು ಸಮದೃಷ್ಟಿಯಿಂದ ಅವಲೋಕಿಸಬೇಕು, ಅಂಗಪ್ರತ್ಯಂಗಗಳ ವಿವೇಚನೆಯಲ್ಲೇ ಎಲ್ಲ ಹೊತ್ತನ್ನೂ ವ್ಯಯ ಮಾಡಿದರಾಗಲಿಲ್ಲ ಎನ್ನುವ ಅಂಶ ಈಗ ಸ್ಥಿರೀಕೃತವಾಗಿದೆ. ಪಾಶ್ಚಾತ್ಯದೇಶಗಳಲ್ಲಿ ಕವಿವ್ಯಾಪಾರವನ್ನೂ, ಸಹೃದಯನ ಮನೋಲ್ಲಾಸವನ್ನೂ ಮನಶ್ಶಾಸ್ತ್ರ, ತತ್ವಶಾಸ್ತ್ರ ಗಳ ದೃಷ್ಟಿಯಿಂದ ಇದು ಹೀಗೆಯೇ ಎಂದು ನಿರ್ಣಯಿಸಲು ಸಂತತವಾಗಿ ಪ್ರಯತ್ನ ವಿನ್ನೂ ನಡೆಯುತ್ತಿದೆ.

ಕವಿಯ ಅಪಾರ ಪ್ರಯತ್ನವು ಸಾರ್ಥಕವಾಗಲು ಎಲ್ಲರ ಮನಸ್ಸೂ ಸಹೃದಯತೆ ಯಿಂದ ಅರಳುವಂತಾಗಬೇಕು. ಕವಿಗೆ ಆ ಉದ್ದೇಶವಿದ್ದರೂ ಕಾವ್ಯದ ರುಚಿಯನ್ನು ಎಲ್ಲರಿಗೂ ತಿಳಿಸಲು ಹೊರಟಿರುವ ಅನೇಕರು ಈ ಪ್ರಯತ್ನದಲ್ಲಿ ವಿಫಲರಾಗಿರುವರು. ತಮ್ಮ ಧ್ಯೇಯಸಾಧನೆಯನ್ನೇ ಮರೆತು ಶಾಸ್ತ್ರಪ್ರತಿಭೆಯನ್ನು ಬೆಳಗಲು ಹೊರಟಿರು ವುದೇ ಇದಕ್ಕೆ ಕಾರಣ. ಕವಿಹೃದಯವನ್ನು ಹೊರಹೊಮ್ಮಲು ವಿಮರ್ಶಕನ ಭಾವ ದೃಷ್ಟಿ ಬೆಳೆಯಬೇಕು. ಜನತೆಗೆ ನಾಲ್ಕಾರು ಕವಿತೆಗಳನ್ನು ಓದಿ ಸರಸಕವಿ ಯಾರು ಎಂಬುದನ್ನು ನಿರ್ಧರಿಸುವ ಶಕ್ತಿ ಬರುವಂತಾಗಬೇಕು. ಇನಿದಾದ ಕಾವ್ಯರಸ ಪಾಂಡಿತ್ಯದ ಹೊದಿಕೆಯಲ್ಲಿ ಕಂದಿಹೋಗಬಾರದು. ಹೊಸಹೊಸ ಭಾವಗಳು ವೀಣೆಯ ನಾದದಂತೆ ಎಲ್ಲರ ಹೃದಯತಂತ್ರಿಗಳಲ್ಲೂ ಮಾರ್ದನಿಗೊಳ್ಳುವಂತಹ ಶಕ್ತಿಯನ್ನು ಸಾಹಿತ್ಯಾಭ್ಯಾಸವು ಸಂಪಾದಿಸಿಕೊಡಬೇಕು.

"ಸಂಸಾರವಿಷವೃಕ್ಷಸ್ಯ ದ್ವೇ ಫಲೇ ಅಮೃತೋಪಮೇ |
ಕಾವ್ಯಾಮೃತ-ರಸಾಸ್ವಾದ ಆಲಾಪಃ ಸಜ್ಜನೈಃ ಸಹ ||

ಕೆ. ಕೃಷ್ಣಮೂರ್ತಿ.

೪. ರಂಗಯ್ಯನ ವಚನಗಳು—ಸಾಹಿತ್ಯ ಪದ್ಧತಿ

"ಕಬ್ಬವಿದು ಹೊಸದು; ಅದರೊಳಗಿನಿತಿಲ್ಲ ರಸವು!" ಎಂದು ಕನಲುವರಯ್ಯ ಕೆಲರು. "ಹೊಸ ಅಕ್ಕಿ ಹೊಟ್ಟೆನೋವು; ಹೊಸ ಕವನ ತಲೆಯ ನೋವು: ಬಾಧೆ ತಾಳೆವು ನಾವು!" ಎಂದು ಚೀರುವರಯ್ಯ ಕೆಲರು. ಕಬ್ಬು ಇಂದಿನದೆಂದು ಮೆದ್ದಲ್ಲಿ ಸವಿಯು ಎಂದಿನದಲ್ತೆ? ಬಾಣಸಿಗ ಭೀಮಣ್ಣ ಬೇಸಿದರೆ ಹೊಸಭತ್ತಕೇನಯ್ಯ ಊನ? ಸಮದರ್ಶಿ ನೀ ಹೇಳಯ್ಯ, ದೇವರದೇವ ಮಾವಿನ ಕೆರೆಯ ರಂಗಯ್ಯ, ‖೧‖

ಅಲ್ಪಸಾಹಿತ್ಯ ಹೆಚ್ಚಿನ ಪ್ರಚಾರವನು ಪಡೆದಲ್ಲಿ ಬಾಧಕವೇನು? ಎಂದು ಅಲಕ್ಷ್ಯಗೈಯುವರು ಅನೇಕ ಮಂದಿ. ಹಾಗಲ್ಲವಯ್ಯ: ಅಲ್ಪದ ವಸ್ತು ಅತಿಯಾಗಿ ಪ್ರಶಸ್ತಿ ಹೊಂದುವುದು ಮೊದಲ ಕೇಡು; ಅದರಿಂದ ಅಪೂರ್ವ ವಸ್ತುವಿಗೆ ಪ್ರಸಸ್ತಿ ತಪ್ಪುವುದು ಮತ್ತೊಂದು ಕೇಡು. ಧರೆಯೆಲ್ಲ ಕೀರೆ ದಂಟುಗಳ ಕುರಿತು ತಿರುಗಿದರೆ ಹೀರೆ ಬೂದುಗುಂಬಳದ ಪಾಡೇನು? ಕಣಿಗಲು ದಾಸವಾಳ ಮುಡಿಗೆ ಮಾನ್ಯವಾಗಿಬಿಟ್ಟಲ್ಲಿ ಕಮಲ ಮಲ್ಲಿಗೆಗೆ ಕುಂದಾಗದಿರದೆ? ಕೆರೆ ಕುಂಟೆಗಳ ಕೆಂಪುನೀರನ್ನ ಕುಡಿದ ಗಂಟಲುಗಳಿಗೆ ತುಂಗೆ ಹೇಮಾವತಿಯ ಸಂಗ ಅಸಂಗತ, ಅನಗತ್ಯ. ಜಡೆಮುನಿಯ ಪೂಜೆ ಬಲಗೊಂಡಿತೆಂಬೋಣ, ಗಿರಿಜೆಯಾಣ್ಮನ ಬಕುತಿ ಬೀಳಬಹುದು.

ಮತ್ತೆ ಯೋಚಿಸಿದಲ್ಲಿ, ಸಣ್ಣದಕೆ ಅಧಿಕಾರ ದೊಡ್ಡದಕೆ ಅಪಕಾರ. ಕೀಳು ಲೇಖನದ ಆಯ ಮೇಲು ಲೇಖನದ ಕ್ಷಯ. ಗೆದ್ದಲುಹುಳುವೆದ್ದು ಆನೆಯ ಅಳಿಸಿಬಿಟ್ಟುದುಂಟು; ಚದುರಂಗ ಹಬ್ಬಿ ಫಲವೃಕ್ಷಗಳ ನುಂಗಿ ನಿಂತಿಹುದ ನೋಡಿಹರು. ಬಕಬಳಗ ಬಡಾಯಿಯಲಿ ವಿರಾಜಿಸುತ ಹಂಸಗಳ ಹಾಸ್ಯಗೈಯುವುವು; ಇದ್ದಲ ಗುಡ್ಡದಲಿ ಇಂದ್ರನೀಲದ ತುಣುಕು ಕಾಣಿಸದೆ ಹೋಗುವುದು ಏನಾಶ್ಚರ್ಯ?

ಕ್ಷುದ್ರ ಕಾವ್ಯಗಳ ಪ್ರಾಬಲ್ಯ ಅಗಣಿತವಾದಂದು ಅಧಮ ಮಧ್ಯಮದ ವ್ಯತ್ಯಾಸ, ಉತ್ತಮ ಸರ್ವೋತ್ತಮದ ವಿವೇಚನೆ, ನಶಿಸುವುದಯ್ಯ. ಬೆಟ್ಟ ದಿಣ್ಣೆಗಳು ಕೆಳಗುರುಡಿ, ಕಣಿವೆ ಹಳ್ಳಗಳು ಮೇಲಕ್ಕೆದ್ದು, ಸಾರಸ್ವತ ಭೂಮಿಯೆಲ್ಲ ಒಂದೆ ಚಪ್ಪಟೆಯಾಗಿ ಹೋಗುವುದಯ್ಯ! ದೇವರ ದೇವ ಮಾವಿನಕೆರೆಯ ರಂಗಯ್ಯ. ‖ ೨ ‖

ಕವಿಗೆ, ಕಾವ್ಯ: "ಆಯ್ತು, ಹೋಗಲಿ. ಏತಕೆನ್ನನು ಇಲ್ಲಿಗೆಳತಂದೆ?" ಕವಿಯ ಉತ್ತರ: "ನಾ ತರಲಿಲ್ಲ; ನೀನೆ ಬಂದೆ. ಕಾವ್ಯ ಮೂಲವು ಎನಗೆ ಸಿಕ್ಕಿದರೆ,

ಸೃಷ್ಟಿಮೂಲವೆ ಸಿಕ್ಕುವುದು. ಅದ ಕಂಡವನೊಬ್ಬನೆ ಒಬ್ಬ, ನಮ್ಮೆಬ್ಬರ ತಂದೆ! ದೇವರ ದೇವ ಮಾವಿನಕೆರೆಯ ರಂಗಯ್ಯ." ‖ ೩ ‖

ಶೈಲಿಯನು ಕಾವ್ಯಪುರುಷನ ಉಡುಪೆಂದು ಕರೆದರು ಹಿಂದೆ. ಆ ವರ್ಣನೆ ಆಗ ಬಹುದಯ್ಯ, ಅನರ್ಥವಿಲ್ಲ ; ಅರ್ಥವನು ಅರಿತು ಮಾಡಿಕೊಳಬೇಕು ಅಷ್ಟೆ.

ನಾಗರಿಕ ಬಳಸಿಕೊಳ್ಳುವ ನಾನಾವಿಧದ ವಸನಗಳ. ಅವನೊಬ್ಬನೆ ಅಹುದು ಸ್ಥೂಲದೃಷ್ಟಿಯಲಿ ; ಆದರು ಸಂದರ್ಭಕ್ಕೆ ಸಮಂಜಸವಾದ ವಸ್ತ್ರ ಅವನಿಗೆ ಅತ್ಯಗತ್ಯ. ಅಲ್ಲದೆ ಬಟ್ಟೆಬರೆ ಬೀರುವ್ರದು ತನ್ನದೇ ಆದೊಂದು ಪ್ರಭಾವವನು ತೊಟ್ಟುಕೊಂಡವನ ಮನಸಿನ ಮೇಲೆ. ಮಗುಟವನು ಧರಿಸಿದಾಗ ಮನುಷ್ಯನ ಚಿತ್ತವೃತ್ತಿಯದೊಂದು ತರ ; ಕಛೇರಿಯ ಕೋಟು ಹಾಕಿಕೊಂಡಾಗ ಬೇರೊಂದು ಬಗೆ ; ಸ್ವಂತಮನೆಯಲಿ ದಟ್ಟಿಯನು ಉಟ್ಟಿರುವಾಗ ಮತ್ತೊಂದು ಮಾದರಿ ; ಹೀಗೆ ಹಲವು ಬಹಿರೂಪವನು ತಾಳುವ ಆ ಒಬ್ಬನೆ ಮನುಜ ಒಬ್ಬನೇಯೆ ವಿಚಾರಿಸಬೇಕಯ್ಯ.

ಶೈಲಿ ಅರ್ಥದ ಹೊದಿಕೆ, ನಿಜ್ಜ ಯ ; ಅಂದರೆ ಅರ್ಥಕ್ಕೆ ಅನುಗುಣವಾದ್ದು ; ಅರ್ಥದಿಂದ ಆಚೆಯೆಂದಿಗು ಅಲ್ಲ ; ಅದು ಬದಲಾದಲ್ಲಿ ಅರ್ಥ ಬದಲು. ಶಂಖ ಚಕ್ರ ಪೀತಾಂಬರ ನಿನ್ನನೋಲೈಸಿದರೆ ನೀನು ಕಾಪಿಡುವ ಕೇಶವನಾದೆ ; ಶೂಲ ಡಮರುಗ ಆನೆಚಕ್ಕಳ ಬಂದು ನಿಂದಲ್ಲಿ ನೆಕ್ಕಿ ನುಂಗುವ ಮುಕ್ಕಣ್ಣನಾದೆ! ದೇವರ ದೇವ ಮಾವಿನಕೆರೆಯ ರಂಗಯ್ಯ. ‖ ೪ ‖

ತೋಡಜಾತಿಯ ಹೆಂಗಸಿನಂತೆ ಮಧ್ಯದಲಿ ಬೈತಲೆ ತೆಗೆದು, ಉದ್ದಕೂದಲ ಇಳಿಯಬಿಟ್ಟರು ಕೆಲಕೆಲವು ಕಲಾವಿದರು. ಸಮಯ ಸಂಕೇತಗಳ ಧಿಕ್ಕರಿಸಿ ಅಗಲದ ಕೊರಳವಸ್ತ್ರವ ಧರಿಸಿ ಮೆರೆದರು ಮತ್ತೆ ಕೆಲವರು. ನಡೆವಾಗ ಕುಂಟನರೀತಿ ಕಾಲನೆಳೆದು ಹಾಕಿದರು; ಆಲಿಸುವವನ ಆಕರ್ಷಿಸುವಂದದಲಿ ಕೆಮ್ಮುವಭ್ಯಾಸವನು ಕಲಿತುಕೊಂಡರು; ತೊದಲು ಮಾತುಗಳ ನುಡಿಯುವ ಕ್ರಮವ ನಾಲಗೆಗೆ ಹೇಳಿಕೊಟ್ಟರು ; ದೂರದ ಬಂಡೆಗಳ ಹಿಂಬದಿಯಿಂದ ಬರುವ ಪ್ರತಿಧ್ವನಿಯಂತೆ ಭಾಷಣಗೈವಾಗ ಒಂದು ಗಂಭೀರ ಘೋಷಣೆಯ ಗುಡುಗಿದರು ; " ಜನ ಹೊಲಸು ಜೀವನ ಹೇಯ : ಈ ಲೋಕವೆಮಗೆ ರುಚಿಸದು ! " ಎಂಬ ಉದಾಸೀನವನು ಮುಖಮುದ್ರೆಗಂಟಿಸಿ ತೋರಿದರು.

ಇದರಿಂದ ಏನಾಯ್ತು, ಅನುಮೇಯ : ಕವಿಯಾದವಗೆ ಒಂದು ವಿಲಕ್ಷಣ ನಡೆವಳಿಕೆ ಇರಬೇಕು ! ಆದರೆ, ನೋಡಯ್ಯ, ವಿಲಕ್ಷಣ ನಡೆವಳಿಕೆ ಇದ್ದ ಮಾತ್ರದಲಿ ಕವಿಯಾಗಲಿಲ್ಲ! ಮುದುಕಂಗೆ ಕನ್ನಡಕ ಅಗತ್ಯ : ಕನ್ನಡಕವ ಕಣ್ಣಿಗಿಟ್ಟವರೆಲ್ಲ ಮುದುಕರೆ? ಮೇಧಾವಿ ಮೇಲಿನಧಿಕಾರವನು ಹೊಂದಬಹುದು : ಮೇಲಿನಧಿಕಾರ

ಕೇರಿದವರೆಲ್ಲ ಮೇಧಾವಿಗಳೆ? ದೇವರ ಪೂಜೆ ವಿಧಿವತ್ತಾದ ಮಂತ್ರಗಳ ಆಶಿಸುವುದು : ಮಂತ್ರೋಚ್ಚರಣೆಯಿಂದ ದೇವರಪೂಜೆ ಮುಗಿಯಿತೆ? ಅಂಗದ ಆಂಜನೇಯರು ಕೀಶಕುಲದವರು : ಎಲ್ಲ ಕಪಿಗಳು ಅವರಂತೆ ಮಹಾ ವ್ಯಕ್ತಿಗಳೆ? ಅನುಕರಣದಿಂದ ಸಹಜಸತ್ವವ ಸಾಧಿಸಲು ಮಾನವಗೆ ಅನುಕೂಲವಿದ್ದಲ್ಲಿ ಭೂಮಿಯಿಂದ ಸ್ವರ್ಗ ಮೂರೇ ಗೇಣು ದೂರವಯ್ಯ. ಸಾಚ ಶಬರಿಯ ಸೈ ಎಂದವನೆ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೫ ‖

ಬಹು ಪುಟದ ಪುಸ್ತಕವೊಂದ ಗುಳ್ಳರಸ ಕವಿ ಪೃಥಿವಿಗೆಂದು ಪ್ರಕಟಿಸಿದ: ಆ ದಿವಸ ಆಕಾಶ ಸುರಿಸಿತು ಅಗಾಧ ಮಳೆಯ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೬ ‖

ಅರಿಸ್ಟಾಟಲೊ ಆನಂದವರ್ಧನನೊ ಮಮ್ಮಟನೊ ಮ್ಯಾಥ್ಯು ಆರ್ನಾಲ್ಡೊ ಸೇಂಟ್‌ಬವನೊ ಸೇಂಟ್ಸ್‌ಬೆರಿಯೊ ನಿರ್ಮಿಸಿದ ಘನವಿಮರ್ಶೆ ಜನತೆಗೆ ಹಿಡಿಸಲಾರದು ನೋಡಯ್ಯ. ಈ ಕಾವ್ಯಕುಮುದದ ಗಾಡಿಯ ಗುಟ್ಟೇನು? ಕವಿಪ್ರತಿಭೆಯ ಬಾಣ ಏಸೊಂದು ದೂರ ಹಾರಿಹುದು? ಇಲ್ಲಿ ಸಂತೋಷತಂಗಾಳಿ ತಾನೆ ತಾನಾಗಿ ಬೀಸುವುದು ಏತಕ್ಕೆ? ಇತರ ಕಾವ್ಯಮಾನವರ ತಲೆಮೆಟ್ಟಿ ಈ ಕಾವ್ಯಗಂಧರ್ವ ಹೇಗೆ ನಿಂತಿರುವ? ಮುಂತಾಗಿ ರಸ ತರ್ಕವೆರಡನ್ನು ಕೂಡಿಕೊಂಡಿಹ ಕೃತಿಯ ಕಂಡೊಡನೆ ಕಣ್ಣುಮುಚ್ಚುವುದು ಲೋಕ.

ಅದಾವನೊ ಒಬ್ಬ, ವಾರಪತ್ರಿಕೆಗೆ ವಾರ್ತೆಯ ಕಳಿಸಿ ಹೊಟ್ಟೆಹೊರೆಯುವವ, ಕವಿಯ ಎಡ ಹೆಜ್ಜೆಯಮೇಲೆ ಕಪ್ಪು ಮಚ್ಚೆಯಿತ್ತು, ಅವ ಕೈಹಿಡಿದ ಹೆಂಡತಿ ಗಯ್ಯಾಳಿ; ಸಂಪಿಗೆಯ ಕಂಪು ತಟ್ಟಿದರೆ ಅವಗೆ ತಕ್ಷಣ ಓಕರಿಕೆ; ಒಮ್ಮೆ ಗಾಡಿ ಹೊಡೆವವನೊಡನೆ ಜಗಳವಾಡಿ ಗೊಂದಲವೆಬ್ಬಿಸಿದ್ದ; ಅವನ ಮುದ್ದಿನಸಪ್ರಾಣಿ ನಸ್ಯ ಬಣ್ಣದ ಒಂದು ಏಡಿಕಾಯಿ; ಬೀದಿಯಲಿ ನಡೆವಾಗ ಕೋಲಿಂದ ಎಲ್ಲ ಬೆಳಕು ಕಂಭಗಳ ಬಡಿಯುವುದು ಅವನ ಅಭ್ಯಾಸ; ಒಂದು ದಿವಸ ಶಾಲೆಯಲಿ "ನೀ ಶುದ್ಧ ಶುಂಠ" ನೆಂದು ಅಧ್ಯಾಪಕನ ಬೈದಿದ್ದ; ಉಪವಾಸದಲಿ ಸೊರಗಿ ಆಕಸ್ಮಿಕ ಔತಣ ಸಿಗಲು ಗಬಗಬನೆ ಅತಿಯುಂಡು ಕಟ್ಟರೆಯಾಗಿ ಸತ್ತ; ಎಂದು ಬಿಡಿಸಮಾಚಾರಗಳ ಉತ್ಪ್ರೇಕ್ಷಿಸಿ ಸಾರಿಹೇಳಲಿ, ಕೂಡಲೆ ಕಿವಿಗೊಟ್ಟು ಕೇಳುವರು ಮಂದಿ. ಆ ಕವಿಯ ಸೊಲ್ಲೆ ಎಲ್ಲರ ಬಾಯಿನಲ್ಲು; ಆ ಪ್ರಕಟನೆಯೆ ಶ್ರೇಷ್ಠ ವಿಮರ್ಶೆ; ಆ ಕವಿಯೆ ಕವಿ ವಿಂಧ್ಯಾದ್ರಿ!

ಜಗವ ದೂಷಿಸುವುದೇಕಯ್ಯ? ಚಾಡಿ ಒಡಕುಸುದ್ದಿಗಳ ಸರಣಿ ಅದಕೆ ತಿಂಡಿ ತೀರ್ಥ; ಹರಟೆ ಗಲಿಬಿಲಿಯ ಉದ್ರೇಕ ಅದಕೆ ಮನೋಲ್ಲಾಸ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೭ ‖

ಹೇರಳವಾಗಿ ಸರಳರಗಳೆಯ ಉಪಯೋಗಿಸುವುದು ತಪ್ಪಾದಲ್ಲಿ ಅದು ಷೇಕ್ಸ್ಪಿಯರನ ತಪ್ಪು ; ಆಡಂಬರದ ಸಮಾಸರಚನೆ ಅಹಿತವಾದಲ್ಲಿ ಲೇಖಕ ಬಾಣಭಟ್ಟನ ಜೊತೆಗಾರ; ಅತಿವಾಚಾಳತ್ವ ದೋಷವೆ, ಹೋಮರನಲುಂಟು, ವಾಲ್ಮೀಕಿಯಲುಂಟು ; ತಡೆಬಡೆಯಿಲ್ಲದಲೆ ಆಶುಕವಿತೆಗಳ ಒರೆಯುವುದು ಕೆಟ್ಟುದಾದರೆ ನಾರಣಪ್ಪ ಕೆಟ್ಟವನು ; ಚಿನ್ಮಾತ್ರ ಗೋಚರವಾದ ಗಹನೋಪಮೆಯಲ್ಲಿ ಸಂಚರಿಸುವುದು ದೂಷ್ಯವಾದಲ್ಲಿ ಷೆಲ್ಲಿ ಕವಿಗಿಲ್ಲ ಮುಕ್ತಿ : ಹೀಗಿದೆ ಕೆಲವು ಕವಿಗಳ, ಕವಿಭೃತ್ಯರ, ಸ್ವಸ್ಥಾಪನೆಯ ವಾದ. ಒಳಿತು ; ಅವೆಲ್ಲ ಆ ಕವಿಶ್ರೇಷ್ಠರಲಿ ಸುಗುಣವೆಂದೆ ಒಪ್ಪೋಣ, ಮನ್ನಿಸೋಣ. ಆದರೆ, ಇವರ ಬುದ್ಧಿಪೇಲವತೆ—ಅದಾವ ಉತ್ತಮ ಕವಿಯ ಸದ್ಗುಣ? ಸ್ಪಷ್ಟಪಡಿಸಲಯ್ಯ! ತಪ್ಪು ನೆಪ್ಪುಗಳ ತಕ್ಕ ತಕ್ಕಡಿಯೆ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೮ ‖

ಕವಿ: ಎಣ್ಣೆ ಮಜ್ಜನಕೆ ನೀರ ಕಾಯಿಸಲು ಕಟ್ಟಿಗೆಯ ಕೊಳ್ಳುವುದೇಕೆ? ನಿನ್ನ ವಿಮರ್ಶೆಗಳ ಹೊರೆಯ ಒಲೆಗೆ ಹಾಕಿದರೆ ಸಾಕು. ವಿಮರ್ಶಕ: ಹಂಡೆ ಮರಳಿದರೆ ತಣ್ಣೀರ ಹುಡುಕುವುದೆಲ್ಲಿ? ನಿನ್ನ ಕವಿತೆಗಳ ಭಾವಿಗೆ ಕೊಡವ ಇಳಿಸಿದರಾಯ್ತು.

ಇವರಿಂತು ಪರಸ್ಪರ ಮೂದಲಿಸಿ ಒಳಜಗಳವಾಡುವುದು ಅಮ್ಮ ಶಾರದೆಗೆ ಅಧಿಕ ಆನಂದ, ಅಲ್ಲವೇನಯ್ಯ! ಸತ್ಯ ಸೌಹಾರ್ದ ಪ್ರೇಮಿ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೯ ‖

"ಭಾಸಕವಿ ಗೀರ್ವಾಣ ಗೋತ್ರದವನು; ಎಷ್ಟೆ ಆದರು ಅವ ಕನ್ನಡಕೆ ನೆರೆಮನೆಯ ಹುಡುಗ!" ಹೀಗೆಂದು ತಿಳಿಗೇಡಿ ಭ್ರಾಂತಿ ಹೊಂದುವುದ ಕಂಡಿರುವೆ. ಆ ಹೇಳಿಕೆಯಿಂದ ದೇವನಾಗರಿಗೆ ಹೆಮ್ಮೆ ಹೆಚ್ಚುವುದೆಂದು ಅವನ ಭಾವನೆ. ಅಯ್ಯೊ, ಅದರ ಚರಿತ್ರೆಯನು, ಅಲ್ಲಿನ ನಿಜಾಂಶವನು, ಅವ ಏನು ಬಲ್ಲ? ಒಂದಾನೊಂದು ಕಾಲದಲಿ ಸಂಸ್ಕೃತ ಭಾರಿ ಕುಳವಾಗಿತ್ತು; ಭಾಸ ಮನ್ನಣೆಯ ಮಕ್ಕಳಲಿ ತಾನೊಬ್ಬನಾಗಿದ್ದ. ಕ್ರಮೇಣ ಕುಪುತ್ರಸಂತತಿ ಎದ್ದು, ಅನರ್ಥವ್ಯಾಪಾರ, ಕೃತಕಸಂಪ್ರದಾಯ, ಬರಿಮಾತಿನ ಬೂರಗಳೆ, ಕೇವಲ ಟೀಕೆ ಪ್ರತಿಟೀಕೆ, ವ್ಯಾಜ್ಯ ವ್ಯವಹಾರ ಮುಂತಾದ ಮೂರ್ಖಸಾಧನೆಗಳಿಂದ ನಿಸ್ಸಾರವಾಯ್ತು ಆ ಸಂಸಾರ. ಸಾರೋಟು ಕುದುರೆಗಳು ಸೂರೆಯಾದುವು; ಸೀರೆ ಆಭರಣಗಳು ಅಡವಿನಂಗಡಿ ಸೇರಿದುವು; ಕೊನೆಕೊನೆಗೆ ಅನ್ನ ತುಪ್ಪವು ಇಲ್ಲ: ಹುಳುಕ ಜೋಳವೆ ಗ್ರಾಸ, ಮಲತ ಹೊಂಡವೆ ಪಾನ! ಆ ದುಃಖದಿತಿಹಾಸವನು ಹೇಳಿದವ ಕೇಳಿದವ ಇಬ್ಬರು ಕಂಗೆಟ್ಟುಹೋದರು. ಪಾಪ, ಭಾಸನಿಗೆ ಆವ ಗತಿ? ಅಲ್ಲಗಳೆದರು; ಆಚೆಗೆ ಅಟ್ಟಿದರು. ನೆತ್ತಿಯ ಮೇಲೆ

ಅಷ್ಟು ನೆಳಲಿಲ್ಲ; ಒಡಲಿಗೆ ಒಂದಿಷ್ಟು ಕೂಳಿಲ್ಲ. ಪರದೇಶಿಯಾಗಿ ಬಹುವರ್ಷ ಅಲೆದಲೆದು ಕಡೆಯಲ್ಲಿ ತನ್ನ ಕಿಂಚಿತ್ಪುಣ್ಯದಿಂದ ಬಂದು ಹೊಕ್ಕಿಹನು ಧರ್ಮಾತ್ಮ ದ್ರಾವಿಡವ!

ವಿಡಂಬನೆಗೆ ಮರುವಿಡಂಬನೆ ಮಾಡಿಯಾಯ್ತು. ಇನ್ನು, ಆಳದ ತತ್ವವನು ಅಗೆದು ತೆಗೆಯೋಣ. ಮಹೋನ್ನತ ವಸ್ತುವಾವುದನು ಮತ ಕಾಲ ಕುಲ ವರ್ಣ ನುಡಿ ನಾಡು ಇತ್ಯಾದಿ ಕಿಷ್ಕಿಂಥ ಪಂಜರದಲ್ಲಿ ಕೂಡಿ ಇಡಬಹುದಯ್ಯ? ಮೇದಿನಿಯ ಉಸಿರು ಮಾರುತನ ಇದು ನಮ್ಮದು, ನಾವು ಬಿಡುವುದಿಲ್ಲೆಂದು ಭರಣಿಯಲಿಟ್ಟು ಬಿರಡೆಯು ಹಾಕಬಹುದೆ? ಜಗದ ಮುಖ್ಯ ಚೈತನ್ಯ ಮಾರ್ತಾಂಡನನು ಹಿಡಿದು, ಹಿತ್ತಿಲಲಿ ಗೋಡೆಯೆಬ್ಬಿಸಿ ಗೋಪ್ಯಪಡಿಸುವರಾರು? ಮೇಲೆ ಹರಡಿರುವ ನೀಲಗಗನವ ಮಡಿಸಿ ಸಣ್ಣದುಮಾಡಿ ಕೊಠಡಿಯಲಿ ಪೇರಿಸಿರಿಸುವ ಬೆಸನ ಆವ ಬುದ್ಧಿವಂತನದು? ಉತ್ತಮೋತ್ತಮ ಕಾವ್ಯ ಚಿತ್ರ ಶಿಲ್ಪ ಸಿಸ್ತು ಸಿದ್ಧಾಂತ ಶೋಧನೆ ವಿಮರ್ಶೆ ವಿರಚನೆಗಳೆಲ್ಲ ಸಮಸ್ತ ಮಾನವಸಮೂಹಕ್ಕೆ ದತ್ತಿ. ಆವ ಭಾಷೆಯಲಿ ಬರೆದರೇನು? ರೂವಾರಿ ಯಾರು ಕೆತ್ತಿದೊಡೇನು? ಯಾವಾಗ ಬೇಕಾದರು ಸಂಘಟಿಸಿರಲಿ! ಎಲ್ಲಿಯಾದರು ಕಂಡುಹಿಡಿದಿರಲಿ! ಉದ್ದಾಮ ಸಂಗತಿಯೆಂಬ ಉದಾರಸತ್ರದಲಿ ಶಕ್ತಿ ಆಸಕ್ತಿಯುಳ್ಳವರೆಲ್ಲ ಅತಿಥಿಗಳಾಗಬಹುದು; ಎಲ್ಲರಿಗು ಪ್ರತಿದಿನವು ರಾಜಭೋಜನ! ಲೋಭವೇಕಯ್ಯ ನಮಗೆ? ದೇವರದೇವ ಮಾವಿನಕೆರೆಯ ರಂಗಯ್ಯ. ‖ ೧೦ ‖

ಹೆಚ್ಚಿಹೋಗಿದೆಯಯ್ಯ ಲೋಕದಲಿ ಬಗೆಬಗೆಯ ಕೋಶದಿಂದಾದ ಲೇಖನ ಸರವಿ! ಹಿಂದೆ ಬಹುವಾಗಿ ಬೆಳೆಯುತಿದ್ದಿತು ಅಮರಕೋಶದ ಬರವಣಿಗೆ; ಇನ್ನು ಅದು ಬುಡಸಹಿತ ನಿರ್ಮೂಲವಾಗಿಲ್ಲ. ಈಗ ಸಾರಸ್ವತಾಕಾಶದಲಿ ಸ್ವಚ್ಛಂದವಾಗಿ ಹಾರಿಯಾಡುತಲಿಹುದು ಶ್ವಾಸಕೋಶ ಹೊರಗೂದಿದ ಆವಿಕವಿತೆ. ಅದಕೆ ಇದಿರಾಳು ಪರಿದಾಡುವುದು ಲಾಲಾಕೋಶದಿಂದ ಬಸಿದು ಬಂದಿಹ ನೊರೆಕವಿತೆ. ಮತ್ತೊಂದು "ನಾ ಕಾಣಿಸೆನೆ ನಿಮಗೆ?" ಎಂದು ಘೂಗುಟ್ಟುವುದು ಸ್ವಪ್ನಕೋಶದ ಜೇಡಬಲೆ ಸಾಹಿತ್ಯ. ಪಿತ್ತಕೋಶ ಕಾರುತಲಿಹುದು ಕೆಲಪುಸ್ತಕವ. ನರಕದಗಲ ಒಂದು ವಾಙ್ಮಯ ಸೋರುತಿದೆ ಕಾಮಕೋಶದ ದ್ವಾರ. ಸಹಸ್ರಾರು ಕಾಗದಕಟ್ಟುಗಳು ಪ್ರಕಟವಾಗುವುವು ಅನ್ನಕೋಶದ ಅಪ್ಪಣೆಯಮೇರೆ. ಹುರುಡು ಹೊಟ್ಟೆಕಿಚ್ಚು ಜಂಭ ಅಜ್ಞಾನ ಕೋಪ ಬೇಸರ ನೈಚ್ಯಾನುಸಂಧಾನ ಯಾವುದೊ ಒಂದರ ಹೆಸರಿಲ್ಲದ ಜನ್ಮಕೋಶವನು ಆನಂದಮಯಕೋಶವೆಂದೇ ಬಗೆದು, ಮಾತಿನ ಮರಳುಮನೆಯ ಕಟ್ಟುವುದು ಸಾಮಾನ್ಯವರ್ತನೆಯಾಗಿದೆಯಯ್ಯ.

ಬುದ್ಧಿ ಭಾವಗಳ ವಿವಾಹವಿಲ್ಲದೆ ವೃದ್ಧಿಯಾಗುವುದು ಸದ್ವಂಶ ಸಾಹಿತ್ಯವೇನಯ್ಯ? ಆದರೆ ಎಲ್ಲೆಲ್ಲು ಮಿದುಳು ನಪುಂಸಕ; ಹೃದಯಕ್ಕೆ ಹರೆಯವಿಲ್ಲ. ಪ್ರಸನ್ನ ಮಿದುಳು ಪ್ರಾಮಾಣಿಕ ಹೃದಯ ಒಟ್ಟುಗೂಡಿ, ಹರ್ಷಗೊಂಡು, ಪ್ರಶಾಂತ ಗೃಹಕೃತ್ಯ ವಹಿಸಲು ಬಹುಶಃ ಇದು ಸಮಯವಲ್ಲಯ್ಯ. ಹಲಗೆ ಬಳಪದ ಕುಲದವರು ಕಥೆಯ ಕಪಿಯಂತೆ, ಅಪಾಯವಾದೀತೆಂದು ಬೆದರಿ, ತಮ್ಮಮ್ಮಯ ಜ್ಞಾನಕೋಶ ಹೃತ್ಕೋಶಗಳ ಹೊರತೆಗೆದು, ಭಾರಿಯಮರದ ಮೇಲಣಕೊಂಬೆಗೆ ಸೇತುಹಾಕಿರಬಹುದು; ಅದರಿಂದ ಪದರಚನೆ ಉತ್ಪತ್ತಿಯಾಗುತಿದೆ ಮತ್ತಿತರ ಕೋಶಗಳಲ್ಲಿ! ವಿಶ್ವವಿಸ್ಮಯದ ಕವಿ ವಿಟ್ಠಲ! ದೇವರದೇವ ಮಾವಿನಕೆರೆಯ ರಂಗಯ್ಯ. ॥ ೧೧ ॥

ಹಾಗೆ ಕನಸಾಯ್ತು: ನೆನ್ನೆ ಮೊನ್ನೆ ಸರ್ಕಾರದಾಶ್ರಯದಲ್ಲಿ ಒಂದು ಗುಮಾಸ್ತಿಕೆಗಾಗಿ ಪರೀಕ್ಷೆಗೆ ಕುಳಿತ ವಾಲ್ಮೀಕಿ. ಆ ವರುಷ ಸಾಹಿತ್ಯ ಪ್ರಶ್ನಪತ್ರಿಕೆಯಲ್ಲಿ ರಾಮಾಯಣವ ಕುರಿತು ಕೆಲವ ಕೇಳಿತ್ತು. ವಾಲ್ಮೀಕಿ ತೇರ್ಗಡೆಯಾಗಲಿಲ್ಲ! ಏತಕ್ಕೆ? ಗೋವಿಂದರಾಜ ತಿಲಕ ಮಹೇಶ್ವರತೀರ್ಥ ಯಾವೊಂದು ವ್ಯಾಖ್ಯಾನವನು ಅವ ಓದಿಯೆ ಇರಲಿಲ್ಲ! ಏನಜ್ಞಾನ! ದೇವರದೇವ ಮಾವಿನಕೆರೆಯ ರಂಗಯ್ಯ. ॥ ೧೨ ॥

ಕೆಲ ಕವಿಗಳುಂಟಯ್ಯ ಪದ್ಯ ವ್ಯವಸ್ಥೆಗಿಂತಲು ಪ್ರಚಾರ ವ್ಯಾಪಾರದಲಿ ಪಂಡಿತರು. ಮಾತ ಬಲ್ಲರು; ನಟನೆಯಲಿ ಮಲ್ಲರು; ಜನಸಂದಣಿಯ ಮರ್ಜಿಯ ಸಾಕಾದಷ್ಟು ಅರಿತವರು; ಮರುಳುಮಾಟದಲಿ ಬೇಕಾದಷ್ಟು ನುರಿತವರು. ಶಬ್ದ ಶೈಲಿಗಳು ಸಪ್ಪೆಯಾದರೆ ಮುದ್ರಣದ ಮೋಡಿಯೆ ಮಾರ್ಗ! ಕಥೆ ಕಥನರೀತಿ ಕುಂಟಿದರೆ ಒಂಟೆಯಮೇಲೆ ಪುಸ್ತಕದ ಮೆರವಣಿಗೆ! ಒಳಗಡೆಯ ಬೆಳಕು ಮಬ್ಬಾದಲ್ಲಿ ಮಹಲು ಮಾಳಿಗೆಯಿಂದ ರಂಗು ವಿದ್ಯುತ್ತಿನ ಜಾಹಿರಾತು! ಗ್ರಂಥ ಒಟ್ಟಿನಲಿ ಅಲ್ಪವಾಗಿರಲಿ ಅನಿಷ್ಟವಾಗಿರಲಿ, ಕಟ್ಟೆ ಕಟ್ಟೆಯಮೇಲೆ "ಅತ್ಯಧಿಕ" "ಅತಿಪುಷ್ಟ"ವೆಂದೆಂದು ಘಟ್ಟಿಯಾಗಿ ಘೋಷಿಪುದೆ ಬೆಸನ! ಬಹಳ ಜನ ಬೀಳುವುದು ಅವರ ಬಲೆಯೊಳಗೆ; ಸರಕು ಮಾರಾಟವಾಗುವುದು ಚುರುಕಿನಿಂದ.

ಅವರದು ಅಷ್ಟೆ ಆಸಕ್ತಿ; ಅವರಿಗೆ ಅದಷ್ಟೆ ಮುಕ್ತಿ! ಹೆಚ್ಚಿನದಾವುದೊಂದ ಅವರಿಚ್ಛಿಸರಯ್ಯ. "ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್" ಎಂದ ದೇವರದೇವ ಮಾವಿನಕೆರೆಯ ರಂಗಯ್ಯ. ॥ ೧೩ ॥

"ಬಗುಳಲಿ ನಾಯಿ; ವರಾಹ ನಾನು, ಏಕೆ ಕಿವಿಗೊಡಲಿ? ನದಿ ನಾನು ಹರಿದೆ ಹರಿಯುವೆ; ಮುಳ್ಳುಪೊದೆ ಎನ್ನ ಪ್ರವಾಹವನು ನಿಲಿಸಲಾಪುದೆ? ಸೂರ್ಯ

ನಾನು, ಪೂರ್ವಪರ್ವತವೇರಿ ಕಿರಣಗಳ ಪ್ರಸರಿಸುವೆ; ಗೂಬೆ ಘೂಗುಟ್ಟಿದರೆ ಅಂಜಿ ಹಿಂಜರಿಯುವೆನೆ? ”

ಒಪ್ಪಿದೆನಯ್ಯ ನಾನೀ ಹೇಳಿಕೆಯ ದೃಢಬುದ್ಧಿ ಗೌರವವ. ಕವಿಯ ಮತ ಅಂತೆಯೆ ಇರಬೇಕು. ಅಂಥ ಕವಿಯಿಂದ ಎಮಗೆ ಉಲ್ಲಾಸ ಉಪಯೋಗ ಉತ್ಕೃಷ್ಟ ಪ್ರಗತಿ. ಆದರೆ ಒಂದೆ ಎಚ್ಚರಿಕೆ. ನಿಶ್ಚಯವಾಗಿ ಕವಿ ವರಾಹ ವಿಮರ್ಶಕ ನಾಯಿ, ಕವಿ ನದಿ ವಿಮರ್ಶಕ ಮುಳ್ಳುಪೊದೆ, ಕವಿ ಸೂರ್ಯ ವಿಮರ್ಶಕ ಗೂಬೆ ಆಗಬೇಕು. ಹಾಗಿಲ್ಲದಿದ್ದರೆ ಕವಿಯ ಒಣಮಾತು ದಡ್ಡರಿಗು ಮಕ್ಕಳಿಗು ನಗೆಪಾಟಲಾದೀತು.

ಬಹು ದೊಡ್ಡ ಕವಿ ಕಡು ಶುಷ್ಕ “ ಪಂಡಿತ ” ನ ಕಡೆಗೆ ಈ ಬಗೆಯ ಬಯ್ಗುಳ ವೆರಚಬಹುದು. ಗಂಡುಕವಿ ಹೋಮರು ಭಂಡ ಬೇವಿಯಸ್ಸನ ಕುರಿತು; ವರ್ಜಿಲ ಮಿಾವಿಯಸ್ಸನ ಕುರಿತು ; ಐನೂರು ಮಾರು ಷೇಕ್ಸ್‌ಪಿಯರು ಐದಂಗುಲದ ರೈಮರನ ಕುರಿತು ; ಜಾನ್ ಮಿಲ್ಟನು ಜೋನ್ಸ್ ಮಿನಿಮನ ಕುರಿತು ; ವ್ಯಾಸ ರಂಗನ ಕುರಿತು ; ವಾಲ್ಮೀಕಿ ಕಿಟ್ಟುವ ಕುರಿತು ; ಬಾಣ ಶಾಮಿಯ ಕುರಿತು.

ಮಿಕ್ಕುಳಿದ ಕವಿಗಳೆಲ್ಲ ನಮ್ರತೆಯ ತಲೆಮುಸುಕಿನೊಳಗಿದ್ದಲ್ಲಿ ಒಳಿತು ; ಮಿದುಳು ಕೆಡದ ಮಾನಿನಿಯರೆಂದು ಮನ್ನಿಸುವರು ಮಂದಿ. ದೇವರದೇವ ಮಾವಿನಕೆರೆಯ ರಂಗಯ್ಯ. ‖ ೧೪ ‖

ಅಣ್ಣಯ್ಯ ಪ್ರತಿದಿನವು ನೂರು ಪಂಕ್ತಿಯ ರಚಿಸಿ ಮರುದಿವಸ ಅದ ಪ್ರಕಟಿಸಿ ಬಿಡುವ; ಅಯ್ಯಣ್ಣ ದಿನದಿನವು ಇನ್ನೂರು ಪಂಕ್ತಿಯ ರಚಿಸಿದರು ಒಂದನಾದರು ಪ್ರಕಟಗೊಳಿಸ. ಇಬ್ಬರಿಗು ಮೊಲದ ಮಸ್ತಿಷ್ಕ. ಅಯ್ಯಣ್ಣನಿಗುಂಟು ಒಂದಿಷ್ಟು ಸಾಮಾನ್ಯ ತಿಳಿವಳಿಕೆ; ಅಯ್ಯಣ್ಣನಲಿ ಅದೂ ಲುಪ್ತ. ಸತ್ವಮಯ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೧೫ ‖

ತುಟಿಯ ಪೌಳಿಯ ದಾಟಿ, ಗಾಳಿಯ ಬೀದಿಯಲಿ ದೌಡಿಟ್ಟು, ನೆರೆಹೊರೆಯ ಕಿವಿ ಕೊಟ್ಟಡಿಯೊಳಗೆ ನುಗ್ಗಲು ತವಕಪಡುವುವು ಚಿತ್ರ ಬಣ್ಣದ ಮಾತುಗಳು. ಬಾಯಿನ ಒಳತೊಟ್ಟಿಯಲೆ ಅವುಗಳನೆಲ್ಲ ಬಂಧಿಸಿ, ಒಂದೊಂದನ್ನೆ ಪರೀಕ್ಷೆಗೆ ತಂದು ನಿಲ್ಲಿಸಬೇಕಯ್ಯ; ಹಾಗೆಸಗದಿದ್ದಲ್ಲಿ ಅನರ್ಥ, ಅಪಘಾತ, ಅವಮಾನ. ಪ್ರತಿಯೊಂದು ಪದದ ಎತ್ತರ, ಎದೆಯಗಲ, ಮಾಂಸಖಂಡಗಳ ಮೇಳ, ಕೈಸುತ್ತು, ಮುಖ ರೇಖೆ, ಮೈಕಟ್ಟು ಮುಂತಾದುವನು ಎಣಿಸಿ, ಸಂದರ್ಭ ಸನ್ನಿವೇಶದ ಭಾರವನು ಹೊರಬಹುದೆ ಮೊದಲು ಗಣಿಸಬೇಕಯ್ಯ. ಆಮೇಲೆ, ಖಂಡಿತ ಕಣ್ಣಿನಲಿ, ಕ್ರೂರ ಕೌಶಲ್ಯದಲಿ, ದೃಷ್ಟಿಸಬೇಕು, ನುಡಿ ಯಾವುದಾದರು ಜ್ವರದ ಆಧಿಕ್ಯದಲಿ ಕೆಂಪಡರಿಹುದೊ?

ಕೊಬ್ಬಿನ ಉಬ್ಬಸದಿಂದ ಶ್ಲೇಷ್ಮವನು ಕೆಮ್ಮುತಿಹುದೊ ? ಪಿತ್ಥ ವೈಪರೀತ್ಯವೇನಾದರು ಅದರ ನೆತ್ತಿಗೆ ಹತ್ತಿದೆಯೊ ? ಕೆಟ್ಟನೀರನು ಒಳಗಿಟ್ಟುಕೊಂಡು ಊದಿಹೋಗಿದೆಯೊ ? ಕಡೆಯಲ್ಲಿ ನಿರ್ಧರಿಸಬೇಕು, ಅದರ ನಾಡಿಯ ತಾಳ ವಿಚಕ್ಷಣವೆ? ಹೃದಯದ ನೃತ್ಯ ಸುಲಕ್ಷಣವೆ? ಅಡಿಯಿಡುವ ನಯ ಕಣ್ಗಳಿಗೆ ಹಬ್ಬವೆ? ಒಟ್ಟಿನ ಧಾಟಿ ಸಂತುಷ್ಟಿಯನು ಪುಟ್ಟಿಪುದೆ?

ಇಂತು ಅಲುಗಿಸಿ, ಅಳ್ಳೆಯನವುಕಿ, ಎಳೆದು, ಅಳೆದು, ತಡಕಿ, ತಿಕ್ಕಿ, ಯಂತ್ರಗಳ ಹಿಡಿದು, ಗಣಿಸಿ, ಗುಣಿಸಿ, ನೋಡಿ, ನೋಡಿ ಪೂರ್ಣಾರೋಗ್ಯ ಯೋಗ್ಯತೆಯಿಂದ ತೃಪ್ತಿಪಡಿಸಿ ಗೆಲಿದ ಶಬ್ದಗಳ ಮಾತ್ರ ಹೊರಗೆ ಕಳುಹಿ ಕೊಡಬೇಕಯ್ಯ. ಮಿಕ್ಕೆಲ್ಲವನು ಕುಕ್ಷಿಯೊಳಗಡೆ ರಕ್ಷಿಸಿಕೊಂಡು, ದಕ್ಷ ಚಿಕಿತ್ಸೆಯಲಿ ಶಿಕ್ಷಿಸಬೇಕಯ್ಯ! ಸರಸ್ವತಿಯ ಅರಸನ ಅಪ್ಪ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೧೬ ‖

ಸಾಹಿತ್ಯವನು ಕೊಂಡುತರುವ ಮಾಲೆಂದು ಪರಿಗಣಿಸಿ, ಹೆಚ್ಚುಹೆಚ್ಚಾಗಿ ಹೊಗಳಿ, ಪುನಃ ಪುನಃ ವಾದಮಾಡಿ, ಅಲ್ಲಿನಿಂದಿಲ್ಲಿಗೆ ಸುತ್ತಾಡಿ, ಮಾರಾಟ ನಡೆಸಲೆಳಸುವ ದಳ್ಳಾಳಿಗಳುಂಟು ಸಮಾಜದಲಿ. ಅವರಲ್ಲಿ ಕೆಲಮಂದಿ ಕಷ್ಟಪಟ್ಟು, ಉದಾಸೀನ ಪ್ರಪಂಚಕ್ಕೆ ಉತ್ತಮ ಕಾವ್ಯವನು ಹೊರಿಸುತಿರುವರು, ಹರಡುತಿರುವರು. ಪ್ರಾಮಾಣಿಕ ಕೆಲಸಗಾರರು ಅವರು : ಸಂಶಯವೇಕೆ, ಶಾರದಾಂಬೆಯ ಜಂಭವಿಲ್ಲದ ಹಿಂಬಾಲಕರು !

ಉಳಿದವರ ಉದ್ಯಮ ಆ ರೀತಿಯಲ್ಲ ; ಅವರ ಉದ್ದೇಶ ಪ್ರತ್ಯೇಕ. ವಿಶಾಲ ವಾಙ್ಮಯದ ಯೋಚನೆ ಯೋಗಕ್ಷೇಮ ಅವರಿಂದ ಬಲುದೂರ. ಆವುದೊ ಹೊರಗಣ ಕಾರಣದಿಂದ ತಮಗೆ ಹೊಂದಿಬಂದ ಕವಿನಾಮಧಾರಿಯ ಪೆಸರ ಪ್ರಸಿದ್ಧಪಡಿಸುವುದೆ ಅವರ ಪರಮ ಪ್ರಯತ್ನ. ಅವನ ಕುರಿತೆ ಸಲ್ಲಾಪ ಯಾವಾಗ್ಗು ; ಅವನ ಪರವಾಗಿ ಡಂಗೂರ ಎಲ್ಲೆಲ್ಲು. ಸಾಹಿತ್ಯ ಸೇವಕರಲ್ಲ ಇವರು : ಸಂಶಯವೇಕೆ, ಪಿಂಡಾರಿ ಸಾಹಿತಿಯ ಗುಲಾಮದಂಡು !

ಸರಸ್ವತಿಗೆ ಲಕ್ಷ್ಮಿಯ ಅಸೂಯೆಗಿಂತ ಇಂಥ ದುಷ್ಟರ ಅನಾಚಾರ ಹೇರಳ ಹಿಂಸೆ ದೇವರದೇವ ಮಾವಿನಕೆರೆಯ ರಂಗಯ್ಯ. ‖ ೧೭ ‖

ಸಂಗೀತಗಾರನಿಗೆ ಗಂಟಲೆ ಅಂಗಡಿ; ಮಲ್ಲನಿಗೆ ಮಾಂಸಖಂಡವೆ ಮಹದೈಶ್ವರ್ಯ ; ಶಿಲ್ಪಿಗೆ ಚಾಣು ಆಯುಧ ಕೋಠಿ ; ಕವಿಗೆ ಪ್ರತಿಭೆಯೆಂಬುದು ಸಕಲ ಪುರುಷಾರ್ಥ.

ಮಿರಾಂಡಳಿಗೆ ನಿಸರ್ಗವದೆ ನೂರಲಂಕಾರ ; ಮಾತೆ ಸೀತೆಗೆ ತನ್ನಯ ಹೆಸರು

ಹಿರಿಯ ಸ್ವರ್ಗ! ಬಹು ದೊಡ್ಡ ವಸ್ತುವಿನ ತೇಜದ ಅಂತರ್ಬೀಜ ಎಷ್ಟು ಸಣ್ಣದು; ಆ ಗುಟ್ಟ ಪಿಕ್ಕಿ ರಟ್ಟುಮಾಡಿದರೆ ಅದೆಷ್ಟು ಸಾಮಾನ್ಯ! ಎಲ್ಲರಲು ಇರುವಂತೆ ಅಲ್ಲವೆ? ಮತ್ತೆ ಏತರಲಿ ಹೆಚ್ಚು? ಅದಾವ ಅಚ್ಚರಿ ಉಂಟು?

ಹೀಗೆ ಅನ್ನುತಲೆ ಸಾಧಾರಣರು ನಾವು ಹಾಕುವೆವು, ನೋಡಯ್ಯ, ಮೌಢ್ಯದ ಗೋಡೆಯನು! ಪವಾಡಗಳ ಪ್ರಭು! ದೇವರದೇವ ಮಾವಿನಕೆರೆಯ ರಂಗಯ್ಯ.

‖ ೧೮ ‖

ಬರವಣಿಗೆಗಳನೇಕ ಬರೆಯಲು ಬಹು ಸುಲಭ, ಓದಲು ವಿಪರೀತ ಬೇಸರ. ಅದೇತರಿಂದ ಅಂತಾಯ್ತು? ಅವುಗಳ ಕರ್ತೃಗಳು ಹುಟ್ಟಿಬಂದ ಸಾಹಿತಿಗಳಲ್ಲ, ಸಮಾಜದ ಸಭ್ಯಜನವಯ್ಯ. ನಾಗರಿಕ ಹಿಡಿದು ನಡೆಯುವ ಬಡಿವಾರ ಬೆತ್ತದಹಾಗೆ ಲಾಳಕಡ್ಡಿಯನು ಮೆರೆಯಬಹುದೆಂದು ಅವರು ಕವನ ಜೋಕಿಗೆ ಕೈಹಾಕುವರು, ಪಾಪ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೧೯ ‖

ನಡೆವಾತ ಎಡಹುವನಲ್ಲದಲೆ ಕುಳಿತವನು ಎಡಹಲಾರ. ಆದರೆ ನಡೆವುದಕಿಂತ ಎಡಹುವುದೆ ಅಧಿಕವಾದಲ್ಲಿ ಅವನು ಹೆಳವನೊ ಸಮರ್ಪಕ ಮಾನವನೊ? ಮರದ ಆ ಭಾಗ ಈ ಭಾಗವನು ಮುಸುರಿಕೊಳಬಹುದು ಗೆದ್ದಲು ಕುಟ್ಟೆಹುಳು; ಆದರೆ ನೆರಳಿಗೋಸುಗ ನಾಲ್ಕು ಕೊಂಬೆ ತುಂಬ ಎಲೆಯಿಲ್ಲದಿರೆ, ಒಂದೆರಡು ಹಕ್ಕಿಗಳ ಕುಟುಕು ಕವಳ ಅದರಲ್ಲಿ ಲಭಿಸದಿದ್ದರೆ, ಅದೆಂಥ ಮರ? ಬರೆವ ಕವಿ ನಡುನಡುವೆ ತೂಕಡಿಸಬಹುದು; ಅದು ಅನಿವಾರ್ಯ ಮನುಷ್ಯತ್ವ; ಆದರೆ ಬಹು ಹೊತ್ತು ನಿದ್ದೆಯಲೆ ಇದ್ದುಬಿಟ್ಟಲ್ಲಿ ಅವನಾವ ಗುಂಪಿನ ಗ್ರಂಥಕರ್ತ? ಚಿಕ್ಕ ದೋಷವೆನ್ನುವ ಮಸಿಯ ಚಿತ್ತುಗಳ ನೆಪದ ರಬ್ಬರಿನಿಂದ ಅಳಿಸಬಹುದು; ಪುಟವೆಲ್ಲ ಮಸಿಯ ಮುದ್ದೆಯಾದರೆ ಮಾಡುವುದೇನು? ಮಲಾಪಹಾರಿ, ಮಾಲಿನ್ಯರಹಿತ! ದೇವರದೇವ ಮಾವಿನಕೆರೆಯ ರಂಗಯ್ಯ.

‖ ೨೦ ‖

ಪದ್ಯ ಕಾವ್ಯದಲಿ ಅಕ್ರಮ ನೀರಸತೆ ತೋರಿದರೆ ಅದಕೆ ಗದ್ಯತನ ಪ್ರಾಪ್ತಿಸಿತೆಂದು ತಟ್ಟನೆ ಹೇಳಿಬಿಡುವರಯ್ಯ. ಕೆಟ್ಟಿರುವ, ಕುಲಗೆಟ್ಟಿರುವ ಪದ್ಯ ಗದ್ಯವಾಯಿತು ಹೇಗೆ, ಕಾವ್ಯವಾಯಿತು ಹೇಗೆ? ಒಡೆದ ಹಾಲನು ಮೊಸರೆಂದಹಾಗೆ. ಹದವ ಚೆನ್ನಾಗಿ ಪೋಷಿಸಿ, ಹೆಪ್ಪುಹಾಕಿ, ಹತ್ತೆಂಟು ತಾಸು ಕಾದಿದ್ದು, ಆಮೇಲೆ ಪಡೆಯುವ ಚಂದ್ರಿಕಾಪಾಕ ಮೊಸರೆಂಬುದು ಹೋಗಿಬಿಟ್ಟಿತೆ? ಹುಳಿಬಿದ್ದ ಹಾಲು ಹಾಲಲ್ಲ; ಮೊಸರು ಮೊದಲೇ ಅಲ್ಲ; ಕಲಗಚ್ಚಿನ ಪಾಲು. ಭ್ರಷ್ಟ ಬ್ರಾಹ್ಮಣ ಉದಾರ ವೈಶ್ಯನಾಗು

ವನೆ? ಹೇಡಿ ಕ್ಷತ್ರಿಯ ಉತ್ಕೃಷ್ಟ ಒಕ್ಕಲಿಗನಾಗುವನೆ? ಕುಲ ಶೀಲ ತಪ್ಪಿದ ಅಯೋಗ್ಯ ಬ್ರಾಹ್ಮಣ ಅಯೋಗ್ಯ ಕ್ಷತ್ರಿಯ ಯಾವ ವರ್ಗಕು ಸೇರುವಂತಿಲ್ಲ; ಅವರಿಗೆ ಸಿದ್ಧವಾಗಿಹುದು ಆರನೆಯ ರೌರವ ವರ್ಣ! ಗಂಡುಗುಣ ಕಾಣಿಸದ ಗಂಡಸನು ಹೆಂಗಸೆನ್ನುತ ಛೀಮಾರಿಗೈದಂತೆ. ಹೆಂಗಸಿಗೆ ಅದು ಶುದ್ಧ ಅನ್ಯಾಯ. ಪುರುಷ ಪೌರುಷ ಲೋಪವಾದವ ಪುರುಷನು ಅಲ್ಲ, ಸ್ತ್ರೀಯಂತು ಖಂಡಿತ ಅಲ್ಲ; ಅವನಿಗೆ ಬೇರೊಂದು ಹೀನ ಹೆಸರುಂಟು!

ಗದ್ಯಕಾವ್ಯಕು ಉಂಟು ನಿಯಮ, ನಿಷ್ಠೆ, ನೈಸರ್ಗಿಕತೆ; ಅಂದ, ಬಂಧ, ಛಂದಸ್ಸು; ವಿಷಯ, ವೈಶಿಷ್ಟ್ಯ, ವೈಭವ. ನಾಲಗೆಯಿಂದ ಜಾರುವುದೆಲ್ಲ ಗದ್ಯವಲ್ಲ, ಜೊಲ್ಲು. ಈಶ್ವರನ ಶುಭ್ರ ಸನ್ನಿಧಿಯೆದುರು ಹೆಣ್ಣು ಗಂಡುಗಳೆರಡು ಹೇಗೆ ಸಮತೂಕವೊ, ಹಾಗೆ ಒಡತಿ ಶಾರದೆಯ ಕಾಲ್ಕಡಗಕ್ಕೆ ಗೆಜ್ಜೆಯಾಗಲು ಗದ್ಯ ಪದ್ಯವೆರಡಕು ಸಮಾನ ಹಕ್ಕು. ಅದು ಅದಾಗದಿದ್ದರೆ ಇದೇ ಆಗಿರಬೇಕು ಎಂಬ ಅಪಥ್ಯ ನಂಬಿಕೆಯೆಲ್ಲ ಹೇಳ ಹೆಸರಿಲ್ಲದಲೆ ಹೋಗಬೇಕಯ್ಯ, ದೇವರದೇವ ಮಾವಿನಕೆರೆಯ ರಂಗಯ್ಯ. ‖ ೨೧ ‖

ಹಾಸ್ಯವದು ನಾಗರಿಕತೆಯ ಹಿರಿಯ ಕುರುಹು. ಪಶುಗಳಿಗೆ ಪರಿಹಾಸವೆ ಇಲ್ಲ. ಕಾಡುಮನುಜರ ಮೋರೆಯಮೇಲೆ ಸಾಧಾರಣವಾಗಿ ಗಂಭೀರಮುದ್ರೆ; ಹರುಷ ಹೊಂದುವುದುಂಟು ಅವರು ಆಗಾಗ: ಆದರದು ಹುಚ್ಚು ನಕಲಿ, ಹೋ ಎನುವ ಹುಯ್ಲು, ಹುಡುಗಾಟ; ಅಲ್ಪ ಕಾರಣದಿಂದ ಉಲ್ಬಣವಾಗುವುದು, ಸ್ವಲ್ಪದರಲ್ಲಿ ಕೊನೆಗಾಣುವುದು. ಶರೀರ ತೃಪ್ತಿಯ ಅಶ್ಲೀಲ ಆಭಾಸಗಳ ಕುರಿತದ್ದು, ಕದಡಾಗಿ ಒರಟಾದ್ದು, ಕೇವಲ ಲೇವಡಿ ಹಳ್ಳಿಯವರಿಗೆ ಹದನು. ಹೆಸರುಗಳ ವಿಕಾರ, ಪದಗಳ ಅಸಂಗತವೆ ಕುಚೋದ್ಯ ಸಾಮಾನ್ಯರಿಗೆ. ವಿಕಟ ವ್ಯವಹಾರಗಳ ನೋಟ, ವಿಚಿತ್ರ ವ್ಯಕ್ತಿಗಳ ವಿಡಂಬನ, ಬಹಳ ಜನರಲ್ಲಿ ದಪ್ಪ ನಗುವಿಗೆ ದಾದಿ. ಮುಗುಳು ನಗುವಿನ ತಿಳಿಹಾಸ ಬೆಳಗುವುದು ಕೆಲವರ ಮುಖವನ್ನ ನಗೆಪಾಟಲಿನ ನಡೆವಳಿಯ ಕಂಡಾಗ. ನೋವುಕೊಡದ ಕೃಪಾವಿನೋದ ನಾಗರಿಕರ ಸ್ವಭಾವ. ವಸ್ತುಗಳ ಜೋಡಣೆಯಲ್ಲಿ ಅವ್ಯಕ್ತ ಅಕ್ರಮವ ಕಂಡುಹಿಡಿದು ವಿನಯದಲಿ ಉಲ್ಲಾಸಪಡುವರು ಶೀಲವಂತ ಮೇಧಾವಿಗಳು. ಅತಿಸೂಕ್ಷ್ಮ ಅಸಂಗತತ್ವವ ಅರಿಯುವುದು, ಆದರ್ಶ ರೀತಿಯಲಿ ಆನಂದವನು ಅನುಭೋಗಿಸುವುದು, ಸುಸಂಸ್ಕೃತರಿಗೆ ಮಾತ್ರ ಸಾಧ್ಯ. ಸೃಷ್ಟಿಯೆನ್ನುವ ರಹಸ್ಯಹಾಸ್ಯವ ಬಿತ್ತಿರುವ ಉತ್ತಮೋತ್ತಮ ಸರಸಿ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೨೨ ‖

ಕಾವ್ಯ ಕನ್ನಿಕೆಯ ಒಪ್ಪಿ ಒಲಿಯಬೇಕಯ್ಯ ಅವಳ ಸ್ತ್ರೀತ್ವ ಕೌಶಲ ಲಾವಣ್ಯಾಕಾಗಿ; ಅವಳನ್ನೆ, ಅವಳಿಗೋಸ್ಕರಲೆ. ಅದಬಿಟ್ಟು, ಅವಳಪ್ಪನಿಂದ ದೊರೆಯುವ ದಕ್ಷಿಣೆಯೆಷ್ಟು; ಅವಳುಟ್ಟಿರುವ ಸೀರೆ ತಯಾರಾದ ಕಾರ್ಖಾನೆಯ ಸಾಹುಕಾರಗೆ ಮಕ್ಕಳುಂಟೆ; ತೊಟ್ಟಿರುವ ಕುಪ್ಪಸವ ಹೊಲಿದ ದರ್ಜಿಯ ಊರು ಮೈಸೂರೊ ಮದರಾಸೊ; ಒಡವೆಗಳ ಮಾಡಿಕೊಟ್ಟ ಅಕ್ಕಸಾಲೆಗೆ ಕಿವಿ ಮಂದವಂತೆ ಅಹುದೆ; ಅವಳ ಸಂಗಡ ಬರುವ ಆಳು ಅಡಿಗೆಯವ ಗೊರಕೆಹಾಕುವರೆ; ಸಾಮಾನನಿಟ್ಟುಕೊಳ್ಳಲು ಕಬ್ಬಿಣದ ಟ್ರಂಕು ತರುವರೊ ಮರದ ಪೆಟ್ಟಿಗೆಯನ್ನೊ; ಅವಳ ತಂದೆ ನಾಲ್ಕಾರು ಸಲ ರಜ ತೆಗೆದುಕೊಂಡು ಗಂಡು ಹುಡುಕಿಕೊಂಡು ಹೋಗಿದ್ದಾಗ ಅವಗೊಬ್ಬ ಹಳೆಯ ಸ್ನೇಹಿತ ಸಿಕ್ಕಿದನಂತೆ; ಅವರಿರುವ ಪಟ್ಟಣದ ಹೆಸರ ಮೊದಲಕ್ಷರ ನಮ್ಮ ನಗರದ ಹೆಸರ ಮೂರನೆಯ ಅಕ್ಷರ; ಅವರೂರಿನಲಿ ವ್ಯವಸಾಯಕ್ಕೆ ಆಸರೆ ಕೆರೆಯೊ ನಾಲೆಯೊ; ಅಲ್ಲಿನ ಗ್ರಾಮದೇವತೆ ಯಾರು; ಸಂತೆ ಯಾವತ್ತು;—ಎಂದು ಮುಂತಾಗಿ ಗಡಿ ಮಿತಿಯನರಿಯದ ಗಣಿತವೇಕಯ್ಯ? ವಿಮರ್ಶೆವ್ಯಾಯಾಮದಲಿ ಮುಖ್ಯ ಅಮುಖ್ಯ, ಗುಣ ಗೌಣ, ಆತ್ಮ ಅಲಂಕಾರವೆಂಬುದರ ವಿವೇಚನೆ ಮೊದಲ ಸಾಧನೆ, ಮಧ್ಯ ಸಾಧನೆ, ಮುಕ್ತಾಯ ಸಾಧನೆ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೨೩ ‖

ಎನ್ನ ಪೆಸರಲಿ ಮಠವ ಸ್ಥಾಪಿಸಿ ವಿಜೃಂಭಿಸುವ ಅಪೇಕ್ಷೆ ಎನಗಿಲ್ಲಯ್ಯ. ಹಿಂಡು ಶಿಷ್ಯರು ಸಾಲುಸಾಲಾಗಿ ಕೈಮುಗಿದು ನಿಂತಿರಲು, ಗದ್ದಿಗೆಯಿಂದ 'ಶ್ರೇಯೋಸ್ತು' ಎಂದು ಹರಸಿ ಹರ್ಷಿಸಬೇಕೆಂಬ ಚಪಲ ನನ್ನಿಂದ ದೂರ. ಆ ಪರಿಯ ಅಯ್ಯಗಳ ಅಧಿಕಾರ ಖಂಡಿತ ಎನಗೆ ಬೇಡಯ್ಯ.

ಈ ಭಾವನೆಗೆ "ನನಗೆ ಸಮಾನರಾರು, ನನ್ನ ಮುಟ್ಟುವವರುಂಟೆ!" ಎಂಬ ಅಹಂಕಾರ ತಂದೆಯು ಅಲ್ಲ; "ನಾನು ಅತ್ಯಂತ ಅಲ್ಪ, ನನ್ನಿಂದ ಏನಾದಿತು!" ಎಂಬ ಆತ್ಮತಿರಸ್ಕಾರ ತಾಯಿಯು ಅಲ್ಲ. ನನ್ನಲ್ಲಿ ನನಗೆ ಸಾಕಷ್ಟು ಅಭಿಮಾನ ಉಂಟಯ್ಯ, ನಿನ್ನ ಕೃಪೆಯಿಂದ. ಸಿದ್ಧ ವಿದ್ಯಾಧರ ಗರುಡ ಗಂಧರ್ವರಿಗಿಂತ ನಾ ಕೊಂಚ ಕೆಳಗೆ; ಆದರೆ ಮದ್ದುಎರೆಹುಳು ಮಿಾಸು ಮಂಡೂಕ ಮರ್ಕಟಕಿಂತ ಬಹಳ ಮೇಲೆ.

ನಾನೊಬ್ಬ ಮಾನವ; ಮಂದಿ ನನ್ನ ನೇತಕ್ಕೆ ಅನುಸರಿಸಬೇಕು? ನಾ ಹೇಳುವುದು ಹಿತವಾದಲ್ಲಿ ಅದ ಹಿಡಿದು ಹಿಂಬಾಲಿಸಲಿ. ನನ್ನ ಪರವಾಗಿ ಅವರ ವಾಗ್ವಾದ ಬೇಡ; ನನಗೋಸ್ಕರ ಅವರ ಹೋರಾಟ ಕೂಡದು; ಅವರ ಬಲಿದಾನ ನನ್ನ ಸಲುವಾಗಿ ಆದಲ್ಲಿ ಅದು ದೊಡ್ಡ ಅನ್ಯಾಯ. ಅವೆಲ್ಲ ಸತ್ಯಕಾಗಿ, ಧರ್ಮಕಾಗಿ, ಲೋಕ

ಕಲ್ಯಾಣಕಾಗಿ, ನಿನಗಾಗಿ, ಆಗಲಯ್ಯ. ಅದು ಎನಗು ತೃಪ್ತಿ, ಅವರಿಗು ಮುಕ್ತಿ! ದೇವರದೇವ ಮಾವಿನಕೆರೆಯ ರಂಗಯ್ಯ. ‖ ೨೪ ‖

ಬಲಗಾಲು ಎಡಗಾಲ ಕುರಿತು ಹೇಳಿದ ಕಟುನಿಂದೆಯನು ಕೇಳಿದೆನಯ್ಯ; ಬಲಗಾಲಮೇಲೆ ಎಡಗಾಲು ಎಸಗಿದ ಅವಹೇಳನವ ಆಲಿಸಿದೆನಯ್ಯ: ಕೇಳಿ ಕೊರಗಿದೆನಯ್ಯ, ಆಲಿಸಿ ಆತಂಕಪಟ್ಟೆನಯ್ಯ. ಕಲಾದೇವತೆಯ ಬಲಗಾಲು ಕವಿ, ಎಡಗಾಲು ವಿಮರ್ಶಕ: ಅವರಿರ್ವರು ಅಸೂಯೆ ಆಕ್ರೋಶಕೊಳಗಾಗಿ, ಪರಸ್ಪರ ಅಸಹಕಾರವನು ಆಚರಿಸಿ, ಕರ್ತವ್ಯಗೇಡಿಗಳಾದಲ್ಲಿ, ಆ ಭವಾನಿ ಮುಂತೆಂತು ಅಡಿಯಿಟ್ಟು ಧಾಳಿಗೈಯುವಳಯ್ಯ, ಅಸಂಸ್ಕೃತಿ ಮಹಿಷಾಸುರನ ಧೂಳಿಪಟಗೈಯುವಳಯ್ಯ?

"ಆ ಪರಿತೋಷಾದ್ವಿದುಷಾಂ" ಎಂದನಲ್ಲವೆ ಉದ್ಬಾಹು ವಾಮನ ಸೂತ್ರದಭ್ಯಾಸಿ,'ಶಾಕುಂತಲ'ದ ಕಾಳಿದಾಸ? "ರನ್ನನ ಕೃತಿರತ್ನಮುಮಂ ಪರೀಕ್ಷಿಪಂಗೆಂಟೆರ್ದೆಯೇ?" ಎಂದೆಂದು ಗರ್ಜಿಸಿದ ಕವಿಚಕ್ರವರ್ತಿ ಕೂಡ "ದಂಡನಾಯಕಂ ಕೇಶಿ ತಿರ್ದೆ ಪೇಳ್ದಂ." ಏತಕೆಂಬೆಯ; ಕವಿತಾರಹಸ್ಯವನು ಸತ್ಕವಿಯರಿವ, ಕಾವ್ಯ ಸೌಂದರ್ಯವನು ಸಹೃದ ಅರಿವ. ರಸವಾಕ್ಯ ಹೊರಬರುವುದಯ್ಯ ಸಮಂಜಸ ಕವಿಯ ಮುಖದಿಂದ; ಅದರ ಸ್ವಾರಸ್ಯ ಹರಡುವುದಯ್ಯ ಸೂಕ್ತ ವಿಮರ್ಶಕನ ಕೈಯಿಂದ.

"ಈ ಕೃತಿ ಅಷ್ಟಕಷ್ಟೆ ಎನ್ನುವೆಯಲ್ಲ; ಎಲ್ಲಿ, ಅದಕು ಒಳ್ಳೆಯದ ನೀ ರಚಿಸು, ನೋಡೋಣ!" ಹೀಗೆನುತ ಕವಿ ವಿಮರ್ಶಕನ ಹೀಯಾಳಿಸಬಾರದಯ್ಯ. ಕುರ್ಚಿಯ ಕುರೂಪವನು ತೋರಿಕೊಡುವವಗೆ ಹತ್ತಾರಿ ಹಿಡಿಯುವುದು ವೃತ್ತಿಯಲ್ಲ; ಮನೆಯ ಅಸಮಗ್ರತೆಯ ಟೀಕೆ ಮಾಡಲು ಕರಣೆ ಉಪಯೋಗದ ಅನುಭವ ಅನಾವಶ್ಯ; ಅಕ್ಕಸಾಲೆ ಬೇರೆ ಭೂಷಣ ಪ್ರವೀಣ ಬೇರೆ. ಕವನದೊಳಹೊಕ್ಕು ಚರ್ಚೆಗೈಯುವವ ತಾನೆ ಕವನಗೈಯುವನಾಗಿರಬೇಕೆಂದು ವಿಧಿಸುವುದು ಒಂದೆ, ದುಂಡುದುಂಡಾದ ದನಗಳ ಕಾಯುವವಗೆ ಬೊಜ್ಜು ಬೆಳೆದಿರಬೇಕೆಂದು ವಿಧಿಸುವುದು ಒಂದೆ. ಅಲ್ಲದೆ ಹೆತ್ತವಳು ಹೆಗ್ಗಣದ ಯೋಗ್ಯತೆಯ ನಿರ್ಮೋಹದಿಂದ ನಿರ್ಣಯಿಸಿದ ದಿವಸ ಗ್ರಂಥಕರ್ತೃ ತನ್ನಯ ಕೃತಿಯ ಬೆಲೆಯನ್ನ ಪಕ್ಷಪಾತವಿಲ್ಲದೆ ತೀರ್ಮಾನಿಸುವ. ಯಾವೊಬ್ಬ ಮನುಷ್ಯ ಒಮ್ಮೆಯೆ ಕಕ್ಷಿಗಾರ ನ್ಯಾಯಾಧೀಶನಾಗುವನಯ್ಯ?

ಕುಕವಿ ಪಾಳೆಯ ಸೃಜಕವಿಗಳ ಕುರಿತು ಕರುಬಿ, ಸೇಡ ತೀರಿಸಿಕೊಳಲು ವಿವೇಚಕ ವರ್ಗವಾಗುವುದೆಂಬ ಎಗ್ಗ ಎಣಿಕೆಯೊಂದುಂಟಯ್ಯ. ಹೊಟ್ಟೆಯುರಿಯಂಥ ಹೀನ ರಾಗೋದ್ರೇಕ ಆವ ನಿರ್ಮಾಣಕಾರ್ಯಕೆ ಕಾರಣವಾದೀತು? ದ್ವೇಷ ಮತ್ಸರ ಸಿಟ್ಟು ಮುಂತಾದ ಉನ್ಮಾದಗಳು ಎಷ್ಟೆಷ್ಟೋ ಕೆಡಿಸಬಲ್ಲುವು, ಒಂದಿಷ್ಟು ಕಟ್ಟಲಾರವು.

ವಿಮರ್ಶೆಯೆಂಬುದು ದಿಟವಾಗಿ ಸದಯ, ಸೌಮ್ಯ, ಸಂಭಾವಿತ ವ್ಯವಸಾಯ. ಬುದ್ಧಿ ಸೂಕ್ಷ್ಮತೆ, ಹೃದಯ ಮಾರ್ದವ, ಜ್ಞಾನ ತುಂಬಿದ ಮನಸು, ಪ್ರಶಾಂತ ಅಂತಃಕರಣ ವಿಲ್ಲದವಗೆ ಕಸಬು ಬೇಕಾದಲ್ಲಿ ಕಾಮಾಟಿಯಾಗಲಿ ಕಾರಕೂನನಾಗಲಿ ಹತ್ತಿ ವ್ಯಾಪಾರಿಯಾಗಲಿ ಹಡಗ ನಡೆಯಿಸಲಿ, ಆದರೆ ಕಾವ್ಯವಿಚಾರಣೆಯ ಬಳಿ ಅವ ಸುಳಿಯ ಬಾರದಯ್ಯ. ಅಷ್ಟೇಕೆ, ನೂರು ಅಕೃತ್ರಿಮ ಕವಿಗಳಿಗೆ ಒಬ್ಬ ಯಥಾರ್ಥ ವಿವೇಚಕ ಸಿಕ್ಕಿದರೆ ಹೆಚ್ಚಯ್ಯ.

ಕವಿ ವಿಮರ್ಶಕರ ವ್ಯತ್ಯಾಸ ನಿಶ್ಚಯವಾಗಿ ಅತ್ಯಲ್ಪ. ಇಬ್ಬರಿಗು ಜೀವನವ ಅರಯ್ಯುವುದೆ ಮುಖ್ಯ ಕೆಲಸ: ಒಬ್ಬನದು ಪ್ರತ್ಯಕ್ಷ ಪ್ರಕಟನೆ, ಇನ್ನೊಬ್ಬನದು ಪರೋಕ್ಷ ಜಿಜ್ಞಾಸೆ. ಇಬ್ಬರ ಕೃತಿಯು ಒಟ್ಟಿನಲಿ ಸಾಹಿತ್ಯ. ಅವರಿಬ್ಬರ ಧೀರ ಸುಂದರ ಕೆಳೆತನ ಬೆಳೆಯಲಯ್ಯ: ತನ್ಮೂಲಕ ಈ ಯುಗದ ಯಾಂತ್ರಿಕ ಜಗದ ನಿಸ್ಸಾರತ್ವ ನಶಿಸಲಯ್ಯ! ಕವಿಗೆ ವಿಮರ್ಶೆ ವಿಮರ್ಶೆಗೆ ಕವಿಯೆನಿಪ, ದೇವರದೇವ ಮಾವಿನಕೆರೆಯ ರಂಗಯ್ಯ. ‖ ೨೫ ‖

೫. ಸೆಕೆಂಡರಿ ವಿದ್ಯಾಭ್ಯಾಸದ ಕರಿಕ್ಯುಲಂ ಪುನರ್ರಚನೆ

ಇಂದಿನ ಜಗತ್ತು ಹೊಸ ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಭರತ ಖಂಡದಲ್ಲಿರುವ ನಾವೂ ಸಹ ಕ್ಲಿಷ್ಟವಾದ ಮತ್ತು ಎಂದೂ ಕಂಡರಿಯದ ಹೊಸ ಸಮಸ್ಯೆಗಳನ್ನು ಪರಿಶೀಲಿಸಿ ಸಾಧ್ಯವಾದಷ್ಟು ಜಾಗ್ರತೆಯಾಗಿ ಅವುಗಳನ್ನು ಬಗೆಹರಿಸ ಬೇಕಾದ ಅಗತ್ಯ ಪ್ರಸಂಗವು ಒದಗಿದೆ. ಇವುಗಳಲ್ಲಿ ಕೇವಲ ಅಗತ್ಯವೂ ಅವಸರವೂ ಆದ ಪ್ರಶ್ನೆಯೆಂದರೆ ಸಾಮಾಜಿಕ ಐಕ್ಯಸಾಧನೆ (social solidarity). ಈ ಪ್ರಶ್ನೆ ಯನ್ನು ತೃಪ್ತಿಕರವಾಗಿ ಬಗೆಹರಿಸಲು ದೇಶದ ವಿದ್ಯಾಭ್ಯಾಸವು ಯಾವರೀತಿ ಸಹಕಾರಿ ಯಾಗಿದೆ ಎಂಬುದನ್ನು ನಾವು ಈಗ ಪರಿಶೀಲಿಸಬೇಕಾಗಿದೆ. ಶಿಕ್ಷಣ ತತ್ವಕ್ಕೆ ಸಂಬಂಧ ಪಟ್ಟ ಯಾವ ಗ್ರಂಥವನ್ನು ನಾವು ಓದಿದರೂ ಈ ಕೆಳಗೆ ಸೂಚಿಸುವ ಶಿಕ್ಷಣಧ್ಯೇಯ ಗಳಿಗೆ ಅತ್ಯಂತ ಹೆಚ್ಚಿನ ಪ್ರಾಶಸ್ತ್ಯವು ದೊರಕಿದೆ. ದೇಹಾರೋಗ್ಯಪಾಲನೆ, ಔದ್ಯೋಗಿಕ ಸಾಮರ್ಥ್ಯವನ್ನು ಹೆಚ್ಚಿಸುವುದು, ಕುಟುಂಬ ಕ್ಷೇಮಪಾಲನೆ, ಸೌಂದರ್ಯಾಭಿನಿವೇಶಕ ಶಕ್ತಿಯನ್ನು ವೃದ್ಧಿಗೊಳಿಸುವುದು, ಶೀಲಸ್ವಭಾವವನ್ನು ಉತ್ತಮಗೊಳಿಸುವುದು, ಪೌರ ಧರ್ಮವನ್ನರಿತ ಸುಶಿಕ್ಷಿತ ಪ್ರಜೆಯೆನ್ನಿಸಿಕೊಳ್ಳಲು ಅರ್ಹತೆಯನ್ನುಂಟುಮಾಡುವುದು, ವಿರಾಮಕಾಲವನ್ನು ಸದ್ವಿನಿಯೋಗ ಮಾಡಿ ಕೊಳ್ಳುವ ಶಕ್ತಿಯನ್ನುಂಟುಮಾಡುವುದು—ಇವುಗಳೇ ಶಿಕ್ಷಣದ ಮುಖ್ಯ ಧ್ಯೇಯ ಗಳೆಂದು ಎಲ್ಲ ಗ್ರಂಥಗಳಲ್ಲೂ ಉಲ್ಲಿಖಿತವಾಗಿವೆ. ನಾವು ಈ ದೇಶದಲ್ಲಿ ಇವುಗಳನ್ನು ಎಷ್ಟರಮಟ್ಟಿಗೆ ಕಾರ್ಯತಃ ಅನುಷ್ಠಾನಕ್ಕೆ ತಂದಿದ್ದೇವೆಂದು ನೋಡಿದರೆ, ನಾವು ನಾಚಿಕೆಯಿಂದ ತಲೆಬಾಗಬೇಕಾಗಿದೆ.

ಅಂದರೆ, ನಮ್ಮ ದೇಶದ ಸೆಕೆಂಡರಿ ಶಿಕ್ಷಣದ ಕುಂದುಕೊರತೆಗಳಾವುವು? ಸೆಕೆಂಡರಿ ಶಿಕ್ಷಣವು ಮಹತ್ವಪೂರಿತವಾದುದೆಂದು ನಾವು ಭಾವಿಸುವುದಾದರೆ ಅದಕ್ಕೆ ಸಂಬಂಧಪಟ್ಟ ಹಲವು ಮುಖ್ಯ ವಿಚಾರಗಳನ್ನು ಇಲ್ಲಿ ವಿಮರ್ಶಿಸುವುದು ಅಗತ್ಯ. ನಾವು ನಮ್ಮ ಮಕ್ಕಳನ್ನು ಹೈಸ್ಕೂಲಿಗೆ ಶಿಕ್ಷಣಕ್ಕಾಗಿ ಕಳುಹಿಸುವುದರ ಮುಖ್ಯ ಗುರಿಯೇನು? ಅವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಸಾಕೆ? ಖಂಡಿತ ಸಾಲದು. ಅವರು ಆರೋಗದೃಢಕಾಯರಾಗಬೇಕು. ಈಗಿನ ನಮ್ಮ ಹೈಸ್ಕೂಲಿನ ಬಾಲಕ ಬಾಲಕಿಯರು ಹಾಗಿದ್ದಾರೆಯೆ? ವ್ಯಾಯಾಮದಲ್ಲೂ ಆಟಪಾಟಗಳಲ್ಲೂ ಅವರಿಗೆ ನೈಜವಾದ ಆಸಕ್ತಿಯಿದೆಯೆ? ಸರ್ವಥಾ ಇಲ್ಲವೆಂದೇ

ಹೇಳಬೇಕು. ಅವರ ವಯಸ್ಸಿಗೂ ಬುದ್ಧಿಶಕ್ತಿಗೂ ಮೀರಿದಷ್ಟು ಪಾಠವಿಷಯಗಳನ್ನು ಅವರಮೇಲೆ ಹೊರಿಸಿದ್ದೇವೆ. ಅವರು ಕಲಿಯುತ್ತಿರುವುದು ಕೇವಲ ಕಂದಾಚಾರದ ಅನುಪಯುಕ್ತವಾದ ವಿಷಯಗಳು. ಅವರು ಪ್ರೌಢದರ್ಜೆಯ ಗಣಿತಶಾಸ್ತ್ರವನ್ನು ವ್ಯಾಸಂಗಮಾಡಬಹುದು. ಆದರೆ, ಅದರಿಂದ ಅವರಿಗೆ ಹೆಚ್ಚು ಉಪಯೋಗವಾಗುತ್ತಿದೆಯೆಂದು ನಾನು ಹೇಳಲಾರೆ. ಆ ವಿಷಯಗಳಿಗೂ ಜೀವನಕ್ಕೂ ಪರಸ್ಪರ ಯಾವ ಸಂಬಂಧವೂ ಇಲ್ಲ. ಅದರಿಂದ ಕಾಲೇಜಿನ ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲವಾಗಿದೆಯೆಂದು ಹಲವರು ಊಹಿಸಬಹುದು. ಆದರೆ ಕಾಲೇಜಿಗೆ ಹೋಗದಿರುವ ಅಸಂಖ್ಯಾತ ತರುಣರಿಗೆ ಇದರಿಂದ ಏನು ಪ್ರಯೋಜನ? ಹಾಗೆಯೇ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳನ್ನು ಓದುವ ನಮ್ಮ ಯುವಕರು ಕೇವಲ ನಿರಸವಾದ ತಾತ್ವಿಕ ವಿಚಾರಗಳನ್ನು ತಿಳಿಯುತ್ತಿರುವರೇ ಹೊರತು, ಅವರ ಮನೆಗಳಲ್ಲಿ ವಿದ್ಯುಚ್ಛಕ್ತಿಯ 'ಫ್ಯೂಸ್' ತಂತಿಯು ಕೆಟ್ಟುಹೋದರೆ ಅದನ್ನು ಸರಿಪಡಿಸಲು ಸಹ ಅವರು ಅಸಮರ್ಥರಾಗಿದ್ದಾರೆ.

ಚರಿತ್ರೆಯ ಪಾಠಬೋಧನೆಯೂ ಇದೇರೀತಿ ನಿರರ್ಥಕತೆಯಿಂದ ಕೂಡಿದೆ. 'ಚಾಚೂ' ತಪ್ಪದೆ ನಮ್ಮ ಯುವಕರಿಗೆ ಚರಿತ್ರೆಯ ಕಗ್ಗಗಳನ್ನು ನಾವು ಬೋಧಿಸಬಹುದು. ಘಜನಿ ಮಹಮ್ಮದನ, ಹಾಗೂ ಔರಂಗಜೇಬನ ವಿಷಯವಾಗಿ ಎಲ್ಲ ಸಂಗತಿಗಳನ್ನೂ ಸವಿಸ್ತಾರವಾಗಿ ಬೋಧಿಸಬಹುದು: ಇದರಿಂದಾಗುವ ಪುರುಷಾರ್ಥವಾದರೂ ಏನು? ಚರಿತ್ರೆ ಪಾಠಬೋಧನೆಯ ಗುರಿಯೇನು? ದೇಶದ ವಿವಿಧ ಕೋಮಿನ ಮತಗಳ ಜನಗಳ ಪರಸ್ಪರ ಸೌಹಾರ್ದ ಸಹಕಾರಗಳ ಬೆಳವಣಿಗೆಯೋ ಅಥವಾ ವಿನಾಶಕಾರಕ ದ್ವೇಷಾಸೂಯೆಗಳ ಅಭಿವೃದ್ಧಿಯೋ? ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯು ನನ್ನ ನೆನಪಿಗೆ ಬರುತ್ತಿದೆ. ೧೯೨೯ ರಲ್ಲಿ ನ್ಯೂಯಾರ್ಕ್ ಪಟ್ಟಣದಲ್ಲಿ 'ರಸ್ಸೆಲ್—ಡ್ಯೂರೆಂಟ್' (Russell Durant Debate) ಎಂಬ ಹೆಸರಿನ ಚರ್ಚಾಕೂಟವೊಂದರ ಸಭೆ ಸೇರಿದ್ದಿತು. ಇದಕ್ಕೆ ಶಿಕ್ಷಣಶಾಸ್ತ್ರಕೋವಿದರಾದ ಜಾನ್ ಡ್ಯೂಯಿ ಅಧ್ಯಕ್ಷರಾಗಿದ್ದರು. "ಪ್ರಪಂಚದಲ್ಲಿ ಆಧುನಿಕ ವಿದ್ಯಾಭ್ಯಾಸವು ನಿರರ್ಥಕವೂ ಹಾನಿಕರವೂ ಆಗಿ ಪರಿಣಮಿಸಿರುವುದಕ್ಕೆ ತಪ್ಪುಮಾರ್ಗದ ಚರಿತ್ರೆಯ ಬೋಧನೆಯೇ ಕಾರಣ:" ಎಂಬುದಾಗಿ ಬರ್ಟ್ರಂಡ್ ರಸ್ಸೆಲ್ ನುಡಿದರು. ಈ ಸಂಬಂಧವಾದ ನಿರ್ಣಯಕ್ಕೆ ಅಲ್ಲಿ ನೆರೆದಿದ್ದ ಜನರೆಲ್ಲರೂ ಬೆಂಬಲಕೊಟ್ಟರೆಂದು ಹೇಳಿದರೆ ಆಶ್ಚರ್ಯವಲ್ಲವೆ? ಕೇವಲ ಪ್ರಗತಿ ಹೊಂದಿದ ಅಮೆರಿಕದ ವಿಷಯವೇ ಹೀಗಿರುವಲ್ಲಿ ಹಿಂದುಳಿದ ನಮ್ಮ ದೇಶದ ವಿಚಾರವನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ನಮ್ಮ ದೇಶದ ಶಾಲೆಗಳಲ್ಲಿ ಹೇಳಿಕೊಡುವ ಅನೇಕ ವಿಷಯಗಳು ನಿಷ್ಪ್ರಯೋಜಕವಾದುವು

ಮಾತ್ರವಲ್ಲದೆ ಕೇವಲ ಹಾನಿಕರವಾಗಿವೆ. ಆದುದರಿಂದ ನಾವು, ಬಿಸುಗೆ ಹಾಕಿ ಪಾತ್ರೆಯ ಒಡಕನ್ನು ಮುಚ್ಚಲು ಪ್ರಯತ್ನಪಡುವ ಕಂಚುಗಾರನಂತೆ ಒಂದೆರಡು ಮಾರ್ಪಾಟುಗಳನ್ನು ಮಾಡಿ ಶಿಕ್ಷಣವನ್ನು ಪುನರ್ರಚಿಸಲು ಪ್ರಯತ್ನಪಟ್ಟರೆ ಅದರಿಂದ ಏನೂ ಪ್ರಯೋಜನವಾಗಲಾರದು.

ನಮ್ಮ ಮಕ್ಕಳಿಗೆ ಇಂಗ್ಲೆಂಡ್ ಅಥವಾ ಅಮೆರಿಕಾ ದೇಶಗಳ ಮಕ್ಕಳಿಗಿಂತಲೂ ಹೆಚ್ಚು ವಿಷಯಗಳನ್ನು ಹೇಳಿಕೊಡುತ್ತಿದ್ದೇವೆಂದು ನಾವು ಸಂತೃಪ್ತರಾಗಿ ಹೆಮ್ಮೆಯಿಂದ ಕುಳಿತರೆ ಸಾಲದು. ನಮ್ಮ ಯುವಕರ ಅಮೂಲ್ಯವಾದ ಕಾಲವನ್ನೂ ಶಕ್ತಿಯನ್ನೂ ನಾವು ವ್ಯರ್ಥಗೊಳಿಸುತ್ತಿದ್ದೇವೆಂಬುದನ್ನು ನಾವು ಮರೆಯಕೂಡದು: ನಮ್ಮ ಶಾಲೆಗಳನ್ನು ಬಿಟ್ಟುಹೋಗುವ ನಮ್ಮ ಬಾಲಕ ಬಾಲಕಿಯರು ಕೆಲಸಕ್ಕೆ ಬಾರದವರಾಗುತ್ತಾರೆ. ಅವರನ್ನು ಯಂತ್ರದೋಪಾದಿಯಲ್ಲಿ ಕೆಲಸ ಮಾಡುವ ಗುಮಾಸ್ತರನ್ನಾಗಿಯೋ ಅಥವಾ ಕಂದಾಚಾರದ ಪಾಠ ಬೋಧನೆ ಮಾಡುವ ಅಧ್ಯಾಪಕರನ್ನಾಗಿಯೋ ತಯಾರು ಮಾಡಿದರೆ ಅದರಿಂದ ದೇಶಕ್ಕೆ ಪ್ರಯೋಜನವೇನು?

ಇದಕ್ಕೆ ಪರಿಹಾರೋಪಾಯವೇನು? ನಮ್ಮ ಯುವಕರು ಶಾಲೆಯನ್ನು ಬಿಟ್ಟ ಬಳಿಕ ಮಾಡಬೇಕಾದ ಕೆಲಸವೇನು? ಅದಕ್ಕಾಗಿ ಅವರನ್ನು ನಾವು ಹೇಗೆ ತಯಾರು ಮಾಡಬೇಕು? ಇದಕ್ಕಾಗಿ ನಮ್ಮ ದೃಷ್ಟಿ ಪಥವನ್ನೇ ಬದಲಾಯಿಸಬೇಕು. ಅವರನ್ನು ಜೀವನ ಸಂಗ್ರಾಮಕ್ಕೆ ಸಿದ್ಧಗೊಳಿಸಬೇಕು. ಸಮಾಜದ ಅಗತ್ಯಗಳನ್ನೂ ಅದರ ಕುಂದುಕೊರತೆಗಳನ್ನೂ ಶಾಸ್ತ್ರೀಯವಾಗಿ ಪರಿಶೀಲಿಸಿ ಅದಕ್ಕನುಗುಣವಾಗಿ ಶಿಕ್ಷಣವನ್ನು ಪುನರ್ವ್ಯವಸ್ಥೆಗೊಳಿಸಬೇಕು. ಪಾಠ ವಿಷಯಗಳ ಹೊರೆಯನ್ನು ಕಡಮೆ ಮಾಡಬೇಕು. ಅವು ಕೇವಲ ಜ್ಞಾನಾರ್ಜನೆಗೆ ಸಾಧವಾಗಿದ್ದರೆ ಸಾಲದು; ಅವು ಪ್ರತ್ಯಕ್ಷವಾಗಿಯೂ ಕಾರ್ಯರೂಪವಾಗಿಯೂ ಉಪಯುಕ್ತವಾಗಿರಬೇಕು. ಶಾಲೆಗೂ ಬಾಹ್ಯ ಪ್ರಪಂಚಕ್ಕೂ ವಿದ್ಯಾಭ್ಯಾಸಕ್ಕೂ ಜೀವನಕ್ಕೂ ಪರಸ್ಪರ ನಿಕಟ ಸಂಬಂಧವು ಏರ್ಪಡಬೇಕು. ಇದು ಕಷ್ಟಸಾಧ್ಯ: ಆದರೂ ಇದಕ್ಕಾಗಿ ವಿನಿಯೋಗವಾಗುವ ಶ್ರಮವೂ ದ್ರವ್ಯವೂ ಸಾರ್ಥಕವಾದುವು.

ಶಾಲೆಯ ಪಾಠ ವಿಷಯಗಳಲ್ಲಿ ಮುಖ್ಯವಾದ ಭಾಷೆಯ ವಿಷಯವನ್ನು ತೆಗೆದುಕೊಳ್ಳೋಣ. ನಮ್ಮ ಶಾಲಾ ಮಕ್ಕಳು ಸರಾಗವಾಗಿಯೂ ತಪ್ಪಿಲ್ಲದೆಯೂ ಮಾತನಾಡುವುದಕ್ಕೂ, ಓದುವುದಕ್ಕೂ, ಓದಿದ್ದನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕೂ ಅಗತ್ಯವಾದ ಭಾಷಾಜ್ಞಾನವನ್ನು ಅವರಿಗುಂಟುಮಾಡಬೇಕು. ಒಂದುವೇಳೆ ಅವರು ಮುಂದೆ ಗುಮಾಸ್ತರಾಗುವರೆಂದು ಭಾವಿಸಿದರೂ ಮೇಲ್ಕಂಡ ಭಾಷಾಜ್ಞಾನವು ತೀರ ಅಗತ್ಯವೆಂದೇ ಹೇಳಬೇಕು. ಪ್ರಕೃತ ಸ್ಥಿತಿಯು ಇದಕ್ಕೆ ವಿರೋಧವಾಗಿದೆ.

ನಮ್ಮ ಮಕ್ಕಳಿಗೆ ಸಾಹಿತ್ಯಾಭಿರುಚಿಯನ್ನುಂಟುಮಾಡುವುದು ಬಹಳ ಆವಶ್ಯಕ. ಇವುಗಳನ್ನು ಸಾಧಿಸಬೇಕಾದರೆ, ಭಾಷೆಯ ಪಠ್ಯ ಪುಸ್ತಕಗಳೂ ಬೋಧನ ಕ್ರಮವೂ ಉಚಿತ ರೀತಿಯಲ್ಲಿ ಮಾರ್ಪಡಬೇಕು.

ಮತ ಅಥವಾ ನೀತಿಬೋಧೆಗೆ ನಮ್ಮ ದೇಶದಲ್ಲಿ ಉಚಿತ ಮನ್ನಣೆ ದೊರೆತಿಲ್ಲ. ಇದು ಕೇವಲ ಗೃಹಕ್ಕೆ ಸಂಬಂಧಪಟ್ಟ ವಿಚಾರವೆಂದು ಅನೇಕರು ತಿಳಿದಿದ್ದಾರೆ. ಪ್ರಕೃತ ನಮ್ಮ ದೇಶದ ಮನೆಗಳಲ್ಲಿ ಇದಕ್ಕೆ ಸಹಕಾರಿಯಾದ ಸನ್ನಿವೇಶವಿಲ್ಲ. ಮಕ್ಕಳಲ್ಲಿ ಸರ್ವ ಸಮತಾ ಭಾವನೆಯನ್ನೂ ಸೌಹಾರ್ದ ಭಾವನೆಯನ್ನೂ ಉಂಟುಮಾಡುವ ಚೈತನ್ಯವು ನಮ್ಮ ಮನೆಗಳಿಗಿಲ್ಲ. ನಮ್ಮ ಮಕ್ಕಳಲ್ಲಿ ಕೋಮುವಾರು ದ್ವೇಷಾಸೂಯೆಗಳೂ ಕೀಳುಮೇಲೆಂಬ ಮನೋಭಾವಗಳೂ ಬೆಳೆಯುತ್ತಿವೆ. ಶಾಲೆಗಳಲ್ಲಿ ಮತಬೋಧೆ ನಡೆಯಬೇಕೆ ಅಥವಾ ನೀತಿಬೋಧೆ ನಡೆಯಬೇಕೆ ಎಂಬುದು ಕ್ಲಿಷ್ಟ ಪ್ರಶ್ನೆ. ಮತಬೋಧೆಯು ಪ್ರತ್ಯಕ್ಷವಾಗಿ ವಾಚಾನಡೆಯುವುದಕ್ಕಿಂತಲೂ ಆಚರಣೆಯ ಮೂಲಕವೂ ಉತ್ತಮಸನ್ನಿವೇಶದ ಮೂಲಕವೂ ನಡೆಯಬೇಕೆಂಬುದು ಹಲವರ ಅಭಿಪ್ರಾಯ. ಇದು ಬಹುಮಟ್ಟಿಗೆ ಸಾಧುವಾಗಿ ಕಂಡರೂ ನಮ್ಮ ಸೆಕೆಂಡರಿ ಶಾಲಾ ವಿದ್ಯಾರ್ಥಿಗಳು ಜಗತ್ತಿನ ಎಲ್ಲ ಮುಖ್ಯ ಮತಗಳ ಆಧಾರಭೂತವಾದ ನೀತಿವಿಚಾರಗಳನ್ನು ತಿಳಿಯಬೇಕಾದುದು ಅತ್ಯಾವಶ್ಯಕವೆಂದು ನಾನು ಭಾವಿಸುತ್ತೇನೆ. ಬೈಬಲ್, ಕೊರಾನ್ ಮತ್ತು ಭಗವದ್ಗೀತಾ ಮುಂತಾದ ಪವಿತ್ರ ಗ್ರಂಥಗಳಲ್ಲಿ ಅಡಗಿರುವ ನೀತಿಬೋಧೆಯನ್ನು ನಮ್ಮ ಮಕ್ಕಳಿಗೆ ಒದಗಿಸಿದರೆ ಅದರಿಂದ ಅವರ ಆತ್ಮ ವಿಕಾಸ ಹೊಂದಿ ಜೀವನದ ಉದಾತ್ತಧ್ಯೇಯಗಳು ಅವರಿಗೆ ಮನಗಾಣುವುದರಲ್ಲಿ ಸಂದೇಹವಿಲ್ಲ. ಬೈಬಲ್ ಗ್ರಂಥದಲ್ಲಿರುವ 'ಸೆರ್ಮನ್ ಆನ್ ದಿ ಮೌಂಟ್' ಅಥವಾ ಬೈಬಲಿನಲ್ಲಿ ವಿಸ್ತರಿಸಲ್ಪಟ್ಟಿರುವ 'ಭಗವಂತನೇ ಸರ್ವರಿಗೂ ತಂದೆ, ನಾವೆಲ್ಲರೂ ಸಹೋದರರು' ಎಂಬ ಪವಿತ್ರ ಭಾವನೆಯು ಜನರಲ್ಲಿ ಬೇರೂರಿದರೆ ಅದರಿಂದ ನಮ್ಮ ಯುವಕರ ಶೀಲ ಸ್ವಭಾವಗಳು ಉತ್ತಮಗೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಕೇವಲ ಜ್ಞಾನವೇ ನೀತಿಸಾಧಕವಲ್ಲ. ಆದರೂ, ಜ್ಞಾನಾರ್ಜನೆಯು ಸದ್ಗುಣಗಳಿಗೆ ಸಹಕಾರಿಯೆಂಬುದನ್ನು ಮರೆಯಲಾಗದು. ಆದುದರಿಂದ ನೀತಿಬೋಧೆಯು ಹಾಗೂ ಮತಬೋಧೆಯು ಅತ್ಯಗತ್ಯವೆಂದು ಹೇಳಿದಹಾಗಾಯಿತು. ಎಂಥ ಮತಬೋಧೆ, ಹೇಗೆ, ಯಾರು ಹೇಳಿಕೊಡಬೇಕೆಂಬುವು ಉಪಪ್ರಶ್ನೆಗಳು. ಅವುಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿ ಬಗೆಹರಿಸಿಕೊಳ್ಳಬೇಕು.

ಹಿಂದೆಯೇ ತಿಳಿಸಿದಂತೆ, ಚರಿತ್ರೆಯ ಪಾಠಬೋಧನೆಯಲ್ಲೂ ಸಹ ನಮ್ಮ ದೃಷ್ಟಿಕೋನವು ಮಾರ್ಪಾಟಾಗಬೇಕು. ನಮ್ಮ ಜನಗಳಲ್ಲಿ ಐಕಮತ್ಯ ಸಾಧನೆಗೆ ಪ್ರತಿ

ಕೂಲವಾದ ಚರಿತ್ರಾಂಶಗಳನ್ನು ನಮ್ಮ ಮಕ್ಕಳಿಗೆ ಬೋಧಿಸದಿದ್ದರೂ ಚಿಂತೆಯಿಲ್ಲ. ಅದರಿಂದ ಏನೂ ನಷ್ಟವಿಲ್ಲ. ಹಿಂದಿನ ಹಿಂದೂ ಮುಸಲ್ಮಾನ, ಹಾಗೂ ಮರಾಟ ಅರಸರು ದೇಶಕ್ಕೆ ಮಾಡಿದ ಉಪಕಾರವೇನು, ಅವರು ಅನುಸರಿಸಿದ ನೀತಿಯೇನು ಎಂಬ ಮುಖ್ಯ ವಿಷಯಗಳ ಸ್ಥೂಲಪರಿಚಯವನ್ನುಂಟುಮಾಡಿ ಕೊಟ್ಟರೆ ಸಾಕು. ಜಗತ್ತಿನ ಇತಿಹಾಸವನ್ನು ಬೋಧಿಸುವಾಗ ಸಹ ಮಾನವ ರಾಶಿಗೆ ಉಪಕಾರ ಮಾಡಿರುವ ಪ್ರಸಿದ್ಧ ಸಾಹಿತಿಗಳ, ಕಲಾಕೋವಿದರ, ಮತ ಸುಧಾರಕರ, ವೈಜ್ಞಾನಿಕರ, ಮತ್ತು ರಾಜನೀತಿಜ್ಞರ ಚರಿತ್ರೆಯನ್ನು ನಮ್ಮ ಮಕ್ಕಳಿಗೆ ಬೋಧಿಸಬೇಕು. ಭೂಗೋಳ ಮತ್ತು ಪೌರನೀತಿಯ ಬೋಧನೆಯಲ್ಲೂ ಇದೇ ರೀತಿ ಮಾರ್ಪಾಟು ಆಗಬೇಕು. ನಮ್ಮ ಮಕ್ಕಳಲ್ಲಿ ಪೌರನೀತಿಯು ಬೆಳೆಯಬೇಕು. ಪ್ರಕೃತಿಗೂ ಮಾನವನಿಗೂ, ಒಬ್ಬ ಮಾನವನಿಗೂ ಮತ್ತೊಬ್ಬ ಮಾನವನಿಗೂ ಇರುವ ಪರಸ್ಪರ ಅಧೀನತೆಯ ತಿಳಿವು ನಮ್ಮ ಮಕ್ಕಳಿಗೆ ಚೆನ್ನಾಗಿ ಮಂದಟ್ಟಾಗಬೇಕು.

ಗಣಿತಶಾಸ್ತ್ರ ಮತ್ತು ವಿಜ್ಞಾನಶಾಸ್ತ್ರ ಬೋಧನೆಯಲ್ಲೂ ನಾವು ಗಮನಿಸ ಬೇಕಾದ ವಿಚಾರವೊಂದಿದೆ. ತಾವು ಕಲಿಯುವ ಶಾಸ್ತ್ರಜ್ಞಾನವನ್ನು ಪ್ರತ್ಯಕ್ಷವಾಗಿ ಕಾರ್ಯರೂಪಕ್ಕೆ ತರುವ ಸಾಮರ್ಥ್ಯವನ್ನು ನಮ್ಮ ಬಾಲಕರಿಗುಂಟುಮಾಡುವುದು ಬಹಳ ಅಗತ್ಯ.

ನಮ್ಮ ದೇಶದ ಶಾಲೆಗಳಲ್ಲಿ ನಾವು ಅಲಕ್ಷ್ಯಮಾಡಿರುವ ಮತ್ತೊಂದು ಪಾಠ ವಿಷಯವುಂಟು. ಅದು ಸಂಗೀತಪಾಠ. ನಮ್ಮ ಶಾಲೆಗಳಲ್ಲಿ ಸ್ವರ, ತಾಳ, ಲಯ ಮುಂತಾದ ಕೇವಲ ಶಾಸ್ತ್ರೀಯವಾದ ವಿಚಾರಗಳಿಂದ ಕೂಡಿದ ಸಂಗೀತವನ್ನು ಎಲ್ಲ ಮಕ್ಕಳಿಗೂ ಬೋಧಿಸಬೇಕೆಂಬುದು ನನ್ನ ಅಭಿಪ್ರಾಯವಲ್ಲ. ಮನಸ್ಸಿಗೂ ಆತ್ಮಕ್ಕೂ ಶಾಂತಿಯನ್ನುಂಟುಮಾಡುವ ದೇವರ ನಾಮ, ರಾಷ್ಟ್ರೀಯ ಹಾಡುಗಳು—ಇವು ಗಳನ್ನು ನಮ್ಮ ಮಕ್ಕಳಿಗೆ ಬೋಧಿಸಬೇಕೆಂಬುದು ನನ್ನ ಅಭಿಪ್ರಾಯ. ಅಲ್ಲದೆ ಅವು ಗಳನ್ನು ಎಲ್ಲರೂ ಸಾಮೂಹಿಕವಾಗಿ ಹೇಳುವುದನ್ನು ಅವರಿಗೆ ಕಲಿಸಿಕೊಡಬೇಕು. ಸಂಗೀತಕ್ಕೂ ಕಾವ್ಯವಾಚನಕ್ಕೂ ಹಾಗೂ ಸಾಹಿತ್ಯಕ್ಕೂ ಇರುವ ಪರಸ್ಪರ ಸಂಬಂಧದ ಅರಿವು ಅವರಿಗುಂಟಾಗಬೇಕು.

ಅಮೆರಿಕಾದೇಶದಲ್ಲಿ ನಾನು ನೋಡಿದ ಮತ್ತೊಂದು ಆಶ್ಚರ್ಯಕರವಾದ ವಿಷಯವನ್ನು ಇಲ್ಲಿ ತಿಳಿಸಲು ಇಷ್ಟಪಡುತ್ತೇನೆ: ಅಲ್ಲಿಯ ಶಾಲೆಗಳಲ್ಲಿ ಮಕ್ಕಳು ಸಾರ್ವಜನಿಕ ಭಾಷಣ ಮಾಡುವ ಸಾಮರ್ಥ್ಯವನ್ನು ಪಡೆಯಬೇಕೆಂಬ ಉದ್ದೇಶ ದಿಂದ ವೇಳಾಪಟ್ಟಿಯಲ್ಲಿ ಅದಕ್ಕಾಗಿಯೇ ಕೆಲವು ಗಂಟೆಗಳ ಕಾಲಾವಕಾಶವನ್ನು ಕಲ್ಪಿಸಿದ್ದಾರೆ. ಆಗ ನನಗೆ ಅದರ ಅಗತ್ಯದ ವಿಚಾರದಲ್ಲಿ ಸ್ವಲ್ಪ ಶಂಕೆಯಿದ್ದಿತು.

ಆದರೆ ನಮ್ಮ ಶಾಲಾ ಯುವಕರು ಮಾತಾಡುವ ರೀತಿ ನೀತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅಂಥಾ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲೂ ಆಚರಣೆಗೆ ತರಬೇಕೆಂದು ಮನಗಾಣುತ್ತದೆ.

ಕೊನೆಯದಾಗಿ, ಮತ್ತೊಂದು ಮುಖ್ಯ ವಿಷಯನ್ನು ವಾಚಕರ ಮನಸ್ಸಿಗೆ ತರಲು ಆಶಿಸುತ್ತೇನೆ. ನಮ್ಮ ಹೈಸ್ಕೂಲು ವಿದ್ಯಾರ್ಥಿಗಳು, ಯಾವುದಾದರೂ ಕೆಲಸ ವನ್ನು ಮಾಡಬೇಕು. ಯಾವ ಕೆಲಸ ಮಾಡಿದರೂ ಅದಕ್ಕನುಗುಣವಾದ ಗೌರವ ವುಂಟು, ದೇಹಶಕ್ತಿಯಿಂದ ಮಾಡಿದ ಕೆಲಸವೂ ಬುದ್ಧಿಶಕ್ತಿಯಿಂದ ಮಾಡಿದ ಕೆಲ ಸವೂ ಒಂದೇ ರೀತಿಯ ಗೌರವಕ್ಕೆ ಅರ್ಹವಾದುವು ಎಂದು ತಿಳಿಯುವಂತೆ ಅವರಿಗೆ ಶಿಕ್ಷಣ ಕೊಡಬೇಕು. "ನಾವು ಎಷ್ಟರಮಟ್ಟಿಗೆ ದೇಹಶಕ್ತಿಯಿಂದ ಮಾಡಿದ ಕೆಲಸಕ್ಕೆ ಗೌರವ ಕೊಡುತ್ತೇವೋ ನಾವು ಎಷ್ಟರ ಮಟ್ಟಿಗೆ ದೇಹ ಮತ್ತು ಬುದ್ಧಿ ಶಕ್ತಿಗಳನ್ನು ನಮ್ಮ ನಿತ್ಯ ಜೀವನದಲ್ಲಿ ಒಂದೇರೀತಿಯ ಗೌರವ ಬುದ್ಧಿಯಿಂದ ಆಚರಣೆಗೆ ತರುತ್ತೇವೋ ಅಷ್ಟರ ಮಟ್ಟಿಗೆ ಪ್ರಗತಿ ಹೊಂದುತ್ತೇವೆ" ಎಂದು ಬೂಕರ್ ಟಿ. ವಾಷಿಂಗ್‌ಟನ್ ಎಂಬವರು ಅಮೆರಿಕನರನ್ನು ಕುರಿತು ನುಡಿದ ಈ ಮಾತುಗಳ ಅರ್ಥವನ್ನು ನಮ್ಮ ದೇಶದವರು ಹೆಚ್ಚುಹೆಚ್ಚಾಗಿ ಅರಿಯಬೇಕು.

ಮೇಲೆ ವಿವರಿಸಿದ ರೀತಿಯಲ್ಲಿ ನಮ್ಮ ಸೆಕೆಂಡರಿ ವಿದ್ಯಾಭ್ಯಾಸವನ್ನು ಪುನರ್ವ್ಯ ವಸ್ಥೆಗೊಳಿಸುವಾಗ ಕ್ಲಿಪ್ತವಾದ ಶಾಲಾ ಕೆಲಸಗಳಲ್ಲದೆ, ಆಟಪಾಟಗಳು, ಅಂಗ ಸಾಧನೆ, ಚರ್ಚಾಕೂಟ, ಶಾಲಾಸಂಚಾರ ಮತ್ತು ಪ್ರಯಾಣ—ಇವುಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಬಾಲಕರು ಒಟ್ಟಿಗೆ ಕಲೆತು ಅನ್ಯೋನ್ಯಭಾವನೆಯಿಂದ, ಸಹೋದರರಂತೆ ಬಾಳಿ ಬದುಕಬೇಕಾದರೆ ಇವು ಅತ್ಯಂತ ಅಗತ್ಯವಾದುವೆಂಬು ದನ್ನು ಮರೆಯಕೂಡದು. ಇದಕ್ಕಾಗಿ ಪಾಠವಿಷಯಗಳೂ ಪಠ್ಯ ಪುಸ್ತಕಗಳೂ ಪರೀಕ್ಷಾವಿಧಾನಗಳೂ ಬಾಲಕರ ಯೋಗ್ಯತಾನಿರ್ಣಯ ಕ್ರಮಗಳೂ ಸಂಪೂರ್ಣ ವಾಗಿ ಮಾರ್ಪಾಟಾಗಬೇಕು.

ಆದುದರಿಂದ ಈಗ ಹೇಳಿಕೊಡುತ್ತಿರುವ ಪಾಠ ವಿಷಯಗಳನ್ನು ಕೂಲಂಕಷ ವಾಗಿ ಪರೀಕ್ಷಿಸಿ, ಶಾಸ್ತ್ರೀಯವಾದ ರೀತಿಯಲ್ಲಿ ಅವುಗಳ ಉಪಯುಕ್ತತೆಯನ್ನು ನಿರ್ಧರಿಸಿ, ಮಕ್ಕಳ ತಲೆ ಭಾರವನ್ನು ತಗ್ಗಿಸಬೇಕು. ಇದಾಗಬೇಕಾದರೆ, ಅಲ್ಲಲ್ಲೇ ಅಲ್ಪಸ್ವಲ್ಪ ತಿದ್ದುಪಾಟು ಮಾಡಿದರೆ ಸಾಲದು. ಪಾಠವಿಷಯಗಳನ್ನು ಸಂಪೂರ್ಣ ವಾಗಿ ಆಧುನಿಕ ರೀತಿಯಲ್ಲಿ ಪುನರ್ರಚಿಸಬೇಕು. ರಾಜಕೀಯ, ಸಾಮಾಜಿಕ ಔದ್ಯೋಗಿಕ, ಮತ್ತೆ ಮನೋರಂಜಕ ಜೀವನದಲ್ಲಿ ಜನರು ಮಾಡುತ್ತಿರುವುದೇನು, ಅದನ್ನು ಏಕೆ ಆ ರೀತಿ ಮಾಡುತ್ತಿದ್ದಾರೆ, ಅವುಗಳನ್ನು ಉತ್ತಮಗೊಳಿಸಿ ಎಲ್ಲರ

ಮೇಲ್ಮೆಯನ್ನೂ ಸಾಧಿಸುವುದು ಹೇಗೆ ಎಂಬೀ ವಿಷಯಗಳನ್ನು ಪರಿಶೀಲಿಸುವುದು ಅಗತ್ಯ. ಇದನ್ನು ನಿರ್ಧರಿಸುವವರು ಅರ್ಥಶಾಸ್ತ್ರದಲ್ಲೂ ಮನಶ್ಶಾಸ್ತ್ರದಲ್ಲೂ ಶಿಕ್ಷಣ ಶಾಸ್ತ್ರದಲ್ಲೂ ನಿಪುಣರಾಗಿರುವುದು ಮಾತ್ರವಲ್ಲದೆ, ಅವರು ಉತ್ತಮ ಪೌರರ ಆವಶ್ಯಕತೆಗಳನ್ನೂ ಅಗತ್ಯಗಳನ್ನೂ ಚೆನ್ನಾಗಿ ಅರಿತವರಾಗಿರಬೇಕು. ಅಂಥ ಮಹಾನೀಯರೂ ಮಹಿಳೆಯರೂ ಪಾಠ ಬೋಧನೆಯಲ್ಲಿ ನಿರತರಾಗಿರುವ ಅಧ್ಯಾಪಕರೂ ಒಟ್ಟಿಗೆ ಕಲೆತು, ಸಮಾಜದ ಕುಂದುಕೊರತೆಗಳನ್ನು ಪರಿಶೀಲಿಸಿ ದೇಶದ ಕಲ್ಯಾಣ ಸಾಧಕವಾದ ಅಂಶಗಳನ್ನು ಗಮನಿಸಿ ಉತ್ತಮ ಶಿಕ್ಷಣವ್ಯವಸ್ಥೆಯನ್ನು ನಿರ್ಮಿಸಬೇಕು. ಇದರ ಸಾಧನೆಗೆ ಪ್ರಗತಿಪರವಾದ ಮನೋವಿಶಾಲತೆಯು ತೀರ ಅಗತ್ಯ.

ಡಾ|| ಎಂ. ಸಿದ್ಧಲಿಂಗಯ್ಯ.

ಧರ್ಮಪರೀಕ್ಷೆ ಮತ್ತು ಧೂರ್ತಾಖ್ಯಾನ

ಕನ್ನಡ ಭಾಷೆಯಲ್ಲಿ ಧರ್ಮಪರೀಕ್ಷೆಯೆಂಬ ಹೆಸರಿನ ಏನಿಲ್ಲೆಂದರೂ ಎರಡು ಗ್ರಂಥಗಳು ಉಪಲಬ್ಧವಾಗಿವೆ. ಮೊದಲನೆಯದು ವೃತ್ತವಿಲಾಸನ ಧರ್ಮಪರೀಕ್ಷೆ; ಎರಡನೆಯದು ಚಂದ್ರಸಾಗರನಿಂದ ರಚಿತವಾದುದು.

ವೃತ್ತವಿಲಾಸನ ಧರ್ಮಪರೀಕ್ಷೆಯು ಇಂದಿಗೂ ಪ್ರಸಿದ್ಧವಾಗಿಲ್ಲ. ಆದರೆ ಅದರ ಕೆಲವು ಭಾಗಗಳು ಮಾತ್ರ ಪ್ರಾಕ್ಕಾವ್ಯ ಮಾಲಿಕೆಯಲ್ಲಿ ಉದ್ಧೃತವಾಗಿವೆ. ಕವಿಚರಿತೆಕಾರರು ಈ ಗ್ರಂಥದ ಪರಿಚಯವನ್ನು ಸ್ವಲ್ಪಮಾತ್ರ ಕೊಟ್ಟಿರುತ್ತಾರೆ. ವೃತ್ತವಿಲಾಸನು ಜೈನ ಕವಿ. ತನ್ನ ಗ್ರಂಥದಲ್ಲಿ ಶುಭಕೀರ್ತಿವ್ರತಿ, ಸೈದ್ಧಾಂತಿಕ ಮಾಘಣಂದಿಯತಿ ಭಾನುಕೀರ್ತಿಯತಿ, ಧರ್ಮಭೂಷಣ, ಅಮರಕೀರ್ತಿ ಮತ್ತು ಅಭಯಸೂರಿವಾದೀಶ್ವರ ಇವರುಗಳನ್ನು ಸ್ತುತಿಸಿದ್ದಾನೆ. ಕವಿಚರಿತೆಕಾರರ ಊಹೆಯಂತೆ ಇವನು ಸುಮಾರು ೧೧೬೦ರಲ್ಲಿ ಇದ್ದಿರಬಹುದು. ಕವಿಯ ವಿಷಯವಾಗಿ ನಮಗೆ ವಿಶೇಷವೇನೂ ಗೊತ್ತಿಲ್ಲ. ಅಮರಕೀರ್ತಿಯು ಈತನ ಗುರುವೆಂಬುದು ಮಾತ್ರ ಗೊತ್ತಾಗುತ್ತದೆ. ಮುದ್ರಿತವಾದ ಭಾಗಗಳನ್ನು ನೋಡಲಾಗಿ ಕವಿಯ ಚಂಪೂಶೈಲಿಯು ಲಲಿತವಾಗಿಯೂ, ಆತನ ವರ್ಣನಾಪದ್ಧತಿಯು ಸುಭಗವಾಗಿಯೂ, ಮತ್ತು ಆತನು ಕಥೆ ಹೇಳುವ ಕಲೆಯು ಹೃದಯಂಗಮವಾಗಿಯೂ ಇರುವುದೆಂಬುದು ಸ್ಪಷ್ಟವಾಗುತ್ತದೆ.

ಕವಿಚರಿತೆಕಾರರು ಹೇಳುವಂತೆ ಅಮಿತಗತಿ ಎಂಬವನು ಸಂಸ್ಕೃತದಲ್ಲಿ ಬರೆದಿರುವ ಧರ್ಮಪರೀಕ್ಷೆಯನ್ನು ವೃತ್ತವಿಲಾಸ ಕವಿಯು ಎಲ್ಲರಿಗೂ ತಿಳಿಯುವಂತೆ ಕನ್ನಡದಲ್ಲಿ ರಚಿಸುವುದಾಗಿ "ಮುನ್ನಿನ ಚಾರು ಸಂಸ್ಕೃತದ ಧರ್ಮಪರೀಕ್ಷೆಯಂ ಸನ್ನುತಮಾಗಿ ಎಲ್ಲರರಿವಂತುಟು ಕನ್ನಡದಿಂ ಪೇಳ್ದೆಂ" ಎಂಬ ಪದ್ಯಭಾಗದಿಂದ ಹೇಳಿದ್ದಾನೆ. ಗ್ರಂಥವು ಗದ್ಯ ಪದ್ಯ ಮಿಶ್ರಿತವಾದ ಚಂಪೂ ಶೈಲಿಯಲ್ಲಿ ಬರೆಯಲ್ಪಟ್ಟು ಹತ್ತು ಆಶ್ವಾಸಗಳಲ್ಲಿ ಮುಗಿದಿದೆ.

ವೃತ್ತವಿಲಾಸನ ಧರ್ಮಪರೀಕ್ಷೆಯು ದಿನಗಳೆದುಹೋದಹಾಗೆ ಸಾಧಾರಣ ಜನರಿಗೆ ತಿಳಿಯದಷ್ಟು ಕಠಿನವಾಗಿ ಕಂಡುಬಂದದ್ದರಿಂದ ಈ ಗ್ರಂಥವನ್ನು ಬೆಳುಗೊಳದ ಶ್ರಾವಕರು ಚಾರುಕೀರ್ತಿ ಪಂಡಿತಾಚಾರ್ಯರನ್ನು ಕನ್ನಡ ವ್ಯಾಖ್ಯಾನದಲ್ಲಿ ಮಾಡಿಸಿ ಕೊಡಿ ಎಂಬುದಾಗಿ ಬಿನ್ನವಿಸಿಕೊಂಡರು. ಚಾರುಕೀರ್ತಿಯವರು ಚಂದ್ರಸಾಗರರಿಗೆ ಅಪ್ಪಣೆಯನ್ನಿತ್ತರು. ಚಂದ್ರಸಾಗರರು ಶಕ ೧೭೭೦ ಆನಂದ ಸಂವತ್ಸರದಲ್ಲಿ ಮುಖ್ಯತಃ

ಸುಲಭ ಕನ್ನಡ ಗದ್ಯದಲ್ಲಿ ಈ ಧರ್ಮಪರೀಕ್ಷೆಯನ್ನು ಮುಗಿಸಿದರು. ವೃತ್ತವಿಲಾಸನ ಧರ್ಮಪರೀಕ್ಷೆಯಂತೆ ಇದರಲ್ಲಿಯೂ ಹತ್ತು ಅಧ್ಯಾಯಗಳು. ಕನ್ನಡದಲ್ಲಿ ಇದಕ್ಕಿಂತಲೂ ಬೇರೆ ಮತ್ತಾವ ಧರ್ಮಪರೀಕ್ಷೆಗಳು ಇರುವುವೊ ಎಂಬುದನ್ನು ಗ್ರಂಥಸಂಗ್ರಹಗಳಲ್ಲಿ ನೋಡಬೇಕಾಗಿದೆ.

ಪ್ರಾಕೃತ ಅಪಭ್ರಂಶ ಮತ್ತು ಸಂಸ್ಕೃತ ಭಾಷೆಗಳಲ್ಲಿ ಇದೇ ವಿಷಯವನ್ನು ನಿರೂಪಿಸುತ್ತಿರುವ ಹಲವು ಧರ್ಮಪರೀಕ್ಷೆ ಎಂಬ ಹೆಸರಿನ ಗ್ರಂಥಗಳು ಉಪಲಬ್ಧವಾಗಿವೆ. ಕೆಲವು ಮುಖ್ಯವಾದವುಗಳನ್ನು ಇಲ್ಲಿ ನಿರ್ದೇಶಿಸಬಹುದು.

ಜಯರಾಮನೆಂಬ ಕವಿಯು ಗಾಥಾಪ್ರಬಂಧದಲ್ಲಿ ಧರ್ಮಪರೀಕ್ಷೆಯನ್ನು ರಚಿಸಿದ್ದನು. ಬಹುತರವಾಗಿ ಅದು ಪ್ರಾಕೃತ ಭಾಷೆಯಲ್ಲಿ ಇದ್ದಿರಬೇಕು. ಅದು ಈವರೆಗೆ ನಮಗೆ ದೊರೆತಿಲ್ಲ. ಈ ಗ್ರಂಥವನ್ನು ಅನುಸರಿಸಿ ಹರಿಷೇಣನು ಅಪಭ್ರಂಶ ಭಾಷೆಯಲ್ಲಿ ಧರ್ಮಪರೀಕ್ಷೆಯನ್ನು ಬರೆದನು. ಮೇವಾಡ ದೇಶದಲ್ಲಿ ಸಿರಿವುಜಉರದ ಧಕ್ಕಡ ಕುಲದಲ್ಲಿ ಹರಿ ಎಂಬ ಕಲಾಕುಶಲನಿದ್ದನು. ಆತನ ಮಗ ಗೋವರ್ಧನ. ಅವನ ಹೆಂಡತಿ ಗುಣವತಿ. ಇವರಿಬ್ಬರ ಮಗ ಹರಿಷೇಣ. ಅವನು ಕಾರ್ಯನಿಮಿತ್ತವಾಗಿ ಚಿತ್ರಕೂಟದಿಂದ ಅಚಲಪುರಕ್ಕೆ ಬಂದನು. ಅಲ್ಲಿ ಛಂದೋಲಂಕಾರವನ್ನು ಕಲಿತು ವಿಕ್ರಮ ಸಂವತ್ ೧೦೪೪ರಲ್ಲಿ ಈ ಅಪಭ್ರಂಶ ಧರ್ಮಪರೀಕ್ಷೆಯನ್ನು ಬರೆದನು. ಈತನ ಗುರು ಸಿದ್ಧಸೇನ, ಮತ್ತು ಆತನ ಪ್ರಸಾದದಿಂದಲೇ ಧರ್ಮಪರೀಕ್ಷೆಯ ರಚನೆಯು ಜಯರಾಮನು ಹರಿಷೇಣನಿಗಿಂತ ಮುಂಚಿನವನೆಂಬುದು ಸ್ಪಷ್ಟ. ಆಮೇಲೆ ಮಾಧವಸೇನನ ಶಿಷ್ಯನಾದ ಅಮಿತಗತಿಯು ಸಂವತ್ ೧೦೭೦ ರಲ್ಲಿ ಸಂಸ್ಕೃತ ಭಾಷೆಯಲ್ಲಿ ಧರ್ಮಪರೀಕ್ಷೆಯನ್ನು ಬರೆದನು. ಅಮಿತಗತಿಯ ಗ್ರಂಥವು ಹರಿಷೇಣನ ಧರ್ಮಪರೀಕ್ಷೆಗಿಂತ ೨೬ ವರ್ಷ ಈಚಿನದು. ಜಯರಾಮನ ಗ್ರಂಥವು ನಮಗೆ ದೊರೆತಿಲ್ಲ; ಹರಿಷೇಣನ ಗ್ರಂಥವಾದರೂ ಇನ್ನೂ ಹಸ್ತಲಿಖಿತಗಳಲ್ಲಿಯೇ ಉಳಿದಿದೆ; ಆದರೆ ಅಮಿತಗತಿಯ ಧರ್ಮಪರೀಕ್ಷೆಯು ಮಾತ್ರ ಮುದ್ರಿತವಾಗಿದೆ, ಮತ್ತು ಅದರ ವಿಷಯವು ಹಿಂದೀ, ಮರಾಠಿ ಮತ್ತು ಜರ್ಮನ್ ಮೊದಲಾದ ಭಾಷೆಗಳಲ್ಲಿ ಸಾರಭೂತವಾಗಿ ಪ್ರಕಟವಾಗಿದೆ. ಮುಖ್ಯತಃ ಅಮಿತಗತಿಯನ್ನು ಅನುಸರಿಸಿ ಆತನ ಗ್ರಂಥದಿಂದ ಎಷ್ಟೋ ಭಾಗಗಳನ್ನು ಇದ್ದಕ್ಕಿದ್ದ ಹಾಗೆಯೇ ತೆಗೆದುಕೊಂಡು ಪದ್ಮಸಾಗರನೆಂಬ ಕವಿಯು ಸಂವತ್ ೧೬೪೫ರಲ್ಲಿ ಧರ್ಮಪರೀಕ್ಷೆಯನ್ನು ರಚಿಸಿದ್ದಾನೆ. ಇದಾದರೂ ಮುದ್ರಿತವಾಗಿದೆ.

ವೃತ್ತವಿಲಾಸನ ಧರ್ಮಪರೀಕ್ಷೆಯನ್ನು ಅಭ್ಯಾಸ ಮಾಡುವವರಿಗೆ ಅಮಿತಗತಿಯ ಧರ್ಮಪರೀಕ್ಷೆಯ ಪರಿಚಯವು ಅವಶ್ಯವಾದುದು. ಯಾಕೆಂದರೆ ಅಮಿತಗತಿಯ ಗ್ರಂಥದ ಆಧಾರದಿಂದಲೆ ವೃತ್ತವಿಲಾಸನು ತನ್ನ ಗ್ರಂಥವನ್ನು ರಚಿಸಿರುತ್ತಾನೆ.

ಅಮಿತಗತಿಯು ಪ್ರೌಢ ಕವಿ. ಸಂಸ್ಕೃತ ಭಾಷೆಯ ಪ್ರಭುತ್ವವಾದರೂ ಅವನಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ವಿಶೇಷವಾಗಿ ಅವನು ಶೀಘ್ರಕವಿ. ಆತನು ಪ್ರಾಕೃತ ಗ್ರಂಥಗಳ ಆಧಾರದಿಂದ, ಮತ್ತು ಸ್ವತಂತ್ರವಾಗಿಯೂ, ಕೆಲವು ಸಂಸ್ಕೃತ ಗ್ರಂಥಗಳನ್ನು ಬರೆದಿರುತ್ತಾನೆ. ಜಯರಾಮನ ಪ್ರಾಕೃತ ಗ್ರಂಥವನ್ನು ಆತನು ಅನುಸರಿಸಿ ತನ್ನ ಸಂಸ್ಕೃತ ಧರ್ಮಪರೀಕ್ಷೆಯನ್ನು ಬರೆದಿರಬಹುದು. ಹರಿಷೇಣನ ಧರ್ಮಪರೀಕ್ಷೆಯು ಆತನಿಗೆ ಗೊತ್ತಿದ್ದರೂ ಗೊತ್ತಿದ್ದಿರಬಹುದು. ವೃತ್ತವಿಲಾಸನ "ಕನ್ನಡ ಗ್ರಂಥಕ್ಕೆ" ಕನ್ನಡ ಧರ್ಮಪರೀಕ್ಷೆಗೆ ಅಮಿತಗತಿಯ ಗ್ರಂಥವೇ ತಳಹದಿಯಾಗಿದ್ದುದರಿಂದ ಅದರ ಸಾರಾಂಶವನ್ನು ಇಲ್ಲಿ ಕೊಡಬಹುದು.

ಮನೋವೇಗನೆಂಬ ಶ್ರಾವಕನು ತನ್ನ ಮಿತ್ರನಾದ ಪವನವೇಗನ ಮನಸ್ಸನ್ನು ಜೈನಧರ್ಮದ ಕಡೆಗೆ ಒಲಿಸುವ ಇಚ್ಛೆಯಿಂದ ಬ್ರಾಹ್ಮಣಧರ್ಮದ ಮುಖ್ಯಸ್ಥಾನವಾದ ಪಾಟಲೀಪುತ್ರವೆಂಬ ನಗರಕ್ಕೆ ಕರೆದೊಯ್ಯುತ್ತಾನೆ. ಮೊದಲನೆಯ ದಿನ ಅವರಿಬ್ಬರು ಮೈಮೇಲೆ ಆಭರಣಗಳನ್ನು ಹಾಕಿಕೊಂಡು ಹುಲ್ಲುಕಟ್ಟಿಗೆಯ ಭಾರವನ್ನು ತಲೆಯ ಮೇಲೆ ಇಟ್ಟುಕೊಂಡು ಹೊರಡುತ್ತಾರೆ. ಇದೊಂದು ಆಶ್ಚರ್ಯಕಾರಕ ನೋಟ. ಬ್ರಹ್ಮಶಾಲೆಯಲ್ಲಿ ಬಂದು ಅವರು ಭೇರಿಯನ್ನು ಬಾರಿಸಲು ವಾದಕ್ಕಾಗಿ ಬ್ರಾಹ್ಮಣರೆಲ್ಲರೂ ಒಟ್ಟುಗೂಡುತ್ತಾರೆ. ಹುಲ್ಲುಮಾರುವವರು ರತ್ನದ ಆಭರಣಗಳನ್ನು ತೊಡುವದು ಅಸಾಧ್ಯವೆಂದು ಒರ್ವ ಬ್ರಾಹ್ಮಣನು ಅವರಿಗೆ ಪ್ರಶ್ನೆ ಮಾಡುತ್ತಾನೆ. ಮನೋವೇಗನು ಅವರ ಸಂಶಯವನ್ನು ನಿರಾಕರಿಸಲು ಸಿದ್ಧನಾದನು. ಆದರೆ ಮನೋವೇಗನು ಹೇಳಿದ ಕಥೆಗಳಲ್ಲಿಯ ಜನರಂತೆ ಬ್ರಾಹ್ಮಣರಿದ್ದಾರೆ. ಮಾತ್ರ ಆತನು ಅವರ ಕೂಡ ಮಾತನಾಡಲಾರನು. ತಾವೆಲ್ಲರು ಸಜ್ಜನರು, ವಿಚಾರಿಗಳು ಎಂದು ಬ್ರಾಹ್ಮಣರು ಖಂಡಿತವಾಗಿ ಹೇಳಲಾಗಿ ಮನೋವೇಗನು ಪುರಾಣಗಳ ಆಧಾರದಿಂದ ಆ ಬ್ರಾಹ್ಮಣ ಪ್ರಶ್ನೆಯನ್ನು ನಿರಾಕರಿಸುತ್ತಾನೆ. ದೊಡ್ಡದೇವನಾದ ವಿಷ್ಣುವು ಗೋಪಾಲನಾಗಿ ಗೋಕುಲದಲ್ಲಿ ಇಳಿದುಕೊಂಡನು; ಪಾಂಡವರ ದೂತನಾದನು. ಅರ್ಜುನನ ಸಾರಥಿಯಾದನು; ಬಲಿಯ ಬಾಗಿಲಲ್ಲಿ ಭಿಕ್ಷೆ ಬೇಡಿದನು; ಮತ್ತು ಸೀತೆಯ ವಿಯೋಗವನ್ನು ಸಹನಮಾಡಿದನು. ದೇವರಾದ ವಿಷ್ಣುವು ಇದನ್ನೆಲ್ಲ ಮಾಡುವದು ಶಕ್ಯವಿದ್ದರೆ ರತ್ನಾಭರಣಗಳನ್ನು ಧರಿಸುವವರು ಹುಲ್ಲುಕಟ್ಟಿಗೆ ಮಾರುವುದರಲ್ಲಿ ಅದಾವ ಅಸಂಬದ್ಧತೆ? ಎರಡನೆಯ ದಿನ ಮನೋವೇಗನು ಭಿಲ್ಲನ ವೇಷವನ್ನು ಮತ್ತು ಆತನ ಮಿತ್ರನು ಗಡಿಗೆಯಲ್ಲಿ ಹಾಕಿದ ಕಿವಿಯಿಲ್ಲದ ಬೆಕ್ಕಿನ ರೂಪವನ್ನೂ ಧರಿಸಿದರು. ಮುಂಚಿನಂತೆ ಬ್ರಾಹ್ಮಣರ ಸಭೆಗೆ ಅವರು ಹೋದರು. ಮನೋವೇಗನು ಇಲಿಗಳನ್ನು ದೂರದಲ್ಲಿ ನಿವಾರಿಸುವ ಈ ಬೆಕ್ಕಿನ ಪ್ರಭಾವವನ್ನು ಅವರಿಗೆ ಹೇಳಿದನು. ಆದರೆ ಕಿವಿಯ

ವಿಷಯವಾಗಿ ಅವರು ಕೇಳಲು ಒಂದು ರಾತ್ರಿ ಭಯಂಕರ ಇಲಿಗಳು ಅದನ್ನು ಕತ್ತರಿಸಿ ಬಿಟ್ಟವೆಂದು ಮನೋವೇಗನು ಅವರಿಗೆ ಹೇಳಿಬಿಟ್ಟನು. ಆತನ ಅಸಂಬದ್ಧ ವಾಕ್ಯಗಳನ್ನು ಕೇಳಿ ಬ್ರಾಹ್ಮಣರೆಲ್ಲರು ನಗಹತ್ತಿದರು. ಮನೋವೇಗನು ಅಗ್ನಿ, ಈಶ್ವರ, ಇಂದ್ರ ಮೊದಲಾದ ದೇವತೆಗಳ ದೋಷಗಳನ್ನು ಅವರಿಗೆ ತೋರಿಸಿಕೊಟ್ಟನು. ಇಷ್ಟೆಲ್ಲ ದೋಷಗಳುಳ್ಳ ದೇವತೆಗಳು ಪೂಜೆಗೆ ಯೋಗ್ಯರಾದರೆ ಕಿವಿಯಿಲ್ಲದ ಮಾತ್ರಕ್ಕೆ ಬೆಕ್ಕಿನ ಗುಣಗಳು ಅದು ಹೇಗೆ ನಷ್ಟವಾಗುತ್ತವೆ? ಮೂರನೆಯ ದಿನ ಮನೋವೇಗನು ಜೈನ ಮುನಿಯ ವೇಷವನ್ನು ಹಾಕಿಕೊಂಡು ಪವನವೇಗನ ಕೂಡ ಬ್ರಾಹ್ಮಣರ ಸಭೆಗೆ ಬಂದನು. ಅವರ ವಿಜ್ಞಾಪನೆಗನುಸಾರವಾಗಿ ತನ್ನ ಚರಿತ್ರೆಯನ್ನು ಅವರಿಗೆ ನಿರೂಪಿಸಿದನು. ಅವನ ತಂದೆಯಾದ ಮುನಿದತ್ತನು ಅಭ್ಯಾಸಕ್ಕಾಗಿ ಒರ್ವ ಸನ್ಯಾಸಿಯ ಬಳಿಯಲ್ಲಿ ಆತನನ್ನು ಇಟ್ಟಿದ್ದನು. ಕಮಂಡಲುವಿನಲ್ಲಿ ನೀರು ತರಹೋದಾಗ ಒಂದು ದೊಡ್ಡ ಆನೆಯು ಅವನನ್ನು ಬೆನ್ನಟ್ಟಿತು. ಅವನ ಕಮಂಡಲುವನ್ನು ಸೇರಿದನು. ಆನೆಯೂ ಸಹ ಒಳಗೆ ಬಂದಿತು ಮತ್ತು ಪೀಡಿಸಹತ್ತಿತು. ಅವನು ತೊಟ್ಟಿಯಿಂದ ಹೊರಗೆ ಓಡಿದನು. ಆನೆಯೂ ಹೊರಗೆ ಬಂತು. ಆದರೆ ಅದರ ಬಾಲವು ಮಾತ್ರ ತೊಟ್ಟಿಯಲ್ಲಿ ಸಿಕ್ಕಿತು. ಮುಂದೆ ಆತನು ಜೈನದೀಕ್ಷೆಯನ್ನು ತೆಗೆದುಕೊಂಡನು. ಈ ಅಸಂಭಾವ್ಯ ಕಥೆಯನ್ನು ಕೇಳಿ ಬ್ರಾಹ್ಮಣರು ನಗಹತ್ತಿದರು. ಮನೋವೇಗನು ಮಾತ್ರ ಈ ತರದ ಕಥೆಗಳು ಪುರಾಣದಲ್ಲಿರುವುದನ್ನು ತೋರಿಸಿದನು. ಅರ್ಜುನನು ಬಾಣದ ಛಿದ್ರದೊಳಗಿಂದ ನಾಗಲೋಕವನ್ನು ತಂದನು ; ಅಗಸ್ತ್ಯನ ಕಮಂಡಲುವಿನಲ್ಲಿ ವಿಶ್ವವೆಲ್ಲವೂ ಅಡಕವಾಗಿತ್ತು. ಮತ್ತು ಬ್ರಹ್ಮನು ವಿಷ್ಣುವಿನ ಹೊಟ್ಟೆಯೊಳಗಿಂದ ಹೊರಬೀಳುವಾಗ ಆತನ ಕೂದಲು ಮಾತ್ರ ವಿಷ್ಣುವಿನ ಹೊಕ್ಕುಳಲ್ಲಿ ಸಿಕ್ಕಿತು. ಇವೆಲ್ಲ ಕಥೆಗಳು ಸಂಭಾವ್ಯವಾದರೆ ಆನೆಯು ಕಮಂಡಲುವಿನಲ್ಲಿ ಹೋಗುವುದರಲ್ಲಿ ಅದಾವ ಅಸಂಭಾವ್ಯತೆ? ನಾಲ್ಕನೆಯ ದಿನ ತಾಪಸ ವೇಷವನ್ನು ಧರಿಸಿ ಮನೋವೇಗನು ತನ್ನ ಮಿತ್ರನ ಕೂಡ ಬ್ರಾಹ್ಮಣರ ಸಭೆಯಲ್ಲಿ ತನ್ನ ಕಥೆಯನ್ನು ಹೇಳಲಾರಂಭಿಸಿದನು. "ನನ್ನ ತಾಯಿಯ ಮದುವೆಯ ಕಾಲಕ್ಕೆ ಒಂದು ಆನೆಯು ದೊಡ್ಡ ಗೋಳಾಟವನ್ನು ಎಬ್ಬಿಸಿತು. ಮದುಮಗನ ಸ್ಪರ್ಶದಿಂದ ಮದುಮಗಳು ಮೂರ್ಛೆಹೊಂದಿದಳು ; ಮುಂದೆ ಸ್ಪರ್ಶದ ಮೂಲಕ ತಾನು ಗರ್ಭಿಣಿಯಾಗಿದ್ದುದು ಆಕೆಗೆ ಗೊತ್ತಾಯಿತು. ಹನ್ನೆರಡು ವರ್ಷದ ಬರಗಾಲದ ಕಥೆಯನ್ನು ಕೇಳಿ ಅಷ್ಟೊಂದು ಕಾಲ ನಾನು ಗರ್ಭದಲ್ಲಿಯೇ ಉಳಿದುಕೊಂಡೆನು. ಹುಟ್ಟಿದ ಕೂಡಲೇ ಪಾತ್ರೆಯನ್ನು ತಕ್ಕೊಂಡು ನಾನು ಆಹಾರವನ್ನು ಬೇಡಹತ್ತಿದೆನು. ಇದು ಅಶುಭವೆಂದು ನನ್ನನ್ನು ಹೊರಗಟ್ಟಿದರು. ನಾನು ತಾಪಸನಾದೆ. ನನ್ನ ತಾಯಿಯು ಮಾತ್ರ ಮತ್ತೆ ಲಗ್ನ

ಮಾಡಿಕೊಂಡಳು.” ಈ ಕಥೆಯನ್ನು ಕೇಳಿ ಒಳ್ಳೆಯ ಸುಳ್ಳುಗಾರನೆಂದು ಎಲ್ಲಾ ಬ್ರಾಹ್ಮಣರು ನಗಹತ್ತಿದರು. ಮನೋವೇಗನು ಪುರಾಣದೊಳಗಿನ ಈ ತರದ ಕಥೆಗಳನ್ನು ಹೇಳಲಾರಂಭಿಸಿದನು. ಹೆಂಗಸರ ಪರಸ್ಪರ ಸ್ಪರ್ಶದಿಂದ ಭಗೀರಥನ ಗರ್ಭವಾಯಿತು. ಹಲಸಿನ ಗಿಡವನ್ನು ಅಪ್ಪಿಕೊಂಡು ಗಾಂಧಾರಿಯು ಗರ್ಭಿಣಿಯಾದಳು. ಗರ್ಭದಲ್ಲಿದ್ದಾಗ ಅಭಿಮನ್ಯು ಕುಮಾರನು ಚಕ್ರವ್ಯೂಹವನ್ನು ಅರಿತನು. ತಂದೆಯ ಶುಕ್ರ ಸಂಬಂಧದಿಂದ ಮಂಡೋದರಿಯು ಗರ್ಭಿಣಿಯಾದಳು, ಮತ್ತು ಆ ಗರ್ಭವು ಎರಡು ಸಾವಿರ ವರ್ಷ ಆಕೆಯ ಶರೀರದಲ್ಲಿ ಉಳಿಯಿತು. ಹುಟ್ಟಿದ ಕೂಡಲೆ ವ್ಯಾಸನು ದೀಕ್ಷೆಯನ್ನು ಕೈಕೊಂಡನು. ಸೂರ್ಯಪುತ್ರನು ಹುಟ್ಟಿದ ಮೇಲೆಯೂ ಕುಂತಿಯು ಕನ್ನೆಯೇ. ನಾಗಕೇತುವಿನ ಜನ್ಮದನಂತರ ಚಂದ್ರಮತಿಯು ಕನ್ನೆಯಂತೆಯೇ ಉದ್ದಾಲಕನನ್ನು ಲಗ್ನವಾದಳು. ಇವೆಲ್ಲ ಕಥೆಗಳು ಸತ್ಯವಾದರೆ ತಾಪಸನಾದ ನನ್ನ ಕಥೆಗಳಲ್ಲಿ ಅಸಂಬದ್ಧವೇನು? ಐದನೆಯ ದಿವಸ ಮನೋವೇಗನು ಬೌದ್ಧ ಭಿಕ್ಷುಕನಾಗಿ ಬ್ರಾಹ್ಮಣರ ಸಭೆ ಸೇರಿದನು, ಮತ್ತು ತನ್ನ ಕಥೆಯನ್ನು ಹೇಳಲಾರಂಭಿಸಿದನು. ತಾನು ತಿರುಗಾಡುತ್ತಿರುವಾಗ ತೋಳಗಳಿಗೆ ಹೆದರಿ ಸ್ತೂಪವನ್ನು ಏರಿದನಂತೆ. ತೋಳಗಳು ಮಾತ್ರ ಸ್ತೂಪವನ್ನು ಎತ್ತಿಕೊಂಡು ಹಾರಿಹೋದುವು. ನಾಯಿಗಳು ಬಂದಕೂಡಲೆ ಮಾತ್ರ ಅವು ಅಂಜಿ ಓಡಿಹೋದುವು. ಇದನ್ನು ಕೇಳಿ ಬ್ರಾಹ್ಮಣರು ನಗಹತ್ತಿದರು. ಮನೋವೇಗನು ರಾಮಾಯಣದಲ್ಲಿ ವಾನರರು ಐದು ಗುಡ್ಡಗಳನ್ನು ಎತ್ತಿದ ಕಥೆಯನ್ನು ಹೇಳಿದನು. ವಾನರರು ಗುಡ್ಡಗಳನ್ನು ಎತ್ತಬಹುದಾದರೆ ತೋಳಗಳು ಸಹ ಸ್ತೂಪವನ್ನು ಸಹಜವಾಗಿ ಎತ್ತಬಹುದು. ಆರನೆಯ ದಿನ ಮನೋವೇಗ ಮತ್ತು ಪವನವೇಗ ಇವರಿಬ್ಬರು ಬ್ರಾಹ್ಮಣರ ಸಭೆಗೆ ಬಂದರು. ಮನೋವೇಗನು ತನ್ನ ಕಥೆಯನ್ನು ಹೇಳುವಾಗ ತನ್ನ ತಲೆಯನ್ನು ಕತ್ತರಿಸಿ ಗಿಡದ ಮೇಲೆ ಕಳಿಸಿದ ಮಾತನ್ನೂ, ತಲೆ ಗಿಡದ ಮೇಲೆ ಹಣ್ಣುಗಳನ್ನು ತಿಂದ ಹಾಗೆ ನೆಲದ ಮೇಲೆ ತನ್ನ ಹೊಟ್ಟೆಯು ತುಂಬುತ್ತ ಹೋಯಿತೆಂದೂ, ಮತ್ತು ತಲೆಯು ಪುನಃ ಶರೀರಕ್ಕೆ ಕೂಡಿಕೊಂಡಿತೆಂದೂ ಹೇಳಿದನು. ಬ್ರಾಹ್ಮಣರು ನಗಲು ಮನೋವೇಗನು ಪುರಾಣದಲ್ಲಿಯ ಕೆಲವು ಕಥೆಗಳನ್ನು ಹೇಳಿದನು. ಶಂಭುವಿಗೆ ರಾವಣನು ತನ್ನ ಒಂಬತ್ತು ತಲೆಗಳನ್ನು ಅರ್ಪಿಸಿದನು, ಮತ್ತು ಪುನಃ ಅವು ಆತನ ಶರೀರಕ್ಕೆ ಅಂಟಿಕೊಂಡವು. ದಧಿಮುಖನ ತಲೆಯು ಎರಡನೆಯ ಶರೀರಕ್ಕೆ ಹಚ್ಚಲು ಶಕ್ಯವಾಯಿತು. ಜರಾಸಂಧನ ಶರೀರವು ಬೇರೆ ಬೇರೆ ಭಾಗಗಳಿಂದ ಸಿದ್ಧವಾಯಿತು. ಭೂಮಿಯ ಮೇಲೆ ಬ್ರಾಹ್ಮಣರಿಗೆ ಆಹಾರ ಕೊಟ್ಟರೆ ಪರಲೋಕದಲ್ಲಿಯೇ ಹಿರಿಯರು ಸಮಾಧಾನ ಹೊಂದುತ್ತಾರೆ. ಈ ಕಥೆಗಳೆಲ್ಲ ಸತ್ಯವಾದರೆ ನನ್ನ ತಲೆಯು ಗಿಡದ ಮೇಲಿನ ಹಣ್ಣುಗಳನ್ನು ತಿಂದು ಕೆಳಗೆ ನನ್ನ ಹೊಟ್ಟೆ

ತುಂಬುವುದರೊಳಗೆ ಅಸತ್ಯವೇನು ? ಈ ಎಲ್ಲ ಮಾತುಗಳನ್ನು ಕೇಳಿ ಪವನವೇಗನಿಗೆ ಪೌರಾಣಿಕ ದೇವತೆಗಳ ಪೂರ್ಣ ಪರಿಚಯವಾಯಿತು ; ಮತ್ತು ಮನೋವೇಗನ ಇಚ್ಛೆಯಂತೆ ಆತನು ಜಿನಧರ್ಮವನ್ನು ಸ್ವೀಕರಿಸಿದನು.

ಮತಾಂತರಗಳ ಪರೀಕ್ಷೆಯನ್ನು ಮಾಡುವುದು ಅಮಿತಗತಿಯ ಮುಖ್ಯ ಉದ್ದೇಶವಾಗಿದ್ದರೂ ಈ ಗ್ರಂಥದೊಳಗೆ ಅಲ್ಲಲ್ಲಿಯ ಶ್ರೇಷ್ಠವಾದ ನೀತಿಯ ಉಪದೇಶಗಳನ್ನು ಮನೋಹರವಾದ ಶೈಲಿಯಲ್ಲಿ ಆತನು ನಿರೂಪಿಸುತ್ತಾನೆ. ಕೆಲವೆಡೆಯಲ್ಲಿ ಜೈನ ತತ್ವೋಪದೇಶವೂ ದೊರೆಯುತ್ತದೆ.

ವೃತ್ತವಿಲಾಸನು ಅಮಿತಗತಿಯನ್ನು ಅನುಸರಿಸಿದ್ದಾನೆ. ಆತನ ಕಥೆಯ ನಿರೂಪಣದಲ್ಲಿ ಯಾವ ಯಾವ ವ್ಯತ್ಯಾಸಗಳನ್ನು ಮಾಡಿಕೊಂಡಿರುತ್ತಾನೆಂಬುದನ್ನು ಕನ್ನಡ ಪಂಡಿತರು ನೋಡಬಹುದು. ತೀವ್ರವೇ ವೃತ್ತವಿಲಾಸನ ಗ್ರಂಥವು ಪ್ರಕಾಶವಾಗಿ ಈ ತರದ ಅಭ್ಯಾಸವನ್ನು ಯಾರಾದರೂ ಮಾಡಬಹುದೆಂದು ನಾನು ಕೋರುತ್ತೇನೆ

ಜಯರಾಮನಿಗಿಂತ ಮುಂಚೆ ಬೇರೊಂದು ಧರ್ಮಪರೀಕ್ಷೆಯು ಇತ್ತೋ ಅಥವಾ ಇಲ್ಲವೋ ಎಂಬ ಮಾತು ನಮಗೆ ಗೊತ್ತಾಗಿಲ್ಲ. ಆದರೆ ಇತ್ತೀಚೆಗೆ ಪ್ರಸಿದ್ಧವಾದ ಧೂರ್ತಾಖ್ಯಾನವೆಂಬ ಗ್ರಂಥವನ್ನು ನೋಡಲಾಗಿ ಅದರ ಸಂವಿಧಾನವು ಧರ್ಮಪರೀಕ್ಷೆಯ ಸಂವಿಧಾನವನ್ನು ಪೂರ್ಣ ಹೋಲುತ್ತದೆ. ಧೂರ್ತಾಖ್ಯಾನವು ಪ್ರಾಕೃತ ಭಾಷೆಯಲ್ಲಿಯ ಒಂದು ಸಣ್ಣ ಗ್ರಂಥ. ಇದನ್ನು ರಚಿಸಿದವನು ಹರಿಭದ್ರನೆಂಬ ದೊಡ್ಡ ಕವಿಯು. ಹರಿಭದ್ರನ ಕಾಲ ೮ನೆಯ ಶತಮಾನ. ಇವನು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಹಲವು ಉದ್ದಾಮ ಗ್ರಂಥಗಳನ್ನು ಬರೆದಿರುತ್ತಾನೆ. ಅವನೊಬ್ಬ ಅಪ್ರತಿಮನೈಯಾಯಿಕನು ; ಕುಶಲ ಕಥೆಗಾರನು, ಮತ್ತು ಸೂಕ್ಷ್ಮದೃಷ್ಟಿಯ ಕವಿಯು. ಅವನ ಧೂರ್ತಾಖ್ಯಾನದ ಸ್ವಲ್ಪ ಪರಿಚಯವನ್ನು ಇಲ್ಲಿ ಕೊಡಬಹುದು. ಇದರ ವಿಷಯವು ಈ ರೀತಿಯಾಗಿದೆ : ಮೂಲಶ್ರೀ, ಕಂಡರೀಕ, ಏಲಾಷಾಢ, ಶಶ ಇವರು ನಾಲ್ಕು ಗಂಡು ಧೂರ್ತರು, ಖಂಡಪಾನಾ ಇವಳು ಮಾತ್ರ ಹೆಂಗಸು. ಇವರೆಲ್ಲರೂ ಉಜ್ಜಯಿನಿ ಪಟ್ಟಣದ ಉದ್ಯಾನದಲ್ಲಿ ಒಟ್ಟುಗೂಡಿದರು. ಪ್ರತಿಯೊಬ್ಬನು ತನ್ನ ಅನುಭವವನ್ನು ಹೇಳುವದು ;—ಅದನ್ನು ಸುಳ್ಳೆಂದು ಸಿದ್ಧಮಾಡುವವನು ಒಂದು ಮೃಷ್ಟಾನ್ನವನ್ನು ಎಲ್ಲರಿಗೂ ಕೊಡಬೇಕು. ಅದೆಲ್ಲ ನಿಜವಾಗಿದ್ದರೆ ಆ ತರದ ಕಥೆಗಳನ್ನು ಪುರಾಣ ಭಾರತ ರಾಮಾಯಣದೊಳಗಿಂದ ಹೇಳಿ ಅದರ ಸತ್ಯತೆಯನ್ನು ಸಿದ್ಧಮಾಡಬೇಕು. ಈ ರೀತಿಯಾಗಿ ಪ್ರತಿಯೊಬ್ಬನು ತನ್ನ ತನ್ನ ಅಸಂಬದ್ಧ ಮತ್ತು ಅಸಂಭಾವ್ಯಕ ಕಥೆಗಳನ್ನು ಹೇಳುತ್ತಾನೆ. ಬೇರೊಬ್ಬನು ಆ ಕಥೆಯ ಸತ್ಯತೆಯನ್ನು ಸಿದ್ಧಮಾಡುವ ದೆಸೆಯಿಂದ ಆಯಾ ತರದ ಪ್ರಸಂಗಗಳನ್ನು ಭಾರತ ರಾಮಾಯಣಾದಿ

ಗ್ರಂಥಗಳಿಂದ ಆರಿಸಿ ಹೇಳುತ್ತಾನೆ. ಕೊನೆಗೆ ಖಂಡಪಾನಾ ಇವಳು ತನ್ನ ಕಥೆಯನ್ನು ಹೇಳುತ್ತಾಳೆ. ಅವಳೊಬ್ಬ ಅಗಸನ ಮಗಳು. ಅವಳ ಕೈಕೆಳಗೆ ಎಷ್ಟೋ ಆಳು ಮಕ್ಕಳು. ಒಂದು ದಿನ ಒಗೆದ ಅರಿವೆಗಳೆಲ್ಲ ಗಾಳಿಯಿಂದ ಹಾರಿಹೋದವು. ರಾಜನ ಬೆದರಿಕೆಯಿಂದ ಆಕೆಯು ಓಡಿಹೋದಳು. ಆಳುಮಕ್ಕಳೂ ಓಡಿಹೋದರು. ಅರಸನ ಭೀತಿಯು ಕಡಮೆಯಾದ ಮೇಲೆ ಪುನಃ ಅವಳು ತಿರುಗಿ ಬಂದಳು. ಓಡಿಹೋದ ಆಳುಮಕ್ಕಳೇ ನೀವು ಧೂರ್ತರೆಂದು, ಕಳೆದುಹೋದ ಅರಿವೆಗಳೇ ನಿಮ್ಮ ಮೈಮೇಲೆ ಉಂಟೆಂದು ಧೂರ್ತರಿಗೆ ಹೇಳಿಬಿಟ್ಟಳು. ಆಕೆಯ ಕಥೆಯು ಸತ್ಯವೆಂದು ಒಪ್ಪಿಕೊಂಡರೆ ಅವರೆಲ್ಲ ಆಕೆಯ ಆಳುಮಕ್ಕಳಾಗುವರು ; ಸುಳ್ಳೆಂದು ಹೇಳಹೋದರೆ ಅವರೆಲ್ಲರೂ ಮೃಷ್ಟಾನ್ನ ಭೋಜನವನ್ನು ಕೊಡಬೇಕಾಗುವದು. ಇದೊಂದು ಕಠಿಣವಾದ ಸಮಸ್ಯೆ. ಆಕೆಯು ಶ್ರೇಷ್ಠ ಧೂರ್ತಳೆಂದು ಅವರು ಒಪ್ಪಿಕೊಂಡರು; ಮತ್ತು ಆಕೆಯೇ ಮೃಷ್ಟಾನ್ನದ ಭೋಜನವನ್ನು ಕೊಡಬೇಕೆಂದು ವಿನಂತಿ ಮಾಡಿಕೊಂಡರು. ಆಕೆಯು ಒಪ್ಪಿಕೊಂಡಳು. ಮತ್ತು ಅಲ್ಲಿಯ ದೊಡ್ಡ ಶ್ರೀಮಂತನನ್ನು ಮೋಸಗೊಳಿಸಿ ತನ್ನ ಕೂಸನ್ನು ಆತನು ಕೊಂದನೆಂದು ಬೀರಿ ಅವನಿಂದ ಒಂದು ದೊಡ್ಡ ಕಾಣಿಕೆಯನ್ನು ಎತ್ತಿದಳು. ಅದರಿಂದ ಎಲ್ಲರಿಗೆ ಮೃಷ್ಟಾನ್ನ ಭೋಜನವನ್ನು ಕೊಟ್ಟಳು.

ಧೂರ್ತರು ಹೇಳಿದ ಕೆಲವು ಅಸಂಬದ್ಧ ಕಥೆಗಳು ಅಮಿತಗತಿಯು ಹೇಳಿದ ಕಥೆಗಳಂತೆಯೇ ಇರುತ್ತವೆ. ಧೂರ್ತಾಖ್ಯಾನವು ಮಾತ್ರ ಒಂದು ಕಲಾಕೃತಿಯಾಗಿದೆಯೆ ಹೊರತು ಧರ್ಮೋಪದೇಶದ ಗ್ರಂಥವಲ್ಲ. ಹರಿಭದ್ರನು ಬುದ್ಧಿವಾದಿಯಂತೆ. ಒಂದೇ ತರದ ಕಥೆಗಳನ್ನೆಲ್ಲ ಪುರಾಣಗಳಿಂದ ಸಂಗ್ರಹಿಸಿ ಅವುಗಳ ಅಸಂಬದ್ಧತೆಯನ್ನು ಸ್ಪಷ್ಟವಾಗಿ ನಿರೂಪಿಸಿರುತ್ತಾನೆ. ಪುರಾಣಗಳ ದೋಷಗಳು ಸ್ಪಷ್ಟವಾಗುತ್ತಾ ಹೋದಂತೆ ಅವುಗಳ ಮೇಲಿನ ವಿಶ್ವಾಸವು ಕಡಮೆಯಾಗುತ್ತಾ ಹೋಗುವುದು ಸ್ವಾಭಾವಿಕವು. ಅಸಂಬದ್ಧ ಕಥೆಗಳ ಮತ್ತು ಅವುಗಳನ್ನು ನಂಬುವ ಅಂಧವಿಶ್ವಾಸದ ಉಪಹಾಸಾತ್ಮಕ ವಿಡಂಬನೆಯನ್ನು ಒಳ್ಳೆಯ ಕುಶಲತೆಯಿಂದ ಹರಿಭದ್ರನು ಈ ಗ್ರಂಥದಲ್ಲಿ ಮಾಡಿರುತ್ತಾನೆ. ಭಾರತೀಯ ವಾಙ್ಮಯದಲ್ಲಿ ಸಂಪೂರ್ಣ ವಿಡಂಬನಾತ್ಮಕವಾದ ಗ್ರಂಥಗಳು ದುರ್ಲಭ. ಭಾಣ, ಪ್ರಹಸನ ಮೊದಲಾದವುಗಳಲ್ಲಿ ವಿಡಂಬನೆಯು ದೊರೆಯುತ್ತದೆ. ಕೆಲವು ಧರ್ಮ ಗ್ರಂಥಗಳಲ್ಲಿಯೂ ಅದು ಕಂಡುಬರುತ್ತದೆ; ಆದರೆ ಧೂರ್ತಾಖ್ಯಾನದಂತಹ ಅಮೌಲಿಕ ವಿಚಾರದ, ಬೌದ್ಧಿಕ ಉಪಹಾಸದ ಮತ್ತು ಶುದ್ಧ ವಿಡಂಬನಾತ್ಮಕ ಗ್ರಂಥವು ಭಾರತೀಯ ಪ್ರಾಚೀನ ವಾಙ್ಮಯದಲ್ಲಿ ಮತ್ತೊಂದಿಲ್ಲ. ಧರ್ಮದ ಅಭಿನಿವೇಶನವನ್ನು ಬಿಟ್ಟು ವಾಙ್ಮಯವನ್ನು ಓದುವವರಿಗೆ ನಮ್ಮ ಪ್ರಾಚೀನ ವಾಙ್ಮಯದಲ್ಲಿ ಇದೊಂದು ದುರ್ಲಭ ರತ್ನ. ಪ್ರಾಚೀನತೆ, ಸುಲಭ ಭಾಷೆ, ಸರಳ

ಸಂವಿಧಾನ ಇವೆಲ್ಲ ಗುಣಗಳ ಮೂಲಕ ಹರಿಭದ್ರನ ಧೂರ್ತಾಖ್ಯಾನವು ಒಳ್ಳೆಯ ಮಹತ್ವದ ಗ್ರಂಥವಾಗಿದೆ. ಇದರ ಸಾರಾನುವಾದಗಳು ಸಂಸ್ಕೃತ ಮತ್ತು ಪ್ರಾಚೀನ ಗುಜರಾಥೀ ಭಾಷೆಗಳಲ್ಲಿ ದೊರೆಯುತ್ತವೆ.

ವೃತ್ತವಿಲಾಸನ ಧರ್ಮಪರೀಕ್ಷೆಯ ಪಾರ್ಶ್ವಭೂಮಿಯು ಸ್ಪಷ್ಟವಾಗಬೇಕಾದರೆ ಅಮಿತಗತಿಯ ಧರ್ಮಪರೀಕ್ಷೆ ಮತ್ತು ಹರಿಭದ್ರನ ಧೂರ್ತಾಖ್ಯಾನ ಇವೆರಡರ ಪರಿಶೀಲನವು ಅತ್ಯವಶ್ಯವಾದದ್ದು. ಇದೇ ದೃಷ್ಟಿಯಿಂದ ಇವುಗಳ ಪರಿಚಯವನ್ನು ನಾನು ಇಲ್ಲಿ ಮಾಡಿಕೊಟ್ಟಿರುತ್ತೇನೆ.[1]

ಡಾ|| ಎ. ಎನ್. ಉಪಾಧ್ಯೆ.

[1] ಈ ವಿಷಯವನ್ನು ಸವಿಸ್ತರ ಅಭ್ಯಾಸ ಮಾಡಲಿಚ್ಛಿಸುವವರು ಕೆಳಗಿನ ನಿಂಬಂಧ ಮತ್ತು ಗ್ರಂಥಗಳನ್ನು ನೋಡಿಕೊಳ್ಳಬೇಕು.

(೧) ಜಿನರತ್ನ ಕೋಶ. H. D. Velankar ಇವರಿಂದ ಸಂಕಲಿತ, ಭಾಂಡಾರಕರ ಪ್ರಾಚ್ಯಸಂಶೋಧನ ಮಂದಿರ, ಪುಣೆ, ೧೯೪೪.

(೨) *Die Dharmaparīkṣā des Amitagati*—by N. Mironow, Leipzig, 1903.

(೩) *Hariṣeṇa's Dharmaparīkṣā in Apabhraṁśa*—by A. N. Upadhye, Annals of the Bhandarkar, R. Institute, Vol. 23, Poona, 1942.

(೪) *The Dhūrtākhyāna : A Critical Study*—by A. N. Upadhye, in the edition of Dhūrtākhyāna—by Jinavijaya, Bhāratīya Vidyā Bhavana, Bombay, 1944.

ಚಾಲುಕ್ಯರ ಆರಂಭದಲ್ಲಿ ಕಲೆಗಳು

ಅರುವತ್ತುನಾಲ್ಕು ಕಲೆಗಳಿಂದ ಆನಂದವನ್ನೇನೋ ಪಡೆಯಬಹುದಾದರೂ ಶಿಲ್ಪ, ಚಿತ್ರ, ಸಂಗೀತ ಮತ್ತು ಸಾಹಿತ್ಯ ಎಂಬ ನಾಲ್ಕು ಕಲೆಗಳಿಂದ ಸಾತ್ವಿಕಾನಂದ ವುಂಟಾಗುತ್ತದೆ. ಆದುದರಿಂದ ಇವುಗಳಿಗೆ ಲಲಿತಕಲೆಗಳೆಂದು ಹೆಸರು. ಇವುಗಳನ್ನು ಮಾತ್ರ ಇಲ್ಲಿ ವಿವೇಚಿಸಲಾಗುತ್ತಿದೆ. ಕರ್ಣಾಟಕದಲ್ಲಿ ಶಿಲ್ಪ ಮತ್ತು ಚಿತ್ರಕಲೆಗಳು ಉನ್ನತಿಗೊಂಡಷ್ಟು ಭಾರತವರ್ಷದ ಉಳಿದ ಯಾವ ಭಾಗಗಳಲ್ಲಿಯೂ ಉನ್ನತಿ ಗೊಳ್ಳಲಿಲ್ಲವೆಂದು ಹೇಳಬಹುದು. ಇದಕ್ಕೆ ಐಹೊಳೆಯ ಗುಡಿಗಳೂ, ಬಾದಾಮಿಯ ಗುಹಾಂತರ್ಗತ ದೇವಾಲಯಗಳೂ, ಅಜಂತೆಯ ಮತ್ತು ವೇರೂಳಿನ ಗುಹೆಗಳೂ, ಅವುಗಳಲ್ಲಿನ ಮೂರ್ತಿಶಿಲ್ಪಗಳೂ ವರ್ಣಚಿತ್ರಗಳೂ, ಬೇಲೂರಿನ ಹಳೇಬೀಡಿನ ಸೋಮನಾಥಪುರದ ದೇವಾಲಯಗಳೂ, ಶ್ರವಣಬೆಳಗೊಳದ ಮೂಡಬಿದರೆಯ ಕಾರ್ಕಳದ ಜಿನಬಿಂಬಗಳೂ ಸಾಕ್ಷಿಯಾಗಿವೆ. ಇವುಗಳ ವಾಸ್ತುಶಿಲ್ಪಮೂರ್ತಿಶಿಲ್ಪ ಗಳಲ್ಲಿ ಪೂರ್ವಪಶ್ಚಿಮಗಳ ಮಧುರಮಿಲನವು ಕಂಡುಬರುತ್ತಿದ್ದರೂ ಅದು ಭರತ ಖಂಡದ ಉತ್ತರದಿಂದ ಬಂದು ದ್ರಾವಿಡಶಿಲ್ಪದಲ್ಲಿ ಬೆರೆತು ಒಂದು ಮನೋಹರ ರೂಪಕ್ಕಿಳಿದಿದೆ. ಸಂಗೀತವಂತೂ ಉತ್ತರದಿಂದ ದಕ್ಷಿಣಕ್ಕೆ ಬಂದು ಅಲ್ಲಿ ಶಾಸ್ತ್ರೀಯ ವಾಗಿ ಬೆಳೆದು ಕರ್ಣಾಟಕ ಅಥವಾ ದಕ್ಷಿಣಾದಿ ಎಂಬ ಸ್ವತಂತ್ರ ಹೆಸರುಪಡೆದಿದೆ. ತಮಿಳ ಸಾಹಿತ್ಯ ಸಂಸ್ಕೃತಿಗಳು ಕನ್ನಡದ ಮೇಲೆ ತಮ್ಮ ಪ್ರಭಾವ ಬೀರಿದ್ದರೂ ಉತ್ತರದಿಂದ ದಕ್ಷಿಣಕ್ಕೆ ಆಗಾಗ ಬರುತ್ತಿದ್ದ ಕಾಶ್ಮೀರ ಪಂಡಿತರ ಸಂಪರ್ಕದಿಂದ ಮತ್ತು ಸಂಸ್ಕೃತದ ಪ್ರಭಾವದಿಂದ ರೂಪುಗೊಂಡ ಕನ್ನಡಸಾಹಿತ್ಯವು ಕಾವ್ಯ ನಿರ್ಮಿತಿಯಲ್ಲಿಯೇ ಹೆಚ್ಚಾಗಿ ಪರಿಣಮಿಸಿತು. ಇದಕ್ಕೆ ಕಾರಣವು ಗುಪ್ತಕಾಲದ ಪ್ರಭಾವ; ಗುಪ್ತರಾಜಮನೆತನದೊಡನೆ ೫ನೆಯ ಶತಮಾನದಲ್ಲಿ ಕರ್ಣಾಟಕದಲ್ಲಿ ಘನತೆಗೇರಿದ ಕದಂಬರಾಜಮನೆತನದ ಬಾಂಧವ್ಯ. ಕದಂಬ ಕಾಕುಸ್ಥವರ್ಮನ ಒಬ್ಬ ಮಗಳನ್ನು — ಅಜಿತಭಟ್ಟಾರಿಕೆಯನ್ನು — ವಿದರ್ಭದೇಶದ ಅರಸು ವಾಕಾಟಕ ನರೇಂದ್ರಸೇನನಿಗೆ ಕೊಟ್ಟಿತ್ತು. ಈ ನರೇಂದ್ರಸೇನನು ವಾಕಾಟಕ ರುದ್ರಸೇನನ ಮತ್ತು (ಇಮ್ಮಡಿ ಚಂದ್ರಗುಪ್ತನ ಮಗಳು) ಪ್ರಭಾವತಿಗುಪ್ತಳ ಮೊಮ್ಮಗನು. ಈ ಸಂದರ್ಭದಲ್ಲಿ ಕದಂಬಗುಪ್ತರ ಬಾಂಧವ್ಯ ಅಪ್ರತ್ಯಕ್ಷವಾಗಿದೆ. ಅವರೊಳಗೆ ಪ್ರತ್ಯಕ್ಷ ಬಾಂಧವ್ಯವೂ ಇದ್ದಿತು. ಕುಂತಳಾಧಿಪತಿ ಕದಂಬ ಭಗೀರಥನೆಡೆಗೆ ಇಮ್ಮಡಿ

ಚಂದ್ರಗುಪ್ತನು ತನ್ನ ರಾಯಭಾರಿಯನ್ನು ಕಳುಹಿದ್ದಂತೆ ಭೋಜನ ಶೃಂಗಾರ ಪ್ರಕಾಶಿಕೆಯಿಂದಲೂ ಹೇಮಚಂದ್ರನ ಔಚಿತ್ಯವಿಚಾರ ಚರ್ಚೆಯಿಂದಲೂ ತಿಳಿದು ಬರುತ್ತದೆ. ಈ ರಾಯಭಾರಿಯು ಬಹುತರ ಕಾಲಿದಾಸನೇ ಆಗಿರಬೇಕೆಂದು ಊಹೆ ಯಿದೆ. ಆತನ ಮಂತ್ರಾಲೋಚನೆಯ ಪರಿಣಾಮವಾಗಿ ಭಗೀರಥನು ತನ್ನ ಮೊಮ್ಮಗ ಳನ್ನು ಚಂದ್ರಗುಪ್ತನ ಮೊಮ್ಮಗ ಸ್ಕಂದಗುಪ್ತನಿಗೆ ಕೊಟ್ಟು ಮದುವೆಮಾಡಿದಂತೆ ಪ್ರೊ. ಜಿ. ಎಮ್. ಮೊರಾಯಿಸರವರು ಅಭಿಪ್ರಾಯಪಡುತ್ತಾರೆ. ಈ ಆಪ್ತತ್ವದಿಂದ ಮೂರು ಸಂಗತಿಗಳು ಸ್ಪಷ್ಟವಾಗುತ್ತವೆ:

೧. ಗುಪ್ತಚಕ್ರವರ್ತಿಗಳ ಮನೆತನದ ಕೂಡ ಆಪ್ತತ್ವ ಬೆಳೆಯಿಸಬೇಕಾದರೆ ಕದಂಬರು ಅವರ ಸರಿದೊರೆಯಾಗುವಷ್ಟು ಘನತೆಗೇರಿದ್ದರು; ಮತ್ತು ಅವರ ಕೂಡ ಆಪ್ತತ್ವ ಬೆಳೆಯಿಸುವುದರಿಂದ ತಮಗೆ ಭೂಷಣ, ಒಂದು ರೀತಿಯಿಂದ ಸಹಾಯ ಎಂಬ ಅಭಿಪ್ರಾಯ ಗುಪ್ತಚಕ್ರವರ್ತಿಯ ಮನಸ್ಸಿನಲ್ಲಿ ನೆಲಸಿ ನಿಂತಿತ್ತು.

೨. ವಾಕಾಟಕರು ಅಜಂತೆಯ ಮತ್ತು ವೇರೂಳಿನ ಗವಿಗಳನ್ನು ಕೊರೆಯಿಸಿ ಅವುಗಳ ಗೋಡೆಗಳ ಮತ್ತು ಮೇಲ್ಕಟ್ಟುಗಳ ಮೇಲೆ ವರ್ಣಚಿತ್ರಗಳನ್ನು ಬರೆಯಿ ಸಿದ್ದರು. ಆ ಲಲಿತಕಲೆಗಳ ಪರಿಣಾಮವು ಕರ್ಣಾಟಕದೊಳಗಿನ ಅರಸುಮನೆತನದವರ ಮತ್ತು ಸಿರಿವಂತರ ಮನಸಿನ ಮೇಲೆ ಆಗಿರಲೇಬೇಕು.

೩. ಕಾಲಿದಾಸನಂಥ ಅದ್ವಿತೀಯ ಕವಿ ರಾಯಭಾರಿಯಾಗಿ ಕುಂತಳದೇಶಕ್ಕೆ ಬಂದ ಮೇಲೆ ಕನ್ನಡಿಗರ ಮೇಲೆ ಆತನ ಕಾವ್ಯಗಳ, ನಾಟಕಗಳ ಮತ್ತು ಸಂಸ್ಕೃತ ಭಾಷೆಯ ಪರಿಣಾಮವಾಗದೆ ಇರುತ್ತದೆಯೇ? ಆತನ ಶಾಕುಂತಲನಾಟಕವನ್ನು ತಲೆಯ ಮೇಲಿಟ್ಟುಕೊಂಡು ಕುಣಿಯುತ್ತಿರುವ ಜನರು ಹಿಂದುಸ್ತಾನದಲ್ಲಿ ಅಷ್ಟೇ ಏಕೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಇದ್ದಾರೆ.

ಈ ರೀತಿ ಪ್ರಭಾವಬೀರಿದ ಆ ಗುಪ್ತವಾಕಾಟಕರ ಸಂಸ್ಕೃತಿಯನ್ನು ಕೆಲ ಮಟ್ಟಿಗೆ ತಿಳಿದುಕೊಂಡರೆ ಅದು ಕರ್ಣಾಟಕದ ಲಲಿತಕಲೆಗಳಿಗೆ ತಳಹದಿಯಾಗಿ ನಿಂತುದು ಸ್ಫುಟವಾಗುತ್ತದೆ.

ಗುಪ್ತವಂಶದ ಮೂಲಪುರುಷನು ಮಗಧರಾಜ ಚಂದ್ರಗುಪ್ತನು. ಪಾಟಲಿಪುತ್ರ ದಲ್ಲಿ ಆಳುತ್ತಿದ್ದ ವೈಶಾಲಿಯ ಲಿಚ್ಛವಿ-ರಾಜಮನೆತನದ ಕುಮಾರದೇವಿಯೆಂಬ ರಾಜ ಪುತ್ರಿಯನ್ನು ಮದುವೆಯಾಗಿದ್ದನು. ಈ ಆಪ್ತತ್ವದ ಮೂಲಕ ಚಂದ್ರಗುಪ್ತನಿಗೆ ಲಿಚ್ಛವಿ ಪಂಗಡದವರ ಸಹಾಯವಾಗಿ ತನ್ನ ರಾಜ್ಯವನ್ನು ಅಯೋಧ್ಯೆಯವರೆಗೆ ವಿಸ್ತಾರಪಡಿಸಿಕೊಳ್ಳಲು ಅನುಕೂಲವಾಯಿತು. ಅದರ ದ್ಯೋತಕವಾಗಿ ಆತನು ತನ್ನ ನಾಣ್ಯಗಳ ಮೇಲೆ ತನ್ನ ಮತ್ತು ಕುಮಾರದೇವಿಯ ಹೆಸರುಗಳನ್ನು ಮುದ್ರಿಸಿದನು.

ತನ್ನ ಸಾಮರ್ಥ್ಯದಿಂದ ಸಾಕಷ್ಟು ಪ್ರಸಿದ್ಧಿಪಡೆದುದರಿಂದ ಚಂದ್ರಗುಪ್ತನು ಗುಪ್ತ ಶಕವನ್ನು ಆರಂಭಿಸಿದನು. ಗುಪ್ತಶಕವು ಕ್ರಿ.ಶ. ೩೨೦ ಫೆಬ್ರುವರಿ ೨೬ನೆಯ ತಾರೀಖಿನಿಂದ ಆರಂಭವಾಯಿತು. ಇವನ ಮಗನೇ ಗುಪ್ತವಂಶದಲ್ಲಿ ಪ್ರಸಿದ್ಧನಾದ ಸಮುದ್ರಗುಪ್ತನು. ಈತನು ಉತ್ತರಾಪಥವನ್ನೆಲ್ಲ ಪಾದಾಕ್ರಾಂತಗೊಳಿಸಿ ದಕ್ಷಿಣಕ್ಕೆ ದಂಡೆತ್ತಿಬಂದು ಕಂಚಿಯ ಪಲ್ಲವರನ್ನು ಮದ್ರಾಸದ ಹತ್ತಿರ ಎದುರಿಸಿದನು. ಆ ತರುವಾಯ ಪಶ್ಚಿಮಕ್ಕೆ ತೆರಳಿ ಖಾನದೇಶದ ಮಾರ್ಗವಾಗಿ ತನ್ನ ದೇಶಕ್ಕೆ ಹೋದನು. ದಕ್ಷಿಣದ ರಾಜ್ಯವನ್ನು ವಶಪಡಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ ಆತನಲ್ಲಿಲ್ಲದಿದ್ದರೂ ತಾನು ಗೆದ್ದ ಅರಸರಿಂದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿ ಲೆಕ್ಕ ವಿಲ್ಲದಷ್ಟು ಹಣವನ್ನು ತನ್ನ ರಾಜಧಾನಿಗೆ ಸಾಗಿಸಿಕೊಂಡು ಹೋದನು. ಹೀಗೆ ದಿಗ್ವಿಜಯವನ್ನು ಮುಗಿಸಿ ಅಶ್ವಮೇಧವನ್ನು ಮಾಡಿ ತನ್ನ ಚಕ್ರವರ್ತಿತ್ವವನ್ನು ಸ್ಥಾಪಿಸಿದನು.

ಸಮುದ್ರಗುಪ್ತನು ಗುಣಿಯೂ ಗುಣಿಗಣಾಶ್ರಯನೂ ಆಗಿದ್ದನು. ತಾನು ಸಂಗೀತಪ್ರವೀಣನಾಗಿದ್ದುದನ್ನು ತನ್ನ ನಾಣ್ಯಗಳಲ್ಲಿ ಆಸನದ ಮೇಲೆ ಕುಳಿತುಕೊಂಡು ವೀಣೆ ಬಾರಿಸುತ್ತಿದ್ದಂತೆ ಮುದ್ರಿಸಿದ್ದಾನೆ. ಆತನು ಕವಿಯೂ ಗ್ರಂಥಕಾರನೂ ಆಗಿದ್ದುದರಿಂದ ಸಾಹಿತಿಗಳಿಗೆ ಆಶ್ರಯವಿತ್ತಿದ್ದನು. ಕವಿಕುಲತಿಲಕ ಕಾಲಿದಾಸನು ಈತನ ಆಸ್ಥಾನ ಕವಿಯೂ ಸಂಧಿವಿಗ್ರಹಿಯೂ ಆಗಿದ್ದನು. ಆತನು ರಾಯಭಾರಿಯಾಗಿ ಕದಂಬ ಕಾಕುಸ್ಥವರ್ಮನಲ್ಲಿಗೆ ಹೋದ ಸಂಗತಿ ಮೇಲೆ ಉಲ್ಲೇಖಿಸಲಾಗಿದೆ. ಸಮುದ್ರಗುಪ್ತನು ಭಾಗವತಧರ್ಮಿಯನಾಗಿದ್ದರೂ ಧರ್ಮಸಹಿಷ್ಣುವಾಗಿದ್ದನು. ಪ್ರಸಿದ್ಧ ವಸುಬಂಧುವೆಂಬ ಬೌದ್ಧ ಗ್ರಂಥಕಾರನು ಈತನ ಬಾಲಮಿತ್ರನಾಗಿದ್ದನು.

ಸಮುದ್ರಗುಪ್ತನ ತರುವಾಯ ಆತನ ಮಗ ಇಮ್ಮಡಿ ಚಂದ್ರಗುಪ್ತನು ಚಕ್ರವರ್ತಿಯಾದನು. ಕೆಲಕಾಲದ ತರುವಾಯ ಇವನು ವಿಕ್ರಮಾದಿತ್ಯನೆಂಬ ಬಿರುದನ್ನು ಧರಿಸಿದನು. ಪಶ್ಚಿಮ ಹಿಂದುಸ್ತಾನದಲ್ಲಿ ಆಳುತ್ತಿದ್ದ ಕ್ಷತ್ರಪರನ್ನು ನಿರ್ಮೂಲಗೊಳಿಸಿದಾತನು ಇವನೇ. ಇವನ ತರುವಾಯ ಆಳಿದವರು ಕುಮಾರಗುಪ್ತ ಸ್ಕಂಧ ಗುಪ್ತರು. ಇಲ್ಲಿಗೆ ಗುಪ್ತರ ದರ್ಪ ಕಡಿಮೆಯಾಗಿ ಸಾಮಂತರಾಗಿ ಅವರು ಒಂದೆಡೆಯಲ್ಲಿ ಆಳುತ್ತಿದ್ದರೂ ಸಮಯವರಿತು ತಲೆಯೆತ್ತುವಷ್ಟು ಸಾಮರ್ಥ್ಯ ಅವರಲ್ಲಿ ಉಳಿಯಲಿಲ್ಲ. ಆದರೂ ಸುಮಾರು ೧೫೦ ವರ್ಷಗಳ ವರೆಗೆ ಘನತೆಯಿಂದ ಆಳಿದ ಈ ಅರಸುಮನೆತನದ ಕಾಲವು ಹಿಂದುಸ್ತಾನದ ಸಂಸ್ಕೃತಿಯ ಸಂದರ್ಭದಲ್ಲಿ ಸುವರ್ಣ ಯುಗವಾಯಿತು. 'The Gupta period is in the annals of classical India almost what the Periclean age is in the history of Greece'

ಎಂದು ಒಬ್ಬ ಐರೋಪ್ಯ ಪಂಡಿತರು ಪಟ್ಟ ಅಭಿಪ್ರಾಯ ಯಥಾರ್ಥವಾಗಿದೆ. ವಿನಯಪಿಟಕವನ್ನು ಅಭ್ಯಸಿಸಬೇಕೆಂದು ಬಂದ ಚೀನ ಯಾತ್ರಿಕ ಫಾಹಿಯಾನನೂ ಇದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾನೆ. ಆತನ ಮೇರೆಗೆ ಗುಪ್ತರಾಜ್ಯದಲ್ಲಿ ಕ್ರೂರತನವಿರಲಿಲ್ಲ; ಅದರಿಂದ ಹಿಂಸೆಯಿರಲಿಲ್ಲ. ಕೌಟಿಲ್ಯನು ಹೇಳಿದ ಚಾರಸಂಸ್ಥೆಗೆ ಆ ರಾಜ್ಯದಲ್ಲಿ ಆಸ್ಪದವೇ ಇರಲಿಲ್ಲ. ಅದೊಂದು ರಾಮರಾಜ್ಯವು. ಗುಪ್ತರ ಕಾಲದಲ್ಲಿ ಸಾಹಿತ್ಯಕಲೆ ವಿಜ್ಞಾನಗಳು ಅನೇಕಮುಖವಾಗಿ ಬೆಳೆದುಬಂದುವು. ಉಪದ್ರವಗಳಿಲ್ಲದೆ, ಒತ್ತಾಯಗಳಿಲ್ಲದೆ, ದಬ್ಬಾಳಿಕೆಯಿಲ್ಲದೆ ಧರ್ಮಗಳಲ್ಲಿ ಬದಲಾವಣೆಗಳು ಕ್ರಮೇಣ ನಡೆದು ವೈದಿಕಧರ್ಮವು ತಲೆಯೆತ್ತಿತು, ಬೌದ್ಧದರ್ಮವು ಹಿಮ್ಮೆಟ್ಟಿತು. ಅಶೋಕನ ಕಾಲದಲ್ಲಿ ಬೌದ್ಧಧರ್ಮವು ಪ್ರಬಲವಾಗಿದ್ದರೂ ಜೈನವೈದಿಕಮತಗಳು ನಾಮಶೇಷ ವಾಗಿರಲಿಲ್ಲ. ಗುಪ್ತಕಾಲದಲ್ಲಿ ಅರಸರು ಭಾಗವತ ಮತವನ್ನನುಸರಿಸಿ ವಿಷ್ಣೂಪಾಸಕ ರಾಗಿದ್ದರೂ ಜೈನಬೌದ್ಧರು ತಮ್ಮತಮ್ಮ ಮತಗಳನ್ನನುಸರಿಸಲು ಯಾವ ಆತಂಕವೂ ಒದಗಿರಲಿಲ್ಲ. ಅದೇ ಚೋಳರು ಅಸಹಿಷ್ಣುಗಳಾಗಿದ್ದುದರಿಂದ ಅವರ ರಾಜ್ಯದಲ್ಲಿ ಜೈನಬೌದ್ಧಮತಗಳು ಉಚ್ಚಾಟನಗೊಂಡುವು; ರಾಮಾನುಜಾಚಾರ್ಯರು ಆ ಪ್ರಾಂತವನ್ನೇ ಬಿಟ್ಟು ಕರ್ಣಾಟಕದಲ್ಲಿ ಹೊಯ್ಸಳರನ್ನು ಆಶ್ರಯಿಸಬೇಕಾಯಿತು. ಕರ್ಣಾಟಕದಲ್ಲಿಯೂ ಧರ್ಮಸಹಿಷ್ಣುತೆ ಕದಂಬರ ಕಾಲದಿಂದ ಕಂಡುಬಂದಿದೆ. ಕನ್ನಡದೇಶದ ಅರಸರು ತಾವು ಎಲ್ಲ ಮತೀಯರಿಗೆ ತಮ್ಮವರೆನ್ನುವ ಭಾವನೆಯುಂಟಾಗು ವಂತೆ ಆಚರಣೆಯನ್ನಿಟ್ಟುಕೊಂಡಿದ್ದಾರೆ. ಇದೊಂದು ಅವರ ನೈತಿಕಬಲವು, ಗೆಲವು. ಅವರು ನೆಂಟತನದಲ್ಲಿ ಮತವಿಚಾರಮಾಡುವಗೊಡವೆಗೆ ಹೋಗಿಲ್ಲ. ಶ್ರೀ ಕೃಷ್ಣನು ಜಾಂಬವಂತನ ಮಗಳನ್ನು ಮದುವೆಯಾಗಿರವುದನ್ನು ಅವರು ಮಾದರಿಯಾಗಿ ಇಟ್ಟುಕೊಂಡಿರಬಹುದೆಂದು ಊಹಿಸೋಣವೇ ಎಂಬುದೊಂದು ವಿಚಾರ ಸೂಕ್ಷ್ಮ ವಾಗಿ ಹೊಳೆದುಹೋಗುತ್ತದೆ. ಅದು ಹೇಗೆ ಇದ್ದರೂ ಜೈನ ಭಾಗವತ ಶೈವರಾಜರು ತಮ್ಮತಮ್ಮೊಳಗೆ ಬಾಂಧವ್ಯ ಕಲ್ಪಿಸಿಕೊಂಡಿದ್ದಾರೆ. ದಾನದತ್ತಿಗಳಲ್ಲಿಯೂ ಮತ ಪಕ್ಷಪಾತವಿಲ್ಲ. ಇದನ್ನು ಅವರು ಗುಪ್ತರಿಂದ ಕಲಿತರೋ ಅಥವಾ ಅದು ಅವರ ಸಹಜಗುಣವೋ ಎಂಬುದನ್ನು ಈಗ ಹೇಳಲು ಬರುವಂತಿಲ್ಲ.

ಸಾಹಿತ್ಯ—ಮಹಾಕವಿ ಕಾಲಿದಾಸನು ತನ್ನ ಕಾವ್ಯನಾಟಕಗಳನ್ನು ಈ ಕಾಲದಲ್ಲಿಯೇ ಬರೆದನು. ವಿಶಾಖದತ್ತನ ಮುದ್ರಾರಾಕ್ಷಸ ನಾಟಕ, ಶೂದ್ರಕ ಕವಿಯ ಮೃಚ್ಛಕಟಿಕ, ವಾಯುಪುರಾಣ ಮುಂತಾದ ಉದ್ಗ್ರಂಥಗಳು ಈ ಕಾಲದವು.

ವಿಜ್ಞಾನದ ಬೆಳವಣಿಗೆಗೂ ಕಡಿಮೆಯಿರಲಿಲ್ಲ. ಆರ್ಯಭಟ್ಟನು ಗಣಿತ ಮತ್ತು ಖಗೋಲಶಾಸ್ತ್ರಗಳನ್ನು ಕಲಿಸುವಲ್ಲಿ ಹೆಸರುವಾಸಿಯಾಗಿದ್ದನು. ವರಾಹಮಿಹಿರನು

ಭಾರತೀಯ ಜ್ಯೋತಿಷಗ್ರಂಥಗಳನ್ನು ತಿದ್ದಿ ಸಂಗ್ರಹಿಸಿ ಪಂಚಸಿದ್ಧಾಂತಿಕಾ ಎಂಬ ಗ್ರಂಥವನ್ನು ರಚಿಸಿದುದಲ್ಲದೆ ಬೃಹತ್ಸಂಹಿತೆ—ಬೃಹಜ್ಜಾತಕಗಳೆಂಬ ಹೊಸ ಗ್ರಂಥಗಳನ್ನು ಬೆಳಕಿಗೆ ತಂದನು. ಇವುಗಳನ್ನು ಮಿಕ್ಕು ಶೈವವೈಷ್ಣವ ಮತಗಳನ್ನು ಪುಷ್ಟೀಕರಿಸುವ ಗ್ರಂಥಗಳೂ ನಾಟ್ಯವಿದ್ಯೆ ಶಿಲ್ಪವಿದ್ಯೆ ಮುಂತಾದ ಕಲೆಗಳನ್ನು ಶಾಸ್ತ್ರೀಯವಾಗಿ ವಿವೇಚಿಸಿದ ಗ್ರಂಥಗಳೂ ರಚಿತವಾದುವು.

ಗುಪ್ತಕಾಲದ ಸಂಸ್ಕೃತಸಾಹಿತ್ಯದ ಪರಿಣಾಮವು ಚಾಲುಕ್ಯರ ಕಾಲದ ಕನ್ನಡ ಸಾಹಿತ್ಯದ ಮೇಲೆ ಆಗಿದೆಯೋ ಇಲ್ಲವೋ ಎಂಬುದನ್ನು ಹೇಳಲು ಬರುವಂತಿಲ್ಲದಿದ್ದರೂ ಸಂಸ್ಕೃತಛಂದಶ್ಶಾಸ್ತ್ರದ ಪರಿಣಾಮ ಮಾತ್ರ ಕನ್ನಡದ ಮೇಲಾದುದು ಶ್ರವಣ ಬೆಳಗೊಳದ ಆ ಕಾಲದ ಶಾಸನಗಳಿಂದ ತಿಳಿದುಬರುತ್ತದೆ. ಆ ಕಾಲದ ಗ್ರಂಥಗಳು ದೊರೆತಿಲ್ಲ. ಕವಿರಾಜಮಾರ್ಗದಲ್ಲಿ ಸೂಚಿತವಾದ ಗದ್ಯಪದ್ಯ ಗ್ರಂಥಕಾರರ ಗ್ರಂಥಗಳ ಹೆಸರುಗಳು ಸಹ ನಮಗೆ ತಿಳಿದಿಲ್ಲ. ಆ ಗ್ರಂಥದಲ್ಲಿ ಬೆದಂಡೆ ಚೆತ್ತಾಣಗಬ್ಬಗಳ ಲಕ್ಷಣಗಳು ಹೇಳಲಾಗಿವೆ. ಅವು ಕನ್ನಡಸಾಹಿತ್ಯದಲ್ಲಿ ಒಡೆದು ಕಾಣುತ್ತಿರಬೇಕು. ಕನ್ನಡನಾಡವರ ಪೆರ್ಮೆಯನ್ನು ಅಲ್ಲಿ ಹೀಗೆ ಹೇಳಲಾಗಿದೆ :

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್

—ಕ. ರಾ. ಮಾ. ೧-೩೮.

ಈ ಮಾತು ಅತಿಶಯೋಕ್ತಿಯದಲ್ಲವೆಂದು ಹೇಳಬಹುದು. ಏಕೆಂದರೆ ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ ಹೇಳಿದ ಅಕ್ಕರ, ಅಕ್ಕರಿಕೆ, ಮದನವತಿ, ಏಳೆ, ಚಿತ್ರ, ಚಿತ್ರಲತೆ ಮುಂತಾದ ಕನ್ನಡದ ವೃತ್ತಗಳು ೧೦ನೆಯ ಶತಮಾನದಿಂದೀಚೆ ದೊರೆಯು ವುದಿಲ್ಲ. ಇವುಗಳನ್ನೂ ತ್ರಿಪದಿ, ಷಟ್ಪದಿ ಮುಂತಾದ ವೃತ್ತಗಳನ್ನೂ ಬಳಸಿಕೊಂಡು ಆ ಕಾಲದಲ್ಲಿ ಕನ್ನಡಿಗರು ತಮ್ಮ ಗ್ರಂಥಗಳನ್ನು ರಚಿಸಿರಬೇಕೆಂದು ತೋರುತ್ತದೆ. ಸಂಗೀತರತ್ನಾಕರಕಾರನು ಏಳೆಯನ್ನು ವಿವರಿಸುವಾಗ ಕರ್ಣಾಟಕ ಏಳೆಯನ್ನು ವಿಶೇಷವಾಗಿ ಹೊಗಳಿದ್ದಾನೆ. ಈ ನಮ್ಮ ಊಹೆಗೆ ಉಪಷ್ಟಂಭಕವಾಗಿ ಎಂಟನೆಯ ಶತಮಾನದ ಆರಂಭದಲ್ಲಿ ರಚಿತವಾದ ಬಾದಾಮಿಯ ಶಾಸನದಲ್ಲಿ ತ್ರಿಪದಿಗಳು ದೊರೆತಿವೆ. ಅವುಗಳಲ್ಲಿ ಎರಡನ್ನು ಉದಾಹರಿಸಬಹುದು :

ಸಾಧುಗೆ ಸಾಧು ಮಾಧುರ್ಯ್ಯಂಗೆ ಮಾಧುರ್ಯ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ.

ಒಳ್ಳಿತ್ತ ಕೆಯ್ದೊರಾರ್ ಪೊಲ್ಲದುಮದಱಿಂತೆ
ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ
ಮಿಲ್ಲಿ ಸಂಧಿಕ್ಕುಮುದು ಬಂದು.

ತ್ರಿಪದಿ ಸಂಗೀತಕ್ಕೆ ಸೇರಿದ ವಿಷಯವಾಗಿರುವುದರಿಂದ ಇದರಲ್ಲಿನ ಮಾತ್ರಾಗಣಗಳು ಎಲ್ಲ ಕಡೆಯಲ್ಲಿ ಒಂದೇ ಸಮನಾಗಿರಬೇಕೆಂಬ ನಿಯಮವಿಲ್ಲ. ಮಾತ್ರೆಗಳು ಕಡಿಮೆಯಿದ್ದಲ್ಲಿ ತುಸು ಎಳೆದೂ ಹೆಚ್ಚಿದ್ದಲ್ಲಿ ತುಸು ಸಂಕುಚಿತಗೊಳಿಸಿಯೂ ಹಾಡುವ ರೂಢಿಯಿದೆ. ನಾಗವರ್ಮನು ಹೇಳಿದ ಲಕ್ಷಣಪದ್ಯವೇ ಇದಕ್ಕೆ ಸಾಕ್ಷಿಯಾಗಿದೆ.

ಕಾಕುಸ್ಥವರ್ಮನ ಹಲ್ಮಿಡಿಶಾಸನವು ಕನ್ನಡಗದ್ಯದಲ್ಲಿದ್ದರೂ ಅದರ ಭಾಷೆಯ ಮೇಲೆ ಆದ ಸಂಸ್ಕೃತದ ಪರಿಣಾಮವು ಸ್ಫುಟವಾಗಿದೆ. ಅದರ ಆರಂಭದ ಶ್ಲೋಕವೇ ಸಂಸ್ಕೃತದಲ್ಲಿದೆ. ಆದುದರಿಂದ ಈಗ ದೊರೆತಿರುವ ಪುರಾತನ ಶಾಸನಸಾಹಿತ್ಯದ ಮೇಲೆ ಉಂಟಾದ ಸಂಸ್ಕೃತದ ಪರಿಣಾಮವು ಗುಪ್ತಸಾಹಿತ್ಯದ ಪ್ರಭಾವವೆಂದು ಊಹಿಸಿದರೆ ತಪ್ಪಾಗದೆಂದು ತೋರುತ್ತದೆ.

ಶಿಲ್ಪಕಲೆ—ಈ ಕಾಲದಲ್ಲಿ ಪ್ರತಿಯೊಂದು ಮತದ ಗುಡಿಗಳು ಕಟ್ಟಲಾದುವು ; ಮೂರ್ತಿಗಳು ಸ್ಥಾಪಿತವಾದುವು. ಇವುಗಳಲ್ಲಿ ಮುಂದಿನ ಕಾಲದ ಶಿಲ್ಪದ ಪೂರ್ವ ಚಿಹ್ನಗಳು ಒಡಮೂಡಿವೆ. ಮೂರ್ತಿಶಿಲ್ಪ—ನೃತ್ಯಕಲೆಗಳು ಬೆಳೆದು ಶಾಸ್ತ್ರಬದ್ಧವಾದುವು. ಪ್ರಾಚೀನವಾದ ಒರಗುದೊರಗು ರೂಪದ ಸ್ಥಳವನ್ನು ಸೌಂದರ್ಯವು ವ್ಯಾಪಿಸಿತು. ಆ ಸೌಂದರ್ಯಕ್ಕೆ ನಯ, ಗಾಡಿ, ಭಾವಾವಿಷ್ಕರಣ, ಮುಖಾವಿರ್ಭಾವ, ಹಸ್ತಮುದ್ರೆ, ಪದವಿನ್ಯಾಸ, ಅಂಗವಿಕ್ಷೇಪ ಮುಂತಾದ ಅಭಿನಯ ಲಕ್ಷಣಗಳು ಆವಶ್ಯಕವಾದುವು. ಆ ಹಾವಭಾವವಿಲಾಸವಿಭ್ರಮಗಳು ತಾತ್ವಿಕ ಶ್ರದ್ಧೆಯ ಮತ್ತು ಮೂರ್ತಿಶಿಲ್ಪಗಳ ಭಾಷೆಯಾಯಿತು. ಪೂರ್ವದ ಶಿಲ್ಪಕಲೆಗೆ ಚಮತ್ಕೃತಿಯಿಲ್ಲದ ನಿರ್ವ್ಯಾಜಸ್ವಾಭಾವಿಕತೆ ಆಲಂಬನವಾಗಿದ್ದಿತು ; ಅದೇ ಕಲಾಲತೆ ಗುಪ್ತಕಾಲದಲ್ಲಿ ನಯುಸಮನೋಹರವಾಗಿ ಬೆಳೆದು ಪುಷ್ಪಿಕವಾಗಿ ಇಡಿಯ ಹಿಂದುಸ್ಥಾನದಲ್ಲಿ ತನ್ನ ಸುಗಂಧವನ್ನು ಬೀರಹತ್ತಿತು.

ಮಹಮ್ಮದೀಯರ ಡೊಣ್ಣೆಯ ಏಟಿಗೆ ಸಿಕ್ಕು ಗುಪ್ತಕಾಲದ ಎಷ್ಟೋ ಗುಡಿಗಳು ನಾಶವಾಗಿ ಹೋಗಿದ್ದರೂ ದೂರದೂರ ಸಿಡಿದು ನಿಂತ ಕೆಲವು ಗುಡಿಗಳನ್ನು ಈಗಲೂ ಕಾಣಬಹುದು. ಭಿತರಗಾವದ ಇಟ್ಟಿಗೆಯಿಂದ ಕಟ್ಟಿದ ಗುಡಿಯಲ್ಲಿ ಗೋಡೆಗಳ ಮೇಲೆ ಮಣ್ಣಿನ ಶೈವಪ್ರತಿಮೆಗಳ ಸಾಲುಗಳಿವೆ. ಉದಯಗಿರಿಯ (ಭೋಪಾಳ ಸಂಸ್ಥಾನ) ಗವಿಯೊಳಗಿನ ವರಾಹಾವತಾರ, ಪಠಾರಿಯಲ್ಲಿನ ಕೃಷ್ಣಜನ್ಮಶಿಲ್ಪ, ದೇವಗಡದ (ಝಾಂಸಿ ಜಿಲ್ಹೆ) ಗುಡಿಯೊಳಗಿನ ಬ್ರಹ್ಮಜನ್ಮ, ಗಜೇಂದ್ರಮೋಕ್ಷ,

ಮುಂತಾದ ಶಿಲ್ಪಗಳು ತಮ್ಮ ಸೌಂದರ್ಯದಿಂದ ಪ್ರೇಕ್ಷಕರನ್ನು ಚಕಿತಗೊಳಿಸುತ್ತವೆ. ಇಲ್ಲಿ ಆ ಆಶಿಲ್ಪಿಗಳು ತೋರಿಸಿದ ಜಾಣ್ಮೆ, ಕೈವಾಡದ ಮೇಲ್ಮೆ, ದೀರ್ಘೋದ್ಯೋಗದಲ್ಲಿನ ತಾಳ್ಮೆ, ಸೂಕ್ಷ್ಮದೃಷ್ಟಿಯ ಬಲ್ಮೆ ಹೊಗಳತಕ್ಕವುಗಳು. ಸಾರಾನಾಥದ ಸ್ತೂಪ ಮತ್ತು ಚೌಕಟ್ಟಿನ ಹಣೆಪಟ್ಟಿಗಳಲ್ಲಿ ಶಿಲ್ಪಿಗಳು ತಮ್ಮ ಕಲಾವೈಭವವನ್ನು ಸೂರೆಮಾಡಿದ್ದಾರೆ. ಅಜಂತೆ ವೇರೂಳ ಗುಹಾಂತರ್ಗತ ದೇವಾಲಯಗಳು ಇದೇ ಕಾಲದಲ್ಲಿ ವಾಕಾಟಕರಿಂದ ಕೊರೆಯಿಸಲಾದುವು. ಕಲ್ಲಿನ ಕೆತ್ತನೆಯ ಕೆಲಸದಂತೆ ಲೋಹವನ್ನು ಎರಕ-ಹೊಯ್ದು ಮೂರ್ತಿ ಮಾಡುವಲ್ಲಿಯೂ ಆ ಕಾಲದ ಶಿಲ್ಪಿಗಳು ಗಟ್ಟಿಗರಾಗಿದ್ದರು. ಧ್ಯಾನಸ್ಥನಾಗಿ ಕುಳಿತಿರುವ ಏಳುವರೆ ಅಡಿ ಎತ್ತರದ ತಾಮ್ರದಿಂದ ಎರಕ-ಹೊಯ್ದು ಮಾಡಿದ ಇದೇ ಕಾಲದ ಬುದ್ಧ ಮೂರ್ತಿ ಈಗ ಬರ್ಮಿಂಗ್ಹ್ಯಾಮ ವಸ್ತು ಸಂಗ್ರಹಾಲಯದಲ್ಲಿದೆ. ಎಂಬತ್ತು ಅಡಿ ಎತ್ತರದ ಇನ್ನೊಂದು ಬುದ್ಧ ಮೂರ್ತಿ ನಾಲಂದ ವಿಹಾರದೊಳಗೆ ಇಡಲ್ಪಟ್ಟಿತ್ತು. ದಿಲ್ಲಿಯಲ್ಲಿ ಈಗಲೂ ನಿಂತಿರುವ ಕಬ್ಬಿಣದ ಕಂಬವು ಇಮ್ಮಡಿ ಚಂದ್ರಗುಪ್ತನ ನೆನಪಿಗಾಗಿ ನೆಡಲಾಯಿತು. ಹೀಗೆ ಶಿಲ್ಪ ಕಲೆ ಬೆಳವಣಿಗೆ ಹೊಂದಬೇಕಾದರೆ ಆಗಿನ ಶಿಲ್ಪಿಗಳು ಪೂರ್ವದಲ್ಲಿ ಚೀನ ದೇಶದ ಪಶ್ಚಿಮದಲ್ಲಿ ರೋಮ ದೇಶದ ಕೂಡ ಬಳಕೆಮಾಡಿಕೊಂಡು ಆ ಜನಾಂಗಗಳ ಕಲೆಗಳ ತಿರುಳನ್ನು ತಮ್ಮ ಕಲೆಯಲ್ಲಿ ಬೆರಸಿಕೊಂಡರು ; ತಮ್ಮಲ್ಲಿಲ್ಲದುದನ್ನು ಸ್ವೀಕರಿಸಿದರು ; ಇದ್ದುದನ್ನು ವಿಕಾಸಗೊಳಿಸಿದರು. ಆದುದರಿಂದ ಪರಕೀಯ ಸಂಸ್ಕೃತಿ ಸಂಬಂಧದಿಂದ ಈ ಕಾಲದಲ್ಲಿ ಕಲೆಗಳು ಮುಂದುವರಿದುವು.

ಗುಪ್ತ ಶಿಲ್ಪದ ಪ್ರಭಾವವು ದಕ್ಷಿಣದಲ್ಲಿ ಕಂಡುಬರುತ್ತದೆ. ಐಹೊಳೆಯ ದುರ್ಗಾದೇವಿಯ ಗುಡಿಯು ಚೈತ್ಯಾಲಯದಂತಿದೆ. ಅದರ ಮಾಳಿಗೆ ಅರ್ಧವರ್ತುಲಾಕಾರದ್ದು. ಸ್ತೂಪದ ಸ್ಥಳದಲ್ಲಿ ಗರ್ಭಗೃಹವಿದೆ. ಈ ಗುಡಿಯ ಶಿಲ್ಪಾಲಂಕಾರದಲ್ಲಿ ನಟೇಶ್ವರನ ಪ್ರತಿಮೆಯಿದೆ. ಲಾಡಖಾನ, ದುರ್ಗೆ, ಮೇಗೂಟಿ, ಹುಚ್ಚಿಮಲ್ಲಿ ಮುಂತಾದ ಐಹೊಳೆಯ ಗುಡಿಗಳ ಮೇಲ್ಕಟ್ಟಿನಲ್ಲಿ ಕಂಡರಿಸಿದ ವೈಷ್ಣವ ಪ್ರತಿಮಾವ್ಯೂಹಗಳೂ ವಿನ್ಯಾಸಗಳೂ ಬಾದಾಮಿಯ ಗವಿಗಳಲ್ಲಿನಂತೆ ಅಂದವಾಗಿವೆ. ಬಾದಾಮಿಯ ಗವಿಗಳಲ್ಲಿ ಮೊದಲನೆಯದು ಶೈವ ಮತದ, ಎರಡನೆಯ ಮತ್ತು ಮೂರನೆಯವುಗಳು ವೈಷ್ಣವ ಮತದ ಮತ್ತು ನಾಲ್ಕನೆಯದು ಜೈನ ಮತದ ಕುರುಹುಗಳಾಗಿವೆ. ಅಜಂತೆಯ ೧೬ ನೆಯ, ೧೭ ನೆಯ ಮತ್ತು ೧೯ ನೆಯ ಗವಿಗಗಳು ಇದೇ ಕಾಲದವು. ೧೯ ನೆಯ ಗವಿಯ ಮುಂಭಾಗವು ಬಹು ಅಂದವಾದ ಕೆತ್ತನೆಯ ಕೆಲಸದಿಂದ ಮತ್ತು ಅನೇಕ ಬುದ್ಧ ಮೂರ್ತಿಗಳಿಂದ ಅಲಂಕೃತವಾಗಿದೆ. ಇದಕ್ಕೆ ಸಮಕಾಲೀನವಾದ ವೇರೂಳಿನ ವಿಶ್ವಕರ್ಮ ಗವಿಯು ಇದೇ ಮಾದರಿಯದು. ನಾಲಂದ ವಿಹಾರದಲ್ಲಿ

ಎಂಬತ್ತು ಅಡಿ ಎತ್ತರದ ಬುದ್ಧಮೂರ್ತಿಯನ್ನು ನಿಲ್ಲಿಸಿದರೆ ಅದನ್ನನುಕರಿಸಿ ಕರ್ಣಾಟಕದಲ್ಲಿ ಶ್ರವಣಬೆಳುಗೊಳದ ದೊಡ್ಡ ಬೆಟ್ಟದ ಮೇಲೆ ಐವತ್ತೆಂಟು ಅಡಿ ಎತ್ತರದ ಬಾಹುಬಲಿ ಸ್ವಾಮಿಯ ಬಿಂಬವು ೧೦ ನೆಯ ಶತಮಾನದಲ್ಲಿ ನಿರ್ಮಿತವಾಯಿತು.

ಚಿತ್ರಕಲೆ—ಅಂಜತೆಯ ಚಿತ್ರಗಳು ಮುಖ್ಯವಾಗಿ ಗೌತಮಬುದ್ಧನ ಚರಿತ್ರೆಗೆ ಮತ್ತು ಬೌದ್ಧ ಜಾತಕ ಕತೆಗಳಿಗೆ ಸಂಬಂಧಪಟ್ಟವುಗಳಾಗಿರುವುದರಿಂದ ಅವುಗಳಲ್ಲಿ ಶೃಂಗಾರ ಮತ್ತು ಶಾಂತ ರಸಗಳು ಪ್ರಧಾನವಾಗಿವೆ. ಅವುಗಳಿಗೆ ತಕ್ಕಂತೆ ಆಲಂಬನ ಭಾವ—ಉದ್ದೀಪನಭಾವ—ಸ್ಥಾಯಿಭಾವ—ಸಂಚಾರೀ ಭಾವಗಳನ್ನು ಚಿತ್ರಕಾರರು ಸನ್ನಿವೇಶಕ್ಕೆ ತಕ್ಕಂತೆಮುಖಾವಿರ್ಭಾವ, ಮುದ್ರೆ, ಅಂಗವಿಕ್ಷೇಪ, ಭಂಗಿ ಮುಂತಾದ ಲಕ್ಷಣಗಳಿಂದ ಒಡಮೂಡಿಸಿದ್ದಾರೆ. ಈ ಕಾರ್ಯದಲ್ಲಿ ಅವರು ರೂಪಭೇದ—ಪ್ರಮಾಣ — ಭಾವ — ಲಾವಣ್ಯಯೋಜನ — ಸಾದೃಶ್ಯ — ವರ್ಣಿಕಾಭಂಗಗಳೆಂಬ ಷಡಂಗಗಳನ್ನು ತುಂಬಾ ಉಪಯೋಗಿಸಿದ್ದಾರೆ. ಕತ್ತಲೆ ತುಂಬಿದ ಆ ಗುಹೆಗಳಲ್ಲಿ ಇಷ್ಟು ಅಂದವಾದ, ಇಷ್ಟು ನಯನಾಕರ್ಷಕವಾದ, ಇಷ್ಟು ಸೂಕ್ಷ್ಮವಾದ, ಭಾವಗಳನ್ನು ನಿವೇದಿಸುವ ಗಾಡಿಮೋಡಿಗಳನ್ನು ಅವರು ಹೇಗೆ ಚಿತ್ರಿಸಿದರೋ ತಿಳಿಯದು. 'ಕಥಂ ನು ವಿಷಯವ್ಯಾವೃತ್ತ ಕೌತೂಹಲೋ | ನಿರ್ಮಾತುಂ ಪ್ರಭವೇನ್ಮನೋಹರಮಿದಂ ರೂಪಂ ಪುರಾಣೋ ಮುನಿಃ' ಎಂದು ಕವಿಕುಲಗುರುವಿನ ಮಾತುಗಳಿಂದಲೇ ಹೇಳಬೇಕಾಗುತ್ತದೆ. ಪೌರ್ವಾತ್ಯ-ಪಾಶ್ಚಾತ್ಯ ಕಲಾಕೋವಿದರು ಈ ಚಿತ್ರಗಳನ್ನು ನೋಡಿ ಬೆರಗಾಗಿ ಮುಗ್ಧರಾಗಿ ಕೆಲ ಹೊತ್ತು ನಿಂತು ಎಚ್ಚತ್ತಮೇಲೆ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಲೇಡಿ ಹೆರಿಂಗ್ಹ್ಯಾಮಳ ಅಭಿಪ್ರಾಯವಿದು :

"The artists had a complete command of posture. Their seated and floating poses especially are of great interest. Their knowledge of the types and positions, gestures and beauties of hands is amazing. Many racial types are rendered, the features are often elaborately studied and of high breeding. Some of the schemes of colour composition are most remarkable and interesting, and there is great variety. There is no other really fine portrayal of a dark coloured race by themselves."

ಬಾದಾಮಿಯ ಗವಿಗಳಲ್ಲಿಯೂ ವರ್ಣಚಿತ್ರಗಳಿವೆ. ಅಜಂತೆಯ ಮೊದಲನೆಯ ಗವಿಯಲ್ಲಿ ಪುಲಕೇಶಿಯು ಇರಾಣದ ರಾಯಭಾರಿಯನ್ನು ಬರಮಾಡಿಕೊಂಡ ಚಿತ್ರವಿದೆ. ಇದರ ಬಗ್ಗೆ ಭಿನ್ನಾಭಿಪ್ರಾಯಗಳಿದ್ದಂತೆ ಕಂಡುಬಂದಿದೆ.

ಒಟ್ಟಾರೆ ಗುಪ್ತಕಾಲದ ಲಲಿತ ಕಲೆಗಳು ಬೆಳೆದು ಬಂದು ದ್ರಾವಿಡ ಮಿಶ್ರಿತವಾಗಿ ಬಾದಾಮಿಯ ಚಾಲುಕ್ಯರಿಂದ ಇತ್ತೀಚೆ ಕರ್ಣಾಟಕ-ಕಲೆಗಳಾಗಿ ಪರಿಣಮಿಸಿದುವು.

ಕೆ. ಜಿ. ಕುಂದಣಗಾರ

೮. ಬೇಲೂರು ದೇವಾಲಯದ ಚರಿತ್ರೆ

ಬೇಲೂರು ಈಗ ಒಂದು ಚಿಕ್ಕ ಊರಾಗಿದ್ದರೂ ೮೦೦ ವರ್ಷಗಳ ಹಿಂದೆ ಒಂದು ದೊಡ್ಡ ಚಕ್ರಾಧಿಪತ್ಯಕ್ಕೆ ರಾಜಧಾನಿಯಾಗಿ ಮೆರೆದ ನಗರವಾಗಿತ್ತು. ಯಾದವ ವಂಶಕ್ಕೆ ಸೇರಿದ ಹೊಯ್ಸಳರು ಈ ಊರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತಮ್ಮ ಚಕ್ರಾಧಿಪತ್ಯವನ್ನು ವಿಸ್ತರಿಸಿಕೊಂಡರು. ಇವರು ಮೊದಲು ಚಾಲುಕ್ಯರಿಗೆ ಅಧೀನರಾಗಿದ್ದು ಅನಂತರ ಅವರಿಂದ ಸ್ವತಂತ್ರರಾಗಿ ಕ್ರಮೇಣ ಭಾರತದ ಅತ್ಯಂತ ದಕ್ಷಿಣದಲ್ಲಿದ್ದ ಚೋಳ ಪಾಂಡ್ಯ ರಾಜ್ಯಗಳ ಮೇಲೆ ಕೂಡ ತಮ್ಮ ಅಧಿಕಾರ ನಡೆಸಿದರು.

ಚಾಲುಕ್ಯರಿಂದ ಮೊದಲು ಸ್ವತಂತ್ರನಾದ ಹೊಯ್ಸಳ ರಾಜನೆಂದರೆ ವಿಷ್ಣುವರ್ಧನ. ಈತನಿಗೆ ಬಿಟ್ಟಿಗ ಅಥವಾ ಬಿಟ್ಟಿದೇವನೆಂದೂ ಹೆಸರು. ಈತನೇ ಬೇಲೂರಿನ ಪ್ರಸಿದ್ಧವಾದ ಕೇಶವ ದೇವಾಲಯವನ್ನು ಕಟ್ಟಿಸಿದವನು. ಈ ದೇವಾಲಯದ ಕಲಾ ವೈಭವಕ್ಕೆ ಮನಸೋತು ಭಾರತೀಯರೇ ಅಲ್ಲದೆ ಇತರ ಯಾತ್ರಿಕರು ಕೂಡ ತಂಡ ತಂಡವಾಗಿ ಬಂದು ನೋಡಿಕೊಂಡು ಹೋಗುತ್ತಿದ್ದಾರೆ. ಭವ್ಯವಾದ ಕಟ್ಟಡ, ಮನೋಹರವಾದ ಶಿಲ್ಪ, ವಿಧವಿಧವಾದ ಚಿತ್ರಕೆಲಸಗಳು, ಸೂಕ್ಷ್ಮವಾದ ಗಹನವಾದ ಕೆತ್ತನೆಯಿಂದ ಕೂಡಿದ ಸುಂದರವಾದ ಕಂಬಗಳು, ಚಿತ್ರಪಟ್ಟಿಕೆಗಳು, ಭುವನೇಶ್ವರಿಗಳು ಒಂದೊಂದೂ ಕಲೋಪಾಸಕರನ್ನು ಮುಗ್ಧರನ್ನಾಗಿ ಮಾಡುತ್ತವೆ. ಒಂದರ ಮೇಲೆ ಒಂದರಂತೆ ಬರುವ ಪಟ್ಟಿಗಳಲ್ಲಿ ಸಾಲುಸಾಲಾಗಿ ಕಡೆದಿರುವ ಚಿತ್ರಕೆಲಸ. ಹಕ್ಕಿಗಳು ಪ್ರಾಣಿಗಳು ಅಥವಾ ನರ್ತಕ ನರ್ತಕಿಯರು ಎಲ್ಲವೂ ಜೀವಕಳೆಯಿಂದ ತುಂಬಿ ಅನೇಕ ರೀತಿಯಲ್ಲಿ ಚಿತ್ರಿತವಾಗಿ ಆಶ್ಚರ್ಯವನ್ನುಂಟುಮಾಡುತ್ತವೆ. ದೇವಾಲಯ, ಅದರ ಶಿಲ್ಪ, ಚಿತ್ರಕೆಲಸಗಳು ಮುಂತಾದುವುಗಳ ವಿವರವಾದ ವರ್ಣನೆಗಳಿಂದಲೂ ಹೇರಳವಾದ ಚಿತ್ರಗಳಿಂದಲೂ ಕೂಡಿದ ಗ್ರಂಥವೊಂದು ಪ್ರಕಟಣೆಗೆ ಸಿದ್ಧವಾಗಿದೆ.

ರಾಮಾನುಜಾಚಾರ್ಯರು ಚೋಳದೇಶದಿಂದ ಬಂದು ವಿಷ್ಣುವರ್ಧನನ ಆಶ್ರಯ ಪಡೆದು ಆತನನ್ನು ವೈಷ್ಣವ ಮತಕ್ಕೆ ಸೇರಿಸಿದ ನೆನಪಿಗಾಗಿ ವಿಷ್ಣುವರ್ಧನನು ಈ ದೇವಾಲಯವನ್ನು ಕಟ್ಟಿಸಿದನೆಂಬ ಪ್ರತೀತಿಯಿದ್ದರೂ, ಶಾಸನಗಳಿಂದ ಆತನು ತಲಕಾಡಿನಲ್ಲಿ ಆಳುತ್ತಿದ್ದ ಚೋಳರ ಪ್ರತಿನಿಧಿಯನ್ನು ಗೆದ್ದುದರ ವಿಜಯ ಚಿಹ್ನೆಯಾಗಿ

ಅದನ್ನು ಕಟ್ಟಿಸಿದನೆಂದು ತಿಳಿಯಬರುತ್ತದೆ. ಕಟ್ಟಡವನ್ನು ವಿವರವಾಗಿ ಪರಿಶೀಲಿಸಿದಲ್ಲಿ ನಕ್ಷತ್ರಾಕಾರದ ಗರ್ಭಗೃಹ, ಶುಕನಾಸಿ ಮತ್ತು ನವರಂಗಗಳು ಮಾತ್ರ ವಿಷ್ಣುವರ್ಧನನ ಕಾಲದಲ್ಲಿ ನಿರ್ಮಿತವಾಗಿರಬೇಕೆಂದು ತೋರುತ್ತದೆ. ದೇವಾಲಯದ ಹೊರಭಾಗದಲ್ಲಿರುವ ದೊಡ್ಡ ಗೂಡುಗಳು, ಚಿತ್ರಪಟ್ಟಿಗಳು ಮತ್ತು ಶಿಲ್ಪಕೆಲಸಗಳೂ ಒಳಭಾಗದಲ್ಲಿರುವ ಸುಂದರವಾಗಿ ಕಡೆದಿರುವ ಕಂಬಗಳು ಮತ್ತು ಭುವನೇಶ್ವರಿಗಳೂ ಮತ್ತು ಮೂರು ಬಾಗಿಲುವಾಡಗಳೂ ಆತನ ಕಾಲದಲ್ಲಿ ಆದುವು. ಗರ್ಭಗೃಹದ ಮೇಲೆ ಒಂದು ಎತ್ತರವಾದ ನಕ್ಷತ್ರಾಕಾರದ ಇಟ್ಟಿಗೆ ಗಾರೆಗಳಿಂದ ಕಟ್ಟಿಸಿದ ಗೋಪುರವಿತ್ತು. ಅದರ ಶಿಖರಕ್ಕೆ ಚಿನ್ನದ ಮುಲಾಮು ಮಾಡಿದ್ದ ತಾಮ್ರದ ತಗಡಿನ ಹೊದಿಕೆಯೂ ಇತ್ತು. ಉನ್ನತವಾದ ಸ್ಥಳದಲ್ಲಿ ಎತ್ತರವಾದ ಜಗತಿಯ ಮೇಲೆ ಕಟ್ಟಿರುವ ಈ ದೇವಾಲಯವು ಭವ್ಯವಾದ ನೋಟವನ್ನು ಬೀರುತ್ತಿತ್ತು. ಸುಂದರವಾದ ಕೇಶವನ ಮೂರ್ತಿಯನ್ನು ವಿಷ್ಣುವರ್ಧನನು ಕ್ರಿ.ಶ. ೧೧೧೭ರಲ್ಲಿ ವಿಜಯನಾರಾಯಣನೆಂಬ ಹೆಸರಿನಿಂದ ಈ ದೇವಾಲಯದಲ್ಲಿ ಪ್ರತಿಷ್ಠಿಸಿದನು.

ಸುಮಾರು ಇದೇಕಾಲದಲ್ಲಿ ವಿಷ್ಣುವರ್ಧನನ ಪಟ್ಟದ ರಾಣಿಯಾದ ಶಾಂತಲಾ ದೇವಿಯೂ ತಾನು ಜೈನಳಾಗಿದ್ದರೂ ಕೇಶವನಿಗೆ ತನ್ನ ಸೇವೆಯನ್ನು ಸಲ್ಲಿಸಿದಳು. ಮೂಲದೇವಾಲಯದಷ್ಟು ಹೆಚ್ಚು ಚಿತ್ರ ಕೆಲಸಗಳಿಲ್ಲದಿದ್ದರೂ ಅದೇ ಆಕಾರದಲ್ಲಿ ಅದರ ಪಕ್ಕದಲ್ಲೆ ಚೆನ್ನಿಗರಾಯನ ದೇವಾಲಯವೊಂದನ್ನು ಆಕೆ ಕಟ್ಟಿಸಿದಳು. ಆಕೆ ಪ್ರತಿಷ್ಠೆಮಾಡಿದ ಚೆನ್ನಿಗರಾಯನ ವಿಗ್ರಹವು ಚಿಕ್ಕದಾಗಿದ್ದರೂ ಎಲ್ಲರೀತಿಯಲ್ಲೂ ಮೂಲ ಕೇಶವನ ವಿಗ್ರಹವನ್ನೇ ಹೋಲುತ್ತದೆ. ಅದರ ಪೀಠದ ಮೇಲೆ ರಾಣಿಯ ಶಾಸನವಿದೆ.

ವಿಷ್ಣುವರ್ಧನನ ಅನಂತರ ಪಟ್ಟಕ್ಕೆ ಬಂದ ಅವನ ಮಗ ಒಂದನೆಯ ನರಸಿಂಹನು ದೇವಸ್ಥಾನದ ಮೇಲು ವಿಚಾರಣೆ ಮತ್ತು ದೇವರ ಪೂಜೆ ನಡೆಸುವುದಕ್ಕಾಗಿ ದತ್ತಿಯನ್ನು ಬಿಟ್ಟಿರುತ್ತಾನೆ. ಆತನು ಒಡ್ಡೋಲಗದಲ್ಲಿರುವ ಚಿತ್ರವೊಂದನ್ನು ನವರಂಗದ ಬಾಗಿಲಿನ ಉತ್ತರ ಭಾಗದಲ್ಲಿ ಕಡೆದಿರುವುದನ್ನು ನೋಡಿದರೆ ದೇವಸ್ಥಾನಕ್ಕೆ ಆತನೂ ಕೆಲವು ಭಾಗಗಳನ್ನು ಸೇರಿಸಿರಬೇಕೆಂದು ತೋರುತ್ತದೆ.

ಅನಂತರ ರಾಜನಾದ ಇಮ್ಮಡಿ ಬಲ್ಲಾಳನು ೧೧೭೫ರಲ್ಲಿ ದೇವಸ್ಥಾನದ ಈಶಾನ್ಯ ದಿಕ್ಕಿನಲ್ಲಿ ವಾಸುದೇವತೀರ್ಥವೆಂಬ ಒಂದು ಸುಂದರವಾದ ಕೊಳವನ್ನೂ ೧೧೮೦ ರಲ್ಲಿ ದೇವಸ್ಥಾನದ ಪ್ರಾಕಾರದ ವಾಯವ್ಯ ಮೂಲೆಯಲ್ಲಿ ತಗ್ಗಾದ ಒಂದು ಉಗ್ರಾಣವನ್ನೂ ಕಟ್ಟಿಸಿದನು. ಪೂರ್ವದಿಕ್ಕಿನಲ್ಲಿ ಭಾವಿಯ ಬಳಿ ಇರುವ ಅಡಿಗೆ ಶಾಲೆ, ಪೌಳಿಗೋಡೆ ಮತ್ತು ಎರಡು ಮಹಾದ್ವಾರಗಳು ಈತನ ಕಾಲದಲ್ಲೇ ಕಟ್ಟಿದ ಕಟ್ಟಡಗಳು.



ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರ ಪ್ರತಿಮೆ

ದೇವಸ್ಥಾನ ಜೀರ್ಣೋದ್ಧಾರ ಮಾಡಿದ ರಾಜರ್ಷಿಗಳು




ಹೊಯ್ಸಳ ವಿಷ್ಣುವರ್ಧನ

ಬೇಲೂರು ದೇವಾಲಯದಲ್ಲಿರುವ ಲೋಹದ ಭಕ್ತವಿಗ್ರಹ



ಮಹಿಷಾಸುರ ಮರ್ದಿನಿ

ನೃತ್ಯ ದೃಶ್ಯ



ಬೇಲೂರು ಚೆನ್ನಕೇಶವ ದೇವಾಲಯ

ಆಗ್ನೇಯ ನೋಟ

ಈತನ ಕಾಲದವರೆಗೂ ತೆರೆದಿದ್ದ ನವರಂಗ ಮಂಟಪವನ್ನು ಜಾಲಂದ್ರಗಳಿಂದ ಮುಚ್ಚಲಾಯಿತು; ಮತ್ತು ಮೂರು ಬಾಗಿಲವಾಡಗಳಿಗೂ ದೊಡ್ಡ ದೊಡ್ಡ ಮರದ ಬಾಗಿಲುಗಳನ್ನೂ ಇಡಿಸಲಾಯಿತು. ಪ್ರತಿ ಬಾಗಿಲುವಾಡದ ಇಕ್ಕಡೆಗಳಲ್ಲಿಯೂ ಚಿಕ್ಕ ಚಿಕ್ಕ ಗೋಪುರಗಳನ್ನು ಕಟ್ಟಿಸಿದುದಲ್ಲದೆ ನವರಂಗಕ್ಕೂ ಶುಕನಾಸಿಗೂ ನಡುವೆ ಸುಂದರವಾಗಿ ಕಡೆದ ಬಳಪದ ಕಲ್ಲಿನ ದ್ವಾರವೊಂದನ್ನಿಡಿಸಿ ಅವೆರಡನ್ನೂ ಪ್ರತ್ಯೇಕಿಸಿದರು. ಇಷ್ಟೇ ಅಲ್ಲದೆ ದೇವಾಲಯದ ಪ್ರಾಕಾರದಲ್ಲಿ ಹಳೇಬೀಡಿನ ಕೇದಾರೇಶ್ವರ ದೇವಾಲಯದಲ್ಲಿರುವಂತೆ ಮನೋಹರವಾದ ಶಿಲ್ಪ ಕೆಲಸ ಮಾಡಿದ ಒಂದು ಗುಡಿಯನ್ನು ವೀರ ನಾರಾಯಣನಿಗಾಗಿ ಕಟ್ಟಿಸಲಾಯಿತು.

ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಆತನಲ್ಲಿ ಅಧಿಕಾರಿಯಾಗಿದ್ದ ಸೋಮಯ್ಯ ದಂಡನಾಯಕನು ಶಿಥಿಲವಾಗಿದ್ದ ಮಧ್ಯದ ಗೋಪುರವನ್ನು ಇಟ್ಟಿಗೆ ಮತ್ತು ಮರದಿಂದ ಮತ್ತೆ ಕಟ್ಟಿಸಿದನು.

ತೊಗಲಕ್ ಸುಲ್ತಾನರು ದಕ್ಷಿಣ ದೇಶದ ಮೇಲೆ ದಂಡೆತ್ತಿ ಬಂದಾಗ ಅವರ ಕಡೆ ಅಧಿಕಾರಿಯಾಗಿದ್ದ ಕಲ್ಬುರ್ಗಿಯ ಗಂಗೂ ಸಾಲಾರ್ ಎಂಬುವನು ದೇವಸ್ಥಾನಕ್ಕೆ ಮುತ್ತಿಗೆ ಹಾಕಿ ಅದರ ಮಹಾದ್ವಾರವನ್ನು ಸುಟ್ಟುಹಾಕಿದನು. ಇದಾದ ಸ್ವಲ್ಪಕಾಲದಲ್ಲಿಯೇ ಆತನು ಬಹಮನಿ ವಂಶಸ್ಥಾಪಕನಾದನು.

ವಿಜಯನಗರದ ಚಕ್ರವರ್ತಿಗಳು ಉತ್ತಮವಾದ ಮತ್ತು ಸುಂದರವಾದ ವಾಸ್ತುಗಳನ್ನೆಲ್ಲಾ ಕಾಪಾಡಿಕೊಂಡು ಬರುವುದನ್ನು ತಮ್ಮ ಧ್ಯೇಯವಾಗಿಟ್ಟುಕೊಂಡಿದ್ದರು. ಇದಕ್ಕೆ ಅನುಸಾರವಾಗಿ ಇಮ್ಮಡಿ ಹರಿಹರನ ಕೈಕೆಳಗೆ ಅಧಿಕಾರಿಯಾಗಿದ್ದ ಕಂಪಣ್ಣನು ೧೩೮೧ ರಲ್ಲಿ ಮೂಲ ದೇವಾಲಯದ ಶುಕನಾಸಿಯ ಮೇಲ್ಛಾವಣಿಯಲ್ಲಿ ಒಡೆದಿದ್ದ ಕಲ್ಲುಗಳಿಗೆ ಊರೆಯಾಗಿ ನಾಲ್ಕು ಕಗ್ಗಲ್ಲಿನ ಕಂಬಗಳನ್ನು ನಿಲ್ಲಿಸಿದನು; ೧೩೮೭ ರಲ್ಲಿ ಮಲಗರಸನೆಂಬ ಮತ್ತೊಬ್ಬ ಅಧಿಕಾರಿಯು ಒಡೆದುಹೋಗಿದ್ದ ಕಲಶವನ್ನು ತೆಗೆದು ಹಾಕಿ ಬಂಗಾರ ಬಳಿದ ಪಂಚಲೋಹದ ಬೇರೆಯ ಕಲಶವನ್ನಿಡಿಸಿದನು. ಅದೇ ಹರಿಹರನ ಕೈಕೆಳಗೆ ದಂಡನಾಯಕನಾಗಿದ್ದ ಗುಂಡನು ೧೩೯೭ ರಲ್ಲಿ ಹಿಂದೆ ಗಂಗೂ ಸಾಲಾರನು ಸುಟ್ಟು ಕೆಡವಿದ್ದ ಮಹಾದ್ವಾರಕ್ಕೆ ಬದಲು ಏಳು ಅಂತಸ್ತುಗಳುಳ್ಳ ಗೋಪುರವನ್ನು ಕಟ್ಟಿಸಿದನು. ಇದಾದ ಮೇಲೆ ದೇವಾಲಯದ ಹಿಂಭಾಗದಲ್ಲಿ ಸೌಮ್ಯನಾಯಕಿಯ ದೇವಸ್ಥಾನ, ಪಶ್ಚಿಮಕ್ಕಿರುವ ದೊಡ್ಡ ಮಂಟಪ ಮತ್ತು ಆಂಡಾಳ್ ಗುಡಿಗಳನ್ನು ಕಟ್ಟಿಸಲಾಯಿತು. ಇವುಗಳನ್ನು ಕಟ್ಟಲು ಹಾಳು ಬಿದ್ದಿದ್ದ ಹೊಯ್ಸಳರ ಕಾಲದ ಕಟ್ಟಡಗಳ ಅವಶೇಷಗಳನ್ನು ಧಾರಾಳವಾಗಿ ಉಪಯೋಗಿಸಿದ್ದಾರೆ. ಚೆನ್ನಿಗರಾಯನ ದೇವಾಸ್ಥಾನದ ನವರಂಗದ ಅನೇಕ ಭಾಗಗಳನ್ನು

ವಿಜಯನಗರದ ಕಾಲದಲ್ಲಿ ಮತ್ತೆ ಕಟ್ಟಿಸಿದ್ದಾರೆ. ಇದಲ್ಲದೆ ದೇವಸ್ಥಾನದ ಪ್ರಾಕಾರದಲ್ಲಿ ದೀಪಮಾಲೆ ಕಂಬ, ಉಯ್ಯಾಲೆ ಮಂಟಪ, ಯಾಗಶಾಲೆ, ನರಸಿಂಹ ಮತ್ತು ರಾಮರ ದೇವಾಸ್ಥಾನಗಳು ಮುಂತಾದ ಅನೇಕ ಚಿಕ್ಕ ಚಿಕ್ಕ ಕಟ್ಟಡಗಳು ಆ ಕಾಲದಲ್ಲೇ ಆದವು. ೧೫ ನೆಯ ಶತಮಾನದಲ್ಲಿ ಕೇಶವ ದೇವಾಲಯದ ಮುಂಭಾಗದಲ್ಲಿ ನಾಗನಾಯಕನ ಮಂಟಪವೆಂಬ ಕಟ್ಟಡವನ್ನು ಪಾಳುಬಿದ್ದಿದ್ದ ಶೈವ ಜೈನ ದೇವಾಲಯಗಳ ಅವಶೇಷಗಳನ್ನುಪಯೋಗಿಸಿ ಕಟ್ಟಿಸಿದರು. ಇಲ್ಲಿ ಹೇಳಿರುವ ನಾಗನಾಯಕನು ವಿಜಯನಗರದ ಸಾಳುವ ನರಸಿಂಗನ ಕೈಕೆಳಗೆ ಅಧಿಕಾರಿಯಾಗಿದ್ದವನಾಗಿರಬೇಕು. ವಿಜಯನಗರದ ತುಳುವ ರಾಜರು ಬೇಲೂರಿನ ಕೇಶವ ದೇವರನ್ನು ತಮ್ಮ ಮನೆದೇವರನ್ನಾಗಿ ಮಾಡಿಕೊಂಡಿದ್ದರು. ಬೇಲೂರ ನಾಯಕರ ಕಾಲದಲ್ಲೂ ಕೆಲವು ಚಿಕ್ಕ ಕಟ್ಟಡಗಳು ಮತ್ತು ಜೀರ್ಣೋದ್ಧಾರದ ಕೆಲಸಗಳು ಆದವು.

೧೮ನೆಯ ಶತಮಾನದ ಆದಿಭಾಗದಿಂದಲೂ ಮೈಸೂರರಸರು ಬೇಲೂರಿನಲ್ಲಿ ಅನೇಕ ಕೆಲಸಗಳನ್ನು ನಡೆಸಿರುತ್ತಾರೆ. ೧೭೦೯ರಲ್ಲಿ ದೇವಾಲಯದ ಉತ್ತರಕ್ಕೆ ಒಂದು ಚಿಕ್ಕ ಕಲ್ಯಾಣಮಂಟಪವನ್ನೂ ೧೭೧೭ರಲ್ಲಿ ಮತ್ತೊಂದು ಮಂಪಟ ಮತ್ತು ಒಂದು ಚಿಕ್ಕ ಕೊಳವನ್ನೂ ಕಟ್ಟಿಸಿರುವುದು ಕಂಡುಬರುತ್ತದೆ. ಮೂಲ ದೇವಾಲಯದ ಗೋಪುರವನ್ನು ೧೭೩೬ರಲ್ಲಿ ಮತ್ತೆ ಕಟ್ಟಿಸಿದ ಬೇಲೂರಿನ ವೆಂಕಟಪ್ಪನಾಯಕನು ಮೈಸೂರಿನ ಇಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾಗಿದ್ದನು. ಆದರೆ ಆ ಗೋಪುರವು ಸ್ವಲ್ಪ ಕಾಲದಲ್ಲಿಯೇ ಮತ್ತೆ ಶಿಥಿಲವಾದ್ದರಿಂದ ಇಮ್ಮಡಿ ಕೃಷ್ಣರಾಜ ಒಡೆಯರ ಸರ್ವಾಧಿಕಾರಿಯಾಗಿದ್ದ ಹೈದರ್ ನವಾಬನ ಕೈಕೆಳಗೆ ಅಧಿಕಾರಿಯಾಗಿದ್ದ ನಂಜಯ್ಯನೆಂಬವನು ಅದನ್ನು ಪುನಃ ಕಟ್ಟಿಸಿದನು. ಸುಮಾರು ೧೮೮೦ರಲ್ಲಿ ಆ ಗೋಪುರವು ಬಹಳ ಶಿಥಿಲವಾಗಿದ್ದದ್ದರಿಂದ ಮೂಲದೇವಾಲಯಕ್ಕೆ ಅದರಿಂದ ಅಪಾಯ ತಗುಲದಂತೆ ನೋಡಿಕೊಳ್ಳಲು ಅದನ್ನು ತೆಗೆದುಹಾಕಲಾಯಿತು. ಆದರೂ ದೇವಾಲಯದ ಅಂಗಳದಲ್ಲಿ ಅನೇಕ ಪಾಳುಬಿದ್ದ ಅವಲಕ್ಷಣವಾದ ಈಚಿನ ಕಾಲದ ಕಟ್ಟಡಗಳು ತುಂಬಿಹೋಗಿದ್ದುವು.

೧೯೨೯ರಲ್ಲಿ ಪ್ರಾಚೀನವಸ್ತು ಸಂಶೋಧನಾ ಇಲಾಖೆಯು ಮಾಡಿದ ಸೂಚನೆಯ ಮೇರೆ ಮೈಸೂರು ಸರ್ಕಾರವು ದೇವಾಲಯದ ಅಂಗಳವನ್ನು ಮೊದಲಿನ ರೂಪಕ್ಕೆ ತರುವ ಮತ್ತು ದೇವಸ್ಥಾನವನ್ನು ಕ್ರಮಕ್ರಮವಾಗಿ ಜೀರ್ಣೋದ್ಧಾರ ಮಾಡುವ ಕೆಲಸವನ್ನು ಕೈಕೊಂಡು, ಅದನ್ನು ಕ್ರಮವಾಗಿ ನಡೆಸುವುದಕ್ಕಾಗಿ ೧೯೩೫ರಲ್ಲಿ ಬೇಲೂರು ದೇವಾಲಯದ ಜೀರ್ಣೋದ್ಧಾರ ಸಮಿತಿಯನ್ನು ರಚಿಸಿತು. ನಾಗನಾಯಕನ ಮಂಟಪದಂಥ ಈಚಿನ, ಪಾಳಾದ ಮತ್ತು ಅವಲಕ್ಷಣವಾದ

ಕಟ್ಟಡಗಳನ್ನೆಲ್ಲಾ ಕಿತ್ತುಹಾಕಿ ಶಿಲ್ಪಕೆಲಸಗಳ ಮೇಲೆ ವರ್ಷಾಂತರಗಳಿಂದ ಮೆತ್ತಿ ಕೊಂಡು ತುಂಬಿಹೋಗಿದ್ದ ಎಣ್ಣೆಯ ಗವುಟು ಮತ್ತು ಮೇಣವನ್ನು ಎಚ್ಚರಿಕೆ ಯಿಂದ ತೆಗೆಸಲಾಯಿತು; ಶುಕನಾಸಿಯ ಮೇಲ್ಛಾವಣಿ, ದೇವಸ್ಥಾನದ ಈಶಾನ್ಯ ದಿಕ್ಕಿನ ಗೋಡೆ ಮತ್ತು ಚೆನ್ನಿಗರಾಯನ ದೇವಾಲಯದ ಗರ್ಭಗುಡಿಗಳನ್ನು ಪುನಃ ಕಟ್ಟಿಸಲಾಯಿತು. ಪೂರ್ವ, ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲಿ ಪೌಳಿಗೋಡೆಗೆ ಸೇರಿದ್ದ ಕಟ್ಟಡಗಳನ್ನು ಸರಿಮಾಡಿ, ಅಂಗಳಕ್ಕೆಲ್ಲಾ ಕಲ್ಲು ಚಪ್ಪಡಿಯನ್ನು ಹಾಸಿ, ಭಿನ್ನವಾಗಿದ್ದ ರಾಮಾನುಜ ಮತ್ತು ಗರುಡರ ವಿಗ್ರಹಗಳ ಸ್ಥಾನದಲ್ಲಿ ಹೊಸ ವಿಗ್ರಹಗಳನ್ನು ಸ್ಥಾಪಿಸಲಾಯಿತು; ಹೊಸದಾಗಿ ತೇರಿನ ಮನೆಯನ್ನು ಕಟ್ಟಿಸ ಲಾಯಿತು; ದೇವಸ್ಥಾನದ ಮುಂಭಾಗವನ್ನು ಉತ್ತಮಗೊಳಿಸಿ ದೇವಾಲಯದಲ್ಲೆಲ್ಲಾ ವಿದ್ಯುದ್ದೀಪವನ್ನಿಡಿಸಲಾಯಿತು. ಇಷ್ಟಲ್ಲದೆ ಇನ್ನೂ ಅನೇಕ ಚಿಕ್ಕ ಚಿಕ್ಕ ಉದ್ಧರಣ ಕಾರ್ಯಗಳು ನಡೆದವು. ಆ ಸ್ಥಳದಲ್ಲಿಯೇ ಸಿಕ್ಕ ಸಾಮಾನುಗಳನ್ನೇ ಈ ಕೆಲಸಗಳಿಗೆ ಉಪಯೋಗಿಸಿಕೊಳ್ಳಲಾಯಿತು. ಪ್ರಾಕ್ತನ ವಸ್ತುಶೋಧನಾ ಶಾಖೆ, ಮುಜರಾಯಿ ಶಾಖೆ, ಪಬ್ಲಿಕ್ ವರ್ಕ್ಸ್ ಶಾಖೆ ಮತ್ತು ಎಲೆಕ್ಟ್ರಿಕಲ್ ಶಾಖೆಗಳು ಹೆಚ್ಚಿನ ಖರ್ಚಿಲ್ಲದೆ ತಮ್ಮ ಮೇಲು ವಿಚಾರಣೆಗಳನ್ನು ನಡೆಸಿದುವು. ಸರ್ಕಾರವು ಈ ಕೆಲಸಕ್ಕಾಗಿ ಮೀಸಲಾಗಿಟ್ಟಿದ್ದ ಹಣವನ್ನು ಮುಖ್ಯವಾಗಿ ಕೆಲಸಗಾರರ ಕೂಲಿ ಮತ್ತು ಇತರ ಸಣ್ಣ ಸಣ್ಣ ವೆಚ್ಚಗಳಿಗಾಗಿ ಮಾತ್ರ ಉಪಯೋಗಿಸಲಾಯಿತು. ಅಲ್ಲಿ ನಡೆದ ಒಟ್ಟು ಕೆಲಸದ ಖರ್ಚು ಸುಮಾರು ಐದು ಲಕ್ಷ ರೂಪಾಯಿಗಳಾಗಬಹುದೆಂದು ಅಂದಾಜಾ ಗಿದೆ. ಆದರೆ ಒಟ್ಟಿನಲ್ಲಿ ಆದ ಖರ್ಚು ಒಂದು ಲಕ್ಷದ ಮೇಲೆ ಸ್ವಲ್ಪ ಮಾತ್ರ. ದೇವ ಸ್ಥಾನವನ್ನು ಜೀರ್ಣೋದ್ಧಾರ ಮಾಡಿರುವುದರಲ್ಲಿ ತೋರಿಸುವ ಚಾಕಚಕ್ಯ, ಅದನ್ನು ಆಗಗೊಳಿಸುವುದರಲ್ಲಿ ಸರ್ಕಾರದ ಅನೇಕ ಇಲಾಖೆಗಳು ತೋರಿಸಿದ ಆಸಕ್ತಿ ಮತ್ತು ಪರಸ್ಪರ ಸಹಾಯಗಳನ್ನು ಇಂಡಿಯಾ ಸರ್ಕಾರದ ಪ್ರಾಕ್ತನ ವಸ್ತುಶೋಧನಾ ಶಾಖೆಯ ಡೈರೆಕ್ಟರ್ ಜನರಲ್ಲರೇ ಮೊದಲಾದ ಗಣ್ಯ ಮಹನೀಯರು ಮನಸಾರೆ ಹೊಗಳಿ ತಮ್ಮ ಮೆಚ್ಚಿಕೆಯನ್ನು ಸೂಚಿಸಿರುತ್ತಾರೆ.

ಆಳಿದ ಮಹಾಸ್ವಾಮಿಯವರಾದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರವರ ಮತ್ತು ಆಳುವ ಮಹಾಸ್ವಾಮಿಯವರು ಶ್ರೀ ಜಯಚಾಮರಾಜ ಒಡೆಯರ್ ಬಹದೂರ್ ಅವರ ಔದರ್ಯದಿಂದ ಭಾರತೀಯ ಕಲೆಗೆ ನಿಕ್ಷೇಪಸ್ಥಾನವಾದ ಬೇಲೂರು ದೇವಾಲಯವನ್ನು ಭದ್ರಪಡಿಸಿ ಉಳಿಸುವುದಕ್ಕೆ ಸಾಧ್ಯವಾಯಿತು. ದೇವ ಸ್ಥಾನವನ್ನು ಸಾಧ್ಯವಾದಷ್ಟು ಅದರ ಮೂಲರೂಪಕ್ಕೆ ತಂದಿದೆ. ಇನ್ನು ಉಳಿದಿರುವ ಎರಡು ದೊಡ ಕೆಲಸಗಳೆಂದರೆ ಮಹಾದ್ವಾರ ಮತ್ತು ವಿಮಾನಗಳ ಜೀರ್ಣೋದ್ಧಾರ ಕಾರ್ಯ.

ಆಳಿದ ಮಹಾಸ್ವಾಮಿಯವರಾದ ಶ್ರೀಮನ್ಮಾಲ್ವಡಿ ಕೃಷ್ಣರಾಜ ಒಡೆಯರವರ ಆಳಿಕೆಯಲ್ಲಿ ಜೀರ್ಣೋದ್ಧಾರ ಕಾರ್ಯವು ನಡೆದುದರ ಗುರುತಾಗಿ ಮತ್ತು ಆಳಿದ ಮಹಾಸ್ವಾಮಿಯವರಿಗೆ ಆ ದೇವರಲ್ಲಿ ಇದ್ದ ಭಕ್ತಿ ಮತ್ತು ಆ ದೇವಾಲಯವನ್ನು ಕಾಪಾಡಿಕೊಂಡು ಬರುವುದರಲ್ಲಿ ಇದ್ದ ಆಸಕ್ತಿ ಇವುಗಳ ಸೂಚನೆಯಾಗಿ ಅವರ ಭಕ್ತ ವಿಗ್ರಹವೊಂದನ್ನು ಚಾಮರಾಜೇಂದ್ರ ಕಲಾಶಾಲೆಯಲ್ಲಿ ಪಂಚಲೋಹದಿಂದ ಮಾಡಿಸಿ ಅದನ್ನು ವಿಷ್ಣುವರ್ಧನನದೆಂದು ಹೇಳುವ ಮತ್ತೊಂದು ಲೋಹ ವಿಗ್ರಹ ದೊಡನೆ ದೇವಾಲಯದಲ್ಲಿ ಈಚೆಗೆ ಪ್ರತಿಷ್ಠೆ ಮಾಡಲಾಯಿತು. ಅದರ ಜೊತೆಯಲ್ಲಿಯೇ ಪೂರ್ವ ಪದ್ಧತಿಯನ್ನನುಸರಿಸಿ ದೇವಸ್ಥಾನಕ್ಕೆ ನಡೆಸಿದ ಕೆಲಸಗಳ ವಿವರಗಳನ್ನು ತಿಳಿಸುವ ಕನ್ನಡ ಶಾಸನವೊಂದನ್ನೂ ಮುದ್ದಾಗಿ ಕೆತ್ತಿಸಿ ನೆಡಿಸಲಾಗಿದೆ.

ಡಾ. ಎಂ. ಎಚ್. ಕೃಷ್ಣ

೯. ತಮಿಳು ಮಲೆಯಾಳ ವ್ಯಾಕರಣಗಳ ವ್ಯಾಸಂಗ

ಅನೇಕ ವ್ಯಾಕರಣಗಳಿಂದಲೂ ವ್ಯಾಖ್ಯಾನಗಳಿಂದಲೂ ಕೂಡಿ ತಮಿಳಿನ ವ್ಯಾಕರಣಸಂಪತ್ತು ವಿಪುಲವೂ ವಿವಿಧವೂ ಆಗಿದೆ. ಇವುಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಬಹುಶಃ ಕ್ರಿಸ್ತಶಕದ ಆರಂಭದ ಕಾಲಕ್ಕೆ ಸೇರುತ್ತದೆ. ಆಳ ಮತ್ತು ಸಮಗ್ರತೆಗಳ ದೃಷ್ಟಿಯಿಂದ ತಮಿಳಿನ ಈ ಸಂಪತ್ತು ಸಂಸ್ಕೃತವೊಂದು ಹೊರತು ಇನ್ನಾವ ಭಾಷೆಗೂ ಕಡಮೆಯಲ್ಲ. ತೊಲ್ಕಾಪ್ಪಿಯಮ್, ವೀರಚೋಳಿಯಮ್, (೧೧ನೆಯ ಶತಾಬ್ದ) ಈ ಗ್ರಂಥದ ಮೇಲಿನ ವ್ಯಾಖ್ಯಾನ; ೧೩ನೆಯ ಶತಾಬ್ದದ ನನ್ನೂಲ್ ಮತ್ತು ನೇಮಿನಾದಮ್, ಇಳಂಬೂರಣರ್, ಚೇನಾವರೈಯರ್, ನಾಚ್ಚಿನಾರ್ಕ್ಕಿನಿಯರ್, ತೆಯ್ವಚ್ಚಿಲೈಯಾರ್, ಮತ್ತು ಇತರರು ತೊಲ್ಕಾಪ್ಪಿಯಕ್ಕೆ ಬರೆದಿರುವ ವ್ಯಾಖ್ಯಾನಗಳು; ಮೈಲೈನಾದರ್ ಮತ್ತು ಶಂಕರನಮಶ್ಶಿವಾಯರ್ ಅವರುಗಳು ನನ್ನೂಲ್ ಕೃತಿಗೆ ಬರೆದಿರುವ ವ್ಯಾಖ್ಯಾನಗಳು, ಹದಿನೇಳನೆಯ ಶತಮಾನದ ವ್ಯಾಕರಣಗಳು. ಇಲಕ್ಕಣವಿಳಕ್ಕಮ್ ಇಲಕ್ಕಣಕ್ಕೊತ್ತು, ಮತ್ತು ಪ್ರಯೋಗ ವಿವೇಕಮ್ ಹದಿನೆಂಟನೆಯ ಶತಮಾನದ ಪಾಯಿರವಿರುತ್ತಿ, ಮತ್ತು ಶಿವಜ್ಞಾನ ಮುನಿವರು ಬರೆದ ಚೂಱಾವಳಿ, ವೀರಚೋಳಿಯಂ ಮತ್ತು ಪ್ರಯೋಗವಿವೇಕಮ್ ಎಂಬ ಈ ಎರಡು ಗ್ರಂಥಗಳ ವಿನಾ (ಇನ್ನು ಕೊಂಚ ಕಡಮೆಯಾಗಿ ಇಲಕ್ಕಣಕ್ಕೊತ್ತು) ಮಿಕ್ಕ ಗ್ರಂಥಗಳಾವುವೂ ಸಂಸ್ಕೃತದ ಕೈಗೆ ಕಾದಿಲ್ಲ; ಅದರ ಸೆರಗಿಗೆ ಗಂಟುಬಿದ್ದಿಲ್ಲ. ಆದರೆ ತಮಿಳು ಮತ್ತು ಸಂಸ್ಕೃತಗಳ ಸಾಂಸ್ಕೃತಿಕ ಸಂಬಂಧಗಳನ್ನು ಸರಿಯಾಗಿ ಅರಿತುಕೊಳ್ಳಲು ಸಂಸ್ಕೃತ ಭಾಷಾಜ್ಞಾನವು ಅಗತ್ಯವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಎರಡು ಭಾಷೆಗಳನ್ನೂ ಕಟ್ಟುನಿಟ್ಟಾಗಿ ಬೇರೆ ಬೇರೆ ಇಟ್ಟು ತಮಿಳಿನ ಭಾಷಾ ಮರ್ಯಾದೆಗೆ ಮನ್ನಣೆಯನ್ನು ಕೊಡಲಾಗಿದೆ. ಐತಿಹಾಸಿಕ ಮತ್ತು ತುಲನಾತ್ಮಕ ಮಾರ್ಗಗಳನ್ನು ಈ ಗ್ರಂಥಗಳಲ್ಲಿ ಕಾಣಬಯಸಲಾಗದು. ಆದರೆ ಅವುಗಳಲ್ಲಿ ಆಧುನಿಕ ಭಾಷಾ ಶಾಸ್ತ್ರಜ್ಞರಿಗೂ ಆಶ್ಚರ್ಯವಾಗುವಂಥ ನುಡಿಸೂಕ್ಷ್ಮಗಳ ಮತ್ತು ನಯಗಳ ದರ್ಶನ ಕಂಡುಬರುತ್ತದೆ. ತೊಲ್ಕಾಪ್ಪಿಯವು (ಉದಾಹರಣೆಗೆ) ತಮಿಳಿನ ಸ್ವನಲಕ್ಷಣ, ಪದನಿಷ್ಪತ್ತಿ, ವಾಕ್ಯವಿನ್ಯಾಸ, ಮುಂತಾದುವುಗಳ ವೈಶಿಷ್ಟ್ಯಗಳನ್ನು ಸ್ಪಷ್ಟಪಡಿಸುವ ಒಂದು ವಿಷಯವರ್ಗೀಕರಣ ಮಾರ್ಗವನ್ನು ಅನುಸರಿಸಿದೆ. ಹಿಂದೆ ಹೇಳಿದ ಗ್ರಂಥಗಳಲ್ಲಿ ಕೆಲವು ಮಾತ್ರ ಸಂಸ್ಕೃತದ ಮೋಹಕ್ಕೆ ಕಟ್ಟುಬಿದ್ದಿವೆ. ವೀರ

ಜೋಳಿಯವು ಸಂಸ್ಕೃತ ತಮಿಳುಗಳು ಸತ್ವತಃ ಬೇರೆಯೆಂದು ಗ್ರಹಿಸಿದ್ದರೂ ತಮಿಳು ವ್ಯಾಕರಣವನ್ನು ಸಂಸ್ಕೃತದ ಅಚ್ಚಿಗೆ ಎರಕಹೊಯ್ಯಲು ಪ್ರಯತ್ನಿಸಿದೆ. ಉದಾ: ತಮಿಳು ನಾಮಪದಗಳಿಗೆ ಪ್ರಥಮಾವಿಭಕ್ತಿ ಪ್ರತ್ಯಯಗಳನ್ನು, ಕೆಲವು ತಮಿಳಿನ ವ್ಯಾಕರಣ ಕಾರ್ಯಗಳಿಗೆ ಸಂಸ್ಕೃತ ಪಾರಿಭಾಷಿಕ ಶಬ್ದಗಳನ್ನು ಬಳಸಿಕೊಂಡಿದೆ. ತಮಿಳಿನ 'ತೊಗೈ'ಯನ್ನು ಸಂಸ್ಕೃತ ಸಮಾಸಕ್ಕೆ ಸಮವೆಂದೆಣಿಸಿದೆ. '**ತುಮಂತ**' '**ತ್ವಾಂತ**'ಗಳನ್ನು ಬೇರ್ಪಡಿಸಿದೆ.—ಇವೆಲ್ಲ ಆ ಗ್ರಂಥದಲ್ಲಿ ಕಾಣುವ ಸಂಸ್ಕೃತ ಪ್ರಭಾವಕ್ಕೆ ನಿದರ್ಶನಗಳು. ಹದಿನೇಳನೆಯ ಶತಾಬ್ದದ 'ಇಲಕ್ಕಣಕ್ಕೊತ್ತು,' ವಿನ ಪೀಠಿಕಾ 'ಪಾಯಿರ'ದಲ್ಲಿ ಸಂಸ್ಕೃತ ತಮಿಳುಗಳಲ್ಲಿ ಭೇದವಿದ್ದರೂ ಅವುಗಳ ವ್ಯಾಕರಣ ಒಂದೇ ಎಂದಿದೆ. (ಇರುಮೊೞಿಯಾಯಿನುಂ ಇಲಕ್ಕಣಂ ಒಂದೇ) ಆದರೆ ಸಂಸ್ಕೃತ ಅಚ್ಚಿಗೆ ಹೊಂದಿಸುವ ಉದ್ದೇಶದಿಂದ ಇದರಲ್ಲಿ ತಮಿಳಿಗೆ ಸೂಚಿಸಿರುವ ಪ್ರಥಮಾವಿಭಕ್ತಿ ಪ್ರತ್ಯಯಗಳಂತಹ ಕೆಲವಂಶಗಳಲ್ಲಿ ಹೊರತು ಹೆಚ್ಚಿನ ಕೃತಕತೆಗಳೇನೂ ಇಲ್ಲ. ಹದಿನೇಳನೆಯ ಶತಾಬ್ದದ ಇನ್ನೊಂದು ಗ್ರಂಥವಾದ 'ಪ್ರಯೋಗವಿವೇಕ'ವು ಈ ದಿಕ್ಕಿನಲ್ಲಿ ಅತಿದೂರಹೋಗಿದೆ. ಈ ಗ್ರಂಥದ ಉದ್ದೇಶ ಸಂಸ್ಕೃತವ್ಯಾಕರಣದ ಪರಿಭಾಷೆಯನ್ನು ತಮಿಳಿಗೆ ಅನ್ವಯಿಸಿ ಆ ಎರಡು ಭಾಷೆಗಳ ಏಕತ್ವವನ್ನು ಕಂಠೋಕ್ತವಾಗಿ ತಿಳಿಸುವುದು. ಹೀಗಾಗಿ ತಮಿಳಿನಲ್ಲಿ ಹಲವು ಬಗೆಯ ಸಂಸ್ಕೃತ ಲಕ್ಷಣಗಳನ್ನು ಹೊಸದಾಗಿ ಕಂಡುಹಿಡಿದಿರುವುದು ಕಾಣುತ್ತದೆ. ಆತ್ಮನೇಪದ, ಪರಸ್ಮೈಪದ, ಭಾವೇಪ್ರಯೋಗ, ಪ್ರಥಮಾವಿಭಕ್ತಿಯ ಲಿಂಗ ವಚನ ಪ್ರತ್ಯಯಗಳು, ನಿರ್ಧಾರಣಷಷ್ಠಿ, ಸತಿಸಪ್ತಮಿ, ಕರ್ಮಣಿಷಷ್ಠಿ, ಉಪಪದ ವಿಭಕ್ತಿ, ಇತ್ಯಾದಿ.

ವ್ಯಾಕರಣಕ್ಕೆ ತಮಿಳಿನಲ್ಲಿ ವಿಶಾಲಾರ್ಥವಿದೆ. ಎಲ್ಲೋ ಕೆಲವರು ಕೇವಲ ವೈಯಾಕರಣಿಗಳ ಹೊರತು ಇತರರಿಗೆ ವ್ಯಾಕರಣವು ರಸಾಸ್ವಾದ, ಭಾವ,—ಆ ಮೂಲಕ ಆಧ್ಯಾತ್ಮಿಕಜ್ಞಾನಕ್ಕೆ ಮಾರ್ಗ. ತಮಿಳಿನಲ್ಲಿ 'ಎೞುತ್ತು' (ಶಬ್ದಗಳು) 'ಜೊಲ್' (ಪದಾಂಗರಚನೆ ಮತ್ತು ವಾಕ್ಯವಿನ್ಯಾಸ) 'ಪೊರುಳ್' (ಜೀವನಸಾಹಿತ್ಯಗಳ ಪುರುಳು) 'ಯಾಪ್ಪು' (ಛಂದಸ್ಸು) ಮತ್ತು 'ಅಣಿ' (ಅಲಂಕಾರ)—ಈ ಎಲ್ಲವೂ ವ್ಯಾಕರಣಕ್ಕೆ ಸೇರಿವೆ. ಜನತೆಯ ಬಹು ಭಾಗಕ್ಕೆ ವ್ಯಾಕರಣವು ಅರ್ಥಕ್ಕೆ ವಿಶೇಷವಾಗಿ ಸಹಾಯಕವಾದ ಉಪಾಂಗವೇ ಹೊರತು ಪ್ರಧಾನವಲ್ಲ. ಅಡಿಯಾರ್ಕ್ಕು ನಲ್ಲಾರ್, ಪರಿಮೇಲೞಗರ್ ಮುಂತಾದ ತಮಿಳು ವ್ಯಾಖ್ಯಾನಕಾರರು ಇದನ್ನು ಸದಾ ದೃಷ್ಟಿಯಲ್ಲಿಟ್ಟುಕೊಂಡಿದ್ದರು. ತಮಿಳು ವ್ಯಾಕರಣ ಗ್ರಂಥೋಕ್ತಿಗಳಲ್ಲಿನ ಅಸ್ಪಷ್ಟತೆಗಳಿಗೆ ಇವರ ವ್ಯಾಖ್ಯಾನದ ಜ್ಯೋತಿಯ ಪ್ರವಾಹವು ಹೆಬ್ಬೆಳಕಾಗಿದೆ.

ಈ ಸಂಪ್ರದಾಯವನ್ನು ದಿವಂಗತ ಡಾ. ವಿ. ಸ್ವಾಮಿನಾಥ ಅಯ್ಯರ್ ಅಂಥ ವಿದ್ವಾಂಸರು ಆಧುನಿಕ ಕಾಲದಲ್ಲಿ ಬಹಳ ಚೆನ್ನಾಗಿ ನಡಸಿಕೊಂಡು ಬಂದಿದ್ದಾರೆ. 'ಕುಱುಂದೊಗೈ' ಎಂಬ ತಮಿಳು ಶಂಗಂ ಮಹಾಕಾವ್ಯಕ್ಕೆ ಅವರು ಬರೆದಿರುವ ವ್ಯಾಖ್ಯಾನವು ಆ ಬಗೆಯ ಗ್ರಂಥಗಳಲ್ಲಿ ರತ್ನಪ್ರಾಯವಾದ್ದು.

ವ್ಯಾಕರಣ ವಿಷಯವಾಗಿ ಈಗ ಜನರಲ್ಲಿರುವ ಅಪ್ರೀತಿಗೆ ಕಾರಣ ಸ್ಕೂಲು ಕಾಲೇಜುಗಳಲ್ಲಿ ಅನೇಕ ವೇಳೆ ಆ ಶಾಸ್ತ್ರದ ಒಣಪ್ರಕ್ರಿಯೆಗಳಿಗಿರುವ, ಬೇಸರ ತರುವಷ್ಟು ಹೆಚ್ಚಿನ ಪ್ರಾಶಸ್ತ್ಯ; ಆಧುನಿಕ ಜೀವನದ ಕ್ಲೇಶದಲ್ಲಿ ಸಾಹಿತ್ಯದ ಅಥವಾ ಆಧ್ಯಾತ್ಮಿಕ ಸ್ವಾರಸ್ಯಗಳನ್ನು ಆಸ್ವಾದಿಸಲು ವಿರಾಮ ಕಡಮೆಯಾಗಿರುವುದೂ ಸ್ವಲ್ಪ ಮಟ್ಟಿಗೆ ಕಾರಣವೇ. ಆದರೆ ಡಾ. ವಿ. ಸ್ವಾಮಿನಾಥ ಅಯ್ಯರ್ ಅಂಥ ಪಾರಂಗತರ ಕೈಯಲ್ಲಿ ಪ್ರಯೋಗನಿಷ್ಠವಾದ ವ್ಯಾಕರಣದಿಂದಾಗುವ ಕೆಲಸ ಮೋಹಕವಾಗಬಲ್ಲದು. ಸುಮಾರು ಮೂವತ್ತು ವರ್ಷಗಳ ಹಿಂದೆ ಈ ಮಹಾ ವಿಧಾಯಕ ವ್ಯಕ್ತಿಯ ಸುತ್ತಲೂ ನೆರೆದು ಅವರು ತಮಿಳು ವ್ಯಾಕರಣ, ಜೀವನ, ಸಾಹಿತ್ಯಗಳನ್ನು ಕುರಿತು ನಡಸಿದ ಪ್ರವಚನಗಳನ್ನು ವಿದ್ಯಾರ್ಥಿಗಳೂ ಇತರರೂ ಉತ್ಸಾಹಾತಿಶಯಗಳಿಂದ ಕೇಳಿ ಬೆಬ್ಬೆರಗಾಗುತ್ತಿದ್ದುದು ನನಗೆ ನೆನಪಿದೆ.

ಪಾಶ್ಚಾತ್ಯ ಸಂಸರ್ಗದಿಂದ ವ್ಯಾಕರಣದಲ್ಲಿ ಒಂದು ಹೊಸ ಶಕ ಆರಂಭವಾಯಿತು. ವಿಷಯಪ್ರವೇಶದ ಒಂದು ಹೊಸ ಮಾರ್ಗವೂ, ಹೊಸದಾದ ಪರಿಭಾಷೆಯೂ ಹುಟ್ಟಿಕೊಂಡವು. ಸ್ವರೂಪವರ್ಣನಾತ್ಮಕವಾದ ತಮಿಳು ವ್ಯಾಕರಣಗಳು ಐರೋಪ್ಯಭಾಷೆಗಳಲ್ಲಿ ರಚಿತವಾದವು. ತಮಿಳಿನಲ್ಲಿ ಆಳವಾಗಿ ಅವಗಾಹನೆ ಮಾಡಿದ ಐರೋಪ್ಯ ವಿದ್ವಾಂಸರಲ್ಲಿ ಬೆಶ್ಚಿ ಮೊದಲನೆಯಾತನು. ಆತನು ತಮಿಳಿನ ಆಡುಮಾತಿಗೂ, ಕಾವ್ಯಪ್ರಯೋಗಕ್ಕೂ ಹೊಂದುವ ವ್ಯಾಕರಣವನ್ನು ಬರೆದನು. ಆತನ 'ತೊನ್ನೂಲ್ವಿಳಕ್ಕಮ್' ತಮಿಳಿನ ದೇಶೀಯ ಸಂಪ್ರದಾಯಕ್ಕೂ, ದೃಷ್ಟಿಗೂ ಅನುಗುಣವಾಗಿ ರಚಿತವಾಗಿದೆ. ಪೋಪ್ ಅವರ ತಮಿಳು ಪಾಂಡಿತ್ಯ ಸುಪ್ರಸಿದ್ಧ. ವಿನ್ಸನ್ ಎಂಬ ಫ್ರೆಂಚ್ ವಿದ್ವಾಂಸನು ಈ ಶತಾಬ್ದದ ಆರಂಭದಲ್ಲಿ ಒಂದು ಒಳ್ಳೆಯ ವ್ಯಾಕರಣವನ್ನು ಬರೆದನು. ಆದರೆ ಇವೆಲ್ಲವೂ ಬಹುಮಟ್ಟಿಗೆ ವರ್ಣನಾತ್ಮಕ ಗ್ರಂಥಗಳು. ಚರಿತ್ರೆಯ ಕಡೆಗೆ ಗಮನಿಸಿದವರು ಅಪರೂಪ. ಚಾರಿತ್ರಕ ಮತ್ತು ತುಲನಾತ್ಮಕ ಮಾರ್ಗಗಳನ್ನು ತಮಿಳಿಗೆ ಅನ್ವಯಿಸಿದವರಲ್ಲಿ ಕಾಲ್ಡ್‌ವೆಲ್ಲರೇ ಮೊದಲನೆಯವರು. ಆದರೆ ನಾನಾ ಕಾರಣಗಳಿಂದ ಚಾರಿತ್ರಕ ಭಾಗಕ್ಕೆ ಸಾಕಷ್ಟು ಗಮನ ಹರಿಯಲಿಲ್ಲ. ಹೋದ ಶತಾಬ್ದದಲ್ಲಿ ತುಲನಾತ್ಮಕ ಮಾರ್ಗದಲ್ಲಿ ಕೆಲಸ ಮಾಡಿದ ಭಾರತೀಯ ವಿದ್ವಾಂಸರು ಬಹುಶಃ ಶ್ರೀ ಶೇಷಗಿರಿ ಶಾಸ್ತ್ರಿಗಳೊಬ್ಬರೇ. ಅವರು ಅನುಸರಿಸಿದ

ಕ್ರಮ ಅತಿ ಅಸಮರ್ಪಕ. ಆದರೆ ಕಾಲ್ಡ್ವೆಲ್ಲರ ಕಣ್ಣಿಗೆ ಬೀಳದೆ ತಪ್ಪಿಸಿಕೊಂಡ ಭಾಷೆಯ ಹಲವು ಸಮರೂಪಗಳನ್ನು ಇವರು ಬರೆದಿಟ್ಟರು.

ಈ ಮಧ್ಯೆ ಭಾಷಾ ಶಾಸ್ತ್ರವು ಪಾಶ್ಚಾತ್ಯ ದೇಶಗಳಲ್ಲಿ ಬಹಳ ಅಭಿವೃದ್ಧಿ ಹೊಂದಿ ಖಚಿತವಾದ ನಿಷ್ಕರ್ಷೆಯುಳ್ಳ ಶಾಸ್ತ್ರಪದ್ಧತಿಯೊಂದು ಬೇಗ ಬೇಗ ರಚಿತವಾಗುತ್ತಿದ್ದಿತು. ವ್ಯಾಕರಣದ ಸಮಗ್ರ ಪ್ರಪಂಚವನ್ನು ಕುರಿತೂ, ಒಂದೇ ಮಟ್ಟದ ವ್ಯಾಕರಣಾಂಶಗಳ ಪರ್ಯಾಲೋಚನೆಗಳಲ್ಲಿಯೂ ಒಂದು ಕ್ರಮಬದ್ಧವಾದ ವ್ಯಾಸಂಗ ವಿಧಾನವು ಅಲ್ಲಿ ಬೆಳೆಯುತ್ತಿತ್ತು. ಪ್ರೊ. ಮಾರ್ಕ್ ಹಂಟರ್ ಅವರು ಪಾಶ್ಚಾತ್ಯ ಪದ್ಧತಿಗಳನ್ನು ದ್ರಾವಿಡ ಭಾಷೆಗಳಿಗೆ ಅನ್ವಯಿಸುವ ಕಾರ್ಯದಲ್ಲಿ ಆಸಕ್ತಿ ವಹಿಸಿದರು. ದ್ರಾವಿಡ ಭಾಷೆಗಳ ವ್ಯಾಸಂಗ ಶಾಖೆಯೊಂದು ಪ್ರೊ. ಕಾಲಿನ್ಸ್‌ರ ನೇತೃತ್ವದಲ್ಲಿ ಏರ್ಪಟ್ಟಿತು. ಒಂದೊಂದು ವಿಶೇಷ ಸಂಗತಿಯನ್ನು ಪರಿಶೀಲಿಸಿ ಬರೆದ ಕೆಲವು ಗ್ರಂಥಗಳು ಪ್ರಕಟವಾದುವು. ಪ್ರೊ. ಡೇನಿಯಲ್ ಜೋನ್ಸ್ ಅವರು ಶಿಕ್ಷಾಶಾಸ್ತ್ರವನ್ನು (ಫೋನೆಟಿಕ್ಸ್) ಕುರಿತು ಮದರಾಸಿನಲ್ಲಿ ಕೊಟ್ಟ ಉಪನ್ಯಾಸಗಳಿಂದ ಭಾಷಾಶಾಸ್ತ್ರದ ಈ ಭಾಗದ ವ್ಯಾಸಂಗಕ್ಕೆ ಪ್ರೋತ್ಸಾಹನವುಂಟಾಯಿತು. ಪ್ರಾಚೀನ ತಮಿಳಿನ ಮುಖ್ಯ ಗ್ರಂಥಗಳ ಪ್ರಕಟನೆಯಿಂದ ವಿದ್ವಾಂಸರಿಗೆ ವಿಪುಲ ಸಾಮಗ್ರಿ ದೊರಕಿತು. ಉಪಲಬ್ಧವಾಗಿರುವ ತಮಿಳು ವ್ಯಾಕರಣಗಳಲ್ಲೆಲ್ಲ ಪ್ರಾಚೀನತಮವಾದ ಗ್ರಂಥದ ವ್ಯಾಸಂಗಕ್ಕೆ ಪುನಃ ಜೀವಬಂದಿತು. ಹೀಗೆ ಆಧುನಿಕ ದೃಷ್ಟಿಯಿಂದ ತಮಿಳು ಭಾಷೆಯ ಗಾಢವಾದ ವ್ಯಾಸಂಗಕ್ಕೆ ಬೇಕಾದ ರಂಗ ಸಜ್ಜಾಯಿತು. ಆದರೆ ಸಮಗ್ರವಾದ ತಮಿಳಿನ ಚರಿತ್ರೆ ಮಾತ್ರ ಇನ್ನೂ ದೂರದ ಆಸೆಯಾಗಿಯೇ ಉಳಿದಿದೆ.

ಈ ಸಂದರ್ಭದಲ್ಲಿ ಡಾ. ಪಿ. ಎಸ್. ಸುಬ್ರಹ್ಮಣ್ಯಶಾಸ್ತ್ರಿಗಳು ಮಾಡಿರುವ ಕೆಲಸವನ್ನು ಕುರಿತು ಹೇಳಬೇಕಾದ್ದು ಅಗತ್ಯ. ಇವರು ತೊಲ್ಕಾಪ್ಪಿಯಂ ಮತ್ತು ಶಂಗಂ ತಮಿಳುಗಳ ಸಾಮಗ್ರಿಯನ್ನು ಬಹಳ ಜಾಗರೂಕತೆಯಿಂದ ಪರೀಕ್ಷಿಸಿ ಸ್ವಾರಸ್ಯವಾದ ನಿರ್ಣಯಗಳಿಗೆ ಬಂದರು.[1] ತಮಿಳು ಚರಿತ್ರೆಯಲ್ಲಿ ಕಾಲವಿಭಾಗಗಳನ್ನು ಗೊತ್ತಾಗಿ ಮಾಡಿದ ಕೀರ್ತಿ ಅವರಿಗೆ ಸಲ್ಲಬೇಕು. ಅವರು ಶಿಕ್ಷಾ ಶಾಸ್ತ್ರದಲ್ಲಿ ಎತ್ತಿದ ವಾದಗಳು ಕೆಲವನ್ನು ನಾವು ಒಪ್ಪದಿರಬಹುದು. ಆದರೆ ಪ್ರಾಚ್ಯ ಪಾಶ್ಚಾತ್ಯ ಪದ್ಧತಿಗಳೆರಡನ್ನೂ ಸೇರಿಸಿದ ತಮಿಳು ವಿದ್ವಾಂಸರಲ್ಲಿ ಅವರೇ ಮೊದಲಿಗರು. ಅವರ 'ಎಟುತ್ತದಿಗಾರಕ್ಕುರಿಪ್ಪು' ಮತ್ತು 'ಚೊಲ್ಲದಿಗಾರಕ್ಕುರಿಪ್ಪು'—ಈ ಗ್ರಂಥಗಳು ಸಂಪ್ರದಾಯವನ್ನೂ ಆಧುನಿಕ ದೃಷ್ಟಿಯನ್ನೂ ಸೇರಿಸಿ ಒಂದುಮಾಡಿವೆ. ಅವರು

[1] ಅವರ *History of Grammatical Studies in Tamil and Sanskrit* ಎಂಬ ಗ್ರಂಥವನ್ನು ನೋಡಿ.

ತೊಲ್ಕಾಪ್ಪಿಯದ ಕೆಲವು ಭಾಗಗಳನ್ನು ಇಂಗ್ಲಿಷಿಗೆ ಪರಿವರ್ತಿಸಿದ್ದಾರೆ. ವರ್ಣನಾತ್ಮಕವಾದ ಕೆಲವು ವ್ಯಾಕರಣಗಳನ್ನು ರಚಿಸಿದ್ದಾರೆ. ಡಾ. ಶಾಸ್ತ್ರಿಗಳ ಕೃತಿಗಳು ಖಂಡಿತವಾಗಿಯೂ ಪ್ರಗತಿಮಾರ್ಗದಲ್ಲಿ ಹೆಜ್ಜೆಯಿಟ್ಟಿವೆಯಾದರೂ ಸಮಗ್ರ ಐತಿಹಾಸಿಕ ವ್ಯಾಕರಣಕ್ಕೆ ಅವು ಪ್ರತ್ಯಾಮ್ನಾಯವಾಗಲಾರವು.

ಆಧುನಿಕ ಭಾಷಾಶಾಸ್ತ್ರಜ್ಞರಿಗೆ ಶಿಕ್ಷಾಶಾಸ್ತ್ರದ ಬೆಳವಣಿಗೆಯಲ್ಲಿ ನಡೆದಿರುವ ಅತಿನವೀನ ಪರಿಶೀಲನೆಗಳ ಅರಿವು ಅತ್ಯಗತ್ಯ. ತಮಿಳು ವಿದ್ವಾಂಸರಿಗೆ ತಮಿಳು ಶಿಕ್ಷಾ ಮತ್ತು ಸ್ವನ ಶಾಸ್ತ್ರದಲ್ಲಿ (ಫೋನಾಲಜಿ) ಸಮರ್ಪಕವಾದ ಕೆಲಸ ನಡೆಯಲು ಅಡ್ಡಿಯಾಗಿದೆ. ತಮಿಳಿನಲ್ಲಿ ಈ ಮಾರ್ಗದಲ್ಲಿ ಏನು ಕೆಲಸಮಾಡಬಹುದೆಂಬುದನ್ನು ಆರ್ಡೆನ್ ಅವರ ತಮಿಳು ವ್ಯಾಕರಣದ ಈಚಿನ ಸಂಸ್ಕರಣಕ್ಕೆ ಬರೆದಿರುವ ಒಂದು ಅನುಬಂಧದಲ್ಲಿ ಪ್ರೊ. ಜೆ. ಆರ್. ಫಿರ್ತ್ ಅವರು ತೋರಿಸಿದ್ದಾರೆ.

ಹಳೆಯ ತಮಿಳು ಕೃತಿಗಳಲ್ಲಿ ದೊರೆಯುವ ಅನೇಕ ಭಾಷಾವಿಚಾರಗಳನ್ನು ವಿವರವಾಗಿ ವಿಭಜಿಸಿ ವರ್ಗೀಕರಣ ಮಾಡಿದರೆ ಈ ಐತಿಹಾಸಿಕ ವ್ಯಾಕರಣ ರಚನೆಗೆ ದಾರಿಹಾಕಿದಂತೆ ಆಗುತ್ತದೆ. ಶ್ರೀ ಎಲ್. ವಿ. ರಾಮಸ್ವಾಮಿ ಅಯ್ಯರ ವರು ಬರೆದಿರುವ 'ತಮಿಳು ಕ್ರಿಯಾಪದದ ಅಂಗರಚನೆ' 'ಕಲಿತ್ತೊಗೈಭಾಷೆ' 'ತಿರುವಳ್ಳುವರ್ ಅವರ ಕುಱಳಿನ ಭಾಷೆ' 'ನಾಮಪ್ರತ್ಯಯಗಳು' 'ದಕ್ಷಿಣ ಹಿಂದೂ ದೇಶದ ದ್ರಾವಿಡಭಾಷೆಯಲ್ಲಿನ ಸಾದೃಶ್ಯ ವೈದೃಶ್ಯಗಳು' ಮುಂತಾದ ಲೇಖನಗಳಲ್ಲಿ ಈ ಬಗೆಯ ವಸ್ತುವಿಭಜನೆಯೂ ಸಂಯೋಜನೆಯೂ ಇವೆ.

ನಿಘಂಟು.—ಮದರಾಸು ವಿಶ್ವವಿದ್ಯಾನಿಲಯದವರು ತಮಿಳು ನಿಘಂಟುವಿನ ಪ್ರಕಟನೆಯನ್ನು ಮುಗಿಸಿದ್ದಾರೆ. ಇನ್ನೊಂದು ತಮಿಳು ನಿಘಂಟಿನ ಕೆಲವು ಭಾಗಗಳು ಹೊರಗೆ ಬಂದಿವೆ. ಜಾಫ್ನದ ರೆವರೆಂಡ್ ಎಸ್. ಜ್ಞಾನಪ್ರಕಾಶರು ಈ ಹೊಸ ನಿಘಂಟಿನ ಕರ್ತೃಗಳು. ವಿಶ್ವವಿದ್ಯಾನಿಲಯದ ಪ್ರಾಚ್ಯ ಸಂಶೋಧನಾ ಸಂಸ್ಥೆಯ ತಮಿಳು ಶಾಖೆಯವರು ಸರ್ವನಾಮಗಳನ್ನು ಕುರಿತು ಒಂದು ಗ್ರಂಥವನ್ನೂ, ವ್ಯಾಕರಣ ಪ್ರಕ್ರಿಯೆಗಳನ್ನು ಕುರಿತು ಇನ್ನೊಂದನ್ನೂ ಪ್ರಕಟಿಸಿದ್ದಾರೆ. ಇವೆರಡೂ ಮ. ರಾ. ವೆಂಕಟರಾಯಲು ರೆಡ್ಡಿಯಾರ್ ಅವರು ರಚಿಸಿದ ಗ್ರಂಥಗಳು. ರಾವ್‌ಸಾಹೇಬ್ ಎಸ್. ವೈಯಪುರಿಪಿಳ್ಳೆಯವರು ಹಲವು ಪ್ರಾಚೀನ ನಿಘಂಟುಗಳನ್ನು ಸಂಪಾದಿಸಿದ್ದಾರೆ.

ದಿ. ಆರ್. ಸ್ವಾಮಿನಾಥ ಅಯ್ಯರವರು ತಮಿಳು ಸಂಸ್ಕೃತ ಜನ್ಯವೆಂದು ಸ್ಥಾಪಿಸಲು ಬಹು ಕಷ್ಟಪಟ್ಟರು. ಇನ್ನೊಂದು ಕಡೆ ರೆವರೆಂಡ್ ಜ್ಞಾನಪ್ರಕಾಶ ರವರು ತಮಿಳು ಶಬ್ದಗಳು ದೈವಜನ್ಯವೆಂದೂ ಅನ್ಯಭಾಷಾಶಬ್ದಗಳು ಹಲವು ತಮಿಳಿನ ಪುರಾರೂಪಗಳಿಂದ (Proto-Tamil) ಹುಟ್ಟಿದುವೆಂದೂ ಸ್ಥಾಪಿಸಲು ಪ್ರಯತ್ನಿ

ಸಿದ್ದಾರೆ. ಇವೆರಡರಲ್ಲಿ ಯಾವ ಸಿದ್ಧಾಂತವೂ ಶಾಸ್ತ್ರೀಯವಾಗಿ ಸ್ಥಾಪಿತವಾಗಿಲ್ಲ.

ಹದಿನೆಂಟನೆಯ ಶತಮಾನಕ್ಕೆ ಹಿಂದೆ ಪಶ್ಚಿಮತೀರದ ಭಾಷೆಯಲ್ಲಿ ದೇಶ್ಯ ವ್ಯಾಕರಣಗಳು ಅಪರೂಪವಾದುದಕ್ಕೆ, ಬಹಳ ಹಿಂದಿನ ಕಾಲದಿಂದಲೂ ಕೇರಳ ಭಾಷಾಸಾಹಿತ್ಯಗಳಲ್ಲಿ ಸಂಸ್ಕೃತಕ್ಕೆ ಇದ್ದ ಪ್ರಾಧಾನ್ಯವೇ ಕಾರಣ. ಮುಖ್ಯವಾಗಿ ಮಣಿಪ್ರವಾಳ ಶೈಲಿಯ ಬರಹಗಳನ್ನೇ ವಿಮರ್ಶಿಸುವ 'ಲೀಲಾತಿಲಕಂ' ಎಂಬ ಹದಿನಾಲ್ಕನೆಯ ಶತಮಾನದ ಗ್ರಂಥದಲ್ಲಿ ಮೂರು ಅಧ್ಯಾಯಗಳು ಮಲೆಯಾಳ ಭಾಷೆಯ ಲಕ್ಷಣಗಳ ಚರ್ಚೆಗೆ ವಿೂಸಲಾಗಿವೆ. ಗೈರ್ವಾಣಿಯ ಪ್ರಭಾವವು ಕೇರಳದ ಭಾಷೆಯ ಮೇಲೆ ಎಷ್ಟು ಮಟ್ಟಿಗೆ ಇದ್ದಿತೆಂದರೆ ಸಂಸ್ಕೃತದಲ್ಲಿ ಪಾಂಡಿತ್ಯ ವಿದ್ದರೆ ಮಲೆಯಾಳದಲ್ಲಿ ಪಾಂಡಿತ್ಯ ತಾನಾಗಿಯೇ ಉಂಟಾಗುತ್ತದೆಯೆಂದು ತಿಳಿಯ ಲಾಗಿತ್ತು. ಅಲ್ಲದೆ ಮಲೆಯಾಳದಲ್ಲಿ ಸಂಸ್ಕೃತ ವ್ಯಾಕರಣದ ಪರಿಭಾಷೆ ಅತ್ಯಂತ ಪ್ರಬಲವಾಗಿತ್ತು. ಕಂಠಪಾಠಕ್ಕೆ ಯೋಗ್ಯವಾದ ಮಲೆಯಾಳ ಪದ್ಯಗಳಲ್ಲಿ ಸಂಸ್ಕೃತ ವ್ಯಾಕರಣವನ್ನು ಸರಳವಾಗಿ ಹೇಳುವ ಉದ್ದೇಶದಿಂದ ರಚಿತವಾದ 'ಬಾಲ ಪ್ರಬೋಧ'ವೆಂಬ ಸಂಸ್ಕೃತ ಬಾಲವ್ಯಾಕರಣವು (ಇದರ ಕಾಲ ಅನಿರ್ದಿಷ್ಟ) ಭಾವೇಪ್ರಯೋಗ, ಸತಿಸಪ್ತಮಿ, ಅನಾದರೆ ಷಷ್ಠಿ ಮುಂತಾದವುಗಳಿಗೆ ಮಲೆಯಾಳ ದಿಂದ ನಿದರ್ಶನಗಳನ್ನು ಕೊಡುತ್ತದೆ. ಭೂಮಧ್ಯಸಮುದ್ರದ ಕಡೆಯಿಂದ ಬಂದ ಮಿಷನರಿಗಳು ೧೮ನೆಯ ಶತಾಬ್ದದಲ್ಲಿ ಮಲೆಯಾಳದ ವ್ಯಾಕರಣಗಳು ಕೆಲವನ್ನು ರಚಿಸಿದರಾದರೂ ಅವೂ ಅಸಮರ್ಪಕ. ಡ್ರಮ್ಮಂಡ್ ಮತ್ತು ಸ್ಪ್ರಿಂಗ್ ಇವರು ಐರೋಪ್ಯರ ಈ ಆರಂಭಪ್ರಯತ್ನಗಳನ್ನು ತಿದ್ದಿ ಉತ್ತಮಗೊಳಿಸಿ ವರ್ಣನಾತ್ಮಕ ವ್ಯಾಕರಣಗಳನ್ನು ರಚಿಸಿದರು. ಮಲೆಯಾಳದ ವ್ಯಾಕರಣವನ್ನು ಸಮಗ್ರವಾಗಿ ರಚಿಸಿದವರಲ್ಲಿ ಪೀಟ್ ಮೊದಲನೆಯಾತ. ಇದು ಸುಮಾರು ನೂರು ವರ್ಷಗಳ ಹಿಂದೆ ಪ್ರಕಟಿತವಾಯಿತು. ಕಳೆದ ಶತಾಬ್ದದ ಉತ್ತರಾರ್ಧದಲ್ಲಿ ಪ್ರಕಟಿತವಾದ ಗುಂಡರ್ಟ್ ಅವರ ವ್ಯಾಕರಣ ಮತ್ತು ನಿಘಂಟುಗಳು (ಮಲೆಯಾಳದ ಅನೇಕ ಪ್ರಾಚೀನ ಕೃತಿಗಳು ಅವರಿಗೆ ತಿಳಿದಿರಲಿಲ್ಲವಾದರೂ) ಇಂದಿಗೂ ಜ್ಞಾನದ ಗಣಿಗಳಾಗಿವೆ. ಹತ್ತೊಂಬತ್ತ ನೆಯ ಶತಾಬ್ದದ ಮಲೆಯಾಳ ವಿದ್ವಾಂಸರಲ್ಲಿ ನೆದುಂಗಾಡಿ ಮತ್ತು ಮಾಥೆನ್ ಅವರು ಸ್ಮರಣೀಯರು. ನೆದುಂಗಾಡಿಯವರು ತಮ್ಮ 'ಕೇರಳಕೌಮುದಿ'ಯನ್ನು ಸೂತ್ರ ಶೈಲಿಯಲ್ಲಿ ರಚಿಸಿದರು. ಮಾಥೆನ್ ಅವರು ತಿರುವಾಂಕೂರಿನ ಆಡುಮಾತಿನ ರೂಪ ಗಳನ್ನು ಕ್ರೋಡೀಕರಿಸಿ ಒಂದು ವ್ಯಾಕರಣವನ್ನು ರಚಿಸಿದರು. ಕಳೆದ ಶತಾಬ್ದದ ಅಂತ್ಯಭಾಗದಲ್ಲಿ "ಕೇರಳಪಾಣಿನೀಯಂ" ಎಂಬ ಗ್ರಂಥವು ಪ್ರಕಟಿತವಾಯಿತು. ಇದು ಮಲೆಯಾಳ ಸಂಸ್ಕೃತಗಳಲ್ಲಿ ಗಣ್ಯ ವಿದ್ವಾಂಸರೊಬ್ಬರಪಾಂಡಿತ್ಯ ಪೂರ್ಣ ಕೃತಿ.

ಹಲವು ಅನೇಕ ಹೊಸ ವಿಷಯುಗಳನ್ನು ಎತ್ತಿ ತೋರಿಸಿದ ಈ ಕೃತಿ ಆಧುನಿಕ ದೃಷ್ಟಿಯಿಂದ ರಚಿತವಾಗಿದೆ. ಚಾರಿತ್ರಿಕ ದೃಷ್ಟಿಯಿಂದ ನೋಡಿದಾಗ ಕಾಣಿಸಿದ ಭಾಷೆಯ ರೂಪ ರೇಖೆಗಳು ಅದರಲ್ಲಿ ಕಾಣುತ್ತವೆ. ಈ ಶತಾಬ್ದದ ಪ್ರಾರಂಭದಲ್ಲಿ ಒಂದು ಒಳ್ಳೆಯ ವರ್ಣನಾತ್ಮಕ ಮಲೆಯಾಳ ವ್ಯಾಕರಣವನ್ನು ಬರೆದ ಇನ್ನೊಬ್ಬ ವಿದ್ವಾಂಸರು ಶ್ರೀ ಶೇಷಗಿರಿ ಪ್ರಭು. ಇವರ ವ್ಯಾಕರಣ ಪಾಂಡಿತ್ಯ ಪ್ರತಿಭೆಗಳು ಅಸಾಧಾರಣ.

ಮ. ರಾ. ಎಲ್. ವಿ. ರಾಮಸ್ವಾಮಿ ಅಯ್ಯರವರು ಮಲೆಯಾಳ ಭಾಷೆಯ ಶಿಕ್ಷಾ ಶಾಸ್ತ್ರ (*Malayalam Phonetics*) ಎಂಬಲ್ಲಿ (ಅಂತರ್‌ರಾಷ್ಟ್ರೀಯ ಶಿಕ್ಷಾ ವಿಜ್ಞಾನ ಸಂಸ್ಥೆಯ ವರ್ಣೋಚ್ಚಾರ ಸೂಚಿಕೆಯನ್ನು ಅನುಸರಿಸಿ) ಮಲೆಯಾಳದ ಶಬ್ದಗಳನ್ನು ಪರಿಶೀಲಿಸಿದ್ದಾರೆ. ಮಲೆಯಾಳಂ ಭಾಷೆಯಲ್ಲಿನ ಸ್ವನಮೀಮಾಂಸೆಯ ಪ್ರಥಮ ಪುಸ್ತಕ (*Primer of Malayalam Phonology*) ಮತ್ತು ಮಲೆಯಾಳಂ ಪದಾಂಗ ರಚನೆಯ ವಿಕಾಸ ಕ್ರಮ (*Evolution of Malayalam Morphology*) ಈ ಪಶ್ಚಿಮ ತೀರದ ಭಾಷೆಯ ಒಂದು ಚಾರಿತ್ರಿಕ ವ್ಯಾಕರಣವಾಗುತ್ತವೆ. 'ಎಟುತ್ತಚ್ಚನ್' ಇನ ಭಾಷೆ "ದೂತವಾಕ್ಯದ ಭಾಷೆ" ಮುಂತಾದ ಹಲವು ಲೇಖನಗಳಲ್ಲಿ ಅವರು ಮಲೆಯಾಳದ ಪ್ರಾಚೀನ ಕೃತಿಗಳ ಭಾಷಾ ಸಾಮಗ್ರಿಯನ್ನು ಕುರಿತು ವಿಚಾರ ಮಾಡಿದ್ದಾರೆ. ಮತ್ತು ಇತರ ಅನೇಕ ಲೇಖನ ಉಪನ್ಯಾಸಗಳಲ್ಲಿ ಭಾಷಾ ಶಾಸ್ತ್ರ ಸಮಸ್ಯೆಗಳನ್ನು ವಿಮರ್ಶಿಸಿದ್ದಾರೆ.

ಲಂಡನಿನ ಪ್ರಾಚ್ಯ ವ್ಯಾಸಂಗ ಶಾಲೆಯ ಆರ್. ಟಿ. ಬಟ್ಲೆನ್ ಎಂಬ ಐರೋಪ್ಯ ವಿದ್ವಾಂಸರು ಆ ಶಾಲೆಯ ಪತ್ರಿಕೆಯಲ್ಲಿ ಮಲೆಯಾಳ ಶಬ್ದಗಳ ಸ್ವನಾಂಶರಚನೆಯ ಲಕ್ಷಣಗಳನ್ನು (Phonematics) ಕೆಲವು ವರ್ಷಗಳ ಹಿಂದೆ ಚರ್ಚಿಸಿದ್ದಾರೆ. ಡಾ|| ಗೋದ ವರ್ಮರ "ಇಂಡೋ ಆರ್ಯನ್ ಲೋನ್ಸ್ ಇನ್ ಮಲೆಯಾಳಂ" ಎಂಬ ಗ್ರಂಥವು ಇನ್ನೂ ಪ್ರಕಟವಾಗಬೇಕಾಗಿದೆ.

ಉಳ್ಳೂರ್ ಅವರು ಪ್ರಧಾನವಾಗಿ ಕವಿ ಮತ್ತು ಸಾಹಿತಿ. ಆದರೂ ಅವರಿಗೆ ವ್ಯಾಕರಣ ಸಮಸ್ಯೆಗಳ ಪರಿಶೀಲನದಲ್ಲಿ ಬಹಳ ಆಸಕ್ತಿ. ಹಲವು ವರ್ಷಗಳ ಹಿಂದೆ ಪ್ರಕಟವಾದ ಅವರ 'ರಾಮಚರಿತಂ' ಮತ್ತು 'ಕಣ್ಣಶ್ಶರಾಮಾಯಣಂ' ಗಳ ಸಂಸ್ಕರಣಗಳು ಅವರಿಗೆ ತಮಿಳು ಸಂಸ್ಕೃತಗಳಲ್ಲಿರುವ ಅತಿಶಯ ಪಾಂಡಿತ್ಯವನ್ನು ವ್ಯಕ್ತಪಡಿಸುವ ಬಹಳ ಬೆಲೆಬಾಳುವ ವ್ಯಾಕರಣ ಟಿಪ್ಪಣಿಗಳನ್ನೊಳಗೊಂಡಿವೆ. ಈಚೆಗೆ ಪ್ರಕಟವಾದ ಅವರ ಸಾಹಿತ್ಯೋಪನ್ಯಾಸಗಳಲ್ಲಿ ಬರುವ ವ್ಯಾಕರಣ ವಿಚಾರಗಳ ಸೂಚನೆಗಳನ್ನು ಗಮನಿಸಿದರೆ ಶ್ರೀಯವರ ವ್ಯಾಕರಣ ಶಾಸ್ತ್ರಾಸಕ್ತಿಯು ತಗ್ಗಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಶ್ರೀ ಆತ್ತೂರು ಕೃಷ್ಣಪಿಷಾರೊಡಿ ಹಿಂದಿನ ತಲೆಮಾರಿನ ಇನ್ನೊಬ್ಬ ವಿದ್ವಾಂಸರು. ವ್ಯಾಕರಣಶಾಸ್ತ್ರ ವಿಚಾರಗಳಲ್ಲಿ ಅವರ ಆಸಕ್ತಿ ಸುಪ್ರಸಿದ್ಧವಾಗಿದೆ. ಅವರು "ಕೇರಳ ಭಾಷಾ ಚರಿತಂ" ಎಂಬ ಗ್ರಂಥದಲ್ಲಿ ಹೇಳಿರುವ ಕೆಲವು ತತ್ವಗಳು ಚರ್ಚಾಸ್ಪದವಾಗಿವೆಯಾದರೂ ಅವರ ವಿಷಯದಲ್ಲಿ ಎಲ್ಲರಿಗೂ ಬಹಳ ಗೌರವವುಂಟು.

ಡಾ|| ಎಲ್. ವಿ. ರಾಮಸ್ವಾಮಿ ಅಯ್ಯರ್,

(ಕನ್ನಡಿಸಿದವರು—ಕೆ. ವೆಂಕಟರಾಮಪ್ಪ),

೧೦. ಸಂಪಾದಕೀಯ

ಈ ಸಂಚಿಕೆ ಪ್ರಕಟವಾಗಲು ಇಷ್ಟು ತಡವಾದುದಕ್ಕಾಗಿ ಕ್ಷಮೆಬೇಡುತ್ತೇವೆ. ಬೆಳ್ಳಿಯ ಕಾಣಿಕೆಯನ್ನು ಪ್ರೀತಿ ವಿಶ್ವಾಸಗಳಿಂದ ಸ್ವೀಕರಿಸಬೇಕೆಂದು ಪ್ರಾರ್ಥನೆ. ಈ ಸಂಬಂಧದಲ್ಲಿ ನಡೆದಿರುವ ಎಲ್ಲ ತಪ್ಪುಗಳನ್ನೂ, ಇದರಲ್ಲಿ ಇರುವ ಎಲ್ಲ ಲೋಪ ದೋಷಗಳನ್ನೂ ಮನ್ನಿಸಬೇಕೆಂದು ಬೇಡುತ್ತೇವೆ.

ಪ್ರಬುದ್ಧ ಕರ್ಣಾಟಕದ ಹುಟ್ಟು ಬೆಳವಣಿಗೆಗಳನ್ನು ಕುರಿತು ಅದರ ಕರ್ತೃಗಳೂ ಸಂಪಾದಕರೂ ಆದ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ಬರೆದಿದ್ದಾರೆ. ಅವರ ಸಾಧನೆ ಮುಂದಿನ ವರ್ಷಗಳಲ್ಲಿಯೂ ಅದಕ್ಕೆ ಸ್ಫೂರ್ತಿಯಾಗಲಿ. ಈ ೨೫ ವರ್ಷಗಳಲ್ಲಿ ಅದು ಕನ್ನಡಕ್ಕೆ ಮಾಡಿರುವ ಸೇವೆಯನ್ನು ಮುಂದಿನ ವರ್ಷಗಳಲ್ಲಿಯೂ ಸಲ್ಲಿಸಬಲ್ಲುದಾದರೆ ಅದಕ್ಕಿಂತ ಹೆಚ್ಚಿನ ಹಿರಿಮೆಯನ್ನು ಬಯಸುವುದು ದುರಾಸೆಯಾದೀತು. ಇಂಗ್ಲಿಷ್ ಕವಿಯೊಬ್ಬನು ಆಡಿದ Adam dreamed and awoke to find it Truth (ಆಡಮಿಗೆ ಕನಸಾಯಿತು; ಕಣ್ತೆರೆದು ನೋಡುವಾಗ ಅದು ಸತ್ಯವಾಗಿತ್ತು)— ಎಂಬ ಮಾತು ಶಾಸ್ತ್ರಿಗಳ ಕನಸು ನನಸಾದ ಭಾಗ್ಯ. ಇಂದಿನ ಕನಸಿಗರೂ ನಾಳಿನ ಸತ್ಯವಂತರಾಗಲಿ. ಪ್ರೊ. ಶಾಸ್ತ್ರಿಯವರೂ ಪ್ರೊ. ವೆಂಕಣ್ಣಯ್ಯನವರೂ ಲಾಲಿಸಿ ಪಾಲಿಸಿದ ಈ ಪತ್ರಿಕೆ ಅಮೃತವಾಗಲಿ. ಅವರ ಸತ್ವವೂ ಚಿತ್ತಶುದ್ಧಿಯೂ ಕಾರ್ಯ ಪಟುತ್ವವೂ ಪತ್ರಿಕೆಯ ಮೂಲಚೈತನ್ಯದಲ್ಲಿ ಸೇರಿಕೊಂಡಿರುತ್ತ ಅದನ್ನು ಕಾಯಲಿ, ನಡಸಲಿ. ಅವರನ್ನು ಪೂಜ್ಯ ಮಾಸ್ತಿಯವರು ಯಮಳ ಅಶ್ವಿನೀದೇವತೆಗಳೆಂದು ಕರೆದಿದ್ದಾರೆ. ಆ ದೇವತೆಗಳು ವೈದ್ಯರು, ಚಿಕಿತ್ಸಕರು. ಅಂಥವರ ಭೈಷಜದಿಂದ ಪತ್ರಿಕೆ ಎಂದೆಂದೂ ಅರೋಗದೃಢಕಾಯವಾಗಿ ಉಳಿಯಲಿ.

ಈ ಸಂಚಿಕೆಯ ರಚನೆ ಸ್ವಯಂವೇದ್ಯವಾಗಿರಬೇಕು. ಅದರ ಬೇರೆ ಬೇರೆ ಭಾಗಗಳಿಗೆ ತಕ್ಕುವಾದ ವಿಷಯಗಳನ್ನು ಒಂದು ಉದ್ದೇಶದಿಂದ ವಿಂಗಡಿಸಿಕೊಂಡು ನುರಿತ ಲೇಖಕರಿಗೆ ಪ್ರಾರ್ಥನೆಗಳನ್ನು ಕಳಿಸಿತು. ಬಂದ ಕೆಲವು ಲೇಖನಗಳು ಪ್ರಕಟವಾಗಿವೆ. ತಡವಾಗಿ ಬಂದ, ಮತ್ತು ಕಾಗದಾಭಾವ ಮುಂತಾದ ಇತರ ಕಾರಣಗಳಿಂದ ಈ ಸಂಚಿಕೆಯ ಗಾತ್ರಕ್ಕೆ ಮೀರಿದ ಉಳಿದ ಲೇಖನಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ. ಕೆಲವು ಭಾಗಗಳಲ್ಲಿ ಎಷ್ಟು ನಿರೀಕ್ಷಿಸಿತೋ ಅಷ್ಟು ಲೇಖನಗಳು ಬರಲಿಲ್ಲ. ಉದಾ: ಸೋದರ ದ್ರಾವಿಡ ಸಾಹಿತ್ಯಗಳ ಪರಿಚಯಮಾಡಿಕೊಡಲು ಶಕ್ಯವಾಗದಿರುವುದು ಒಂದು ಕೊರತೆಯೇ ಸರಿ. ವಿನಾಯಕ ಸಂಚಿಕೆಯ ಹೊತ್ತಿಗಾದರೂ

ತಮಿಳು, ತೆಲುಗು, ಮಲೆಯಾಳ ಸಾಹಿತ್ಯಗಳನ್ನು ಕುರಿತ ಲೇಖನಗಳು ಕೈಸೇರಿಯಾವೆಂದು ನಂಬಿದ್ದೇವೆ. ನಾಲ್ಕನೆಯ ಭಾಗ ಲೋಕಸ್ವರೂಪವನ್ನು ಕುರಿತುದು. ಯಾವ ಆವರಣದಲ್ಲಿ ಎಲ್ಲ ದೇಶದ ಎಲ್ಲ ಪ್ರಕಾರದ ಬದುಕೂ ಇಂದು ರೂಪುಗೊಳ್ಳಬೇಕಾಗಿದೆಯೋ ಆ ಆವರಣ ಶಕ್ತಿಗಳ ಸಾಮಾನ್ಯ ತಿಳಿವಳಿಕೆಯಾದರೂ ನಮ್ಮ ಜನಕ್ಕೆ ಬಂದಲ್ಲದೆ ನಮಗೆ ಕ್ಷೇಮವಿಲ್ಲ, ಲಾಭವಿಲ್ಲ. ಇವೊತ್ತಿನ ಸಾರಭೂತವಾದ ಎಲ್ಲ ಸಾಧನಕ್ಕೂ ಸುತ್ತಲ ಲೋಕವೇ ನೆಲೆ, ಹದಿ, ಅವಕಾಶ, ಮಿತಿ. ಹಲವು ಹೊಸ, ಹಳೆಯ ಪ್ರಭಾವಗಳು ಮಾನವ ಜೀವನದ ಮೇಲೆ ಬೀರುತ್ತಿವೆ. ಅವೆಲ್ಲದರ ಅರಿವು ನಮ್ಮ ಜನತೆಗೆ ಅಗತ್ಯ—ಎಂದು ಆ ಭಾಗವನ್ನು ಬೆಳಸಿತು.

ಕನ್ನಡವು ಆಧುನಿಕ ಸತ್ವವಾಗಬೇಕು. ಪ್ರಚಂಡವಾಗಿ ಮುನ್ನಡೆವ ಚೈತನ್ಯವಾಗಬೇಕು. ಸರ್ವತೋಮುಖವಾದ ಬೆಳವಣಿಗೆಯನ್ನು ಸಾಧಿಸುವಂಥುದಾಗಬೇಕು. ಕನ್ನಡದ ಮನೆಯೂ ಜನವೂ ಲೋಕದಲ್ಲಿ ದೊಡ್ಡ ಒಕ್ಕಲಾಗಿ ಉಳಿದು ಬೆಳೆಯಬೇಕಾದರೆ ಅದರ ನೋಟ ಹಿನ್ನೋಟವಾಗಿ, ಅದರ ಸ್ಥಿತಿ ಯಥಾಸ್ಥಿತಿಯಾಗಿ ಮುಗಿಯಬಾರದು. ಕೇವಲ ಪ್ರಾಚ್ಯಸಂಶೋಧನೆಯಲ್ಲಿಯೋ ಪ್ರಾಗ್ವೈಭವವನ್ನು ಮೆಲುಕುವುದರಲ್ಲಿಯೋ ನಿರತವಾಗಿ ಪರಿಸಮಾಪ್ತವಾದರೆ ಸಾಲದು. ಇಂದಿನ ಜೀವನದ ಸಮಸ್ತ ಕಾರ್ಯಗಳಿಗೂ, ವಿಶ್ವದ ಎಲ್ಲ ವಿದ್ಯೆಗಳಿಗೂ ಅದರ ಮನಸ್ಸು ತೆರೆದು ಹೂಡದಾದರೆ, ಅದರ ಉತ್ಸಾಹ ಇಂದಿನ ವಸ್ತುಶಕ್ತಿಗಳ ಕಡೆಗೆ ತಿರುಗದಾದರೆ ಅದಕ್ಕೆ ಭವಿಷ್ಯವಿಲ್ಲ. ಅದರ ಕಡೆ ಜನದ ಗಮನ ಸೆಳೆದು ಬರಲಾರದು. ಪ್ರಬಲ ಭಾಷೆಗಳು ತಮ್ಮ ತಮ್ಮ ಕಾರ್ಯಗಳಲ್ಲಿ ಹೇಗೆ ಹೇಗೆ ಭಾಗವಹಿಸಿವೆಯೋ, ಇಂದು ಪ್ರಪಂಚದ ದೊಡ್ಡ ಭಾಷೆಗಳು ಯಾವ ಯಾವ ಕಾರ್ಯಗಳನ್ನು ಸಾಧಿಸಿ ಬದುಕನ್ನು ಕಟ್ಟುತ್ತಿವೆಯೋ, ತಮ್ಮ ಜನದ ವಾಣಿಯಾಗಿ, ಬದುಕಿನ ಪ್ರತಿಬಿಂಬವಾಗಿ, ಅವರ ಎಲ್ಲ ಆದರ್ಶಗಳ ರೂಪಣ ಶಕ್ತಿಯಾಗಿ ಹೇಗೆ ಒದಗುತ್ತಿವೆಯೋ ಆ ಎಲ್ಲಾ ಪ್ರಕಾರಗಳಲ್ಲಿಯೂ ಕನ್ನಡನುಡಿ ಕನ್ನಡಿಗರ ಪಾಲಿಗೆ ಒದಗಿನಿಲ್ಲುವುದು ಅಗತ್ಯ. ಆ ಕಾರ್ಯ ಹೆಚ್ಚಾಗಿ ನಡೆದಂತೆಲ್ಲಾ ಜನದ ಗೌರವ, ಅಭಿಮಾನ ಅದರ ಕಡೆ ತಿರುಗಿಯಾವು. ಆಗ ಕನ್ನಡದಲ್ಲೇನಿದೆ, ಬರಿಯ ಕನ್ನಡದಿಂದೇನಾದೀತು, ಕನ್ನಡಾಭಿಮಾನ ಕ್ಷುದ್ರರ ಕ್ಷುದ್ರಾಭಿಮಾನ —ಎಂಬುದು ಹುಟ್ಟಡಗಿಹೋಗುವುದು. ಇದಕ್ಕೆ, ಅದಕ್ಕೆ ಪ್ರಬಲರಿಂದಲೂ ಅಧಿಕಾರಿವರ್ಗಗಳಿಂದಲೂ ಹಣವಂತರಿಂದಲೂ ತಿರುಪೆ ಬೇಡಬೇಕಾದ ಮತ್ತೂ ಅವರಿವರ ಬಾಗಿಲು, ಮರ್ಜಿ ಕಾಯಬೇಕಾದ ಅಗತ್ಯ ತಪ್ಪಿಹೋಗುವುದು. ಕನ್ನಡನಾಡಿನಲ್ಲಿ ಎಲ್ಲ ಪ್ರಭಾವವೂ ಕನ್ನಡದ್ದಾಗಿ ತೀರುವುದು. ಸರ್ಕಾರದ ಕೆಲಸ, ಸಾರ್ವಜನಿಕ ವ್ಯವಹಾರ, ವಿದ್ಯಾಭ್ಯಾಸ, ವಿಚಾರವಿನಿಮಯ, ಎಲ್ಲ,—ಎಲ್ಲ,—ಕನ್ನಡದ

ಮೂಲಕವೇ ಆಗುವುದು ಸಹಜವೆಂದು ಗೊತ್ತಾಗುವುದು. ನೆರೆಯ ತಮಿಳುನಾಡಿನಲ್ಲಿ ಸಿ. ಆರ್., ವಿ. ಎಸ್. ಶಾಸ್ತ್ರಿ ವೆಂಕಟರಮಣಿ ಮುಂತಾದವರು ತಮಿಳಲ್ಲಿ ಬರೆಯುವ ಹುಮ್ಮಸಿನಲ್ಲಿರುವಾಗ ಕನ್ನಡದವರ ಅಸಡ್ಡೆ ಇನ್ನೆಷ್ಟುದಿನ ತಾನೇ ಸಡೆತು ನಡೆದೀತು? ಯಾರನ್ನೂ ನಾವು ಹೋಗಿ ಬೇಡಬೇಕಿಲ್ಲ. ಇವೊತ್ತು ಹೀಗಿದ್ದರೆ ನಾಳೆಯ ಒತ್ತಡವಾದರೂ ಪ್ರಯೋಜನವಾದರೂ ಅವರನ್ನು ಈ ಕಡೆ ತಿರುಗಿಸುವುದು ಖಂಡಿತ.

ಕೇಂದ್ರಸಭೆಗಳಲ್ಲಿ ರಾಷ್ಟ್ರಭಾಷೆ ಪ್ರಬಲಿಸುವುದು; ಪ್ರಾಂತ ಸಭೆಗಳಲ್ಲಿ ಪ್ರಾಂತಭಾಷೆಗಳು ಬೆಳಗುವುವು. ಆಗ ಕಡ್ಡಾಯವಾಗಿ ಆಡಳಿತವೇ ಕನ್ನಡಕ್ಕೆ ತಿರುಗೀತು. ಆ ಹೊತ್ತಿಗೆ ಕನ್ನಡವನ್ನು ಶಕ್ತವಾದ ಆಯುಧವಾಗಿ ಮಾಡುವ ಹೆಮ್ಮೆ ನಮ್ಮದಾಗಲಿ. ತನ್ನ ಸತ್ವವನ್ನೂ ಸಂಪತ್ತನ್ನೂ ಬೆಳಸದ ಮನುಷ್ಯನು ಎಂದಿಗೂ ಪರೋಪಜೀವಿಯೇ; ಇನ್ನೊಬ್ಬರ ಬಾಗಿಲ ಭಿಕಾರಿಯೇ; ತನ್ನದಲ್ಲದ ನಡೆನುಡಿ ಚಿತ್ತವೃತ್ತಿಗಳ ಗುಲಾಮನೇ, ಪ್ರಚಾರಕನೇ ಸರಿ. ಕನ್ನಡ ಏನೆಂದು, ಇಂದಿನ ಯಾವ ಪ್ರಯೋಜನಕ್ಕೆ ಒದಗುವುದೆಂದು ಜನ ಅದಕ್ಕೆ ಒಲಿಯಬೇಕು? ಇಂಗ್ಲಿಷರನ್ನು ಕುರಿತು ಅವರ ಕವಿಯೊಬ್ಬನು ಬಲು ಹಿಂದೆ An Enlightened Englishman is one who resists "the temptation to belong to other nations"—ಎಂದರೆ ಇತರ ಜನಾಂಗಗಳಿಗೆ ತಾನು ಸೇರಿದವನೆಂಬ ಮೋಹವನ್ನು ಯಾವನು ಎದುರಿಸಬಲ್ಲನೋ ಅವನೇ ಪ್ರಬುದ್ಧನಾದ ಆಂಗ್ಲ ಎನ್ನುತ್ತಾನೆ. ಬಂಜೆತನವನ್ನು ವ್ಯಕ್ತಪಡಿಸುವ ಪರಮೋಹಗಳನ್ನು ಕನ್ನಡಿಗರು ಎಂದು ಬಿಡಬಲ್ಲರೋ ಅಂದು ಅವರು ಒಂದು ಕುಳವಾಗುತ್ತಾರೆ ಒಂದು ಕುಲವಾಗುತ್ತಾರೆ. ತಮಗೂ, ಭರತಖಂಡಕ್ಕೂ, ಲೋಕಕ್ಕೂ, ತಮ್ಮ ಕಾಲಕ್ಕೂ ಸೇವೆ ಸಲ್ಲಿಸಬಲ್ಲವರಾಗುತ್ತಾರೆ. ಸ್ವಾಭಿಮಾನವಿಲ್ಲದ ಯಾವ ವ್ಯಕ್ತಿತ್ವವೂ ಬೆಳೆಯಲಾರದು, ಬಲಿಯಲಾರದು. ಅದಕ್ಕೆ ಸ್ವಂತ ಪ್ರಭಾವವಿಲ್ಲ, ಗತಿಯಿಲ್ಲ. ಅಂಥ ಶಕ್ತಿಯನ್ನಾಗಿ ಮಾಡಿಕೊಳ್ಳುವ ವರೆಗೂ ಕನ್ನಡದ ಕೂಗು ಅರಣ್ಯರೋದನವೇ. ಜನಜೀವನದ ಅನಂತಪ್ರಯೋಜನಗಳಿಗೆ ಕನ್ನಡವನ್ನು ನಾವು ನೆರಸಿ ಹೂಡಬಲ್ಲೆವಾದರೆ ಆಗ ಕನ್ನಡಕ್ಕೆ ಒಂದು ಬೆಲೆ ಬಂದೀತು.


ಇಪ್ಪತ್ತೈದು ವರುಷ ದೃಢವಾಗಿ ಬೆಳೆದು ಶಕ್ತಿಸಂಪಾದಿಸಿದ ಕನ್ನಡಿಗನು ಇಂದು ತನ್ನ ನೆಲೆಯಲ್ಲಿ ದಿಟ್ಟನಾಗಿ ನಿಮಿರಿನಿಂತಿದ್ದಾನೆ. ಹತ್ತುದಿಕ್ಕುಗಳನ್ನೂ ನೋಡುತ್ತಿದ್ದಾನೆ. ಲೋಕಭಾಗ್ಯವನ್ನು ನಡಸುವ ಶಕ್ತಿಗಳ ಇಚ್ಛೆ ಹರಸಿದರೆ—ಕಾರ್ಲೈಲ್ ಹೇಳಿದಂತೆ—ಮಾನವರನ್ನೂ ಮುಗಿಲನ್ನೂ ಸ್ವರ್ಗವನ್ನೂ ಜಗ್ಗಿಸಿ ದುಡಿಸಿ

ಕೊಳ್ಳಬಲ್ಲ ಸತ್ವವಾಗಬೇಕೆಂದಿದ್ದಾನೆ. ಇಂದಿನ ವಸ್ತುಪ್ರಪಂಚದ ಚರಿತ್ರೆ, ಸದ್ಯದ ಪರಿಸ್ಥಿತಿ, ನಾಳೆಯ ಗತಿ ಇವನ್ನು ಒಂದು ದೃಷ್ಟಿಯಲ್ಲಿ ನೋಡುತ್ತಿದ್ದಾನೆ. ಇತರ ದೇಶಗಳ ಸ್ಥಿತಿಯೊಡನೆ ತನ್ನದನ್ನು ಹೋಲಿಸಿಕೊಳ್ಳತೊಡಗಿದ್ದಾನೆ; ತತ್ವಗಳಿಗೂ ಪ್ರಯೋಜನಗಳಿಗೂ ವಿಧಾನಗಳಿಗೂ ಸಾಧನಗಳಿಗೂ ತನ್ನ ಬೆಲೆಕಟ್ಟುತ್ತಿದ್ದಾನೆ. ವಿಜ್ಞಾನಿಯ ಹಾಗೆ ಎಲ್ಲವನ್ನೂ ಅಳೆದು ಎಣಿಸಿ ತೂಗಿ ಸತ್ಯವನ್ನು ಅರಿಯುತ್ತ ಇದ್ದಾನೆ, ಪರೀಕ್ಷಿಸುತ್ತಿದ್ದಾನೆ. ಸಮನ್ವಯ, ಸಾಹಸ ಎರಡೂ ಅವನ ಪಾಲಿನ ಕರ್ತವ್ಯಗಳೆಂಬುದು ಅವನಿಗೆ ಮಂದಟ್ಟಾಗುತ್ತಿದೆ. ಹೀಗೆ ಇತಿಹಾಸ ದೃಷ್ಟಿ, ತೂಲನಾತ್ಮಕ ದೃಷ್ಟಿ, ವಿಮರ್ಶಕ ದೃಷ್ಟಿ, ವಿಜ್ಞಾನ ದೃಷ್ಟಿ, ವಸ್ತುನಿಷ್ಠೆ ಅವನಲ್ಲಿ ಬೆರೆಯುತ್ತಿವೆ. ಇಂದು ನಡೆಯುತ್ತಿರುವ ಎಲ್ಲದರಿಂದ ನಮ್ಮ ಆವರಣಕ್ಕೆ ಮಾರ್ಪಾಡು ಬರುತ್ತಿರುವಾಗ, ಅದರಿಂದೆಲ್ಲ ನಮ್ಮ ಶಕ್ತಿ ಬೆಳೆದು ನಮ್ಮ ದೌರ್ಬಲ್ಯವು ಹೆಚ್ಚಾಗಿಯೋ ನಮ್ಮ ಕ್ಷೇಮ ಲಾಭಗಳು ಕುಂಠಿತವಾಗಿಯೋ ಆಗಬಹುದಾಗಿರುವಾಗ ಅದರ ಸ್ವರೂಪವನ್ನು ತಿಳಿಯಲು ಆತುರನಾಗಿದ್ದಾನೆ. ಅಖಂಡ ಪ್ರಪಂಚವೇ ಇಂದು ಒಂದು ಅವಯವಿ; ಎಲ್ಲಿ ಏನು ಕೇಡು ಪೀಡೆ ಬಂದರೂ, ಅದು ನೇರವಾಗಿಯೋ ಬಳಸಾಗಿಯೋ ತನ್ನ ಬದುಕನ್ನು ಹೆಚ್ಚು ಕಡಮೆ ಮಾಡಬಲ್ಲದೆಂದು ತಿಳಿದು ಅದಕ್ಕೆ ಸಂತತವಾಗಿ ಗಮನ ಕೊಡುತ್ತಿದ್ದಾನೆ. ಅದಕ್ಕೆ ಸಂಬಂಧಿಸಿದ ಗಣಿತ, ಖಗೋಳವಿಜ್ಞಾನ, ಭೌತವಿಜ್ಞಾನ, ಜೀವಶಾಸ್ತ್ರ, ಸಮಾಜಶಾಸ್ತ್ರ, ದರ್ಶನ, ಮನಶ್ಶಾಸ್ತ್ರ, ಕಲೆ, ಸಂಸ್ಕೃತಿ, ಧರ್ಮ, ನೀತಿ, ಯಂತ್ರಶಿಲ್ಪ ಇವುಗಳಲ್ಲಿ ಆಸಕ್ತನಾಗಿ ಇವುಗಳ ಪರಿಣತಪ್ರಯೋಜನಗಳನ್ನೆಲ್ಲ ತನ್ನ ಬದುಕಿಗೂ ಆಸೆ ಆಕಾಂಕ್ಷೆಗಳಿಗೂ ದುಡಿಸಿಕೊಳ್ಳಬೇಕೆಂದು ಹಾತೊರೆಯುತ್ತಿದ್ದಾನೆ. ಬಾನುಲಿ, ವೃತ್ತ ಪತ್ರಿಕೆಗಳು, ಶಾಸ್ತ್ರಜಿಜ್ಞಾಸೆಗಳ ಫಲ, ದೇಶವಿದೇಶಗಳ ಸಂಚಾರ ಸಂಪರ್ಕ ಸೌಲಭ್ಯಗಳು—ಇವನ್ನು ಬಳಸಿಕೊಳ್ಳುತ್ತ ತನ್ನ ಅನುಭವ ಪ್ರಪಂಚವನ್ನು ವಿಶಾಲಗೊಳಿಸಿಕೊಳ್ಳುತ್ತಿದ್ದಾನೆ. ತನ್ನ ಉಕ್ಕನ್ನೂ ಚೈತನ್ಯವನ್ನೂ ಕೆರಳಿಸಿಕೊಳ್ಳುತ್ತಿದ್ದಾನೆ. ಪ್ರಬುದ್ಧನಾದ ಕನ್ನಡಿಗನ ಶಕ್ತಿ, ದೃಷ್ಟಿ, ಆಸೆ ಹೀಗಿರುವಾಗ ಇಂಥ ಕನ್ನಡಿಗರ ಅಗ್ರಗಾಮಿಯಾದ ಕನ್ನಡ ಕವಿ, ಕತೆಗಾರ, ನಾಟಕ ಕರ್ತೃ, ಕಾದಂಬರಿಕಾರ, ವಿಮರ್ಶಕ ಇವರು ಎಲ್ಲಕ್ಕೂ ಮೊದಲ ದರ್ಶನವನ್ನು ಕಾಣಬೇಕೆನ್ನುವುದು ಆಶ್ಚರ್ಯವೇನಲ್ಲ; ಅದೇ ಸಹಜ. ಸಾಹಿತಿಯೇ ಜನತೆಯ ಆಂತರಿಕ ಜೀವನದ ಮುಂದುಗಣ್ಣು, ಅದರ ಧ್ವನಿ, ಅದರ ಪ್ರವಾದಿ. ಲೋಕವನ್ನೆಲ್ಲ, ಅದರ ಕಷ್ಟ, ಅಸಮತೆ, ಅನ್ಯಾಯ, ಕಠಿನತೆ, ತೊಡಕುಗಳನ್ನೆಲ್ಲ ಕವಿ ಕಾಣುತ್ತಾನೆ; ಕಾಣಿಸುತ್ತಾನೆ; ಅದರ ಶಕ್ತಿಗಳನ್ನೆಲ್ಲ ತನ್ನೊಳಕ್ಕೂ ತನ್ನ ಜನಜೀವನದೊಳಕ್ಕೂ ತುಂಬಿಕೊಳ್ಳಲು ಯತ್ನಿಸುತ್ತಾನೆ. ಮೂಡ ಪಡುವಲ ತೆಂಕ ಬಡಗ ದಿಕ್ಕುದೆಸೆಗಳು ಮಿತಿಯಲ್ಲ, ಇತಿ

ಯಲ್ಲ, ಈ ಸಾಧನೆಯಲ್ಲಿ; ಈ ಸ್ಫೂರ್ತಿಯ ಅವಕಾಶದಲ್ಲಿ. ಆದುದರಿಂದಲೇ ಹಲವು ಬಗೆಯ ಹೊಸ ದೃಷ್ಟಿ ಹೊಸ ರೀತಿಗಳ ಕಡೆ ಯುವಕರ ಮನಸ್ಸು ತುಯ್ಯುತ್ತಿರುವುದು.

೧೯೨೦ರ ಸುಮಾರಿನಲ್ಲಿ ಮೊದಲಾದ ಉತ್ಸಾಹ ಈ ೧೯೪೫ರ ವರೆಗೂ ಒಂದು ರೀತಿ ಬಂದಿದೆ; ಇಲ್ಲಿಂದ ಎರಡನೆಯ ಘಟ್ಟ ಮೊದಲಾಗಬೇಕು; ಮುಂದಿನ ೨೫ ವರ್ಷಗಳ ವಿಶಾಲ ಆಧುನಿಕ ಜೀವನದ ಮಹಾಯೋಗಿಯಾಗಿ, ಮಹಾಸ್ಫೂರ್ತಿಯಾಗಿ, ಸಾಧಕವಾಗಿ, ಪ್ರೋತ್ಸಾಹಕವಾಗಿ ಪ್ರಬುದ್ಧ ಕರ್ಣಾಟಕವು ಶ್ರಮಿಸಲು ಶಕ್ಯವಾಗುವಂತೆ ನಾಡಿನ ಎಲ್ಲ ಸಾಹಿತಿಗಳೂ ನೆರವಾಗಬೇಕೆಂದೂ ಅದಕ್ಕೆ ಆದರ ಕೊಡಬೇಕೆಂದೂ ಬೇಡುತ್ತೇವೆ.

ಈ ಸಂಚಿಕೆಯನ್ನು ಪ್ರಕಟಿಸುವುದರಲ್ಲಿ ಕನ್ನಡನಾಡಿನ ಹೊರಗಿನ ವಿದ್ವಾಂಸರು ಹಲವರು ನೆರವಿತ್ತಿದ್ದಾರೆ. ಅವರಿಗೆ ಮೊದಲ ವಂದನೆಗಳು. ನಮಗೆ ಲೇಖನವನ್ನು ಕಳಿಸಿ ಒಳ್ಳೆಯ ಮಾತನಾಡಿದ ಎಲ್ಲರಿಗೂ ನಮೋ. ಕನ್ನಡಿಗರಾದ ಇತರ, ಹತ್ತಿರದ ಮತ್ತು ಹೆಚ್ಚು ದೂರದಲ್ಲಿ ವಾಸಿಸುವ ಗೆಳೆಯರು ಸಂತೋಷವಾಗಿ ಸಹಾಯ ನೀಡಿದರು. ಅರಮನೆಯ ಹುಜೂರ್ ಸೆಕ್ರೆಟರಿಯವರು ಅವರ ಕಚೇರಿಯ ಚಿತ್ರವನ್ನು ದಾನಮಾಡಿದ್ದಾರೆ. ಕಾರಂತರೂ ಕನ್ನಡ ಸಾಹಿತ್ಯ ಪರಿಷತ್ತಿನವರು ಆರ್. ಎಸ್. ಪಂಚಮುಖಿ ಅವರು ಡಾ. ಎಂ. ಎಚ್. ಕೃಷ್ಣ ಅವರು ಪಡಿಯಚ್ಚುಗಳನ್ನೂ ಚಿತ್ರಗಳನ್ನೂ ಎರವಿತ್ತಿದ್ದಾರೆ. ಪ್ರತಿಗಳನ್ನು ತಯಾರಿಸುವುದರಲ್ಲಿ ಕೆ. ರಾಮಸ್ವಾಮಿ, ಎಸ್. ವಿ. ಪರಮೇಶ್ವರಭಟ್ಟ, ಮುಂತಾದವರು ಉದಾರವಾಗಿ ಸಹಕರಿಸಿದ್ದಾರೆ; ಪ್ರತಿ ಸಂಬಂಧದಲ್ಲಿಯೂ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳೂ, ಸಂಪಾದಕ ಮಂಡಲಿಯವರೂ ಸಲಹೆಕೊಟ್ಟಿದ್ದಾರೆ. ವೆಸ್ಲಿ ಪ್ರೆಸ್ಸಿನ ಅಧಿಕಾರಿಗಳ ನೆರವು ಅತಿಶಯವಾದ್ದು. ನಮ್ಮ ಅವಸರ ಅಪೂರ್ಣತೆಗಳನ್ನು ಮನ್ನಿಸಿ ಅವರ ಕುತ್ತಿಗೆಗೆ ನಾವು ಹಾಕಿದ ಗಾಣಕ್ಕೆ ಕೋಪಿಸದೆ, ವಿಕಾರಗೊಳ್ಳದೆ ಪತ್ರಿಕೆಯನ್ನು ಬಹು ಅಲ್ಪಾವಕಾಶದಲ್ಲಿ ಬಹು ಚೆನ್ನಾಗಿ ಮಾಡಿಕೊಟ್ಟಿದ್ದಾರೆ. ಕಡೆಯ ನಾಲ್ಕು ದಿನಗಳಲ್ಲಿ ಅವರು ಪಟ್ಟ ಗಾಸಿ ವರ್ಣಿಸಲು ಅಳವಲ್ಲ. ನೆರವಾದ ಎಲ್ಲರಿಗೂ ಪತ್ರಿಕೆ ಕೃತಜ್ಞವಾಗಿದೆ.



AREAS OF THE NATIONS SHOWN PROPORTIONAL TO THEIR POPULATIONS

ಲೇಖಕರು

ಸಂಕೇತಗಳು : ಕ = ಕವಿತೆ. ಸಾ = ಸಾಹಿತ್ಯವಿಚಾರ. ಸ = ಸಣ್ಣಕತೆ, ಕಾವ್ಯಕತೆ, ಗದ್ಯಚಿತ್ರ, ಪ್ರಬಂಧ ಮತ್ತು ಹರಟೆ. ಶಾ = ಶಾಸ್ತ್ರವಿಚಾರ. ಇತಿ = ಇತಿಹಾಸ. ಜೀ = ಜೀವನಚರಿತ್ರೆ. ಸಂ = ಸಂಕೀರ್ಣ. ಕಾ = ಕಾವ್ಯಾವಲೋಕನ. ವ = ವಚನ.

(**ಸೂಚನೆ :** ಪ್ರತಿಯೊಂದು ಹೆಸರಿನ ಮೊದಲಿನಲ್ಲಿಯೂ ಸೂಕ್ತಾನುಸಾರ ಶ್ರೀಮಾನ್ ಅಥವಾ ಶ್ರೀಮತಿ ಎಂದು ಸೇರಿಸಿಕೊಳ್ಳಬೇಕು.)

ವಿಷಯಗಳು

(ಅ) ಕವಿತೆ

(ಆ) ಸಾಹಿತ್ಯವಿಚಾರ

(ಇ) ಸಣ್ಣಕಥೆ, ಗದ್ಯಚಿತ್ರ, ಕವಿಕಥೆ, ಇತ್ಯಾದಿ

(ಈ) ನಾಟಕಗಳು

(ಉ) ಶಾಸ್ತ್ರವಿಷಯ

(ಊ) ಇತಿಹಾಸ ವಿಷಯ

ಕಾವ್ಯಾವಲೋಕನ

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸಂಚಿ
ಅಕ್ಕಮಹಾದೇವಿ	....	ಡಿ. ಎಲ್. ನರಸಿಂಹಾಚಾರ್	೧೯-೨,
ಅಕ್ಕತಂಗಿ	ನಾರಾಯಣ ಸಂಗಮ	ಎಸ್. ವಿ. ಪರಮೇಶ್ವರಭಟ್ಟ	೨೫-೪
ಅಂತರಗಂಗೆ	ಫೈಟಾಂಗ್ ಸೊಸೈಟಿ, ಬೆಂಗಳೂರು (ಪ್ರ.)	ಎ. ಎನ್. ಮೂರ್ತಿರಾವ್	೧೮-
ಅದೇನೇ ಇರಲಿ	ರಾ. ಭಿ. ಮುನ್ಸಬ್‌ದಾರ	ಬಿ. ಎನ್. ಶಾಮರಾವ್	೧೫-೩
ಅನ್ಯಯೋಗವ್ಯವಚ್ಛೇದಿಕಾ	ಎ. ಶಾಂತರಾಜ ಶಾಸ್ತ್ರೀ	ಎ. ಆರ್. ಕೃಷ್ಣಶಾಸ್ತ್ರೀ	೫-೪
ಅಭಿನವ ಗೀತಾವಳಿ	ಜಿ. ಎನ್. ಲಕ್ಷ್ಮಣ ಪೈ	ಜಿ. ಹನುಮಂತರಾವ್	೧೫-೨
ಅಭಿನವ ಪಂಪ	ಕರ್ಣಾಟಕ ಸಂಘ ಕ. ಕಾಲೇಜು ಧಾರ್ವಾಡ (ಸಂ.)	ಡಿ. ಎಲ್. ನರಸಿಂಹಾಚಾರ್	೧೬-೩
ಅಭಿವೃದ್ಧಿ ಸಂದೇಶ	ಬಿ. ಪುಟ್ಟಯ್ಯ	ಎಂ. ಆರ್. ಶ್ರೀನಿವಾಸಮೂರ್ತಿ	೩-೪
ಅಭಿಸಾರ	ಸಾಲಿ ರಾಮಚಂದ್ರರಾಯರು	ಎ. ಆರ್. ಕೃ.	೧೧-೩
ಅರುಣ, ಕಮಲ	ಹೈ ಸ್ಕೂಲ್, ಶಿವಮೊಗ್ಗ, ಹಾಸನ	ಎ. ಆರ್. ಕೃ.	೮-೪
ಅರುಣೋದಯ	ಆನಂದ ಕಂದ	ವಿ. ಸೀ.	೯-೩
ಅಳಿಲ ಸೇವೆ	ಮಿತ್ರಮಂಡಲಿ, ಮಂಗಳೂರು (ಪ್ರ.)	ವಿ. ಸೀ.	೧೦-೪
ಅಶಾಂತಿಪರ್ವ	ಆನಂದ ಕಂದ	ಶ್ರೀನಿವಾಸರಾವ್, ಎಸ್. ವಿ.	೧೮-೧
ಆಂಡ್ರ್ಯೂ ಕಾರ್ನೆಗಿ	ಜಿ. ಆರ್. ಜೋಸ್ಯರ್	ಡಿ. ವಿ. ಶೇಷಗಿರಿರಾವ್	೧೦-೨
ಆಹಾರ ವಿಜ್ಞಾನ	ದ. ಕೃ. ಭಾರದ್ವಾಜ	ನ.	೧೫-೩
ಆರೋಗ್ಯ ಸಾಧನೆ	ತುಂ. ರ. ನರಸಿಂಹಯ್ಯ	ಕೆ. ಎನ್. ಶ್ರೀ.	೫-೩
ಆರೋಗ್ಯ, ಅದರ ಜ್ಞಾನ ಮತ್ತು ಸಾಧನ	ಜಿ. ಎ. ಈಶ್ವರಮೂರ್ತಿ	ಕೆ. ಸುಂದರೇಶನ್	೧೮-೩
ಆರತಿ	ಮೇವುಂಡಿ ಮಲ್ಲಾರಿ, ಕುಲಕರಣಿ ದತ್ತಾತ್ರೇಯ (ಸಂ.)	ಕೆ. ನರಸಿಂಹಮೂರ್ತಿ	೨೪-೨
ಆರ್ಯಕ	ಎಸ್. ಜಿ. ಶಾಸ್ತ್ರಿಗಳು	ಎ. ಎನ್. ಮೂರ್ತಿರಾವ್	೧೪-೧
ಆಯುರ್ವೇದ ಸಾರ	ಪ. ರಾಮಕೃಷ್ಣಯ್ಯ	ಕೆ. ಎಸ್. ಧೀ.	೬-೩
ಆಯ್ದಕ್ಕಿಯ ಮಾರಯ್ಯ	ಶ್ರೀ ಚೆನ್ನಬಸವ ದೇಶಿಕೇಂದ್ರ ಸ್ವಾಮಿಗಳು	ಕೆ. ವೆಂಕಟರಾಮಪ್ಪ	೨೫-೧
ಆನಂದ ಸಾಮ್ರಾಜ್ಯ	ಮೂಗೂರು ಹನುಮಂತಾಚಾರ್	ಎ. ಆರ್. ಕೃಷ್ಣಶಾಸ್ತ್ರೀ	೧೧-೩
ಆಧ್ಯಾತ್ಮ ಗೀತಾವಳಿ	ವೈ. ಸುಬ್ಬರಾವ್	ವಿ. ಟಿ. ತಿರುನಾರಣಯ್ಯಂಗಾರ್	೪-೦೧

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸಂಚಿಕೆ
...ಜ್ಞೀಡು	ವಿ. ಕೃ. ಗೋಕಾಕರು	ಟಿ. ಎನ್. ಶಾಮರಾವ್	೧೭-೪
...ದ್ದರೂ ಇರಬಹುದು	ಎಸ್. ಜಿ. ಶಾಸ್ತ್ರೀ	ಎ. ಆರ್. ಕೃಷ್ಣಶಾಸ್ತ್ರೀ	೩-೪
...ಡಿಯಾದೇಶದ ರಾಜ್ಯಾಂಗ ಪದ್ಧತಿ	ಎಂ. ವಿ. ಗೋಪಾಲಸ್ವಾಮಿ ಯ್ಯಂಗಾರ್	ವಿ. ಸೀ.	೧೧-೨
...ಶಾವಾಸ್ಯೋಪನಿಷತ್	ವಾಯ್. ಜಿ. ಕುಲಕರ್ಣಿ	ಎಂ. ಲಕ್ಷ್ಮೀನರಸಿಂಹಯ್ಯ	೮-೪
...ಡುಗೊರೆ	ಕೆ. ಗೋಪಾಲಕೃಷ್ಣರಾಯರು	ನಂ. ಶಿವರಾಮಶಾಸ್ತ್ರಿ	೧೬-೧
...ದಯರಾಗ	ಅ. ನ. ಕೃಷ್ಣರಾಯರು	'ಮಾಸ್ತಿ	೧೬-೩
...ಪನಿಷತ್ ಪ್ರಕಾಶ (ಈಶಾವಾಸ್ಯೋಪನಿಷತ್)	ರಂ. ರಾ. ದಿವಾಕರ	ಎಂ. ಲಕ್ಷ್ಮೀನರಸಿಂಹಯ್ಯ	೮-೪
ಉಪಾಧ್ಯಾಯರ ಕೈಪಿಡಿ	ಐ. ಕೃಷ್ಣ ಉಡುಪ	ಜಿ. ಹನುಮಂತರಾವ್	೧೪-೧
...ಯ್ಯಾಲೆ	ಅಂಬಿಕಾತನಯದತ್ತ	ಎಲ್. ಗುಂಡಪ್ಪ	೨೧-೧
...ಕ್ಸರೆ	ಯು. ರಾಘವೇಂದ್ರಾಚಾರ್ಯ	ಬಿ. ಎ. ಕೃಷ್ಣಸ್ವಾಮಿರಾವ್	೨೨-೧
...ರಡು ಆವಿದ್ಧ ನಾಟಕಗಳು	ಬೇಂದ್ರೆ-ದತ್ತರಾಯರು	ಎಲ್. ಗುಂಡಪ್ಪ	೧೬-೨
ಒಕ್ಕಲಿಗರ ಹಾಡು, ಇತ್ಯಾದಿ	ಡಿ. ಆರ್. ರಾಮಯ್ಯ	....	೧೧-೧
ಒಲುಮೆ	ತೀ. ನಂ. ಶ್ರೀಕಂಠಯ್ಯ	ಶ್ರೀನಿವಾಸ	೧೫-೪
ಓಲಗಧ ಮಂತ್ರ	....	....	೧೧-೧
ಕಡಲೆಪುರಿ	ಜಿ. ಪಿ. ರಾಜರತ್ನಂ	ತೀ. ನಂ. ಶ್ರೀಕಂಠಯ್ಯ	೧೪-೪
ಕರ್ಣಾಟಕ ಕವಿಚರಿತೆ (ತೃತೀಯ ಸಂಪುಟ)	ರಾ. ನರಸಿಂಹಾಚಾರ್	ಗೋವಿಂದ ಪೈ	೧೧-೪
ಕರ್ಣಾಟಕ ಕಾದಂಬರೀ ಸಂಗ್ರಹ	ಟಿ. ಎಸ್. ವೆಂಕಣ್ಣಯ್ಯ	ಎಸ್. ವಿ. ರಂಗಣ್ಣ	೧೫-೪
ಕಣ್ಮರೆಯಾದ ಕನ್ನಡ	ಶಂ. ಬಾ. ಜೋಶಿ	ಡಿ. ಎಲ್. ನರಸಿಂಹಾಚಾರ್	೧೬-೨
ಕರ್ಣಾಟಕ ಚಂದ್ರಿಕೆ	ನಂ. ಶ್ರೀಕಂಠಶಾಸ್ತ್ರಿಗಳು (ಸಂ.)	ಎ. ಆರ್. ಕೃ.	೮-೪
ಕರ್ಣಾಟಕ ದರ್ಶನ	ಬುರ್ಲಿ. ಬಿಂದುಮಾಧವ (ಸಂ.)	ಡಿ. ಎಲ್. ನರಸಿಂಹಾಚಾರ್	೨೦-೧
ಕರ್ಣಾಟಕ ನವಜೀವನ	ಬಿ. ಸಿ. ಪುರಾಣಿಕ (ಸಂ.)	ಎ. ಆರ್. ಕೃಷ್ಣಶಾಸ್ತ್ರೀ	೧೦-೩
ಕರ್ಣಾಟಕ ವಚನ ಮಣಿ ಮಂಜರಿ	ವೆಂಕಟರಮಣಯ್ಯ	ಸಿ. ಕೆ. ವೆಂ.	೧೧-೪
ಕರ್ಣಾಟ ಸಾಮ್ರಾಜ್ಯ	ಹ. ದೇಶಪಾಂಡೆ	ಎಂ. ಎಚ್. ಕೃಷ್ಣ	೯-೨
ಕರ್ಣಾಟಕ ವಿದ್ಯಾಲಯ ಪತ್ರಿಕೆ	ಶ್ಯಾಮಾ ಶ್ರೀನಿವಾಸ ಹುಕ್ಕೇರಿ	ಎ. ಆರ್. ಕೃಷ್ಣಶಾಸ್ತ್ರೀ	೧೧-೨
ಕರ್ಣಾಟಕ ಸಂಕ್ಷೇಪ ರಾಮಾಯಣಂ	ಗೌರೀ ದೇವ ನರಸಿಂಹಶಾಸ್ತ್ರೀ	,,	೧೦-೩

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸ
ಕರ್ಣಾಟಕ ಸಾಹಿತ್ಯ ಸಂಸ್ಕೃತಿ ದರ್ಶನ	ಎಸ್. ಎಸ್. ಮಾಳವಾಡ	ಕೆ. ಎಸ್. ಧರಣೇಂದ್ರಯ್ಯ	೨
ಕನ್ನಡ ಕೈಪಿಡಿ	ಮೈಸೂರು ವಿಶ್ವವಿದ್ಯಾನಿಲಯ (ಪ್ರ.)	ಡಿ. ವಿ. ಗುಂಡಪ್ಪ	೬
ಕನಸಿನ ಕೆಳದಿ	ರಂ. ಶ್ರೀ. ಮುಗಳಿ	ಜಿ. ವರದರಾಜಾರಾವ್	೨೫
ಕನ್ನಡನಾಡಿನ ಕಥೆಗಳು	ಶ್ರೀ ನಾರಾಯಣಶರ್ಮ, ಇತಿ, ಸಂ. ಮಂಡಲ	ಎಸ್. ಶ್ರೀಕಂಠಶಾಸ್ತ್ರೀ	೨೪
ಕನ್ನಡಿಗರ ಜ್ಞಾನದೀಪಿಕೆ	ಎಂ. ತಿರುನಾರಾಯಣನ್	ಎ. ಆರ್. ಕೃ.	೪
ಕನ್ನಡನುಡಿಯ ಹುಟ್ಟು	ಶಂ. ಬಾ. ಜೋಶಿ	ಡಿ. ಎಲ್. ನರಸಿಂಹಾಚಾರ್	೧೯-೨
ಕನ್ಯಾಬಲಿ ಅಥವಾ ಸೂಳೆಯ ಸಂಸಾರ	ಶಿವರಾಮಕಾರಂತ	,,	೧೪
ಕಥಾಂಜಲಿ	ಅ. ನ. ಕೃಷ್ಣರಾಯರು (ಸಂ.)	ಎ. ಆರ್. ಕೃಷ್ಣಶಾಸ್ತ್ರೀ	೧೧
ಕಬ್ಬಿಗರ ಕಾವಂ	ಆಂಡಯ್ಯ	ಎಸ್. ವಿ. ರಂಗಣ್ಣ	೨
ಕಬೀರದಾಸ ಚರಿತಂ	ಲಕ್ಷ್ಮೀನರಸಿಂಹಶಾಸ್ತ್ರೀ	ಎ. ಆರ್. ಕೃ.	೧೧
ಕರ್ಮರಹಸ್ಯ	....	ಎಚ್. ಎನ್. ರಾಘವೇಂದ್ರಾಚಾರ್	೧೪
ಕವಿತಾಗುಣಾರ್ಣವ	ಎಂ. ನಂಜುಂಡಶಾಸ್ತ್ರೀ (ಸಂ.)	ತೀ. ನಂ. ಶ್ರೀಕಂಠಯ್ಯ	೧೮
ಕವಿಲಕ್ಷ್ಮೀಶ	ಕರ್ಣಾಟಕ ಸಂಘ, ಚಿಕ್ಕಮಗಳೂರು	ಎಂ. ಆರ್. ಶ್ರೀನಿವಾಸಮೂರ್ತಿ	೧೫
ಕಾಣಿಕೆ	ಕಡಂಗೋಡ್ಲು ಶಂಕರಭಟ್ಟರು	,,	೧೦
ಕಾದಂಬರಿಪರಿಚಯ	....	....	೧೧
ಕಾನೂರು ಸುಬ್ಬಮ್ಮ ಹೆಗ್ಗಡಿತಿ	ಕೆ. ವಿ. ಪುಟ್ಟಪ್ಪ	ರಂ. ಶ್ರೀ. ಮುಗಳಿ	೨೧
ಕಾಮದಹನ	ಶ್ರೀರಂಗ	ವಿ. ಸೀ.	೧೭
ಕಾಮನಬಿಲ್ಲು	ಅ. ನ. ಕೃಷ್ಣರಾಯರು	ನಂ. ಶಿವರಾಮಶಾಸ್ತ್ರೀ	೧೬
ಕಾರಣಪುರುಷ	ರಂ. ಶ್ರೀ ಮುಗಳಿ	ಕೆ. ವೆಂಕಟರಾಮಪ್ಪ	೨೧
ಕಾವ್ಯಕಲ್ಪಲತಾ ಗ್ರಂಥಮಾಲಾ	ಕೊ. ಹನುಮಂತರಾಯರು	ಟಿ. ಎಸ್. ವೆಂಕಣ್ಣಯ್ಯ	೫
ಕಾವ್ಯಗುಚ್ಛ	ಹನುಮಂತ ಬಲವಂತರಾವ್	ಎ. ಆರ್. ಕೃಷ್ಣಶಾಸ್ತ್ರೀ	೪
ಕಾವ್ಯರತ್ನಾಕರ	ಉಗ್ರಾಣ ಮಂಗೇಶರಾಯರು	,,	೫
ಕಾವ್ಯಸಾಮ್ರಾಜ್ಯ	ಕಿರಿಯರ ಪ್ರಪಂಚ (ಸಂ.)	ಎ. ಕೆ. ಪುಟ್ಟರಾಮು	೧೬
ಕಾಳರಾತ್ರಿ	ಮಧುರ ಚೆನ್ನ	ಎಂ. ಎ. ವೆಂಕಟರಾವ್	೧೮

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸಂಚಿಕೆ
...ಳಿದಾಸ ಕವಿಯು ಶೃಂಗಾರ ರಸವನ್ನು ಚಿತ್ರಿಸಿರುವ ಬಗೆ	ಸಿ. ಕೆ. ವೆಂಕಟರಾಮಯ್ಯ	ಎ. ಎನ್. ನರಸಿಂಹಯ್ಯ	೧೦-೪
...ರಿಯ ಕಾಣಿಕೆ	ಕರ್ಣಾಟಕ ಸಂಘ, ಮಹಾರಾಜರವರ ಕಾಲೇಜು, ಮೈಸೂರು	ಕೃ. ಶ್ರೀ ಬೆಟಗೇರಿ	೧೦-೧
...ೀರ್ತನ ಕಂಠಾಭರಣ	ಹೊಸಕೆರೆ ಚಿದಂಬರಯ್ಯನವರು	ಎ. ಆರ್. ಕೃಷ್ಣಶಾಸ್ತ್ರೀ	೧೧-೨
...ುಮಾರವ್ಯಾಸ ಪ್ರಶಸ್ತಿ	ಕರ್ಣಾಟಕ ಸಂಘ, ಮಹಾರಾಜರವರ ಕಾಲೇಜು, ಮೈಸೂರು (ಪ್ರ.)	ಎಸ್. ಎಸ್. ಮಾಳವಾಡ	೨೨-೩
ಕುರುಡ ಧರ್ಮ	ನಾರಾಯಣ, ಭೀಮರಾವ್	ಎಂ. ಆರ್. ಶ್ರೀನಿವಾಸಮೂರ್ತಿ	೧೬-೩
ಕೃಷ್ಣದೇವರಾಯ	ಎಸ್. ಆರ್. ಕರೂರು	ನಾ. ಕಸ್ತೂರಿ	೧೫-೧
ಕೃಷ್ಣಕಾಂತನ ಉಯಿಲು	ಬಿ. ವೆಂಕಟಾಚಾರ್ಯರು (ಅನು)	ಎ. ಆರ್. ಕೃ.	೩-೩
ಕೆಲವು ಸಣ್ಣ ಕತೆಗಳು	ಶ್ರೀನಿವಾಸ	ಎ. ಆರ್. ಕೃ.	೩-೨
ಕೈವಲ್ಯದರ್ಪಣ	ಶಿ. ಶಿ. ಬಸವನಾಳ (ಸಂ)	ಕೆ. ಜಿ. ಕುಂದಣಗಾರ	೨೫-೧
ಕೋರಿಕೆ	ಈಶ್ವರ ಸಣಕಲ್ಲ	ಎಂ. ವಿ. ಸೀತಾರಾಮಯ್ಯ	೧೬-೪
ಕಂಕಣ	ಹೊಯ್ಸಳ	,,	೧೭-೨
ಕಂದನ ಕಾವ್ಯಮಾಲೆ	ಜಿ. ಪಿ. ರಾಜರತ್ನಂ	ತೀ. ನಂ. ಶ್ರೀಕಂಠಯ್ಯ	೧೫-೩
ಕಂಬನಿ	ಶ್ರೀಮತಿ ಗೌ. ಬಿ. ಟಿ. ಜಿ. ಕೃಷ್ಣ	ತ. ಸು. ಶಾಮರಾವ್	೨೧-೩
ಕಂಸವಹೋ	ಎ. ಎನ್. ಉಪಾಧ್ಯೆ	ರಾ. ಅನಂತಕೃಷ್ಣ ಶರ್ಮ	೨೨-೪
ಕಿಡಿ	ಅ. ನ. ಕೃಷ್ಣರಾಯರು	ನಂ. ಶಿವರಾಮಶಾಸ್ತ್ರೀ	೧೪-೪
ಖಗೇಂದ್ರ ಮಣಿದರ್ಪಣ	ಎ. ವೆಂಕಟರಾವ್ ಮತ್ತು ಎಚ್. ಶೇಷ ಅಯ್ಯಂಗಾರ್ (ಸಂ.)	ಎನ್. ಅನಂತರಂಗಾಚಾರ್	೨೫-೧
ಗತಕಾಲದ ಗುರುತುಗಳು	ಎಫ್. ಜಿ. ಪಿಯರ್ಸ್	ಎಸ್. ಎಸ್. ರಾಘವಾಚಾರ್	೨೫-೧
ಗರಿ	ಅಂಬಿಕಾತನಯದತ್ತ	ವಿ. ಸೀ.	೧೬-೧
ಗ್ನಾನ	ಕೋ. ಶಿವರಾಮ ಕಾರಂತ	ನಾ. ಕಸ್ತೂರಿ	೧೭-೧
ಗ್ರಾಮ ಪಂಚಾನನ	ಬಾಲ, ಕೃ. ಲಕ್ಷ್ಮೀಶ್ವರ	ಜಿ. ವೆಂಕಟಸುಬ್ಬಯ್ಯ	೨೨-೧
ಗೀತಾಗಾಂಭೀರ್ಯ	'ಶ್ರೀರಂಗ'	ಎಂ. ಯಾಮುನಾಚಾರ್ಯ	೨೩-೪
ಗಂಡುಗೊಡಲಿ	ಜಿ. ಪಿ. ರಾಜರತ್ನಂ	ಎಲ್. ಗುಂಡಪ್ಪ	೧೫-೧
ಗಾಂಧೀ ಮಹಾತ್ಮನ ತತ್ತ್ವಬೋಧೆ	ಬಿ. ಶಿವಮೂರ್ತಿ ಶಾಸ್ತ್ರೀ	ಎ. ಆರ್. ಕೃ.	೧೧-೩
ಜ್ಞಾನೋಪಾಸನೆ	ನ. ಬನಹಟ್ಟಿ	ಎಸ್. ಶ್ರೀಕಂಠಶಾಸ್ತ್ರೀ	೨೩-೩
ಚಿಗುರು	ದಿವಂಗತ ಸೌ|| ಗೌರಮ್ಮ	ಕೆ. ನರಸಿಂಹಮೂರ್ತಿ	೨೪-೨

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸ
ಚಿತ್ರಶಿಖಂಡಿ	ಬೈಂದೂರು ಆನಂದರಾವ್	ಎ. ಆರ್. ಕೃ.	
ಚುಟುಕ	ಜಿ. ಪಿ. ರಾಜರತ್ನಂ	ಜಿ. ಹನುಮಂತರಾವ್	೧೩
ಚೋಮನದುಡಿ	ಶಿವರಾಮಕಾರಂತರು	'ವೆಂ'	೧೬
ಚೆನ್ನಬಸವ ಪುರಾಣ	ಲಿಂ. ವಿ. ಸಂಸ್ಥೆ, ಧಾರವಾಡ	ಎಂ. ಆರ್. ಶ್ರೀ.	೧೨-
ಚೆಂಗಲವೆ	ಪಾಂಡೇಶ್ವರ ಗಣಪತಿರಾವ್	ಕೃಷ್ಣಮೂರ್ತಿ ಪುರಾಣಿಕ	೩೩-
ಚಂದ್ರವದನಾ	ಶ್ರೀಮತಿ ತಿರುಮಲಮ್ಮನವರು	....	೧೧
ಚಂದ್ರಿಕಾ	ಸಂಸ್ಕೃತ ಮಹಾಪಾಠಶಾಲಾ, ಮೈಸೂರು (ಸಂ.)	ಸಿ. ಆರ್. ನರಸಿಂಹಶಾಸ್ತ್ರೀ	೧೬
ಚುಂಚುಂ	ಮಂ. ಶಂಕರನಾರಾಯಣರಾವ್	ಜಿ. ಹನುಮಂತರಾವ್	೧೫-
ಚೆಲ್ವನಾರಾಯಣಶತಕಂ	ದೇ. ಅಳಶಿಂಗರಾಚಾರ್	ಎ. ಆರ್. ಕೃ.	೨-
ಜನಜೀವನ	ಸಿಂಪಿ ಲಿಂಗಣ್ಣ	ಸಿ. ಕೆ. ವೆಂಕಟರಾಮಯ್ಯ	೧೧-
ಜಯ	ಸಂ. ಶ್ರೀರಂಗ ಭೀಮಾಚಾರ್ಯ	ಎ. ಆರ್. ಕೃಷ್ಣಶಾಸ್ತ್ರೀ	೧೦-
ಜೀವನ	ಕೃಷ್ಣಕುಮಾರ	ಎನ್. ಅನಂತರಂಗಾಚಾರ್	೧೨-
ಜೀವನಯಾತ್ರೆ	ಅ. ನ. ಕೃಷ್ಣರಾಯರು	ಡಿ. ಎಲ್. ನರಸಿಂಹಾಚಾರ್	೧೨-
ಜೀವನರಹಸ್ಯ	ಶಿವರಾಮ ಕಾರಂತ	ಎ. ಆರ್. ಕೃಷ್ಣಶಾಸ್ತ್ರೀ	೧೦-
ಜೈಮಿನಿಭಾರತ ಕಥಾಸಂಗ್ರಹ	ಆರ್. ರಾಮರಾವ್	ಟಿ. ಎಸ್. ವೆಂಕಣ್ಣಯ್ಯ	೪-
ಜ್ಞಾನೋಪಾಸನೆ	ಬರೆದವರು : ನಾ. ಬನಹಟ್ಟಿ ಅನು. : ಸ್ವಾತಂತ್ರಪ್ರಿಯರು	ಎಸ್. ಶ್ರೀಕಂಠಶಾಸ್ತ್ರೀ	೩೩-
ಟೊಳ್ಳು ಗಟ್ಟಿ	ಟಿ. ಪಿ. ಕೈಲಾಸಂ	ಎ. ಆರ್. ಕೃಷ್ಣಶಾಸ್ತ್ರೀ	೪- ೫-
ತತ್ತ್ವಮಸಿ	ಚಿ. ರಘುನಾಥಾಚಾರ್ಯರು	ಎಚ್. ಎನ್. ರಾಘವೇಂದ್ರಾಚಾರ್	೧೪-
ತತ್ತ್ವರತ್ನಪ್ರಕಾಶ	,,	,,	೧೪-
ತತ್ತ್ವಶುದ್ಧಿ	ದೇ. ರಾಮಾನುಜಾಚಾರ್ಯರು	ವಿ. ಟಿ. ತಿರುನಾರಣಯ್ಯಂಗಾರ್	೧೦-
ತತ್ತ್ವಸಮಾಸ	ವೈ. ಸುಬ್ಬರಾಯರು	ಎಂ. ಲಕ್ಷ್ಮೀನರಸಿಂಹಯ್ಯ	೧೪-
ತಾರಾಪ್ಯಾರಿ	ನರಸೀಪುರದ ಶೇಷಗಿರಿರಾವ್	ತೀ. ನಂ. ಶ್ರೀಕಂಠಯ್ಯ	೮-
ತಾರೆ	....	ಜಿ. ಪಿ. ರಾಜರತ್ನಂ	೧೪-
ತಿರುಗೆಮುರಗ	ಬಾಲಕರ ಸಮವಾಯ ಭಂಡಾರ (ಪ್ರ.)	ವಿ. ಸೀ.	೫-
ತಿಳಿಗನ್ನಡ ವ್ಯಾಕರಣ	ಆರ್. ಎನ್. ಸೂರ್ಯನಾರಾಯಣ	ಡಿ. ಎಲ್. ನರಸಿಂಹಾಚಾರ್	೧೨-
ತ್ರಿಪುರದಹನ	ಮಂ. ಆ. ದೊರೆಸಾಮಯ್ಯಂಗಾರ್	ಎಂ. ಎ. ವೆಂಕಟರಾವ್	೧೫-

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸಂಚಿಕೆ
ವಿಹಾರಿದುದು	'ರಾಶಿ' ಮನೋಹರ ಗ್ರಂ. ಪ್ರ. ಸ. (ಪ್ರ.)	ಜಿ. ಪಿ. ರಾಜರತ್ನಂ	೨೧-೪
ತ್ತೂರಿ	ಜಿ. ಪಿ. ರಾಜರತ್ನಂ	ತೀ. ನಂ. ಶ್ರೀಕಂಠಯ್ಯ	೧೪-೪
ರ್ಪಚೂರ್ಣ	ಸಿ. ಕೆ. ನಾಗರಾಜರಾವ್ (ಅನು.)	ಜಿ. ವೆಂಕಟಸುಬ್ಬಯ್ಯ	೨೨-೪
ರಿದ್ರನಾರಾಯಣ	ರಾ. ಬಿ. ಮನ್ಸಬ್‌ದಾರ	ಬಿ. ಎನ್. ಶಾಮರಾವ್	೧೫-೩
ವಾನ್ ರಂಗಾಚಾರ್ಲು	ಡಿ. ವಿ. ಗುಂಡಪ್ಪ	ಎ. ಆರ್. ಕೃ.	೩-೧
ಪಗಳು	ವಿ. ಸೀ.	ಕ. ಅ.	೧೫-೪
ೂತಘಟೋತ್ಕಚ	ಪಾನ್ಯಂ ಸುಂದರಶಾಸ್ತ್ರಿ (ಅನು.)	ಟಿ. ಎಸ್. ವೆಂಕಣ್ಣಯ್ಯ	೩-೪
ದೇವದಾಸ	ಗುರುನಾಥ ಜೋಶಿ (ಅನು.)	ಎಸ್. ವಿ. ಪರಮೇಶ್ವರಭಟ್ಟ	೨೧-೪
ದೇವರ ಬಾಗಿಲು	ಟೇಂಗ್ಸೆ ಗೋವಿಂದರಾಯರು	ಡಿ. ಚೆಂಪಾಬಾಯಿ	೧೪-೩
ರ್ಮಜ್ಯೋತಿ	ಮಂ. ಆ. ದೊರೆಸ್ವಾಮಯ್ಯಂಗಾರ್	ಎಂ. ಎ. ವೆಂಕಟರಾವ್	೨೦-೨
ಧರ್ಮಸೆರೆ	ಜಡಭರತ	ಬಿ. ಎನ್. ಶಾಮರಾವ್	೧೭-೩
ನಟರಾಜಭಕ್ತ, ನಾಳೆ ಹೋಗುವ ನಂದ ಮತ್ತು ಮೀರಾಬಾಯಿ	ನಂ. ವೆಂಕಟೇಶಯ್ಯಂಗಾರ್	ಎ. ಆರ್. ಕೃ.	೧೦-೨
ನನ್ನದು ಈ ಕನ್ನಡನಾಡು	ಬೇಂದ್ರೆ ದತ್ತರಾಯರು (ಆಯ್ದವರು)	ಕೆ. ವಿ. ಪುಟ್ಟಪ್ಪ	೧೧-೩
ನನ್ನ ತಾಯಿನಾಡು	ಬಿ. ಶಿವಮೂರ್ತಿ ಶಾಸ್ತ್ರಿ		೧೧-೩
ನನ್ನ ದೇವರು ಮತ್ತು ಇತರ ಕಥೆಗಳು	ಕೆ. ವಿ. ಪುಟ್ಟಪ್ಪ	ಎಸ್. ವಿ. ಪರಮೇಶ್ವರಭಟ್ಟ	೨೨-೨
ನನ್ನ ನಲ್ಲ	ಮಧುರ ಚೆನ್ನ	ಎ. ಎನ್. ಮೂರ್ತಿರಾವ್	೧೫-೧
ನಮ್ಮ ಊರಿನ ರಸಿಕರು	ಗೊರೂರು ರಾಮಸ್ವಾಮಯ್ಯಂಗಾರ್	ಎಲ್. ಗುಂಡಪ್ಪ	೧೪-೩
ನಮ್ಮ ಕತೆಗಳು	ಮಿತ್ರಮಂಡಳಿ, ಮಂಗಳೂರು (ಪ್ರ.)	ಎ. ಎನ್. ಮೂರ್ತಿರಾವ್	೧೪-೪
ನಮ್ಮ ಹಳ್ಳಿಗಳು	ಎ. ಶೇಷಯ್ಯಂಗಾರ್	ವಿ. ಸೀ.	೧೮-೪
ನವಜೀವನ	ಸಿ. ಅಶ್ವತ್ಥನಾರಾಯಣರಾವ್ ಸಂ॥	ಎ. ಆರ್. ಕೃ.	೧೦-೨
ನವಯುಗ	....	....	೭-೧, ೪
ನವಿಲುಗರಿ	ಬಿ. ಕೃಷ್ಣಶರ್ಮ ಮತ್ತು ಜಿ. ಬಿ. ಜೋಶಿ	ನಂ. ಶಿವರಾಮಶಾಸ್ತ್ರೀ	೧೬-೧

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸಂ
ನವೀನ ವಿದ್ಯಾಭ್ಯಾಸ ಮತ್ತು ಆಧುನಿಕ ಶಿಕ್ಷಣ ಪದ್ಧತಿಗಳು	ಎಂ. ವೆಂಕೋಬಾಚಾರ್	ಜಿ. ಹನುಮಂತರಾವ್	೧೪-
ನಲ್ಮೆ	ಕಡಂಗೋಡ್ಲು ಶಂಕರಭಟ್ಟರು	ವಿ. ಸೀ.	೧೪-
ನಾಡದೇವಿ	ಮೇವುಂಡಿ ಮಲ್ಲಾರಿ	ಕೆ. ವಿ. ಪುಟ್ಟಪ್ಪ	೧೧-
ನಾದಲೀಲೆ	ಅಂಬಿಕಾತನಯದತ್ತ	ಎಲ್. ಗುಂಡಪ್ಪ	೨೧-
ನಾಮಧಾರಿ	ರಂ. ಶ್ರೀ. ಮುಗಳಿ	ಡಿ. ವಿ. ಶೇಷಗಿರಿರಾವ್	೨೧-
ನಿರಾಭರಣ ಸುಂದರಿ	ದ. ರಾ. ಬೇಂದ್ರೆ	ಜಿ. ವೆಂಕಟಸುಬ್ಬಯ್ಯ	೨೨-
ನಿಶಾಕಾಂತ	ಮಾತೃಮಂದಿರ, ನಂಜನಗೂಡು (ಪ್ರ.)	ಎಂ. ಆರ್. ಶ್ರೀನಿವಾಸಮೂರ್ತಿ	೪-
ನೆಪೋಲಿಯನ್ ಬೊನಪಾರ್ಟೆ	ಕ್ಷೀರಸಾಗರ	ನಾ. ಕಸ್ತೂರಿ	೧೭-
ನೆಳಲು-ಬೆಳಕು	ವಿ. ಸೀ.	ದ. ರಾ. ಬೇಂದ್ರೆ	೧೮-
ನೀತಿಮಂಜರಿ (೨ನೆಯ ಭಾಗ)	ರಾ. ನರಸಿಂಹಾಚಾರ್ಯ	ಎ. ಆರ್. ಕೃಷ್ಣಶಾಸ್ತ್ರೀ	೧೦-
ನೇಮಿನಾಥ ಪುರಾಣಂ	ಎಚ್. ಶೇಷಯ್ಯಂಗಾರ್ ಸಂ||	ಡಿ. ಎಲ್. ನರಸಿಂಹಾಚಾರ್	೨೩-
ಪಯಣ	ವಿನಾಯಕ	ವಿ. ಸೀ.	೨೧-
ಪರಮಾಣು	ಜಿ. ಆರ್. ರಂಗಸ್ವಾಮಿ	ಎಲ್. ಸೀಬಯ್ಯ	೨೨-
ಪರಶುರಾಮ ರಾಮಾಯಣ	ಬೊಬ್ಬೂರು ರಂಗಪ್ಪ	ಟಿ. ಎಸ್. ವೆಂಕಣ್ಣಯ್ಯ	೫-
ಪರಾಪರ ಬ್ರಹ್ಮವಿದ್ಯೆ	ಚಿ. ರಘುನಾಥಾಚಾರ್ಯ	ಎಚ್. ಎನ್. ರಾಘವೇಂದ್ರಚಾರ್	೧೪-
ಪ್ರಣಯಾವರ್ತ ಅಥವಾ ಚಂಚಲ ಕುಮಾರಿ	ಬಿ. ಚಂದ್ರಶೇಖರಯ್ಯ	ಎ. ಆರ್. ಕೃಷ್ಣಶಾಸ್ತ್ರೀ	೫-
ಪ್ರಣಯ ಸರಣಿ	ಸಿ. ರಾಮಚಂದ್ರಶರ್ಮ	ಎಂ. ಆರ್. ಶ್ರೀನಿವಾಸಮೂರ್ತಿ	೪-
ಪ್ರತಿಮಾ ನಾಟಕಂ	ಭಾಸ (ಅನು.) ಬ್ರಂ. ಶ್ರೀ. ಸೀತಾರಾಮಶಾಸ್ತ್ರಿಗಳು	ಸಿ. ಕೆ. ವೆಂಕಟರಾಮಯ್ಯ	೯-
ಪ್ರಬಂಧ ಪ್ರಕಾಶ	ದೇಶಪಾಂಡೆ ಮನೋಹರ ರಾಯರು	ಜಿ. ವೆಂಕಟಸುಬ್ಬಯ್ಯ	೨೨-
ಪ್ರಪಂಚದ ಕೆಲಸಗಾರರು		ನಾ. ಕಸ್ತೂರಿ	೧೯-೨,
ಪ್ರಭುದೇವರ ಗ್ರಂಥಗಳು	ಬುದ್ಧಯ್ಯಸ್ವಾಮಿ, ಮ. ಪುರಾಣಿಕ	ಎಂ. ಆರ್. ಶ್ರೀನಿವಾಸಮೂರ್ತಿ	೧೨-
ಪ್ರಭುದೇವರ ಪುರಾಣ	ಬುದ್ಧಯ್ಯಸ್ವಾಮಿ, ಮ. ಪುರಾಣಿಕ (ಪ್ರ.)	ಡಿ. ಎಲ್. ನರಸಿಂಹಾಚಾರ್	೨೨-
ಪ್ರಭುಲಿಂಗಲೀಲೆಯ ಸಂಗ್ರಹ	ಎಂ. ಎಸ್. ಬಸವಲಿಂಗಯ್ಯ ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ	ದ. ರಾ. ಬೇಂದ್ರೆ	೧೬-

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸಂಚಿಕೆ
ವಕಾಲದಲ್ಲಿ ಪ್ರಥಮ ಚಿಕಿತ್ಸೆ	ಯು. ರಾಮರಾವ್	ಪಿ. ಕೃ. ರಾ.	೧೦-೩
ಲಯತಾಂಡವ	ಜಿ. ವಾಸುದೇವರಾವ್	ಎಂ. ವಿ. ಸೀತಾರಾಮಯ್ಯ	೧೪-೨
ಶ್ನೋತ್ತರ ಲೇಖ್ಯ ಬೋಧಿನಿ	ಭಾರತಿ ಸಂಪಂಗಿ ರಾಮಯ್ಯ	ಎ. ಆರ್. ಕೃಷ್ಣಶಾಸ್ತ್ರೀ	೧೦-೨
ಕಶಾಸ್ತ್ರವು	ಜೆ. ರಘುಪತ್ಯಾಚಾರ್	,,	೩-೪
ಥಮಿಕ ಮತ್ತು ಕಸಬು ಗಳ ವಿದ್ಯಾಭ್ಯಾಸದಲ್ಲಿ ಮಾಡಬಹುದಾದ ನೂತನ ತಿದ್ದುಪಾಟುಗಳು	ಬಿ. ಪುಟ್ಟಯ್ಯ	ಎ. ಎನ್. ನರಸಿಂಹಯ್ಯ	೪-೨
್ರಾಯೋಗಿಕ ಮನಶ್ಶಾಸ್ತ್ರದ ಪರಿಚಯ	ಎನ್. ಎಸ್. ನಾರಾಯಣಶಾಸ್ತ್ರೀ	ಜಿ. ಹನುಮಂತರಾವ್	೧೪-೪
ಷ್ಪದಂತಪುರಾಣಂ	ಎ. ವೆಂಕಟರಾವ್, ಮತ್ತು ಎಚ್. ಶೇಷಯ್ಯಂಗಾರ್ (ಸಂ.)	ಡಿ. ಎಲ್. ನರಸಿಂಹಾಚಾರ್	೧೬-೧
ಪೂಜಾಸಾರ ಸಮುಚ್ಚಯ	ಎ. ಶಾಂತರಾಜಶಾಸ್ತ್ರೀ		೫-೪
ಪೂರ್ಣಕಲಾ	ಶ್ರೀಮತಿ ತಿರುಮಲಮ್ಮನವರು	ಎ. ಆರ್. ಕೃಷ್ಣಶಾಸ್ತ್ರೀ	೧-೧
ಪೂರ್ವಪುರಾಣಂ	ಎ. ಶಾಂತರಾಜಶಾಸ್ತ್ರೀ	,,	೭-೨
ಪೂರ್ವರಂಗ	ಮಧುರ ಚೆನ್ನ	ಎಂ. ಎ. ವೆಂಕಟರಾವ್	೧೪-೪
ಪ್ರೇಮಕಾಂತ	ಲಕ್ಷ್ಮೀನರಸಿಂಹಶಾಸ್ತ್ರೀ	ಎ. ಆರ್. ಕೃ.	೧೧-೩
ಪ್ರೇಮವೂ ಮಾನವ ಧರ್ಮ ವಲ್ಲವೆ?	ಎಂ. ಎಸ್. ಕೇಸರಿ	,,	೧೧-೩
ಪ್ರೇಮಾಹುತಿ	ಟಿ. ವಿ. ರಾವ್	ಡಿ. ಎಲ್. ನರಸಿಂಹಾಚಾರ್	೧೭-೧
ಪಂಚರಾತ್ರರೂಪಕಂ	ದೇ. ಅಳಸಿಂಗರಾಚಾರ್	ನಂ. ಶಿವರಾಮಶಾಸ್ತ್ರೀ	೧೫-೧
ಪಂಚರಾತ್ರ	ಎನ್. ಎಸ್. ನಾರಾಯಣಶಾಸ್ತ್ರೀ		
ಪಂಚಾಮೃತಂ	ಕೆ. ವಿ. ಕೃಷ್ಣಭಟ್ಟ	ಎಲ್. ಗುಂಡಪ್ಪ	೧೮-೪
ಪಂಪರಾಮಾಯಣ ಸಂಗ್ರಹ		ದ. ರಾ. ಬೇಂದ್ರೆ	೧೯-೧
ಫ್ರಾನ್ಸಿನ ಮಹಾಕ್ರಾಂತಿ	ಪಿ. ಆರ್. ರಾಮಯ್ಯ	ನಾ. ಕಸ್ತೂರಿ	೧೪-೪
ಬಡತನದ ಬಾಳು	ಆನಂದ ಕಂದ	ತೀ. ನಂ. ಶ್ರೀಕಂಠಯ್ಯ	೧೪-೨
ಬಸವೇಶ್ವರನ ಚರಿತ್ರೆ	ಸಿಂದಿಗಿ ಸಿದ್ದಪ್ಪನವರು	ಎಂ. ಆರ್. ಶ್ರೀನಿವಾಸಮೂರ್ತಿ	೮-೪
ಬಸವೇಶ್ವರರೂ ಕರ್ಣಾಟಕದ ಅಭ್ಯುದಯವೂ	ಚೆನ್ನಬಸಪ್ಪ ಮುರಗೇಂದ್ರಪ್ಪ ಹಾಲಪ್ಪ	ಎಂ. ಆರ್. ಶ್ರೀನಿವಾಸಮೂರ್ತಿ	೧೧-೨
ಬಾಲತ್ರಿಕೋಣಮಿತಿ	ಎಂ. ವಿ. ಜಂಬುನಾಥನ್	ಎಸ್. ವಿ. ಶ್ರೀನಿವಾಸರಾವ್	೧೯-೨, ೩

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸ
ಬಾಲರಾಮಾಯಣಂ, ಬಾಲಭಾರತ	ಬಾದಾಮಿ ಕೃಷ್ಣರಾಯರು	ಎ. ಆರ್. ಕೃ.	೭
ಬಾಲಾದಿತ್ಯ	ಪಿ. ರಾಮಕೃಷ್ಣರಾಯರು (ಅನು.)	ಬಿ. ಎನ್. ಶಾಮರಾವ್	೧೬
ಬಾಲಪದ್ಯಾವಳಿ	ಮಂ. ಶಂಕರನಾರಾಯಣರಾವ್	ಜಿ. ಹನುಮಂತರಾವ್	೧೫
ಬಾಳಿನಲ್ಲಿ ಬೆಳಕು	ಮಧುರ ಚೆನ್ನ ಮತ್ತು ಸಿಂಪಿ ಲಿಂಗಣ್ಣ (ಅನು.)	ಗುಂಡಪ್ಪ ಎಲ್.	೧೮
ಬಿನ್ನಹ	ಶ್ರೀನಿವಾಸ	ಎ. ಆರ್. ಕೃಷ್ಣಶಾಸ್ತ್ರೀ	೪
ಬುದ್ಧವಚನ ಪರಿಚಯ ಮತ್ತು ಮಿಲಿಂದಪ್ರಶ್ನೆ	ಜಿ. ಪಿ. ರಾಜರತ್ನಂ (ಸಂ. ಅನು.)	ನಂ. ಶಿವರಾಮಶಾಸ್ತ್ರೀ	೨೦
ಬೆಟ್ಟದ ಜೀವ	ಶಿವರಾಮಕಾರಂತ	ಆರ್. ಎಸ್. ರಾಮರಾವ್	೨೫
ಬೆಳಗು		ಎಂ. ಯಾಮುನಾಚಾರ್	೧೯
ಬೆಳಗಾಂವ ಸ್ಕೂಲ್ ಬೋರ್ಡ್ ಗೆಜಿಟ್		ಎ. ಆರ್. ಕೃ.	೧೦
ಬೆಂಗಳೂರು ಪಬ್ಲಿಕ್ ಲೈಬ್ರೆರಿಯ ವರದಿ		,,	೧೦
ಬೆಂಜಮಿನ್ ಫ್ರಾಂಕ್‌ಲಿನ್	ಕೆ. ಎಲ್. ಸುಬ್ಬರಾವ್	ಎಂ. ಆರ್. ಶ್ರೀನಿವಾಸಮೂರ್ತಿ	೯
ಭಕ್ತ ನಾಮದೇವ ನಾಟಕಂ	ಲಕ್ಷ್ಮೀನರಸಿಂಹಶಾಸ್ತ್ರೀ	ಎ. ಆರ್. ಕೃ.	೧೧
ಭರತೇಶವೈಭವ	ಜೈನ ಯುವಕ ಸಂಘ (ಪ್ರ)	ಟಿ. ಎಸ್. ವೆಂಕಣ್ಣಯ್ಯ	೫
ಭಾರ್ಗವ ಗರ್ವಭಂಗಂ	ಶ್ರೀಮತಿ ತಿರುಮಲಮ್ಮನವರು		೧೧
ಭಾರತಧರ್ಮ	ಎನ್. ಶೇಷಾದ್ರಿಶರ್ಮ (ಅನು)	ವಿ. ಸೀತಾರಾಮಯ್ಯ	೧೧
ಭಾರತಮಾರ್ಗ	ಗುರುರಾಜ, ಭಿ. ಜೋಶಿ	ತ. ಸು. ಶಾಮರಾವ್	೨೨
ಭಾರತೀಯ ಇತಿಹಾಸ ಪ್ರವೇಶಿಕಾ	ಕೆಂ. ಕೃಷ್ಣಯ್ಯಂಗಾರ್	ನಾ. ಕಸ್ತೂರಿ	೧೬
ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ	ಅ. ನ. ಕೃಷ್ಣರಾಯ	ಎಂ. ವಿ. ಸೀತಾರಾಮಯ್ಯ	೧೫
ಭಾರತೀಯ ಚಿತ್ರಕಲೆಯ ಸಂಕ್ಷಿಪ್ತ ಇತಿಹಾಸ	ಅ. ನ. ಕೃಷ್ಣರಾಯ	ಬಿ. ವೆಂಕೋಬರಾವ್	೧೧
ಭಾರತೀಯ ನವಜನ್ಮ		ಎಲ್. ಗುಂಡಪ್ಪ	೧೯
ಭಾರತೀಯರ ಪ್ರಾಚೀನ ಇತಿಹಾಸ	ನಾರಾಯಣಶರ್ಮ	ವಿ. ಸೀತಾರಾಮಯ್ಯ	೮
ಭಾವಗೀತೆ	ಕೃ. ಶ್ರೀ. ಬೆಟಗೇರಿ	,,	೮

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸ
ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ		ಎ. ಆರ್. ಕೃಷ್ಣಶಾಸ್ತ್ರೀ	೧೦
ಮೈಸೂರು ಶಾಸನದ ಇಲಾಖೆಯ ವರದಿ ಮತ್ತು ಚಂದ್ರವಳ್ಳಿಯ ಸಂಶೋಧನೆ	ಡಾ|| ಎಂ. ಎಚ್. ಕೃಷ್ಣ	ಎಂ. ಗೋವಿಂದ ಪೈ	೧೩
ಯಜ್ಞಕುಂಡ	ಕಡಂಗೋಡ್ಲು ಶಂಕರಭಟ್ಟ	ಎ. ಎನ್. ಮೂರ್ತಿರಾವ್	೧೪
ಯಾಜ್ಞ್ಯವಲ್ಕ್ಯ ವಿಜಯ	ವೈ. ಕೆ. ಕುಲಕರ್ಣಿ	ಎ. ಆರ್. ಕೃ.	೪
ಯೆಂಡ್ಕುಡ್ಕ ರತ್ನ	ಜಿ. ಪಿ. ರಾಜರತ್ನಂ	ತೀ. ನಂ. ಶ್ರೀಕಂಠಯ್ಯ	೧೪
ಯೋಗಮಕರಂದ	ಟಿ. ಕೃಷ್ಣಮಾಚಾರ್ಯರು	ಎ. ವೆಂಕಟಸುಬ್ಬಯ್ಯ	೧೭
ರಂಗಭೂಮಿ	ಅಮೆಚೂರು ನಾಟಕ ಸಂಘ, ಬೆಂಗಳೂರು (ಪ್ರ.)	ವಿ. ಸೀತಾರಾಮಯ್ಯ	{ ೭ ೮
,,		ಎ. ಆರ್. ಕೃಷ್ಣಶಾಸ್ತ್ರೀ	೮
ರಣಜಿತ್‌ಸಿಂಗನ ಕಥೆಗಳು	ಕೆ. ರಾಮಸ್ವಾಮಯ್ಯಂಗಾರ್	ವಿ. ಸೀತಾರಾಮಯ್ಯ	೪
ರತ್ನಾ ಅಥವಾ ಕಲಿತವರ ಬಾಳ್ವೆ	ನಾರಾಯಣಶರ್ಮ	ಜಿ. ಪಿ. ರಾಜರತ್ನಂ	೧೪
ರತ್ನಾವಳಿ	....	ಎ. ಆರ್. ಕೃ.	೨
ರತ್ನನ ದೋಸ್ತಿ ರತ್ನ ಅಥವ ಬೇವಾರ್ಸಿಯ ಬರಾವು	ಜಿ. ಪಿ. ರಾಜರತ್ನಂ	ನಾ. ಕಸ್ತೂರಿ	೧೬
ರತ್ನನ ಪದಗಳು	ಜಿ. ಪಿ. ರಾಜರತ್ನಂ	ಎ. ಕೆ. ಪುಟ್ಟರಾಮು	೧೬
ರತ್ನ ಸಿಂಹಾಸನ	ಮ. ನರಸಿಂಹಮೂರ್ತಿ	ನಾ. ಕಸ್ತೂರಿ	೧೫
ರನ್ನ ಕವಿ ಪ್ರಶಸ್ತಿ	ಮೈಸೂರು ವಿಶ್ವವಿದ್ಯಾನಿಲಯ ಸಂಘ (ಪ್ರ.)	ಟಿ. ಎಸ್. ವೆಂಕಣ್ಣಯ್ಯ	೧೦
ರಮೆಯುಮೆಯರ ವಿನೋದ ಸಂವಾದ	ಕೃ. ಶಿ. ಬೆಟಗೇರಿ		೫
ರಾಗಿಣಿ	ಎಸ್. ವಿ. ಪರಮೇಶ್ವರಭಟ್ಟರು	ಕೃಷ್ಣಮೂರ್ತಿ ಪುರಾಣಿಕ	೨೪
ರಾಜಭಕ್ತಿ ಅಥವಾ ಮೈಸೂರು ಮಾಣಿಕ್ಯ	ಚಿ. ಸದಾಶಿವಯ್ಯ	ಎಂ. ಅರ್. ಶ್ರೀನಿವಾಸಮೂರ್ತಿ	೧೦
ರಾಜಭಕ್ತಿ ಮುಕ್ತಾವಳಿ	ಬಿ. ಶ್ರೀಕಂಠಯ್ಯ	ಎ. ಆರ್. ಕೃ.	೧೦
ರಾಜನಿರೀಕ್ಷೆ	ಸುಬ್ರಹ್ಮಣ್ಯನವರು		೧೧
ರಾಜಯೋಗಿ	ಆನಂದಕಂದ	ಬಿ. ಎನ್. ಶಾಮರಾವ್	೧೭
ರಾಜವಲ್ಲಭ	ಹ. ಪಿ. ಜೋಷಿ	ವಿ. ಸೀತಾರಾಮಯ್ಯ	೧೭
ರಾಜಾ ಮಲಯಸಿಂಹ	ಎಂ. ಎ. ಶ್ರೀನಿವಾಸಾಚಾರ್	,,	೫

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸಂಚಿಕೆ
ರಾಜ್ಯಾದಾಯವೂ ಬಡತನವೂ	ಡಿ. ಎಸ್. ಶರ್ಮ (ಅನು.)	ಎಸ್. ಗೋಪಾಲಸ್ವಾಮಿ	೨೫-೧
ರಾಣೀಮೃಣಾಳಿನಿ	ಗಳಗನಾಥರು	ವಿ. ಸೀತಾರಾಮಯ್ಯ	೧೦-೪
ರಾಮಕೃಷ್ಣ ವಚನಾಮೃತ, ಶ್ರೀ		ಎ. ಆರ್. ಕೃ	೭-೪
ರಾಮಚಂದ್ರ	ಜಂಗಮಕೋಟೆ ಕೃಷ್ಣ ಶಾಸ್ತ್ರೀ	ಎಂ. ಆರ್. ಶ್ರೀನಿವಾಸಮೂರ್ತಿ	೧೦-೪
ರಾಮಾಚಾರಿಯ ನೆನಪು	ಪು. ತಿ. ನರಸಿಂಹಾಚಾರ್ಯ	ವಿ. ಸೀತಾರಾಮಯ್ಯ	೧೪-೪
ರೋಹಿಣಿ	ಕಲಾಕುಮಾರ ಸಾಧನಪ್ರಕಟನಾಲಯ	ಎನ್. ಪ್ರಹ್ಲಾದರಾವ್	೨೫-೩
ರೈಸ್ (ಬಿ. ಎಲ್.) ಅವರ ವೃತ್ತಾಂತ	ಸೋಸಲೆ ಕೃಷ್ಣಸ್ವಾಮಿಶಾಸ್ತ್ರೀ		೧೧-೧
ಲಾರ್ಡ್ ಕಿಚನರ್ ಅವರ ಚರಿತ್ರೆ	ಎಂ. ಎಸ್. ರಾವ್ ಕಂಪನಿ (ಪ್ರ.)	ಎ. ಆರ್. ಕೃ.	೪-೨
ಲಾಲಾ ಲಜಪತರಾಯರ ಚರಮ ಶ್ಲೋಕಾವಳಿ	ಬಿ. ಶಿವಮೂರ್ತಿಶಾಸ್ತ್ರೀ		೧೧-೩
ವರ್ಧಮಾನಯ್ಯನವರಸ್ಮಾರಕ ಸಂಚಿಕೆ (ಶ್ರೀಯುತ)	....	ಧೀ	೮-೩
ವಸಂತಕುಸುಮಾಂಜಲಿ	ಡಿ. ವಿ. ಗುಂಡಪ್ಪನವರು	ಎ. ಆರ್. ಕೃ.	೪-೨
ವ್ಯಾಪಾರವೆಂದರೇನು ?	ಜಿ. ಆರ್. ಜೋಸ್ಯರ್	ವಿ. ಸೀತಾರಾಮಯ್ಯ	೬-೨
ವಿಚಾರ ತರಂಗಿಣಿ	ಚಿದಂಬರ ಪಂಡಿತರು	ಎ. ಆರ್. ಕೃ.	೧೧-೧
ವಿದ್ಯಾರಣ್ಯವಿಜಯ	ಡಿ. ವಿ. ಗುಂಡಪ್ಪ	ಎ. ಆರ್. ಕೃಷ್ಣ ಶಾಸ್ತ್ರೀ	
ವಿದ್ಯಾರ್ಥಿ ವಿಚಾರವಿಲಾಸ	ಜಿ. ಪಿ. ರಾಜರತ್ನಂ (ಸಂ.)	ಮಂ	
ವಿಮರ್ಶೆ	ಶ್ರೀನಿವಾಸ	ವಿ. ಸೀತಾರಾಮಯ್ಯ	೮-೧
ವಿದ್ಯುಚ್ಛಕ್ತಿಯ ಪ್ರಭಾವ	ಎನ್. ನಾಗೇಶರಾಯರು	ಬೆಳ್ಳಾವೆ ವೆಂಕಟನಾರಾಯಣಪ್ಪ	೧೪-೩
ವಿಮಲಾದೇವಿ	ಟಿ. ಎನ್. ಶರ್ಮ (ಅನು.)	ಎ. ಆರ್. ಕೃ.	೫-೪
ವಿಮರ್ಶಪದ್ಧತಿಯೂ ಪ್ರಣಯಾವರ್ತವೂ	ಸಿ. ಎಸ್. ವೆಂಕಟಾಚಾರ್	,,	೫-೩
ವಿರಹಿಣಿ	ಆನಂದಕಂದ	ಎಂ. ವಿ. ಸೀತಾರಾಮಯ್ಯ	೧೭-೨
ವಿಶ್ವಬಂಧುವಿನ ವಿಶೇಷ ಸಂಚಿಕೆ	ಎ. ಶಾಂತರಾಜಶಾಸ್ತ್ರೀ (ಸಂ.)	ಎ. ಆರ್. ಕೃ.	೭-೨
ವಿಶ್ವಮೇಧ	ಸಂಯುಕ್ತ ಕರ್ಣಾಟಕ ಮುದ್ರಣ ಮಂದಿರ (ಪ್ರ.)	ಎಚ್. ಕೃಷ್ಣರಾಯರು	೨೪-೨
ವಿಶ್ವಾಮಿತ್ರನ ಸೃಷ್ಟಿ	ಶ್ರೀರಂಗ	ಎಸ್. ವಿ. ರಂಗಣ್ಣ	೧೮-೨
ವಿಷವೃಕ್ಷ	ಬಿ. ವೆಂಕಟಾಚಾರ್	ಎ. ಆರ್. ಕೃ.	೧-೨

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸಂ
ವೀಣಾನಾದ	ಕೃ. ಹ. ಕುಲಕರ್ಣಿ	ಡಿ. ಎಲ್. ನರಸಿಂಹಾಚಾರ್	೧೭
ವೀರ್ಯನಾಶವೇ ಮರಣ	ಶ್ರೀನಿವಾಸರಾವ ಹೊದಲೂರ	ಎ. ಆರ್. ಕೃ.	೧೧
ವೈದ್ಯರಾಜ	ಶ್ರೀರಂಗ	ಡಿ. ಎಲ್. ನರಸಿಂಹಾಚಾರ್	೧೪-
ವೈಯಾರಿ	ಗೊರೂರು ರಾಮಸ್ವಾಮಯ್ಯಂಗಾರ್, ಮ. ಗ್ರಂ. ಮಾಲೆ	ಶಿವರಾಮಕಾರಂತ	೨೪-
ವೆಂಕಟಕೃಷ್ಣಯ್ಯ (ಎಂ.) ನವರ ಜೀವಮಾನ ಚರಿತ್ರೆ	ಎಂ. ವೆಂಕಟಕೃಷ್ಣಯ್ಯ	ಎ. ಆರ್. ಕೃ.	೧೧-
ಶತಕತ್ರಯೀ	ಎ. ಶಾಂತರಾಜಶಾಸ್ತ್ರೀ (ಸಂ.)	,,	೫-
ಶರಣಸಾಹಿತ್ಯ ವಿಶೇಷ ಸಂಚಿಕೆ	ಕೀರ್ತನಕೇಸರಿ, ಬಿ. ಶಿವಮೂರ್ತಿ ಶಾಸ್ತ್ರಿಗಳು (ಸಂ.)	ಎಂ. ಆರ್. ಶ್ರೀ	೨೧-
ಶಾನ್ತಾ	ಶ್ರೀನಿವಾಸ	ಎಂ. ಆರ್. ಶ್ರೀ	೪-
ಶಾನ್ತಿ	ಜಿ. ಪಿ. ರಾಜರತ್ನಂ	ಎ. ಕೆ. ಪುಟ್ಟರಾಮು	೧೬-
ಶಿವಾನುಭವ	ಫ. ಗು. ಹಳಕಟ್ಟಿ	ಎಂ. ಆರ್. ಶ್ರೀನಿವಾಸಮೂರ್ತಿ	೮-
ಶಿಶುಗೀತಮಾಲೆ	ಬಿ. ಎನ್. ಲಕ್ಷ್ಮಣ ಪೈ	ಜಿ. ಪಿ. ರಾಜರತ್ನಂ	೨೧-
ಶ್ರೀ ಕರ್ಣಾಟಕ ವಚನ ಮಣಿಮಂಜರಿ	ವೆಂಕಟರಮಣಯ್ಯ	ಸಿ. ಕೆ. ವೆಂಕಟರಾಮಯ್ಯ	೧೧-
ಶ್ರೀ ಕೃಷ್ಣ	ಬಿ. ಆರ್. ಚಕ್ರವರ್ತಿಗಳು (ಸಂ.)		೧೦-
ಶ್ರೀ ದಾನವರ್ಯ ಪ್ರಸನ್ನ ವೆಂಕಟರ ಕೀರ್ತನೆಗಳು ಮತ್ತು ಭಾಗವತ	ಕವಿಭೂಷಣ ಬೆಟಗೇರಿ ಕೃಷ್ಣರಾಯ	ಎ. ಆರ್. ಕೃ.	೧೧-
ಶ್ರೀ ಭಕ್ತಾನಾಥ ಸ್ವಾಮಿಗಳವರು ಮತ್ತು ಶ್ರೀ ಆದಿ ಚುಂಚನಗಿರಿಸಂಸ್ಥಾನಪೀಠ	ಡಿ. ಆರ್. ರಾಮಯ್ಯ		೧೧-
ಶ್ರೀ ಮಲ್ಲಾರಿ ಕೀರ್ತನ	ರಾಮದಾಸ್ ತೋಸೀಖಾನಿ, ಹಾನಿಗಲ್ಲ	ಎ. ಆರ್. ಕೃ.	೧೧-
ಶ್ರೀಮದನಂತನ ಕಥಾ	ವೆಂಕಪ್ಪ ಪರಮಯ್ಯ ಹೆಗ್ಗಡೆ		೫-
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ	(ಅನು.) ಬಿ. ಗುರುರಾಜಾರಾವ್	ಬಿ. ಎ. ಕೃಷ್ಣಸ್ವಾಮಿರಾವ್	೨೩-
ಶ್ರೀ ಯೋಗಾರೂಢಸ್ವಾಮಿ ಚೆನ್ನಪ್ಪನವರ ಚರಿತ್ರೆ	ಡಿ. ಆರ್. ರಾಮಯ್ಯ		೧೧-
ಶ್ರೀ-ರಂಗ-ಭೂಮಿ, ನರಕದಲ್ಲಿ ನ-ರ-ಸಿಂ-ಹ	ಶ್ರೀರಂಗ	ಟಿ. ಎನ್. ಶಾಮರಾವ್	೧೯-೨,

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸಂಚಿಕೆ
ರಾಮಕೃಷ್ಣ ಪರಮ ಹಂಸರ ಸತ್ಕಥೆಗಳು	ಗ. ಹು. ಹೊನ್ನಾಪುರಮಠ	ಎ. ಆರ್. ಕೃ.	೧೧-೩
ರಾಮಕೃಷ್ಣ ವಚನಾಮೃತ			
ರಾಮ ಚರಿತ	ಸಾಲಿ ರಾಮಚಂದ್ರರಾಯರು	ಟಿ. ಎಸ್. ಶಾಮರಾವ್	೧೭-೪
ರಾಮ ಮಹಿಮೆ	ಎಂ. ವೆಂಕಟಕೃಷ್ಣಯ್ಯ	ಎ. ಆರ್. ಕೃ.	೧೧-೩
ಶಂಕರಭಾಷ್ಯ ಸಹಿತ ಮುಂಡಕೋಪನಿಷತ್ತು	ವೈ. ಸುಬ್ಬರಾವ್	ವಿ. ಟಿ. ತಿರುನಾರಣಯ್ಯಂಗಾರ್	೧೦-೪
ಸಮರ್ಥ ರಾಮದಾಸ ಸ್ವಾಮಿಗಳ ಚರಿತ್ರೆ			೭-೧, ೪
ೀ ಹೇಮರೆಡ್ಡಿ ಮಲ್ಲಮ್ಮನ ಚರಿತ್ರೆ	ದ್ಯಾಮಪುರದ ಚೆನ್ನಯ್ಯ	ಎ. ಆರ್. ಕೃ.	೧೧-೧
ುಕ್ಲ ಯಜುರ್ವೇದ ಸಂಹಿತೆ ಅಥವಾ ಈಶಾವಾಸ್ಯೋಪನಿಷತ್	ವೈ. ಸುಬ್ಬರಾವ್	ವಿ. ಟಿ. ತಿರುನಾರಣಯ್ಯಂಗಾರ್	೧೦-೪
ಷಟ್ಪದೀ ಝೇಂಕಾರ	ಹೊಸಕೆರೆ ಚಿದಂಬರಯ್ಯ		೧೧-೩
ಸಖೀಗೀತ	ಅಂಬಿಕಾತನಯದತ್ತ (ಪ್ರ.)	ತೀ. ನಂ. ಶ್ರೀಕಂಠಯ್ಯ	೨೨-೪
ಸಚಿತ್ರ ಹೊಸಕನ್ನಡ ಬಾಲಬೋಧೆ	ನರಸಿಂಹ ಪುರಾಣೀಕ	ಜಿ. ಹನುಮಂತರಾವ್	೧೪-೪
ಸಣ್ಣ ಕಥೆಗಳು	ಶ್ರೀನಿವಾಸ	ವಿ. ಸೀತಾರಾಮಯ್ಯ	೬-೨
ಸತ್ಯಶೋಧನೆ	ಕನ್ನಡಿಗರಿಬ್ಬರಿಂದ	,,	೧೦-೨
ಸತ್ವಶಾಲಿ ರಶಿಯಾ	ಡಿ. ಎಸ್. ಶರ್ಮ (ಅನು.)	ಹ. ಕೃ.	೨೪-೨
ಸತ್ಯಾಗ್ರಹ	ಅ. ಸರ್ವಾಭಟ್ಟ		೧೦-೩
ಸನಾತನ ಧರ್ಮ ಸಂರಕ್ಷಕ	ಮಿಂಚಿನ ಬಳ್ಳಿಯ ಕುಸುಮಮಾಲೆ		೧೧-೩
ಸಂನ್ಯಾಸಿ	ಕಾಪಸೆ ರೇವಪ್ಪ	ಕೆ. ವಿ. ರಾಘವಾಚಾರ್	೨೧-೨
ಸನ್ಮಾರ್ಗದರ್ಶಿ	ಶ್ರೀ. ತಿರುಮಲಮ್ಮ	ಟಿ. ಎಸ್. ವೆಂಕಣ್ಣಯ್ಯ	೪-೧
ಸಮುದ್ರದಾಚೆಯಿಂದ	ವಿ. ಕೃ. ಗೋಕಾಕ	ತೀ. ನಂ ಶ್ರೀಕಂಠಯ್ಯ	೨೧-೧
ಸರಳವಿಜ್ಞಾನ ಪಾಠಗಳು, ಪ್ರಕೃತಿ ವಿಮರ್ಶೆ	ಜಿ. ಬಿ. ಕೇಶವರಾವ್	ಎ. ಆರ್. ಕೃ.	೮-೪
ಸರ್ವಜ್ಞನ ವಚನಗಳು	ಚೆನ್ನಪ್ಪ ಉತ್ತಂಗಿ	ಎಂ. ಆರ್. ಶ್ರೀನಿವಾಸಮೂರ್ತಿ	೭-೩
ಸಹಕಾರ	ಬೈಂದೂರು ಆನಂದರಾವ್		೫-೪
ಸಹಕಾರ ಸೌಖ್ಯ	ಬಿ. ಶ್ರೀ. ಪಾಂಡುರಂಗರಾವ್	ಸಿ. ಆರ್. ನರಸಿಂಹಶಾಸ್ತ್ರೀ	೧೪-೪

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ
ಸ್ವರ್ಗಾರೋಹಣಪರ್ವ			
ಸಾಕ್ರೆಟೀಸನ ಸಂವಾದಗಳು, ಯುಥಿಫ್ರೊ	ಎಚ್. ಆರ್. ರಂಗಸ್ವಾಮಿ ಯ್ಯಂಗಾರ್	ಎ. ಆರ್. ಕೃ.	
ಸಾಧು ಸಮಾಗಮ	ವಾಮನ ಆ. ಹೊದರೆ		
ಸಾವಿತ್ರಿ	ಶ್ರೀನಿವಾಸ	ಟಿ. ಎಸ್. ವೆಂಕಣ್ಣಯ್ಯ	
ಸಾವಿತ್ರಿ-ಸತ್ಯವಾನ್	ನಾರಾಯಣ ವೆಂಕಟೇಶ ಕುರಡಿ		
ಸಾವಿನ ಸಮಸ್ಯೆ	ವೆಂಬಾರ್ ವೆಂಕಟಾಚಾರ್	ನಂ. ಶಿವರಾಮಶಾಸ್ತ್ರಿ	೧
ಸಾಹಿತ್ಯ (ತ್ರೈಮಾಸ ಪತ್ರಿಕೆ)	ಸಾಹಿತ್ಯ ಕಾರ್ಯಾಲಯ		೧
ಸಾಹಿತ್ಯ	ಶ್ರೀನಿವಾಸ	ಎ. ಆರ್. ಕೃ.	
ಸಾಹಿತ್ಯದ ಜೀವಾಳ	ಗೊರೂರು ರಾಮಸ್ವಾಮಿ ಯ್ಯಂಗಾರ್ (ಅನು.)	ಎಚ್. ಕೆ. ರಾಜಾರಾಯರು	೨
ಸಾಹಿತ್ಯ ರತ್ನ	ಅ. ನ. ಕೃಷ್ಣರಾಯರು	ಕೋ. ಶಿ. ಕಾರಂತ	೨
ಸಿದ್ಧರಾಮ ಚಾರಿತ್ರ (ರಾಘವಾಂಕ ವಿರಚಿತ)	ಪ್ರೊ. ವೆಂಕಣ್ಣಯ್ಯ ಮತ್ತು ಡಿ. ಎಲ್. ನರಸಿಂಹಾಚಾರ್	ಕೆ. ಜಿ. ಕುಂದಣಗಾರ	೨
ಸುಖಲತಾ	ಆರ್. ಕಲ್ಯಾಣಮ್ಮ	ಎಂ. ಆರ್. ಶ್ರೀ.	೧
ಸುದರ್ಶನ	ಆನಂದಕಂದ	ವಿ. ಸೀತಾರಾಮಯ್ಯ	೧
ಸುಬೋಧ ಕುಸುಮಾಂಜಲಿ ಗ್ರಂಥಮಾಲಾ	ಎಂ. ರಾಮರಾಯರು	ಎ. ಆರ್. ಕೃ.	
ಸುಲಭ ಚರಣದ ಪದ್ಯಗಳು	ಜಿ. ವಾಮನಭಟ್ಟ	ಎಂ. ವಿ. ಸೀತಾರಾಮಯ್ಯ	೧೬
ಸುವಾಸಿನಿ	ಬೆನಗಲ್ ರಾಮರಾಯರು (ಸಂ)	ಎ. ಆರ್. ಕೃ.	
ಸೂತ್ರದ ಬೊಂಬೆ	ಎಸ್. ಜಿ. ಶಾಸ್ತ್ರೀ	ವಿ. ಸೀತಾರಾಮಯ್ಯ	೧
ಸೆರೆಯ ಮರೆಯಲ್ಲಿ	ರಂಗನಾಥ ನಾ. ದಿವಾಕರ	ನಾ. ಕಸ್ತೂರಿ	೨
ಸೊಹ್ರಾಬ್ ಮತ್ತು ರುಸ್ತುಮ್	ಪಂಡಿತ ನರಸಿಂಹಶಾಸ್ತ್ರೀ	ಎಂ. ವಿ. ಸೀತಾರಾಮಯ್ಯ	೧
ಸ್ಕೌಟುಗಳ ಕನ್ನಡ ಕೈಪಿಡಿ			೭-
ಸಂಸ್ಕೃತ ಕವಿಚರಿತ್ರೆ	ಎಂ. ಎನ್. ಶ್ರೀನಿವಾಸಯ್ಯಂಗಾರ್	ತೀ. ನಂ. ಶ್ರೀಕಂಠಯ್ಯ	೧
ಸಂಸ್ಕೃತ ಪ್ರಥಮ ಪುಸ್ತಕ	ವೈ. ಸುಬ್ಬರಾವ್	'ನ'	೧
ಸಂಸಾರ	ಮಿತ್ರಮಂಡಲಿ, ಮಂಗಳೂರು (ಪ್ರ.)	ಎಲ್. ಗುಂಡಪ್ಪ	೧
ಸಂಸಾರ ಸಮರ	ಈಶ್ವರ ಸಣಕಲ್ಲ (ಅನು.)	ಎಲ್. ಗುಂಡಪ್ಪ	೨
ಸಂಯುಕ್ತ ಕರ್ನಾಟಕ	ಹಾಕಾರ ಬಲವಂತರಾವ್ (ಸಂ.)	ಎ. ಆರ್. ಕೃ.	೧

ಗ್ರಂಥಗಳು	ಪ್ರಕಾಶಕರು ಅಥವಾ ಲೇಖಕರು	ವಿಮರ್ಶಕರು	ಸಂಪುಟ ಸಂಚಿಕೆ
...ತೆ	ಪು. ತಿ. ನರಸಿಂಹಾಚಾರ್	ಎ. ಎನ್. ಮೂರ್ತಿರಾವ್	೧೬-೩
...ಾ ಪ್ರಪಂಚ	ವಿ. ಸೀತಾರಾಮಯ್ಯ	ಬಿ. ಸೀತಾರಾಮಯ್ಯ	೧೯-೪
...ತ್ತು ವರುಷ	ಜಿ. ಪಿ. ರಾಜರತ್ನಂ	ಎಸ್. ವಿ. ಪರಮೇಶ್ವರಭಟ್ಟ	೨೧-೩
...ಸಿಗಳು	ಜಿ. ಪಿ. ರಾಜರತ್ನಂ	ಎಲ್. ಗುಂಡಪ್ಪ	೧೫-೧
...ರಿಜನ್ವಾರ	ಶ್ರೀರಂಗ	ವಿ. ಸೀತಾರಾಮಯ್ಯ	೧೭-೨
...ರಿಭಜನ ಕುಸುಮವಲ್ಲರಿ	ಕೆ. ರಂಗಸಾಮಯ್ಯಂಗಾರ್	ಎ. ಆರ್. ಕೃ.	೮-೪
...ರಿಶರಣಾಷ್ಟಕ	ವೈ. ಸುಬ್ಬರಾವ್	ವಿ. ಟಿ. ತಿರುನಾರಣಯ್ಯಂಗಾರ್	೧೨-೪
...ರಿಜನ ಕುಸುಮವಲ್ಲರಿ	ಕೆ. ರಂಗಸಾಮಯ್ಯಂಗಾರ್	ಎ. ಆರ್. ಕೃ.	೮-೪
...ಳ್ಳಿಯ ಹಾಡು	ಬಿ. ರಂಗಸಾಮಿ	ತೀ. ನಂ. ಶ್ರೀಕಂಠಯ್ಯ	೧೫-೨
...ಹಂಸಪದಕ	ಎಸ್. ಜಿ. ಶಾಸ್ತ್ರೀ	ಎಂ. ಆರ್. ಶ್ರೀನಿವಾಸಮೂರ್ತಿ	೪-೧
...ಾವು	ಶಿವರಾಮಕಾರಂತ	ಡಿ. ಎಲ್. ನರಸಿಂಹಾಚಾರ್	೧೪-೪
...ತಬೋಧಿನಿ	ಎಂ. ವೆಂಕಟಕೃಷ್ಣಯ್ಯ	ಎ. ಆರ್. ಕೃ.	೧೧-೩
ಹಿಂದೀ ಹುಡುಗರ ಬುದ್ಧಿ ಮಾಪನವು	ವೆಂಕಟರಾವ ವಿಠಲ ಕಾಮತ	ಸಿ. ರಂಗಾಚಾರ್	೧೮-೪
ಹಿಂದೂದೇಶದ ವಿದ್ಯಾಭ್ಯಾಸ	ಕಾ. ಕೃಷ್ಣಭಟ್ಟರು	ಎ. ಎನ್. ನರಸಿಂಹಯ್ಯ	೫-೩
ಹುಟ್ಟಿದ ಹಳ್ಳಿ	ಬಿ. ರಂಗಸಾಮಿ	ತೀ. ನಂ. ಶ್ರೀಕಂಠಯ್ಯ	೧೫-೨
ಹೂವಿನ ಹಾಸಿಗೆ	ಹೊಯ್ಸಳ	ಎಂ. ವಿ. ಸೀತಾರಾಮಯ್ಯ	೨೫-೨
ಹೊಸಗನ್ನಡ ಗದ್ಯರತ್ನ	ರಂಗರಾವ್ ಹಿರೇಕೆರೂರು (ಸಂ.)	ಎ. ಆರ್. ಕೃ.	೧೧-೩
Bendre and his Poetry	(Mr.) V. K. Gokak	ಎಲ್. ಗುಂಡಪ್ಪ	೧೭-೨
Karnataka Historical Review	D. P. Karmarkar (Ed.)	ಹ. ಕೃ.	೧೪-೧
Handbook of Veera-saivism	S. C. Nandimutt, M.A., Ph.D.	ಎ. ಆರ್. ಕೃ.	೨೪-೪
History and Philosophy of Lingayat religion	M. R. Sakhare, Esq., M.A., T.D.	ಎಂ. ಆರ್. ಶ್ರೀನಿವಾಸಮೂರ್ತಿ	೨೪-೩
Manual of Kannada Shorthand	N. Deva Rao	ಬಿ. ಆರ್. ಸುಬ್ಬರಾವ್	೧೫-೩
Mysore Book Bulletin			೧೫-೧
Mystic Teachings of Haridasas of Karnataka	A. P. Karmarkar and N. B. Kalamadani	ಕೂಡ್ಲಿ ಸುಬ್ಬರಾವ್	೨೨-೪

ವಸ್ತುಕೋಶ

ಸಂಪುಟ ಕ್ರಮಪಲ್ಲಿ

೧. ಸಿದ್ಧಾರ್ಥಿ

೧.
೨. ಸಂಘದಲ್ಲಿ ನಡೆದ ಉಪನ್ಯಾಸಗಳು ಮತ್ತು ಸ್ವವಿಷಯ
೩.

೨. ರೌದ್ರಿ

೧. ಸಂಘದಲ್ಲಿ ನಡೆದ ಉಪನ್ಯಾಸಗಳು—ಕನ್ನಡ ಪತ್ರಿಕೆಗಳ ದುಃಸ್ಥಿತಿ—ಈಸಲ ಹಂಪೆಯಲ್ಲಿ ನಡೆಯು ಕರ್ಣಾಟಕ ಸಾಹಿತ್ಯ ಸಮ್ಮೇಳನ—ಕರ್ಣಾಟಕ ಕವಿಚರಿತೆಯ ೨ನೆಯ ಸಂಪುಟದ ಪ್ರಕಟನೆ.

೨. ಸ್ವವಿಷಯ—ಬಿ.ಎ. ಪರೀಕ್ಷೆಯ ಕನ್ನಡ ಪ್ರಶ್ನಪತ್ರಿಕೆಯ ವಿಷಯ.

೩. ಪ್ರಬುದ್ಧ ಕರ್ಣಾಟಕದ ಸಂಚಿಕೆಗಳ ಕಾಲವನ್ನು ಬದಲಾಯಿಸುವುದು—ಶ್ರೀಮಾನ್ ಡಿ. ವಿ ಗುಂಡಪ್ಪನವರ ಉಪನ್ಯಾಸಗಳು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಸ್ಥಾನ.

೩. ದುರ್ಮತಿ

೨. ಸ್ವವಿಷಯ—ಸಂಘದಲ್ಲಿ ನಡೆದ ಉಪನ್ಯಾಸಗಳು—ಪ್ರಬುದ್ಧ ಕರ್ಣಾಟಕಕ್ಕೆ ಬೆಂಗಳೂರು ಅಮೆಚೂರ ನಾಟಕಮಂಡಲಿಯ ಸಹಾಯ.

೩. ಸರ್. ಎಂ. ವಿಶ್ವೇಶ್ವರಯ್ಯನವರ ಷಷ್ಟಿಪೂರ್ತಿಶಾಂತಿಯ ಹಬ್ಬ—ಪ್ರಬುದ್ಧ ಕರ್ಣಾಟಕದ ಪೋ ಕರು—ಸಂಘದಲ್ಲಿ ನಡೆದ ಉಪನ್ಯಾಸಗಳು—ಪದಕ ಬಹುಮಾನಗಳನ್ನು ಪಡೆದ ಮಿತ್ರರಿ ಅಭಿನಂದನ—ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕಿರುವ ಪ್ರೋತ್ಸಾಹ—ಕವಿರಾಜಮಾಗ ಗ್ರಂಥದ ಕರ್ತೃವು ಯಾರು ? (ಶ್ರೀಮಾನ್ ರಾಜಪುರೋಹಿತರ ಲೇಖನದ ವಿಮರ್ಶೆ)—ಸೋವ ಲತೆ ಎಂಬುದು ಯಾವುದು ? ಭಾಸನ ನಾಟಕಗಳು—ಪುರಂದರದಾಸರ ಲೋಕೋಪಕಾರಗಳು— ಮದ್ದಗಿರಿಯ ಶಾಸನಗಳು—ಸಾದರ ಸ್ವೀಕಾರ.

೪. ಪ್ರಬುದ್ಧ ಕರ್ಣಾಟಕದ ವರ್ಧಂತ್ಯುತ್ಸವ—ಡಾಕ್ಟರುಗಳ ಅಭಿನಂದನ (ಸರ್ ಎಂ. ವಿಶ್ವೇಶ್ವರಯ ನವರು ಮತ್ತು ಆರ್. ಶಾಮಶಾಸ್ತ್ರಿಗಳು)—ಪಾಂಡಿತ್ಯಕ್ಕೆ ಅನುರೂಪವಾದ ಬಹುಮಾನ (ವೇ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು)—ಸಣ್ಣ ಕಥೆಗಳಿಗೆ ಮತ್ತು ಕಾವ್ಯಪಠನಕ್ಕೆ ಪಾರಿತೋಷ ಗಳು—ರವೀಂದ್ರನಾಥ ಠಾಕೂರರ 'ವಿಶ್ವಭಾರತಿ'—ಕರ್ಣಾಟ ಶಬ್ದಾನುಶಾಸನ ತತ್ವಾಲೋ ತರಂಗ—ಮೈಸೂರಿನ ಜನರು ಮತ್ತು ಅವರ ವಿದ್ಯಾಭ್ಯಾಸ.

೪. ದುಂದುಭಿ

೧. ಹೊಸ ವರ್ಷದ ಕಾರ್ಯಾರಂಭ—ಆಚಾರ್ಯಪೂಜೆ (ಶ್ರೀ. ರಾ. ನರಸಿಂಹಾಚಾರ್ಯರಿಗೆ) ದೇಶಭಾಷೆಯಲ ಪಾಠಪ್ರವಚನಗಳು—ಕವಿರಾಜಮಾರ್ಗದ ಕರ್ತೃವು ಯಾರು ?—ಇದ್ದರೂ ಇರಬಹುದು—ಒಂದ ತಿದ್ದುಪಾಟು—ಕರ್ಣಾಟ ಪ್ರತಿಮಾನಾಟಕ.

೨. ಸಂಘದಲ್ಲಿ ನಡೆದ ಉಪನ್ಯಾಸಗಳು—ರವೀಂದ್ರನಾಥ ಠಾಕೂರವರ ಆಗಮನ—ಕವಿವಿಜಯ—ಮೈಸೂರು ಚರಿತ್ರೆಯ ಮೇಲಣ ನಾಟಕಗಳು—ಹೊಸ ಅರ್ಥಸಾಧಕ ಪತ್ರಿಕೆ—ದೇಶಭಾಷೆಯಲ್ಲಿ ಪಾಠಪ್ರವಚನಗಳು.

೩. ಎಳ್ಳು ತಿಂದು ಒಳ್ಳೆಯ ಮಾತನಾಡು—ಬೋಧನೆಗೆ ತಕ್ಕ ಆಚರಣೆ—ಅಭಿನಂದನ—ಸಂಘದಲ್ಲಿ ಈಚೆಗೆ ನಡೆದ ಉಪನ್ಯಾಸಗಳು—ಜಯಕರ್ನಾಟಕ—ಭಾಸನ ನಾಟಕಗಳು—ಪುರಾಣದಲ್ಲಿ ಚರಿತ್ರೆಯಿದೆಯೆ?

೪. ಮಿಠಾಯಿ ಅಂಗಡಿ—ಪ್ರಪಂಚಪರಿಚಯ—ಸಂಘದಲ್ಲಿ ಈಚೆಗೆ ನಡೆದ ಉಪನ್ಯಾಸಗಳು—ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕನ್ನಡ—ಭಾಸನ ಹೆಸರಿನಲ್ಲಿರುವ ನಾಟಕಗಳು—ಚಾರುದತ್ತ ಮತ್ತು ಮೃಚ್ಛಕಟಿಕ—ಬಂಗಾಳಿ ರಾಮಾಯಣಗಳು—ಮಹಾಭಾರತದ ಬೆಳೆವಣಿಗೆ.

ರುಧಿರೋದ್ಗಾರಿ

೧. ಪ್ರಬುದ್ಧ ಕರ್ಣಾಟಕದ ಪೂರ್ವೋತ್ತರ ಮತ್ತು ಅಭಿವಂದನ—ಪ್ರಪಂಚಪರಿಚಯ, ಜ್ಞಾನ ಮತ್ತು ವಿಜ್ಞಾನ—ಅಭಿನಂದನ (ಪಾರಿತೋಷಕವನ್ನು ಪಡೆದ ಪದವೀಧರರಿಗೆ)—ಬರೋಡಾ ದೇಶದ ಪುಸ್ತಕಭಂಡಾರಗಳು ಮತ್ತು ಮೈಸೂರು—ಕನ್ನಡಕ್ಕೆ ಪ್ರೋತ್ಸಾಹ—ಬಹುಮಾನಸ್ಪರ್ಧೆ—

೨. ಅಭಿನಂದನೀಯವಾದ ಕ್ರೋಧ—ಟೊಳ್ಳು ಗಟ್ಟಿ—

೩. ಕರ್ಣಾಟಕ ಸಂಘದ ಕಾರ್ಯಗಳು—ಅಭಿನಂದನ—ಹೈದರ್ ಆಲಿ ಟಿಪ್ಪೂ ಸುಲ್ತಾನ್ ಮತ್ತು ಅವರನಾಣ್ಯಗಳು—ಕನ್ನಡದಲ್ಲಿ ಪೋರ್ಚುಗೀಸ್ ಭಾಷೆಯ ಶಬ್ದಗಳು—ಅವಂತಿಸುಂದರೀ ಕಥೆ ಮತ್ತು ಪಲ್ಲವರ ಕಾಲದ ಶಿಲ್ಪಿ ಸಾಹಿತ್ಯಗಳು. (ಎ. ರಂಗಸ್ವಾಮಿ ಸರಸ್ವತಿ, ಬಿ.ಎ. ಅವರ ಲೇಖನದ ಸಾರಾಂಶ).

೪. ಕರ್ಣಾಟಕ ಸಂಘದ ವಾರ್ಷಿಕೋತ್ಸವ—ಸಂಘದಲ್ಲಿ ನಡೆದ ಇತರ ಕೆಲಸಗಳು—ವೀರಶೈವ ಪುರಾಣಗಳು (ಎಂ. ಆರ್. ಶ್ರೀ ಯವರ ಲೇಖನದ ಸಾರಾಂಶ).

೬. ರಕ್ತಾಕ್ಷಿ

೧. ಒಂದು ಅಭಿನಂದನ. (ಶ್ರೀಮಾನ್ ವರದರಾಜಯ್ಯಂಗಾರ್ಯರಿಗೆ)—ಕರ್ಣಾಟಕ ಕವಿಚರಿತೆ—ಮಹಾಭಾರತದ ಪರಿಷ್ಕರಣ—ಸಂಸ್ಕೃತ ವ್ಯಾಸಂಗಪದ್ಧತಿ—ಪಾರ್ಶಿಜನರು ಮತ್ತು ಮಗರಬ್ರಾಹ್ಮಣರು—ಭಾಸನ ನಾಟಕಗಳು.

೨. ಸಂಘದಲ್ಲಿ ಈಚೆಗೆ ನಡೆದ ಕಾರ್ಯಗಳು—ವೀರಶೈವರ ವಚನಗಳು.

೩. ಸಿಂಹಾವಲೋಕನ—ಸಂಘದ ದಾತೃಗಳಿಗೆ ವಂದನೆ—ಭೇತಾಳೋತ್ಥಾಪನೆ—ಕನ್ನಡಕ್ಕೆ ಒಂದು ಕಿರೀಟ (ಹಿಂದೂ ರಾಷ್ಟ್ರೀಯ ಸಭೆಯಲ್ಲಿ ಕನ್ನಡಕ್ಕೆ ಸ್ಥಾನ).

೪. ಕರ್ಣಾಟಕ ಸಂಘದ ವಾರ್ಷಿಕೋತ್ಸವ—ಭಾರತೀಯ ಸಾಹಿತ್ಯದಲ್ಲಿ ಬರುವ ಕಪಟಸಂನ್ಯಾಸಿಗಳು, ಸಂನ್ಯಾಸಿನಿಯರು—ಉತ್ತರ ದೇಶದಲ್ಲಿ ಭೂಸಂಶೋಧನೆ ಮತ್ತು ದ್ರಾವಿಡ ನಾಗರಿಕತೆಯ ಪ್ರಾಚೀನತೆ.

೭. ಕ್ರೋಧನ

೨. ಮಾರ್ಗಶಿರದ ದೀಪಾವಳಿ—ಮ|| ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು ಮತ್ತು ಸಂಸ್ಕೃತ—ನಮ್ಮ ದೇಶದಲ್ಲಿ ಸಂಸ್ಕೃತದ ಸ್ಥಿತಿ—ಕನ್ನಡದ ಸ್ಥಿತಿ.

೩. ಪ್ರಬುದ್ಧ ಕರ್ಣಾಟಕದ ಕಿರೀಟಕ್ಕೆ ಒಂದು ಹೊಸರತ್ನ (ವೆಂಕಟಪ್ಪನವರ ಚಿತ್ರಗಳು)—ಕನ್ನ ಪುಣ್ಯ (ಇಂಟರ್‌ಮೀಡಿಯಟ್, ಬಿ.ಎ. ಪರೀಕ್ಷೆಗಳಲ್ಲಿ ಕನ್ನಡವ್ಯಾಸಂಗ ಆವಶ್ಯಕವೆಂದು ಸೆ ನಲ್ಲಿ ತೀರ್ಮಾನ)—ಗದಾಯುದ್ಧ ನಾಟಕ—ನಳೋದಯ ಕಾವ್ಯದ ಕರ್ತೃವು ಯಾರು?—ಶಕ

೪. ಅಭಿನಂದನ (ಮ|| ಕೆ. ವಿ. ಶ್ರೀಕಂಠೇಶ್ವರನ್ ಅವರಿಗೆ)—ಕರ್ಣಾಟಕ ಸಂಘದ ಕಾರ್ಯಗಳ ಮ|| ಚ. ವಾಸುದೇವಯ್ಯನವರು—ಅವರಿಗೆ ಬಿನ್ನವತ್ತಳೆ ಮತ್ತು ಅವರ ಉತ್ತರ—ಗ ಚೆನ್ನೋ ಪ್ರೀತಿ ಚೆನ್ನೋ (ಶ್ರೀ ಎಚ್. ಕೃಷ್ಣಶಾಸ್ತ್ರಿಗಳು ಪ್ರತಿವರ್ಷವೂ ಪ್ರಬುದ್ಧ ಕರ್ಣಾಟಕ ೫೦ ರೂಪಾಯಿನ ಒಂದು ಬಹುಮಾನವನ್ನು ಕೊಡುತ್ತೇನೆಂದು ವಾಗ್ದಾನಮಾಡಿದುದು.)

೮. ಅಕ್ಷಯ

೧. ಸರಸ್ವತಿಯ ಮನೆಯಲ್ಲಿ ಕಳವು (ವೈಣಿಕಶಿಖಾಮಣಿ ಶೇಷಣ್ಣನವರೂ ಮತ್ತು ನಟಶಿರೋಮ ವರದಾಚಾರ್ಯರೂ ಸ್ವರ್ಗಸ್ಥರಾದುದು)—ಕಂಬನಿ (ಸಾಹುಕಾರ್ ಕಬ್ಬಹಳ್ಳಿ ಚೆನ್ನಬಸಪ್ಪನವ ಮತ್ತು ಎಂ. ಎಲ್. ವರ್ಧಮಾನಯ್ಯನವರು ಕಾಲಾತೀತರಾದುದಕ್ಕಾಗಿ).

೨. ಅಭಿನಂದನ (ಶ್ರೀ ಬಿ. ವೆಂಕೋಬರಾಯರಿಗೆ ಇಂಜಿನಿಯರಿಂಗ್ ಇಲಾಖೆಗೆ ವರ್ಗವಾದುದಕ್ಕಾಗಿ)- ಕನ್ನಡ ಭಾಷಾಚರಿತ್ರೆಯ ಮೇಲಣ ಉಪನ್ಯಾಸಗಳು ಶ್ರೀ ರಾ. ನರಸಿಂಹಾಚಾರ್ಯರವರಿಂದ)- ಮೈಸೂರು ಸಂಸ್ಕೃತ ಮಹಾಪಾಠಶಾಲೆಯ ಪಂಚಾಶತ್ಸಂವತ್ಸರ ಮಹೋತ್ಸವ—(ಶ್ರೀ ವೆಂಕಟಪ್ಪನವರ) ಅರ್ಧನಾರೀಶ್ವರಚಿತ್ರ ಪರಿಚಯ—ಕನ್ನಡ ಪಂಡಿತರಿಗೆ ಸತ್ಕಾರ (ವೇ. ಬ್ರ ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಗೆ, ವೇ. ಬ್ರ. ರಾಮಶೇಷಶಾಸ್ತ್ರಿಗಳಿಗೆ, ವೇ. ಬ್ರ. ಕಾನಕಾ ಹಳ್ಳಿ ವರದಾಚಾರ್ಯರವರಿಗೆ)—ಮೈಸೂರಿನವರ ಭಾಷಾಶುದ್ಧಿ.

೩. ಅಭಿಪ್ರಾಯ ವಿವರಣೆ—ಸರ್ಪಯಾಗ—ಲಂಡನ್ ಡೇಲಿ ಮೇಲ್ ಪತ್ರಿಕೆ.

೪. ಅಕ್ಷಯ, ಪ್ರಭವ, ವಿಭವ, ಸಂಘದಲ್ಲಿ ನಡೆದ ಕೆಲಸಗಳು—ಬಿಂದೂರಾಯರ ಭಾರತವಾಚನ- ಇಂಗ್ಲೀಷ್ ಗೀತೆಗಳ ಪ್ರಕಟಣೆ—ಕಾರ್ಯದರ್ಶಿಗಳ ಶುಭಾಶಂಸನ.

೯. ಪ್ರಭವ

೧. ಶ್ರೀ ಕೃಷ್ಣರಾಜ ರಜತಮಹೋತ್ಸವ—

೨. ಸಮುದ್ರದ ಸೆಂಟು, ಉಪ್ಪಿಗೆ ಬಡತನ—ಕವಿವರ್ಯ ನಂದಳಿಕೆಯವರೂ ಕನ್ನಡ ಕಾಮಶಾಸ್ತ್ರವೂ.

೩. ಕನ್ನಡದ ಮಹೋಪಾಧ್ಯಾಯರಿಗೆ (ಟಿ. ಎಸ್. ವಿ.) ಅಭಿನಂದನ—ಕನ್ನಡಕ್ಕೆ ಒಂದು ಪದ (ಶ್ರೀಮಾನ್ ಶ್ರೀಯವರಿಂದ)—ಚಕಮುಕಿ ಕಿಡಿ—ಕಲ್ಕಿ ಅವತಾರದ ಐತಿಹಾಸಿಕತೆ (ಕಾಶಿ ಪ್ರಸಾದ ಜಯಸ್ವಾಲ್ ಅವರ ಲೇಖನದ ಸಾರಾಂಶ)—ಶ್ರೀಮತ್ ಚಾಮರಾಜ ಒಡೆಯರ ಬಹದ್ದೂರವರ ಶಿಲಾಪ್ರತಿಮೆ.

೪. ಕರ್ಣಾಟಕ ಸಂಘಗಳ ವಾರ್ಷಿಕೋತ್ಸವ ('ಯಮುನಸೋಲು' 'ಗದಾಯುದ್ಧ'ದ ಅಭಿನಯ— 'ಕಿರಿಯ ಕಾಣಿಕೆ'ಯ ಪ್ರಕಟನೆ)—ಪ್ರಬುದ್ಧ ಕರ್ಣಾಟಕದ ಸಂಚಿಕೆಯು ತಡವಾದುದಕ್ಕಾ ಬಂದಿದ್ದ ಮೂಗುಪತ್ರ ಮತ್ತು ಅದಕ್ಕೆ ಉತ್ತರ—ಮಿ|| ಲೂಯಿ ರೈಸ್, ಸಿ.ಐ.ಇ.—ದಿವಂಗ ರಾದ ಎಂ. ಜಿ. ಶ್ರೀನಿವಾಸರಾಯರು.—ದಿವಂಗತ ಬಿ. ಕೃಷ್ಣಪ್ಪನವರು—ಸ್ವರ್ಗಸ್ಥರಾದ ರಾವ ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಗಳು.

(೯. ವಿಭವ

೧. ವಿನಾಯಕನ ಸಂಚಿಕೆಗೆ ಪುರೋಭಿವೃದ್ಧಿ—ಕರ್ಣಾಟಕ ಸಂಘಗಳು ಮತ್ತು ಪತ್ರಿಕೆಗಳು—ಹೊಸ ಕನ್ನಡ ಗ್ರಂಥಗಳ ಪ್ರಚಾರ—ಮುದ್ದಣ ಸ್ವರ್ಣಪದಕ—'ವೀಣೆಯ ಹುಚ್ಚು' ಚಿತ್ರ ಪರಿಚಯ.

೨. ಕರ್ಣಾಟಕ ಸಂಘದಲ್ಲಿ ಈಚೆಗೆ ನಡೆದ ಕಾರ್ಯಗಳು—ಮೈಸೂರು ಮತ್ತು ಕನ್ನಡ—ಲಕ್ಷ್ಮೀಶನ ಕಾಲ ಮತ್ತು ಸ್ಥಳ (ಗೋವಿಂದ ಪೈ ಅವರ ಲೇಖನದ ಸಂಗ್ರಹ)—ಹೆಚ್ಚು ಸಂಚಿಕೆ (ಶ್ರೀ ಡಾ|| ಎ. ವೆಂಕಟಸುಬ್ಬಯ್ಯನವರ ಕೆಲವು ಕನ್ನಡ ಕವಿಗಳ 'ಜೀವನ ಕಾಲ ವಿಚಾರ' ಎಂಬ ಲೇಖನದ ಉಳಿದ ಭಾಗ)—ಬಿ. ವೆಂಕೋಬರಾಯರ 'ಮೈಸೂರು ದೇಶದ ವಾಸ್ತುಶಿಲ್ಪ'ದ ಪ್ರಕಟನೆ.

೩. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕವಿಗಳ ಸಮ್ಮೇಳನ—ಇತರ ಕಾರ್ಯಗಳು—ಸರ್. ಎಂ. ವಿಶ್ವೇಶ್ವರಯ್ಯನವರ ಭಾಷಣ.

೪. ಕರ್ಣಾಟಕ ಸಂಘದ ಕಾರ್ಯಗಳು—ಅಶ್ವತ್ಥಾಮನ್.

. ಶುಕ್ಲ

೧. ಕರ್ಣಾಟಕ ಸಂಘದ ಕೃತಜ್ಞತೆ—ಕವಿವೃತ್ತಾಂತ—ಕರ್ಣಾಟಕ ಸಂಘಗಳ ವರದಿ (ಕನ್ನಡಿಗರ ಕೂಟ, ಧಾರವಾಡ; ಕರ್ಣಾಟಕ ಸಂಘ, ಪೂನಾ; ಶ್ರೀ ಶಾಂತೇಶ ವಾಚನಾಲಯ, ಧಾರವಾಡ.)—ಲಕ್ಷ್ಮೀಶ, ಗಿರಿಜಾಕಲ್ಯಾಣ, ಲಕ್ಷ್ಮೀಶನೂ ಜೈಮಿನಿ ಭಾರತವೂ—ನಿತ್ಯ.

೨. ಕರ್ಣಾಟಕ ಸಂಘದ ಕಾರ್ಯಗಳು—ಕರ್ಣಾಟಕ ಸಂಘ, ಹಾಸನದ ಹೈಸ್ಕೂಲ್—ಕರ್ಣಾಟಕ ಸಂಘ, ಕರ್ಣಾಟಕ ಕಾಲೇಜು, ಧಾರವಾಡ.

೩. ಕರ್ಣಾಟಕ ಸಂಘದ ವಾರ್ಷಿಕೋತ್ಸವ—ಉಪನ್ಯಾಸಗಳು ಮತ್ತು ಸ್ಪರ್ಧೆಗಳು—ಕೀರ್ತಿಶೇಷರಾದ ಶಾ|| ವೆಂಕಟರಮಣಯ್ಯನವರು.

೪. ಕರ್ಣಾಟಕ ಸಂಘದ ಕಾರ್ಯಗಳು—ಶ್ರಿ ಷಡಕ್ಷರ ಜಯಂತಿ, ತುಮಕೂರು—ಪಂಡಿತ ಜ್ಞಾಪನ ಪ್ರತಿಷ್ಠಾ ಮಹೋತ್ಸವ, ಮೈಸೂರು—ಮೈಸೂರು ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದ ವಾರ್ಷಿಕೋತ್ಸವ.

೧೨. ಪ್ರಮೋದೂತ

೧. ಕೃತಜ್ಞತೆ—ಹೊಸ ಅಧ್ಯಕ್ಷರು, ಗೌರವಾಧ್ಯಕ್ಷರು—ತುಳವ ಅಥವಾ ತುಳುವ ಶಬ್ದದ ನಿಷ್ಪತ್ತಿ—ಗೊಮ್ಮಟ—ಸೋಮರಾಜನ ಕಾಲ—ಗುಪ್ತಕಾಲದ ಆರಂಭ—ನಂದಳಿಕೆ ಲಕ್ಷ್ಮೀನಾರಣಪ್ಪನವರು.

೨. ಬಸವಣ್ಣನವರ ವಚನಗಳು—ಹದಿನಾರನೆಯ ಕರ್ಣಾಟಕ ಸಾಹಿತ್ಯಪರಿಷತ್ ಸಮ್ಮೇಳನ—ಮೈಸೂರು ಸಂಘ, ಪುಣೆ—ಕಂಬುಜ ದೇಶದ ಶಾಸನಗಳಿಂದ ತಿಳಿದುಬರುವ ಪ್ರಾಚೀನ ಭರತಖಂಡದ ಧಾರ್ಮಿಕಸ್ಥಿತಿ—ವಾದಿರಾಜನ 'ಯಶೋಧರ ಚರಿತ್ರೆ'—ಯಾಗೇಶ್ವರ.

೩. ಕರ್ಣಾಟಕ ಸಂಘದ ಕಾರ್ಯಗಳು—ಮ|| ಗಳಾದ ದ. ರಾ. ಬೇಂದ್ರೆ, ಬಿ. ಎಂ. ಶ್ರೀಕಂಠಯ್ಯ, ಸಿ. ಕೆ. ವೆಂಕಟರಾಮಯ್ಯ ಇವರ ಉಪನ್ಯಾಸ. ಶ್ರೀ ಯದುಗಿರಿಯಮ್ಮನವರ ಶಕುಂತಲೋಪಾಖ್ಯಾನ—'ರಂಗಪ್ಪ ಬಂದನ್ನೆ'.

೪. ಕರ್ಣಾಟಕ ಸಂಘದ ವಾರ್ಷಿಕೋತ್ಸವ—ಅಭಿನಂದನ.

೧೩. ಪ್ರಜೋತ್ಪತ್ತಿ

೧. ವಂದನೆ—ಪ್ರಾರ್ಥನೆ—ಚಿತ್ರಪರಿಚಯ, ಕುರುಡ ಭಿಕ್ಷುಕ—ಮೈಸೂರು ಬೊಂಬಾಯಿ ವಿಶ್ವವಿದ್ಯಾನಿಲಯಗಳ ವಾರ್ಷಿಕ ವಿದ್ವತ್ ಸಭೆಯಲ್ಲಿ ನಡೆದ ಭಾಷಣಗಳ ಸಾರಾಂ ಅಗಸ್ತ್ಯರು—ನಾಗರು—ಪಂಚಮಹಾಶಬ್ದ.

೨. ಕರ್ಣಾಟಕ ಸಂಘದ ಕಾರ್ಯಗಳು—ಶಿವಮೊಗ್ಗೆಯ ಕರ್ಣಾಟಕ ಸಂಘದ ವರದಿ—'ಕಾಳಿದಾ ಕಾಲದಲ್ಲಿ' (ಎನ್. ರಾಜಗೋಪಾಲ ಕೃಷ್ಣರಾಯರ ಲೇಖನ)—'ಸ್ಥಳನಾಮ' (ಪ ಮಂಗೇಶರಾಯರ ಲೇಖನ—ಸ್ವದೇಶಾಭಿಮಾನಿಯ ರಜತೋತ್ಸವ ಸಂಚಿಕೆಯಲ್ಲಿ)— ನಾಯಣ ಕವಿಯ ಕಾಲ ಕ್ರಿ.ಶ. ೧೪೭೨—ತಂತ್ರಿಚರಿತ ಮತ್ತು ವೃತ್ತವಿಲಾಸ (ಡಾ|| ಎ. ಕರ್ಣಾಟಕದ ಎರಡು ಹಳೆಯ ಹುಲಿಗಳ ನಿಧನ (ಗಾನವಿಶಾರದ ಬಿಡಾರದ ಕೃಷ್ಣಪ್ಪನ ಮತ್ತು ಕರ್ಣಾಟಕ ಭಾಷಾರತ್ನಂ ಕರಿಬಸವಶಾಸ್ತ್ರಿಗಳು).

೩. ಕರ್ಣಾಟಕ ಸಂಘದ ಕಾರ್ಯಗಳು—(ಶ್ರೀಮಾನ್ ಗಳಾದ ಪಂಡಿತ ಚಂಗಲ್ವರಾಯನ್ ಅ 'ಕುಱಿಳ್' ಎಂಬುದರ ಮೇಲೂ ಬಿ. ಎಂ. ಶ್ರೀಯವರು ಪಂಪನ ಮೇಲೂ ಉಪನ್ಯಾಸ ಕರ್ಣಾಟಕ ಸಾಹಿತ್ಯ ಪರಿಷತ್ ಸಮ್ಮೇಳನ (ಕಾರವಾರ)—ಹೊಸ ಹೊಸ ಕರ್ಣಾಟಕ ಸ ಗಳು—ಶ್ರೀಮಾನ್ ವಿ. ವೆಂಕಟಾಚಾರ್ಯರಿಗೆ ಅಖಿಲಭಾರತ ಭಾಷಣಸ್ಪರ್ಧೆಯಲ್ಲಿ ಬಹುಮಾ ಪಡೆದುದಕ್ಕಾಗಿ ಅಭಿನಂದನ—ಕೇಕಯರು ಮತ್ತು ಘೂರ್ಜರರು—ಮಂಡನಮಿಶ್ರ, ಸುರೇಶ್ವರ ಭವಭೂತಿ—ಕಾಳಿ—ದಿವಂಗತರಾದ ಮಹಾಮಹೋಪಾಧ್ಯಾಯ ಹರಪ್ರಸಾದ ಶಾಸ್ತ್ರಿಗಳು.

೪. ಕರ್ಣಾಟಕ ಸಂಘದ ಕಾರ್ಯಗಳು—ಅಭಿನಂದನ (ಬಹುಮಾನ ಪಡೆದವರಿಗೆ)—ಪಂಪಭಾರತದ ಪ್ರಕಟನೆ.

೧೪. ಆಂಗಿರಸ

೧. ಪ್ರಬುದ್ಧ ಕರ್ಣಾಟಕ (ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದುದು)—ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ವೃತ್ತಾಂತ—'ಕನ್ನಡ ಛಂದಸ್ಸಿನ ಚರಿತ್ರೆ' (ಬಿ. ಎಂ. ಶ್ರೀಯವರ ಉಪನ್ಯಾಸದ ಸಾರಾಂಶ)—ಹುಬ್ಬಳ್ಳಿಯಲ್ಲಿರುವ ಮೂರು ಸಾವಿರ ಮಠದ ಶ್ರೀ ಶ್ರೀಯವರ ಉದಾರಾಶ್ರಯ—ಮೈಸೂರು ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದ ಕಾರ್ಯಗಳು—ದಿವಂಗತ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು—ದಿವಂಗತ ಬಿ. ಎಸ್. ಎಸ್. ಶರ್ಮರು—ಆಶ್ವಿಜೋಚ್ಛಿತೈಕಾದಶೀ—ಕುಮಾರ ವ್ಯಾಸನಮತ (ಗೋವಿಂದ ಪೈ ಯವರು ಸುಬೋಧದಲ್ಲಿ ಪ್ರಕಟಿಸಿರುವ ಲೇಖನದ ಸಾರಾಂಶ)—ತಮಿಳಿನ ಪದಮಧ್ಯ ಯಕಾರ ಶಕಾರಗಳು ಮತ್ತು ಕನ್ನಡ ಸಕಾರ (ಶ್ರೀ ಎಲ್. ವಿ. ರಾಮಸ್ವಾಮಯ್ಯರವರ ಲೇಖನದ ಸಾರಾಂಶ).

೨. ದಿವಂಗತ ಪ್ರೊ|| ಕೆ. ಬಿ. ಪಾಠಕರು—ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ—ಹೆಬ್ಬಾಳಿನಲ್ಲಿ ಕರ್ಣಾಟಕ ಸಂಘ ಸ್ಥಾಪನೆ—ಶಿವಮೊಗ್ಗೆಯ ಕರ್ಣಾಟಕ ಸಂಘ.

೩. 'ಬೋಧಿ ದರ್ಶನ'—ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ (ವೃದ್ಧಪಿತಾಮಹರಾದ ವೆಂಕಟ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ವಾರ್ಷಿಕೋತ್ಸವ)—ರಕ್ತ ಸಂಯೋಜನೆ—ಕನ್ನಡ ಛಂದಸ್ಸಿನ ಚರಿತ್ರೆ (ಶ್ರೀಮಾನ್ ಬಿ. ಎಂ. ಶ್ರೀಯವರ ಉಪನ್ಯಾಸದ ಸಾರಾಂಶ)—ಸಸ್ಯಗಳಲ್ಲಿ ಜೀವ ದೆಯೆ?—ನಾಟಕ ಶಾಲೆ, ಅದರ ರಚನೆ ಮತ್ತು ಚರಿತ್ರೆ—ಮೈಸೂರು ಮಹಾರಾಜಾ ಕಾಲೇಜ

ಕರ್ಣಾಟಕ ಸಂಘ—ನಾಟಕಾವತಂಸ ಶ್ರೀಮಾನ್ ಸ್ಥಾನಂನರಸಿಂಹರಾಯರು (ಅಭಿನಯ ಸಹಿತವಾದ ಭಾಷಣ, ಬೆಂಗಳೂರು ಮೈಸೂರುಗಳಲ್ಲಿ)—ಶಿವಮೊಗ್ಗೆಯ ಕರ್ಣಾಟಕ ಸಂಘದ ವರದಿ—ನಿಜಾಂ ಕರ್ಣಾಟಕ ಸಾಹಿತ್ಯ ಸಮಿತಿ—೧೮ ನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನ, ಮಡಿಕೇರಿ—ವ್ರಾತ್ಯರು (ಮ|| ಮ|| ಹರಪ್ರಸಾದ ಶಾಸ್ತ್ರಿಗಳ ಲೇಖನದ ಸಾರಾಂಶ).

೪. ಸಂಪಾದಕೀಯ—ಹೊಸ ಸಾಹಿತ್ಯದಲ್ಲಿನ ಚಲನವಲನಗಳು—ದಿವಂಗತ ಆರ್. ತಾತಾ, ಎಂ.ಎ., ಎಲ್.ಟಿ.—ವಿಶೇಷ ಸಂಚಿಕೆಗಳು (ರಾಜಸಿಂಹ, ಜಯ ಕರ್ನಾಟಕ)—ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಆಂಗಿರಸ ಸಂವತ್ಸರದ ವರದಿ—ಕರ್ಣಾಟಕ ಸಂಘ, ಕಾಶೀ ವಿಶ್ವವಿದ್ಯಾಲಯ—ಕೊಲ್ಹಾಪುರದ ಕಾಲೇಜಿನ ಕರ್ಣಾಟಕ ಸಂಘ.

೫. ಶ್ರೀಮುಖ

೧. ಸ್ವಾಗತಾಶಂಸೆ—ಉಪನ್ಯಾಸ ಸಪ್ತಾಹ, ಹಾಸನ,—ಕರ್ಣಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು—ಶಿವಮೊಗ್ಗೆಯ ಕರ್ಣಾಟಕ ಸಂಘದ ವರದಿ.

೨. ಮೈಸೂರು ವಿಶ್ವವಿದ್ಯಾನಿಲಯದ ಪಟ್ಟ ಪ್ರದಾನ ಸಮಾರಂಭ ಭಾಷಣ, ಔದ್ಯೋಗಿಕ ಶಿಕ್ಷಣ, ದೇಶಭಾಷೆಯ ಮೂಲಕ ಶಿಕ್ಷಣ, ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಸ್ಥಾನ, ಜ್ಞಾನಪ್ರಚಾರ—ಉಪನ್ಯಾಸ ಸಪ್ತಾಹ, ದೊಡ್ಡಬಳ್ಳಾಪುರ—ಕೈಬರಹದ ಪತ್ರಿಕೆಗಳು—ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ—'ತೊಲ್‌ಕಾಪ್ಪಿಯಮ್' ಎಂಬ ತಮಿಳು ವ್ಯಾಕರಣದ ಮೂಲ.

೩. ಉಪನ್ಯಾಸ ಸಪ್ತಾಹ ಶಿವಮೊಗ್ಗ—ಡಾ|| ಇ. ಪಿ. ಮೆಟ್ಕಾಫ್ ಅವರ ಭಾಷಣ—೧೯ ನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನ, ಹುಬ್ಬಳ್ಳಿ—ಮಹಾಮಹೋಪಾಧ್ಯಾಯ ರಾ. ನರಸಿಂಹಾಚಾರ್ಯರು—ದಿವಂಗತ ಎಂ. ವೆಂಕಟಕೃಷ್ಣಯ್ಯನವರು—ದಿವಂಗತ ಡಾ|| ಯು. ಅಭಯಾಂಬಾಳ್—ದಿವಂಗತರಾದ ಆಸ್ಥಾನ ಮಹಾ ವಿದ್ವಾನ್ ಮೈಸೂರು ಸೀತಾರಾಮ ಶಾಸ್ತ್ರಿಗಳು—ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ.

೪. ಸಂಪಾದಕೀಯ ಸ್ವವಿಷಯ—ಕರ್ಣಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು—ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು—ಕರ್ಣಾಟಕ ಸಂಘ, ಮಹಾರಾಜರವರ ಕಾಲೇಜು, ಮೈಸೂರು—ಕರ್ಣಾಟಕ ಸಂಘ, ಶಿವಮೊಗ್ಗ—ಕರ್ಣಾಟಕ ಸಂಘ, ಕಾಶೀ ವಿಶ್ವವಿದ್ಯಾಲಯ.

೧೬. ಭಾವ

೧. ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವ—ನಾಲ್ಕನೆಯ ಉಪನ್ಯಾಸ ಸಪ್ತಾಹ, ಕೋಲಾರ—ಕರ್ಣಾಟಕ ಸಂಘಗಳ ವರದಿಗಳು—ದಿವಂಗತ ಮಹಾ ಮಾತೃಶ್ರೀ ವಾಣೀವಿಲಾಸ ಸನ್ನಿಧಾನದವರು—ದಿವಂಗತ ಬ್ರಂ. ಶ್ರೀ ಕವಿತಿಲಕ ಅಯ್ಯಶಾಸ್ತ್ರಿಗಳು—ಹಿಂದಿ ಕನ್ನಡ.

೨. ಪುತ್ತೂರಿನ ಈ ವರ್ಷದ ದಸರಾ ಮಹೋತ್ಸವ—ಮೈಸೂರು ದೇಶದ ಹೈಸ್ಕೂಲುಗಳಲ್ಲಿ ಕನ್ನಡದ ಮೂಲಕ ಶಿಕ್ಷಣ.

೩. ಕನ್ನಡಕ್ಕೆ ಹಿಂದಿ ಪ್ರತಿಸ್ಪರ್ಧಿಯಾಗುತ್ತಿಲ್ಲವೆ?—"ಮೈಸೂರಿನ ಪ್ರಯೋಗ"

೪. ಸಂಪಾದಕೀಯ—ಮೈಸೂರು ಸಂಸ್ಥಾನದ ಪಂಡಿತರ ಮೊದಲನೆಯ ಮಹಾ ಸಮ್ಮೇಳನದ ಆರಂಭ ಭಾಷಣ—ಕನ್ನಡದ ಸ್ಥಾನವೂ ಹಿಂದಿಯೂ—ಪರಿಷತ್ತಿಗೆ ದ್ರವ್ಯ ಸಹಾಯ (ಶ್ರೀಮಾನ್ ಬಿ. ಎಂ. ಶ್ರೀ ಅವರಿಂದ)

೧೭. ಯುವ

೧. ದಿವಂಗತ ಆಲೂರು ವೆಂಕಟರಾಯರು—ಸೈಂಧವ ಲಿಪಿ—ಏಳನೆಯ ಉಪನ್ಯಾಸ ಸಪ್ತಾಹ, ಮಂಗಳೂರು.

೨. 'ಶಕ್ರಪ್ರಶ್ನೆ'—(ಸೀನ್ + ಆರ್ + ಗೆ?)—ಕಾಲೇಜಿನ ವಿದ್ಯಾರ್ಥಿಗಳು ಕೈಗೊಂಡಿರುವ ಗ್ರಾಮ ಸೇವೆ—ಮೈಸೂರು ವಿಶ್ವವಿದ್ಯಾನಿಲಯದ ಎಂಟನೆಯ ಉಪನ್ಯಾಸ ಸಪ್ತಾಹ—ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪ್ರಕಟನೆಗಳು.

೩. ೨೧ನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನ, ಬೊಂಬಾಯಿ—ಎಂಟನೆಯ ಅಖಿಲ ಭಾರತ ಪ್ರಾಚ್ಯ ವಿದ್ವತ್ ಸಮ್ಮೇಳನ, ಮೈಸೂರು—ಭಾಸನ 'ಊರು ಭಂಗ'ವೂ 'ಗದಾಯುದ್ಧ'ವೂ— ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ.

೪. ದಿವಂಗತರಾದ ರಾಜಕವಿಭೂಷಣ ಎಚ್. ಲಿಂಗರಾಜ ಅರಸರು—ಮೈಸೂರು ನಗರದ ಕರ್ಣಾಟಕ ಸಂಘ—ಛಂದಸ್ಸು ಮತ್ತು ನಾಟಕ—ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವ—'ವಿಶ್ವವಾಣಿ'.

೧೮. ಧಾತು

೧. ದಾರಾಷುಕೊ—ಭಾರತೀಯರಿಗೂ ಗ್ರೀಕರಿಗೂ ತತ್ತ್ವಶಾಸ್ತ್ರದಲ್ಲಿದ್ದ ಸಂಬಂಧ—'ಕುದುರೆ'— ದಿವಂಗತರಾದ ಪ್ರೊ|| ಎ. ಟಿ. ಸಾಸನೂರ್ ಅವರು—ಕರ್ಣಾಟಕ ಸಂಘಗಳ ಸಮ್ಮೇಳನ— ಕನ್ನಡ ಅಕ್ಷರ ಸಂಸ್ಕರಣ ಸಮ್ಮೇಳನ—ಸವಿಗನ್ನಡ ಸಾಹಿತ್ಯೋತ್ಸವ—ಮೈಸೂರು ವಿಶ್ವವಿದ್ಯಾ ನಿಲಯದ ಉಪನ್ಯಾಸ ಸಪ್ತಾಹಗಳು.

೨. ಜಪಾನ್ ದೇಶದಲ್ಲಿ ಬೌದ್ಧಮತ—'ದೇವೀ ಚಂದ್ರಗುಪ್ತ ನಾಟಕ'—ಡಾ|| ಇ. ಪಿ. ಮೆಟ್ಕಾಫ್ ಅವರ ಪ್ರಶಸ್ತಿ ಪ್ರದಾನೋತ್ಸವ ಭಾಷಣ—ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು.

೩. ಜಕ್ಕಣಾಚಾರ್ಯ—ಕೀರ್ತಿಶೇಷರಾದ ಶ್ರೀ ಆರ್. ನರಸಿಂಹಾಚಾರ್ಯರು—ಕೀರ್ತಿಶೇಷರಾದ ಡಾ|| ಎಂ. ವಿನ್‌ಟರ್‌ನಿಟ್ಸ್ ಅವರು—ವಿಜಯನಗರ ಸ್ಮಾರಕೋತ್ಸವ—ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪ್ರಕಟನೆಗಳು.

೪. ಕನ್ನಡ ಪುಸ್ತಕ ಪ್ರದರ್ಶನ.

೧೯. ಈಶ್ವರ

೧. ದಿವಂಗತ ಎಂ. ಎ. ರಾಮಾನುಜಯ್ಯಂಗಾರ್ಯರು—ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಜಯಂತ್ಯುತ್ಸವ.

೨-೩. ರಾಜಕಾರ್ಯಪ್ರವೀಣ ಶ್ರೀಮಾನ್ ಎನ್. ಎಸ್. ಸುಬ್ಬರಾವ್ ಅವರಿಗೆ ಅಭಿನಂದನೆ—ಮೈಸೂರಿನ ಕನ್ನಡದ ಉತ್ಸವ—ದಿವಂಗತರಾದ ಶ್ರೀಮಾನ್ ಪಂಜೆ ಮಂಗೇಶರಾಯರು (೧೮೭೪-೧೯೩೭)— ಇಪ್ಪತ್ತೆರಡನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಜಮಖಂಡಿ.

೪. ಸ್ವವಿಷಯ.

೨೦. ಬಹುಧಾನ್ಯ

೧. ಕೀರ್ತಿಶೇಷರಾದ ಸರ್ ಕೆ. ಪಿ. ಪುಟ್ಟಣ್ಣ ಶೆಟ್ಟರವರು—ಬಂಕಿಂಚಂದ್ರರವರ ಶತಮಾನೋತ್ಸವ.

೨. ರಾಜಸೇವಾಸಕ್ತ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಿಗೆ ಅಭಿನಂದನೆ—ವಿಶ್ವವಿದ್ಯಾನಿಲಯದಲ್ಲಿ ಮಾತೃಭಾಷೆ ಬೋಧನೆಯ ಭಾಷೆಯಾಗಬೇಕು

೩. ದಿವಂಗತ ಪ್ರೊ|| ಟಿ. ಎಸ್. ವೆಂಕಣ್ಣಯ್ಯನವರು.

೪. ಕನ್ನಡ ಸಾಹಿತ್ಯ ಪರಿಷತ್ತಿನ ಆರನೆಯ ವಸಂತ ಸಾಹಿತ್ಯೋತ್ಸವ—ನವೀಕರಣೋಪನ್ಯಾಸ ಮಾಲೆ—ಕನ್ನಡ—ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಗ್ರಂಥಮಾಲೆ—ದಿವಂಗತ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರು—ಪ್ರೊ|| ಟಿ. ಎಸ್. ವೆಂಕಣ್ಣಯ್ಯನವರ ಸ್ಮಾರಕ ನಿಧಿ—ರಾಜಕಾರ್ಯಪ್ರಸಕ್ತ ರಾವ್ ಬಹದ್ದೂರ್ ಎಂ. ಶಾಮರಾವ್, ಎಂ.ಎ.

. ಪ್ರಮಾಥಿ

೧. ಹೊಸ ವರ್ಷ—ನಮ್ಮ ವೈಸ್-ಛಾನ್ಸಲರವರಿಗೆ ಅಭಿನಂದನೆ—ಶ್ರೀಮದ್ಯುವರಾಜಕುಮಾರರಾದ ಶ್ರೀ ಜಯಚಾಮರಾಜ ಒಡೆಯರ ಉದಾರ ದಾನ—ದೇವರಾಜ ಬಹದ್ದೂರ್ ಧರ್ಮನಿಧಿಯಿಂದ ಸಾಹಿತ್ಯಕ್ಕೆ ಬಹುಮಾನ—ಕನ್ನಡವನ್ನು ಕುರಿತು 'ಶ್ರೀ' ಯವರು—ಅಕ್ಷರತೆಯ ಪ್ರಚಾರ—ಕನ್ನಡ ಸಂಸ್ಕೃತಿ ಸಂಶೋಧನ ಸಮಿತಿಯೂ ಕರ್ಣಾಟಕ ವಿದ್ಯಾವರ್ಧಕ ಸಂಘವೂ—ಪ್ರಾಚ್ಯ ಪುಸ್ತಕಗಳ ಪಟ್ಟಿ.

೨. ಶ್ರೀ ಜಯಚಾಮರಾಜ ಒಡೆಯರವರ ಸುಖಾಗಮನ—ಈ ವರ್ಷದ ಪದವೀದಾನೋತ್ಸವ; ಪ್ರಶಸ್ತಿ ಪಡೆದವರಿಗೆ ಅಭಿನಂದನ—ಮೈಸೂರಿನಲ್ಲಿ ಜೈನಮಹಾಸಮ್ಮೇಳನ ಮತ್ತು 'ಶ್ರೀ' ಯವರಿಗೆ ಅಭಿನಂದನ—ಇಂಡಿಯಾ ದೇಶದ ಇಂದಿನ ವಿದ್ಯಾಶಿಕ್ಷಣ ಪದ್ಧತಿ—ಗೊಂದಲ—ಅಶ್ವಘೋಷನ ರಾಷ್ಟ್ರಪಾಲನಾಟಕ—ಋಗ್ವೇದದ ಉಪಮೆಗಳು—ಮೊಹೆಂಜೊದಾರೊವಿನಲ್ಲಿ ತಿರೆಯಾರರು.

೩. ೨೪ನೆಯ ಕನ್ನಡಸಾಹಿತ್ಯ ಸಮ್ಮೇಳನ—ಸರ್ ನೃಪೇಂದ್ರನಾಥ ಸರಕಾರ್ರವರ ಉಪದೇಶ—ಹೊಸ ಪ್ರಪಂಚದ ಘಟನೆ—ರಾಷ್ಟ್ರೀಯ ಭಾವನೆ ಮತ್ತು ಕೋಮುವಾರು ಭಾವನೆ—ಹಿಂದು ಇಂದುಗಳ ಸಾಮರಸ್ಯ—ಭಾರತಸಂಸ್ಕೃತಿಗೆ ಜೈನರ ದಾನ—ಎರಡು ಹೊಸ ಕನ್ನಡ ಪತ್ರಿಕೆಗಳು "ಜೀವನ" "ಪಂಡಿತಮಂಡಲ ಪತ್ರಿಕೆ".

೪. ಕಂಬನಿ (ಶ್ರೀಮದ್ಯುವರಾಜರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್ರವರು ದಿವಂಗತರಾದುದರ ಸಲುವಾಗಿ)—ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದ ವಾರ್ಷಿಕೋತ್ಸವ—ಪ್ರಗತಿ, ಸ್ವಾತಂತ್ರ್ಯ—ಸಣ್ಣಕತೆಗಾರರ ಎರಡನೆಯ ಸಮ್ಮೇಳನ—ಕನ್ನಡ ಸಾಹಿತ್ಯಕ್ಕೆ ಮೈಸೂರು ರಾಜರ ಮತ್ತು ಪ್ರಜೆಗಳ ಸೇವೆ—ಸಂಸ್ಕೃತದಲ್ಲಿನ ಜ್ಞಾನ ಮತ್ತು ಅದರ ಪ್ರಸಾರ—ಶ್ರೀ ಗೊಮ್ಮಟೇಶ್ವರಸ್ವಾಮಿ—ಪ್ರಾಕೃತ ಭಾಷೆಗಳ ಹೆಸರುಗಳು—ಪುರಾಣಗಳ ಕಾಲ.

೨೨. ವಿಕ್ರಮ

೧. ಕೀರ್ತಿಶೇಷರಾದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ., ಮಹಾಪ್ರಭುಗಳವರು; ಕಂಬನಿ—ಶುಭಾಶಂಸನ—ಕನ್ನಡಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬ—ಬಿನ್ನವತ್ತಳೆ—ಮಹಾಸ್ವಾಮಿಯವರ ಪ್ರತ್ಯುತ್ತರ—ವಿಶ್ವವಿದ್ಯಾನಿಲಯದ ಹೊಸ ರಿಜಿಸ್ಟ್ರಾರವರಿಗೆ ಅಭಿನಂದನ—ಹೊಸ ಕರ್ಣಾಟಕ ಸಂಘಗಳು, ಅವುಗಳಲ್ಲಿ ಮಹಾಜನರ ಆಸಕ್ತಿ.

೨. ರಾಜಭಕ್ತಿ ಸಮರ್ಪಣೆ—ಖರೀತಾ ದರ್ಬಾರು: ರೆಸಿಡೆಂಟರ ಭಾಷಣ—ಪಟ್ಟಾಭಿಷೇಕ ಪ್ರಸಿದ್ಧ

ಪತ್ರಿಕೆ—ಶ್ರೀಮನ್ಮಹಾರಾಜರವರು ಪಟ್ಟಾಭಿಷೇಕ ಸಮಯದಲ್ಲಿ ಮೈಸೂರು ...
ಗಳಿಗೆ ದಯಪಾಲಿಸಿದ ಸಂದೇಶ—ದೊರೆಗಳ ಪಟ್ಟಾಭಿಷೇಕ—ಈ ವರ್ಷದ ಪದವೀದಾ...
ಸಮಾರಂಭ—"ರಾಜಸೇವಾಸಕ್ತ" ಶ್ರೀಮಾನ್ ಬೆಳ್ಳಾವೆ ವೆಂಕಟನಾರಾಯಣ...
ಅಭಿನಂದನೆ—ಮೈಸೂರು ವಿಶ್ವವಿದ್ಯಾನಿಲಯ ಸಂಘದ ಅಕ್ಷರ ಪ್ರಚಾರಕಾರ್ಯ...
ಪ್ರಚಾರಕಾರ್ಯಕ್ಕೆ ಸಂದೇಶಗಳು—ಶಿಕ್ಷಣದ ಗುರಿ.

೩. ೨೫ನೆಯ ಕನ್ನಡಸಾಹಿತ್ಯ ಸಮ್ಮೇಳನ—ಪುರಂದರದಾಸರು—ವೈ. ವಾ. ದೇವಶಿಖಾಮಣಿ ಅಳ...
ಚಾರ್ಯರು.

೪. ಪ್ರಬುದ್ಧ ಕರ್ಣಾಟಕಕ್ಕೆ ಪ್ರೋತ್ಸಾಹ—ಕರ್ಣಾಟಕ ಸಂಘಕ್ಕೆ ಶ್ರೀಮಾನ್ ಹಸೂಡಿ ...
ಶಾಸ್ತ್ರಿಗಳವರ ಉದಾರದಾನ—ಸುಬುದ್ಧಿಪ್ರಕಾಶ—ಕವಿತ್ವಕಲೆ ಮತ್ತು ಯುವಕರು.

೨೩. ವೃಷ

೧. ಕೃತಜ್ಞತೆ—ಮೈಸೂರು ವಿಶ್ವವಿದ್ಯಾನಿಲಯದ ರಜತಮಹೋತ್ಸವ—ದಿವಂಗತ ರವೀಂ...
ಠಾಕೂರರವರು.

೨. ಸರ್ ಎಂ. ವಿಶ್ವೇಶ್ವರಯ್ಯನವರ ೮೧ನೆಯ ಹುಟ್ಟಿದ ಹಬ್ಬ—ರಾಜಸೇವಾಸಕ್ತ ಪ್ರೊ||...
ಶ್ರೀಕಂಠಯ್ಯನವರಿಗೆ 'ಸಂಭಾವನೆ'—ಈಸಲದ ಪದವೀದಾನ ಮಹೋತ್ಸವ—ಶ್ರೀ...
ಎ. ಆರ್. ವಾಡಿಯಾ ಅವರಿಗೆ ರಾಜಸನ್ಮಾನ—ಅಖಿಲ ಕರ್ಣಾಟಕ ಆದಿಪಂಪ ಮ...
ಸ್ಮಾರಕೋತ್ಸವ.

೩. ಕನ್ನಡದ ಮೂರು ಉತ್ಸವಗಳು.

೪. ಪಂಪನ ಮೇಲಣ ಲೇಖನಗಳು—ವಿಶ್ವವಿದ್ಯಾನಿಲಯದ ಇಬ್ಬರು ವಿದ್ವನ್ಮಣಿಗಳು.

೨೪. ಚಿತ್ರಭಾನು

೧. ಕಂಬನಿ (ಶ್ರೀಮಾನ್‌ಗಳಾದ ಗಳಗನಾಥರು, ಶ್ರೀ ಗುರುಸೇವಾಸಕ್ತ ಆಸ್ಥಾನ ಧರ್ಮಾ...
ತಿರುವಳ್ಳೂರು ಶ್ರೀನಿವಾಸರಾಘವಾಚಾರ್ಯರು, ಶ್ರೀ ಆಸ್ಥಾನವಿದ್ವಾನ್ ಟಿ. ಎನ್. ಸುಬ್...
ಶಾಸ್ತ್ರಿಗಳು ಮತ್ತು ಶ್ರೀ ಆಸ್ಥಾನವಿದ್ವಾನ್ ಕಾನಕಾನಹಳ್ಳಿ ವರದಾಚಾರ್ಯರು ಇ...
ಸ್ವರ್ಗಸ್ಥರಾದುದಕ್ಕಾಗಿ)—ರಾಜಸೇವಾಪ್ರಸಕ್ತ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯ...
ರಿಗೆ ಅಭಿನಂದನೆ.

೨. ಕನ್ನಡದ ಬೆಳವಣಿಗೆ—ಕನ್ನಡಮಾಧ್ಯಮ ಸಮಸ್ಯೆ—ಪದಕ ಬಹುಮಾನಗಳನ್ನು ಪಡೆದ ಪದವಿ...
ಅಭಿನಂದನ.

೩. ಕನ್ನಡಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರುಗಳು ಮತ್ತು ಪರಿಷತ್ತಿನ ಮುನ್ನಡೆ.

೪. ಕನ್ನಡಕ್ಕೆ ಒಂದು ಗುಡಿ (ಶಿವಮೊಗ್ಗಾದಲ್ಲಿ ಹಸೂಡಿ ವೆಂಕಟಶಾಸ್ತ್ರಿಗಳವರಿಂದ)—ನಮ್ಮ...
ವಿದ್ಯಾಭ್ಯಾಸ.

೨೫. ಸ್ವಭಾನು

೧. ಸ್ವವಿಷಯ, ಬೇಸಿಕ್ ಇಂಗ್ಲಿಷ್, ಅಭಿನಂದನೆಗಳು—ಶ್ರೀ ರಾವ್ ಬಹದ್ದೂರ್ ಪಿ. ಜಿ. ...
ಯವರಿಗೆ ವರ್ಧಂತಿ ಸಲುವಾಗಿ; ಶ್ರೀ ಎಲ್. ಎಸ್. ವೆಂಕಾಜಿರಾಯರಿಗೆ ವಿಶ್ವವಿದ್ಯಾ...